



೨೦೧೨ ಜಾನಪದ ವರ್ಷ

೨೦೧೨ರಲ್ಲಿ ಪ್ರಕಟವಾದ ಜಾನಪದ ಕೃತಿಗಳ ಸಮೀಕ್ಷೆ



ಸಂಪಾದಕ
ಡಾ. ಕೆ. ಎ. ಮುದ್ದವೀರಪ್ಪ

BVP-1223- 1/3/17

1335- 26/38.

ಜಾನಪದ ವರ್ಷ - ೨೦೧೨

೨೦೧೨ರಲ್ಲಿ ಪ್ರಕಟವಾದ ಜಾನಪದ ಕೃತಿಗಳ ಸಮೀಕ್ಷೆ

ಪ್ರಧಾನ ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಸಂಪಾದಕರು

ಡಾ. ಕೆ.ವಿ. ಮುದ್ದವೀರಪ್ಪ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ - ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

JAANAPADA VARSHA - 2012
Reviews of Folklore Books Published in 2012
Edited by
Dr. K.V. Muddaveerappa
C/o R. Narayan, Ranganatha Nilaya
7th Cross, Jayamangali Road
Chandramouleshwara Layout
Kyathsandra - 572 104, Tumakur Dist.
Cell: 94496 59631
Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 197
Shiggavi Taluk, Haveri Dist., Karnataka
Phone: 0836 - 2255180
Pages: xiv + 258 **Price: ₹ 120/-**
www.janapadauni.in
First Impression: 2014
ISBN 978-93-83149-13-1

ಬೆಲೆ: ₹ ೧೨೦/-
ಮುಖಪುಟ: **ಕೆ.ಕೆ. ಮಕಾಳಿ**
ಅಕ್ಷರ ಸಂಯೋಜನೆ: **ಶ್ರೀಮತಿ ಆರ್.ಎನ್. ಪವಿತ್ರಮಾಲ**
ಪುಟವಿನ್ಯಾಸ
ಸವಿತ ಗ್ರಾಫಿಕ್ಸ್, ಕಮಲಾಪುರ
Cell No.: 94802 57392
ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು. ಹಾವೇರಿ ಜಿಲ್ಲೆ
ಬೆಂಗಳೂರು ಕಚೇರಿ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ
ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡರಸ್ತೆ
ಮಾಗಡಿ ಕಾರ್ಡ್ ರಸ್ತೆ, ವಿಜಯನಗರ
ಬೆಂಗಳೂರು ೫೬೦ ೦೪೦
ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು,

ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳ ಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕ ವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ-ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ

ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲ ಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಒಂದು ಕಾಲಘಟ್ಟದ ಸಾಹಿತ್ಯ ಕೃತಿಯೊಂದು ಆ ಕಾಲದ ಸಾಂಸ್ಕೃತಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತಿರುತ್ತದೆ. ವರ್ತಮಾನದ ವಿದ್ಯಮಾನಗಳನ್ನು ಗರ್ಭೀಕರಿಸಿಕೊಂಡು ಸೃಷ್ಟಿಯಾಗುವ ಇಂಥ ಕೃತಿಗಳು ಚಾರಿತ್ರಿಕವಾಗಿ ಮಹತ್ವದ್ದಾಗಿರುತ್ತವೆ. ಜಾನಪದ ಎಂದಿಗೂ ಜೀವಂತವಾಗಿರುವಂಥದು. ಅದಕ್ಕೆ ಭೂತ, ವರ್ತಮಾನ, ಭವಿಷ್ಯತ್ತು ಮೂರೂ ಇವೆ. ಈ ಹಿನ್ನೆಲೆಯಲ್ಲಿ ಜಾನಪದ ಸಂಬಂಧಿ ರಚನೆಗಳು ಸಹಜವಾಗಿ ಅವಿನಾಶಿಗುಣವನ್ನು ಪಡೆದಿರುತ್ತವೆ. ಈ ನಿಟ್ಟಿನಲ್ಲಿ ಗಮನಿಸುವುದಾದರೆ, ಜಾನಪದ ವರ್ಷ-೨೦೧೨ ಕೃತಿ ಮುಖ್ಯ ಎನಿಸುತ್ತದೆ. ಒಂದು ವರ್ಷದ ಅವಧಿಯಲ್ಲಿ ಮುದ್ರಣ ಗೊಂಡ ಪ್ರಕಟಣೆಗಳನ್ನು ಒಂದೆಡೆ ಸಂಕಲಿಸಿ, ಸಮೀಕ್ಷಿಸಿ ಕೊಡುವ ಪ್ರಯತ್ನಗಳು ಯಾವತ್ತೂ ನಡೆಯುತ್ತಲೇ ಇವೆ. ಈ ನಡುವೆ ಅವುಗಳನ್ನು ವೈಜ್ಞಾನಿಕ ಕ್ರಮದಲ್ಲಿ ಜೋಡಿಸಿ ಪ್ರಕಟಿಸುವುದು ಅಧ್ಯಯನದ ದೃಷ್ಟಿಯಿಂದ ಹೆಚ್ಚು ಲಾಭದಾಯಕವಾದುದು. ಜಾನಪದ ಕ್ಷೇತ್ರದಲ್ಲಿ ಆದ ಈವರೆಗಿನ ಅಧ್ಯಯನಗಳ ಮೇಲೆ ಬೆಳಕು ಬೀರುವುದರ ಜೊತೆಗೆ ಇನ್ನೂ ಹೊಸ ರೀತಿಯ ಅಧ್ಯಯನದ ಸಾಧ್ಯತೆಗಳನ್ನೂ ಅದು ಒಳಗೊಳ್ಳುವ ಕಾರಣಕ್ಕೆ ಸಮೀಕ್ಷಾ ಕೃತಿಗಳು ಮಹತ್ವದ್ದೆನಿಸುತ್ತವೆ. ಈ ನಿಟ್ಟಿನಲ್ಲಿ ಜಾನಪದ ವರ್ಷ-೨೦೧೨ ಕೃತಿ ಗಮನಾರ್ಹವಾದುದು. ಇಂತಹ ಮಹತ್ವದ ಕೃತಿಯು ಸಿದ್ಧಗೊಳ್ಳುವಾಗ ಸಂಪಾದಕರು ಸೇರಿದಂತೆ ಪುಸ್ತಕಗಳನ್ನು ಸಮೀಕ್ಷೆ ಮಾಡುವ ವಿದ್ವಾಂಸರ ಅಪಾರ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ದತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು

ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಸಂಶೋಧನ ಸಾಧ್ಯತೆಗಳನ್ನು ಹೊಂದಿರುವ ಜಾನಪದ ಕ್ಷೇತ್ರದಲ್ಲಿ ಇಂದು ಪ್ರಕಟಣೆಗಳ ಸಂಖ್ಯೆ ಹೆಚ್ಚುತ್ತಿರುವುದು ಆಶಾದಾಯಕ ಬೆಳವಣಿಗೆ. ಪ್ರಕಟಣೆಗಳ ವಿಷಯ ಬಂದಾಗ ಗಾತ್ರ ಮತ್ತು ಗುಣ ಎರಡೂ ಮುಖ್ಯವೆನಿಸುತ್ತವೆ. ಮುದ್ರಣಗೊಳ್ಳುವ ಕೃತಿಗಳ ಸಂಖ್ಯೆಯೇ ಗುಣಮಟ್ಟವನ್ನು ನಿರ್ಧರಿಸುವ ಮಾನದಂಡವಲ್ಲ. ಆದರೆ, ಪ್ರಕಟಣೆಯ ಪ್ರಯತ್ನದ ಮೂಲಕ ಆ ಕ್ಷೇತ್ರದಲ್ಲಿನ ಬೆಳವಣಿಗೆಗಳನ್ನು ತಿಳಿದುಕೊಳ್ಳುವುದು ಮತ್ತು ಇನ್ನೂ ಹೆಚ್ಚಿನ ಅಧ್ಯಯನದ ಸಾಧ್ಯತೆಗಳನ್ನು ಗುರುತಿಸುವುದು ಸಾಧ್ಯವಿದೆ ಎಂಬುದನ್ನು ಮರೆಯುವಂತಿಲ್ಲ. ಹೊಸ ಅಧ್ಯಯನ, ಸಂಶೋಧನೆಗೆ ಆಕರವಾಗುವಲ್ಲಿ ಸಂಪಾದನ ಕೃತಿಗಳು, ಸಮೀಕ್ಷಾ ಕೃತಿಗಳು ಮುಖ್ಯವೆನಿಸುತ್ತವೆ. ಈ ಕೃತಿಸಂಪುಟಗಳು ವರ್ಷದಿಂದ ವರ್ಷಕ್ಕೆ ಪ್ರಕಟಣೆಗೊಳ್ಳುವ ಮೂಲಕ ಜಾನಪದ ಕ್ಷೇತ್ರದ ಒಟ್ಟು ಬೆಳವಣಿಗೆಯನ್ನು ದರ್ಶಿಸಿಕೊಡಬಲ್ಲವು. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಜಾನಪದ ವರ್ಷ–೨೦೧೨ ಗಮನಾರ್ಹ ಕೃತಿ ಎನಿಸುತ್ತದೆ. ವಿಚಾರ–ವಿಮರ್ಶೆ–ಸಂಶೋಧನೆ, ಜೀವನ ಪರಿಚಯ ಕೃತಿಗಳು, ಗದ್ಯ/ಗೀತ ಸಂಗ್ರಹಗಳು, ಅನುವಾದದ ಕೃತಿಗಳು, ಮರುಮುದ್ರಣಗೊಂಡ ಕೃತಿಗಳು ಹೀಗೆ ಪ್ರಸ್ತುತ ಕೃತಿಯಲ್ಲಿ ಜಾನಪದ ಜಗತ್ತಿನ ಬಹು ಆಯಾಮಗಳ ಅನಾವರಣವಾಗಿದೆ. ಇಂತಹ ಅಮೂಲ್ಯವಾದ ಕೃತಿಯನ್ನು ಸಂಪಾದಿಸಿಕೊಟ್ಟ ಡಾ. ಕೆ.ವಿ. ಮುದ್ದವೀರಪ್ಪ ಅವರು ಅಭಿನಂದನಾರ್ಹರು.

ಪ್ರೊ. ಸ.ಚಿ. ರಮೇಶ
ನಿರ್ದೇಶಕ

ಸಂಪಾದಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಅಧಿಕೃತವಾಗಿ ಪ್ರಾರಂಭಗೊಂಡು ಮೂರು ವರ್ಷಗಳು ತುಂಬುತ್ತಿದೆ. ಕರ್ನಾಟಕದ ಸಮೃದ್ಧ ಜನಪದ ಸಂಸ್ಕೃತಿಯನ್ನು ಸಂಗ್ರಹಿಸುವ, ಸಂರಕ್ಷಿಸುವ ಮತ್ತು ಅದನ್ನು ತೀವ್ರಗತಿಯಲ್ಲಿ ಅಧ್ಯಯನಕ್ಕೆ ಒಳಪಡಿಸುವ ಕಾರ್ಯಕ್ಕೆ ವಿಶ್ವವಿದ್ಯಾಲಯ ಸಜ್ಜುಗೊಂಡು ಆ ನಿಟ್ಟಿನಲ್ಲಿ ಕಾರ್ಯಪ್ರವೃತವಾಗಿದೆ. ಅದರಲ್ಲಿ ವಿಶಿಷ್ಟ ರೀತಿಯಲ್ಲಿ ಪ್ರಸ್ತುತ ಸಂದರ್ಭಕ್ಕೆ ಬೇಕಾಗುವಂತಹ ಶಿಕ್ಷಣವನ್ನು ಯುವಪೀಳಿಗೆಗೆ ಕೊಡುವುದಕ್ಕಾಗಿ ವೈವಿಧ್ಯಪೂರ್ಣವೆನಿಸುವ ಕೋರ್ಸ್‌ಗಳನ್ನು ಪ್ರಾರಂಭಿಸಿದೆ. ಇಡೀ ಕರ್ನಾಟಕದ ಪ್ರತಿ ಗ್ರಾಮಗಳನ್ನು ಸರ್ವೇ ಮಾಡಿ ಅಲ್ಲಿನ ಜನಪದ ಸಂಸ್ಕೃತಿಯನ್ನು ಒಂದೆಡೆ ದಾಖಲಿಸುವ 'ಕರ್ನಾಟಕ ಗ್ರಾಮ ಚರಿತ್ರೆ ಕೋಶ' ಯೋಜನೆಯ ಕಾರ್ಯ ನಡೆಯುತ್ತಿದೆ. ಕರ್ನಾಟಕ ಜಾನಪದ ಅಕಾಡೆಮಿ ಈಗಾಗಲೇ ಹಲವು ವಿದ್ವಾಂಸರ ಸಹಕಾರದಿಂದ ಪ್ರಕಟಪಡಿಸಿರುವ 'ಜಾನಪದ ನಿಘಂಟು' ಮೂರು ಸಂಪುಟಗಳಲ್ಲಿ ಪ್ರಕಟಗೊಂಡಿದ್ದರೂ ಇನ್ನಷ್ಟು ಪರಿಣಾಮಕಾರಿಯಾಗಿ ಜನಸಮುದಾಯ ದಲ್ಲಿರುವ ಶಬ್ದಗಳನ್ನು ಹಲವು ವಿದ್ವಾಂಸರಿಂದ ಸಂಗ್ರಹಿಸಿ, ಅರ್ಥವಿವರಣೆಗಳೊಂದಿಗೆ ಮತ್ತೆ ಪ್ರಕಟಪಡಿಸುತ್ತಿರುವುದು ವಿಶೇಷವಾಗಿದೆ. ಇಂತಹ ಹಲವು ಕಾರ್ಯಕ್ರಮಗಳಲ್ಲಿ 'ಜಾನಪದ ವರ್ಷ–೨೦೧೨' ಯೋಜನೆಯು ಮಹತ್ವದ್ದಾಗಿದೆ. ೨೦೧೨ನೇ ಸಾಲಿನಲ್ಲಿ ಪ್ರಕಟಗೊಂಡ ಜಾನಪದಕ್ಕೆ ಸಂಬಂಧಿಸಿದ ಕೃತಿಗಳನ್ನು ಸಂಗ್ರಹಿಸಿ ಅವುಗಳನ್ನು ಸ್ಥೂಲವಾಗಿ ಸಮೀಕ್ಷೆ ಮಾಡಿ ಒಂದೆಡೆ ಕ್ರೋಢೀಕರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸ ಲಾಗುತ್ತಿದೆ. ಈಗಾಗಲೇ 'ಜಾನಪದ ವರ್ಷ–೨೦೧೧', ೨೦೧೧ನೇ ಸಾಲಿನ ಜಾನಪದ ಕೃತಿಗಳನ್ನು ಸಮೀಕ್ಷೆ ನಡೆಸಿ ತುಂಬಾ ಸೊಗಸಾದ ರೀತಿಯಲ್ಲಿ ಡಾ. ಎಸ್.ಪಿ. ಪದ್ಮಪ್ರಸಾದ್ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿದೆ.

ಡಾ. ಎಸ್.ಪಿ. ಪದ್ಮಪ್ರಸಾದ್‌ರವರ ಸಂಪಾದಕತ್ವದಲ್ಲಿ ಪ್ರಕಟವಾದ 'ಜಾನಪದ ವರ್ಷ–೨೦೧೧' ಕೃತಿಯಲ್ಲಿ ಅದೇ ಸಾಲಿನ ಕೆಲವು ಜಾನಪದ ಕೃತಿಗಳನ್ನು ಸಮೀಕ್ಷೆಗಾಗಿ ನನಗೆ ನೀಡಿದಾಗ ನಾನು ಪ್ರಾಮಾಣಿಕವಾಗಿ ಸಮೀಕ್ಷೆ ಮಾಡಿಕೊಟ್ಟಿದ್ದೆ. ಆ ಹಿನ್ನೆಲೆಯಲ್ಲಿ ನನ್ನ ಮೇಲೆ ನಂಬಿಕೆ ಇಟ್ಟು ೨೦೧೨ನೇ ಸಾಲಿನಲ್ಲಿ ಪ್ರಕಟಗೊಂಡ ಕೃತಿಗಳ ಸಮೀಕ್ಷೆ ನಡೆಸಿಕೊಡಲು ನನ್ನ ಹೆಸರನ್ನು ಅವರು ಕುಲಪತಿಗಳಿಗೆ ಸೂಚಿಸಿದ್ದರು. ಆ ತಕ್ಷಣವೇ ನನ್ನ ಒಪ್ಪಿಗೆಗಾಗಿ ಮೊಬೈಲ್‌ನಲ್ಲಿ ಡಾ. ಎಸ್.ಪಿ. ಪದ್ಮಪ್ರಸಾದ್‌ರವರು ಮಾತನಾಡಿ

ಒಪ್ಪಿಸಿಕೊಂಡು, ನಂತರ ಮೊಬೈಲನ್ನು ನನ್ನೊಂದಿಗೆ ಮಾತನಾಡಲು ಕುಲಪತಿಗಳಿಗೆ ನೀಡಿದ್ದಾರೆ. ಕುಲಪತಿಗಳು ಕೂಡ ನನ್ನ ಹತ್ತಿರ ಈ ವಿಚಾರವಾಗಿ ಮಾತನಾಡಿದರು. ಅದಕ್ಕೆ ನಾನು ಸಹ ಒಪ್ಪಿಗೆ ನೀಡಿದೆ. ಆ ಪ್ರಕಾರವಾಗಿ ನನಗೆ ಕೆಲವೇ ದಿನಗಳಲ್ಲಿ ನನ್ನ ಮನೆಗೆ ಪತ್ರವೂ ಬಂದು ಸೇರಿತು. ಅದರಂತೆ ನಾನೂ ಕೂಡ ಕೆಲಸಕ್ಕೆ ಕಾರ್ಯಪ್ರವೃತ್ತನಾಗಿ ಇದುವರೆಗೂ ಹಲವು ಸಮಸ್ಯೆಗಳನ್ನು, ಸವಾಲುಗಳನ್ನು ಸ್ವೀಕರಿಸಿ ಹಲವು ಸ್ನೇಹಿತರ ಸಹಕಾರದಿಂದ ಈ ಕೃತಿಯನ್ನು ಪೂರ್ಣಗೊಳಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ.

ಇಂದು ಪುಸ್ತಕಗಳನ್ನು ಓದುವ ವರ್ಗ ತುಂಬಾ ಕಡಿಮೆಯಾಗಿದೆ ಎಂದರೆ ತಪ್ಪಾಗಲಾರದು. ನನಗೆ ಈ ಅನುಭವವಾಗಿದ್ದು ೨೦೧೨ನೇ ಸಾಲಿನಲ್ಲಿನ ಜಾನಪದ ಕೃತಿಗಳನ್ನು ಸಮೀಕ್ಷೆ ಮಾಡಲು ಕೊಟ್ಟಾಗ ಕಡಿಮೆಯೆಂದರೂ ಮೂರು ತಿಂಗಳಾದರೂ ವಾಪಸ್ ಕೊಡುತ್ತಿರಲಿಲ್ಲ. ಅವರೇ ಹೇಳಿದ ದಿನಾಂಕಗಳು ಮುಗಿದರೂ ಪುಸ್ತಕ ತಂದು ಕೊಡುತ್ತಿರಲಿಲ್ಲ. ಅವರಿಗೆ ನಾನು ಫೋನ್ ಮಾಡಿದಾಗ ಅದಕ್ಕೆ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಕೆಲವು ಬಾರಿ ಫೋನ್ ಸ್ವಿಚ್‌ಆಫ್ ಮಾಡಿಕೊಳ್ಳುತ್ತಿದ್ದರು. ಎಂದೋ ಒಂದು ದಿನ ಸಿಕ್ಕಿದಾಗ 'ಸಾರ್ ತುಂಬಾ ಕೆಲಸ ಇತ್ತು, ಓದಲಾಗಲಿಲ್ಲ. ನಿಮಗೆ ಅಷ್ಟೊಂದು ಬೇಗ ಬೇಕು ಅಂದರೆ ಯಾರತ್ತಿರನಾದ್ರು ಮಾಡಿಸಿಕೊಳ್ಳಿ' ಎಂದು ಹೇಳಿದ ನಂತರ ಮತ್ತೊಂದು ಹದಿನೈದು ಇಪ್ಪತ್ತು ದಿನದ ನಂತರ ಒತ್ತಡ ಹಾಕಿ ಪುಸ್ತಕಗಳನ್ನು ನಾನೇ ಹಿಂಪಡೆದುಕೊಳ್ಳುತ್ತಿದ್ದೆ. ಇನ್ನು ಕೆಲವರು ಸಾರ್ ನನಗೆ ಕೃತಿ ಓದಲು ಸಮಯ ಸಿಗಲಿಲ್ಲ. ಆದ್ದರಿಂದ ನನ್ನ ಸ್ನೇಹಿತರಿಗೆ ಕೊಟ್ಟಿದ್ದೇನೆ ಅವರು ನಿಮಗೆ ಕೃತಿ ಅವಲೋಕನ ಮಾಡಿಕೊಡುತ್ತಾರೆಂದು ಹೇಳಿ ಕೈತೊಳೆದುಕೊಳ್ಳುತ್ತಿದ್ದರು. ಇನ್ನು ಅವರನ್ನು ಹಿಡಿಯಲು ನನಗೆ ತಿಂಗಳುಗಳೇ ಕಳೆಯುತ್ತಿದ್ದವು. ನಂತರ ಅವರು ಓದಿ ಸಮೀಕ್ಷೆ ಮಾಡದೆ ವಾಪಸ್ಸು ಕೊಡುತ್ತಿದ್ದರು. ಅದನ್ನು ಮತ್ತೊಬ್ಬರಿಗೆ ಕೊಟ್ಟು ಸಮೀಕ್ಷೆ ಮಾಡಿಸುವಂತಹ ಕೆಲಸಗಳಾಗುತ್ತಿದ್ದವು. ಹೀಗೆ ಎಷ್ಟೋ ವಿದ್ವಾಂಸರಿಂದ ಹಲವು ಅನುಭವಗಳು ಆಗಿವೆ. ಆದರೂ ಈ ಕೆಲಸದಲ್ಲಿ ಹಿಂದಕ್ಕೆ ನೋಡದೆ ಬೇರೆ ಬೇರೆ ಸ್ನೇಹಿತರ ಮೂಲಕ ಕೃತಿಗಳ ಸಮೀಕ್ಷೆ ಮಾಡಿಸಿ, ದೊರೆತ ಕೃತಿಗಳನ್ನು ವಿಭಾಗ ಮಾಡಿಕೊಂಡು ಅವುಗಳ ಕ್ಷೇತ್ರಾನುಸಾರ ಕ್ರೋಢೀಕರಿಸಿ ಸಂಗ್ರಹಿಸಿದ್ದೇನೆ.

ಇಲ್ಲಿ ಕೃತಿಗಳನ್ನು ಸಮೀಕ್ಷೆ ಮಾಡಿದವರಲ್ಲಿ ಸಂಶೋಧನೆಯಲ್ಲಿ ಈಗಾಗಲೇ ತೊಡಗಿದವರಿದ್ದಾರೆ, ಇನ್ನು ಕೆಲವರು ಈಗ ತಾನೆ ಸಂಶೋಧನೆ ಪ್ರಾರಂಭಿಸಿದವರಿದ್ದಾರೆ. ಇವರೆಲ್ಲರ ಓದಿನ ದೃಷ್ಟಿಕೋನದಲ್ಲಿ ಯಾವ್ಯಾವ ರೀತಿಯಲ್ಲಿ ಅಭಿವ್ಯಕ್ತಗೊಂಡಿವೆಯೋ ಅದೇ ರೀತಿಯಲ್ಲಿ ಅವರ ಆಶಯಕ್ಕೆ ಧಕ್ಕೆ ಬರದಂತೆ ಯಥಾವತ್ತು ಪ್ರಕಟಿಸಲಾಗುತ್ತಿದೆ. ಇಲ್ಲಿರುವ ಅಭಿಪ್ರಾಯಗಳು ಲೇಖಕರುಗಳದ್ದೇ ಹೊರತು ಸಂಪಾದಕರದ್ದಲ್ಲ.

ಕೃತಿ ಸಮೀಕ್ಷೆ ಮಾಡಿಸುವಾಗಿನ ಅನುಭವ ಒಂದು ರೀತಿಯದ್ದಾದರೆ, ಕೃತಿಗಳನ್ನು ಪ್ರಕಾಶಕರಿಂದ ಕೊಳ್ಳುವಾಗಿನ ಅನುಭವ ಮತ್ತೊಂದು ರೀತಿಯದ್ದು. ನನಗೆ

ವಿಶ್ವವಿದ್ಯಾಲಯದಿಂದ ಸಮೀಕ್ಷೆ ಮಾಡಲು ಅನುಮತಿ ಪತ್ರ ಬಂದಾಗ ಕೃತಿಗಳು ಸಿಕ್ಕಿದ್ದು ತುಂಬಾ ಕಡಿಮೆ. ಅದೇ ವರ್ಷದ ಕೊನೆಯ ಹೊತ್ತಿಗೆ ದೊರೆತದ್ದು ೩೬ ಕೃತಿಗಳು ಮಾತ್ರ. ಆಗ ನನಗೆ ಕೆಲಸದಲ್ಲಿ ಹಿನ್ನೆಡೆ ಆಯಿತೆಂದು ಭಾವಿಸಿದೆ. ನಂತರ ನಾನು ಪುಸ್ತಕ ಅಂಗಡಿಗಳಲ್ಲಿ ಇದಕ್ಕೆ ಕಾರಣಗಳನ್ನು ಕೇಳಿದಾಗ ಅವರು ಹೇಳಿದರು. 'ಸಾರ್ ಪುಸ್ತಕಗಳು ಪ್ರಕಟಗೊಳ್ಳುವುದು ಬಹುಪಾಲು ವರ್ಷದ ಕೊನೆಯಲ್ಲಿ, ಇಲ್ಲವೆಂದರೆ ನಂತರದ ವರ್ಷದಲ್ಲಿ ಹಿಂದಿನ ವರ್ಷದ ಮಾಹೆಯನ್ನು ಹಾಕಿ ಪ್ರಕಟಿಸುತ್ತಾರೆ' ಎಂದರು. ಸತ್ಯ ಏನು ಎಂಬುದು ನಂತರ ತಿಳೀತಾ ಹೋಯಿತು. ನನಗೆ ಜೂನ್ (೨೦೧೩) ತಿಂಗಳವರೆಗೆ ಕೃತಿಗಳು ದೊರಕಿವೆ. ಹಾಗೆ ದೊರೆತ ಕೃತಿಗಳನ್ನು ವಿದ್ವಾಂಸರಿಗೆ ಕೊಟ್ಟು ಅವಲೋಕನ ಮಾಡಿಸುವಲ್ಲಿ ತಡವಾಯಿತು. ಆದ್ದರಿಂದ ಈ ಎಲ್ಲಾ ಕಾರಣಗಳಿಂದ ನನಗೆ ವಹಿಸಿದ ಕಾರ್ಯ ತಡವಾಗಿದೆಂದು ಮಾನ್ಯ ಕುಲಪತಿಗಳಲ್ಲಿ ಕ್ಷಮೆ ಕೋರುತ್ತೇನೆ.

ಜಾನಪದ ಪುಸ್ತಕಗಳನ್ನು ಖರೀದಿ ಮಾಡುವಾಗ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಪಟ್ಟಿಯಲ್ಲಿನ ಪುಸ್ತಕಗಳಿಗಾಗಿ ಪ್ರಕಾಶಕರಿಗೆ ಹಾಗೂ ಬರಹಗಾರರಿಗೆ ಪತ್ರ ಬರೆಯುತ್ತಿದ್ದೆ. ಇವರುಗಳು ಪತ್ರವನ್ನು ಸರಿಯಾಗಿ ನೋಡದೆ ೨೦೧೦, ೨೦೧೧ನೇ ಸಾಲಿನ ಕೃತಿಗಳನ್ನು ಕಳಿಸುತ್ತಿದ್ದರು. ಮತ್ತೊಮ್ಮೆ ನಾನು ಫೋನ್ ಮಾಡಿ 'ಸಾರ್ ಸ್ಪಷ್ಟವಾಗಿ ೨೦೧೨ನೇ ಸಾಲಿನ ಪುಸ್ತಕ ಕಳಿಸಿಯೆಂದು ಕೇಳಿದ್ದರೆ ನೀವು ಹಿಂದಿನ ವರ್ಷಗಳ ಪುಸ್ತಕ ಕಳಿಸಿದ್ದೀರಾ ಎಂದಾಗ' ಅವರು 'ಅಯ್ಯೋ ನಾನು ವರ್ಷ ನೋಡ್ಲಿಲ್ಲ ಸಾರ್ ಈ ವರ್ಷದ ಪುಸ್ತಕ ನಮ್ಮಲ್ಲಿ ಪ್ರಕಟಗೊಂಡಿಲ್ಲ. ನಿಮಗೆ ಕಳಿಸಿರುವ ಪುಸ್ತಕಗಳನ್ನು ವಾಪಸ್ ಕಳಿಸಿಕೊಡಿ' ಯೆನ್ನುತ್ತಿದ್ದರು. ಇದರಿಂದ ನಾನು ತುಂಬಾ ಸಮಯವನ್ನು ಹಾಳುಮಾಡಿಕೊಳ್ಳುತ್ತಿದ್ದೆ. ಇನ್ನು ಕೆಲವರು ಹಣವನ್ನು ಮುಂಚೆ ಕಳಿಸಿದರೆ ಪುಸ್ತಕ ಕಳಿಸುತ್ತೇವೆ ಅಂದರು. ಆಯಿತೆಂದು ಹಣ ಕಳಿಸಿ, ೨೦೧೨ನೇ ಸಾಲಿನ ಪುಸ್ತಕ ಕಳಿಸಿಕೊಡಿ ಸಾರ್ ಅಂದರೆ ೨೦೧೨ನೇ ಸಾಲಿನ ಪುಸ್ತಕ ನಮ್ಮಲ್ಲಿ ಪ್ರಕಟವಾಗಿಲ್ಲ. ನಿಮ್ಮ ಹಣ ವಾಪಸ್ಸು ಕಳಿಸುತ್ತೇನೆಂದು ತಿಂಗಳಾದ ಮೇಲೆ ವಾಪಸ್ಸು ಕಳಿಸುತ್ತಿದ್ದರು. ಹೀಗೆ ಹೇಳುತ್ತಾ ಹೋದರೆ ಇದೊಂದು ದೊಡ್ಡ ಎಪಿಸೋಡು ರೀತಿಯಲ್ಲಿ ಓದುಗರಿಗೆ ಕಾಣಿಸುತ್ತೆ. ಈ ಜವಾಬ್ದಾರಿಯೊಂದು ನನಗೆ ಸವಾಲೆನ್ನುವ ರೀತಿಯಲ್ಲಿ ಅನುಭವವಾಯಿತು.

ಸಮೀಕ್ಷೆಯ ಮಧ್ಯಾವಧಿಯಲ್ಲಿ ವಿಶ್ವವಿದ್ಯಾಲಯದಿಂದ ಸಂಗ್ರಹಿಸಿದ ಪುಸ್ತಕಗಳ ಪಟ್ಟಿ ಕೊಡುವುದರೊಂದಿಗೆ ನನ್ನ ಕೆಲಸವು ಸುಲಭವಾಯಿತು. ಅದೇ ರೀತಿ ತಡವಾದರೂ ನನಗೆ ವಿಶ್ವವಿದ್ಯಾಲಯಕ್ಕೆ ಸೇವೆ ಸಲ್ಲಿಸಲು ಅವಕಾಶಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣರವರಿಗೆ ಮನಃಪೂರ್ವಕ ಧನ್ಯವಾದಗಳು. ಹಿಂದಿನ ಕುಲಸಚಿವರಾದ ಡಾ. ಸೋಮಶೇಖರಪ್ಪ, ಇಂದಿನ ಕುಲಸಚಿವರಾದ ಡಾ. ಡಿ.ಬಿ. ನಾಯಕ ಹಾಗೂ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಸ.ಚಿ. ರಮೇಶ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ಡಾ. ಪ್ರೇಮ್‌ಕುಮಾರ್ ಮತ್ತು ವಿಶ್ವವಿದ್ಯಾನಿಲಯದ

ಎಲ್ಲಾ ಅಧಿಕಾರಿಗಳಿಗೆ ಹಾಗೂ ಇಂತಹ ಜವಾಬ್ದಾರಿಯುತ ಕೆಲಸಕ್ಕೆ ತೊಡಗಿಕೊಳ್ಳಲು ಸೂಚಿಸಿ, ಮಾರ್ಗದರ್ಶನ ನೀಡಿದ ಹಿತೈಷಿಗಳಾದ ಡಾ. ಎಸ್.ಪಿ. ಪದ್ಮಪ್ರಸಾದ್‌ರವರಿಗೆ ಕೃತಜ್ಞತೆಗಳು.

೨೦೧೨ನೇ ಸಾಲಿನಲ್ಲಿ ಪ್ರಕಟಗೊಂಡ ಜಾನಪದ ಕೃತಿಗಳನ್ನು ಕಳಿಸಿಕೊಟ್ಟ ಎಲ್ಲಾ ಲೇಖಕರಿಗೆ, ಪ್ರಕಾಶಕರಿಗೆ, ಅಂಗಡಿ ಮಾಲೀಕರಿಗೆ ಹಾಗೂ ನನ್ನ ಒತ್ತಡದ ನಡುವೆಯೂ ಕೃತಿಗಳನ್ನು ಸಮೀಕ್ಷೆ ಮಾಡಿಕೊಟ್ಟ ಎಲ್ಲಾ ವಿಮರ್ಶಕರಿಗೆ ಮತ್ತು ಪ್ರತಿ ಲೇಖನವನ್ನು ತಾಳ್ಮೆವಹಿಸಿ ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ ಶ್ರೀಮತಿ ಆರ್.ಎನ್. ಪವಿತ್ರಮಾಲ ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಡಾ. ಕೆ.ವಿ. ಮುದ್ದವೀರಪ್ಪ

□□

ಪರಿವಿಡಿ

೧

ಪ್ರಸ್ತಾವನೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಹತ್ವದ ಯೋಜನೆಯಾದ 'ಜಾನಪದ ವರ್ಷ' ಮಾಲಿಕೆಯ ಪ್ರಕಟಣೆ ಪ್ರಾರಂಭಗೊಂಡು ಇದು ಎರಡನೆ ವರ್ಷ. ನಾಡಿನ ಭವ್ಯ ಪರಂಪರೆಯ ಸಂಸ್ಕೃತಿಯನ್ನು ಕಟ್ಟಿಕೊಡುವ ಎಲ್ಲಾ ಜಾನಪದ ಕೃತಿಗಳನ್ನು ಸಮೀಕ್ಷೆ ಮಾಡಿ ಅಧ್ಯಯನಾಸಕ್ತರಿಗೆ ಒಂದೆಡೆ ಸಿಗುವಂತಹ ಕೆಲಸವನ್ನು ಮುನ್ನೆಡೆಸುತ್ತಿರುವುದು ಉತ್ತಮ ಬೆಳವಣಿಗೆ. ಆಯಾಯ ಸಾಲಿನಲ್ಲಿ ಪ್ರಕಟಗೊಂಡ ಜಾನಪದ ಕೃತಿಗಳನ್ನು ಮಾತ್ರ ಪ್ರಕಟಣೆಗೊಳಿಸಿರುವವರ ಕಡೆಯಿಂದ ಸಂಗ್ರಹಿಸಿ, ಸೂಕ್ತ ರೀತಿಯಲ್ಲಿ ಸಮೀಕ್ಷೆ ನಡೆಸಿ, ಆ ಎಲ್ಲಾ ಲೇಖನಗಳನ್ನು ಕ್ರೋಢೀಕರಣಗೊಳಿಸಿ ಪ್ರಕಟಮಾಡುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಅದರ ಪ್ರಯತ್ನದ ಫಲವಾಗಿ ಇಂದು ಇದು ಈ ಕೃತಿಯಾಗಿ ಫಲಿಸುತ್ತಿದೆ.

ಕನ್ನಡ ಶಿಷ್ಟ ಸಾಹಿತ್ಯಕ್ಕೆ ಸಡ್ಡುಹೊಡೆಯುವ ರೀತಿಯಲ್ಲಿ ಜಾನಪದ ಕ್ಷೇತ್ರದಲ್ಲಿ ಬಹುಮುಖಿಯಾದ ಕೃತಿಗಳನ್ನು ಪ್ರಕಟಪಡಿಸಿ, ಗಂಭೀರ ಅಧ್ಯಯನಕ್ಕೆ ಎಡೆಮಾಡಿ ಕೊಡುತ್ತಿರುವುದು ಅಧ್ಯಯನದ ಪೂರಕ ಬೆಳವಣಿಗೆಯೆಂದೇ ಭಾವಿಸಬಹುದು. ಮೂರು ದಶಕದಿಂದ ಈಚೆಗೆ ಜಾನಪದ ಕ್ಷೇತ್ರದಲ್ಲೂ ಗಂಭೀರವೆನಿಸುವ ಸಂಶೋಧನೆಗಳು ಹೊರಬರುತ್ತಿರುವುದರಿಂದ ಮತ್ತಷ್ಟು ಅಧ್ಯಯನಕಾರರಿಗೆ ಈ ಕ್ಷೇತ್ರದಲ್ಲಿ ತೊಡಗಿಕೊಳ್ಳಲು ಅನುವಾಗುತ್ತಿದೆ.

ಪ್ರತಿ ವರ್ಷದಲ್ಲೂ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೂರಕ್ಕಿಂತ ಹೆಚ್ಚು ಪುಸ್ತಕಗಳು ಪ್ರಕಟವಾಗುತ್ತಿರುವುದು ಆ ಕ್ಷೇತ್ರವು ಹೆಚ್ಚು ಹೆಚ್ಚು ಅಧ್ಯಯನಕ್ಕೆ ಹೊರಳಿಕೊಳ್ಳುತ್ತಿದೆ ಎಂಬುದರ ಸೂಚಕ. ಅದೇ ನಿಟ್ಟಿನಲ್ಲಿ ಪ್ರಕಾಶಕರು, ಸಂಘ-ಸಂಸ್ಥೆಗಳು, ಸರ್ಕಾರದ ಸಂಸ್ಥೆಗಳು ಕೆಲಸ ನಿರ್ವಹಿಸುತ್ತಿವೆ. ಎಲ್ಲಾ ಪ್ರಕಾಶನ ಸಂಸ್ಥೆಗಳು ಮೊದ ಮೊದಲು ಜಾನಪದ ಕ್ಷೇತ್ರವನ್ನು ಅಸ್ಪೃಶ್ಯವೆಂಬಂತೆ ನೋಡುವ ಕಾಲವೊಂದಿತ್ತು. ಇಂದು ಅದೆಲ್ಲವನ್ನೂ ಪಕ್ಕಕ್ಕೆ ಸರಿಸಿ, ಅದರಲ್ಲೂ ಮಾನವ ಬದುಕಿನ ಸಂಸ್ಕೃತಿ ಉತ್ಕೃಷ್ಟವಾಗಿದೆಂಬುನ್ನು ಮನವರಿಕೆ ಮಾಡಿಕೊಂಡು ಅದರ ಸಾರವನ್ನು ಪ್ರಕಟಿಸಲು ಎಲ್ಲರಿಗೂ ಆಸಕ್ತಿ ಬಂದಿದೆ. ಈಗ ಪ್ರತಿವರ್ಷದಲ್ಲಿ ಒಂದೇ ಕ್ಷೇತ್ರದಲ್ಲಿ ನೂರಕ್ಕೂ

ಹೆಚ್ಚು ಕೃತಿಗಳು ಪ್ರಕಟಗೊಳ್ಳುತ್ತಿರುವುದು ಈ ಕ್ಷೇತ್ರಕ್ಕೆ ದೊರೆಯುತ್ತಿರುವ ಉತ್ತೇಜನ ವೆನ್ನಬಹುದು.

೨೦೧೧ನೇ ಸಾಲಿನಲ್ಲಿ ಡಾ. ಎಸ್.ಪಿ. ಪದ್ಮಪ್ರಸಾದ್‌ರವರು ನಾಡಿನ ಜಾನಪದ ಕೃತಿಗಳ ಸಮೀಕ್ಷೆಯನ್ನು ತುಂಬಾ ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟಿದ್ದಾರೆ. ಅವರಿಗೆ ಪ್ರಾರಂಭದಲ್ಲಿ ದೊರೆತ ಎಂಬತ್ತು ಕೃತಿಗಳ ಸಮೀಕ್ಷೆ ನಡೆಸಿದ ತರುವಾಯ ಇನ್ನು ೪೦ ಕೃತಿಗಳು ದೊರಕಿದಾಗ ಇಷ್ಟು ಕೃತಿಗಳು ಜಾನಪದ ಕ್ಷೇತ್ರದಲ್ಲಿ ಒಂದೇ ವರ್ಷದಲ್ಲಿ ಪ್ರಕಟವಾಗಿವೆಂಬುದು ಆಶ್ಚರ್ಯದ ಸಂಗತಿಯೆಂದು ಉದ್ಗಾರವೆತ್ತಿದ್ದಾರೆ. ಯಕ್ಷಗಾನ ಮತ್ತು ಜಾನಪದ ಅಕಾಡೆಮಿಯು ೧೯೯೪ರಲ್ಲಿಯೇ ಜಾನಪದ ಕೃತಿಗಳ ಸಮೀಕ್ಷೆ ಕಾರ್ಯವನ್ನು ನೆರವೇರಿಸಿಕೊಂಡು ಬಂದಿರುವುದನ್ನು ವಿವರಿಸುತ್ತಾರೆ. ೧೯೯೪ ರಲ್ಲಿ ಬರುತ್ತಿದ್ದ ಜಾನಪದ ಕೃತಿಗಳ ಪಟ್ಟಿಗಿಂತ ಮೂರು ಪಟ್ಟು ಹೆಚ್ಚಾಗಿರುವುದನ್ನು ಗುರುತಿಸುತ್ತಾ ಇದಕ್ಕೆ ಹಲವು ಕಾರಣಗಳನ್ನು ನೀಡುತ್ತಾರೆ. ಅದರಲ್ಲಿ ಮುಖ್ಯವಾಗಿ ಕನ್ನಡಕ್ಕೆ 'ಶಾಸ್ತ್ರೀಯ ಭಾಷಾ ಸ್ಥಾನಮಾನ' ದೊರೆತಿರುವುದನ್ನು ಪ್ರಸ್ತಾಪಿಸುತ್ತಾ, ವಿಶ್ವವಿದ್ಯಾಲಯಗಳು ಸರ್ಕಾರ ನೀಡಿದ ಹಣವನ್ನು ನಾಡಿನ ಸಾಹಿತ್ಯ, ಸಂಸ್ಕೃತಿಯನ್ನು ಪುನರ್‌ಕಟ್ಟುವ ಕೆಲಸಕ್ಕಾಗಿ ಬಳಸಿಕೊಂಡಿರುವುದನ್ನು ಸವಿಸ್ತಾರವಾಗಿ 'ಜಾನಪದ ವರ್ಷ-೨೦೧೧'ರ ಕೃತಿಯ ಪ್ರಸ್ತಾಪದಲ್ಲಿ ತಿಳಿಸುತ್ತಾರೆ.

ಪ್ರಸ್ತುತ ಜಾನಪದ ವರ್ಷ ೨೦೧೨ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ಜಾನಪದ ಅಕಾಡೆಮಿ, ಕರ್ನಾಟಕ ಜಾನಪದ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರ, ಸಂಘ-ಸಂಸ್ಥೆಗಳು, ಪ್ರಕಾಶಕರು ಹಾಗೂ ವೈಯಕ್ತಿಕವಾಗಿ ತಮ್ಮ ಕೃತಿಗಳನ್ನು ಪ್ರಕಟಿಸಿದ ಲೇಖಕರುಗಳು ತುಂಬಾ ಮೌಲಿಕವೆನಿಸುವ ಜಾನಪದ ಕೃತಿಗಳನ್ನು ಪ್ರಕಟಸಿರುವುದು ಜಾನಪದ ಕ್ಷೇತ್ರಕ್ಕೆ ತೋರಿಸುತ್ತಿರುವ ಕಾಳಜಿಯಾಗಿದೆ.

ಈ ವರ್ಷದಲ್ಲಿ ಸಂಶೋಧನ ಮಹಾಪ್ರಬಂಧಗಳು ಒಟ್ಟು ಒಂಬತ್ತು ಪ್ರಕಟ ಗೊಂಡಿದ್ದು, ಅವುಗಳಲ್ಲಿ ಒಂದು ಡಿ.ಲಿಟ್. ಮಹಾಪ್ರಬಂಧವಾಗಿದ್ದು, ಅದು ಡಾ. ಇಂದಿರಾ ಹೆಗ್ಗಡೆಯವರ 'ತುಳುವರ ಮೂಲತಾನ ಆದಿಆಲಡೆ-ಪರಂಪರೆ ಮತ್ತು ಪರಿವರ್ತನೆ'. ಈ ಕೃತಿಯು ವಿಶಿಷ್ಟ ರೀತಿಯಲ್ಲಿ ಸಂಶೋಧನೆಯ ಸೂಕ್ಷ್ಮ ಹೊಳಹುಗಳನ್ನು ಇಟ್ಟುಕೊಂಡು ನಿರ್ಮಾಣವಾಗಿದೆ. ಈ ಮಹಾಪ್ರಬಂಧದ ಗುಣಮಟ್ಟ ಅರಿತು ನವಕರ್ನಾಟಕ ಪ್ರಕಾಶನದವರು ಇದನ್ನು ಪ್ರಕಟಿಸಿದ್ದಾರೆ. ಇನ್ನುಳಿದಂತೆ ಬೇರೆ ಬೇರೆ ವಿಶ್ವವಿದ್ಯಾಲಯಗಳಿಂದ ಪಡೆದ ಹಲವು ಉತ್ತಮ ಪಿಎಚ್.ಡಿ. ಮಹಾಪ್ರಬಂಧಗಳು ೨೦೧೨ರಲ್ಲಿ ಪ್ರಕಟಗೊಂಡಿವೆ. ಆ ಕೃತಿಗಳು ಇಂತಿವೆ:-

೧. ಜನಪದ ಕಥಾಲೋಕ(ದ್ವಿಮುದ್ರಣ) - ಡಾ. ಕೆ.ಆರ್. ಸಂಧ್ಯಾರೆಡ್ಡಿ

೨. ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು - ಡಾ. ಕೆ. ಆರ್.ಜೆ. ರಾಜ್‌ಕುಮಾರ್

೩. ಜನಪದ ಸಾಹಿತ್ಯದಲ್ಲಿ ಪವಾಡಗಳು - ಡಾ. ಎನ್.ಎಸ್. ಸರಸ್ವತಿ ಶ್ರೀಕಂಠಯ್ಯ
೪. ದೊಡ್ಡಾಟ ಪರಂಪರೆ ಮತ್ತು ಪ್ರಯೋಗಗಳು - ಡಾ. ಶ್ರೀಶೈಲ ಹುದ್ದಾರ
೫. ಯಕ್ಷ ಸ್ತ್ರೀ (ಸ್ತ್ರೀ ವೇಷ, ಸ್ತ್ರೀ ಪಾತ್ರ, ಮತ್ತು ಮಹಿಳಾ ಯಕ್ಷಗಾನ ವಿವೇಚನೆ) - ಡಾ. ಎನ್. ನಾಗವೇಣಿ
೬. ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ - ಡಾ. ವಾಸುದೇವ ಬಡಿಗೇರ
೭. ಕರಾವಳಿ ಕರ್ನಾಟಕದ ರಂಗೋಲಿ ಕಲೆ - ಡಾ. ಭಾರತಿ, ಮರವಂತೆ
೮. ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು - ಡಾ. ಜೀ.ಶಂ. ಪರಮಶಿವಯ್ಯ (ಮರುಮುದ್ರಣ ಕೃತಿ)
೯. ತುಳುವರ ಮೂಲತಾನ ಆದಿಆಲಡೆ ಪರಂಪರೆ ಮತ್ತು ಪರಿವರ್ತನೆ - ಡಾ. ಇಂದಿರಾ ಹೆಗ್ಗಡೆ (ಡಿ.ಲಿಟ್.)

ಹೀಗೆ ಒಂದು ಡಿ.ಲಿಟ್. ಮತ್ತು ಎಂಟು ಪಿಎಚ್.ಡಿ. ಮಹಾಪ್ರಬಂಧಗಳು ಸೇರಿದಂತೆ ಒಟ್ಟು ಒಂಬತ್ತು ಮಹಾಪ್ರಬಂಧಗಳು ೨೦೧೨ನೇ ಸಾಲಿನಲ್ಲಿಯೇ ಪ್ರಕಟಗೊಂಡಿರುವುದು ಉತ್ತಮ ಬೆಳವಣಿಗೆಯಾಗಿದೆ. ಈ ಒಂಬತ್ತು ಕೃತಿಗಳು ಸಮೀಕ್ಷೆಗೆ ದೊರಕಿದ್ದು, ಒಂದಲ್ಲ ಒಂದು ರೀತಿಯಲ್ಲಿ ಎಲ್ಲಾ ಮಹಾಪ್ರಬಂಧಗಳು ಗುಣಮಟ್ಟದಲ್ಲಿ ಶೋಧನೆ ಗೊಂಡು ಸೂಕ್ಷ್ಮ ಒಳನೋಟಗಳೊಂದಿಗೆ ಅಧ್ಯಯನದ ಶಿಸ್ತುಗಳನ್ನು ಇಟ್ಟುಕೊಂಡು ಉತ್ತಮ ರೀತಿಯಲ್ಲಿ ಹೊರಬಂದಿರುವುದು ಜಾನಪದ ಸಂಶೋಧನ ಕ್ಷೇತ್ರಕ್ಕೆ ಹೊಸ ಗರಿಗಳು ಸೇರ್ಪಡೆಗೊಂಡಂತಾಗಿದೆ.

ಸಂಶೋಧನೆಯ ಜಾಡಿನಲ್ಲಿಯೇ ನಿರ್ಮಾಣಗೊಂಡು ಮಹಾಪ್ರಬಂಧದ ರೀತಿಯಲ್ಲಿ ಪ್ರಕಟವಾಗಿರುವ ಹಲವು ಕೃತಿಗಳಲ್ಲಿ ಡಾ.ಎನ್.ಆರ್.ನಾಯಕರವರ 'ನಾಡವರ ಒಂದು ಸಾಂಸ್ಕೃತಿಕ ಅಧ್ಯಯನ' ಮತ್ತು 'ಹಾಲಕ್ಕಿ ಒಕ್ಕಲಿಗರು' ಕೃತಿಗಳು ಜಾನಪದದ 'ಶೋಧಗ್ರಂಥ'ಳೆನ್ನಬಹುದು. ನಾಡವರ ಮತ್ತು ಹಾಲಕ್ಕಿ ಒಕ್ಕಲಿಗರ ಸಮುದಾಯಗಳ ಪರಂಪರೆ, ಸಂಪ್ರದಾಯ, ಜೀವನವಿಧಾನಗಳ ವಿಸ್ತೃತವಾದ ಸಂಸ್ಕೃತಿಯ ಎಲ್ಲಾ ಮಗ್ಗುಲುಗಳನ್ನು ಸೂಕ್ಷ್ಮ ರೀತಿಯಲ್ಲಿ ಶಾಸ್ತ್ರೀಯ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿದ್ದಾರೆ. ಇದೇ ರೀತಿಯಲ್ಲಿ ಕೆ.ಗಂಗಾಧರ ಮತ್ತು ಹಾದಿಗಲ್ಲು ರಾಘವೇಂದ್ರರವರ 'ತೀರ್ಥಹಳ್ಳಿಯ ಸುತ್ತಮುತ್ತ' ಕೃತಿಯು ಸ್ಥಳನಾಮದಿಂದ ಹಿಡಿದು ಮೌಖಿಕ ಚರಿತ್ರೆ, ಜಾನಪದ ವಿವರ, ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುತ್ತದೆ. ಮಲೆನಾಡನ್ನು ಕುರಿತ ಎಷ್ಟೋ ಕೃತಿಗಳು ಪ್ರಕಟಗೊಂಡಿದ್ದರೂ ಈ ಕೃತಿ ಅನೇಕ ಹೊಸ ವಿಷಯಗಳ ಬಗೆಗೆ ಬೆಳಕು ಚೆಲ್ಲುತ್ತದೆ. ಜೀಯು ಹೊನ್ನಾವರರವರ 'ಕರಾವಳಿ' ಕೃತಿ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೃತಿಯಾಗಿ ನಿಲ್ಲುತ್ತದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಂಡ ಹಲವು ವೈವಿಧ್ಯ ವಿಷಯಗಳಾದ ವ್ಯಕ್ತಿ ಚಿತ್ರಣಗಳು, ರಾಜಕೀಯ, ಸಮಾಜ, ಜಾನಪದ, ಸಂಸ್ಕೃತಿಯನ್ನೊಳಗೊಂಡ

ವಿವರಗಳು ಇಲ್ಲಿ ದಾಖಲಾಗಿವೆ. ಡಾ. ರಾಗೌರವರ 'ಜಾನಪದ ಪ್ರಕಾರಗಳು' ಕೃತಿಯು ಕನ್ನಡ ಜಾನಪದ ಲೋಕಕ್ಕೆ ಒಂದು ಅಪರೂಪದ ಕೃತಿಯೆನ್ನಬಹುದು. ಜಾನಪದ ದಲ್ಲಿರುವ ಎಲ್ಲಾ ಪ್ರಕಾರಗಳನ್ನು ಆಮೂಲಾಗ್ರವಾಗಿ ಪಾಶ್ಚಾತ್ಯ ಓದಿನೊಂದಿಗೆ ಹಾಗೂ ನಾಡಿನ ಬಹುಮುಖಿ ವಿಷಯಗಳೊಂದಿಗೆ ಸಂಶೋಧನಾತ್ಮಕವಾಗಿ ವಿಶ್ಲೇಷಣೆ ಮಾಡಿದ್ದಾರೆ.

೨೦೧೨ನೇ ಸಾಲಿನಲ್ಲಿ ಪ್ರಕಟಗೊಂಡ ಅನೇಕ ಕೃತಿಗಳು ಬಹುಮುಖಿಯಾದ ಮತ್ತು ಅಂತರಶಿಸ್ತೀಯ ನೆಲೆಗಟ್ಟಿನಲ್ಲಿ ನಿರ್ಮಾಣಗೊಂಡು, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿವೆ. ಅದರಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಭಾಷೆಗಳ ಅಧ್ಯಯನದಲ್ಲಿ ಡಾ. ಕೆ.ಎಂ. ಮೇತ್ರಿಯವರ 'ಮರಗು ಭಾಷೆ', ಮಹತ್ವವಾದ ಸಂಶೋಧನಾತ್ಮಕ ಮತ್ತು ಸಾಂಸ್ಕೃತಿಕ ವಿಶ್ಲೇಷಣೆಯ ಕೃತಿ. ರಹಮತ್ ತರೀಕೆರೆಯವರ 'ನುಡಿ ಸಂಕರ ಸಾಹಿತ್ಯ', ದಲಿತರ ಬದುಕನ್ನು ತಳಸ್ಪರ್ಶಿಯಾಗಿ ಶೋಧಿಸಿದ ಡಾ. ಎನ್. ಚಿನ್ನಸ್ವಾಮಿ ಸೋಸಲೆಯವರ 'ದಲಿತರ ಬದುಕು-ಮೆಲುಕು' ಕೃತಿ. ಹಾಲುಮತ ಸಂಪ್ರದಾಯದ ಸಾಂಸ್ಕೃತಿಕ ವೀರ ಅಮೋಘ ಸಿದ್ದೇಶ್ವರನ ಚರಿತ್ರೆಯ ಜೊತೆಯಲ್ಲಿ ಕುರುಬರ ಸಾಂಸ್ಕೃತಿಕ ವಿಶೇಷತೆಯನ್ನು ಹೇಳಿರುವ ಡಾ. ಚನ್ನಪ್ಪ ಕಟ್ಟಿಯವರ 'ಅರಕೇರಿ ಅಮೋಘ ಸಿದ್ದೇಶ್ವರ' ಕೃತಿ. ಕನ್ನಡನಾಡಿನ ಸಮುದಾಯಗಳ ಪರಂಪರೆಯ ಕನ್ನಡ ಪ್ರಜ್ಞೆಯ ವೈಶಿಷ್ಟ್ಯತೆಯನ್ನು ಕಟ್ಟಿಕೊಟ್ಟಿರುವ ಡಾ. ಎ. ಮೋಹನಕುಂಟಾರ್‌ರವರ 'ಸಮುದಾಯಗಳ ಕನ್ನಡ ಪರಂಪರೆ' ಕೃತಿ. ಕನಕಗಿರಿ ನಾಡಿನ ಸಮೃದ್ಧ ಸಂಸ್ಕೃತಿಯ ವಕ್ತಾರರೆನಿಸಿಕೊಂಡ ನಾಯಕರ ತಳಸ್ಪರ್ಶಿಯವಾದ ಹಲವು ಲೇಖನಗಳು ಸಂಕಲನ ಗೊಂಡ ಡಾ. ತಾರಿಹಳ್ಳಿ ಹನುಮಂತಪ್ಪರವರ 'ಕನಕಗಿರಿ ನಾಯಕರು' ಕೃತಿ. ಬಳ್ಳಾರಿ ಪರಿಸರವನ್ನು ತುಂಬಾ ಆಪ್ತತೆಯಿಂದ ಕಂಡು ಅದರ ಸಾಂಸ್ಕೃತಿಕ ಮಹತ್ವವನ್ನು ಕಟ್ಟಿಕೊಟ್ಟಿರುವ ಸಂಶೋಧನ ಕೃತಿ ಡಾ. ವಾಸುದೇವ ಬಡಿಗೇರರವರ 'ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ', ಎರಡು ಅಲಕ್ಷಿತ ಸಮುದಾಯಗಳ ಸಂಸ್ಕೃತಿಯ ಚಿತ್ರಣವಿರುವ ಹಾಗೂ ಆ ಸಮುದಾಯಗಳಲ್ಲಿನ ಸಂಸ್ಕೃತೀಕರಣದ ವಿವರವಿರುವ ಡಾ. ಗಂಗಾಧರ ದೈವಜ್ಞರವರ 'ಕೊರಗರು : ಸಮಕಾಲೀನ ಸ್ಪಂದನ', ಕಚ್ಚೆಗೌಳಿಗರ ಪರಂಪರೆ ಮತ್ತು ಆಧುನಿಕತೆ' ಎರಡು ಕೃತಿಗಳು. ಎರಡು ಭಾಷಿಕ ವರ್ಗಗಳ ಸಾಂಸ್ಕೃತಿಕ ಅನನ್ಯತೆ ಮತ್ತು ಪರಂಪರೆಯ ಅನ್ಯೋನ್ಯತೆಯನ್ನು ವಿವರಿಸಿರುವ ಡಾ. ವಿಠಲರಾವ್ ಟಿ. ಗಾಯಕ್ವಾಡ್‌ರವರ 'ಕನ್ನಡ-ಮರಾಠಿ ಸಾಂಸ್ಕೃತಿಕ ಬಾಂಧವ್ಯ' ಕೃತಿ. ಹಂಪಿ ಪರಿಸರದ ವೈಭವ, ಅಲ್ಲಿನ ಪಾರಂಪರಿಕ ಸಂಸ್ಕೃತಿಯ ಕುರಿತ ಡಾ. ಹೆಬ್ಬಾಲೆ ಕೆ. ನಾಗೇಶ್‌ರವರ 'ಮುಕ್ತ ಸಂಸ್ಕೃತಿ ಮತ್ತು ಹಂಪಿ ಪರಿಸರ' ಕೃತಿ ಮಾನವನ ಜೀವನ ಶೈಲಿಯಲ್ಲಾದ ಸಂಸ್ಕೃತಿಯ ಪಲ್ಲಟಗಳನ್ನು ಹಲವು ಲೇಖನಗಳಲ್ಲಿ ಒಟ್ಟು ಗೂಡಿಸಿದ ಡಾ. ತಾರಿಹಳ್ಳಿ ಹನುಮಂತಪ್ಪನವರ 'ಮಾನವ ಮತ್ತು ಸಾಂಸ್ಕೃತಿಕ

ಪಲ್ಲಟಗಳು' ಕೃತಿ ಸಾಂಸ್ಕೃತಿಕ ಅನನ್ಯತೆಯನ್ನು ಸಾರುವ ಅಂತರಶಿಸ್ತೀಯ ಅಧ್ಯಯನದ ಮಹತ್ವವುಳ್ಳ ಕೃತಿ ಡಾ. ಸಿ. ಮಹದೇವರವರ 'ಮೈಲಾರ' ಕೃತಿ ಮತ್ತು ಈ ನಾಡಿನ ಬುಟಕಟ್ಟು ಸಮುದಾಯಗಳ ಮೌಖಿಕ ಮಹಾಕಾವ್ಯಗಳನ್ನು ಓದುವ ಪಠ್ಯಗಳಾಗಿ ಪುನರ್ ರೂಪಿಸುವ ಆರಂಭದ ಕೃತಿಯಾಗಿ ಡಾ. ವೆಂಕಟೇಶ್ ಇಂದ್ವಾಡಿಯವರ 'ಮಂಟೇಸ್ವಾಮಿ ಕಾವ್ಯ(ಓದು ಪಠ್ಯ)'. ಹೀಗೆ ಇಂಥ ಭಿನ್ನ ಭಿನ್ನ ನಿಲುವಿನ ಹದಿನಾಲ್ಕು ಕೃತಿಗಳು ಹಂಪಿ ಕನ್ನಡ ವಿಶ್ವವಿದ್ಯಾಲಯದ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಯಡಿ ಪ್ರಕಟಗೊಂಡಿರುವುದು ನಿಜಕ್ಕೂ ಸಂಶೋಧನಾ ಆಸಕ್ತರಿಗೆ ಉತ್ತಮ ಆಕರ ಕೃತಿಗಳೆಂಬುದು ಸಂತೋಷದ ವಿಷಯ.

ಕರ್ನಾಟಕ ಜಾನಪದ ಪರಿಷತ್ತಿನ 'ಜಾನಪದ ಪುಸ್ತಕ ಮಾಲೆ'ಯಡಿಯಲ್ಲಿ ಪ್ರಕಟಗೊಂಡಿರುವ ಆರು ಪುಟ್ಟ ಕೃತಿಗಳು ವಿದ್ವತ್ಪೂರ್ಣ ರೀತಿಯಲ್ಲಿ ಹೊರಬಂದಿವೆ. ಡಾ. ಹಿ.ಶಿ. ರಾಮಚಂದ್ರೇಗೌಡರವರ 'ಜನಪದ ವಿಜ್ಞಾನ' ಮತ್ತು ಜನಪದ ಧರ್ಮ' ಈ ಎರಡು ಕೃತಿಗಳಲ್ಲಿ ಜಾನಪದದಲ್ಲಿರುವ ಜ್ಞಾನ–ವಿಜ್ಞಾನಗಳ ಅರ್ಥವನ್ನು ತಳಸ್ಪರ್ಶಿಯಾಗಿ ಅವಲೋಕಿಸುವ ಕ್ರಮ ಒಂದಾದರೆ, ಮತ್ತೊಂದು ಕೃತಿಯಲ್ಲಿ ಜನಪದ ಧರ್ಮ ಸಾಮಾನ್ಯವಾಗಿ ಮಾನವನಿಗೆ ಒಳಿತಾಗುವ ಧರ್ಮವಾಗಿರಬೇಕೆಂಬ ನಿಲುವನ್ನು ವ್ಯಕ್ತಪಡಿಸುತ್ತದೆ. ಎಚ್.ಎಚ್. ಗಂಗಾಧರಾಚಾರ್‌ರವರ 'ಗಾದೆಗಳ ಲೋಕ' ಕೃತಿಯಲ್ಲಿ ಕೆಲವು ಗಾದೆಗಳ ವಿಶ್ಲೇಷಣೆಯೊಂದಿಗೆ ಇವುಗಳ ಸಂರಕ್ಷಣೆಯ ವಿಚಾರ ತಿಳಿಸಿದ್ದಾರೆ. ಡಾ. ವಿಜಯಲಕ್ಷ್ಮಿ ಸೀತಾಪುರರವರ 'ಜನಪದ ಸಾಹಿತ್ಯದಲ್ಲಿ ಹಾಸ್ಯ' ಕೃತಿಯಲ್ಲಿ ಒತ್ತಡದ ಬದುಕಿಗೆ ಹಾಸ್ಯದ ಪ್ರಾಮುಖ್ಯತೆ, ಜನಪದ ಪ್ರಕಾರಗಳಲ್ಲಿ ದೊರೆಯುವ ವೈವಿಧ್ಯವೆನಿಸುವ ಹಾಸ್ಯ ವಿಷಯಗಳ ವಿಶ್ಲೇಷಣೆ ಮಾಡಲಾಗಿದೆ. ಇಬ್ಬರು ಜಾನಪದ ವಿದ್ವಾಂಸರುಗಳ ಜೀವನ ಪರಿಚಯಸಿರುವ ಈ ಸಂಸ್ಥೆ ಎರಡು ಕೃತಿಗಳಲ್ಲಿ ಪ್ರಕಟವಾಗಿದೆ. ಎರಡು ಕೃತಿಗಳಲ್ಲಿ ಶಾಂತಸ್ವಾಮಿಯವರ 'ನಾ ಕಂಡಂತೆ ನನ್ನ ತಂದೆ' ಮತ್ತು ಸುಮುಖಾನಂದ ಜಲವಳ್ಳಿಯವರ 'ಜಾನಪದ ತಜ್ಞೆ ಶ್ರೀಮತಿ ಶಾಂತಿನಾಯಕ' ಇವು ಪ್ರಮುಖ ಕೃತಿಗಳು. ಈ ಇಬ್ಬರು ಲೇಖಕರು ಮಹಾನ್ ಚೇತನಗಳಾಗಿದ್ದು, ಅವರಲ್ಲಿ ಎಚ್.ಎಲ್. ನಾಗೇಗೌಡ, ಐಎಎಸ್ ಅಧಿಕಾರಿಯಾಗಿ ಜನಪದಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ. ಡಾ. ಎನ್.ಆರ್. ನಾಯಕರಂತೆ ಅವರ ಪತ್ನಿ ಶಾಂತಿನಾಯಕರು ಕೂಡ ಜಾನಪದ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ 'ಜನಪ್ರಿಯ ಕನ್ನಡ ಮಾಲೆ' ಅಡಿಯಲ್ಲಿ ಡಾ. ಎ. ರಂಗಸ್ವಾಮಿಯವರ ಪ್ರಧಾನ ಸಂಪಾದಕತ್ವದಲ್ಲಿ ನಾಡಿನ ಜಾನಪದ ವಿದ್ವಾಂಸ ರಿಂದ ವಿವಿಧ ವಿಷಯಗಳ ವೈವಿಧ್ಯಪೂರ್ಣವೆನಿಸಿದ ಮಾಹಿತಿಯನ್ನೊಳ ಗೊಂಡ ಏಳು ಕೃತಿಗಳು ಪ್ರಕಟಗೊಂಡಿವೆ. ಅವುಗಳಲ್ಲಿ ಡಾ. ರಾಗೌರವರ 'ಗಾದೆಗಳ ಅಧ್ಯಯನ',

ಡಾ. ಪಿ.ಕೆ. ರಾಜಶೇಖರ್‌ರವರ 'ಜನಪದ ಸಿಂಗಾರ ಸಾಧನಗಳು', ಡಾ. ರಾಜೇಗೌಡ ಹೊಸಹಳ್ಳಿಯವರ 'ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಜಾನಪದೀಯತೆ', ಡಾ. ಎಚ್.ಆರ್. ಚೇತನರವರ 'ಜನಪದ ಕುಣಿತಗಳು', ಡಾ. ಪಿ.ಕೆ. ಖಂಡೋಬರವರ 'ಬುಡಕಟ್ಟು ಜಾನಪದ', ಡಾ. ಕುಮಾರ ಚಲ್ಯರವರ 'ಜನಪದ ಗೀತ ಪ್ರಕಾರಗಳು', ಡಾ.ಕೃಷ್ಣಮೂರ್ತಿ ಹನೂರುರವರ 'ಕನ್ನಡ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನ' ಈ ಎಲ್ಲಾ ಕೃತಿಗಳು ಸಂಶೋಧನಾ ತಳಹದಿಯಲ್ಲಿ ರಚನೆಯಾಗಿರುವುದರಿಂದ ಜಾನಪದ ಕ್ಷೇತ್ರಕ್ಕೆ ದೊಡ್ಡಮಟ್ಟದ ಕೊಡುಗೆಯೆನ್ನಬಹುದು.

ಈ ವರ್ಷದಲ್ಲಿ ತುಂಬಾ ಅಪರೂಪವೆನಿಸುವ ಕೃತಿಗಳು ಪ್ರಕಟಗೊಂಡಿವೆ. ಅದರಲ್ಲಿ ಡಾ. ಶಿವಾನಂದ ಎಚ್. ಬಂಟನೂರರವರು 'ಮಾಟದೊಳಗಣ ನೋಟ' ಕೃತಿಯಲ್ಲಿ ಮರ, ಕಲ್ಲುಗಳಲ್ಲಿ ರೂಪುಗೊಂಡ ಕಲಾವಿದನ ಸೃಜನಶೀಲ ಚಿಂತನೆಯಲ್ಲಿ ಅಡಗಿರುವ ಪಾರಂಪರಿಕ ಜಾನಪದ ಅಂಶಗಳ ಹುಡುಕಾಟ ನಿಜವಾಗಲೂ ಒಳ್ಳೆಯ ಬೆಳವಣಿಗೆ. ಎಂ.ಆರ್. ಪ್ರಭಾಕರ್‌ರವರ 'ಅಂಚೆ ಜಾನಪದ' ಕೃತಿ ಅಪರೂಪದ್ದು. ಇಂತಹ ಚಿಂತನೆಯ ಕೃತಿ ಬೇರೆ ಇಲ್ಲವೆನ್ನಬಹುದು. ಜಗತ್ತಿನ ಕೆಲವು ದೇಶಗಳ ಅಂಚೆಚೀಟಿಗಳನ್ನು ಸಂಗ್ರಹಿಸಿ, ಅವು ಆಯಾಯ ದೇಶದ ಜನಪದ ಸಂಸ್ಕೃತಿಯ ಹಿನ್ನೆಲೆಯಲ್ಲಿ ರೂಪುಗೊಂಡಿರುವುದನ್ನು ಶಾಸ್ತ್ರಬದ್ಧವಾಗಿ ಕಟ್ಟಿಕೊಟ್ಟಿರುವುದು ವಿಶೇಷವಾಗಿದೆ. ಪ್ರೊ. ಸಿ. ಸಿದ್ದರಾಜು ಆಲಕೆರೆಯವರ 'ಕಾವೇರಿ ಚಳುವಳಿ' ಕೃತಿ, ನಾಡಿನ ಸಮುದಾಯ ಗಳ ಜೀವನಾಡಿಯಾಗಿರುವ ಕಾವೇರಿಯನ್ನು ಭಾವನಾತ್ಮಕವಾಗಿ ನಮ್ಮದು ಎನ್ನುವ ರೀತಿಯಲ್ಲಿ ಉಳಿಸಿಕೊಳ್ಳುವಲ್ಲಿ ರಚನಾತ್ಮಕವಾಗಿ ಚಳವಳಿಗಳನ್ನು ರೂಪಿಸಿಕೊಂಡು ಬಂದಿದ್ದಾರೆಂಬುದನ್ನು ಆಪ್ತತೆಯಿಂದ ರಚಿಸಿದ್ದಾರೆ. ಡಾ. ಮೀರಾಸಾಬಿ ಹಳ್ಳಿ ಶಿವಣ್ಣನವರ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ಕುಂಚಿಟಿಗರು' ಕೃತಿಯು ಕರ್ನಾಟಕ-ಆಂಧ್ರ-ತಮಿಳುನಾಡು-ಕೇರಳ ರಾಜ್ಯಗಳಲ್ಲಿ ವಾಸಿಸುತ್ತಿರುವ ಕುಂಚಿಟಿಗ ಸಮುದಾಯದ ತಳಸ್ಪರ್ಶಿಯ ಸಾಂಸ್ಕೃತಿಕ ಅಧ್ಯಯನವನ್ನು ನಡೆಸಿ, ವಿವಿಧ ವಿದ್ವಾಂಸರ ಸಹಕಾರದಂದ ಒಂದು ಸಂಶೋಧನಾ ಆಕರ ಗ್ರಂಥವಾಗಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆನ್ನ ಬಹುದು. ಇನ್ನೂ ಕೆಲವು ವಿಶೇಷವೆನಿಸುವ ಅಪರೂಪದ ಕೃತಿಗಳಿವೆ. ತುಳು ಭಾಷೆಯಲ್ಲಿನ ಕನ್ನಡದ ಲಿಪಿಯಿರುವ ಬೊಟ್ಟಿಕೆರೆ ಪುರುಷೋತ್ತಮ ಪೂಂಜರವರ 'ಕುಡಿಯನ ಕಣ್ಣ್' ಯಕ್ಷಗಾನ ಕೃತಿ ಹೊರಬಂದಿರುವುದು ವಿಶೇಷವಾಗಿದೆ. ಹಾಗೆಯೇ ಒಂದು ಅನುವಾದ ಕೃತಿಯು ಈ ಬಾರಿ ನಮ್ಮ ಸಮೀಕ್ಷೆಗೆ ದೊರೆತಿದೆ. ದೇಶದ ಹಿರಿಯ ಪತ್ರಕರ್ತರಾಗಿರುವ ಪಿ. ಸಾಯಿನಾಥ್‌ರವರು ಐದು ರಾಜ್ಯಗಳ ಬಡ ಜಿಲ್ಲೆಗಳ ಜನರ ಬದುಕಿನ ಬವಣೆಯನ್ನು ಅಕ್ಷರದಲ್ಲಿ ಸೆರೆಹಿಡಿದಿದ್ದಾರೆ. ಇಂಗ್ಲೀಷ್‌ನ ಈ ಕೃತಿಯನ್ನು ಪತ್ರಕರ್ತರಾಗಿರುವ ಜಿ.ಎನ್. ಮೋಹನ್‌ರವರು 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಎಂಬ ಹೆಸರಿನಲ್ಲಿ ಮೂಲದ ನೈಜ ಚಿತ್ರಣದೊಂದಿಗೆ ಕನ್ನಡಕ್ಕೆ ಅನುವಾದಿಸಿದ್ದಾರೆ.

ಕರ್ನಾಟಕ ಜಾನಪದ ಅಕಾಡೆಮಿಯ ಮಹತ್ವದ ಯೋಜನೆ, ಗೊ.ರು. ಚನ್ನಬಸಪ್ಪ ಅವರ ಕನಸಿನ ಕೂಸಾದ 'ಕನ್ನಡ ಜಾನಪದ ನಿಘಂಟು, ಸಂಪುಟ-೧, ೨ ,೩' ಕೃತಿಗಳು ಪ್ರಕಟಗೊಂಡಿರುವುದು ಸಂತೋಷದ ವಿಚಾರ. ಈ ಸಂಪುಟಗಳಲ್ಲಿ ನಾಡಿನ ಜನಸಮುದಾಯಗಳಲ್ಲಿನ ಆಡು ಭಾಷೆಯ ಪದಗಳ ಸಂಗ್ರಹದೊಂದಿಗೆ ಅರ್ಥವಿವರ ನೀಡಿದ್ದಾರೆ. ಆಧುನಿಕತೆಗೆ ಮತ್ತು ಇತರ ಭಾಷೆಗಳ ಪ್ರವಾಹಕ್ಕೆ ಸಿಲುಕಿ ಕನ್ನಡದ ದೇಸಿ ಶಬ್ದಗಳು ಕಣ್ಮರೆಯಾಗುತ್ತಿರುವಾಗ ಅಪರೂಪದ ಜಾನಪದ ಗ್ರಾಮ್ಯ ಪದಗಳ ಸಂಗ್ರಹವು ಭವಿಷ್ಯದ ದೃಷ್ಟಿಯಿಂದ ಉತ್ತಮ ಕೆಲಸವಾಗಿದೆ. ಇದರ ಜೊತೆಯಲ್ಲಿ ಡಾ. ಶಾಲಿನಿ ರಘುನಾಥ್‌ರವರ 'ಧಾರವಾಡ ಜಿಲ್ಲೆಯ ಜನಪದ ಕಲಾವಿದರು', ಎಂ.ಕೆ. ರಮಾದೇವಿಯವರ 'ಜಾನಪದ ತಜ್ಞ ಮತಿಘಟ್ಟ ಕೃಷ್ಣಮೂರ್ತಿ', ಡಾ. ಮೀರಾಸಾಬಿಹಳ್ಳಿ ಶಿವಣ್ಣರವರ 'ಜಾನಪದ ಹಿನ್ನೋಟ:೨೦೦೮-೧೨' ಕೃತಿಗಳು ಮೌಲ್ಯಯುತವಾಗಿವೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಎರಡು ಕೃತಿಗಳು ಮಾತ್ರ ಪ್ರಕಟಗೊಂಡಿವೆ. ಈ ಸಂಸ್ಥೆಯು ಪುಸ್ತಕ ಪ್ರಕಟಣೆಗೆ ಸೀಮಿತವಾಗಿರುವ ಹಿನ್ನೆಲೆಯಲ್ಲಿ ಇನ್ನಷ್ಟು ಕೃತಿಗಳು ಈ ಕ್ಷೇತ್ರದಲ್ಲಿ ಪ್ರಕಟಗೊಂಡಿದ್ದರೆ ಚೆನ್ನಾಗಿರುತ್ತಿತ್ತು.

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ವತಿಯಿಂದ ಡಾ. ಎನ್. ನಾಗವೇಣಿಯವರ ಪಿಎಚ್.ಡಿ. ನಿಬಂಧ 'ಯಕ್ಷ ಸ್ತ್ರೀ'(ಸ್ತ್ರೀ ವೇಷ, ಸ್ತ್ರೀ ಪಾತ್ರ ಮತ್ತು ಮಹಿಳಾ ಯಕ್ಷಗಾನ ವಿವೇಚನೆ); ಡಾ. ರಾಜಶ್ರೀ, ಸತೀಶ್ ಕೊಣಾಜೆ, ಮತ್ತು ಎಂ.ಕೆ. ಶಿಶಿರ್‌ರವರ ಯಕ್ಷಗಾನದ ವಿಶಿಷ್ಟ ಲೇಖನಗಳ ಸಂಗ್ರಹವಿರುವ 'ಯಕ್ಷ ಸಿರಿ', 'ಯಕ್ಷಮುಡಿ', ಕೃತಿಗಳನ್ನು ಪ್ರಕಟಿಸುವುದರೊಂದಿಗೆ ಮಂಗಳೂರು ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರವು ಯುವ ಸಂಶೋಧಕರಿಗೆ ಮತ್ತಷ್ಟು ಅಧ್ಯಯನಕ್ಕೆ ಎಡೆಮಾಡಿ ಕೊಟ್ಟಂತಾಗಿದೆ. ಡಾ.ಚಕ್ಕೆರೆ ಶಿವಶಂಕರ್‌ರವರು ಸಂಪಾದಿಸಿರುವ ಎರಡು ಕೃತಿಗಳಾದ 'ಭಾಗವತ ಚಿಕ್ಕೇಗೌಡರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು', 'ಹಿರೇಬಳ್ಳಾಪುರ ಸುಬ್ಬರಾಯಪ್ಪನವರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು' ಪ್ರಕಟಗೊಂಡಿವೆ.

ಕೆಲವು ಪ್ರಕಾರದ ಕೃತಿಗಳು ಈ ಬಾರಿ ಪ್ರಕಟಣೆಯಾಗಿಲ್ಲದಿರುವುದರಿಂದ ಕೊರತೆ ಯೆನಿಸುತ್ತಿದೆ. ೨೦೧೧ರಲ್ಲಿ ವೈದ್ಯ ಜಾನಪದಕ್ಕೆ ಸಂಬಂಧಿಸಿದಂತೆ ಮೂರು ಕೃತಿಗಳು ಪ್ರಕಟಗೊಂಡು ಸಮೀಕ್ಷೆಗೆ ದೊರಕಿದ್ದವು. ಅದೇ ರೀತಿ ಕೃಷಿಗೆ ಸಂಬಂಧಿಸಿದ, ಸ್ಥಳನಾಮಗಳಿಗೆ ಸಂಬಂಧಿಸಿದ, ಗ್ರಾಮದೇವತೆಗಳಿಗೆ ಸಂಬಂಧಿಸಿದ, ಗ್ರಾಮಗಳಿಗೆ ಸಂಬಂಧಿಸಿದ ಕೃತಿಗಳು ಸಮೀಕ್ಷೆಗೆ ದೊರಕಿಲ್ಲ. ಆದರೆ ಈ ಬಾರಿ ಸಮೀಕ್ಷೆಗೆ ದೊರಕದೇ ಇರುವುದು ಆ ಕ್ಷೇತ್ರಗಳ ಅಧ್ಯಯನ ಹಿನ್ನಡೆಯೆನ್ನಬಹುದು. ಹಾಗೆಯೇ ಕಾವ್ಯಗಳ ಸಂಗ್ರಹವೂ ಕೂಡಾ ನಿರೀಕ್ಷಿಸಿದಷ್ಟು ಕೆಲಸ ನಡೆದಿಲ್ಲವೆನ್ನಬಹುದು.

೨೦೧೨ನೇ ಸಾಲಿನಲ್ಲಿ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಜಾನಪದ ವಿದ್ವಾಂಸರು ಆದ ಡಾ. ಚಂದ್ರಶೇಖರ ಕಂಬಾರ ಅವರ 'ಬೇಡರ ಹುಡುಗ ಮತ್ತು

ಗಿಳಿ', 'ಸವದತ್ತಿ ಎಲ್ಲಮ್ಮ' ಈ ಎರಡು ಕೃತಿಗಳು ಮರುಮುದ್ರಣಗೊಂಡು ಈ ಸಮೀಕ್ಷೆಗೆ ದೊರಕಿರುವುದು ವಿಶೇಷವಾಗಿದೆ. ಹಾಗೆಯೇ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕೃತರು, ಸಂಸ್ಕೃತಿ ಚಿಂತಕರಾದ ಡಾ.ರಹಮತ್ ತರೀಕೆರೆಯವರ 'ನುಡಿ ಸಂಕರ ಸಾಹಿತ್ಯ', 'ನಡೆದಷ್ಟೂ ನಾಡು' ಕೃತಿಗಳು ನಾಡಿನ ಸಂಸ್ಕೃತಿಯ ಚಿತ್ರಣವನ್ನು ಚಿತ್ರಿಸಿವೆ.

ಈ ವರ್ಷ ಮರುಮುದ್ರಣಗೊಂಡು ತುಂಬಾ ಮುಖ್ಯವೆನಿಸುವ ಹಾಗೂ ಈ ಕೃತಿಗಳನ್ನು ಇಂದೂ ಕೂಡ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇಟ್ಟಿರುವುದರಿಂದ, ಪರೀಕ್ಷಾರ್ಥಿಗಳು ಪದೇ ಪದೇ ಬೇಡಿಕೆ ಸಲ್ಲಿಸುತ್ತಿರುವುದರಿಂದ, ಸಮೀಕ್ಷೆಯಲ್ಲಿರುವ ಕೆಲವು ಕೃತಿಗಳು ೧೫ರಿಂದ ೨೦ರವರೆಗೆ ಮರುಮುದ್ರಣಗೊಂಡಿವೆ. ಈ ಬಾರಿ ಮರುಮುದ್ರಣಗೊಂಡ ೨೨ ಜಾನಪದ ಕೃತಿಗಳನ್ನು ಸಮೀಕ್ಷೆಗೆ ತೆಗೆದುಕೊಳ್ಳಲಾಗಿದೆ. ಅವುಗಳಲ್ಲಿ ಬೆಂಗಳೂರಿನ ಸಾಗರ್ ಪ್ರಕಾಶನದವರು ೧೭ ಕೃತಿಗಳನ್ನು ಒಟ್ಟಿಗೆ ಪ್ರಕಟಿಸಿದ್ದಾರೆ. ಇಷ್ಟೊಂದು ಜಾನಪದ ಕೃತಿಗಳು ಒಮ್ಮೆಗೆ ಪ್ರಕಟಣೆ ಮಾಡಿದ್ದು ಇದೇ ಮೊದಲು ಎಂದು ಭಾವಿಸಿದ್ದೇನೆ.

ಜಾನಪದ ಕ್ಷೇತ್ರಕ್ಕೆ ಒಂದು ರೀತಿಯಲ್ಲಿ ಭದ್ರಬುನಾದಿಯನ್ನು ಹಾಕಿದ ವಿದ್ವಾಂಸರುಗಳಲ್ಲಿ ಹಲಸಂಗಿ ಗೆಳೆಯರಾದ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪನವರು ಸಂಪಾದಿಸಿದ 'ಗರತಿಹಾಡು', ಜೀ.ಶಂ. ಪರಮಶಿವಯ್ಯನವರ ಎಲ್ಲಾ ಜಾನಪದ ಕೃತಿಗಳು, ಟಿ.ಎಸ್.ರಾಜಪ್ಪನವರ ಎಲ್ಲಾ ಜಾನಪದ ಕೃತಿಗಳು, ಚಂದ್ರಶೇಖರ ಕಂಬಾರರ 'ಬೇಡರ ಹುಡುಗ ಮತ್ತು ಗಿಳಿ' ಮತ್ತು ಸವದತ್ತಿ ಯಲ್ಲಮ್ಮ', ಕ್ಯಾತನಹಳ್ಳಿ ರಾಮಣ್ಣನವರ 'ಫ್ಲೀಟರು ಸಂಗ್ರಹಿಸಿದ ಸಮಗ್ರ ಲಾವಣಿಗಳು', ರಾಗೌರವರ 'ನಮ್ಮ ಒಗಟುಗಳು', ಜೀನಹಳ್ಳಿ ಸಿದ್ಧಲಿಂಗಪ್ಪನವರ 'ಜನಪದ ಒಗಟು ಮತ್ತು ಗಾದೆಯ ಕಥೆಗಳು' ಕೃತಿಗಳ ಪ್ರಾಮುಖ್ಯದ ಹಿನ್ನೆಲೆಯಲ್ಲಿ ಈ ಎಲ್ಲಾ ಕೃತಿಗಳನ್ನು ಸಮೀಕ್ಷೆಗೆ ತೆಗೆದುಕೊಳ್ಳಲಾಗಿದೆ. ಈ ಕೃತಿಗಳಲ್ಲಿ ಜೀ.ಶಂ.ಪ. ಅವರ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು', ಜೀಶಂಪ ಜಾನಪದ ಬರಹಗಳು, 'ಜಾನಪದ : ಕೆಲವು ಮುಖಗಳು' ಇವುಗಳನ್ನು ಹೊರತುಪಡಿಸಿದರೆ ಇನ್ನುಳಿದವುಗಳೆಲ್ಲವೂ ಸಂಗ್ರಹಗೊಂಡ ಕೃತಿಗಳಾಗಿವೆ. ಆ ಕಾಲದಲ್ಲಿ ಹೆಚ್ಚು ಸಂಗ್ರಹಕ್ಕೆ ಒತ್ತುಕೊಟ್ಟಿದ್ದರಿಂದ ವಿಮರ್ಶೆ ಮತ್ತು ಸಂಶೋಧನೆಯ ಕೃತಿಗಳು ಬಹುಸಂಖ್ಯೆಯಲ್ಲಿ ಬಂದಿಲ್ಲವೆನ್ನಬಹುದು.

ಪ್ರಸ್ತುತ ಸಂದರ್ಭದಲ್ಲಿ ಸಂಗ್ರಹ ಕೃತಿಗಳಿಗಿಂತ ಅತಿ ಹೆಚ್ಚಾಗಿ ವಿಮರ್ಶೆ, ಸಂಶೋಧನ ಕೃತಿಗಳು ಪ್ರಕಟಗೊಂಡಿವೆ. ಅವುಗಳಲ್ಲಿ ೫೦ ಕೃತಿಗಳು ವಿಮರ್ಶೆ, ಸಂಶೋಧನೆಯವು. ೪ ಕೃತಿಗಳು ಜಾನಪದ ವಿದ್ವಾಂಸರ ಜೀವನ ಪರಿಚಯದವು. ೨೨ ಕೃತಿಗಳು ಪದ್ಯ/ಗದ್ಯ ಸಂಗ್ರಹದವು. ೧ ಅನುವಾದ ಕೃತಿ. ೨೨ ಮರುಮುದ್ರಣಗೊಂಡ ಕೃತಿಗಳು ಇವೆ. ಸಮೀಕ್ಷೆಯಲ್ಲಿನ ಕೃತಿಗಳನ್ನು ಮತ್ತೆ ವಿಭಾಗಿಸಿ ನೋಡಿದರೆ, ೧೪ ಕೃತಿಗಳು ಸಮುದಾಯಕ್ಕೆ ಸಂಬಂಧಿಸಿದವು. ೯ ಕೃತಿಗಳು ಗಾದೆಗೆ ಸಂಬಂಧಿಸಿದವು. ೭ ಕೃತಿಗಳು ಯಕ್ಷಗಾನ ಬಯಲಾಟಕ್ಕೆ ಸಂಬಂಧಿಸಿದವು. ೧೨ ಕೃತಿಗಳು ಕಾವ್ಯಗಳು(ಇದರಲ್ಲಿ ೯

ಕೃತಿಗಳು ಮರುಮುದ್ರಣಗೊಂಡವು.) ಆಗಿವೆ. ಇನ್ನುಳಿದವು ಭಿನ್ನ ಭಿನ್ನ ವಿಷಯಗಳಿಗೆ ಸಂಬಂಧಿಸಿದ ಕೃತಿಗಳಾಗಿವೆ. ಇಂದು ಜಾನಪದ ಕ್ಷೇತ್ರವೊಂದರಲ್ಲಿ ಬಹುಸಂಖ್ಯೆಯಲ್ಲಿ ಕೃತಿಗಳು ಪ್ರಕಟಗೊಳ್ಳುತ್ತಿರುವುದು ಅಧ್ಯಯನ ಆಸಕ್ತರ ಒಲವು ಹೆಚ್ಚಾಗಿದೆಂದು ಭಾವಿಸಬಹುದು.

ಜಾನಪದ ಕ್ಷೇತ್ರ ಇಂದು ದೊಡ್ಡ ಮಟ್ಟದಲ್ಲಿ ವಿಸ್ತಾರವಾದ ಹರಹನ್ನು ಇಟ್ಟುಕೊಂಡು ಅಂತರಶಿಸ್ತೀಯ ನೆಲೆಯಲ್ಲಿ ಅಧ್ಯಯನಕ್ಕೆ ಎಡೆಮಾಡಿಕೊಡುತ್ತಿದೆ. ಮಿತಿಯಲ್ಲಿನ ಅಧ್ಯಯನ ಇಂದು ಬಹುಮುಖಿಯಾಗುತ್ತಿದೆ. ಇದರ ಫಲವೇ ಹಲವು ಕಡೆಯಿಂದ ಕೃತಿಗಳು ಪ್ರಕಟಗೊಳ್ಳಲು ಸಾಧ್ಯವಾಗಿದೆ. ಆದರೂ ಈ ಸಮೀಕ್ಷೆಗೆ ದೊರೆತಿರುವ ಕೃತಿಗಳು ಅಲ್ಪವೇ ಎಂದು ಭಾವಿಸಿದ್ದೇನೆ. ಏಕೆಂದರೆ ನನಗೆ ಇನ್ನೂ ಎಷ್ಟೋ ಕೃತಿಗಳು ಲಭ್ಯವಾಗಿಲ್ಲವೆಂಬ ಕೊರಗು ಇದೆ. ಈ ರೀತಿಯ ಕೊರಗನ್ನು ತಪ್ಪಿಸಲು ಪ್ರತಿ ವರ್ಷ ಪ್ರಕಟಣೆಗೊಂಡ ಜಾನಪದದ ಒಂದು ಕೃತಿಯನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ ಕಳಿಸಿಕೊಡುವುದರ ಮುಖಾಂತರ ಭವಿಷ್ಯಕ್ಕೆ ಅಮೂಲ್ಯವೆನಿಸುವ ಕೃತಿಗಳ ಸಂಗ್ರಹ, ಸಂರಕ್ಷಣೆ, ಮಾಡಿದಂತಾಗುತ್ತದೆ. ಭವಿಷ್ಯದ ಅಧ್ಯಯನಕಾರರ ದೃಷ್ಟಿಯಿಂದ ಈ ತರಹದ ಕೆಲಸವೂ ತುರ್ತು ಎಂದೇ ಭಾವಿಸಬಹುದು.

□□

ನೂರಾರು ಬುಡಕಟ್ಟು ಸಮುದಾಯಗಳಿವೆ. ಆದರೆ ಸಂವಿಧಾನ ಬದ್ಧವಾಗಿ ಇದುವರೆಗೆ ಪರಿಶಿಷ್ಟ ವರ್ಗದ ಪಟ್ಟಿಗೆ ಸೇರಿರುವ ಬುಡಕಟ್ಟುಗಳ ಸಂಖ್ಯೆ ೫೦ ಮಾತ್ರ. ಬುಡಕಟ್ಟು ಗಳಲ್ಲಿಯೇ ಅಲೆಮಾರಿ, ಅರೆಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳೆಂದು ಪಂಗಡಗಳಿದ್ದು ಇವರುಗಳಲ್ಲಿಯೇ ಪ್ರತ್ಯೇಕ ಭಾಷೆ, ಸಂಸ್ಕೃತಿ ರೂಪುಗೊಂಡಿವೆ. ಬುಡಕಟ್ಟು ಸಮುದಾಯಗಳು ಬಹುತೇಕವಾಗಿ ನಗರ ಪ್ರದೇಶದಿಂದ ದೂರವಿದ್ದು, ತಮ್ಮವೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡಿರುತ್ತವೆ. ಹಾಗೆಯೇ ಬುಡಕಟ್ಟು ಸಮುದಾಯಗಳು ನಗರ ವಾಸಿಗರ ಬಗ್ಗೆ, ಅಧಿಕಾರಿ ವರ್ಗದವರ ಬಗ್ಗೆ ಭಯಗ್ರಸ್ತರಾಗಿ ರುವುದರಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಅನ್ಯರಿಗೆ ಅರ್ಥವಾಗದ ರೀತಿಯಲ್ಲಿ ಮಾತನಾಡುವುದು ರೂಢಿ. ಅಂದರೆ ತಮ್ಮ ರಕ್ಷಣೆಗಾಗಿ ಅನ್ಯ ಭಾಷಿಕರಿಗೆ ಅರ್ಥವಾಗದಿರ ಲೆಂದು ತಮ್ಮೊಳಗೆ ರಹಸ್ಯವಾಗಿ ಸಂಭಾಷಿಸಿಕೊಳ್ಳುವುದು, ಇಂತಹ ವ್ಯವಹಾರದ ಭಾಷೆಗಳನ್ನು ಮರಗು ಭಾಷೆಗಳು ಎಂದು ಕರೆಯುತ್ತಾರೆ. ಬುಡಕಟ್ಟು ಸಮುದಾಯ ದವರಿಗೆ ಮರಗು ಭಾಷೆಯು ಅವರ ಬದುಕಿನ ರಕ್ಷಾಕವಚವೂ ಹೌದು. ಇಂತಹ ಭಾಷಾ ವೈಶಿಷ್ಟ್ಯತೆಯನ್ನು ಕುರಿತು ಡಾ. ಕೆ.ಎಂ. ಮೇತ್ರಿ ಅವರು 'ಮರಗು ಭಾಷೆ' ಎಂಬ ತಮ್ಮ ಕೃತಿಯಲ್ಲಿ ಅಲೆಮಾರಿ, ಅರೆಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳನ್ನು ಕುರಿತು ಸುದೀರ್ಘವಾಗಿ ಸಂಶೋಧಿಸಿರುವುದು ಭಾಷಾಶಾಸ್ತ್ರದ ದೃಷ್ಟಿಯಿಂದ ಸಾರ್ಥಕವಾದುದಾಗಿದೆ.

ಎಂಟು ದ್ರಾವಿಡ ಮರಗು ಭಾಷಿಕ ಅಲೆಮಾರಿ ಬುಡಕಟ್ಟುಗಳ ಬಗ್ಗೆ ಮತ್ತು ಆರು ದ್ರಾವಿಡೇತರ ಮರಗು ಭಾಷಿಕ ಅಲೆಮಾರಿ ಬುಡಕಟ್ಟುಗಳ ಬಗ್ಗೆ ಸುದೀರ್ಘವಾಗಿ ಸಾಂಸ್ಕೃತಿಕ ಶೋಧದಲ್ಲಿ ತೊಡಗಿ ಈ ಕೃತಿಯನ್ನು ಸಿದ್ಧಪಡಿಸಲಾಗಿದೆ.

ದ್ರಾವಿಡ ಮರಗು ಭಾಷಿಕ ಅಲೆಮಾರಿ ಬುಡಕಟ್ಟುಗಳಾದ ಬೆಳಗಾವಿ ಜಿಲ್ಲೆಯ ಅಲೆಮಾರಿ ಕುರುಬರು ಮರಾಠಿ ಮತ್ತು ಕನ್ನಡ ಎರಡು ಭಾಷೆಗಳಲ್ಲಿ ತಮ್ಮದೇ ಆದ ವಿಶಿಷ್ಟ ಪದ ಬಳಕೆಯ ಬಗ್ಗೆ; ಕೊರಮರು ಬಳಸುವ ಕುಳಿರ್ ಭಾಷೆಯ ಬಗ್ಗೆ; ಚೆನ್ನದಾಸರು ತೆಲುಗು ಮಿಶ್ರಿತ ಮರಗು ಭಾಷೆ ಬಳಸುವ ಬಗ್ಗೆ; ಬುಡ್ಗ ಜನಾಂಗದವರು ಬಳಸುವ ಮರಗು ಭಾಷೆಯು ಪದಗಳ ಅಂತ್ಯದಲ್ಲಿ 'ಳು' ಹಾಗೂ 'ಜಿಡ್ಡಡು' ಎನ್ನುವ ಪದ ಬಹುವಚನವನ್ನು ಪ್ರತಿನಿಧಿಸುವುದರ ಬಗ್ಗೆ; ರಾಜಗೊಂಡ ಭಾಷೆಯು ತೆಲುಗು ಭಾಷೆಯ 'ಕೊಂಡ' ಪದದಿಂದ ಬಂದಿರುವುದರ ಬಗ್ಗೆ; ಸಿಂಧೊಳ್ಳು ಸಮುದಾಯದವರು ಮೂಲದಲ್ಲಿ ತೆಲುಗು ಭಾಷಿಕರಾಗಿದ್ದರೂ ಆಂತರ್ಯದಲ್ಲಿ ಮರುಗು ಭಾಷೆ ಬಳಸುತ್ತಿರುವ ಬಗ್ಗೆ; ಸುಡಗಾಡ ಸಿದ್ಧರು ಮಾತನಾಡುವ ತೆಲುಗಿನ ಮೇಲೆ ಕನ್ನಡ ಪ್ರಭಾವ ಆಗಿರುವ ಬಗ್ಗೆ; ಹೆಳವರು ಬಳಸುವ 'ಮರುಗತಮ್' ಭಾಷೆಯ ಬಗ್ಗೆ ಹಾಗೂ ದ್ರಾವಿಡೇತರ ಮರಗು ಭಾಷಿಕ ಅಲೆಮಾರಿ ಬುಡಕಟ್ಟುಗಳಾದ-ಘಿಸಾಡಿಯವರ ಮಾತೃಭಾಷೆಯ

ಇಂಡೋ ಆರ್ಯನ್ ಭಾಷಾವರ್ಗಕ್ಕೆ ಸೇರಿದ್ದು, ಹಿಂದಿ ಭಾಷೆಯನ್ನು ಹೆಚ್ಚಾಗಿ ಬಳಸುವವರ ಬಗ್ಗೆ; ಡುಂಗ್ರಿ ಗರಾಸಿಯ ಸಮುದಾಯ ಭಾರತದ ಗುಜರಾತ್ ಮೂಲದವರಾಗಿದ್ದು ಮರಾಠಿ, ಗುಜರಾತಿ, ರಾಜಸ್ತಾನಿ, ಹಿಂದಿ, ವಾಗ್ರಿ, ಗೋರಬೋಲಿ, ಭಾಷೆಗಳ ಪ್ರಭಾವ ಇವರ ಭಾಷೆಯ ಮೇಲಾಗಿರುವ ಬಗ್ಗೆ; ಪಾರ್ಧಿ ಬುಡಕಟ್ಟಿನವರು ಮಹಾರಾಷ್ಟ್ರದ ಕಡೆಯವರಾಗಿದ್ದು, ಕರ್ನಾಟಕಕ್ಕೆ ವಲಸೆ ಬಂದಿರುವವರು, ಇವರು ಹೆಚ್ಚಾಗಿ ಮಾಂಸಾಹಾರಿಗಳಾಗಿದ್ದು ದಿನನಿತ್ಯ ತಿನ್ನಲು ಬಳಸುತ್ತಿದ್ದ ಪ್ರಾಣಿ, ಪಕ್ಷಿಗಳ ಹೆಸರನ್ನು ಅವರದೇ ಆದ ಮರಗು ಭಾಷೆಯಿಂದ ಬಳಸುವುದರ ಬಗ್ಗೆ; ಬೈಲ ಪತ್ತಾರರು ಜಗನ್ನಾಥಿ ಭಾಷೆಯ ಪದಗಳನ್ನು ಕನ್ನಡದಲ್ಲಿ ಅನುವಾದಿಸಿ ಬಳಸುವ ಬಗ್ಗೆ; ಶಿಳ್ಳೇಕ್ಯಾತರು ಅಥವ ಕಿಳ್ಳೇಕ್ಯಾತರು ಕರ್ನಾಟಕದ ಜನಪದ ಕಲಾ ಪರಂಪರೆಯ ವಿಶಿಷ್ಟ ಬುಡಕಟ್ಟು. ಇವರು ವಲಸೆ ಹೋಗುವುದು ಸರ್ವೇಸಾಮಾನ್ಯ. ಸ್ಥಳೀಯರು ಇವರನ್ನು ಗೊಂಬೆರಾಮರು, ಶಿಳ್ಳೇಕ್ಯಾತರು, ಬಾಗಡಿ, ಕಟಬು, ಕ್ಷತ್ರಿಯರು, ಮೀನು ಗಿಳ್ಳಿಕ್ಯಾತರು ಎಂಬ ಹೆಸರುಗಳಿಂದ ಕರೆಯುವ ಪರ್ಯಾಯ ಪದಗಳ ಬಗ್ಗೆ; ಹಂದಿಜೋಗಿ ಬುಡಕಟ್ಟಿನವರ ಮಾತೃಭಾಷೆ ಮರಾಠಿ, ಸಮುದಾಯದ ಹೊರಗಿನವ ರೊಂದಿಗೆ ಸ್ಥಳೀಯ ಭಾಷೆಯನ್ನು ವ್ಯವಹರಿಸುವ ಬಗ್ಗೆ ಭಾಷಾಧ್ಯಯನ ಮಾಡಿ ಆ ಭಾಷೆಗಳಲ್ಲಿ ವಿಶೇಷವಾಗಿ ಕಂಡು ಬರುವ ಮರಗು ಭಾಷೆಯನ್ನು ಕುರಿತು ಅಧ್ಯಯನ ಮಾಡಿರುವುದು ಭಾಷಾಶಾಸ್ತ್ರದ ದೃಷ್ಟಿಯಿಂದ ಮಹತ್ವದ್ದಾಗಿದೆ.

ಈ ಮೇಲಿನ ಬುಡಕಟ್ಟುಗಳು ಸಂಪೂರ್ಣವಾಗಿ ಹಿಂದುಳಿದಿದ್ದರೂ, ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರ್ಪಡೆಗೊಳ್ಳದಿರುವ ಬಗ್ಗೆ, ಲೇಖಕರು ತಿಳಿಸಿರುವುದು ಅವರ ತಳಸ್ಪರ್ಶಿಯ ಅಧ್ಯಯನಕ್ಕೆ ಸಾಕ್ಷಿಯಾಗಿದೆ.

ಬುಡಕಟ್ಟು ಸಮುದಾಯದ ಜನಾಂಗದವರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ತೀರ ಹಿಂದುಳಿದವರಾಗಿದ್ದು, ಅವರುಗಳ ಪರಿಸ್ಥಿತಿಯನ್ನು ಅರಿಯಲು ಆ ಜನಾಂಗದ ಕುಲಶಾಸ್ತ್ರೀಯ ಅಧ್ಯಯನದಿಂದ ಸಾಧ್ಯ. ಬುಡಕಟ್ಟು ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನಕ್ಕೆ ಬೇಕಾಗುವ ಮಾಹಿತಿಯು ಡಾ.ಕೆ.ಎಂ. ಮೇತ್ರಿರವರ "ಮರಗು ಭಾಷೆ" ಕೃತಿಯಲ್ಲಿ ಸಾಕಷ್ಟು ಸಿಗುವುದರಿಂದ ಮಹತ್ವದ ಕೃತಿಯಾಗುತ್ತದೆ.

ಬುಡಕಟ್ಟು ಸಮುದಾಯಕ್ಕೆ ಅನುಕೂಲದಾಯಕವಾಗಿದ್ದ ಮರಗು ಭಾಷೆಯು ಇಂದು ಅವಸಾನದ ಸ್ಥಿತಿಯಲ್ಲಿ ನಿಂತಿದೆ. ಇಂತಹ ಹೊತ್ತಿನಲ್ಲಿ ಮರಗು ಭಾಷೆಗಳನ್ನು ಕುರಿತು ಸಮಗ್ರವಾಗಿ ಹಾಗೂ ವೈಜ್ಞಾನಿಕವಾಗಿ ದಾಖಲಿಸಿ ಸಂಶೋಧಿಸಿರುವುದು ಅಲೆಮಾರಿ ಸಮುದಾಯಗಳ ಸಾಂಸ್ಕೃತಿಕ ಲೋಕವನ್ನು ಅನಾವರಣಗೊಳಿಸಿರುವ ಕೆಲಸವಾಗಿದ್ದು ಗಮನಾರ್ಹವಾದುದಾಗಿದೆ.

ಎಸ್. ಶಿವಣ್ಣ ಬೆಳವಾಡಿ

೨. ನಾಡವರ ಸಂಸ್ಕೃತಿಯ ವಿಸ್ತೃತ ಅಧ್ಯಯನ

ನಾಡವರ ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಎನ್. ಆರ್. ನಾಯಕ, **ಗೋಧೂಳಿ** ಪ್ರಕಾಶನ, ಬೆಂಗಳೂರು, ೨೦೧೨, ಪುಟ–೨೮೮, ಬೆಲೆ ರೂ. ೨೫೦/-

ಉತ್ತರ ಕನ್ನಡ ಜಿಲ್ಲೆಯ ಒಂದು ಪ್ರಧಾನ ಸಮುದಾಯ ನಾಡವರದ್ದು. ದಕ್ಷಿಣ ಕನ್ನಡ ಜಿಲ್ಲೆಯ ಬಂಟರೂ ತಾವೂ ಒಂದೇ ಎಂದು ಇವರು ಹೇಳಿಕೊಳ್ಳುತ್ತಾರೆ. ಪ್ರಸ್ತುತ ಕೃತಿಯು ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯ ನಾಡವರ ಪರಂಪರೆ, ಸಂಪ್ರದಾಯ, ಜೀವನ ವಿಧಾನಗಳ ವಿಸ್ತೃತವಾದ ಪರಿಶೋಧನಾತ್ಮಕ ಅಧ್ಯಯನವಾಗಿದೆ.

ಕರ್ನಾಟಕದ ಹಿರಿಯ ಜಾನಪದ ತಜ್ಞರಾಗಿರುವ ಡಾ. ನಾರಾಯಣ ಆರ್. ನಾಯಕರು ಉತ್ತರ ಕನ್ನಡ ಜಿಲ್ಲೆಯ ಜಾನಪದ ವಿಜ್ಞಾನದ ಗಣಿಯೂ ಹೌದು. ಅವರ ಅಧ್ಯಯನವು ಯಾವಾಗಲೂ ಶಾಸ್ತ್ರೀಯವೂ ಸಮಗ್ರತೆಯತ್ತ ಕೈ ಚಾಚಿರುವಂಥದೂ ಆಗಿರುತ್ತದೆ. ಎಪ್ಪತ್ತೇಳರ ಈ ಇಳಿವಯಸ್ಸಿನಲ್ಲೂ ಅವರ ಇಂಥದೊಂದು ಗ್ರಂಥವನ್ನು ಆಸಕ್ತಿ ಮತ್ತು ಎಲ್ಲ ಗಾಂಭೀರ್ಯಗಳೊಡನೆ ರಚಿಸಿದ್ದಾರೆ. ಹಾಗೂ ಗೋಧೂಳಿ ಪ್ರಕಾಶನದವರು ಇದನ್ನು ಕಣ್ಣಿಗೊಪ್ಪುವಂತೆ ಪ್ರಕಟಿಸಿದ್ದಾರೆ.

ಈ ಗ್ರಂಥದಲ್ಲಿ ಒಟ್ಟು ಏಳು ಅಧ್ಯಾಯಗಳಿದ್ದು ಕೊನೆಯ ಅಧ್ಯಾಯವಾದ 'ವಿಭಿನ್ನ ಕ್ಷೇತ್ರಗಳ ಸಾಧಕರು' ಭಾಗವನ್ನು ಪ್ರಸ್ತುತ ಪರಿಶೀಲನೆಗೆ ಹೊರತಾದುದೆಂದು ಕೈಬಿಡಬಹುದು. ಉಳಿದ ಆರು ಅಧ್ಯಾಯಗಳಲ್ಲಿ ಕ್ರಮವಾಗಿ ನಾಡವರ ಚಾರಿತ್ರಿಕ ಹಿನ್ನೆಲೆ, ಸಮಾಜ ವ್ಯವಸ್ಥೆ, ಸಂಸ್ಕಾರ ವಿಧಿಗಳು, ದೇವರು ಮತ್ತು ಧಾರ್ಮಿಕ ಆಚರಣೆಗಳು, ಭಾಷೆ ಮತ್ತು ಸಾಹಿತ್ಯ, ಹಾಗೂ ಕಲೆ ಮತ್ತು ಕ್ರೀಡೆಗಳನ್ನು ಕುರಿತ ಮೂಲಚೂಲ ಸಹಿತವಾದ ವಿವರಣೆ– ವಿಶ್ಲೇಷಣೆಗಳಿವೆ.

'ನಾಡವರ ಚಾರಿತ್ರಿಕ ಹಿನ್ನೆಲೆ' ಅಧ್ಯಾಯದಲ್ಲಿ 'ನಾಡವರ' ಶಬ್ದದ ಅರ್ಥ ವಿವಿಧ ರಾಜವಂಶಗಳೊಡನೆ ಅವರು ಹೊಂದಿದ್ದ ಸಂಬಂಧ, ನಾಡವ–ಬಂಟ ಸಂಬಂಧ, ನಾಡವರು ಜೈನರಾಗಿದ್ದು ನಂತರ ಅನ್ಯ ಧರ್ಮವನ್ನು ಸ್ವೀಕರಿಸಿದ್ದು–ಇಂಥ ಹಲವಾರು ಅಂಶಗಳನ್ನು ಐತಿಹಾಸಿಕ ಹಾಗೂ ಅನ್ಯಗ್ರಾಂಥಿಕ ಆಧಾರಗಳಿಂದ ತಮಗೆ ಸರಿಕಂಡಂತೆ ನಿರೂಪಿಸಲು ಲೇಖಕರು ಶ್ರಮಿಸುತ್ತಾರೆ. ಇಲ್ಲಿ ಲೇಖಕರೊಡನೆ ನಾವು ಭಿನ್ನಾಭಿಪ್ರಾಯ ತಾಳಲು ಅವಕಾಶಗಳಿವೆ. ಉದಾಹರಣೆಗೆ, ಕವಿರಾಜಮಾರ್ಗದಲ್ಲಿ ಬರುವ ಕಂದಪದ್ಯವೊಂದರಲ್ಲಿನ ಆ 'ನಾಡವರ್ಗಳ್' ಎಂಬ ಮಾತು ಇಡೀ ಕನ್ನಡ ನಾಡಿನ ಜನಕ್ಕೆ ಹೇಳಿದ್ದಲ್ಲ, ನಾಡವರ ಸಮುದಾಯಕ್ಕೆ ಮಾತ್ರ ಅನ್ವಯಿಸುವಂಥದ್ದು ಎನ್ನುತ್ತಾರೆ. ತಮ್ಮ ಅಭಿಪ್ರಾಯಕ್ಕೆ ಪೂರಕವಾಗಿ ಶಂ.ಬಾ. ಜೋಶಿಯವರ ಮಾತನ್ನೂ ಉಲ್ಲೇಖಿಸುತ್ತಾರೆ. ಯಾರೇ ಹಾಗೆ ಹೇಳಿದ್ದರೂ ಆ ಅಭಿಪ್ರಾಯವನ್ನು ಒಪ್ಪುವುದು ಕಷ್ಟ.

ಹೀಗೆ ಭಿನ್ನಾಭಿಪ್ರಾಯಗಳಿಗೆ ಅವಕಾಶವಿರುವ ಮೊದಲ ಅಧ್ಯಾಯವೊಂದನ್ನು ಬಿಟ್ಟರೆ ಮುಂದಿನ ಐದೂ ಅಧ್ಯಾಯಗಳಲ್ಲಿ ತಪ್ಪು ಹುಡುಕುವುದು ಕಷ್ಟ. ನಾಡವರ–ಒಕ್ಕಲಿಗರು–ಬಂಟರಿಗೆ ಇರುವ ಕೆಲವು ಸಮಾನತೆಗಳನ್ನು ಡಾ. ನಾಯಕರು ಸರಿಯಾಗಿಯೇ ಗುರುತಿಸಿದ್ದಾರೆ. ನಾಡವರಲ್ಲಿನ ಷೋಡಶ ಸಂಸ್ಕಾರಗಳನ್ನು ತುಂಬಾ ವಿವರವಾಗಿ ದಾಖಲಿಸಿದ್ದಾರೆ. ಅದೇ ರೀತಿ ಅವರ ದೇವಸ್ಥಾನಗಳು, ಆರಾಧನಾ ಪದ್ಧತಿಗಳನ್ನೂ ಸಹ. ವ್ಯಾಪಕವಾದ ಹಲವು ಬಾರಿಯ ಕ್ಷೇತ್ರಕಾರ್ಯವಿಲ್ಲದೆ ಇಂಥ ಮಾಹಿತಿಗಳನ್ನು ಕಲೆ ಹಾಕಿ ಸುಸಂಬದ್ಧವಾಗಿ ಜೋಡಿಸುವುದು ಕಷ್ಟ. ಆದರೆ ಈ ವಿವರಗಳನ್ನು ನೀಡುವಾಗ ಅವರು ಉತ್ತರ ಕನ್ನಡ ಹೊರತಾದ ಅನ್ಯ ಎಡೆಯ, ತಮ್ಮದೇ ಸಮುದಾಯವೆಂದು ಹೇಳಿಕೊಳ್ಳುವ ಬಂಟ ಮತ್ತು ಒಕ್ಕಲಿಗ ಸಮುದಾಯ ಗಳೊಂದಿಗಿರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಪ್ರಸ್ತಾಪಿಸುವುದು ತೀರ ಕಡಿಮೆ (ಅದೇ ಎರಡು ಪ್ರತ್ಯೇಕ ಪಿಎಚ್.ಡಿ. ಗಳ ವಿಷಯವಾಗಬಲ್ಲುದು) ಆದ್ದರಿಂದಲೇ ಈ ಕೃತಿ ಉತ್ತರ ಕನ್ನಡ ಜಿಲ್ಲೆಯ ನಾಡವ ಜನಾಂಗದ ಸಂಸ್ಕೃತಿಯ ತಲಸ್ಪರ್ಶಿ ಅಧ್ಯಯನಕ್ಕೆ ಮೀಸಲಾದ ಒಂದು ಪ್ರಾಮಾಣಿಕ ಕೃತಿ ಎಂದು ಭಾವಿಸುವುದು ಸೂಕ್ತ.

ಮುಂದಿನ ಅಧ್ಯಾಯಗಳಲ್ಲಿ ನಾಡವ ಸ್ತ್ರೀ ಪುರುಷರು ಧರಿಸುತ್ತಿದ್ದ ಉಡುಪು, ಒಡವೆಗಳ ವಿವರ, ಮನೆ ಕಟ್ಟಡಗಳ ವಿನ್ಯಾಸದ ವಿವರ, ಜಾನಪದ ಕ್ರೀಡೆಗಳು, ಹಬ್ಬಗಳು, ಜಾತ್ರೆಗಳು ಇದರ ಬಗೆಗೆಲ್ಲ ಎಷ್ಟು ವಿವರಗಳನ್ನು ಕೊಡಲು ಸಾಧ್ಯವೋ ಅಷ್ಟೆಲ್ಲವನ್ನು ಗೊಂದಲಕ್ಕೆ ಎಡೆ ಇಲ್ಲದಂತೆ ಅಚ್ಚುಕಟ್ಟಾಗಿ ನೀಡಿದ್ದಾರೆ. ನಾಡವರ ಆಡುಭಾಷೆಯನ್ನು ಕ್ರಮಬದ್ಧವಾಗಿ ವಿಶ್ಲೇಷಿಸಿದ್ದಾರೆ. ಅಲ್ಲಿ ಸ್ತ್ರೀಲಿಂಗ ವಾಚಕವೇ ಇಲ್ಲ ಎಂಬುದು ಗಮನಾರ್ಹ ಅಂಶವಾಗಿದೆ.

ಪುಸ್ತಕದ ವಿವರಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವಂತೆ ಈ ಗ್ರಂಥದಲ್ಲಿ ಸುಮಾರು ಎಂಬತ್ತು ವರ್ಣಚಿತ್ರಗಳಿವೆ. ಇದಲ್ಲದೆ ಆಧುನಿಕ ಕಾಲದ ಈ ಸಮುದಾಯದ ವಿವಿಧ ಕ್ಷೇತ್ರಗಳ ಸಾಧಕರ ಚಿತ್ರಗಳೂ ಇವೆ. ಇದೆಲ್ಲ ಲೇಖಕರು/ಓದುಗರಿಗೆ ಸಂತೋಷದ ಸಂಗತಿಯಾದರೂ ಸಹ ಪ್ರಕಾಶರಿಗೆ ಕೈ ಕಚ್ಚುವಂಥದು. ಹಾಗಿದ್ದು ಸುಂದರವಾದ ರೀತಿಯಲ್ಲಿ ಇದನ್ನು ಮುದ್ರಿಸಿರುವುದು ಪ್ರಕಾಶಕರಿಗೆ ಇರುವ ಪುಸ್ತಕ ಪ್ರೀತಿಯನ್ನು ತೋರಿಸುತ್ತದೆ. ಗ್ರಂಥದುದ್ದಕ್ಕೂ ಲೇಖಕರು ನಾಡವ ಸಮುದಾಯ ಈಗ ಹೇಗೆ ಬದಲಾಗಿದೆ ಎಂಬುದನ್ನೂ ಸೂಚಿಸಿದ್ದಾರೆ.

ಈ ಕೃತಿ ರಚನೆಯಲ್ಲಿ ಲೇಖಕರು ಸ್ವ–ಸಮುದಾಯ ಹಾಗೂ ಜಾನಪದ ಶಾಸ್ತ್ರ–ಎರಡಕ್ಕೂ ಕೂಡಿಯೇ ನ್ಯಾಯ ಒದಗಿಸಿದ್ದಾರೆ. ಈ ಬರಹದಲ್ಲಿ 'ನಮ್ಮದು ಒಂದು ಗಮನಾರ್ಹ ಪರಂಪರೆ' ಎಂಬ ಅಭಿಮಾನವಿದೆ. ಆದರೆ ಎಲ್ಲೂ ಅಹಂಕಾರವಿಲ್ಲ. ಅಲ್ಲಲ್ಲಿ ತಮ್ಮ ಸಮುದಾಯದ ನಡೆ ಸರಿಯಲ್ಲದಿರುವುದನ್ನು ಸಭ್ಯ ಮಾತುಗಳಲ್ಲಿ ಎಚ್ಚರಿಸಿದ್ದಾರೆ.

ಪಿಎಚ್.ಡಿ. ಮಹಾಪ್ರಬಂಧಗಳೇ ಹಾದಿ ತಪ್ಪಿ ಎಷ್ಟೋ ಕಾಲವಾಗಿರುವ ಈ ದಿನಗಳಲ್ಲಿ ಒಂದು ಜಾನಪದ ಶೋಧ ಗ್ರಂಥವೆಂದರೆ ಹೇಗಿರಬೇಕು ಎಂಬುದನ್ನು ಯುವಕರಿಗೆ ತೋರಿಸಿಕೊಡುವಂತೆ ಈ ಗ್ರಂಥವನ್ನು ರಚಿಸಿಕೊಟ್ಟಿದ್ದಾರೆ ಡಾ. ಎನ್.ಆರ್. ನಾಯಕರು. ಈ ಕೃತಿಯ ಲೇಖಕರು, ಪ್ರಕಾಶಕರು-ಇಬ್ಬರೂ ಅಭಿನಂದನಾರ್ಹರು.

ಎಸ್.ಪಿ. ಪದ್ಮಪ್ರಸಾದ್

೩. ನುಡಿಸಂಕರ ಸಾಹಿತ್ಯ ಕುರಿತ ಶಾಸ್ತ್ರೀಯ ವಿವೇಚನೆ

ನುಡಿಸಂಕರ ಸಾಹಿತ್ಯ, ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೫೨+೨೧೨, ಬೆಲೆ ರೂ. ೧೬೦/-

ಬಹುತೇಕವಾಗಿ ಬಹುಭಾಷಾ ಪಾಂಡಿತ್ಯ ಹೊಂದಿದ ಲೇಖಕರು ಮಹತ್ವದ್ದನ್ನು ಸಾಧಿಸುತ್ತಾರೆ. ಕನ್ನಡದ ಬಹಳಷ್ಟು ಲೇಖಕರು ಬಹುಭಾಷಾ ಪ್ರವೀಣರೇ. ಗೋವಿಂದ ಪೈ, ಕುವೆಂಪು, ಬೇಂದ್ರೆ, ಕೈಲಾಸಂ, ಎ.ಕೆ. ರಾಮಾನುಜಂ, ಡಿ.ಆರ್. ನಾಗರಾಜ್, ಕುಂ. ವೀರಭದ್ರಪ್ಪ ಹೀಗೆ ಹಿರಿಯರಿಂದ ಹಿಡಿದು ಇತ್ತಿಚೀನವರೆಗೂ ಹೆಸರಿಸಬಹುದು. ಅಂಥವರ ಸಾಲಿನಲ್ಲಿ ಈಗಿನ ಕನ್ನಡದ ಮಹತ್ವದ ಸಂಸ್ಕೃತಿ ಚಿಂತಕರಾದ ಡಾ.ರಹಮತ್ ತರೀಕೆರೆ ಅವರು ಒಬ್ಬರು. ಅವರ 'ನುಡಿ ಸಂಕರ ಸಾಹಿತ್ಯ' ಕೃತಿ ಈ ದೃಷ್ಟಿಯಿಂದ ಮಹತ್ವದ್ದಾಗಿದೆ. ಕನ್ನಡ ಭಾಷೆಯಲ್ಲಿ ರಚನೆಗೊಂಡ ಕೃತಿಗಳಲ್ಲಿ ಬೇರೆ ಬೇರೆ ಭಾಷೆಯ ಪದಗಳು, ವಾಕ್ಯಗಳು ನುಸುಳಿರುವುದನ್ನು ಹುಡುಕಿ, ಸಂಕಲಿಸಿರುವುದು ರಹಮತ್ ತರೀಕೆರೆ ಅವರಲ್ಲಿ ಇರುವ ಬಹುಭಾಷಾ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಜತೆಗೆ ಈ ಕೆಲಸದಿಂದಾಗಿ ರಹಮತ್ ತರೀಕೆರೆ ಅವರು ಸಾಹಿತ್ಯ ಸಂಸ್ಕೃತಿಯ ವಿಸ್ತಾರಕರಾಗಿಯೂ ಗಮನಾರ್ಹರಾಗಿದ್ದಾರೆ.

ಕನ್ನಡದ ವಿಶಿಷ್ಟವಾದ ಮಹತ್ವದ ಸಂಶೋಧನಾತ್ಮಕ ಹಾಗೂ ಸಾಂಸ್ಕೃತಿಕ ವಿಶ್ಲೇಷಣೆಯಿಂದ ಕೂಡಿರುವಂತಹ ಕೃತಿ ಡಾ. ರಹಮತ್ ತರೀಕೆರೆ ಅವರ 'ನುಡಿ ಸಂಕರ ಸಾಹಿತ್ಯ'. ಈ ಕೃತಿಯಲ್ಲಿ ಕಥೆ, ಕಥನ, ಪದ, ಹಾಡು, ಆಟ, ದಾಖಲೆ ಎಂಬ ಆರು ಭಾಗಗಳ ವಿಂಗಡನೆ ಇದೆ. ಆಯಾ ಭಾಗದಲ್ಲಿ ಆಗಿರುವ ನುಡಿಸಂಕರವನ್ನು ಸ್ಪಷ್ಟವಾಗಿ ಸರಳವಾಗಿ ಚಿತ್ರಿಸಿರುವುದು ಮಹತ್ವದ ಕೆಲಸ. ಹಾಗೆಯೇ ಕೃತಿ ಕುರಿತು ಚರ್ಚಿಸುವಾಗ ಪೀಠಿಕೆ, ಪಠ್ಯ, ಅರ್ಥ, ಟೀಕು, ಟಿಪ್ಪಣಿ, ಆಕರ ಎಂದು ವಿಂಗಡಿಸಿ ಕೊಂಡಿರುವ ಪರಿಕಲ್ಪನೆಯು ವಿಶ್ಲೇಷನಾತ್ಮಕ ಓದಿಗೆ ಸಹಕಾರಿಯಾಗಿದೆ. ಲೇಖಕರೇ ಹೇಳುವಂತೆ ಈ ಕೃತಿ ಒಟ್ಟು ನಲವತ್ತು ಸಂಕರ ಪಠ್ಯಗಳನ್ನು ಮುಖ್ಯ ಚರ್ಚೆಗೆ ಇಟ್ಟುಕೊಂಡಿದ್ದು, ಹೆಚ್ಚು ಪಠ್ಯಗಳನ್ನು ಪೂರಕವಾಗಿ ಜೋಡಿಸಿ, ಚರ್ಚೆಯನ್ನು ಬೆಳೆಸಿರುವುದು ಕನ್ನಡ ಸಾಹಿತ್ಯ, ಕನ್ನಡ ಭಾಷೆ, ಸಂಸ್ಕೃತಿಯ ಬಗೆಗೆ ತರೀಕೆರೆ ಅವರಿಗೆ ಇರುವ ಹಿಡಿತವನ್ನು ವ್ಯಕ್ತಪಡಿಸುತ್ತದೆ.

ನುಡಿಸಂಕರ ಸಾಹಿತ್ಯವು ಕಳೆದ ೧೧ನೇ ಶತಮಾನಗಳಿಂದ ರಚನೆಗೊಂಡಿದೆ. ಇದುವರೆಗೂ ನೂರಾರು ನುಡಿಸಂಕರ ಬಹುಮುಖಿಯಾದ ಪಠ್ಯಗಳನ್ನು ಕುರಿತದ್ದಾಗಿದೆ. ಇವುಗಳಲ್ಲಿ ಶಾಸನ, ವಚನ, ತತ್ವಪದ, ಲಾವಣಿ, ರಿವಾಯತ್ ಪದ, ಕತೆ, ಕಾದಂಬರಿ, ಬಯಲಾಟ, ಸಿನಿಮಾಗೀತೆ, ಲಾಲಿಹಾಡು, ಖಾಸಗಿಪತ್ರ, ಕರಪತ್ರ ಇತ್ಯಾದಿ ಪ್ರಕಾರಗಳಿದ್ದು ಇವು ಬಹುರೂಪಿಯಾಗಿವೆ. ಇಲ್ಲಿ ಸಂಸ್ಕೃತದಿಂದ ಆರಂಭಗೊಂಡು ಕನ್ನಡದಲ್ಲಿ ಬೆಳೆದು ತೆಲುಗಿನಲ್ಲಿ ಮುಗಿಯುವ ಶಾಸನವಿದೆ; ೧೯ನೇ ಶತಮಾನದಲ್ಲಿ ಹುಬ್ಬಳ್ಳಿಯ ಸಿದ್ಧಲಿಂಗ ಕವಿ ವಿರಚಿತ ಕನ್ನಡ–ಉರ್ದು–ಮರಾಠಿ–ಲಂಬಾಣಿ(?)ಗಳಿಂದ ಕೂಡಿರುವ 'ಆದಾಯತೆರಿಗೆ' ಲಾವಣಿಯಿದೆ, ಹಲವು ಸಮುದಾಯದವರು ತಂತಮ್ಮ ಭಾಷೆಗಳಲ್ಲೇ ಅರ್ಜುನ ಜೋಗಿಯನ್ನು ಕರೆದು ಉಪಚರಿಸುವ ಮೈಸೂರು ಸೀಮೆಯ 'ಜನಪದ ಮಹಾಭಾರತ'ವಿದೆ; ಕನ್ನಡ ಮತ್ತು ಉರ್ದು ಸಂಕರವಿರುವ 'ಪಿರಿಯಾಪಟ್ಟಣದ ಕಾಳಗ'ದಂತಹ ಕಾವ್ಯಗಳಿವೆ; ಮರಾಠಿ-ಕನ್ನಡ-ಹಿಂದಿ ಸಂಕರವುಳ್ಳ 'ಗೊಂದಲಿಗರ ಹಾಡು'ಗಳಿವೆ; ಮಹೀಪತಿರಾಯನನ್ನೂ ಒಳಗೊಂಡಂತೆ ಕೈವಾರ ನಾರಾಯಣ, ಗುಡೇಕಲ್ಲಿನ ಅಲ್ಲಿಪೀರಾ ಸಾಹೇಬ, ಚನ್ನೂರ ಜಲಾಲ ಸಾಹೇಬ, ಬೇನೂರ ಹಜರತ್ ಕಾಕಿಪೀರಾ, ಮಂಜರ್ಲಾ ಖಾದರ ಸಾಹೇಬ, ಕೂಡಲೂರ ಬಸವಲಿಂಗ, ಶಿಶುನಾಳ ಶರೀಫ, ಸಾಲಗುಂದಿಯ ಗುರುಖಾದರಿ ಪೀರಾ ಮುಂತಾದವರು, ಕನ್ನಡ–ತೆಲುಗು–ಉರ್ದು–ಮರಾಠಿಗಳನ್ನು ಬೆರೆಸುತ್ತ ರಚಿಸಿರುವ ತತ್ವಪದಗಳಿವೆ; ದಾವುದ್ ನದಾಫ, ಕೋನಾಪುರದ ಕಾಸೀಂಸಾಹೇಬ, ಲಾಡಮದನಸಾ ಮುಂತಾದ ಜನಪದ ಶಾಹೀರರು ರಚಿಸಿರುವ ಉರ್ದು–ಕನ್ನಡ ರಿವಾಯತ ಪದಗಳಿವೆ; ಕಾಡಸಿದ್ಧನ ಕನ್ನಡ–ಉರ್ದು ಮಿಶ್ರಣದ ವಚನಗಳಿವೆ; ತಿಂತಿಣಿಮೋನಪ್ಪ ಮುಂತಾದ ಧಾರ್ಮಿಕ ಸಂಕರದ ಸಂತರ ಪೂಜೆಯ ಆಚರಣೆಯಲ್ಲಿರುವ ಕನ್ನಡ–ಉರ್ದು ಪರಾಕುಗಳಿವೆ; ಬೇಂದ್ರೆಯವರ ಮರಾಠಿ–ಕನ್ನಡ ಲಾಲಿಪದವಿದೆ; ತೆಲುಗು–ಕನ್ನಡ–ತಮಿಳು–ಮಲೆಯಾಳಂ ನುಡಿ ಗಳಿರುವ ನಾಡಗೀತೆಯಿದೆ; ಕನ್ನಡ–ತುಳು–ಕೊಂಕಣಿ ಸಂಭಾಷಣೆಗಳು ಒಟ್ಟಿಗೆ ಬಳಕೆಯಾಗಿರುವ ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಕಾದಂಬರಿಯಿದೆ; ತೆಲುಗು–ಕನ್ನಡ ಸಂಕರದ ಕೈಲಾಸಂ ಹಾಗೂ ಕುಂವೀಯವರ ಕತೆಗಳೂ, ಮುಸ್ಲಿಂ ನಿರೂಪಕಿಯರು ಹೇಳಿರುವ ಕನ್ನಡ–ಉರ್ದು ಬೆರೆಕೆಯ ಜನಪದ ಕತೆಗಳೂ ಇವೆ; ಕುಡುತಿನಿ ನರಸಿಂಗರಾಯನೇ ಮೊದಲಾಗಿ ಕರ್ನಾಟಕಾಂಧ್ರ ಸೀಮೆಯ ಕವಿಗಳು ರಚಿಸಿರುವ ಕನ್ನಡ–ತೆಲುಗು ಬಯಲಾಟದ ಪ್ರಸಂಗಗಳಿವೆ; ಪಾತ್ರಗಳು ತಂತಮ್ಮ ಭಾಷೆಯಲ್ಲೆ ಮಾತಾಡುವ ಕೈಲಾಸಂ ಅವರ 'ತಾವರೆಕೆರೆ' ಕತೆಗಳಿವೆ; ಸಿನಿಮಾಗಳಿಗಾಗಿ ಗೀತೆ ರಚನೆಕಾರರು ರಚಿಸಿರುವ ಇಂಗ್ಲೀಷ್–ಕನ್ನಡ, ಉರ್ದು–ಕನ್ನಡ ಹಾಡುಗಳಿವೆ; ಮೊಹರಂ ಆಚರಣೆಯ ಇಲ್ಲವೇ ಸೂಫಿ ಸಂತರ ಉರುಸಿನ ಹ್ಯಾಂಡ್ ಬಿಲ್ಲುಗಳಿವೆ; ಹೀಗೆ ಸಂಕರರೂಪದ ಹಲವಾರು ಪಠ್ಯಗಳು ಕರ್ನಾಟಕದಲ್ಲಿ ಕಾಣಲು ಮತ್ತು ಕೇಳಲು

ಸಿಗುತ್ತವೆ. ಪ್ರಸ್ತುತ ಕೃತಿಯಲ್ಲಿ, ಮೇಲೆ ನಮೂದಿಸಿದ ವಿವಿಧ ಭಾಷಿಕ ಅಭಿವ್ಯಕ್ತಿಗಳನ್ನು ನುಡಿಸಂಕರ ಎಂಬ ವಿಶಾಲ ಅರ್ಥದಲ್ಲಿ ಪರಿಗ್ರಹಿಸಿ ಸಂಕಲಿಸಲಾಗಿದೆ. ಹಾಗೂ ಅವನ್ನು ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ವಿಶ್ಲೇಷಿಸಲು ಯತ್ನಿಸಿರುವುದು ಕನ್ನಡದ ಮಹತ್ವದ ಕೆಲಸಗಳಲ್ಲಿ ಒಂದಾಗಿದೆ.

ಈ 'ನುಡಿಸಂಕರ ಸಾಹಿತ್ಯ'ದ ಅಧ್ಯಯನದ ಮೂಲಕ ಅನೇಕ ಹೊಸ ವಿಚಾರಗಳು ಬೆಳಕಿಗೆ ಬಂದಿವೆ. ಇದಕ್ಕೆ ಒಂದು ಮಹತ್ವದ ಉದಾಹರಣೆಯೆಂದರೆ–ಭಾಷಿಕ ಸನ್ನಿವೇಶಗಳ ಚಹರೆಗಳನ್ನು ಕುರಿತು ಹೇಳುವುದು. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ನೇರವಾಗಿ ಬಂದು ಸೇರಿಕೊಳ್ಳುವ ಪದವನ್ನು ಭಾಷಾಶಾಸ್ತ್ರದಲ್ಲಿ 'ಪಲ್ಲಟ' ಎಂದು ಕರೆಯುತ್ತಾರೆ. ಅದನ್ನು ತರೀಕೆರೆಯವರು 'ಹೊರಳುವಿಕೆ' ಎಂದಿದ್ದಾರೆ. ಹಾಗೆ ನೋಡಿದರೆ 'ಹೊರಳುವಿಕೆ' ಎಂಬ ಪದವೇ ಸರಿಯಾದುದು. ಏಕೆಂದರೆ ತಾನು ಇದ್ದ ಸ್ಥಿತಿಯಲ್ಲಿಯೇ ಮಗ್ಗುಲು ಬದಲಿಸುವ ಕ್ರಿಯೆಯಂತೆ ಬೇರೆ ಭಾಷೆಗೆ ಬರುವುದರಿಂದ 'ಹೊರಳುವಿಕೆ' ಸರಿಯಾದ ಪದವಾಗುತ್ತದೆ. ಹಾಗೆಯೇ ಗೊತ್ತಿಲ್ಲದ ಭಾಷೆಯ ಪದ ಗೊತ್ತಿರುವ ಭಾಷೆಯ ವಾಕ್ಯಗಳ ಜತೆ ಸೇರಿಕೊಂಡಾಗ ಆ ಪದದ ವಾಚ್ಯಾರ್ಥವನ್ನು ಹುಡುಕುವುದಕ್ಕಿಂತ ಆ ಪದದ ಭಾರ ಮತ್ತು ತತ್ವ ಅನುಭವಗಳ ಕಡೆ ಯೋಚಿಸಿರುವುದರಿಂದಲೂ 'ಹೊರಳುವಿಕೆ' ಎನ್ನುವ ಪದ ಹೊಂದಾಣಿಕೆ ಯಾಗುತ್ತದೆ. ಟಿ.ಪಿ. ಕೈಲಾಸಂ ಅವರ ನಾಟಕಗಳಲ್ಲಿ ಬರುವ ತೆಲುಗು–ಉರ್ದು, ಇಂಗ್ಲೀಷ್ ಪದಗಳ ಜೋಡಣೆ ನೋಡಿದಾಗ 'ಹೊರಳುವಿಕೆ' ಎನ್ನುವ ಪದದ ಬಳಕೆ ಸರಿಯಾದುದಾಗುತ್ತದೆ.

ಹಾಗೆ ನೋಡಿದರೆ 'ಹೊರಳುವಿಕೆ' ಎಂಬುದು ಕೇವಲ ಭಾಷಿಕವಾದ ಇಲ್ಲವೇ ಸಾಹಿತ್ಯಕವಾದ ಸಂಗತಿಯಲ್ಲ, ಭಾಷೆ ಮತ್ತು ಸಾಹಿತ್ಯದೊಳಗಿನ ಧಾರ್ಮಿಕ ಅಧಿಕಾರದ ಮತ್ತು ಸಾಂಸ್ಕೃತಿಕ ರಾಜಕಾರಣದ ಸಂಗತಿ ಕೂಡ ಹೌದು ಎಂದಿರುವುದು ಜನಸಾಮಾನ್ಯರ ಮನೋಭಾವದ ಭೂಮಿಕೆಯೇ ಆಗಿದೆ.

ಹಾಗೆಯೇ ಕನ್ನಡ ಸಾಹಿತ್ಯ ಕೃತಿಗಳ ಭಾಷಾ ವೈಶಿಷ್ಟ್ಯ ಗುರ್ತಿಸುವಲ್ಲಿ 'ನುಡಿ ಸಂಕರ ಸಾಹಿತ್ಯ' ಮಹತ್ವದ ಕೆಲಸ. ಕೃತಿಯ ಕಾಲ, ದೇಶ, ಗೊತ್ತಿದ್ದರೂ ಕವಿಯ ಭಾಷಾ ಪಾಂಡಿತ್ಯವು ಗೊತ್ತಾದಾಗ ಆ ಕವಿಗೆ ಸಂಬಂಧಿಸಿದ ಸಾಹಿತ್ಯ ಚರಿತ್ರೆಗೆ ಮತ್ತಷ್ಟು ಮಾಹಿತಿ ಒದಗುತ್ತದೆ. ಉದಾಹರಣೆಗೆ ವಡ್ಡಾರಾಧನೆಗೆ ಸಂಬಂಧಿಸಿದ್ದು; ದಿಗಂಬರ ಜೈನ ಕವಿಗಳ ಮನೆ ಮಾತು ಕನ್ನಡವಾದರೆ, ಧಾರ್ಮಿಕ ಗ್ರಂಥಗಳ ಭಾಷೆ ಪ್ರಾಕೃತ. ಅವರ ವಿದ್ವತ್ತಿನ ಭಾಷೆ ಸಂಸ್ಕೃತ. ಹೀಗಾಗಿ ಜೈನ ಕವಿಗಳು ಸಹಜವಾಗಿ ಬಹುಭಾಷಿಕ ಪಾಂಡಿತ್ಯವುಳ್ಳವರು. ಈ ಹಿನ್ನೆಲೆಯಲ್ಲಿ ವಡ್ಡಾರಾಧನೆಯ ಪ್ರತೀ ಕತೆಯೂ ಒಂದು ಪ್ರಾಕೃತ ಗಾಹೆಯ ಮೂಲಕ ಶುರುವಾಗುವುದನ್ನು ಗಮನಿಸಬಹುದು - ಎಂಬ ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಮಾಹಿತಿಯನ್ನು

ಒದಗಿಸಿಕೊಡುವಂತಹದ್ದಾಗುತ್ತದೆ. ಜೈನ ಕವಿಗಳು ಸಂಪೂರ್ಣವಾಗಿ ಸಂಸ್ಕೃತವನ್ನು ತೊರೆಯದೆ ಸಂಸ್ಕೃತವನ್ನು ಪ್ರಾಕೃತಕ್ಕೆ ಅಧೀನವಾಗಿ ಪಳಗಿಸುವ ಉದ್ದೇಶ ಉಚ್ಚ ಜಾತಿಯ ದ್ವಿಜರನ್ನು ಜೈನೀಕರಣಗೊಳಿಸುವ ಗುಪ್ತ ಆಯಾಮ ಎಂದು ತರೀಕೆರೆ ಅವರು ಅಭಿಪ್ರಾಯಪಡುತ್ತಾರೆ. ಇಂತಹ ಎಷ್ಟೋ ಅಭಿಪ್ರಾಯಗಳಿಂದ ಸಾಹಿತ್ಯದ ಸೂಕ್ಷ್ಮ ಒಳನೋಟಗಳನ್ನು ಬೆಳಕಿಗೆ ತರುವಲ್ಲಿ ಈ ಕೃತಿಯು ಗಣನೀಯವಾದುದಾಗುತ್ತದೆ.

ನುಡಿಸಂಕರಗಳಲ್ಲಿ ಕುತೂಹಲಕರವಾದುದ್ದೆಂದರೆ ಜನಪದ ಮಹಾಕಾವ್ಯಗಳದ್ದು. ಪಿ.ಕೆ. ರಾಜಶೇಖರ್‌ರವರ ಸಂಪಾದಕತ್ವದ ಬೆಟ್ಟದ ಬೀಡು ಸಿದ್ದಸೆಟ್ಟಿ ಹಾಡಿದ ಮೈಸೂರು ಸೀಮೆಯ 'ಜನಪದ ಮಹಾಭಾರತ'ದಲ್ಲಿ ಕನ್ನಡ, ತೆಲುಗು, ಉರ್ದು, ತಮಿಳು ಭಾಷೆಗಳು ಸಂಕರಗೊಂಡಿರುವುದು ಮಹತ್ವದ ಸಂಗತಿಯಾಗಿದೆ. ಅರ್ಜುನ ಮತ್ತು ದ್ರೌಪದಿ ಇಬ್ಬರು ಒಮ್ಮೆ ಒಂದು ಷರತ್ತು ಕಟ್ಟಿಕೊಂಡು ಪಗಡೆಯಾಡುತ್ತಾರೆ. ಆ ಷರತ್ತೆಂದರೆ, ಆಟದಲ್ಲಿ ಅರ್ಜುನ ಸೋತರೆ ಜೋಗಿ ವೇಷ ಧರಿಸಿ ಚಿತ್ರ-ಕುಸುಮಾಲೆ ಯರಿಗೆ ತೋರಿಸಬೇಕು. ಒಂದು ಪಕ್ಷ ದ್ರೌಪದಿ ಸೋತರೆ ಅವನಿಗೆ ಮುತ್ತಿನ ಸುಖ ನೀಡುತ್ತ ಸೇವೆ ಮಾಡಬೇಕು ಎಂಬುದು. ಆಟದಲ್ಲಿ ಅರ್ಜುನ ಸೋತು ದ್ರೌಪದಿ ಗೆಲ್ಲುತ್ತಾಳೆ. ಷರತ್ತಿನಂತೆ ಅರ್ಜುನ ಜೋಗಿಯ ವೇಷ ಧರಿಸಿ ತಿರುಗಾಟಕ್ಕೆ ಹೊರಡುತ್ತಾನೆ. ಹೋಗುವಾಗ ಅವನು ತಿಗಳರ, ಮುಸ್ಲಿಮರ ಹಾಗೂ ಕೋಮಟಿಗ ಶೆಟ್ಟರ ಬೀದಿಗಳಲ್ಲಿ ಅಲೆಯುತ್ತಾನೆ. ಆಗ ಮುಸ್ಲಿಮರ ಕೇರಿಯಲ್ಲಿ ಉರ್ದುವಿನಲ್ಲಿ, ಕೋಮಟಿಗರ ಕೇರಿಯಲ್ಲಿ ತೆಲುಗಿನಲ್ಲಿ, ತಿಗಳರ ಕೇರಿಯಲ್ಲಿ ತಮಿಳಿನಲ್ಲಿ ಮಾತನಾಡಿ ಅವರವರ ಪ್ರೀತಿಯನ್ನು ಗಳಿಸುತ್ತಾನೆ. ಇದು ನುಡಿಸಂಕರವನ್ನು ತಿಳಿಸುವುದು ಮಾತ್ರವಲ್ಲ, ಜನಪದ ಮಹಾಕಾವ್ಯಗಳ ವೈಶಿಷ್ಟ್ಯವನ್ನು ತಿಳಿಸುವುದಾಗಿದೆ. ಹೀಗೆ ತರೀಕೆರೆ ಅವರು ನುಡಿಸಂಕರದ ಮುಖೇನ ಸಾಂಸ್ಕೃತಿಕ ವಲಯದ ವಿವಿಧತೆಯನ್ನು, ವೈಶಿಷ್ಟ್ಯವನ್ನು ತಿಳಿಸಿಕೊಡುವಲ್ಲಿ ಮುಂದಾಗುತ್ತಾರೆ.

ಬಯಲಾಟಗಳಲ್ಲಿ ಕಂಡು ಬರುವ ನುಡಿಸಂಕರ ಮಜವಾಗಿದೆ. ಕುಡುತಿನಿ ನರಸಿಂಗರಾವ್ ಅವರ 'ದುಶ್ಯಾಸನಕಥೆ' ಯೆಂದು ಜನಪ್ರಿಯವಾಗಿರುವ 'ದ್ರೌಪದಿ ವಸ್ತ್ರಾಪಹರಣ'ದ ಒಂದು ಸನ್ನಿವೇಶ "ಅಹೋ ತಿಂಡಿಪೋತ ಲಂದು ದಂಡಿಗ ಪ್ರಖ್ಯಾತಿವೊಂದಿದ ಭಂಡ ಭೀಮ" ಎಂದು ದುಶ್ಯಾಸನನು ಛೇಡಿಸಿದರೆ, ಅದಕ್ಕುತ್ತರವಾಗಿ ಭೀಮನು "ಅಹೋ ದುಷ್ಟ ಲಂದು ನಿಸ್ಸೀಮುಡ್ಯೆನಾ ದುಶ್ಯಾಸನುಡಾ, ಭ್ರಷ್ಟಾವಿನು" ಎಂದು ಗರ್ಜಿಸುತ್ತಾನೆ. ಇಂತಹ ನುಡಿಬೆರೆಕೆಯ ಸಂಭಾಷಣೆಗಳನ್ನು ಕೇಳುವ ರಸಿಕ ಪ್ರಿಯರಿಗೆ ಏನೋ ಮೋಜನ್ನು ತಂದುಕೊಡುತ್ತದೆ. ಇಂಥ ಕಡೆ ನುಡಿಸಂಕರಗಳು ಜನರ ಬಯಕೆಯಂತೆ ಸಹಜವಾಗಿ ಬೆರೆತಿದ್ದು ಸಾಂಸ್ಕೃತಿಕ ವಿದ್ಯಮಾನವಾಗುತ್ತವೆ.

ದ್ವಿಭಾಷಿಕರಲ್ಲಿ ಮತ್ತು ಬಹುಭಾಷಿಕರಲ್ಲಿ ನುಡಿಬೆರೆಕೆ ಸಹಜವಾದ ಕ್ರಿಯೆ. ಮಾತೃಭಾಷೆಯ ಜತೆ ಜತೆಯಲ್ಲಿಯೇ ಗೊತ್ತಿರುವ ಭಾಷೆಯ ಪದಗಳು ನುಸುಳಿ

ಬರುತ್ತವೆ; ಬರುವುದರಿಂದ ವಸ್ತುಸ್ಥಿತಿಯನ್ನು ವಿವರಣೆ ಕೊಡದೆ ಬೇರೆ ಭಾಷೆಯ ಪದದಿಂದಲೇ ಅರ್ಥೈಸಲು ಸಾಧ್ಯವಾಗುತ್ತದೆ. ಹೀಗೆ ಮಾಡುವುದು ಬೇರೆ ಭಾಷಿಕರಲ್ಲಿ ಪ್ರೀತಿಯನ್ನು ಉಂಟುಮಾಡುವುದಲ್ಲದೆ ಎರಡು ಭಾಷಿಕರ ಮಧ್ಯೆ ಅನ್ಯೋನ್ಯತೆಗೆ ಕಾರಣವಾಗುತ್ತದೆ.

ಹಾಗೆ ನೋಡಿದರೆ ನುಡಿಸಂಕರ ಸೃಜನಶೀಲ ಕೃತಿಗಳಲ್ಲಿ ಪ್ರಜ್ಞಾಪೂರ್ವಕವಾಗಿ ಬಂದಿದ್ದರೆ, ಜನಪದ ಸಾಹಿತ್ಯದಲ್ಲಿ ಸಹಜವಾಗಿಯೇ ವ್ಯಕ್ತಗೊಂಡಿರುತ್ತದೆ. ಇದು 'ನುಡಿಸಂಕರ ಸಾಹಿತ್ಯ' ಕೃತಿಯನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಗೊತ್ತಾಗುತ್ತದೆ. ಜನಪದ ಸಾಹಿತ್ಯದಲ್ಲಿ ಅಡಗಿರುವ ನುಡಿಸಂಕರಗಳ ಹುಡುಕಾಟವೇ ರಹಮತ್ ತರೀಕೆರೆ ಅವರಲ್ಲಿ ಹೆಚ್ಚಾಗಿರುವುದು ಇಲ್ಲಿ ಗಮನಾರ್ಹ ಸಂಗತಿ. ಕನ್ನಡ ಸಾಹಿತ್ಯ, ಭಾಷೆ, ಸಂಸ್ಕೃತಿ ಕುರಿತಂತೆ ಒಂದು ವಿಶಿಷ್ಟವಾದ ಮಹತ್ವದ ಸಾಂಸ್ಕೃತಿಕ ವಿಶ್ಲೇಷಣಾತ್ಮಕ ಕೃತಿಯಾಗಿ 'ನುಡಿಸಂಕರ ಸಾಹಿತ್ಯ' ಗಮನಾರ್ಹವಾಗಿದೆ.

ಎಸ್. ಶಿವಣ್ಣ ಬೆಳವಾಡಿ

೪. ಜನಪದ ವಿಜ್ಞಾನ

ಜನಪದ ವಿಜ್ಞಾನ, ಡಾ. ಹಿ.ಶಿ. ರಾಮಚಂದ್ರೇಗೌಡ, ಪ್ರ: ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು–೫೬೦೦೫೦, ೨೦೧೨, ಪುಟ–೩೮, ಬೆಲೆ ರೂ. ೨೦/-

ನಾಡಿನ ಹಿರಿಯ ಜಾನಪದ ವಿದ್ವಾಂಸರಾದ ಡಾ. ಹಿ.ಶಿ. ರಾಮಚಂದ್ರೇಗೌಡರು 'ಜನಪದ ವಿಜ್ಞಾನ' ಕೃತಿಯನ್ನು ಕರ್ನಾಟಕ ಜಾನಪದ ಪರಿಷತ್ತಿನ ಜನಪ್ರಿಯ ಜಾನಪದ ಪುಸ್ತಕಮಾಲೆಯಿಂದ ಹೊರತಂದಿದ್ದಾರೆ.

ಡಾ. ಹಿ.ಶಿ. ರಾಮಚಂದ್ರೇಗೌಡರು ಚಿಂತಕರು, ವಿದ್ವತ್‌ಪೂರ್ಣವಾಗಿ ವಿಷಯವನ್ನು ಮಂಡಿಸುವ, ಅದನ್ನು ಸರಳಗೊಳಿಸಿ ಹೇಳುವ ಸಾಮರ್ಥ್ಯ ಅವರಲ್ಲಿದೆ. ಅದಕ್ಕೆ ಸಾಕ್ಷಿ ಈ ಜನಪದ ವಿಜ್ಞಾನ ಕೃತಿ. ಜನಪದವೆಂದರೇನು? ಎಂದು ಮೂಲದಿಂದ ಪ್ರಾರಂಭಿಸಿ ಜ್ಞಾನ–ವಿಜ್ಞಾನಗಳ ಅರ್ಥವನ್ನು ಹೇಳುತ್ತಾ ವಿಷಯವನ್ನು ತಳಸ್ಪರ್ಶಿಯಾಗಿ ಅವಲೋಕಿಸುತ್ತ, ಹಂತ ಹಂತವಾಗಿ ಮಂಡಿಸುತ್ತಾ ಓದುಗನಿಗೆ ಸರಳವಾಗಿ ದಕ್ಕಿಸಿಕೊಡುತ್ತಾರೆ. ಜ್ಞಾನವೆಂದರೆ ಭಾವನಾತ್ಮಕವಾಗಿರುವಂತದ್ದು: ವಿಜ್ಞಾನ ಮಾನವನಿಗಾಗಿ, ಅತನ ಅಭಿವೃದ್ಧಿಗಾಗಿ ಶೋಧಿಸಿದ ವಿಶೇಷ ಜ್ಞಾನ. ವಿಜ್ಞಾನವೆಂಬುದು ಒಂದು ಜ್ಞಾನ ಮಾದರಿ. 'ಪಾರಂಪರಿಕ ಜ್ಞಾನಕ್ಕಿಂತ ಭಿನ್ನವಾದ ಚಿಂತನೆ ಸಂಶೋಧಕನ ಮನಸ್ಥಿತಿಯ ಅರಿವು ಇಂದಿನ ಹೊಸ ಹೊಸ ಸೌಲಭ್ಯಗಳು ಸಲಕರಣೆಗಳು ಯಂತ್ರಸಂಸ್ಕೃತಿ, ತಂತ್ರಜ್ಞಾನ

ರೂಪವಾಗಿ ಬೆಳೆದುನಿಂತಿದೆ. ಭೌತಿಕ ಸುಖಕ್ಕಾಗಿ ಬಳಸುವ ಇದು ಜನಪರ ಸಂಸ್ಕೃತಿ ಯನ್ನು ದೂರ ಇಡುತ್ತದೆ'. ಹೀಗೆ ವಿಜ್ಞಾನ ತಂತ್ರಜ್ಞಾನದಿಂದಾಗುವ ಅಪಾಯಗಳನ್ನು ಕುರಿತು ಬರೆಯುತ್ತಾರೆ. ಸಾಮಾನ್ಯ ಸಂಬಂಧರಹಿತವಾದ ಜನಪದದಿಂದ ದೂರವಾದ ತಂತ್ರಜ್ಞಾನದ ಅಪಾಯಗಳನ್ನು ಗುರ್ತಿಸುತ್ತಾರೆ. ಪಾರಂಪರಿಕ ವಿಜ್ಞಾನ, ತಂತ್ರಜ್ಞಾನದ ಸಂಬಂಧಿಯಾಗಿ. ಮಾರ್ಕ್ಸ್ ದೃಷ್ಟಿಯ ತಂತ್ರಜ್ಞಾನ, ಗಾಂಧಿ ದೃಷ್ಟಿಯ ವಿಜ್ಞಾನ ತಂತ್ರಜ್ಞಾನ, ಚಾರಿತ್ರಿಕ ದೃಷ್ಟಿಕೋನ–ವಿಜ್ಞಾನ–ತಂತ್ರಜ್ಞಾನ, ಆಧುನಿಕ–ಜನಪದ ತಂತ್ರಜ್ಞಾನ ಹೀಗೆ ಎಲ್ಲವನ್ನು ತೂಗಿ ನೋಡುವ ಪ್ರಯತ್ನವನ್ನು ಮಾಡಿದ್ದಾರೆ.

ಉನ್ನತ ತಂತ್ರಜ್ಞಾನವೆಂಬುದು ಅಪೇಕ್ಷಿತ ಬಂಡವಾಳಶಾಹಿಗಳ ತಂತ್ರಜ್ಞಾನವಾಗಿದೆ. ಜನಪದ ಜ್ಞಾನದಲ್ಲಿ ವೈಜ್ಞಾನಿಕತೆಯನ್ನು ಕಾರ್ಯಕಾರಣದಿಂದ ಸುಲಭವಾಗಿ ನೋಡುವ ತಿಳಿಸುವ ಕ್ರಮ, ವಾಸ್ತವದಲ್ಲಿ ತಿಳಿಯುವ ರೀತಿ, ಲೇಖಕರು ಅದನ್ನು ಪುಟ್ಟಕತೆಗಳ, ಒಗಟುಗಳ ಮೂಲಕ ತಿಳಿಸುತ್ತಾರೆ. ವಿಜ್ಞಾನ ಎಂದರೆ ವಸ್ತು ಗ್ರಹಿಕೆ, ವಾಸ್ತವತೆಯ ಅರಿವು, ಪ್ರಯೋಗ, ವಿಶ್ಲೇಷಣೆಗೆ ನಾಂದಿ. ಜನಪದದಲ್ಲಿ ಒಗಟು, ನುಡಿಗಟ್ಟುಗಳು ಈ ಪಾತ್ರ ನಿರ್ವಹಿಸುತ್ತದೆ. ಉದಾ:– "ಚಿಕ್ಕ್ಮನೇಲಿ ಚಕ್ಕೆ ತುಂಬ್ಯಾವ್ರೆ", "ಸುತ್ತ ನೋಡುದ್ರೆ ಸುಣ್ಣದ ಗೋಡೆ ಬಾಗಿಲೆ ಇಲ್ಲ", "ಅವ್ವಾ ಅಂದ್ರೆ ತೆರಿಯುತ್ತೆ ಅಪ್ಪಾ ಅಂದ್ರೆ ಮುಚ್ಚುತ್ತೆ". ಇದು ಮಕ್ಕಳ ಗ್ರಹಿಕೆಗೆ ಸ್ಪಷ್ಟ ಮಾಡುವುದಾಗಿದೆ. ಇದು ವಿಜ್ಞಾನದ ಸಾಮಾನ್ಯ ಪಾಠ. ಜನಪದ ವಿಜ್ಞಾನವೆಂದರೆ ಇದು ಎಂದು ಗುರ್ತಿಸುತ್ತಾರೆ. ಜಾನಪದದಲ್ಲಿ ಆಹಾರವೂ ವಿಜ್ಞಾನದ ವಿಷಯವಾಗಿದೆ. ಆಧುನಿಕ ವಿಜ್ಞಾನ ಆಹಾರ–ಔಷಧಿಗಳನ್ನು ಬೇರೆ ಬೇರೆ ಯಾಗಿ ವಿಂಗಡಿಸಿದರೆ, ಜಾನಪದ ವೈದ್ಯ ಪದ್ಧತಿ ಆಹಾರದಿಂದಲೇ ಔಷಧಿಯು ಸೇರಿಕೊಳ್ಳುವಂತೆ ನೋಡಿಕೊಂಡಿದೆ. ಈ ಮೂಲಕ ದೇಹದ ಶಕ್ತಿ ವರ್ಧಿಸುವ, ಕಾಯಿಲೆಗಳು ಬರದಂತೆ ನೋಡಿಕೊಳ್ಳುತ್ತದೆ.

ಜನಪದರು ಮನೆಗಳನ್ನು ಪರಿಸರ ಬದ್ಧವಾದ ಜ್ಞಾನವಾಗಿ ಕಂಡುಕೊಂಡಿದ್ದಾರೆ. ಒಂದೊಂದು ಪರಿಸರ, ಹವಾಮಾನಕ್ಕೆ ಅನುಗುಣವಾಗಿ ವೈವಿಧ್ಯಮಯ ರಚನೆಯನ್ನು ಗುರ್ತಿಸಿದ್ದಾರೆ. ಕೃಷಿಯಲ್ಲೂ ರೈತರು ವಿಜ್ಞಾನ ಮಾದರಿಯಲ್ಲೆ ತಮ್ಮ ಕೃಷಿ ಚಟುವಟಿಕೆಗಳನ್ನು ನಡೆಸುವುದು ಕಂಡು ಬರುತ್ತದೆ. ಅವೆಲ್ಲ ವೈಜ್ಞಾನಿಕ ಸತ್ಯಗಳೇ ಆಗಿವೆ.

ಲೇಖಕರು ವಿಜ್ಞಾನವನ್ನು ಶಿಷ್ಟತೆಯ ತಂತ್ರಜ್ಞಾನದಿಂದ ಆಚೆಗೆ ಜನಪರವಾದ ಸಾಮಾನ್ಯ ನೆಲೆಯಲ್ಲಿ ಜನಪದ ವಿಜ್ಞಾನವನ್ನು ಕುರಿತು ಚಿಂತಿಸುತ್ತಾ ಅದನ್ನು ಸರಳಗೊಳಿಸಿ ಹೇಳುವಲ್ಲಿ ಯಶಸ್ವಿಯಾಗಿದ್ದಾರೆ.

ಸುಶೀಲಾ ಸದಾಶಿವಯ್ಯ

೫. ಜನಪದ ಧರ್ಮದ ಸಾಮಾನ್ಯತೆ

ಜನಪದ ಧರ್ಮ, ಡಾ. ಹಿ.ಶಿ. ರಾಮಚಂದ್ರೇಗೌಡ, ಪ್ರ: ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿನಿ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು-೫೬೦೦೫೦, ೨೦೧೨, ಪುಟ-೩೮, ಬೆಲೆ ರೂ. ೨೦/-

ಡಾ. ಹಿ.ಶಿ. ರಾಮಚಂದ್ರೇಗೌಡರು ರಚಿಸಿರುವ 'ಜನಪದ ಧರ್ಮ' ಕೃತಿ ಕರ್ನಾಟಕ ಜಾನಪದ ಪರಿಷತ್ತಿನ ಜನಪ್ರಿಯ ಜಾನಪದ ಪುಸ್ತಕಮಾಲೆಯಿಂದ ಪ್ರಕಟಿಸಲಾಗಿದೆ. ಹಿರಿಯ ಜಾನಪದ ವಿದ್ವಾಂಸರಾದ ಡಾ. ಹಿ.ಶಿ. ರಾಮಚಂದ್ರೇಗೌಡರ ಈ ಕೃತಿ ಪಾಂಡಿತ್ಯ ಪೂರ್ಣವಾದದ್ದು.

'ಧರ್ಮ' ಎಂಬುದು ಒಂದು ಜಿಜ್ಞಾಸೆಯ ಪದ. ಯಾವುದು ಧರ್ಮ, ಒಬ್ಬರಿಗೆ ಒಳಿತಾದರೆ ಇನ್ನೊಬ್ಬರಿಗೆ ಕೆಡುಕು ಆಗಬಹುದು. ಸರ್ವರಿಗೂ ಒಳಿತಾಗುವ ಉದ್ದೇಶವೂ ಇದರಲ್ಲಿದೆ. ಲೇಖಕರು ಧರ್ಮದ ಅರ್ಥ, ವ್ಯಾಪ್ತಿಯನ್ನು ಕೂಲಂಕಷವಾಗಿ ವಿಶ್ಲೇಷಣೆ ಮಾಡಿದ್ದಾರೆ. ಧರ್ಮವೆಂಬುದು ಮಾನವನ ಧರ್ಮವಾಗಿ ಪ್ರತಿಯೊಬ್ಬ ಮಾನವ ಜೀವಿಯ ಸುಖ, ಸಂತೋಷದ ಕಲ್ಪನೆಯಲ್ಲಿ ರಚಿತವಾಗಿರುವುದೇ 'ಜನಪದ ಧರ್ಮ'.

ಧರ್ಮ ಎಂಬ ಪದದ ಅರ್ಥ ಸರಳ. ನಾವು ಇನ್ನೊಬ್ಬರಿಗೆ ಒಳಿತನ್ನು ಮಾಡಿದರೆ, ಅದು ನಮ್ಮನ್ನು ಕಾಪಾಡುತ್ತದೆ. ಧರ್ಮಕ್ಕೆ ನಿರ್ದಿಷ್ಟ ಸ್ಥಿತಿ ಇಲ್ಲದ ನಿರಂತರ ಹುಡುಕಾಟ. ನಮ್ಮ ಹಿಂದೂ, ಬೌದ್ಧ, ಮುಸ್ಲಿಮ್ ಧರ್ಮಗಳು ಮಾನವೀಯ ಚಿಂತನೆಯಿಂದ ದೂರವಾಗಿ ವ್ಯಾಪಾರಿ ಮನೋಧರ್ಮವಾಗಿ ಉಳಿದುಕೊಂಡಿದೆ. ವೈಚಾರಿಕ ಚಿಂತನೆಯ ಕೊರತೆಯಿಂದ ಸ್ವಾರ್ಥಪರವಾದ ಕುಟಿಲ ಆಲೋಚನೆಗಳಿಂದ ಧಾರ್ಮಿಕ ನಂಬಿಕೆಗಳು ಅಪಾಯಕಾರಿಯಾಗುತ್ತಿವೆ. ತನ್ನ ಜೊತೆಗಿನ ಸಹ ಮಾನವರ ಅವಗಣನೆ, ನಿರ್ಲಕ್ಷ್ಯದಿಂದ ಕೂಡಿದ ಸಮಾಜದಲ್ಲಿ ಧರ್ಮ ಎನ್ನುವುದು ಆವಿಷ್ಕಾರಗೊಳ್ಳಬೇಕಾಗಿದೆ ಎನ್ನುತ್ತಾರೆ.

ಜನಪದ ಧರ್ಮವೆಂದರೆ ಪ್ರಮುಖ ಧರ್ಮಗಳಿಂದಾಚೆ ಇಡೀ ಮಾನವ ಕುಲದ ಒಳಿತಿಗಾಗಿ ಇರುವುದು. ಜಾತಿ, ಮತ ಪಂಥದ ಆಚೆಗೆ ಧರ್ಮವನ್ನು ವಿಸ್ತರಿಸುತ್ತಾರೆ. ಮಾನವ ಹೃದಯದ ಮಿಡಿತವಾಗಿಸಿ ಧರ್ಮ ಉಳಿಯಬೇಕು. ಅಲೌಕಿಕ ಅತೀತವಾದ ಮೇಲ್ವರ್ಗದವರ ಪುರೋಹಿತಶಾಹಿಗಳ ಶೋಷಣೆಯಿಂದ ಬಿಡುಗಡೆಯಾದಾಗ ಮಾತ್ರ ಧರ್ಮ ತನ್ನ ಸೀಮಿತ ಚೌಕಟ್ಟಿನಿಂದಾಚೆಗೆ ಮಾನವೀಯವಾಗುತ್ತದೆ.

ಜನಪದ ಧರ್ಮ ಎನ್ನುವುದು ಸಮಾನ ಚಿಂತನೆಯ ಮೇಲಿಂದ ಒಂದುಗೂಡಿದ ಒಂದು ಸಮುದಾಯ. ಸಾಮಾನ್ಯರ ಸಮಾನತಾ ಮನೋಧರ್ಮ ಇಲ್ಲಿರುತ್ತದೆ. ಧರ್ಮ ಎಂದರೆ ಸರಳಾರ್ಥದಲ್ಲಿ ನಡವಳಿಕೆ. ಲೇಖಕರು ಜನಪದ ಧರ್ಮವನ್ನು ಸಾಮಾನ್ಯ ನಡವಳಿಕೆ, ಪರರಿಗೆ ಹಿತ, ಸಂತೋಷವನ್ನು ಕೊಡುವಂತಹ ಸಾಮಾನ್ಯ ನಡವಳಿಕೆಗಳೇ ಜನಪದ ಧರ್ಮ ಎನ್ನುತ್ತಾರೆ. ಕೇಂದ್ರೀಕೃತ ಸಂಕುಚಿತ ಮನಸ್ಥಿತಿಯ

ತತ್ವ, ಸಿದ್ಧಾಂತ, ಪಂಥಗಳಿಂದ, ಪಂಗಡಗಳಿಂದಾಚೆಗೆ ಬಯಲು ಧರ್ಮವಾಗಿ ವಿಕೇಂದ್ರಿಕರಣಗೊಂಡು ಕ್ರಿಯಾಶೀಲವಾಗಿ ನಂಬಿಕೆ, ನಡವಳಿಕೆ, ಕಥೆ, ಕಾವ್ಯ, ಆಚರಣೆ, ಪುರಾಣಗಳ ಮೂಲಕ ಧರ್ಮದ ವಿಶಾಲತೆಯನ್ನು ಹೇಳುತ್ತಾರೆ.

ಜಾನಪದ ಧರ್ಮವನ್ನು ಶಿಷ್ಟ ಸಂಪ್ರದಾಯದ ಚೌಕಟ್ಟಿನ ಕಲ್ಪನೆಯಲ್ಲಿ ತೌಲನಿಕವಾಗಿ ತೂಗಿ ಜನಪದ ಧರ್ಮಕ್ಕೆ ಮೌಲ್ಯ ಕಟ್ಟುತ್ತಾರೆ. ಜನಪದ ಧರ್ಮದಲ್ಲಿ ದೇವರು, ಧರ್ಮ, ಮನುಷ್ಯ ಸಂಯೋಗವನ್ನು ಕುರಿತು, ಧರ್ಮ ಆಹಾರವನ್ನು ಕುರಿತು, ಆಹಾರದ ಸದುಪಯೋಗ ಅವಶ್ಯಕತೆಯ ಚರ್ಚೆಯಿದೆ. ಧರ್ಮ ಹಿಂಸೆ, ಧರ್ಮ ಸಂಸ್ಕೃತಿ, ಧರ್ಮ ದೇವರು ಈ ಕಲ್ಪನೆಗಳು ಸಾಮಾನ್ಯವಾಗಿದ್ದು, ಅವರ ಭಾವಕ್ಕೆ ಎಟುಕುವ, ಬೇರೊಬ್ಬರ ಹಿತವನ್ನು ಕಾಯುವ ತಾನು ಬದುಕಿ ಪರರನ್ನು ಬದುಕಿಸುವ ಒಂದು ರೀತಿಯ ಸಾಮಾನ್ಯ ತತ್ವದಲ್ಲಿ ವಿಶ್ವಮಾನವ ಕಲ್ಪನೆಯನ್ನು ತುಂಬಿಕೊಡುವಂತದ್ದು ಈ ಜನಪದ ಧರ್ಮ.

ಲೇಖಕರು ಧರ್ಮ ಎನ್ನುವ ಪರಿಕಲ್ಪನೆಯ ಕ್ಲಿಷ್ಟತೆಯನ್ನು ಸರಳಗೊಳಿಸಿ, ಹಂತ ಹಂತವಾಗಿ ವಿಷಯವನ್ನು ವಿಸ್ತರಿಸಿ ಮನದಟ್ಟು ಮಾಡುತ್ತಾರೆ. ಧರ್ಮ ಎಂಬುದು ದೊಡ್ಡ ದೊಡ್ಡ ಗ್ರಂಥಗಳಿಂದ ಹುಡುಕಿ ತೆಗೆಯುವಂತದ್ದಲ್ಲ. ನಮ್ಮ ಕೈಗೆಟುಕುವ ಸಾಮಾನ್ಯ ಜನರ ಹಿತವನ್ನು ಕಾಯುವ ಉತ್ತಮ ನಡವಳಿಕೆಯ ಮನುಷ್ಯ ಧರ್ಮವೇ ಜನಪದ ಧರ್ಮ. ಬೇರೆಯವರ ರಕ್ಷಣೆಯಿಂದ ತನಗೆ ರಕ್ಷಣೆ. ಪರರಿಗೆ ಮಾಡುವ ಒಳಿತಿನಿಂದ ತನಗೆ ಒಳಿತಾಗುತ್ತದೆ ಎಂಬ ವಿಶಾಲ ಚಿಂತನೆಯ ಸಾರವೇ ಜನಪದ ಧರ್ಮ. ಲೇಖಕರು ಕ್ಲಿಷ್ಟವಾದದ್ದನ್ನು ಸರಳಗೊಳಿಸಿ ಓದುಗನಿಗೆ ತಿಳಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಸುಶೀಲಾ ಸದಾಶಿವಯ್ಯ

೬. ಅರ್ಥವಿವರಣೆ ಒಳಗೊಂಡ ಉತ್ತಮ ರಚನೆ

ಗಾದೆಗಳ ಲೋಕ, ಎಚ್.ಎಚ್. ಗಂಗಾಧರಾಚಾರ್, ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು–೫೬೦೦೬೦, ೨೦೧೨, ಪುಟ–೪೪, ಬೆಲೆ ರೂ. ೨೦/-

'ಗಾದೆಗಳ ಲೋಕ' ಎಚ್.ಎಚ್. ಗಂಗಾಧರಾಚಾರ್ ಬರೆದಿರುವ ಈ ಕೃತಿಯನ್ನು ಜನಪ್ರಿಯ ಜಾನಪದ ಪುಸ್ತಕಮಾಲೆಯಿಂದ ಹೊರತಂದಿದ್ದಾರೆ. ಆಧುನಿಕ ಯುಗದಲ್ಲಿ ಮಾತು ಕಡಿಮೆಯಾಗಿದೆ. ಇನ್ನು ಗಾದೆ, ಒಗಟುಗಳಿಗೆ ಜಾಗವೇ ಇಲ್ಲ. ಒಮ್ಮೊಮ್ಮೆ ಗಾದೆಗಳು ನೆನಪಾಗಿ ಅರ್ಥಕ್ಕೆ ನಿಂತು ಹೋಗುತ್ತದೆ. ಕೊನೆಗೆ 'ಅದೇನೋ ಹೇಳ್ತಾರಲ್ಲ ಹಾಗೆ' ಎಂದು ಸುಮ್ಮನಾಗುತ್ತೇವೆ. ಇಂದು ಗಾದೆ ಅಂತಹ ಮಹತ್ವವನ್ನು ಪಡೆದು ಕೊಂಡಿಲ್ಲ. ಕಾಲಕ್ರಮೇಣ ಅದು ನಮ್ಮ ಭಾಷೆಯಿಂದ ಜಾರಿ ಹೋಗುವುದಂತು ಸ್ಪಷ್ಟ.

ಲೇಖಕರು ಇಲ್ಲಿ ಗಾದೆಗಳನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ವಿಂಗಡಿಸಿ, ಓದುಗನಿಗೆ ಸುಲಭವಾಗಿ ಅರ್ಥ ಸಮೇತ ವಿವರಿಸಿದ್ದಾರೆ. ನೂರಾರು ವರ್ಷಗಳ ಅನುಭವದ ಆಧಾರದಿಂದ ರಚಿತವಾದ ನುಡಿಗಟ್ಟುಗಳು ಎಲ್ಲಾ ಭಾಷೆಯಲ್ಲೂ ಇಂತಹ ಪ್ರಯೋಗ ಕಾಣಬಹುದು. ಒಂದು ಸನ್ನಿವೇಶವನ್ನು ಬಹುಳವಾದ ಅರ್ಥವಿವರಣೆಯನ್ನು ಒಂದೇ ವಾಕ್ಯದಲ್ಲಿ ಕಟ್ಟಿಕೊಡುವ ಗಾದೆಗಳು ಒಂದು ಭಾಷೆಯ ವಿಶಿಷ್ಟತೆಯನ್ನು ತೋರಿಸುತ್ತದೆ. ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಇದರ ಕಾಣಿಕೆಯೂ ಮುಖ್ಯವಾಗಿದೆ. ಹಳೆಯ ಗಾದೆಯ ಪ್ರಯೋಗ ಚಾಲನೆಯಲ್ಲಿರುವಂತೆ ಆಧುನಿಕ ಕವಿಗಳಿಂದಲೂ ಆಧುನಿಕ ನುಡಿಗಟ್ಟುಗಳು ರಚನೆಯಾಗಿರುವುದನ್ನು ಗಮನಿಸಬಹುದು. ಹೀಗೆ ಗಾದೆಗಳ ಪ್ರಯೋಗ ಮುಂದುವರೆಯುತ್ತಲೇ ಇದೆ.

ಈ ಕೃತಿಯಲ್ಲಿ ಗಾದೆಗಳು ಸುಲಭವಾಗಿ ಓದುಗನಿಗೆ ಅರ್ಥವಾಗುತ್ತದೆ. ಆದರೂ ಅದರ ಅರ್ಥವಂತಿಕೆಯ ವ್ಯಾಪ್ತಿಯನ್ನು ವಿಶಾಲಗೊಳಿಸಿ ಓದುಗನಿಗೆ ಸಮರ್ಥವಾಗಿ ಅರ್ಥ ಸಮೇತ ಕೊಡುವ ಪ್ರಯತ್ನವಿದೆ. ಉದಾಹರಣೆಗೆ "ಭರಣಿ ಮಳೆಗೆ ಬಿತ್ತಿದರೆ ಧರಣಿಯೆಲ್ಲಾ ಧಾನ್ಯ", ರೈತನನ್ನು ಕುರಿತು, ಆತನ ಬೇಸಾಯದ ಬವಣೆ ನೋವು ಕಷ್ಟಗಳನ್ನು "ಬೇಸಾಯ–ಮನೆ ಮಕ್ಕಳೆಲ್ಲಾ ಸಾಯ", "ಆರಂಭ ವರ್ಷ ವ್ಯಾಪಾರ ನಿಮಿಷ", "ಮಳೆ ಬಂದರೆ ನಷ್ಟವೇ? ಮಕ್ಕಳಾದರೆ ನಷ್ಟವೇ?" ಆರೋಗ್ಯ, ದಾಂಪತ್ಯ, ಅಣ್ಣ–ತಮ್ಮ, ಅಕ್ಕ–ತಂಗಿ, ತಂದೆ–ತಾಯಿ, ತೌರು, ಬಂಧುತ್ವಗಳನ್ನು ಕುರಿತು ಅತ್ತೆ–ಸೊಸೆ, ದಾನಕ್ಕೆ ಸಂಬಂಧಿಸಿದ ಗಾದೆಗಳು, ಬಡತನ ಕುರಿತ ಗಾದೆಗಳು, ಕಳ್ಳತನ, ಜೂಜು–ಕುಡಿತ, ಸತ್ಯ–ಅಸತ್ಯ, ಧರ್ಮ–ಅಧರ್ಮ, ಅಸಾಧ್ಯ ಎಂಬ ಅರ್ಥದ ಗಾದೆಗಳು, ಶಿಕ್ಷೆ ಕುರಿತ ಗಾದೆ, ಅನ್ಯೋಕ್ತಿ, ಹಣದ ಮಹತ್ವ, ಜಿಪುಣತನ, ಮಾತು, ಸಂಕಟ, ಆಸೆ, ಚಿಂತೆ, ಸಾಲ, ವ್ಯರ್ಥ, ವ್ಯಾಪಾರ, ಕವಿ, ಕಾರ್ಯ, ಕಣ್ಣು, ಅವಿವೇಕ, ಪೂರ್ವಸಿದ್ಧತೆ ಕುರಿತು, ಆರಂಭ ಶೂರತ್ವ, ಸಮಯ ಸಾಧಕತನ ಕುರಿತು, ವೃದ್ಧಾಪ್ಯದಲ್ಲಿ ಮಾಡ ಬೇಕಾದ್ದನ್ನು ಮಾಡದವನ ಕುರಿತು, ಸುಲಭದ ಕೆಲಸ ಮಾಡಲಾಗದವನನ್ನು ಕುರಿತು, ಹೀಗೆ ಎಲ್ಲವನ್ನೂ ಕುರಿತ ಗಾದೆಗಳಿವೆ.

ಲೇಖಕರು ಸಿಕ್ಕ ಗಾದೆಗಳನ್ನು ವಿಂಗಡಿಸಿ ಒಪ್ಪ ಓರಣವಾಗಿ ಸುಲಭವಾಗಿ ಅರ್ಥ ಸಮೇತ ವಿವರಿಸಿರುವುದು ಈ ಪುಸ್ತಕದ ವಿಶೇಷ. "ಲಾಭವಿಲ್ಲದ ವ್ಯಾಪಾರ ಕತ್ತೆ ಮೈ ತುರಿಸಿದಂತೆ", "ಕಣ್ಣಿನಷ್ಟು ಸೂಕ್ಷ್ಮವಿಲ್ಲ, ಮಣ್ಣಿನಷ್ಟು ಆಧಾರವಿಲ್ಲ" "ತಲೆ ತಲೆಗೂ ಪಟ್ಟ ಹೊಟ್ಟೆಗಿಲ್ಲದೆ ಕೆಟ್ಟ", "ಹಣವಿಲ್ಲದವನು ಹೆಣಕ್ಕೆ ಸಮಾನ", "ಜೀನನ ಒಡವೆ ಜಾಣ ತಿಂದ" ಹೀಗೆ ಗಾದೆಗಳನ್ನು ಹೆಸರಿಸಬಹುದು.

ಹೀಗೆ ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿ ಚುಟುಕಾಗಿ ಒಂದೇ ಸಾಲಿನಲ್ಲಿ ಚುರುಕು ಮುಟ್ಟಿಸಿ ಎಚ್ಚರಿಸುವ, ಬುದ್ಧಿ ಹೇಳುವ, ಹಿರಿಯರ ಅನುಭವದ ಸಾಲುಗಳು. ಇವು ನೀನು ಹೀಗೆ ಮಾಡಬೇಡ ಎಂದು ಗಾದೆಗಳ ಮೂಲಕ ಹೇಳುವ ವಿಷಯವನ್ನು

ಕರಾರುವಕ್ಕಾಗಿಸುವ ಗಾದೆಗಳು ಕನ್ನಡ ಜನಪದ ಸಾಹಿತ್ಯದ ವಿಶಿಷ್ಟತೆ. ಜನರ ಬಾಯಿಂದ ಬಾಯಿಗೆ ಹರಿದು ಬಂದು ಭಾಷೆ, ಸಾಹಿತ್ಯ ಜೀವನ ಎಲ್ಲವನ್ನು ಶ್ರೀಮಂತಗೊಳಿಸುವ ವಿಶಿಷ್ಟ ಸಾಹಿತ್ಯ ಪ್ರಕಾರವನ್ನೇ ಲೇಖಕರು ಈ ಕಿರುಹೊತ್ತಿಗೆಯಲ್ಲಿ ಉತ್ತಮವಾದ ಆಯ್ಕೆಯ ಗಾದೆಗಳನ್ನು ಮಾತ್ರ ಸಂಗ್ರಹಿಸಿಕೊಟ್ಟು ಅದರ ಆಪ್ತವಾದ ವಿಶ್ಲೇಷಣೆ ಮಾಡಿರುವುದರಿಂದ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಸುಶೀಲಾ ಸದಾಶಿವಯ್ಯ

೭. ವರ್ಣಮಯ ಹಾಸ್ಯ ಪ್ರಸಂಗಗಳು

ಜನಪದ ಸಾಹಿತ್ಯದಲ್ಲಿ ಹಾಸ್ಯ, ಡಾ. ವಿಜಯಲಕ್ಷ್ಮಿ ಸೀತಾಪುರ, ಕರ್ನಾಟಕ ಜಾನಪದ ಪರಿಷತ್ತು, ನಂ. ೧, ಜಲದರ್ಶಿ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು-೫೬೦೦೫೦, ೨೦೧೨, ಪುಟ-೪೦, ಬೆಲೆ ರೂ. ೨೦/-

ಜನಪದ ಸಾಹಿತ್ಯದಲ್ಲಿ ಹಾಸ್ಯವೆಂಬ ಕೃತಿಯನ್ನು ಡಾ. ವಿಜಯಲಕ್ಷ್ಮಿ ಸೀತಾಪುರ ಬರೆದಿದ್ದಾರೆ. ಚಿಕ್ಕದಾದರೂ ಹಾಸ್ಯವೆಂಬ ವಿಷಯವನ್ನು ಸುಂದರವಾಗಿ ಕಟ್ಟಿಕೊಟ್ಟಿದೆ. ಇದು ಕರ್ನಾಟಕ ಜಾನಪದ ಪರಿಷತ್ತು ಜನಪ್ರಿಯ ಕೃತಿ. ಜಾನಪದ ಪುಸ್ತಕಮಾಲೆಯಿಂದ ಹೊರಬಂದಿದೆ. ಜಾನಪದ ಸಾಹಿತ್ಯದಲ್ಲಿ ಹಾಸ್ಯರಸ ಪ್ರಮುಖವಾದದ್ದು. ತಮ್ಮ ದುಡಿಮೆಯ ಬೇಸರ, ಶ್ರಮದ ಏಕತಾನತೆಯಿಂದ ಹೊರಬರಲು ಹಾಸ್ಯ ಅಗತ್ಯ. ಜೀವನದಲ್ಲಿ ಉಲ್ಲಾಸವನ್ನು ತುಂಬಿಸಿಕೊಳ್ಳಲು ಜನಪದರು ಹಾಸ್ಯವನ್ನು ತಮ್ಮ ಜೀವನದ ಪ್ರಮುಖ ಭಾಗವನ್ನಾಗಿ ಕಂಡುಕೊಂಡಿದ್ದಾರೆ. ಅವರ ಬಾಯಿಂದ ಬರುವ ಕಥೆ, ಕಾವ್ಯ, ಒಗಟು, ನುಡಿಗಟ್ಟು, ಎಲ್ಲದರಲ್ಲೂ ಹಾಸ್ಯ ಮಿಳಿತವಾಗಿದೆ. ಜನಪದ ಸಾಹಿತ್ಯದಲ್ಲಿ ಹಾಸ್ಯ ತನ್ನದೇ ಆದ ವಿಶಿಷ್ಟತೆಯನ್ನು, ಹಿರಿಮೆಯನ್ನು ಪಡೆದುಕೊಂಡು ಜನಪದ ಜನರ ದುಃಖ ನೋವು ಬೇಸರವನ್ನು ಕಳೆದು, ನವ ಉತ್ಸಾಹ ಚೇತನವನ್ನು ಕೊಡುವ ಟಾನಿಕ್‌ನಂತೆ ಕೆಲಸಮಾಡಿದೆ.

ಲೇಖಕರು ಈ ಕೃತಿಯಲ್ಲಿ ಹಾಸ್ಯವನ್ನು ಐದು ಭಾಗಗಳಾಗಿ ವಿಂಗಡಿಸಿ ಗುರುತಿಸಿದ್ದಾರೆ. ಕತೆಗಳಲ್ಲಿ, ಗೀತೆಗಳಲ್ಲಿ, ಗಾದೆಗಳಲ್ಲಿ, ಒಗಟುಗಳಲ್ಲಿ, ಶಿಶುಪ್ರಾಸಗಳಲ್ಲಿ ಹಾಸ್ಯದ ಸೊಬಗನ್ನು ತೋರಿಸಿದ್ದಾರೆ. ಹಾಸ್ಯದಿಂದ ಹರ್ಷ, ಹರ್ಷದಿಂದ ಮನಸ್ಸು, ಇವೆರಡೂ ಆರೋಗ್ಯದೊಂದಿಗೆ ನೆಮ್ಮದಿ ಕೊಡುತ್ತವೆ. ಎಂತಹ ವಿಷಮ ಸಮಯದಲ್ಲೂ ಹಾಸ್ಯವನ್ನು ಸೃಷ್ಟಿಸುವಂತಹ ಕಡು ಜಾಣರು ಈ ಜನಪದರು ಎಂದು ಲೇಖಕರು ಗುರ್ತಿಸುತ್ತಾರೆ.

ಕೃತಿಯಲ್ಲಿ ಚರ್ಚಿಸಿರುವ ವಿಷಯಗಳಲ್ಲಿ ಹಾಸ್ಯ ಮನಸ್ಸಿಗೆ ಸಂತೋಷ, ರಂಜನೆಯನ್ನು ನೀಡುವಂತಹ ಆರು ಕಥೆಗಳು, ಹಾಸ್ಯದ ಸಮವಾದ, ಘಟನೆಗಳು ಓದುಗನಿಗೆ ನಗೆಯನ್ನು ತರಿಸುತ್ತದೆ. ಕಥಾದೃಶ್ಯಗಳು ಕಣ್ಮುಂದೆ ಸುಳಿದು ಹಾಸ್ಯವನ್ನು ಮತ್ತಷ್ಟು ಹೆಚ್ಚು ಮಾಡುತ್ತದೆ. ಉತ್ತಮವಾದ ಕಥೆಗಳನ್ನು ಆಯ್ಕೆ ಮಾಡಿಕೊಂಡಿರುವ ಲೇಖಕರು, ಚಿಕ್ಕ ಕಥೆಗಳ ಮೂಲಕ ಹಾಸ್ಯದ ಹೊನಲು ಓದುಗನಿಗೆ ತಲುಪುವಂತೆ ಮಾಡಿದ್ದಾರೆ.

ಗೀತೆಗಳಲ್ಲಿ ಹಾಸ್ಯವನ್ನು ಗುರುತಿಸುವುದಕ್ಕೆ ಸುಂದರವಾದ ಪದ್ಯಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.

"ಗಣಕೆ ಕಾಲಿನಂಗೆ ಕಣಕಾಲ ಮಡಿಕಂಡು
ಬೀಗುತಿ ಪಣಕಾ ಪಣಕಾನೆ ನೆಗೆದಾಳು
ಸೋ ಎನ್ನಿರಿ ಸೋಬಾನೆ ಎನ್ನಿರಿ"

ಜನಪದ ಜನರು ಮದುವೆ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಜರಿಯುವ ಮೂಲಕ ನಗೆಯನ್ನು ಉಕ್ಕಿಸಿ ಬದುಕನ್ನು ಸುಂದರವಾಗಿಸಿಕೊಂಡು ತಮ್ಮ ನಿತ್ಯಜೀವನದಲ್ಲಿ ಹಾಸ್ಯದ ಹೊನಲು ಹರಿಸಿದ್ದಾರೆ. ಗಾದೆಗಳಲ್ಲಿ

"ಬೆಂದಕ್ಕನ ಕುಟ್ಟಿ ನೊಂದಕ್ಕ ಹೇಳಿದ್ಲಂತೆ
ನಂದು ನಿಂದು ಒಂದೆ ಕಣಕ್ಕ ಎಂದ್ಲಂತೆ"

"ಬಡಾಯ ನೋಡಿದ್ರೆ ಕಡಾಯ ಗಾತ್ರ, ಕಡಾಯದಲ್ಲಿ ಒಕ್ಳು ರಾಗಿಲ್ಲ". ಹೀಗೆ ಗಾದೆಗಳಲ್ಲಿ ಕೂಡ ಹಾಸ್ಯದ ಸವಿಯನ್ನು ಕಾಣಬಹುದು.

ಒಗಟುಗಳಲ್ಲಿ

"ಒಬ್ಬನ್ನ ಕಟ್ಟಿದ್ದೆ, ಒಬ್ಬನ್ನ ಬಿಟ್ಟಿದ್ದೆ,
ಒಬ್ಬನ್ನ ಕರಕೊಂಡು ಒಳಗಿದ್ದೆ ಮಲ್ಲಿಗೆ
ಯಾವೋನ್ನ ಕಟ್ಟಿದ್ದೆ, ಯಾವೋನ್ನ ಬಿಟ್ಟಿದ್ದೆ
ಯಾವೋನ್ನ ಕರಕೊಂಡು ಒಳಗಿದ್ದೆ".

ಎಂಬುದು ಅಶ್ಲೀಲವಾಗಿ ಕಂಡರೂ, ಅದರ ಒಳಾರ್ಥ ಕೇಳುಗನಾದ ಗಂಡನನ್ನ ಗಲಿಬಿಲಿಗೊಳ್ಳುವಂತೆ ಮಾಡುತ್ತದೆ. ಇದು ಎಲ್ಲರೂ ಹಾಸ್ಯವನ್ನು ಸಮವಾಗಿ ಹಂಚಿಕೊಂಡು ಸವಿಯುವಂತಹ ಉತ್ತಮ ಹಾಸ್ಯ ಪ್ರಸಂಗವಾಗಿದೆ.

ಶಿಶು ಪ್ರಾಸಗಳಲ್ಲಿ ಕೂಡ ಹಾಸ್ಯವನ್ನು ಗುರ್ತಿಸಿರುವ ಲೇಖಕರು "ಶಾರದಕ್ಕಾ ಶಾರದಕ್ಕಾ ಚೆನ್ನಾಗಿದ್ದೀಯ ಮಂಚದ ಮೇಲೆ ಮಲಗಿದ್ದೀಯ! ಅತ್ತೆ ಬಂದರೆ ಅಳುತ್ತೀಯ ಗಂಡ ಬಂದರೆ ನಗುತ್ತೀಯ!" ಮಕ್ಕಳು ಹೇಳುವ ಇದನ್ನು ಕೇಳಿ ಮನೆ ಮಂದಿಯಲ್ಲಾ ನಗುವಂತಹ ಸುಂದರವಾದ ಶಿಶುಪ್ರಾಸಗಳನ್ನು ಹೇಳುವ ಲೇಖಕರು, ಜನಪದ ಸಾಹಿತ್ಯದಲ್ಲಿ ಜೀವನದ ಪ್ರತಿಯೊಂದು ಹಂತದಲ್ಲೂ ಹಾಸ್ಯವನ್ನು ಬೆರೆಸಿಕೊಂಡು ಬದುಕಿನ ಸವಿಯೂಟವನ್ನು ಸವಿದ ಜನಪದರ ಬದುಕು, ಇಂದಿನ ಯಾಂತ್ರೀಕೃತ ಜೀವನ ಶೈಲಿಗೆ ಹಾಸ್ಯದ ನೆಲೆ ಕಳೆದುಹೋಗುತ್ತಿದೆ. ಅತಿವೇಗದ ಜೀವನದ ಓಟಕ್ಕೆ, ಜನಪದ ಸಾಹಿತ್ಯದಲ್ಲಿ ಹಾಸ್ಯ ಪುಸ್ತಕದ ಓದಿನಿಂದ ಬದುಕನ್ನು ಬೇರೆಯಾಗಿ ನೋಡುವ ಕಲೆ ಈ ಪುಸ್ತಕದ ಓದಿನಿಂದ ಪ್ರತಿಯೊಬ್ಬ ಓದುಗನಿಗೂ ಸಿಗುತ್ತದೆ. ಲೇಖಕರು ಚಿಕ್ಕ ಪುಸ್ತಕದಲ್ಲಿ ಹಾಸ್ಯದ ಮಹತ್ವ ತಿಳಿಸಿಕೊಟ್ಟಿದ್ದಾರೆ.

ಸುಶೀಲಾ ಸದಾಶಿವಯ್ಯ

೮. ದಲಿತರ ಬದುಕು-ಮೆಲುಕು ಅಂತರಂಗ

ದಲಿತರ ಬದುಕು-ಮೆಲುಕು, ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೨೨+೩೦೪, ಬೆಲೆ ರೂ. ೨೦೦/-

ಕನ್ನಡ ಸಂದರ್ಭದಲ್ಲಿ ದಲಿತ ಬದುಕಿನ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನಗಳಲ್ಲಿ ಹೆಸರಿಸಬಹುದಾದ ಇತ್ತೀಚಿನ ಕೃತಿ ಎಂದರೆ ಡಾ. ಎನ್. ಚಿನ್ನಸ್ವಾಮಿ ಸೋಸಲೆಯವರ 'ದಲಿತರ ಬದುಕು-ಮೆಲುಕು'. ಈ ಕೃತಿಯಲ್ಲಿ ದಲಿತರ ಬದುಕಿನ ಸಾಮಾಜಿಕ ಹಿಂಸೆಯನ್ನು, ಕ್ರೌರ್ಯದ ವಿವಿಧ ಮುಖಗಳನ್ನು ವೈಭವೀಕರಿಸದೆ ತಣ್ಣನೆಯ ವಿಶ್ಲೇಷಾಣಾತ್ಮಕ ಬರಹದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಈ ಕೃತಿಯು ಒಟ್ಟು ೩೦೪ ಪುಟಗಳಿಂದ ಕೂಡಿದೆ. ೨೮ ಪುಟಗಳಷ್ಟು ಸುದೀರ್ಘ ಪ್ರಸ್ತಾವನೆ ಇದೆ. ಈ ಪ್ರಸ್ತಾವನೆ ಪ್ರಮುಖವಾಗಿ ತಾನು ನೀಡಬಯಸುವ ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಮುನ್ನುಡಿಯಂತಿದೆ. ಕೃತಿಕಾರರು ಪುರಾಣ ಮತ್ತು ವಾಸ್ತವ ಸಂದರ್ಭದಲ್ಲಿ ದಲಿತ ಬದುಕಿನ ವಿವರಣೆಯನ್ನು ಅನಾವರಣಗೊಳಿಸುತ್ತಾರೆ. ಇಂಡಿಯಾದ ಚರಿತ್ರೆಯೆಂದರೆ ಕೇವಲ ಶ್ಯಾನುಭೋಗ ಚರಿತ್ರೆಯಲ್ಲ ಎಂಬ ವಸ್ತುಸ್ಥಿತಿಯ ಮೇಲೆ ಬೆಳಕು ಚೆಲ್ಲಿದ್ದಾರೆ. ಈ ಕೃತಿಯ ಪ್ರಸ್ತಾವನೆಯಲ್ಲಿ ಭಾರತದ ಎಡಪಂಥೀಯ ಚರಿತ್ರಾ ಬರಹಗಾರರ ಅಧ್ಯಯನಗಳನ್ನು ಪ್ರಸ್ತಾಪಿಸುತ್ತಾ ಅವು ಸಂಪೂರ್ಣವಾಗಿ ಈ ಸಮಾಜದ ದಲಿತ ಬದುಕಿನ ವಿವರಣೆಯನ್ನು ಕೊಡುತ್ತವೆಯೇ ಹೊರತು ವಿಶ್ಲೇಷಣಾತ್ಮಕ ಬರಹಗಳಿಲ್ಲವೆಂಬುದನ್ನು ಒತ್ತಿ ಹೇಳುತ್ತಾರೆ.

ಈ ಕೃತಿಯ ರಚನೆಯ ಉದ್ದೇಶವನ್ನು ಕುರಿತಂತೆ ಹೇಳುವಾಗ 'ಈ ಅಧ್ಯಯನದಲ್ಲಿ ದಲಿತ ವರ್ಗದವರ ಪರಿಕಲ್ಪನೆಯು ಮುಖ್ಯವಾಗಿದೆ. ಜೊತೆಗೆ ಅದಕ್ಕೆ ಹೊಂದಿಕೊಂಡಂತೆ ದಲಿತ ವರ್ಗದ ಮೇಲೆ ನಡೆಯುವ ದೌರ್ಜನ್ಯದ ಹಂತಗಳು ಹಾಗೆಯೇ ಚಾರಿತ್ರಿಕ, ವೈಚಾರಿಕ ಅಧ್ಯಯನಕ್ಕೆ ಆದ್ಯತೆ ನೀಡಲಾಗಿದೆ' ಎನ್ನುತ್ತಾರೆ. ಮುಂದುವರೆದು ಸ್ಥಳೀಯ ಮೌಖಿಕ ಕಾವ್ಯ ಪರಂಪರೆಯ ಸಾಂಸ್ಕೃತಿಕ ನಾಯಕರಾದ ಮಂಟೇಸ್ವಾಮಿ, ಮಲೆಮಾದೇಶ್ವರರನ್ನು ಗಣನೆಗೆ ತೆಗದುಕೊಳ್ಳುತ್ತಾರೆ. ಜೊತೆಗೆ ದಲಿತ ಬದುಕಿನ ಅಧ್ಯಯನಗಳ ವಿವರಣೆಯನ್ನು ಸಂಶೋಧನಾ ಅಧ್ಯಯನಗಳನ್ನು ಪ್ರಸ್ತಾಪಿಸುತ್ತಾರೆ.

ಈ ಕೃತಿಯಲ್ಲಿ ಪ್ರಸ್ತಾವನೆ ಬಿಟ್ಟರೆ ಒಟ್ಟು ಐದು ಅಧ್ಯಾಯಗಳು ಇವೆ.

೧. ದಲಿತರ ಮೇಲೆ ದೌರ್ಜನ್ಯದ ವಿಶ್ಲೇಷಣೆ

೨. ಕರ್ನಾಟಕದಲ್ಲಿ ಸಂಭವಿಸಿದ ದೌರ್ಜನ್ಯದ ಪ್ರಮುಖ ಪ್ರಕರಣಗಳ ನೋಟ

೩. ದಲಿತರ ಮತ್ತು ಅಮಾನವೀಯ ಅಚರಣೆಗಳು

೪. ಪ್ರಜಾಪ್ರಭುತ್ವ ಮತ್ತು ದಲಿತರು.

೫. ಅಂತಿಮಗೊಳಿಸುವುದಾದರೆ

ಅಧ್ಯಾಯ ಎರಡರಲ್ಲಿ ದಲಿತರ ಮೇಲೆ ದೌರ್ಜನ್ಯದ ಕುರಿತ ವಿಶ್ಲೇಷಣೆಯನ್ನು ಮಾಡುತ್ತಾರೆ. ಬಹು ಸಂಸ್ಕೃತಿಯನ್ನೊಳಗೊಂಡ ಭಾರತೀಯ ಸಮಾಜವನ್ನು ಏಕಮುಖಿ ಸಂಸ್ಕೃತಿಯ ಅಧ್ಯಯನಕ್ಕೆ ಒಳಪಡಿಸಿರುವ ಅಧ್ಯಯನಗಳ ಬಗ್ಗೆ, ಜೊತೆಗೆ ಮನುಶಾಸ್ತ್ರದ ಬಗ್ಗೆ ಪ್ರಸ್ತಾಪಿಸುತ್ತಾರೆ. ಶ್ರೇಣೀಕರಣದ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳಿಂದ ದೂರಸರಿದವರು ಅವರ್ಣೀಣಿಯರು ಎಂದರೆ ಅಸ್ಪೃಶ್ಯ ಜಾತಿಗಳೆ. ಆದರೆ ನಾಲ್ಕನೆ ವರ್ಣ ಶೂದ್ರವರ್ಣಕ್ಕೆ ಅಸ್ಪೃಶ್ಯ ಜಾತಿಗಳನ್ನು ಇಟ್ಟು ನೋಡಬಾರದು ಎಂಬ ವಾದ ಲೇಖಕರಿಗಿದೆ. ಯಾಕೆಂದರೆ ಶೂದ್ರ ಸಮುದಾಯ ಗಳು ಅಸ್ಪೃಶ್ಯ ಸಮುದಾಯಗಳಿಗೆ ಶೋಷಕ ಸಮಾಜವಾಗಿಯೇ ಕಂಡು ಬರುತ್ತವೆ. ಹಾಗಾಗಿ ಅಸ್ಪೃಶ್ಯ ಅಥವಾ ಅಂತ್ಯಜ ಎಂಬ ಹೆಸರಿನಿಂದ ಕರೆಯಲ್ಪಟ್ಟ ಸಮುದಾಯಗಳು ಅನುಭವಿಸುವ ಯಾತನೆಯು ಶೂದ್ರ ಸಮುದಾಯಕ್ಕಿಂತಲೂ ತೀರ ಭಿನ್ನವಾದದ್ದು ಮತ್ತು ಹೆಚ್ಚು ಶೋಷಿತವಾದದು ಎಂಬ ವಾದದಡಿಯಲ್ಲಿ ದಲಿತ, ಅಸ್ಪೃಶ್ಯ, ಸಾಮಾಜಿಕ ನ್ಯಾಯ ಈ ಮೂರನ್ನು ಭಾರತೀಯ ಸಮಾಜದಲ್ಲಿಟ್ಟು ಶೋಧಿಸುತ್ತಾರೆ.

ದಲಿತರು ಹಿಂದುಗಳೇ ಎಂಬ ಭಾಗದಲ್ಲಿ ದಲಿತ ಬದುಕು ಹಿಂದುವಿನ ಬದುಕಿಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಶೋಧಿಸುತ್ತಾರೆ. ಪುರಾಣ ಮತ್ತು ಚರಿತ್ರೆಯಲ್ಲಿ ದಲಿತನ ಬದುಕನ್ನು ವಿಶೇಷಿಸುತ್ತಲೇ ಅಧುನಿಕತೆ ಮತ್ತು ದಲಿತತೆಯನ್ನು ಕುರಿತು ಹೇಳುತ್ತಾರೆ. ಆಧುನಿಕತೆ ಅಸ್ಪೃಶ್ಯತೆಯನ್ನು ನೀಗಿಸುತ್ತೆ ಎಂಬ ನಂಬಿಕೆ ಹುಸಿಯಾದ ಬಗೆಯನ್ನು ವಿವರಿಸುತ್ತಾರೆ.

ಅಧ್ಯಾಯ ಮೂರರಲ್ಲಿ ಕರ್ನಾಟಕದಲ್ಲಿ ಸಂಭವಿಸಿದ ದಲಿತರ ಮೇಲಿನ ದೌರ್ಜನ್ಯ ವಿವರಣೆಯನ್ನು ನೀಡುತ್ತಾರೆ. ಇವರಲ್ಲಿ ಸಾಸನೂರು, ಟಕ್ಕಳ, ಸಾಲಹಳ್ಳಿ, ಬೆಂಡಿಗೇರಿ ಮಡನಾಳ, ಗಾಣಿಗೇರ ಪ್ರಕರಣ, ಕಮ್ಮನಸರಗಿ, ಖಾನಾಪುರ, ವಣೇನೂರು, ನೀಲೂರು, ಬದನವಾಳು ಪ್ರಕರಣ, ಕಂಬಾಲಪಲ್ಲಿ, ಕಮಲಾಪುರ ಮುಂತಾದ ಊರುಗಳಲ್ಲಿ ನಡೆದ ದೌರ್ಜನ್ಯ ಪ್ರಕರಣಗಳನ್ನು ದಾಖಲಿಸುತ್ತಾರೆ. ಈ ಪ್ರಕರಣಗಳು ಮಾಹಿತಿದಾಯಕ ವಾಗಿದೆ. ಈ ಮಾಹಿತಿಗಳು ಆರಕ್ಷಕ ಠಾಣೆಯನ್ನು ಏರಿದ ಪ್ರಕರಣದ ಮಾಹಿತಿಗಳಾಗಿವೆ. ಆದರೆ ಆರಕ್ಷಕ ಠಾಣೆಗೆ ಏರದ ಬಹಳಷ್ಟು ಪ್ರಕರಣಗಳು ರಾಜಿ–ಸಂಧಾನದ ಮೂಲಕ ಬಗೆಹರಿದಿವೆ. ಕೃತಿಕಾರರು ಆರಕ್ಷಕ ಠಾಣೆ ಕೇಸುಗಳನ್ನು ಮಾತ್ರ ಗಮನಹರಿಸಿದ್ದಾರೆ. ಆದರೂ ಸಹ ಅಧ್ಯಯನದ ದೃಷ್ಟಿಯಿಂದ ಕನ್ನಡ ಸಂದರ್ಭದಲ್ಲಿ ಇಂತಹ ಮಾಹಿತಿಗಳ ಕೊರತೆ ಇದೆ. ಬಿಡಿಬಿಡಿಯಾಗಿ ಕಾಲದ ಅಂತರದಲ್ಲಿ ಕಾಣಿಸಿಕೊಂಡರೂ ಸಮಗ್ರತೆ ದಕ್ಕಿರಲಿಲ್ಲ. ಅಂತಹದೊಂದು ಕೊರತೆಯನ್ನು ಈ ಕೃತಿ ನೀಗಿದೆ ಎಂದರೆ ತಪ್ಪಾಗಲಾರದು. ಆದರೆ ನಮ್ಮ ಕರ್ನಾಟಕದ ಓದುಗ ಸಮುದಾಯ ಅದರಲ್ಲೂ ದಲಿತ ಓದುಗ ಸಮುದಾಯಗಳಿಗೆ ನಿರೀಕ್ಷೆಯಷ್ಟು ಓದುಗ ವ್ಯಾಪ್ತಿ ಇಲ್ಲ. ಬಹುತೇಕವಾಗಿ ದಲಿತನಿಗೆ

ಇರಬೇಕಾದ ಜಾಗೃತ ಪ್ರಜ್ಞೆಯನ್ನು ಶಿಕ್ಷಣದ ಮೂಲಕ ಪಡೆಯುವಲ್ಲಿ ಸೋತಿದ್ದಾರೆ. ಇಂತಹ ಪ್ರಕರಣಗಳು ನಡೆದ ಸಂದರ್ಭದಲ್ಲಿ ಒಂದಿಷ್ಟು ಪ್ರತಿಭಟನೆಗಳು ನಡೆಯುತ್ತವೆ. ನಂತರ ಎಲ್ಲವೂ ತಣ್ಣಗಾಗುತ್ತವೆ. ಬೇರೆ ಬೇರೆ ದೃಷ್ಟಿಕೋನಗಳಿಂದ ಅರ್ಥೈಸುವ ಪ್ರಯತ್ನವೂ ನಡೆಯುವುದಿಲ್ಲ. ಹಾಗಾಗಿ ಈ ಪ್ರಕರಣಗಳು ಸಮಾಜದ ಮುಖ್ಯವಾಹಿನಿಗೆ ಬಂದು ಹೆಚ್ಚು ಚರ್ಚಿತವಾಗುವುದಿಲ್ಲ.

ಅಧ್ಯಾಯ ನಾಲ್ಕರಲ್ಲಿ ದಲಿತ ಬದುಕಿನ ಜೊತೆ ಹಿಂದುಳಿದ ವರ್ಗಗಳಲ್ಲಿ ಅದರಲ್ಲೂ ಮಹಿಳೆಯ ಬದುಕಿನಲ್ಲಿ ಇರುವ ಧಾರ್ಮಿಕ ನೆಲೆಯ ಅಮಾನವೀಯ ಆಚರಣೆಗಳನ್ನು ಶೋಧಿಸುತ್ತಾರೆ. ಜೀವನದ ವಿವಿಧ ಘಟ್ಟಗಳಾದ ಹುಟ್ಟು, ನಾಮಕರಣ, ಮೈನೆರೆಯುವಿಕೆ, ಮದುವೆ, ಬಾಣಂತನ, ಸಾವು ಇವುಗಳು ಕೆಳವರ್ಗದ ಮತ್ತು ಹಿಂದುಳಿದ ಸ್ತ್ರೀಯರಲ್ಲಿ ಧಾರ್ಮಿಕ ನೆಲೆಯಲ್ಲಿ ಬಂಧಿತವಾಗಿರುವುದನ್ನು ಲೇಖಕರು ಹೊರಹಾಕುವ ಪ್ರಯತ್ನ ಮಾಡಿದ್ದಾರೆ. ದೇವದಾಸಿ, ಪಾತರದವರು, ಬಸವಿಯರು, ಚಾರಿಬಸವಿಯರು, ಅರೆಬೆತ್ತಲೆ ಸೇವೆ, ಬೇವಿನುಡಿಗೆ, ಕೊಡೆ ಹೊರುವುದು, ಕುರಿ ಮಲಗಿಸುವುದು ಈ ಸಾಮಾಜಿಕ ಮತ್ತು ಧಾರ್ಮಿಕ ಅನಿಷ್ಟಗಳನ್ನು ಸಾಂದರ್ಭಿಕ ನೆಲೆಯಿಂದ ವಿವರಿಸುತ್ತಾರೆ. ಇವುಗಳ ಕ್ರಿಯಾಗತ ಸಂದರ್ಭದಲ್ಲಿ ಇಷ್ಟೊಂದು ಅಮಾನವೀಯವಾಗಿ ಕಾಣುವುದಿಲ್ಲ. ಆದರೆ ಶಿಕ್ಷಿತ ಸಮುದಾಯದಲ್ಲಿ ವಿಶ್ಲೇಷಿಸಲ್ಪಟ್ಟರೆ ಅತ್ಯಂತ ಅಮಾನವೀಯ ಮತ್ತು ಕ್ರೌರ್ಯವಾಗಿ ಕಾಣುತ್ತದೆ. ದಲಿತ ಮತ್ತು ಹಿಂದುಳಿದ ವರ್ಗ ಮತ್ತು ಅಲೆಮಾರಿ ಸ್ತ್ರೀಯರು ಧಾರ್ಮಿಕ ವಾಗಿ ಅನುಭವಿಸುವ ಯಾತನೆಗಳು ಪುರೋಹಿತಶಾಹಿಯಿಂದ ನಿಯಮಿಸಲ್ಪಟ್ಟವು ಎಂಬುದನ್ನು ಅರಿಯಬೇಕಾಗಿದೆ.

ಅಧ್ಯಾಯ ಐದರಲ್ಲಿ ಸಂವಿಧಾನದತ್ತವಾಗಿ ಬಂದ ಕೆಲವು ಕಾಯಿದೆಗಳ ಪಟ್ಟಿಯನ್ನು ನೀಡುತ್ತಾರೆ. ಆದರೆ ಕಾಯಿದೆಗಳ ಅನುಷ್ಠಾನ ಮತ್ತು ವಿಫಲತೆಗಳನ್ನು ಜರುಗಿದ ಘಟನೆಗಳ ಮೂಲಕ ವಿಸ್ತರಿಸಿದ್ದರೆ ಈ ಮತ್ತಷ್ಟು ಕೃತಿಗೆ ಮಹತ್ವ ಹೆಚ್ಚಾಗುತ್ತಿತ್ತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯಿದೆ-೧೯೮೯ ಕರ್ನಾಟಕದಲ್ಲಿ ಸಫಲವಾಗಿದೆಯೇ, ವಿಫಲವಾಗಿದೆಯೇ ಅಥವಾ ದುರುಪಯೋಗವಾಗಿದೆಯೇ ಎನ್ನುವುದನ್ನು ಒಂದೆರಡು ಘಟನೆಗಳ ಮೂಲಕ ವಿವರಿಸಬಹುದಾಗಿತ್ತು. ಯಾಕೆಂದರೆ ಈ ಕಾಯಿದೆಯ ಬಗ್ಗೆ ಮೇಲ್ವರ್ಗದ ಜಾತಿಗಳು ಅಪಪ್ರಚಾರ ಮಾಡುತ್ತಿರುವ ಸಂದರ್ಭದಲ್ಲಿ ಅದರ ಮಹತ್ವವನ್ನು ಉದಾಹರಣೆಯ ಮೂಲಕ ವಿವರಿಸಬಹುದಾಗಿತ್ತು.

ಅಧ್ಯಾಯ ಆರರಲ್ಲಿ ದಲಿತರಿಗೆ ಒಂದಿಷ್ಟು ದಾರಿ ತೋರುವ ವಿಷಯ ಪ್ರಸ್ತಾಪಿತ ವಾಗಿದೆ. ಈ ಕೃತಿ ತನ್ನ ಮಿತಿಯಲ್ಲೆ ದಲಿತ ಬದುಕಿನ ವಿಶ್ಲೇಷಣೆಯನ್ನು ಮಾಡಿರುವುದು ಅನಾರೋಗ್ಯ ಸಮಾಜಕ್ಕೆ ಮದ್ದು ಎನ್ನುವ ರೀತಿಯಲ್ಲಿ ಕಂಡು ಬರುತ್ತದೆ. ಕನ್ನಡ ಸಂದರ್ಭದಲ್ಲಿ ಇಂತಹ ವಿಶ್ಲೇಣಾತ್ಮಕ ಬರಹಗಳ ಕೊರತೆ ಇದೆ. ಆದರೂ ಈ ಕೃತಿ ಪರಿಪೂರ್ಣ ಎಂದೇನೂ ಅಲ್ಲ, ಆ ದಾರಿಯ ಕಡೆ ತೋರುಗಂಬವಾಗಿ ನಿಂತಿದೆ.

ಬಗ್ಗನಡು ನಾಗಭೂಷಣ

೯. ಅರಕೇರಿ ಅಮೋಘಸಿದ್ಧೇಶ್ವರ

ಅರಕೇರಿ ಅಮೋಘಸಿದ್ಧೇಶ್ವರ, ಡಾ. ಚನ್ನಪ್ಪ ಕಟ್ಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೧೬+೮೬, ಬೆಲೆ ರೂ. ೬೦/-

ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ಸಮುದಾಯಗಳ ಅಧ್ಯಯನ ಪ್ರಸ್ತುತತೆಯನ್ನು ಪಡೆದಿದೆ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿ, ಕನ್ನಡದಲ್ಲಿ ಸಾಮುದಾಯಿಕ ಹಿನ್ನೆಲೆಯ ಅನನ್ಯತೆಗಳನ್ನು ಹುಡುಕುವ ಪ್ರಯತ್ನಗಳು ಹಿಂದೆಂದಿಗಿಂತಲೂ ಇಂದು ಬಹು ತೀವ್ರತೆಯಿಂದ ನಡೆಯುತ್ತಿವೆ.

ಈ ಹಿನ್ನೆಲೆಯಲ್ಲಿ ಹಾಲುಮತ ಸಂಸ್ಕೃತಿಯೆಂದು ಕರೆಯಲ್ಪಡುವ ಕುರುಬರ ಸಾಂಸ್ಕೃತಿಕ ವಿಶೇಷತೆಗಳನ್ನು ಶೋಧಿಸುವ ಅನೇಕ ಕ್ರಿಯಾ ಯೋಜನೆಗಳನ್ನು ಅನೇಕ ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಅಧ್ಯಯನ ಪೀಠಗಳು ಕಳೆದ ದಶಕದಿಂದ ಮಾಡುತ್ತಾ ಬಂದಿರುವುದನ್ನು ಕಾಣಬಹುದು.

ಮೂಲತಃ ಪಶುಪಾಲನ ಸಂಸ್ಕೃತಿಯಿಂದ ತಮ್ಮ ಬದುಕನ್ನು ರೂಪಿಸಿಕೊಂಡ ಹಾಲುಮತಸ್ಥರು ಪ್ರಾಚೀನ ಭಾರತದ ಆದಿವಾಸಿಗಳಾದ ದ್ರಾವಿಡ ಮೂಲದವರಾಗಿದ್ದಾರೆ. ಪ್ರಾರಂಭದಿಂದಲೇ ಪಶುಗಾಹಿ ವೃತ್ತಿಯಿಂದ ಪ್ರಕೃತಿಯ ನಡುವೆಯೇ ತಮ್ಮ ಬದುಕನ್ನು ಕಟ್ಟಿಕೊಂಡ ಕುರುಬ ಸಮುದಾಯವು ಆ ಹಿನ್ನೆಲೆಯಲ್ಲಿಯೇ ತನ್ನ ಬದುಕಿನ ಅನೇಕ ಸಂಕರಗಳನ್ನು ಪಡೆಯುತ್ತಾ ಬದಲಾವಣೆಗಳನ್ನು ಪಡೆದುಕೊಂಡು ವಿಶಿಷ್ಟವೆನಿಸಿದೆ.

ಈ ಸಮುದಾಯವು ತನ್ನ ಬದುಕು, ಸಂಸ್ಕೃತಿಯ ಎಲ್ಲ ವಿವರಗಳನ್ನು ಶಿಷ್ಟ ಸಾಹಿತ್ಯದಂತೆಯೇ ಜಾನಪದ ಕಾವ್ಯಗಳ ಮೂಲಕ ಕಟ್ಟಿಕೊಂಡು ಬಂದಿರುವುದನ್ನು ಕಾಣಬಹುದು. ಶ್ರಮಮೂಲ ಸಿದ್ಧಾಂತದ ತಳಹದಿಯಲ್ಲಿ ಸೃಷ್ಟಿಯಾಗಿರುವ ಈ ಸಮುದಾಯದ ಸಾಹಿತ್ಯ, ಪುರಾಣ, ಮಹಾಕಾವ್ಯಗಳು ತುಂಬಾ ಕ್ರಿಯಾಶೀಲತೆಯನ್ನು ಹೊಂದಿವೆ. ಶಿಷ್ಟ ಸಾಹಿತ್ಯದಲ್ಲಿ ಹೇಗೆ ಪುರಾಣಗಳು ಇರುವವೋ ಅಂತೆಯೇ ತನ್ನ ಕುಲದೈವವನ್ನು ಸೃಷ್ಟಿ ಮಾಡಿಕೊಂಡು ಅಂತಹ ಕುಲದೈವ, ಸಾಂಸ್ಕೃತಿಕ ವೀರರ ಚರಿತ್ರೆಗಳನ್ನು ಕಟ್ಟಿಕೊಳ್ಳುವುದರ ಮೂಲಕ ಭಾರತದ ಮೂಲ ನೆಲೆಯಾದ ಕುಲಮೂಲ ಸಂಸ್ಕೃತಿಯ ಹಿರಿಮೆಯನ್ನು ಎತ್ತಿಹಿಡಿದಿವೆ.

ಹಾಲುಮತ ಸಂಪ್ರದಾಯದಲ್ಲಿ ಅನೇಕ ಜನ ಸಾಂಸ್ಕೃತಿಕ ವೀರರು ಕಂಡು ಬರುತ್ತಾರೆ. ಅವರುಗಳಲ್ಲಿ ಮುಖ್ಯರಾದವರೆಂದರೆ ಶಾಂತಮುತ್ತಯ್ಯ, ಸಿದ್ಧಮಾಂಕ, ಮಾಳಿಂಗರಾಯ, ಗೊಲ್ಲಾಳೇಶ್ವರ ಹಾಗೂ ಅಮೋಘಸಿದ್ಧ. ಇವರುಗಳಲ್ಲಿ ಅಮೋಘಸಿದ್ಧನು ಸಿದ್ಧ ಪರಂಪರೆಯ ವ್ಯಕ್ತಿಯಾಗಿದ್ದಾನೆ. ಇಂತಹ ಅಮೋಘಸಿದ್ಧನ ನೆಲೆ ಇರುವಂತದ್ದು ಬಿಜಾಪುರ ಜಿಲ್ಲಾ ಕೇಂದ್ರದಿಂದ ೧೫ ಕಿಲೋಮೀಟರ್ ದೂರದಲ್ಲಿ ಇರುವ ಅರಕೇರಿ ಗ್ರಾಮದಲ್ಲಿ. ಇದರ ಪಕ್ಕದಲ್ಲಿ ಇರುವಂತಹ ಮುಮ್ಮಟಗುಡ್ಡವೆನ್ನುವ ಪ್ರದೇಶದಲ್ಲಿ ಅಮೋಘಸಿದ್ಧನ ದೇವಸ್ಥಾನವಿರುವುದನ್ನು ಕಾಣಬಹುದು.

ಅಮೋಘಸಿದ್ಧನು ಭಾರತೀಯ ಪರಂಪರೆಯಲ್ಲಿ ಅತ್ಯಂತ ವಿಶಿಷ್ಟವೆನಿಸುವ ಸಿದ್ಧ ಪರಂಪರೆಗೆ ಸೇರಿದವನು. ಬದುಕಿನ ಹುಡುಕಾಟ ಮಾಡುತ್ತಾ ತನ್ನದೇ ಆದ ಅಸ್ಮಿತೆಯನ್ನು ಕಟ್ಟುತ್ತಾ ಸಂಘರ್ಷದ ಹಾದಿಯನ್ನು ಸೃಷ್ಟಿಸುವ ಈ ಪಂಥದಲ್ಲಿ ಜೀವನಶೋಧ ಕಂಡುಬರುತ್ತದೆ.

ಅಲ್ಲದೆ ಅಮೋಘಸಿದ್ಧನ ಪರಂಪರೆಯು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿಯೂ ಕಂಡುಬರುತ್ತದೆ. ಬಹು ವಿಸ್ತಾರವಾಗಿ ಈ ರೀತಿಯಲ್ಲಿ ಹಬ್ಬಿರುವ ಅಮೋಘಸಿದ್ಧನ ಸಾಂಸ್ಕೃತಿಕ ಚರಿತ್ರೆಯನ್ನು ಕುರಿತಂತೆ ಇಲ್ಲಿವರೆಗೂ ಅಧ್ಯಯನ ನಡೆದಿದ್ದು ಅತಿ ವಿರಳ. ಈ ದೃಷ್ಟಿಯಿಂದ ವಿದ್ವಾಂಸರಾದ ಡಾ. ಚನ್ನಪ್ಪ ಕಟ್ಟಿಯವರ "ಅರಕೇರಿ ಅಮೋಘಸಿದ್ಧೇಶ್ವರ" ಕೃತಿ ಅತ್ಯಂತ ಮಹತ್ವದ್ದೆನಿಸುತ್ತದೆ.

ಈ ಕೃತಿ ಅನೇಕ ಲೇಖಕರು ವಿವಿಧ ರೀತಿಯ ದೃಷ್ಟಿಕೋನದಲ್ಲಿ ಅಧ್ಯಯನ ನಡೆಸಿ ಸಿದ್ಧಪಡಿಸಿದ ಸಂಕಥನ ಮಾದರಿಯ ಅಧ್ಯಯನವಾಗಿದೆ. ತಮ್ಮ ತಮ್ಮ ದೃಷ್ಟಿಕೋನ ದಲ್ಲಿ ಲೇಖನಗಳನ್ನು ಸಿದ್ಧಪಡಿಸಿರುತ್ತಾರೆ.

ಹಾಲುಮತ ಸಮುದಾಯದ ಸಿದ್ಧಪುರುಷರಲ್ಲಿ ಅಮೋಘಸಿದ್ಧನು ಪ್ರಮುಖ ಸಾಂಸ್ಕೃತಿಕ ವೀರನಾಗಿ ಕಂಡುಬರುತ್ತಾನೆ. ಜನಪದ ಹಾಲುಮತ ಮಹಾಕಾವ್ಯದಲ್ಲಿ ಪ್ರಾರಂಭದಲ್ಲಿ ಬಾಳಾಭರಮನ ಜೊತೆ, ಕೊನೆಯಲ್ಲಿ ಮಾಳಿಂಗರಾಯನ ಜೊತೆಯಲ್ಲಿ ಸಮೀಕರಿಸಿ ನೋಡಲಾಗಿದೆ. ಈ ಕಾವ್ಯದಲ್ಲಿ ಶೈವ ಪುರಾಣಗಳ ರೀತಿಯಲ್ಲಿ ಅವನ ಬದುಕನ್ನು ಚಿತ್ರಿಸಲಾಗಿದೆ.

ಕುರುಬ ಸಮಾಜದ ಸಾಂಸ್ಕೃತಿಕ ಪರಂಪರೆಯಲ್ಲಿನ ರೇವಣ್ಣಸಿದ್ಧ, ಸಿದ್ಧರಾಮ, ಅಮೋಘಸಿದ್ಧೇಶ್ವರ ಎಂಬ ಮೂರು ಪಂಥಗಳಿವೆ. ಶ್ರಮಮೂಲ ಪರಂಪರೆಗೆ ಸೇರಿದ ಈ ಮೂರೂ ಪರಂಪರೆಗಳೂ ಕ್ರಿಯಾಶೀಲ ಮಾನವ ಬದುಕನ್ನು ತಿಳಿಸುತ್ತವೆ. ಆದರೆ ಅಮೋಘಸಿದ್ಧೇಶ್ವರನ ಬಗ್ಗೆ ಕೇವಲ ಮೌಖಿಕ ಕಾವ್ಯ ಸಂಗ್ರಹವನ್ನು ಇಲ್ಲಿಯ ವರೆಗೂ ಮಾಡಲಾಗಿತ್ತೇ ವಿನಃ ಪ್ರಾಯಶಃ ಇಡಿಯಾದ ಅಧ್ಯಯನ ನಡೆದಿಲ್ಲವೆನ್ನ ಬಹುದು. ಅಂತಹ ಒಂದು ಸಮಗ್ರವಾದ ಒಳನೋಟವನ್ನು ಡಾ. ಚನ್ನಪ್ಪ ಕಟ್ಟಿಯವರು "ಅರಕೇರಿ ಅಮೋಘಸಿದ್ಧೇಶ್ವರ" ಕೃತಿಯಲ್ಲಿ ಸಾಧಿಸಿದ್ದಾರೆ.

ಅಮೋಘಸಿದ್ಧನ ಪರಂಪರೆಗೆ ಸಂಬಂಧಿಸಿದ ಮೌಖಿಕ ಕಾವ್ಯ ಚರಿತ್ರೆ, ತತ್ವ, ವಂಶ, ಪರಿವಾರ, ಪರಿವಾರದೇವತೆಗಳು, ಉತ್ಸವಗಳು ಒಡೆಯರ ಮೌಖಿಕ ರಚನೆಗಳು ಹೀಗೆ ಅನೇಕ ರೀತಿಯಲ್ಲಿ ಬಿಡಿ ಬಿಡಿ ಸಂಗತಿಗಳನ್ನು ಚರ್ಚಿಸುತ್ತ ಸಮಗ್ರ ವಿವರಣೆಯನ್ನು ತಮ್ಮ ಕೃತಿಯಲ್ಲಿ ಕೊಡುತ್ತಾರೆ. ಹಾಗೆ ನೋಡಿದರೆ ಕುಲಮೂಲ ಬೇರುಗಳ ಅಧ್ಯಯನಕ್ಕೆ ಇದು ಬಹುಮುಖ್ಯ ಕೊಡುಗೆಯಾಗಿದೆ.

ಲಿಂಗಣ್ಣ ಜಂಗಮರಹಳ್ಳಿ

೧೦. ಕರ್ನಾಟಕದ ಅನನ್ಯ ಸಾಂಸ್ಕೃತಿಕ ದಾಖಲೆಯಾಗಿ: ಮೈಲಾರ

ಮೈಲಾರ, ಸಂ.ಡಾ.ಷಿ.ಮಹದೇವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೧೬+೧೦೬+೧೬, ಬೆಲೆ ರೂ. ೮೦/-

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮೈಲಾರದ ಸ್ಥಾನ ವಿಶಿಷ್ಟವಾದುದು. ಅದರ ಪುರಾತನತೆ ಸುಮಾರು ೧೨ನೇ ಶತಮಾನಗಳಿಗಿಂತಲೂ ಹಿಂದಕ್ಕೆ ಹೋಗುತ್ತದೆ. ಅಲ್ಲಿಂದ ಇಲ್ಲಿಯವರೆಗೂ ಅನೇಕ ಕ್ರಿಯಾಶೀಲತೆಗಳನ್ನು ಪಡೆದುಕೊಂಡು ಇಂದು ದಕ್ಷಿಣ ಭಾರತದ ಬಹುದೊಡ್ಡ ಆರಾಧ್ಯದೈವವಾಗಿರುವುದು ಕಂಡುಬರುತ್ತದೆ.

ಅಂತಹ ಮೈಲಾರ ಐತಿಹಾಸಿಕವಾಗಿ, ಜನಾಂಗಿಕವಾಗಿ, ಸಾಮಾಜಿಕವಾಗಿ, ಜನಪದೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ತನ್ನದೇ ಆದ ಮಹತ್ವದ ಹಿನ್ನೆಲೆಯನ್ನು ಹೊಂದಿರುತ್ತದೆ. ಈ ಸಂಪ್ರದಾಯದ ದಾಖಲೀಕರಣವನ್ನು ಇತ್ತೀಚೆಗೆ ಮಾಡಲಾಗಿದೆ.

ಮೈಲಾರವು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನಲ್ಲಿ ಇರುವ ಒಂದು ಪುಟ್ಟ ಗ್ರಾಮ. ಅದು ಚಿಕ್ಕದಾಗಿದ್ದರೂ ಅದರ ಸಾಂಸ್ಕೃತಿಕ ಹಿರಿಮೆ ಹಿರಿದಾದುದು. ಹಾಲುಮತ ಸಂಪ್ರದಾಯಕ್ಕೆ ಸಂಬಂಧಿಸಿದ ಪವಾಡಪುರುಷ ಮೈಲಾರಲಿಂಗನ ಜೀವನ ವೃತ್ತಾಂತವನ್ನು ತಿಳಿಸುವ ಮಹಾಯಾತ್ರೆಯ ಕರ್ಮಭೂಮಿ.

ಈ ಜನಪದ ದೈವದ ಬಗ್ಗೆ ಹಾಗೂ ಮೈಲಾರದ ಬಗ್ಗೆ ಅನೇಕ ಜನಪದ ಕಾವ್ಯಸಂಗ್ರಹಗಳು, ಸಂಶೋಧನೆಗಳು, ಲೇಖನಗಳು, ವಿಮರ್ಶೆಗಳು ನಡೆದಿರುವುದು ಕಂಡು ಬರುತ್ತದೆ. ಆದರೆ ಕರ್ನಾಟಕದಲ್ಲಿ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವವುಳ್ಳ ಈ ಸಂಪ್ರದಾಯವನ್ನು ಕುರಿತಂತೆ ಅಂತರ್‌ಶಿಸ್ತೀಯ ಅಧ್ಯಯನ ನಡೆಸಿ ಸಮಗ್ರ ಮಾಹಿತಿಯನ್ನು ಒದಗಿಸುವ ಮುಖ್ಯ ಕೃತಿ ಎಂದರೆ ಡಾ. ಸಿ. ಮಹದೇವ ಅವರು ಸಂಪಾದಿಸಿರುವ 'ಮೈಲಾರ'.

ಮೈಲಾರ ಪುಸ್ತಕವು ಒಂದು ಡಿಸ್ಕೋರ್ಸ್ ಮಾದರಿಯ ಅಧ್ಯಯನದ ಹಿನ್ನೆಲೆಯುಳ್ಳ ಕೃತಿ. ಯಾವುದೇ ಒಂದು ವಸ್ತು, ಸ್ಥಳ, ವಿಷಯವನ್ನು ಡಿಸ್ಕೋರ್ಸ್ ಮಾದರಿಯ ಅಧ್ಯಯನಗಳು ಹೆಚ್ಚು ಅಧಿಕೃತಗೊಳಿಸುತ್ತವೆ. ಅಂತಹ ಅತ್ಯಂತ ಅಧಿಕೃತತೆ ಹಾಗೂ ನಿಖರತೆಯನ್ನು ಈ ಪುಸ್ತಕದ ಲೇಖನಗಳ ಎಲ್ಲಾ ಲೇಖಕರು ಸಾಧಿಸಿರುತ್ತಾರೆ.

ಈ ಕೃತಿಯಲ್ಲಿ ಸುಮಾರು ಆರು ಲೇಖನಗಳಿದ್ದು ವಿವಿಧ ಲೇಖಕರು ಬೇರೆ ಬೇರೆ ಜ್ಞಾನಶಿಸ್ತಿನ ಹಿನ್ನೆಲೆಯಲ್ಲಿ ಲೇಖನಗಳನ್ನು ಬರೆದಿದ್ದಾರೆ. ವಿವಿಧ ರೀತಿಯಲ್ಲಿ ಕ್ಷೇತ್ರಕಾರ್ಯವನ್ನು ಮಾಡುವುದರ ಮೂಲಕ ನಿಖರವಾದ ಮಾಹಿತಿಯನ್ನು ಸಂಗ್ರಹಿಸಿ ಸಮಗ್ರ ಅಧ್ಯಯನ ನಡೆಸಿರುವುದು ಕಂಡು ಬರುತ್ತದೆ.

ಮೈಲಾರ ಪರಂಪರೆಯು ಮುಖ್ಯವಾಗಿ ಕುರುಬ ಸಂಪ್ರದಾಯಕ್ಕೆ ಸಂಬಂಧಿಸಿದುದು. ಮೈಲಾರದಲ್ಲಿ ನೆಲೆಸಿರುವವನು ಮೈಲಾರಲಿಂಗ ಎಂಬ ಜನಪದ ದೈವ. ಈ

ಮೈಲಾರಲಿಂಗನ ಭಕ್ತರು ಕುರುಬರೇ ಮುಖ್ಯವಾದರೂ ಎಲ್ಲಾ ಸಮಾಜದಲ್ಲೂ ಈ ಪರಂಪರೆ ನೆಲೆಯೂರಿರುವುದು ಕಂಡು ಬರುತ್ತದೆ. ಇಂತಹ ಕರ್ನಾಟಕದ ಬಹುಮುಖ್ಯ ಜನಪದ ದೈವ ಪರಂಪರೆಯ ಬಗ್ಗೆ ಸಮಗ್ರ ಚಿತ್ರಣವನ್ನು ಡಾ. ಸಿ. ಮಹದೇವ ಅವರು 'ಮೈಲಾರ' ಕೃತಿಯಲ್ಲಿ ನೀಡುತ್ತಾರೆ.

ಮೈಲಾರ ಕ್ಷೇತ್ರವು ಉತ್ತರ ಕನಾಟಕದ ಬಯಲುಪ್ರದೇಶದಲ್ಲಿ ಇರುವ ಸ್ಥಳ. ಇಲ್ಲಿನ ಬಹುಮುಖ್ಯ ನದಿಯಾದ ತುಂಗಭದ್ರ ನದಿಯ ದಂಡೆಯ ಮೇಲಿದೆ. ಅತ್ಯಂತ ಪುರಾತನ ಕಾಲಘಟ್ಟದ ಅವಶೇಷಗಳೂ ಇಲ್ಲಿ ದೊರೆಯುತ್ತವೆ. ಭೌಗೋಳಿಕವಾಗಿ ಈ ಭಾಗ ತುಂಬಾ ವಿಶೇಷವಾಗಿರುತ್ತದೆ. ವಿಜಯನಗರದ ಕಾಲಕ್ಕಿಂತಲೂ ಹಿಂದೆಯೇ ಪ್ರಸಿದ್ಧಿಯಲ್ಲಿರುವ ಮೈಲಾರವನ್ನು ಎಸ್.ವೈ. ಸೋಮಶೇಖರ್ ಅವರು ಪುರಾತತ್ವ ಹಾಗೂ ಭೌಗೋಳಿಕ ಆಧಾರಗಳ ಹಿನ್ನೆಲೆಯಲ್ಲಿ ವಿವರಿಸುತ್ತಾರೆ. ಇಲ್ಲಿ ಅವರು ಅನೇಕ ಸೂಕ್ಷ್ಮ ಅಂಶಗಳಿಂದ ಮೈಲಾರ ಪ್ರದೇಶದ ಅನನ್ಯತೆಯನ್ನು ತಿಳಿಸಿಕೊಡುತ್ತಾರೆ.

ಮೈಲಾರಲಿಂಗೇಶ್ವರನ ಬಗ್ಗೆ ಮೊಟ್ಟಮೊದಲಿಗೆ ಜಾನಪದ ಮೂಲದಿಂದ ಕಾವ್ಯ ಸಂಗ್ರಹಿಸಿದವರು ಡಾ. ಮಂಜುನಾಥ ಬೇವಿನಕಟ್ಟಿ. ಇವರು ಈ ಮೈಲಾರ ಪರಂಪರೆಯನ್ನು ಕುರಿತು ಮೌಖಿಕ ಸಾಹಿತ್ಯ ಹಾಗೂ ಸಾಂಸ್ಕೃತಿಕ ನೆಲೆಗಳು ಎಂಬ ಲೇಖನದಲ್ಲಿ ಜನವರ್ಗದಲ್ಲಿ ಇರುವ ಮೌಖಿಕ ಸಾಹಿತ್ಯಾಧಾರಗಳನ್ನು ಆಧರಿಸಿ ಸ್ಥೂಲ ನೋಟವನ್ನು ಕೊಟ್ಟಿದ್ದಾರೆ.

ಅದೇ ರೀತಿಯಲ್ಲಿ ಈ ಸ್ಥಳ ಹಾಗೂ ಸಂಪ್ರದಾಯದ ಬಗ್ಗೆ ಶಾಸನಗಳಿಂದ ಚರಿತ್ರೆಯ ಆಕರಗಳಿಂದ ದೇವಾಲಯದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಿಂದ ಅರ್ಥವತ್ತಾದ ಅಧ್ಯಯನ ಮಾಡಿ ತಳಸ್ಪರ್ಶಿಯಾದ ವಿಶ್ಲೇಷಣೆ ಮಾಡಿದ್ದಾರೆ. ಆ ಮೂಲಕ ಅರ್ಥವತ್ತಾದ ಮಾಹಿತಿಗಳು ಇಲ್ಲಿ ಸಿಗುತ್ತವೆ. ನಂಬಿಕೆ ಮತ್ತು ಆಚರಣೆಗಳ ಮೂಲಕ ಸಂಸ್ಕೃತಿಯನ್ನು, ಜನಮಾನಸದ ಬದುಕನ್ನು, ತಿಳಿಯುವುದಕ್ಕೆ ಸಹಾಯಕವಾಗುತ್ತದೆ. ಆದ್ದರಿಂದ ಡಾ. ಕೆ. ಕೇಶವನ್‌ಪ್ರಸಾದ್ ಅವರು ಮೈಲಾರಲಿಂಗನ ಸಂಪ್ರದಾಯದ ಸಮುದಾಯದವರಲ್ಲಿ ಇರಬಹುದಾದ ನಂಬಿಕೆ ಮತ್ತು ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಿ ಅಂತರ್‌ಶಿಸ್ತೀಯ ವಿಶ್ಲೇಷಣೆಯನ್ನು ಮಾಡುತ್ತಾರೆ.

ಒಟ್ಟಾರೆಯಾಗಿ ಮೈಲಾರ ಕೃತಿಯು ಸಂಕಥನ ಮಾದರಿಯ ಅಧ್ಯಯನವನ್ನು ಒಳಗೊಂಡಿರುವ ಮುಖ್ಯ ಕೃತಿ. ಇದು ಇನ್ನೂ ಕರ್ನಾಟಕದ ಸಾಂಸ್ಕೃತಿಕ್ಕ ಹಿನ್ನೆಲೆಯ ಪರಂಪರೆಯನ್ನು ಅಧ್ಯಯನಕ್ಕೆ ಒಳಪಡಿಸುವುದಕ್ಕೆ ಮಾರ್ಗದರ್ಶಿಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಲಿಂಗಣ್ಣ ಜಂಗಮರಹಳ್ಳಿ

೧೧. ಜನಪದ ಅಧ್ಯಯನ ದೃಷ್ಟಿಯಿಂದಷ್ಟೇ ಪವಾಡ

ಜನಪದ ಸಾಹಿತ್ಯದಲ್ಲಿ ಪವಾಡಗಳು, ಡಾ.ಎನ್.ಎಸ್.ಸರಸ್ವತಿ ಶ್ರೀಕಂಠಯ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨, ೨೦೧೨, ಪುಟ-೦೭+೨೯೩, ಬೆಲೆ ರೂ. ೧೬೦/-

ಜನಪದವು ಸಾಂಸ್ಕೃತಿಕವಾಗಿ ಸಾಹಿತ್ಯದ ಮೂಲಕ ವಿಶಾಲವಾದ ವಿಸ್ತಾರವನ್ನು ಹೊಂದಿರುವಂಥದ್ದು. ಇಲ್ಲಿಯ ಎಲ್ಲಾ ಕಲೆಯೂ ಈ ನೆಲದ ಕಂಪನ್ನು ಹೊತ್ತು ಪರಿಮಳಿಸುತ್ತದೆ. ಕಥೆ, ಕಾವ್ಯ, ನಾಟಕ, ಒಗಟು, ಗಾದೆ ಹೀಗೆ ಹಲವು ರೂಪಗಳಲ್ಲಿ ಪವಾಡಗಳು ಒಂದು ಆಧ್ಯಾತ್ಮಿಕವಾದ ಪರಂಪರೆಯ ಸ್ಥಾನಮಾನವನ್ನು ಪಡೆದು ಕೊಂಡಿದೆ. ಇಂತಹ ಸಾಹಿತ್ಯದಲ್ಲಿ ತನ್ನ ವಿಶಿಷ್ಟ ಸ್ಥಾನ ಪಡೆದಿರುವ ಪವಾಡಗಳು ಕಲ್ಪನೆಗೆ ಸಿಗದೆ, ನಿರೀಕ್ಷೆಗಳನ್ನು ಮೀರಿ ಬೆಳೆದಿರುವಂತಹದ್ದು. ಅಂತಹ ಪವಾಡಗಳನ್ನು ಕುರಿತು "ಜನಪದ ಸಾಹಿತ್ಯದಲ್ಲಿ ಪವಾಡಗಳು" ಡಾ. ಸರಸ್ವತಿ ಶ್ರೀಕಂಠಯ್ಯನವರ ಸಂಶೋಧನಾ ಕೃತಿ.

ಜನಪದ ಸಾಹಿತ್ಯದಲ್ಲಿ ಪವಾಡಗಳನ್ನು ಕುರಿತ ಸಂಶೋಧನೆಯು ಅಗತ್ಯವಾಗಿದೆ. ಪವಾಡಗಳು ನಮ್ಮ ಇಂದ್ರಿಯಗಳಾಚೆಗೆ ಊಹೆಗೂ ನಿಲುಕದ ಒಂದು ರಮ್ಯಲೋಕ. ಆದರೆ ಅದು ಎಲ್ಲೂ ನಡೆದಿರುವಂಥದ್ದಲ್ಲ. ನಮ್ಮ ಕಾಲಘಟ್ಟದಲ್ಲೇ ನಡೆದಿರುವ ಅಥವಾ ಸ್ವಲ್ಪ ಹಿಂದೆ ನಡೆದಿರುವಂತಹ ಘಟನೆಗಳು ಪವಾಡಗಳು. ಜನಸಾಮಾನ್ಯರ ನಂಬಿಕೆ, ಶ್ರದ್ಧೆಯ ವಿಚಾರ. ಜನಪದರ ಬದುಕಿನ ಪ್ರತಿಯೊಂದು ಘಟನೆಗಳ ಪ್ರಯತ್ನದ ಫಲವೇ ಈ ಪವಾಡಗಳು.

ಪವಾಡಗಳು ನಮ್ಮ ಜೀವನದಲ್ಲಿ ಆಗುವ ಅಚ್ಚರಿಗಳು, ಅತಿಮಾನುಷ ಶಕ್ತಿಗಳು, ಸಾಮಾನ್ಯರಾದ ನಮ್ಮಿಂದ ಆಗದೆ ಇರುವಂಥದ್ದನ್ನು ದೈವಿ ಪುರುಷರು, ಸಾಧಕರು ಮಾಡಿತೋರಿಸುವ ಸಾಧನೆಗಳಾಗಿರುತ್ತವೆ. ಜನಸಾಮಾನ್ಯರಿಗೆ ನಂಬಿಕೆ, ಶ್ರದ್ಧೆಯ ವಿಚಾರ ಸೃಷ್ಟಿಯ ಅನಂತತೆಯಲ್ಲಿ ಅಗೋಚರ ಶಕ್ತಿಗಳು ದೈವೀ ಕೃಪೆಯನ್ನು ಜನಸಾಮಾನ್ಯರು ಪವಾಡಗಳೆಂದು ನಂಬುತ್ತಾರೆ. ನಿಸರ್ಗದ ಬದಲಾವಣೆಗಳೆಲ್ಲ ಪವಾಡವೇ ಸರಿ; ಮಾನವನ ಮುಗ್ಧತೆಗೆ ಸರಳತೆಗೆ ಅತೀತವಾಗಿ ಕಾಣುವ ವಸ್ತುಗಳಲ್ಲಿನ ಬೆರಗು ಕಲ್ಪನೆಯೇ ಬಾಯಿಂದ ಬಾಯಿಗೆ ಕಥಾರೂಪದಲ್ಲಿ ಪವಾಡಗಳಾಗಿರುವುದುಂಟು. ಇವೆಲ್ಲ ಆತನಿಗೆ ಮಾನಸಿಕ ಭದ್ರತೆ, ಸಂತೋಷ ನೀಡಿದೆ. ಭಕ್ತಿ ಪೂಜ್ಯತೆಯ ಸ್ಥಾನವನ್ನು ಅವುಗಳಿಗೆ ದೊರಕಿಸಿಕೊಟ್ಟಿದ್ದಾನೆ.

ಈ ಸಂಶೋಧನಾ ಕೃತಿಯಲ್ಲಿ ಪವಾಡಗಳನ್ನು ಕುರಿತಂತೆ ಅದರ ಸತ್ಯಾಸತ್ಯತೆಗಳನ್ನು ಒರೆಹಚ್ಚುವ, ವೈಜ್ಞಾನಿಕವಾಗಿ ಮನೋವೈಜ್ಞಾನಿಕವಾಗಿ ಚರ್ಚಿಸುವಂತಹ ಉದ್ದೇಶವಿಲ್ಲ. ಹಾಗೆ ಪವಾಡಗಳನ್ನು ಸರಿಯೆಂದು ಸಮರ್ಥಿಸಿಕೊಳ್ಳುವ ಭಾವವೂ ಇಲ್ಲದ ಜನಪದ

ಅಧ್ಯಯನದ ಒಂದು ಭಾಗವಾಗಿ ಅಷ್ಟನ್ನೇ ಏಕರೀತಿಯ ಕ್ರಮದಿಂದ ಪವಾಡಗಳನ್ನು ಕಥೆಗಳಗಷ್ಟೆ ನೋಡಿರುವುದ್ದು ಈ ಸಂಶೋಧನಾ ಕೃತಿಯ ಕೊರತೆಯೂ ಆಗಿದೆ.

ಜನಪದ ಸಾಹಿತ್ಯ ಅಂದಿನ ಜನಜೀವನದ ಕಾಲಘಟ್ಟವನ್ನು, ಮನೋಭಾವಗಳನ್ನು ಅಖಂಡವಾಗಿ ಹಿಡಿದಿರಿಸುವ, ದಾಖಲಿಸುವ ಜವಾಬ್ದಾರಿಯನ್ನು ಹೊತ್ತಿದೆ. ಜಾಗತಿಕ ಜನಪದ ಸಾಹಿತ್ಯದ ಮಟ್ಟದಲ್ಲೂ ಇದು ನಡೆಯಬೇಕು. ಇದಕ್ಕೆ ದೇಶ ಕಾಲಗಳ ಮಿತಿ ಇಲ್ಲ. ಕಾವ್ಯ, ಕಥೆಗಳ ರೂಪದಲ್ಲಿ ಹರಿದು ಬಂದಿರುವ ಪವಾಡಗಳು ಜನರಲ್ಲಿ ಸ್ವರ್ಗ, ನರಕ, ಪಾಪ, ಪುಣ್ಯ, ಧರ್ಮ, ನೀತಿ ಇಂತಹ ಸಾತ್ವಿಕ ಸತ್‌ಸಂಪ್ರದಾಯವನ್ನು ಬೆಳೆಸುವಲ್ಲಿ ಕಾರಣವಾಗಿದೆ. ಅತಿಮಾನುಷ ಶಕ್ತಿಗಳನ್ನು ಕುರಿತು ಭಯ ಗೌರವಗಳ ಜೊತೆಗೆ ಆತನ ಕಥಾ ಕಲ್ಪನೆಯೂ ಇಲ್ಲಿ ಮುಖ್ಯವಾಗುತ್ತದೆ. ಹಿಂದಿನ ಕಾಲಘಟ್ಟದ ಜನರ ಮನಸ್ಥಿತಿಯಷ್ಟೆ ಅತಿ ವೈಜ್ಞಾನಿಕವಾಗಿ ಮುಂದುವರಿದಿರುವ ಇಂದು ಸಹ ಮಾನವ ಬಯಸುವುದು ಅತೀತವಾದ ಆನಂದಕರ ಸಂತೋಷದಗಳಿಗೆಗಾಗಿ. ಅತೀತವಾದ ಕಲ್ಪನೆ ಎಲ್ಲಾ ಕಾಲಕ್ಕೂ ಸಲ್ಲುವಂತಹದ್ದು. ಹಾಗಾಗಿ ಪವಾಡಗಳನ್ನು ಇಂದು ಸಹ ಜನರು ರೋಚಕ ಕ್ಷಣಗಳನ್ನಾಗಿಯೇ ಕಾಣುತ್ತಾರೆ.

ಪವಾಡಗಳು ಸತ್ಯ ಅಥವಾ ಸುಳ್ಳಿನ ವಿವೇಚನೆಯಿಂದ ಹೊರತಾಗಿ ಆ ಪವಾಡ ಸೃಷ್ಟಿಸುವ ಪವಾಡ ಪುರುಷನ ಮೇಲಿನ ದೈವೀಭಾವವೇ ಅವರ ಶರಣಾಗತ ಮನೋಭಾವಕ್ಕೆ ಕಾರಣವಾಗಿದೆ. ಅತೀತವಾದ ಕಥಾಕಲ್ಪನೆಯನ್ನು ಜನಪದ ಕಲಾಕಾರರು ಜನಸಮುದಾಯಕ್ಕೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜನರ ನಂಬಿಕೆ, ಪವಿತ್ರಭಾವವೇ ಪ್ರೇರಣೆ ಪಡೆದು ಪ್ರೋತ್ಸಾಹಗಳಿಂದ ಅವು ಇಂದಿಗೂ ಉಳಿದಿದೆ.

ಪವಾಡಗಳಿಗೆ ವಾಸ್ತವಿಕ ಸತ್ಯದ ನೆಲೆಗಟ್ಟು ಅತ್ಯಂತ ಕಡಿಮೆ. ಪವಾಡಗಳು ಸಾಹಿತ್ಯದ ಒಂದು ಪ್ರಕಾರವೂ ಅಲ್ಲ. ಆದರೆ ದೇಶದ ಸಾಂಸ್ಕೃತಿಕ ಚರಿತ್ರೆಯನ್ನು ರಚಿಸುವಾಗ ಜನಪದ ಸಾಹಿತ್ಯ ಅಪಾರವಾದ ನೆರವನ್ನು ನೀಡುತ್ತದೆ. ಜನರ ಮನಸ್ಸಿನಲ್ಲಿ ದೈವೀಭಾವವನ್ನು ಬಲಪಡಿಸಲು, ಭ್ರಮೆ ಉಂಟುಮಾಡಲು, ಭೀತಿ ಅಧಿಕ ಮಾಡಲು ಹುಟ್ಟಿಕೊಂಡಿರುವಂಥದ್ದೇ ಈ ಪವಾಡಗಳು.

ಇಂದೂ ಪವಾಡಗಳನ್ನು ಕುರಿತು ಹೇಳುವ ಘಟನೆಗಳನ್ನು ಕೇಳುತ್ತಿರುತ್ತೇವೆ. ಅವನ್ನು ವೈಜ್ಞಾನಿಕವಾಗಿ ನೋಡುವ ಮನಸ್ಥಿತಿ ಎಲ್ಲರಲ್ಲೂ ಜಾಗೃತವಾಗಿರುವುದರಿಂದ ಅದನ್ನು ನಂಬುವವರ ಸಂಖ್ಯೆ ಕಡಿಮೆಯಾಗಿದೆ. ಆದರೂ ಅದಮ್ಯ ಕುತೂಹಲ ಆಸಕ್ತಿಯಿಂದ ನಂಬುವ ವಿದ್ಯಾವಂತರು ಇಂದಿಗೂ ಇದ್ದಾರೆ. ಅಂತಹ ಆಚರಣೆಗಳಲ್ಲಿ ಭಾಗಿಯಾಗುತ್ತಾರೆ. ಮಾನವನ ಮನಸ್ಥಿತಿ ಎಲ್ಲಾ ಕಾಲಕ್ಕೂ ಒಂದೇ ರೀತಿಯಾಗಿ ಕೆಲಸ ಮಾಡುತ್ತದೆ. ಅತಿಮಾನುಷ ಶಕ್ತಿಗಳ ಬಗ್ಗೆ ಸದಾ ಕುತೂಹಲವಾಗಿಯೇ ಇರುತ್ತಾನೆ. ಸಂತರು, ಸಿದ್ಧರೂ ಆದ ಮಹಾಪುರುಷರ ಪವಾಡಗಳಿಗೆ ಭಕ್ತಿ ಸಮರ್ಪಣೆಯ ನಂಬಿಕೆ ಇರುತ್ತದೆ. ಅಂಧಶ್ರದ್ಧೆ, ಆಚರಣೆಗಳು, ಮೂಢನಂಬಿಕೆಗಳು, ಅರ್ಥಹೀನ

ಸಂಪ್ರದಾಯಗಳು, ಅತಿಮಾನುಷ ಶಕ್ತಿಯ ನಂಬಿಕೆಗಳು ಸಾಮಾನ್ಯ ಜನತೆಯಲ್ಲಿ ರಕ್ತಗತವಾಗಿ ಬಂದಿರುವುದರಿಂದ ಅವುಗಳು ಸಂಪೂರ್ಣವಾಗಿ ಮರೆಯಾಗಿ ಹೋಗಲು ಸಾಧ್ಯವಾಗಿಲ್ಲ. ಲೇಖಕರು ಪವಾಡಗಳಲ್ಲಿ ಅದರ ಅಧ್ಯಯನದ ಅಗತ್ಯ, ಪವಾಡ ಶಬ್ದದ ನಿಷ್ಪತ್ತಿ, ಅರ್ಥ ವ್ಯಾಪ್ತಿ, ಜನಪದ ಸಾಹಿತ್ಯದ ಪವಾಡಗಳ ಮಹತ್ವ, ಕಾವ್ಯಗಳಲ್ಲಿ ಪವಾಡಗಳು, ಕಥೆಗಳಲ್ಲಿ, ಕಥನ ಗೀತೆಗಳಲ್ಲಿ ಹೀಗೆ ಪವಾಡಗಳ ವರ್ಗೀಕರಣ ಮಾಡುತ್ತಾರೆ.

> "A miracle is something that happens by a special act of deity (god) when it would not possibly happen by the usual processes of nature"

ಪವಾಡಗಳೆಲ್ಲ ಸುಳ್ಳು ಎನ್ನುವಂತೆಯೂ ಇಲ್ಲ. ನಮ್ಮ ಊಹೆಗೆ ನಿಲುಕದ ಎಷ್ಟೋ ಘಟನೆಗಳು ಈ ಜಗತ್ತಿನಲ್ಲಿ ನಡೆಯುತ್ತಲೇ ಇರುತ್ತವೆ. ಅದನ್ನೆಲ್ಲ ದೇವರು ಅಥವಾ ಪವಾಡ ಎಂದೇ ನಂಬಬೇಕಾಗುತ್ತದೆ. ನಮ್ಮನ್ನೆಲ್ಲ ಕಾಯುವ ಒಂದು ಶಕ್ತಿ ಇದೆ ಎಂಬ ನಂಬಿಕೆಯಿಂದಲೇ ಜೀವನ ಸಾಗಿಸಲಾಗುತ್ತದೆ. ಅದನ್ನು ನಂಬಿಯೇ ತಮ್ಮ ಬದುಕಿನ ರಕ್ಷಣೆಯನ್ನು ಆತನಿಗೆ ಒಪ್ಪಿಸಿ ಒತ್ತಡ, ದುಃಖ, ನೋವು, ಅನಾರೋಗ್ಯವನ್ನು ಕಡಿಮೆಗೊಳಿಸಿಕೊಳ್ಳುವ ಸಾಧ್ಯತೆಯೂ ಉಂಟು. ನಮ್ಮ ಬುದ್ಧಿಗೆ ಎಟುಕದ ಎಷ್ಟೋ ಘಟನೆಗಳಿಂದ ನಾವು ನಿಸರ್ಗದಿಂದ ಪ್ರಭಾವಿತರಾಗುತ್ತಲೇ ಇರುತ್ತೇವೆ.

ಕಾವ್ಯಗಳಲ್ಲಿ ಪವಾಡಗಳನ್ನು ಗುರುತಿಸುತ್ತಾ ಮಲೆಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪನ ಕಾವ್ಯ, ಮೈಲಾರಲಿಂಗನ ಕಾವ್ಯ, ಚೌಡಿಕೆ ಕಾವ್ಯ ಹೀಗೆ ದೈವೀ ಪುರುಷರು ಮಾಡಿದ ಪವಾಡರೂಪದ ಕಥೆಗಳು, ಕಾವ್ಯಗಳನ್ನು ಲೇಖಕರು ದಾಖಲಿಸಿದ್ದಾರೆ. ಸಂಶೋಧನ ಗ್ರಂಥವೆಂದರೆ ಅವುಗಳ ಸಹಜತೆಯನ್ನು ಒಂದಿಷ್ಟು ತರ್ಕಕ್ಕೆ ಒಳಪಡಿಸುವ ಕೆಲಸವೂ ಆಗಬೇಕಿತ್ತು. ಪವಾಡರೂಪದ ಕಥೆ, ಕಾವ್ಯಗಳು ದಾಖಲೆಯಾಗಿ ಉಳಿದು ಅವುಗಳಿಂದಾಚೆಗಿನ ಸೃಜನಶೀಲವಾದ ಚಿಂತನೆಗಳು, ಪವಾಡದ ಪ್ರಸಂಗಗಳನ್ನು ಒರೆಹಚ್ಚುವ ಅವುಗಳ ಉದ್ದೇಶ, ವ್ಯಾಪ್ತಿಯನ್ನು ಕಟ್ಟಿಕೊಡುವ ಪ್ರಯತ್ನವೂ ಇಲ್ಲಿ ಆಗದೆ ಇರುವುದು ಒಂದು ಕೊರತೆಯಾಗಿ ಕಾಡುತ್ತದೆ. ಇರುವ ವಿಷಯವನ್ನು ಹೇಳುವುದರಲ್ಲಿ ಯಾವ ಹೆಚ್ಚುಗಾರಿಕೆಯೂ ಈ ಸಂಶೋಧನಾ ಕೃತಿಯಲ್ಲಿ ಕಂಡು ಬರುವುದಿಲ್ಲ.

ನಮ್ಮ ಬದುಕಿನ ಸಾಧ್ಯತೆಗಳನ್ನು ಮೀರಿ ನಡೆಯುವ ಪವಾಡಗಳು ಸದಾ ಕಾಲವೂ ರೋಚಕ, ಕಲ್ಪಿತ, ಸಂತೋಷ ಮನಸ್ಥಿತಿಯೇ ಆಗಿವೆ. ಕಾಲಘಟ್ಟದ ಸಾಂಸ್ಕೃತಿಕ ಹಿರಿತನವನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿ ಈ ಪವಾಡಗಳು ಸಹಕರಿಸುತ್ತವೆ. ಸದಾ ಅಚ್ಚರಿ ಉಂಟುಮಾಡುವ ಪವಾಡಗಳು ಎಲ್ಲರ ಮನಸ್ಸಿನ ಕುತೂಹಲ ತುಂಬುವ ಸಾಧನವಾಗಿದೆ.

ಸುಶೀಲಾ ಸದಾಶಿವಯ್ಯ

೧೨. ಹಾಲಕ್ಕಿ ಒಕ್ಕಲಿಗರು ಒಂದು ಸಾಂಸ್ಕೃತಿಕ ಅಧ್ಯಯನ–ಒಂದು ನೋಟ

ಹಾಲಕ್ಕಿ ಒಕ್ಕಲಿಗರು, ಡಾ. ಎನ್.ಆರ್. ನಾಯಕ, ೩೫, ಗೋಧೂಳಿ ಪ್ರಕಾಶನ, ೫ನೇ'ಬಿ' ಅಡ್ಡರಸ್ತೆ, ಸಿಂಡಿಕೇಟ್ ಬ್ಯಾಂಕ್ ಬಡಾವಣೆ, ತುಂಗಾನಗರ, ಬೆಂಗಳೂರು–೫೬೦೦೯೧, ೨೦೧೨, ಪುಟ–೮+೨೮೦, ಬೆಲೆ ರೂ. ೨೫೦/-

ಡಾ. ಎನ್.ಆರ್. ನಾಯಕರ 'ಹಾಲಕ್ಕಿ ಒಕ್ಕಲಿಗರ ಒಂದು ಸಾಂಸ್ಕೃತಿಕ ಅಧ್ಯಯನ' ಕೃತಿಯ ವಿವರಗಳನ್ನು ಚರ್ಚಿಸಬಹುದು. ಈ ಕೃತಿ ಸಾಂಸ್ಕೃತಿಕವಾಗಿ ಮಹತ್ವ ಪಡೆದ ಕೃತಿ. ಇದು ಮತ್ತೊಮ್ಮೆ ಮುದ್ರಣಗೊಳ್ಳುತ್ತಿರುವುದು ಖುಷಿಯ ವಿಚಾರ. ಸಂಸ್ಕೃತಿ ಅಧ್ಯಯನದ ತಾತ್ವಿಕತೆಯು ಸ್ಪಷ್ಟರೂಪ ಪಡೆಯದ ಹೊತ್ತಿನಲ್ಲಿ ಪ್ರಕಟಗೊಂಡಿದ್ದ ಈ ಕೃತಿ, ಸಂಸ್ಕೃತಿ ಎಂದರೆ ಏನು? ಹೇಗಿದೆ? ಎಂಬ ಸಂಸ್ಕೃತಿ ವ್ಯಾಖ್ಯಾನವನ್ನು ವಿಸ್ತರಿಸಿದೆ ಎಂದರೆ ತಪ್ಪಾಗಲಾರದು. ಈ ಕಾಲಘಟ್ಟದ ಸಂಶೋಧನೆಗಳು ಈ ಅಧ್ಯಯನ ವಸ್ತುವಿಗೆ ಸ್ಫೂರ್ತಿಯೊದಗಿಸುತ್ತಿದೆ. 'ಹಾಲಕ್ಕಿ ಒಕ್ಕಲಿಗರು' ಕೃತಿ ಈಗಾಗಲೇ ಚರ್ಚೆಗೆ ಒಳಗಾಗಿದೆ. ಒಂದು ಉಪಸಂಸ್ಕೃತಿಯಡಿಯಲ್ಲಿ ಸಂಶೋಧನೆಯಾದ ಈ ಗ್ರಂಥ ಈಗ ಇನ್ನೊಂದಿಷ್ಟು ಹೊಸ ಸಂಶೋಧನೆ ಮತ್ತು ಫೋಟೋಗಳನ್ನು ಧರಿಸಿಕೊಂಡು ಹೊಸರೂಪದಲ್ಲಿ ಪ್ರಕಟಗೊಳ್ಳುತ್ತಿದೆ.

ಹಾಲಕ್ಕಿ ಒಕ್ಕಲಿಗರು ಕೃತಿ ಹತ್ತು ಅಧ್ಯಾಯಗಳನ್ನೊಳಗೊಂಡಿದೆ. ಆರಂಭದ ಪೀಠಿಕೆ ಭಾಗದಲ್ಲಿ ಕೃತಿಯ ಸಂಶೋಧನೆಯ ತಾತ್ವಿಕ ಭಿತ್ತಿಯನ್ನು ಕಟ್ಟಿಕೊಡುತ್ತದೆ. ಸಂಸ್ಕೃತಿ ಅಧ್ಯಯನದ ಸಾಧ್ಯತೆಗಳು, ಉತ್ತರ ಕನ್ನಡ ಜಿಲ್ಲೆಯ ವೈಶಿಷ್ಟ್ಯ, ಅಲ್ಲಿನ ಪ್ರದೇಶ, ಪ್ರಾಕೃತಿಕ ವಾತಾವರಣದ ವಿವರ, ಬುಡಕಟ್ಟು, ಜಾತಿಗಳು, ಇತರ ಒಕ್ಕಲು ಜಾತಿಗಳನ್ನು ಕುರಿತ ವಿವರಗಳಿವೆ.

'ಹಾಲಕ್ಕಿ ಒಕ್ಕಲಿಗರು' ಅಧ್ಯಾಯವು ನೇರವಾಗಿ ಈ ಬುಡಕಟ್ಟಿಗೆ ಸಂಬಂಧಿಸಿದೆ. ಹಾಲಕ್ಕಿ ಒಕ್ಕಲು ಅಧ್ಯಯನ ನಡೆದು ಬಂದ ಸಂಶೋಧನ ಪರಂಪರೆಯ ಚಾರಿತ್ರಿಕ ವಿಶ್ಲೇಷಣೆಯಿದೆ. ಹಾಲಕ್ಕಿ ಒಕ್ಕಲು ಎಂಬ ಪದದ ಹಿನ್ನೆಲೆ, ಆ ಸಮುದಾಯದ ಕಥನ ಗಳನ್ನು ಆಧರಿಸಿ ಸಾಮಾಜಿಕ ಸ್ಥಿತಿಗತಿಯನ್ನು ಕಟ್ಟಿಕೊಡುತ್ತದೆ. ಒಕ್ಕಲಿಗರ ಒಳಪಂಗಡಗಳ ವಿವರಣೆಯಿದೆ. ಒಕ್ಕಲಿಗರಿಗೂ ಇತರ ಹಾಲಕ್ಕಿ ಒಕ್ಕಲಿಗರಿಗೂ ಇರುವ ಸಾಮಾಜಿಕ, ಪ್ರಾಕೃತಿಕ ವ್ಯತ್ಯಾಸವನ್ನು ವಿಶ್ಲೇಷಿಸುತ್ತದೆ. ಇದು ಮುಖ್ಯವಾಗಿ ಹಾಲಕ್ಕಿ ಒಕ್ಕಲಿಗರ ಜೀವನ ಕ್ರಮಗಳಿಗೆ ಸಂಬಂಧಿಸಿದುದಾಗಿದೆ. ಕಸುಬು ಆಧಾರಿತ ಬದುಕಿನ ಅವರ ಜೀವನಕ್ರಮವು ಆವರ್ತನ ಕ್ರಮದೊಳಗೆ ಹೇಗೆ ಸೇರಿಸಿಕೊಂಡಿದೆ. ಪರಿಶ್ರಮದಿಂದ ಬದುಕುವ ಅವರ ಬದುಕೇ ಬೇಸಾಯದೊಂದಿಗಿದೆಂಬುದನ್ನು ತಿಳಿಸಿದ್ದಾರೆ. ಅವರ ವಸತಿ, ವೈದ್ಯ ಪದ್ಧತಿ, ಆಹಾರ ಪಾನೀಯ, ಪಾತ್ರೆ, ಉಡುಗೆ–ತೊಡುಗೆಗಳ ವಿವರ ಸ್ಥೂಲ ಅಧ್ಯಯನಕ್ಕೆ ಒಳಪಟ್ಟಿದೆ.

'ಸಮಾಜ ವ್ಯವಸ್ಥೆ' ಅಧ್ಯಾಯ ಎಂಬ ಹಾಲಕ್ಕಿ ಒಕ್ಕಲಿಗರ ಸಮಾಜದೊಳಗಿನ ಸೂಕ್ಷ್ಮತೆಗಳನ್ನು, ಹಾಲಕ್ಕಿ ಒಕ್ಕಲಿಗರು ಚದುರಿರುವ ನೆಲೆಯನ್ನು ಅಧ್ಯಯನಕ್ಕೊಳ ಪಡಿಸಿದ್ದಾರೆ. ಕುಲಾಡಳಿತದ ವಿವರ, ನ್ಯಾಯ ವ್ಯವಸ್ಥೆ ಇತ್ಯಾದಿಗಳ ಮೂಲಕ ಹಾಲಕ್ಕಿ ಸಮಾಜ ಶಿಷ್ಟ ಸಮಾಜಕ್ಕಿಂತ ಹೇಗೆ ಭಿನ್ನತೆಯನ್ನು ಉಳಿಸಿಕೊಂಡಿದೆ ಎಂಬುದು ಈ ಅಧ್ಯಯನದಲ್ಲಿ ಶೋಧಿತವಾದ ಪ್ರಮುಖ ಅಂಶ.

'ಭಾಷೆ ಮತ್ತು ಸಾಹಿತ್ಯ' ಎಂಬ ಅಧ್ಯಾಯವು ನಿಜವಾಗಿ ಹಾಲಕ್ಕಿ ಒಕ್ಕಲಿಗರ ಅಧ್ಯಯನದ ಕೇಂದ್ರವೆಂದರೆ ತಪ್ಪಾಗಲಾರದು. ಯಾಕೆಂದರೆ ಸಂಸ್ಕೃತಿ, ಸಮುದಾಯ ವೊಂದರ ಅಸ್ತಿತ್ವವಿರುವುದು ಆ ಸಮುದಾಯದ ಮೌಖಿಕ ಸಾಹಿತ್ಯದಲ್ಲಿ. ಅಧ್ಯಯನ ಕಾರರು ಆಧುನಿಕ ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಹಾಲಕ್ಕಿಗಳ ಭಾಷಿಕ ನೆಲೆಯನ್ನು ವಿಶ್ಲೇಷಿಸಿದ್ದಾರೆ. ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಮೂಲ ಆಕರಗಳಿಗಿಂತ ಎರಡನೇ ಆಕರವನ್ನು ನೆಚ್ಚಿಕೊಂಡಿದ್ದಾರೆ. ಹಾಲಕ್ಕಿಗಳ ಬದುಕು, ಜನಜೀವನ, ಅಚರಣೆ ಹಾಸುಹೊಕ್ಕಾಗಿರುವುದು ಅವರ ಮೌಖಿಕ ಸಾಹಿತ್ಯದಲ್ಲಿ. ಆದರೆ ಇಲ್ಲಿ ಬಳಸಿರುವುದು ಈಗಾಗಲೇ ಈ ಸಂಶೋಧನೆಗೆ ಹೊರತಾಗಿ ಶೋಧಿಸಿರುವ ಸಾಹಿತ್ಯವನ್ನು. ಆ ಕಾರಣದಿಂದ ಇಲ್ಲಿ ಸಂಶೋಧನೆಗೆ ಗಟ್ಟಿಯಾಗಿ ನಿಲ್ಲಬೇಕಾದ ಸಾಹಿತ್ಯ ಸಮರ್ಥನೆಗೆ ಬೇಕಾಗುವಷ್ಟು ಸಾರ ಒದಗಿಸಿಲ್ಲ. ಎರಡನೇ ಆಕರವನ್ನು ಹೆಚ್ಚಾಗಿ ನೆಚ್ಚಿಕೊಂಡಿರುವುದ ರಿಂದ ಸಾಹಿತ್ಯದಲ್ಲಿ ಹಾಲಕ್ಕಿ ಒಕ್ಕಲಿಗರ ಬದುಕು, ಜನಜೀವನಗಳು ಅಸ್ಪಷ್ಟವಾಗಿ ಕಾಣುತ್ತವೆ. ಜಾನಪದ ಅಧ್ಯಯನದಂತೆ ವಿಭಾಗ ಮಾಡಿಕೊಂಡಿರುವ ಕ್ರಮ ವೈಜ್ಞಾನಿಕ ವಾಗಿದ್ದರೂ ಅವರು ಬಳಸಿಕೊಳ್ಳುವ ಸಾಹಿತ್ಯ ಆಕರಗಳು ಅಪೂರ್ಣವಾಗಿ ಉಲ್ಲೇಖ ವಾಗುತ್ತವೆ. ಹಾಲಕ್ಕಿ ಒಕ್ಕಲಿಗರ ಪ್ರಮುಖ ಸಾಹಿತ್ಯ, ಮಾದೇವರಾಯ, ಹಾಲಕ್ಕಿಗೌಡ, ಸೋಂದೆಸೂರ, ಮುಗಲೂರ ದಂಡು ಮುಂತಾದವುಗಳನ್ನು ವಿಶ್ಲೇಷಣೆಗೆ ಒಳಪಡಿ ಸಿದ್ದಾರೆ. ಅದಕ್ಕೆ ಬೇಕಾದ ಮೌಖಿಕ ಸಾಹಿತ್ಯದ ಪೂರ್ಣಪಾಠವನ್ನು ನೀಡಿಲ್ಲ. ಇದೊಂದು ಕೊರತೆ ಎನಿಸುತ್ತದೆ. ಈ ಸಮುದಾಯದ ಎಲ್ಲ ವಿವರಗಳು ಈ ಕೃತಿಯಲ್ಲಿ ದೊರಕುತ್ತವೆ. ಆದರೆ ಸಾಹಿತ್ಯಕ್ಕೆ ಬೇರೆ ಕೃತಿಗಳನ್ನು ಆಶ್ರಯಿಸಿಕೊಂಡು ಅಪರಿಪೂರ್ಣತೆಗೆ ಕಾರಣ ವಾಗುತ್ತದೆ.

'ಸಂಸ್ಕಾರ' ಎಂಬ ಅಧ್ಯಾಯದಲ್ಲಿ ಹಾಲಕ್ಕಿ ಸಮುದಾಯದ ವಾರ್ಷಿಕಾವರ್ತನ, ಬದುಕಿನ ಪ್ರಮುಖ ಘಟ್ಟಗಳಲ್ಲಿನ ಆಚರಣೆಗಳನ್ನು ಕುರಿತ ಅಧ್ಯಾಯ. ಮದುವೆಯಿಂದ ಮಸಣಕ್ಕೆ ಹೋಗುವವರೆಗಿನ ಎಲ್ಲವುಗಳನ್ನು 'ಸಂಸ್ಕಾರ' ಎಂದು ಕರೆದಿದ್ದಾರೆ. ಈ ಪದವೇ ಗೊಂದಲಕಾರಿ. ಯಾಕೆಂದರೆ ಸಂಸ್ಕಾರ, ಸಂಸ್ಕೃತಿ, ಸಂಸ್ಕೃತ, ಸುಸಂಸ್ಕೃತ ಇತ್ಯಾದಿ ಪದಗಳ ಹುಟ್ಟಿನ ಹಿಂದೆ ಒಂದು ರಾಜಕಾರಣವಿದೆ. ಆ ರಾಜಕಾರಣದ ಪಲ್ಲಟವೇ ಅಧ್ಯಯನದ ಪ್ರಮುಖ ಆಶಯ. ಆದರೆ ಮತ್ತೆ ಪ್ರಧಾನ ಸಂಸ್ಕೃತಿಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಿರುವುದು ಸಮಂಜಸವಲ್ಲವೆನಿಸುತ್ತದೆ. ಆದಾಗ್ಯೂ

ಈ ಅಧ್ಯಾಯದಲ್ಲಿ ಪ್ರತಿ ಆಚರಣೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಮಾನವೀಯ ಪರವಾಗಿರುವ ಆಚರಣೆಗಳನ್ನು ಅಧ್ಯಯನದಲ್ಲಿ ಶೋಧಿಸಿದ್ದಾರೆ. ವಿಧವಾ ವಿವಾಹಕ್ಕೆ ಹಾಲಕ್ಕಿಗಳಲ್ಲಿ ನಿಷೇಧವಿಲ್ಲ. ಮುಂದುವರೆದ ಸಮಾಜಗಳಲ್ಲಿರುವಂತೆ ಅಗೌರವವಿಲ್ಲ. ಕೀಳ್ಮಟ್ಟದ ಸ್ಥಾನವೂ ಇಲ್ಲ(ಪು. ೧೦೦) ಎಂದು ಶಿಷ್ಟ ಸಮಾಜ ಪಾಲಿಸಬೇಕಾದ ಮೌಲ್ಯವನ್ನು ಈ ಕೃತಿ ಶೋಧಿಸಿದೆ.

ಈ ಅಧ್ಯಯನ ಏಕಕಾಲದಲ್ಲಿ ಜಾನಪದೀಯ ಮತ್ತು ಸಾಂಸ್ಕೃತಿಕ ಎರಡು ಆಯಾಮವನ್ನು ಪಡೆದಿದೆ. ಒಂದು ಸಮುದಾಯದ ಅಸ್ಮಿತೆಯನ್ನು ಹುಡುಕುತ್ತಲೇ ಇವತ್ತಿನ ಸಮಾಜಕ್ಕೆ ಅಗತ್ಯ ಮೌಲ್ಯಗಳ ತೋರುಗೈಯಾಗಿ ಅಧ್ಯಯನ ಸಾಗಿದೆ. ಧಾರ್ಮಿಕ ವಿಚಾರದಲ್ಲಿ ಒಂದು ಅಳತೆಗೆ ಸಿಗದೇ ಸಂಕೀರ್ಣವಾಗಿರುವ ಹಾಲಕ್ಕಿಗಳು ಆಚರಣೆ, ಬದುಕಿನ ಕ್ರಮದಲ್ಲಿ ಏಕತಾನತೆಯನ್ನು ಕಂಡುಕೊಂಡಿದ್ದಾರೆ. ಇರುವವರೆಗೂ ದುಡಿದು ತಿನ್ನಬೇಕೆನ್ನುವ ಕಾಯಕ ಜೀವಿಗಳಾದ ಹಾಲಕ್ಕಿಗಳು ತಮ್ಮ ದುಡಿತದಲ್ಲೇ ಸುಖ-ನೆಮ್ಮದಿಯನ್ನು ಕಂಡವರು. ಹಬ್ಬ, ದೈವ ಆಚರಣೆಗಳಲ್ಲಿ ತಮ್ಮ ಕಷ್ಟಗಳನ್ನು ಮರೆಯುವ ವಿಶಿಷ್ಟ ಬಲೀಂದ್ರನನ್ನು ಆರಾಧಿಸುವ, ತಮ್ಮ ಗಟ್ಟಿತನವನ್ನು ತೋರಿಸುವ, ಕಡಲ ತೀರದ ಹಾಲಕ್ಕಿಗಳು ಗೀತ, ಕುಣಿತ, ವಾದ್ಯಗಳನ್ನು ಬಾರಿಸುತ್ತ, ಹಗಣ, ಗುಮಟೆ ಪದ, ಯಕ್ಷಗಾನ ಬಯಲಾಟ, ಸಣ್ಣಾಟಗಳಿಂದ ಜಾನಪದ ಜಗತ್ತನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಕೃಷಿಕರು ತಮ್ಮ ಮೂಲ ಕಸುಬು, ಆರಾಧನೆ, ನಂಬಿಕೆ, ಆಚರಣೆಗಳನ್ನು ಕಳೆದುಕೊಳ್ಳದೆ ಪ್ರದೇಶಕ್ಕೆ ಅನುಗುಣವಾಗಿ ವ್ಯಾಪಕಗೊಳಿಸಿಕೊಂಡಿದ್ದಾರೆ.

ಒಟ್ಟಾರೆ ಇಡೀ ಕೃತಿ ಸಮುದಾಯದ ಪೂರ್ಣಚಿತ್ರಣವನ್ನು ಮನಸ್ಸಿಗೆ ಕಟ್ಟಿಕೊಡುತ್ತದೆ. ಸಮುದಾಯದ ಸಮಗ್ರ ಅಧ್ಯಯನಕ್ಕೊಂದು ಉತ್ತಮ ದಾರಿಯಂತೆ ಈ ಕೃತಿ ರಚನೆಗೊಂಡಿದೆ. ಕುಳಿತಲ್ಲಿಯೇ ಅಧ್ಯಯನ ಮುಗಿಸುವ ಇಂದಿನ ಅಧ್ಯಯನಗಳು ಈ ಕೃತಿಯ ಮೂಲಕ ಕಲಿಯಬೇಕಾಗಿದೆ. ಅಧ್ಯಯನವೆಂಬುದು ಯಾಂತ್ರಿಕವಲ್ಲ. ಅದೊಂದು ಒಳಗೊಳ್ಳುವಿಕೆ. ಅದರೆ ಇತ್ತೀಚೆಗೆ ಅಧ್ಯಯನಗಳು ಜಾತಿಕೇಂದ್ರಿತವಾಗಿ ನಿಲ್ಲುವ ಅಪಾಯದ ನಡುವೆ 'ಹಾಲಕ್ಕಿ ಒಕ್ಕಲಿಗರು' ಕೃತಿ 'ಜಾತ್ಯಾತೀತಗೊಳ್ಳುವ ಗುಣ' ಪಡೆದಿದೆ. ಅಲ್ಲದೇ ಈ ಅಧ್ಯಯನ ಬಹುಮುಖಿಯಾಗಿ ಹೊರಜಗತ್ತಿಗೆ ಪರಿಚಯಗೊಂಡಿದೆ ಎಂದರೆ ತಪ್ಪಾಗಲಾರದು.

ರವಿಕುಮಾರ್ ನೀಹ

೧೩. ಸಮುದಾಯಗಳ ಕನ್ನಡ ಕುರಿತ ಅಧ್ಯಯನ

ಸಮುದಾಯಗಳ ಕನ್ನಡ ಪರಂಪರೆ, ಡಾ. ಎ. ಮೋಹನ ಕುಂಟಾರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ -೫೮೩ ೨೭೬, ೨೦೧೨, ಪುಟ-೧೪+೨೫೦, ಬೆಲೆ ರೂ. ೧೬೦/-

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ಕನ್ನಡ ಭಾಷೆ ಬಗೆಗಿನ ಸಂಶೋಧನೆಗಳನ್ನು ವಿಶ್ವವಿದ್ಯಾನಿಲಯಗಳು ತೀವ್ರಗೊಳಿಸಿದವು. ಕೆಲವು ವಿಶ್ವವಿದ್ಯಾನಿಲ ಯಗಳು ಅಧ್ಯಯನವನ್ನು ಗಂಭೀರವಾಗಿಯೇ ಪರಿಗಣಿಸಿದವು. ಕನ್ನಡ ವಿಶ್ವವಿದ್ಯಾಲ ಯವು ಮೂಲತಃ ಸಂಶೋಧನೆಗೇ ರೂಪುಗೊಂಡ ವಿಶ್ವವಿದ್ಯಾಲಯ. ಹಾಗಾಗಿ ಇಲ್ಲಿನ ಸಂಶೋಧನೆಗಳನ್ನು ಇಡೀ ಕರ್ನಾಟಕವೇ ಸೂಕ್ಷ್ಮವಾಗಿ ಗಮನಿಸುತ್ತದೆ.

ಈ ವಿಶ್ವವಿದ್ಯಾಲಯದಿಂದ ಈಗಾಗಲೇ ಭಾಷಾಭಿವೃದ್ಧಿ ಯೋಜನೆಯಲ್ಲಿ ರೂಪುಗೊಂಡ ಹಲವು ಕೃತಿಗಳು ಚರ್ಚೆಯಲ್ಲಿವೆ.

೧. ದಕ್ಷಿಣ ಭಾರತೀಯ ಜಾನಪದ ಕೋಶ - ಸಂ: ಡಾ. ಸ.ಚಿ. ರಮೇಶ್

೨. ಯಶೋಧರ ಚರಿತೆ ಮತ್ತು ಅಭಿಜಾತ ಪರಂಪರೆ - ಡಾ. ಕರೀಗೌಡ ಬೀಚನಹಳ್ಳಿ

೩. ಹರದೇಶಿ–ನಾಗೇಶಿ; ಕಲೆ ಮತ್ತು ಕಲಾವಿದರು - ಡಾ. ಶೈಲಜಾ ಹಿರೇಮಠ

೪. ಕನ್ನಡ ಮೋಡಿಲಿಪಿ: ಸಂರಚನೆ ಮತ್ತು ಸಂವರ್ಧನೆ - ಡಾ. ವೀರೇಶ್ ಬಡಿಗೇರ

೫. ದಲಿತರ ಬದುಕು–ಮೆಲುಕು - ಡಾ. ಎನ್. ಚಿನ್ನಸ್ವಾಮಿ ಸೋಸಲೆ

೬. ನುಡಿಸಂಕರ ಸಾಹಿತ್ಯ - ಡಾ. ರಹಮತ್ ತರೀಕೆರೆ

ಈ ಎಲ್ಲ ಸಂಶೋಧನಾ ಕೃತಿಗಳು ಕನ್ನಡ ಭಾಷೆಯ ದಿಕ್ಕುದೆಸೆಗಳನ್ನು ಮತ್ತಷ್ಟು ವಿಸ್ತರಿಸಿವೆ. ಅದೇ ದಾರಿಯಲ್ಲಿ ಕಾಸರಗೋಡಿನ ಪರಿಸರವನ್ನಿಟ್ಟುಕೊಂಡು ಶಾಸ್ತ್ರೀಯ ನೆಲೆಯಲ್ಲಿ ಡಾ. ಎ. ಮೋಹನ ಕುಂಟಾರ್‌ರವರು ತಲಸ್ಪರ್ಶಿ ಅಧ್ಯಯನ ನಡೆಸಿದ್ದಾರೆ.

'ಸಮುದಾಯಗಳ ಕನ್ನಡ ಪರಂಪರೆ' ಎಂಬ ಅಧ್ಯಯನದ ಮೂಲಕ ಕಾಸರಗೋಡು ಪರಿಸರದಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತ್ಯಂತರಗಳನ್ನು ಭಾಷೆಯ ಹಿನ್ನೆಲೆಯಲ್ಲಿ ಹುಡುಕಾಡಿದ್ದಾರೆ. ಇಲ್ಲಿನ ಕನ್ನಡ ಸಮುದಾಯಗಳು ಅನ್ಯ ಪ್ರದೇಶಗಳಿಂದ ವಲಸೆ ಬಂದು ನೆಲೆಸಿದವರು. ಇವರು ಹೇಗೆ ವಿವಿಧ ಅವಸ್ಥೆಗಳನ್ನು ದಾಟಿ ಕನ್ನಡ ಮೂಲವನ್ನು ಬಳಸಿ ಉಳಿಸಿಕೊಂಡು ಬಂದಿದ್ದಾರೆ ಎಂಬುದನ್ನು ಹಲವು ದೃಷ್ಟಿಕೋನ ದಿಂದ ಕಂಡಿರಿಸಿದ್ದಾರೆ. ಇದರಲ್ಲಿ ಒಟ್ಟು ಆರು ಅಧ್ಯಾಯಗಳಿದ್ದು, ಅಧ್ಯಾಯಗಳ ಉದ್ದಕ್ಕೂ, ಕನ್ನಡ–ತುಳುವಿಗೂ ಇರುವ ಸಂಬಂಧಾಂತರಗಳನ್ನು ಗುರುತಿಸಿದ್ದಾರೆ.

'ಕನ್ನಡ' ಎಂಬುದು ಒಂದಲ್ಲ. ಕವಿರಾಜಮಾರ್ಗಕಾರ ಹೇಳುವಂತೆ 'ಕನ್ನಡಂಗಳ್' ಎನ್ನುವಂತೆ ಹಲವು ಕನ್ನಡಗಳು ಸೇರಿ ಕನ್ನಡ ಪರಂಪರೆಯಾಗುವ ವಿಶಿಷ್ಟತೆಯನ್ನು ಬಿಚ್ಚಿಡುವ ತೋರುಗೈಯಾಗಿ ಈ ಕೃತಿ ಮೈದಾಳಿದೆ. ಕನ್ನಡದ ಬಹುತ್ವದ ಧಾರೆಯಲ್ಲಿ ಮಹತ್ವದ ಹೆಜ್ಜೆ ಇದಾಗಿದೆ. ಕದಂಬರ ಸಂಪರ್ಕದಿಂದ ಆರಂಭವಾದ ಕನ್ನಡದ ಸಂಬಂಧ ನಂತರ ಕನ್ನಡ ರಾಜವಂಶಗಳ ಅಧಿಪತ್ಯಕ್ಕೆ ಒಳಗಾಗಿ ಮತ್ತಷ್ಟು ಭಾಷೆಗೆ ಹತ್ತಿರವಾದ ಈ ಪ್ರದೇಶದ ವಿವರಗಳನ್ನು ಕಟ್ಟಿಕೊಡುತ್ತ ೧೯೫೦ರವರೆಗೆ ಇಲ್ಲಿನ ಆಡಳಿತ ಭಾಷೆ ಕನ್ನಡವಾಗಿತ್ತು. ಭಾಷಾವಾರು ಪ್ರಾಂತ್ಯವಾದ ನಂತರ ಮಲೆಯಾಳಂ

ಪ್ರಭಾವದಿಂದ ಕನ್ನಡದ ಪ್ರಾಬಲ್ಯ ಕ್ಷೀಣವಾದ ಸ್ಥಿತಿಯನ್ನು ವಿವರಿಸಿ ಅಧ್ಯಯನವನ್ನು ಸಮಕಾಲೀನಗೊಳಿಸುತ್ತಾರೆ.

ಕಾಸರಗೋಡು ಪ್ರಾಂತ್ಯದ ಆರಂಭಕಾಲದ ರಾಜ್ಯವ್ಯವಸ್ಥೆಯಿಂದ ಹಿಡಿದು ಇಂದಿಗೂ ಜೀವಂತವಾಗಿರುವ ಮೌಖಿಕ ಸಾಹಿತ್ಯದ ಆಕರವನ್ನು ಬಳಸಿ ಸಂಶೋಧನೆಯನ್ನು ಕಟ್ಟಿಕೊಳ್ಳಲಾಗಿದೆ. ಬಹುಪಾಲು ಶಾಸನ ಮತ್ತು ಮೌಖಿಕ ಸಾಹಿತ್ಯವನ್ನು ಅವಲಂಬಿಸಿ ರುವುದರಿಂದ ಸಹಜವಾಗಿಯೇ ಅಧ್ಯಯನವು ಹೊಸ ದಾರಿ ಕಂಡಿದೆ. ಕನ್ನಡದಲ್ಲಿರುವ 'ಥಾಳಾದ ಸಂಶೋಧನೆ'ಗೆ ಉತ್ತರದಂತೆ ಈ ಅಧ್ಯಯನವಿದೆ ಎಂದರೆ ತಪ್ಪಾಗಲಾರದು.

ಶಾಸನದಲ್ಲಿ, ಮೌಖಿಕ ಸಾಹಿತ್ಯದಲ್ಲಿ, ಆಡುನುಡಿಯಾಗಿ, ಆಡಳಿತ ಭಾಷೆಯಾಗಿಲ್ಲ ದಿದ್ದರೂ, ಕನ್ನಡ ಕಟ್ಟಿಕೊಂಡಿರುವ ಮತ್ತು ಉಳಿದು ಬಂದಿರುವ ಬಗೆಯನ್ನು ಬಿಚ್ಚಿಡುತ್ತಾರೆ. ಕಾಸರಗೋಡಿನ ಕನ್ನಡ ಸಮುದಾಯಗಳು ಬದುಕುತ್ತಿರುವ ಪರಿಸರ ಭಿನ್ನವಾದರೂ ಅಲ್ಲಿನ ಭಾಷೆ, ಪ್ರಾದೇಶಿಕ ಉಪಭಾಷೆ, ಇಂದಿಗೂ ಆಧುನಿಕ ಸಂದರ್ಭ ದಲ್ಲಿಯೂ ಕನ್ನಡವನ್ನು ಬಳಸಿ ಉಳಿಸಿಕೊಂಡು ಬಂದಿರುವ ಸಣ್ಣಪುಟ್ಟ ಜಾತಿ ಸಮುದಾಯಗಳನ್ನು ಸಂಶೋಧಕರು ಗುರುತಿಸುತ್ತಾರೆ.

ಕನ್ನಡದ ಪ್ರಧಾನಧಾರೆಯಿಂದ ದೂರವಾಗಿರುವ ಹಲವು ಪದ, ಪದನಿಷ್ಪತ್ತಿ, ಅನ್ಯಭಾಷಾ ಪ್ರಭಾವ, ಸ್ವೀಕರಣ ಪದಗಳು, ಪದಗಳು ಪರಿಸರದಲ್ಲಿ ಪಡೆಯುವ ಅರ್ಥ, ಅವುಗಳ ಸಾಂಸ್ಕೃತಿಕ ಸನ್ನಿವೇಶ ಇತ್ಯಾದಿಗಳನ್ನು ಸೂಕ್ಷ್ಮವಾಗಿ ವಿವೇಚಿಸುತ್ತಾರೆ. ಇಲ್ಲಿನ ಕನ್ನಡ ಮಾತನಾಡುವ ಹದಿನೈದಕ್ಕೂ ಹೆಚ್ಚು ಜಾತಿಗಳನ್ನು ಗುರುತಿಸುತ್ತಾರೆ. ಅವುಗಳ ಹಿನ್ನೆಲೆ ಆ ಜಾತಿಗಳ ಮೇಲೆ ಹಿಡಿತ ಸಾಧಿಸಿದ ವ್ಯವಸ್ಥೆಯ ವಿವರಗಳಿವೆ.

ಕನ್ನಡ ಭಾಷೆಯ ಪ್ರಾದೇಶಿಕ ಉಪಭಾಷೆಯ ಸೂಕ್ಷ್ಮತೆಗಳನ್ನು ಭಾಷಿಕ ವ್ಯತ್ಯಾಸಗಳನ್ನು ಗುರುತಿಸುವಲ್ಲಿನ ಸಂಶೋಧನಾ ಪ್ರಜ್ಞೆ ಜತೆಯಲ್ಲಿ ಅನುಬಂಧದಲ್ಲಿ ಕೊಟ್ಟಿರುವ ಪದಕೋಶ ಇವೆಲ್ಲ ಗಮನಿಸಿದರೆ ಅಧ್ಯಯನಕಾರರ ಶ್ರಮ ಎದ್ದು ಕಾಣುತ್ತದೆ. ಆ ಮೂಲಕ ಪ್ರಾದೇಶಿಕ ಭಾಷೆಯ ಸ್ವರೂಪದ ಅಧ್ಯಯನದ ಕೊರತೆಯನ್ನು ಇದು ತುಂಬಿಕೊಡುತ್ತದೆ.

ಕೃತಿಯ ಶಕ್ತಿ, ಶ್ರಮ ಎದ್ದು ಕಾಣುವುದು ಭಾಷಾವಿಜ್ಞಾನದ ಹಿನ್ನೆಲೆಯಲ್ಲಿರುವ 'ಆಡುನುಡಿಯಾಗಿ ಕನ್ನಡ' ಮತ್ತು 'ಸಮುದಾಯಗಳ ಕನ್ನಡ: ಪರಂಪರೆಯೊಂದಿಗಿನ ಸಂಬಂಧ' ಅಧ್ಯಾಯಗಳ ವಿವೇಚನೆಯಲ್ಲಿ. ಭಾಷೆ, ವಿವಿಧ ಜಾತಿಗಳಲ್ಲಿ ವಿಭಿನ್ನವಾಗಿ ಬಳಕೆಯಾಗುತ್ತಿರುವ ಕ್ರಮ, ವ್ಯಾಕರಣ, ಭಾಷಾವಿಜ್ಞಾನ, ಛಂದಸ್ಸಿನ ಹಿನ್ನೆಲೆಯಲ್ಲಿ ಭಾಷಿಕ ಚರ್ಚೆ, ಆಡುನುಡಿ, ಅರ್ಥ ಬದಲಾವಣೆ, ಪಲ್ಲಟಗಳು,.... ಇತ್ಯಾದಿ ವಿವರಗಳನ್ನು ವ್ಯವಸ್ಥಿತವಾಗಿ ಸಂಶೋಧಿಸಿರುವುದು ಎದ್ದು ಕಾಣುತ್ತದೆ. ಒಂದು ವಿಶಿಷ್ಟ ಶಿಸ್ತೀಯ ಅಧ್ಯಯನವಾಗಿ ಈ ಕೃತಿ ರೂಪುಗೊಂಡಿದೆ. ಕ್ಷೇತ್ರಕಾರ್ಯದ ವಿಪುಲ ಶ್ರಮ ಸದ್ವಿನಿಯೋಗವಾಗಿದೆ.

ರವಿಕುಮಾರ್ ನೀಹ

೧೪. ಜನಪದ ರಂಗ ಪರಂಪರೆಯ ಸೂಕ್ಷ್ಮ ನೋಟ

ದೊಡ್ಡಾಟ ಪರಂಪರೆ ಮತ್ತು ಪ್ರಯೋಗಗಳು, ಡಾ. ಶ್ರೀಶೈಲ ಹುದ್ದಾರ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ೧೭೬, ೧೨ನೇ ಮುಖ್ಯ ರಸ್ತೆ, ಕೆಳಮನೆ, ಮಾಗಡಿ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು-೭೯, ೨೦೧೨, ಪುಟ-೧೦+೫೪೯, ಬೆಲೆ ರೂ. ೩೫೦/-

ಜನಪದ ರಂಗಕಲೆ ದೊಡ್ಡಾಟ ಪರಂಪರೆ ಕಾಲಕಾಲಕ್ಕೆ ಕಂಡ ಬದಲಾವಣೆಗಳನ್ನು ಅದರ ಉದ್ದೇಶ, ಸ್ವರೂಪ, ವ್ಯಾಪ್ತಿ, ವಿಕಾಸ ತಮ್ಮ ಸ್ವತಂತ್ರವಾದ ಚಿಂತನೆಯ ಮೂಸೆಯಲ್ಲಿ ಕಾಯಿಸಿ ಎರಕ ಮಾಡಿದ ಸಿದ್ಧಾಂತಗಳ ಪ್ರಬುದ್ಧ ಬೌದ್ಧಿಕ ಜನಪದ ಕಾಳಜಿಯ ಸಂಶೋಧನ ಮಹಾಪ್ರಬಂಧ "ದೊಡ್ಡಾಟ ಪರಂಪರೆ ಮತ್ತು ಪ್ರಯೋಗಗಳು". ಡಾ. ಶ್ರೀಶೈಲ ಹುದ್ದಾರರು ತಮ್ಮ ಪಿಎಚ್.ಡಿ. ಪದವಿಗೆ ಆರಿಸಿಕೊಂಡಿರುವ ಈ ವಿಷಯಕ್ಕೆ ವಿಶೇಷ ಹಿನ್ನೆಲೆಯೂ ಇದೆ. ಇಪ್ಪತ್ತು ವರ್ಷಗಳ ಕಾಲ ರಂಗಕಲೆಯೊಂದಿಗಿನ ತಮ್ಮ ನಂಟು, ಹಿರಿಯ ರಂಗ ತಜ್ಞರು, ಕಲಾವಿದರ ಒಡನಾಟ, ಜನಪದ ಸಾಹಿತ್ಯ, ಸಂಸ್ಕೃತಿಯೊಂದಿಗಿನ ಅನನ್ಯ ಕಾಳಜಿ, ತುಡಿತ ಅದನ್ನು ಉಳಿಸಿಕೊಂಡು ಹೋಗಬೇಕೆನ್ನುವ ಮಹದೆಚ್ಚರವೂ ಈ ಕೃತಿಯ ರೂಪಕ್ಕೆ ಕಾರಣವಾಗಿದೆ.

ನಮ್ಮ ಮುಂದೆಯೇ ಹೇಳಹೆಸರಿಲ್ಲದಂತೆ ನಶಿಸಿ ಹೋಗುತ್ತಿರುವ ನಮ್ಮ ಜನಪದ ಕಲೆಯನ್ನು ಅದರ ಪರಂಪರಾ ಮೂಲದಿಂದ ಆಧುನಿಕ ಬೆಳವಣಿಗೆಯವರೆಗೆ ಆಮೂಲಾಗ್ರ ಚಿಂತನೆಗೆ ಕಾರಣವಾಗಿದೆ. ದೇಸಿ ಚಿಂತನೆಗಳು ಆಧುನಿಕತೆಯ ಭರಾಟೆಯಲ್ಲಿ ಅದರ ಮೂಲತಂತುಗಳು ಕಳೆದುಹೋಗುತ್ತಿರುವ ಸಂದರ್ಭದಲ್ಲಿ ನೋವು, ಎಚ್ಚರಗಳ ಚಿಂತನೆಯ ಫಲಶ್ರುತಿಯೇ ಮೌಖಿಕವಾದ ರಂಗ ಕಲಾ ಸಾಹಿತ್ಯ ಪರಂಪರೆಯನ್ನು ಅಕ್ಷರವಾಗಿಸುವ ಪ್ರಯತ್ನ ಇದಾಗಿದೆ.

ಡಾ. ಶ್ರೀಶೈಲ ಹುದ್ದಾರರು ತಮ್ಮ ಓದಿನ ವ್ಯಾಪ್ತಿಯ ವಿಶಾಲವಾದ ಚಿಂತನೆ, ಕ್ಷೇತ್ರಕಾರ್ಯದ ಅಧ್ಯಯನ, ವಿಮರ್ಶಾತ್ಮಕವಾದ ದೃಷ್ಟಿ, ಕ್ರಿಯಾಶೀಲತೆ ಇವುಗಳು ಲೇಖಕರ ಒಟ್ಟು ಅಧ್ಯಯನದಲ್ಲಿ ಕಂಡು ಬರುತ್ತವೆ. ಅಧ್ಯಯನದ ಹೊಸ ಸಾಧ್ಯತೆಗಳ ಹುಡುಕಾಟದಲ್ಲಿ, ಜನಪದ ರಂಗಭೂಮಿ ಕಲೆಯ ರೂಪಾಂತರಗಳ ದರ್ಶನ, ಪ್ರಯೋಗ, ಹುಡುಕಾಟ, ವಿಶ್ಲೇಷಣೆ, ಸಂಪೂರ್ಣ ಮಾಹಿತಿಯೊಂದಿಗೆ ಕಟ್ಟಿಕೊಡುವ ಉದ್ದೇಶ ಲೇಖಕರದ್ದಾಗಿದೆ.

ಜನಪದ ನಮ್ಮೆಲ್ಲರ ಕರುಳು ಬಳ್ಳಿಯ ಮೂಲ. ಆ ತಾಯಿ ಬೇರಿನ ಮೂಲದಿಂದಲೇ ಇಂದಿನ ವಿಶಾಲವೃಕ್ಷ ಅದರ ಸತ್ವವನ್ನು ಹೀರಿಕೊಂಡು ಇಂದಿನ ಎಲ್ಲಾ ಸಾಹಿತ್ಯ ಪ್ರಕಾರಗಳು ಉಳಿದು ಬೆಳೆಯುತ್ತಿರುವುದಕ್ಕೆ ಕಾರಣ. ಆದರೆ ಕಾಲದ ಗತಿಯಲ್ಲಿ ತನ್ನ

ಹೆಜ್ಜೆಗಳನ್ನು ಅಸ್ಪಷ್ಟ ಮಾಡಿಕೊಳ್ಳುತ್ತಿರುವ ಜನಪದ ಕಲೆಗಳು ನಾಟಕ ಪರಂಪರೆಗಳನ್ನು ಗುರ್ತಿಸುವ, ಸಂರಕ್ಷಿಸುವ ಕೆಲಸವಾಗಬೇಕಿದೆ. ಅವುಗಳಿಗೆ ಹೊಸ ಸಾಧ್ಯತೆಗಳನ್ನು ತಂದು ಕೊಡುವ, ಉಳಿಸಿಕೊಳ್ಳಬೇಕೆನ್ನುವ ಕಾಳಜಿ ನಮ್ಮೆಲ್ಲರದ್ದು.

ದೊಡ್ಡಾಟ ರಂಗಕಲಾ ಪರಂಪರೆ ಕರ್ನಾಟಕದ ೨೪ ಜಿಲ್ಲೆಗಳಲ್ಲಿ ಇದೆ. ಅದು ಅಲ್ಲಿಯ ಸ್ಥಳೀಯ ಜನಪದ ಜೀವನ ವಿಧಾನ. ಅದರ ಕಲೆ, ಸತ್ವ, ರೂಪ, ಶೈಲಿಗಳು ಬದಲಾಗುತ್ತಾ ತನ್ನ ಗಟ್ಟಿತನವನ್ನು ತೋರಿಸುವ ಪ್ರೇಕ್ಷಕರ ಅಭಿರುಚಿಯನ್ನು ಬದಲಾಯಿಸುತ್ತಾ ಸಾಗುವ ನಿರಂತರ ಪ್ರಕ್ರಿಯೆ. ಡಾ. ಶ್ರೀಶೈಲ ಹುದ್ದಾರರು ಹನ್ನೆರಡು ಅಧ್ಯಾಯಗಳ ಮೂಲಕ ದೊಡ್ಡಾಟ ಪರಂಪರೆಯ ಅಧ್ಯಯನ ಉದ್ದೇಶ, ವ್ಯಾಪ್ತಿ, ಸ್ವರೂಪ, ಜನಪದ ರಂಗಭೂಮಿಯ ಪರಂಪರೆ, ಉಗಮ, ವಿಕಾಸ, ಕರ್ನಾಟಕ ಬಯಲಾಟಗಳ ಪ್ರಕಾರಗಳು, ದೊಡ್ಡಾಟ ಪರಂಪರೆಯ ಕಥಾವಸ್ತು ವಿಶ್ಲೇಷಣೆ, ದೊಡ್ಡಾಟ ಪ್ರದರ್ಶನ ಸಿದ್ಧಾಂತ ಹಾಗೂ ಪ್ರಯೋಗಗಳ ದೊಡ್ಡಾಟ ಪ್ರಯೋಗದ ಸ್ವರೂಪ, ವ್ಯಾಪ್ತಿ, ರಂಗಸಜ್ಜಿಕೆ ಪರಂಪರೆ, ವೇಷಭೂಷಣ, ಪರಂಪರೆ ಪ್ರಯೋಗ, ಸಂಗೀತ ಪರಂಪರೆ, ಕುಣಿತ, ಅಭಿನಯ, ಪಾತ್ರ ಪರಿಕಲ್ಪನೆ, ದೊಡ್ಡಾಟದ ಬಹುಮುಖಿ ಅಧ್ಯಯನದ ಅಗತ್ಯತೆ–ಹೀಗೆ ಹಲವು ಅಧ್ಯಾಯಗಳನ್ನು ವಿಂಗಡಿಸಿಕೊಂಡು ಕೂಲಂಕಷವಾಗಿ ವಿಸ್ತರಿಸುತ್ತಾ ಹೋಗಿದ್ದಾರೆ. ರಂಗಕಲೆಯ ಅಂತರಂಗದ ಒಳನೋಟ, ಸಾಂಪ್ರದಾಯಿಕ ನೆಲೆಯಿಂದ ಸಮಕಾಲೀನ ಸಂದರ್ಭಕ್ಕೆ ಅದರ ಸೂಕ್ಷ್ಮಗಳನ್ನೆಲ್ಲ ಅರ್ಥೈಸುತ್ತಾರೆ.

ದೊಡ್ಡಾಟ ಕರ್ನಾಟಕದ ಜಾನಪದ ಪ್ರಾಚೀನ ರಂಗಕಲೆ. ಜನಪದ ಸತ್ವ ಪರಂಪರೆ ಹೊಂದಿರುವ ಬಯಲಾಟದ ತಂಡಗಳು ಪ್ರತಿ ಹಳ್ಳಿಯಲ್ಲೂ ಇದ್ದವು. ಇಂದೂ ಕೆಲವು ಕಡೆ ಉಳಿದುಕೊಂಡು ಬಂದಿವೆ. ರೈತಾಪಿ ವರ್ಗದ ಶ್ರಮ ಪರಿಹಾರದ ಅವರ ಬದುಕಿನ ಆಯಾ ಪ್ರದೇಶದ ವೈಶಿಷ್ಟ್ಯತೆಯನ್ನು ಮೈಗೂಡಿಸಿಕೊಂಡು ಬೆಳೆದು ಬಂದಿದೆ. ಕರ್ನಾಟಕದ ಹಲವು ಭಾಗಗಳಲ್ಲಿ ಶೈಲಿ, ಹಾಡು, ಕುಣಿತದಲ್ಲಿ ವ್ಯತ್ಯಾಸ ಕಂಡರೂ ವಿನ್ಯಾಸ ಮಾದರಿ ಬಹುತೇಕ ಒಂದೇ ಆಗಿರುತ್ತದೆ. ಆಧುನಿಕತೆಯಿಂದ ಅದರಲ್ಲಿ ಹೊಸತನ ಕಂಡರೂ ಪಾರಂಪರಿಕ ಶೈಲಿ ಹಾಗೆಯೇ ಉಳಿದಿರುವುದೇ ದೊಡ್ಡಾಟದ ವಿಶಿಷ್ಟತೆ.

ದೊಡ್ಡಾಟ ಪರಂಪರೆಯಲ್ಲಿ ಸಮಷ್ಟಿ ಭಾವದ ಅಭಿವ್ಯಕ್ತಿ ಇದೆ. ಒಂದು ಸಮುದಾಯದ ಜೀವನ ಕ್ರಮ, ರೀತಿ ನೀತಿಗಳಿಂದಾದ ಸಂಸ್ಕೃತಿ, ಅಲ್ಲಿಯ ಜನರ ಭಾವನೆಗಳಿಂದಾದ ಸಾಂಸ್ಕೃತಿಕ ಅಭಿವ್ಯಕ್ತಿಯೇ ಜನಪದವಾಗಿದೆ. ಜನರಿಂದಲೇ ದೇಸಿ ಸಂಸ್ಕೃತಿಯ ರಕ್ಷಣೆ, ಬೆಳವಣಿಗೆ ಎಲ್ಲವೂ ಆಗಿರುತ್ತದೆ. ಜನಪದದ ಒಂದು ಭಾಗವಾದ ರಂಗ ಪ್ರಯೋಗವನ್ನು ಸಿದ್ಧಮಾದರಿಯ ಸಿದ್ಧಾಂತಗಳಿಂದ ದೂರ ನಿಂತು ತಮ್ಮ ಅನುಭಾವದ ನೆಲೆಯ ಮಾನದಂಡಗಳ ಮೂಲಕ ವಿಶ್ಲೇಷಿಸುವುದಾಗಿದೆ.

ಜನಪದ ರಂಗಕಲೆಗಳಿಗೆ ಯಾವುದೇ ಅಕಾಡೆಮಿಕ್ ಆದ ರೂಪದ ಚೌಕಟ್ಟಿಲ್ಲದೆ, ಸ್ವತಂತ್ರವಾಗಿ ಎಲ್ಲವನ್ನು ಮೀರಿ ದೇಸೀ ನೆಲೆಯಲ್ಲಿ, ತನ್ನತನದ ಹೊಸ ಚೈತನ್ಯದ ಸಾಮೂಹಿಕ ಕಲೆಯಾಗಿ, ಜನರ ಬೆವರಿನ ಮೂಲದ ಸಂಸ್ಕೃತಿಯಾಗಿ ಬೆಳೆದುಬಂದಿದೆ. ರಂಗಕಲೆಯ ರೂಪ, ವಿನ್ಯಾಸ, ಪ್ರಸಾದನ, ಸಂಭಾಷಣೆ, ವೇಷಭೂಷಣ ಎಲ್ಲವನ್ನು ಜನಪದ ನೆಲೆಯಲ್ಲಿ ತಮ್ಮ ತಾತ್ವಿಕ ನೆಲೆಯಲ್ಲಿ ಮಾನವೀಯ ಬಂಧದಲ್ಲಿ ಹುಡುಕುವ ಅದರ ವಿಭಿನ್ನ ರೂಪಗಳನ್ನು ಪರಂಪರೆಯನ್ನು ಪ್ರಾದೇಶಿಕ ನೆಲೆಯಲ್ಲಿ ಚರ್ಚಿಸುವ ಪ್ರಯತ್ನವನ್ನು ಕಾಣಬಹುದು. ಆಯಾ ನೆಲದ ಮೂಲ ಬೇರುಗಳೇ ಕೇಂದ್ರವಾಗಿ ಸಾಮಾಜಿಕ ಸಮಷ್ಟಿ ಪ್ರಜ್ಞೆಯಲ್ಲಿ ಸಂಶೋಧನೆಗಳು ಹೊರಹೊಮ್ಮಬೇಕು. ಸಿದ್ಧ ಮಾದರಿ ಸಿದ್ಧಾಂತಗಳಿಂದ ದೂರವಾಗಿ, ಜನಪರ ನಿಲುವಿನ ಸ್ವತಂತ್ರ ಚಿಂತನೆಗಳು ಹೊಸ ದಿಕ್ಕಿನತ್ತ ಮುಖ ಮಾಡಬೇಕು.

ಜನಪದ ಸಾಹಿತ್ಯ ಜನರ ಎದೆಯ ಹಾಡಿನ ದನಿಗಳು. ಅದು ಲಿಖಿತ ರೂಪವೇ ಇಲ್ಲದ ಸಮಷ್ಟಿ ತುಡಿತದ ಭಾವ. ಶ್ರಮ ಮೂಲದ ಬಹುರೂಪಿ ಸಂಸ್ಕೃತಿ ದೊಡ್ಡಾಟ ರಂಗಕ್ಕೆ ಪೌರಾಣಿಕ ಐತಿಹ್ಯಗಳು, ಮಹಾಕಾವ್ಯಗಳೇ ವಸ್ತುಗಳು. ಒಂದು ಸಮುದಾಯದ ಶಕ್ತಿಯಾಗಿರುವ ಹಿರಿಯರು, ಕಥೆಗಾರರು, ಹಿಮ್ಮೇಳದವರು–ಮುಮ್ಮೇಳದವರು, ನಟವರ್ಗ ಬಣ್ಣ ಹಚ್ಚುವವರು, ಪ್ರೇಕ್ಷಕವರ್ಗ ಹೀಗೆ ರಂಗ ಕಲಾಪ್ರದರ್ಶನದ ಶಕ್ತಿ ಒಂದು ಸಮಾಜದ ಭಾಗವೇ ಆಗಿ ರೂಪುಗೊಂಡಿದೆ. ಲೇಖಕರು ತಮ್ಮ ೫ ದಶಕಗಳಲ್ಲಿ ಕಂಡ ಮಹತ್ತರ ಬದಲಾವಣೆಯ ಸಂಶೋಧನೆಯನ್ನು ದಾಖಲಿಸಿ ಕಾಲಕಾಲಕ್ಕೆ ಅದರಲ್ಲಾದ ಬದಲಾವಣೆಗಳು ಜನಸಮುದಾಯಕ್ಕೆ ಹೇಗೆ ಪ್ರೇರಣೆ ನೀಡಿವೆ ಎನ್ನುವ ವಿಚಾರಗಳ ಪರಾಮರ್ಶೆ ಈ ಅಧ್ಯಯನದಲ್ಲಿದೆ.

ಕರ್ನಾಟಕದ ಕರಾವಳಿ ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ವ್ಯಾಪಿಸಿರುವ ದೊಡ್ಡಾಟವನ್ನು ಹಿರಿಯಾಟ, ಅಟ್ಟದಾಟ, ಬಯಲಾಟ, ತೊಂಗಾ ಕೇಳಿಕೆ ಹೀಗೆ ಗುರ್ತಿಸುತ್ತಾರೆ. ಇದು ಇಂದಿನ ಆಧುನಿಕ ಸಮೂಹ ಮಾಧ್ಯಮದ ಪ್ರಭಾವದಿಂದ ವ್ಯಾಪಕ ಪ್ರಚಾರ ಇರದಿದ್ದರೂ ಜನಸಮುದಾಯದಲ್ಲಿ ಜೀವಂತ ಅಸ್ತಿತ್ವದಲ್ಲಿದೆ. ರಂಗಕಲೆಯನ್ನು ಕುರಿತು ಜಾಗತಿಕ ಮಟ್ಟದಲ್ಲೂ ಗುರ್ತಿಸಲ್ಪಡುವ ಅಧ್ಯಯನಕಾರರು ಅದರ ವಿಭಿನ್ನ ಅಯಾಮಗಳನ್ನು ಕುರಿತು ಚರ್ಚಿಸುತ್ತಾರೆ. ಜನಪರ ಚಿಂತನೆಯ ಸಮಾಜಮುಖಿ ಧೋರಣೆಯ ಜನಪದ ರಂಗಭೂಮಿ ಹಲವು ಸಾಂಸ್ಕೃತಿಕ ಬಿಕ್ಕಟ್ಟುಗಳು ಹಾಗೂ ಜಾಗತಿಕ ಸವಾಲುಗಳನ್ನು ಎದುರಿಸಬೇಕಾಗಿದೆ. ಜೀವಂತಿಕೆಯ ನಿತ್ಯನೂತನ ರಂಗಭೂಮಿ ಕಾಲಾಂತರದ ಒತ್ತಡಗಳಲ್ಲಿ ಮರೆಯಾಗುವ ಬಗ್ಗೆ ಆತಂಕದಿಂದ ಚಿಂತಿಸುತ್ತಾರೆ. ದೊಡ್ಡಾಟ ಪರಂಪರೆಯ ಪ್ರಯೋಗದ ಅಧ್ಯಯನದಲ್ಲಿ ಈ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನೆಗಳು ಹಾಗೂ ವಿಮರ್ಶೆಗಳು, ಬೆಳೆಸಲು ಉಳಿಸಲು ಒಂದು

ಗಟ್ಟಿ ನಿರ್ಧಾರದ ಕಡೆಗೆ ಸಾಗುತ್ತಾ, ಬೇರೆ ಬೇರೆ ಗ್ರಂಥಗಳ ನೆರವು ಪಡೆದು ಎಷ್ಟೇ ನಿಖರವಾಗಿ ವಿಷಯ ವಿವೇಚಿಸಿದರೂ ಮೌಲ್ಯಮಾಪನಕ್ಕೆ ಸಿಗದ ಹಲವು ಅಂಶಗಳೂ ಉಳಿದಿರಬಹುದು ಎಂಬ ಮಿತಿಯನ್ನು ಲೇಖಕರು ಹೇಳುತ್ತಾರೆ.

ಇಂದಿನ ಸಾಂಸ್ಕೃತಿಕ ಬಿಕ್ಕಟ್ಟನಲ್ಲಿ ಜೀವಪರ ಚಿಂತನೆ ನಶಿಸಿ ಮಾನವೀಯ ಸಂಬಂಧಗಳು ಸ್ವಾರ್ಥಪರವಾಗುತ್ತಿರುವಾಗ ಮಾನವನ ಆಲೋಚನೆಗೆ ಕಲೆಯೊಂದು ಉತ್ತರವಾಗಬಲ್ಲದು ಎನ್ನುವ ಮಾನವೀಯ ಜೀವದನಿ ಕಲೆಗಾಗಿ ಕಲೆ ಉಳಿಯಬೇಕು ಎಂದಿದೆ. ಅಂದರೆ ಜನಪದ ಸತ್ವದ ಜನಮುಖಿ ಚಿಂತನೆಯ ಸಮಷ್ಟಿ ಭಾವದ ರಂಗಕಲಾ ಪರಂಪರೆ ಆಧುನಿಕತೆಯ ಮಾಯೆಯಲ್ಲಿ ತನ್ನ ನಿಜ ಧ್ವನಿಯಾಗಿ ಮೂಡಿದಾಗ, ಅಂತಹ ಕಲೆ ಮಾನವೀಯ ಪ್ರೀತಿ ವಿಶ್ವಾಸದ ಕೇಂದ್ರವಾಗುತ್ತದೆ.

ರಂಗಕಲೆಯ ಪ್ರತಿಯೊಂದು ಸೂಕ್ಷ್ಮ ಅಂಗಗಳ ಮೇಲೂ ಬೆಳಕು ಚೆಲ್ಲುತ್ತಾ ಓದುಗನಿಗೆ ಅದರ ಗಾಢ ಅನುಭವ ಕೊಡುವಂತಹ ವಿಸ್ತಾರ ರೂಪದ ವಿಶ್ಲೇಷಣೆ ಈ ಕೃತಿಯಲ್ಲಿದೆ. ವಿವರಣೆಗೆ ತಕ್ಕ ಹಾಗೆ ಛಾಯಾಚಿತ್ರವೂ ಇದ್ದಿದ್ದರೆ ಮತ್ತಷ್ಟು ಓದುಗನಿಗೆ ಗ್ರಾಹ್ಯವಾಗುವಲ್ಲಿ ಸಫಲತೆ ಇರುತ್ತಿತ್ತು. ಆಭರಣ, ಉಡುಗೆ, ಮೇಕಪ್, ವಿನ್ಯಾಸ ಎಲ್ಲದರ ಕುರಿತು ಸೂಕ್ಷ್ಮ ನೋಟದೊಂದಿಗೆ ಕ್ರಮಬದ್ಧವಾದ ಅಡಿಟಿಪ್ಪಣಿ, ಆಯಾ ಅಧ್ಯಾಯಕ್ಕೆ ಕ್ರಮವಾಗಿ ಜೋಡಣೆಯಾಗಿ ಓದುಗನಿಗೆ ಸುಲಭವಾಗಿ ಮಾಹಿತಿ ದೊರಕುತ್ತದೆ. ವಿಷಯ ನಿರೂಪಣೆಯಲ್ಲಿ ಸಂಶೋಧನಾತ್ಮಕವಾದ ಸೂಕ್ಷ್ಮಭಾವ ನೈಜವಾಗಿದೆ. ಪುಸ್ತಕವು ಸೊಗಸಾಗಿ ಮೂಡಿಬಂದಿದೆ.

ಸುಶೀಲಾ ಸದಾಶಿವಯ್ಯ

೧೫. ದಣಿವರಿಯದ ಪಥಿಕರ ಕಥನ–ನಡೆದಷ್ಟೂ ನಾಡು

ನಡೆದಷ್ಟೂ ನಾಡು, ಡಾ. ರಹಮತ್ ತರೀಕೆರೆ, ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–೫೬೦೦೦೧, ೨೦೧೨, ಪುಟ–೨೪೦ , ಬೆಲೆ ರೂ. ೧೬೦/-

ಡಾ. ರಹಮತ್ ತರೀಕೆರೆ ಮೂಲತಃ ಸಾಹಿತ್ಯದ ಆಸಕ್ತಿಯುಳ್ಳ ವಿದ್ವಾಂಸರಾಗಿದ್ದವರು. ಕನ್ನಡ ಸಾಹಿತ್ಯ ವಿಮರ್ಶೆಯ ಹರಹನ್ನು ವಿಸ್ತರಿಸಿದವರು. ಆರಂಭದಲ್ಲಿ ಕೇವಲ ಸಾಹಿತ್ಯ ವಿಮರ್ಶೆಯ ಕಡೆ ಇದ್ದ ಗಮನ ಹೊಸದರ ಕಡೆಗೆ ತುಡಿಯಲಾರಂಭಿಸಿತು. ಪರಿಣಾಮವಾಗಿ ಪ್ರತಿ ಸಂಸ್ಕೃತಿಯ ಅಧ್ಯಯನ ಎಂಬ ಹೊಸ ಅನ್ನಶಿಸ್ತೀಯ ನೆಲೆಯ ಕಡೆ ತಿರುಗಿದರು. ಶುಷ್ಕವಾಗಿದ್ದ ಸಾಹಿತ್ಯ ವಿಮರ್ಶೆಗೆ ಪ್ರತಿ ಸಂಸ್ಕೃತಿ, 'ಮರದೊಳಗಣ ಕಿಚ್ಚು' ಕೃತಿಗಳು ಹೊಸ ಆಯಾಮವನ್ನು ನೀಡಿದವು. ನಂತರ ಅವರ ಆಲೋಚನಾಕ್ರಮ ವಿಮರ್ಶೆಯಿಂದ ಬಹುಶಾಸ್ತ್ರೀಯತೆಯ ಕಡೆಗೆ ತಿರುಗಿತು. ಹೀಗಾಗಿ ಕಳೆದುಹೋದ ಮೌಲ್ಯಗಳ ಹುಡುಕಾಟಗಳಿಂದ ಪ್ರತಿ ಸಾಂಸ್ಕೃತಿಕ ಶೋಧನೆಗಿಂತ ಭಿನ್ನವಾದ

'ಕರ್ನಾಟಕದ ಸೂಫಿಗಳು', 'ಯಾರು ಮುಖ್ಯರಲ್ಲ?', 'ನಾಥಪಂಥ' ಕೃತಿಗಳು ಕರ್ನಾಟಕದ ಬೇರೆ ಬೇರೆ ಮಗ್ಗುಲಿನ ಕಡೆ ಗಮನಹರಿಸುವಂತೆ ಮಾಡಿದವು. ಪರಿಪೂರ್ಣವಾಗಿ ಕ್ಷೇತ್ರಕಾರ್ಯದತ್ತ ತಿರುಗಿ ಕ್ಷೇತ್ರಕಾರ್ಯದ ಅನುಭವಗಳಿಂದ ತರೀಕೆರೆಯವರು ಬದುಕನ್ನು, ಸಮಾಜವನ್ನು ಭಿನ್ನವಾಗಿ ನೋಡಲಾರಂಭಿಸಿದ್ದಾರೆ.

ಜಾಗತೀಕರಣ ಆಹ್ವಾನದ ಆತಂಕದಲ್ಲಿರುವಾಗಲೇ ನಮ್ಮ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಭೌಗೋಳಿಕ ವೈಶಿಷ್ಟ್ಯಗಳನ್ನು ಶೋಧನೆ ಮಾಡುವ ಜವಾಬ್ದಾರಿ ಬರಹಗಾರರ ಮೇಲೆ ಬಿತ್ತು. ಪರಿಣಾಮವಾಗಿ ಪ್ರಮುಖ ಧಾರೆಯಿಂದ ದೂರ ಉಳಿದಿದೆ. ಅದೆಷ್ಟೋ ಜನಸಮುದಾಯಗಳು, ಭಾಷೆ, ಅನುಭವಗಳು, ದಾಖಲಾಗುತ್ತಿರುವುದು ಇಂದಿನ ಸಾಹಿತ್ಯದ ವೈಶಿಷ್ಟ್ಯ. ಇವೆಲ್ಲ ಪ್ರಕಾರದ ಚೌಕಟ್ಟಿನಲ್ಲಿ ಹೊರಗುಳಿದಿದ್ದವು. ಇಂದು ಪ್ರಕಾರದ ಹಂಗಿಲ್ಲ. ಅನುಭವಗಳು ಯಾವ ಪ್ರಕಾರದೊಂದಿಗೂ ಕೊಂಡಿಯಾಗಬಹುದು. ಪ್ರತ್ಯೇಕವಾಗಿ ನಿಲ್ಲಬಹುದು. 'ನಡೆದಷ್ಟೂ ನಾಡು' ಈ ಸ್ವರೂಪದ ಕೃತಿ.

ನಡೆದಷ್ಟೂ ನಾಡು ಹೆಸರೇ ಒಂದು ರೂಪಕ, ಭೌಗೋಳಿಕ, ರಾಜಕೀಯದ ಹಿನ್ನೆಲೆಯಲ್ಲಿ 'ನಾಡು' ಪರಿಕಲ್ಪನೆಯನ್ನು ನೋಡಬೇಕಾಗಿಲ್ಲ. ಆ ರೀತಿಯ ಸಾಂಪ್ರದಾಯಿಕ ನೋಟದಿಂದ ದೂರ ಉಳಿಯುವಂತಹ ಬರವಣಿಗೆ ಇದು. ತಿರುಗಾಡುವ ತರೀಕೆರೆಯವರು ಸಾಹಿತ್ಯದ ಓದನ್ನು ಬೇರೆ ಕಡೆಗೆ ಕೊಂಡೊಯ್ದಿದ್ದಾರೆ. ಇದು ಸಾಹಿತ್ಯದ ಬರವಣಿಗೆ, ಸಂಸ್ಕೃತಿಯ ಅನಾವರಣ, ಹೊಸದೆನ್ನುವ ಲೋಕದ ಪರಿಚಯ ಈ ಬರವಣಿಗೆಗಳ ಒಳಗೆ ವಿಸ್ಮಯ, ಸಂಕಟ, ಕಳೆದುಹೋದ ದಿನಗಳ ಮೆಲುಕು, ಸಾಮಾಜಿಕ ಅನಿಷ್ಟಗಳ ವಿಡಂಬನೆ ಹೀಗೆ ಅಸಂಖ್ಯ ಅನುಭವಗಳನ್ನು ಓದುಗರಿಗೆ ಉಣಿಸುತ್ತ ನಡೆಯುತ್ತದೆ.

ಇಲ್ಲಿನ ಬರಹಗಳನ್ನು ಸಾಂಪ್ರದಾಯಿಕ ಸಾಹಿತ್ಯ, ವಿಮರ್ಶೆ ಮೂಲಕ ನೋಡಲಾಗುವುದಿಲ್ಲ. ಹೊಸ ರೀತಿಯ ಬರಹಗಳು ಇವುಗಳಲ್ಲಿ ಸಂಸ್ಕೃತಿ ವಿಶ್ಲೇಷಣೆಯಿದೆ. ಸಾಮಾಜಿಕ, ಆರ್ಥಿಕ ಜಾನಪದೀಯ ಹೀಗೆ ಇತರ ಆಯಾಮಗಳನ್ನೆಲ್ಲ ಒಟ್ಟಿಗೆ ಹಿಡಿದಿಟ್ಟಿಕೊಂಡಿವೆ. ಹೀಗಾಗಿ ಹೊಸ ರೀತಿಯ ಅಭಿವ್ಯಕ್ತಿ ಕ್ರಮವಾಗಿ ಹೊಮ್ಮಿದೆ. ಇದರಿಂದ ತರೀಕೆರೆಯವರ ಬರಹಗಳು ಏಕಕಾಲದಲ್ಲಿ ಸಾಹಿತ್ಯ ವಿಮರ್ಶೆಗಳಾಗಿ ಸಾಮಾಜಿಕ ಕಾಳಜಿ ಉಳ್ಳದ್ದಾಗಿ ಸಂಸ್ಕೃತಿಯ ಶೋಧನೆಯಾಗಿ ಅನಾವರಣಗೊಂಡಿವೆ.

ಆಧುನಿಕ ಕಾಲದ ತುರ್ತಿಗೆ ಒಳಗಾಗಿ ಇವರ ಬರಹ ಮತ್ತು ಆಲೋಚನೆ ರೂಪುಗೊಳ್ಳುತ್ತಿರುವುದರಿಂದಲೇ ಇವರ ಬರಹದಲ್ಲಿ ವೈಶಿಷ್ಟ್ಯತೆ/ಹೊಸತನವಿದೆ. ಸದಾ ಹೊಸತನಕ್ಕೆ ಹಂಬಲಿಸಿ ತುಡಿಯುವ ಇವರು ತಮ್ಮ ಬರಹದುದ್ದಕ್ಕೂ ಅದನ್ನು ಕಾಣುತ್ತಲೇ ಬಂದಿದ್ದಾರೆ.

ಈ ಕೃತಿಯಲ್ಲಿನ ಬರಹಗಳು ಈಗಾಗಲೇ ಪ್ರಜಾವಾಣಿ ಪತ್ರಿಕೆಯಲ್ಲಿ ಅಂಕಣದಲ್ಲಿ ಪ್ರಕಟಿತವಾದವುಗಳು. ಇವು ಈಗ ಒಟ್ಟಿಗೆ ಸಂಕಲಿತಗೊಂಡಿವೆ. ಬೇರೆ ಬೇರೆ ಕಾಲ,

ಸ್ಥಳಕ್ಕೆ ಸಂಬಂಧಿಸಿದ ಲೇಖನಗಳಂತೆ ಹೊರನೋಟಕ್ಕೆ ಕಂಡರೂ ಅಂತರ್ಗಾಮಿಯಾಗಿ ಇಂದೇ ಹಿಡಿಕಟ್ಟಿನಲ್ಲಿ ಸೇರಿವೆ. ಇಲ್ಲಿನ ಅನುಭವಗಳು ಸಂಕೀರ್ಣದಂತೆ ತೋರಿದರೂ ಸರಳ ಮತ್ತು ಸಾಮಾನ್ಯ ಓದುಗನಿಗೂ ದಕ್ಕುವಂತೆ ರೂಪುಗೊಂಡಿವೆ. ಈ ಕೃತಿಯ ಒಟ್ಟು ಸ್ವರೂಪವನ್ನು ವಿಷಯಗಳ ಅನ್ವಯ ಹೀಗೆ ನೋಡಬಹುದು

- ಗತಕಾಲದ ನೆನಪನ್ನು ಕಟ್ಟಿಕೊಡುವಂತಹವು
- ಬಹುಸಂಕರಕ್ಕೆ ಸಂಬಂಧಿಸಿದವು
- ಆಧುನಿಕತೆಯ ಅವಾಂತರಕ್ಕೆ ಸಂಬಂಧಿಸಿದವು
- ವ್ಯಕ್ತಿತ್ವವನ್ನು ಕುರಿತ ಬರಹಗಳು
- ಬುದ್ಧ ಪರಂಪರೆಯ ಹೊಸ ನೋಟಕ್ಕೆ ಸಂಬಂಧಿಸಿದವು
- ಸಾಂಸ್ಕೃತಿಕ ಚರಿತ್ರೆ ಕಟ್ಟುವ ಲೇಖನಗಳು

ಹೀಗೆ ಇವುಗಳನ್ನು ವಿಂಗಡಿಸಿ ಓದಬಹುದಷ್ಟೇ. ಆದರೆ ಒಂದು ಲೇಖನಕ್ಕೂ ಇನ್ನೊಂದು ಲೇಖನಕ್ಕೂ ಅಂತರ್‌ಸಂಬಂಧವಿದೆ. ಈ ಲೇಖನಗಳನ್ನು ಹಿಡಿದಿರುವ ಅಂಶವೆಂದರೆ 'ಕರ್ನಾಟಕ ಸಾಂಸ್ಕೃತಿಕ ಚರಿತ್ರೆ'.

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನ ಮಾಡುವವರು ಈ ಬರಹಗಳನ್ನು ಮುಟ್ಟದೆ ಮುಂದೆ ಹೋಗಲಾಗುವುದಿಲ್ಲ. ಸಮುದಾಯ ಚರಿತ್ರೆ, ಪ್ರತಿಚರಿತ್ರೆ, ಪ್ರತಿಪುರಾಣ ಇಂಥವುಗಳ ಅನ್ವೇಷಣೆಯ ಮುಂದಿನ ನೋಟವಾಗಿ ಈ ಬರಹಗಳಿವೆ.

ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು 'ನಡೆದಷ್ಟೂ ನಾಡು' ಕಟ್ಟಿಕೊಡುತ್ತದೆ. ಕಾಲಮಿತಿಯ ಒತ್ತಡದಲ್ಲಿಯೂ ಪುಟ ನಿಗದಿಯಿದ್ದರೂ ಅನುಭವ ಸಾಂದ್ರತೆ ಓದುಗರನ್ನು ಸೆಳೆಯುತ್ತದೆ.

ತರೀಕೆರೆಯವರ ಬರಹದ ಮಾಂತ್ರಿಕ ಶಕ್ತಿ ಓದುಗರನ್ನು ತನ್ಮಯರನ್ನಾಗಿ ಮಾಡಿ ಒಪ್ಪಿಸುತ್ತಾ ಸಾಗುತ್ತದೆ. ಅವರ ಬರಹದ ಗುಣ ಪ್ರಶ್ನೆಯನ್ನು ಹುಟ್ಟಿಸುವುದಲ್ಲ. ಮಗು ತಾತನ ತೊಡೆಯ ಮೇಲೆ ಕುಳಿತು ಕತೆ ಕೇಳುತ್ತ ತನ್ನ ಭಾವನಾವಲಯದಲ್ಲಿ ವಿಹರಿಸುವಂತೆ ಮಾಡುವ ವಶೀಕರಣ ಅವರ ಬರಹದಲ್ಲಿರುತ್ತದೆ ಎಂಬ ಆರೋಪವೂ ಇದೆ. ಅದರೆ ಈ ರೀತಿಯ ವಶೀಕರಣ ಸಮಾಜಮುಖಿ ಮಾನವೀಯ ಪರವಾದುದಾಗಿರುವುದು ಇವರ ಬರಹದ ವಿಶಿಷ್ಟತೆ.

ಈ ಕೃತಿಯಲ್ಲಿ ಲೇಖಕರು ಪರಂಪರೆಗೆ ಇದಿರಾಗಿದ್ದಾರೆ. ಸಾಮಾಜಿಕ ತಲ್ಲಣಗಳಿಗೆ ಮುಖಿಮಾಡಿದ್ದಾರೆ. ಕಳೆದುಹೋದ/ ಹೋಗುತ್ತಿರುವ ಸಂಗತಿಗಳನ್ನು ಹೆಕ್ಕಿ ತೆಗೆದಿದ್ದಾರೆ. ಇವೆಲ್ಲ ವಿದ್ವಾಂಸರ ರೀತಿಯಲ್ಲಿ ಶೋಧನೆ ನಡೆದಿದ್ದರೂ ಅಭಿವ್ಯಕ್ತಿ ಮಾತ್ರ ತುಂಬಾ ಸರಳ. ಸಾಮಾನ್ಯನಿಗೂ ಅರಿವಿಗೆ ಬರುವಂತೆ ಇದೆ.

ಇವು ಪತ್ರಿಕೆಯಲ್ಲಿ ಪ್ರಕಟವಾಗುವಾಗ ಇಂಥ ಗಂಭೀರ ವಿಮರ್ಶಕರು, ಚಿಂತಕರು ಅಂಕಣ ಬರೆಯಲು ಅವಕಾಶ ಸಿಕ್ಕಿರುವಾಗ ಒಂದಿಷ್ಟು ಸಾಹಿತ್ಯದ ಗಂಭೀರ ಚರ್ಚೆಗೆ

ನಾಂದಿ ಹಾಡಬಹುದಿತ್ತು. ಯಾಕಿಷ್ಟು ಸರಳವಾಗಿ ಬರೆಯುತ್ತಿದ್ದಾರೆ ಎನಿಸಿದ್ದುಂಟು. ಅದರೆ ಇಂದು ಇಡಿಯಾಗಿ ಕೃತಿಯನ್ನು ನೋಡಿದಾಗ 'ನಡೆದಷ್ಟೂ ನಾಡು' ತಿರುಗಾಟದ ಕಥನಗಳ ಮೌಲ್ಯ ಅರಿವಾಗುತ್ತಿದೆ. ಸ್ಥಳ, ಪ್ರದೇಶ, ಭಾಷೆ, ಜನಾಂಗ, ಧರ್ಮ ಯಾವುದಕ್ಕೂ ಸೀಮಿತಗೊಳ್ಳದೆ ಎಲ್ಲವನ್ನು ತದೇಕದಿಂದ ಗಮನಿಸುತ್ತ ವ್ಯಕ್ತಪಡಿಸುವಾಗ ಅವರ ಬರಹಗಳಲ್ಲಿ ಮಾನವೀಯತೆ ತುಂಬಿದ ಸಾಮಾಜಿಕ ಕಾಳಜಿ ಅರ್ಥವಾಗುತ್ತದೆ. ಒಂದು ಸಿ.ಡಿಯನ್ನು ಕೂಡ ವಿಶ್ಲೇಷಿಸುವ, ಎಸ್.ಇ.ಝುಡ್ ಕುರಿತು ಜನಾಭಿಪ್ರಾಯಗಳ ವಿಶ್ಲೇಷಣೆ, ಭಾಷಾ ಸಂಕರ, ನುಡಿ ಸಂಕರಗಳ ಸಾಮುದಾಯಿಕ ವಿವರಣೆ, ಭಾಷಿಕ...... ಹೀಗೆ ನೂರೆಂಟು ಸಮಕಾಲೀನ ವಿದ್ಯಮಾನಗಳ ಜತೆ ಮುಖಾಮುಖಿಯಾಗಿ ಓದುಗರನ್ನು ಚಿಂತನೆಗೆ ಹಚ್ಚುತ್ತದೆ.

ಇದೇ ಕೃತಿ ಕೆಲವೊಮ್ಮೆ ಭಾವುಕತೆಯನ್ನು, ವೈಚಾರಿಕತೆಯನ್ನು, ಚಿಂತನೆಯನ್ನು, ಕುತೂಹಲವನ್ನು, ಆಶ್ಚರ್ಯವನ್ನು ಹೆಚ್ಚಿಸುತ್ತಾ ಕರ್ನಾಟಕ ಅರ್ಥಾತ್ ಭಾರತದ ಸಾಂಸ್ಕೃತಿಕ ಚರಿತ್ರೆಗೆ ಹೊಸ ಆಕರವನ್ನು ಕಟ್ಟಿಕೊಡುತ್ತದೆ.

ರವಿಕುಮಾರ್ ನೀಹ

೧೬. ತುಳುವರ ಮೂಲತಾನ ಆದಿಆಲಡೆ ಪರಂಪರೆ ಮತ್ತು ಪರಿವರ್ತನೆ– ಡಾ. ಇಂದಿರಾ ಹೆಗ್ಗಡೆ

ತುಳುವರ ಮೂಲತಾನ ಆದಿಆಲಡೆ ಪರಂಪರೆ ಮತ್ತು ಪರಿವರ್ತನೆ,
ಡಾ. ಇಂದಿರಾ ಹೆಗ್ಗಡೆ, ನವಕರ್ನಾಟಕ ಪ್ರಕಾಶನ ಎಂಬೆಸಿ ಸೆಂಟರ್, ಕ್ರಸೆಂಟ್ ರಸ್ತೆ, ಬೆಂಗಳೂರು–೫೬೦೦೦೧, ೨೦೧೨, ಪು–೪೦೮, ಬೆಲೆ ರೂ. ೩೦೦/-

ಸೃಜನಶೀಲ ಲೇಖಕಿಯೂ, ಸಂಶೋಧಕಿಯೂ ಆಗಿರುವ ಡಾ. ಇಂದಿರಾ ಹೆಗ್ಗಡೆ ಅವರ ಈ ವಿಶಿಷ್ಟ ಕೃತಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಡಿ.ಲಿಟ್. ಪದವಿಗಾಗಿ ಸಾದರಪಡಿಸಿದ ನಿಬಂಧದ ಪರಿಷ್ಕೃತ ಆವೃತ್ತಿ. ಈ ಕೃತಿಯಲ್ಲಿ ತುಳುನಾಡಿನ ಮೂಲ ಸಂಸ್ಕೃತಿಯ ಸಾರವನ್ನು ಕ್ಷೇತ್ರಕಾರ್ಯದ ಮೂಲಕ ಮತ್ತು ನೂರಾರು ಕನ್ನಡ ಮತ್ತು ಇಂಗ್ಲೀಷ್ ಗ್ರಂಥಗಳ ಪರಾಮರ್ಶನದ ಮೂಲಕ ಸಂಗ್ರಹಿಸುವ ಪ್ರಾಮಾಣಿಕ ಪ್ರಯತ್ನವಿದೆ. ಹೀಗೆ ಇವರು ಕಲೆಹಾಕಿದ ಮಾಹಿತಿಯ ರಾಶಿ ಅಚ್ಚರಿ ಮೂಡಿಸುವಷ್ಟು ಕುತೂಹಲಕಾರಿಯಾಗಿದೆ.

ನಾಲ್ಕುನೂರಾ ಎಂಟು ಪುಟಗಳ ಈ ಬೃಹತ್ ಕೃತಿಯಲ್ಲಿ ಇಂಥ ನಿಬಂಧಗಳಿರಬೇಕಾದಂತೆ–೧. ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ೨. ಆದಿಮೂಲತಾನ– 'ಆದಿಆಲಡೆ', ೩. ಕುಲದೈವ ಆಲಡೆ ಬಿ/ಬೆರ್ಮೆರ್ ಮತ್ತು ಪರಿವಾರ, ೪. ಕುಲಸಂಬಂಧಿಗಳಾಗಿ ತುಳುವರು, ೫. ಆದಿ ಆಲಡೆ ಮೂಲತಾನ–ಸಹಬಾಳ್ವೆಯ ಕ್ಷೇತ್ರ, ೬. ಬೆರ್ಮೆರ್

ಮತ್ತು ಅವಳಿ ಶಕ್ತಿಗಳು, ೭. ಆರಾಧನೆ–ಕೋಲ ಹಾಗೂ ೮. ಸಮಾರೋಪ - ಎಂಬ ಎಂಟು ಅಧ್ಯಾಯಗಳು ಇವೆ. ಸಂಶೋಧನಾ ವಿಷಯವನ್ನು ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ವಿಂಗಡಿಸುವ ಕ್ರಮ ಸಮರ್ಪಕವಾಗಿದೆ.

ಇವರು ಸಂಶೋಧನೆಗೆ ಆರಿಸಿಕೊಂಡಿರುವುದು ಐತಿಹಾಸಿಕ ವಿಷಯವಲ್ಲ. ಇವು ಮೌಖಿಕವಾಗಿ ಸಾಗಿಕೊಂಡು ಬಂದವು. ಆದರೂ ಕೆಲವು ಐತಿಹಾಸಿಕ ಸಂಗತಿಗಳನ್ನು ತಿಳಿದುಕೊಳ್ಳಲು ಸಾಧ್ಯವಿದೆ. ಅಧ್ಯಯನ ಮಾಡುವಾಗ ಹೊಸತು–ಹಳತರೊಡನೆ ಬೆರೆತುಕೊಳ್ಳುತ್ತವೆ. ತುಳುವರ ಆದಿಮ ಜೀವನ ಆರಂಭವಾದ ನೆಲೆಗಳನ್ನು ಗುರುತಿಸುವಾಗ ನೀರಿನ ಆಸರೆ ಇರದ ಜಾಗದಲ್ಲಿ ಪುರಾತನ ನಾಗ ಬೆರ್ಮೆರ್ ಕ್ಷೇತ್ರಗಳಿಲ್ಲ ಎನ್ನುತ್ತಾ ಕೃಷಿ ಸಂಸ್ಕೃತಿಗೋ ನಾಗಾರಾಧನೆಗೋ ಇದ್ದ ಹತ್ತಿರದ ಸಂಬಂಧವನ್ನು ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ.

ಮೂರನೇ ಅಧ್ಯಾಯದಲ್ಲಿ ಬೆರ್ಮೆರ್ ಪದದ ನಿಷ್ಪತ್ತಿಯ ಬಗ್ಗೆ ಹಲವಾರು ವಿವರಣೆಗಳನ್ನು ನೀಡುವುದರೊಂದಿಗೆ, ಬೆರ್ಮೆರ್ ಮತ್ತು ಪರಿವಾರ ದೈವಗಳ ಪರಿಕಲ್ಪನೆಯ ಬಗ್ಗೆ ಮೌಖಿಕ ಸಾಹಿತ್ಯ, ಶಿಷ್ಟ ಸಾಹಿತ್ಯದಲ್ಲಿ ದೊರಕುವಂಥ ಭಿನ್ನ ರೀತಿಯ ಆಭಿಪ್ರಾಯಗಳನ್ನು ದಾಖಲಿಸುತ್ತಾರೆ. ಹಾಗೆಯೇ ತಮ್ಮ ಅಭಿಪ್ರಾಯವನ್ನು ಕೂಡ ತಿಳಿಸುವ ಮೂಲಕ ಈ ಅಧ್ಯಯನಕ್ಕೆ ಮಹತ್ವದ ವಿಚಾರಗಳನ್ನು ಸೇರಿಸುತ್ತಾ ಹೋಗುತ್ತಾರೆ.

ನಾಲ್ಕನೇ ಅಧ್ಯಾಯದಲ್ಲಿ ಕುಲಸಂಬಂಧಿಗಳಾಗಿ ತುಳುವರು, ಬಿಲ್ಲವರು ಬೇಟೆಯನ್ನು ಹಂಚಿಕೊಂಡು ತಿನ್ನುವ ಪದ್ಧತಿಯನ್ನು ಕುರಿತಾದ ವಿಚಾರಗಳು ಬರುತ್ತದೆ. ನಾಗಾರಾಧನೆಯ ವಿದೇಶೀ ಮೂಲವನ್ನು ಹುಡುಕಿ ದಾಖಲಿಸಿರುವುದರೊಂದಿಗೆ ವಿಚಾರಗಳನ್ನು ಹರಡುತ್ತಾ ಓದುಗರಿಗೂ ಚಿಂತನೆ ನಡೆಸಲು ಅವಕಾಶ ಮಾಡಿ ಕೊಡುತ್ತಲೇ ಸತ್ಯದ ಸಮೀಪಕ್ಕೆ ಬಂದು ನಿಂತು ಬಿಡುತ್ತಾರೆ. ನಾಗಸಂಸ್ಕಾರ ಮತ್ತು ಉತ್ತರಕ್ರಿಯೆ, ಮೂಲತಾನ ಆದಿಆಲಡೆ ರುದ್ರಭೂಮಿ, ಸಾವಿನ ಆಚರಣೆ, ಮರುಜನ್ಮದ ಕಲ್ಪನೆಯ ಬಗ್ಗೆ ನಮಗೂ ಕುತೂಹಲ ಹುಟ್ಟಿಸುವಂಥ ವಿಚಾರಗಳನ್ನು ನಮ್ಮ ಮುಂದಿಡುತ್ತಾರೆ.

ಐದನೇ ಅಧ್ಯಾಯದಲ್ಲಿ - ಕೃಷಿ ಸಂಸ್ಕೃತಿಯ ವಿವಿಧ ಆಯಾಮಗಳು, ಅಲೆಮಾರಿ ಸಮೂಹಗಳು ತಾವು ಸಾಕಿದ್ದ ಪ್ರಾಣಿಗಳ ಆಹಾರಕ್ಕಾಗಿ ಸಸ್ಯಸಂಗೋಪನೆ ಪ್ರಾರಂಭಿಸಿದಾಗ, ಒಂದೆಡೆ ನೆಲೆಯೂರಿದಾಗ ಜೀವನಕ್ಕೆ ನಾಂದಿಯಾಯಿತು. ಅಂದರೆ ಭೂಮಿ ಮಾನವನ ಆಟಗಳನ್ನು ಕಟ್ಟಿಹಾಕಿತು. ಅಂದಿನಿಂದ ಆದಿಮಾನವನ ಸಮೂಹ ಶ್ರಮವನ್ನು ಕಾಣಬಹುದು ಎನ್ನುತ್ತಾರೆ. ಮುಂದಿನ ಎರಡು ಅಧ್ಯಾಯಗಳಲ್ಲಿ ಬೆರ್ಮೆರ್ ಮತ್ತು ಅವಳಿ ಶಕ್ತಿಗಳ ಆರಾಧನೆ ಮೊದಲಾದ ವಿಚಾರಗಳು ಹರಡಿಕೊಂಡಿವೆ. ಒಟ್ಟಿನಲ್ಲಿ ನಾಗಾರಾಧನಾ ಪ್ರಪಂಚ ಹಾಗೂ ಭೂತಾರಾಧನಾ ಪ್ರಸ್ಥಾನಗಳ ಅನೇಕ ಮುಖಗಳು ಈ ಅಧ್ಯಾಯದಲ್ಲಿ ಅನಾವರಣಗೊಂಡಿವೆ.

ಪುಸ್ತಕದ ಕೊನೆಯಲ್ಲಿ ಮಾಹಿತಿ ನೀಡಿದವರ ಬಗ್ಗೆ ಸ್ಥೂಲವಾಗಿ ಲಿಂಗ, ವಯಸ್ಸು, ತಾಲ್ಲೂಕುಗಳನ್ನು ನೀಡಿರುವುದು ಸರಿಯಷ್ಟೆ. ಆದರೆ ಸಮಾಜದಲ್ಲಿ ಅವರು ಯಾವ ಸ್ತರದವರು ಎಂಬುದನ್ನು ಅಗತ್ಯವಾಗಿ ತಿಳಿಸಬೇಕಿತ್ತು. ಇದರಿಂದ ಮತ್ತೊಂದು ಮಗ್ಗುಲು ತೆರೆದುಕೊಳ್ಳುತ್ತಿತ್ತು. ಅಕಾರಾದಿಯಾಗಿ ನೀಡಿರುವ ಸಾಂಸ್ಕೃತಿಕ ಪದಕೋಶ ಉಪಯುಕ್ತವಾದುದು. ಪರಾಮರ್ಶನ ಗ್ರಂಥಗಳ ಪಟ್ಟಿ ಲೇಖಕಿಯ ಪರಿಶ್ರಮ, ತಾಳ್ಮೆಯನ್ನು ತಿಳಿಸುತ್ತದೆ. ಈ ಕೃತಿ ತುಳುವರ ಬಗ್ಗೆ ಮುಂದೆ ಸಂಶೋಧಕರು ಮಾಡುವ ಹಲವು ಅಧ್ಯಯನಗಳಿಗೆ ಆಕರವಾಗುವುದರಲ್ಲಿ ಸಂಶಯವಿಲ್ಲ.

ಪ್ರೊ. ಎಂ.ಎಲ್. ನರಸಿಂಹಮೂರ್ತಿ

೧೭. ತೀರ್ಥಹಳ್ಳಿಯ ಸುತ್ತಮುತ್ತ –ಕೆ. ಗಂಗಾಧರ, ಹಾದಿಗಲ್ಲು ರಾಘವೇಂದ್ರ

ತೀರ್ಥಹಳ್ಳಿಯ ಸುತ್ತಮುತ್ತ, ಕೆ.ಗಂಗಾಧರ, ಹಾದಿಗಲ್ಲು ರಾಘವೇಂದ್ರ, ಋಜುವಾತು ಪ್ರಕಾಶನ, ಬೆಂಗಳೂರು, ೨೦೧೨, ಪುಟ–೧೭೪, ಬೆಲೆ ರೂ. ೧೬೫/-

ಕನ್ನಡ ಸಾಹಿತ್ಯವು ೭೦ರ ದಶಕದ ನಂತರ ತನ್ನ ಆಲೋಚನಾ ಕ್ರಮವನ್ನು ಬದಲಿಸಿಕೊಂಡಿತು. ಇದರಿಂದ ಸಾಮಾಜಿಕ ಬದುಕಿನಲ್ಲಿ ತಳವರ್ಗದಿಂದ ಬಂದಂಥ ಚಿಂತಕರು ಪಟ್ಟಭದ್ರರ ಚರಿತ್ರೆಗಳನ್ನು ಪಲ್ಲಟಗೊಳಿಸಿದರು. ಶಾನುಭೋಗರು ಕುಲಕರ್ಣಿಗಳ, ಪುರೋಹಿತರ ಕಣ್ಣಿಂದ ರೂಪುಗೊಂಡ ಚರಿತ್ರೆಗಳನ್ನು ಒಡೆದು ನಿಜವಾದ ಚರಿತ್ರೆಯ ಹುಡುಕಾಟಕ್ಕೆ ತೊಡಗಿದರು. ಸಾಹಿತ್ಯಕ್ಕೆ ತಳವರ್ಗದವರ ಪ್ರವೇಶದಿಂದ ಚರಿತ್ರೆಯನ್ನು ಬದಲಿಸುವ ಆಲೋಚನಾಕ್ರಮಗಳು ಜರೂರಾಗಿ ನಡೆದವು. ಇಲ್ಲಿಯವರೆಗೂ ಕಾಣೆಯಾಗಿದ್ದ ಶ್ರಮಿಕರ/ ರೈತರ, ಪಾಮರರ ವಿವರಗಳು, ಬದುಕಿನ ಕ್ರಮಗಳು ಚರಿತ್ರೆಯ ಸ್ಥಾನಕ್ಕೆ ಬರಲಾರಂಭಿಸಿದವು. ಅಲ್ಲದೆ ಕೇವಲ ಲಿಖಿತ ದಾಖಲೆಗೆ ಇದ್ದ ಮಹತ್ವವನ್ನು ನಿರಾಕರಿಸಿ ಮೌಖಿಕ ಪರಂಪರೆಗೆ ಮಾನ್ಯತೆಯೂ ಇತ್ತೀಚೆಗೆ ದೊರೆಯಲಾರಂಭಿಸಿತು.

ರೈತರ/ಶ್ರಮಿಕರ ಮತ್ತು ಮೌಖಿಕ ಪರಂಪರೆಯ ಸಾಹಿತ್ಯ, ಬದುಕು ದಾಖಲಾದಂತೆಲ್ಲ ಸಾಹಿತ್ಯಕ್ಕೆ ನಿಜವಾದ ಸತ್ಯ, ಶಕ್ತಿ ಬರಲಾರಂಭಿಸಿತು. ಅಧ್ಯಯನ ಸಂದರ್ಭದಲ್ಲಿ 'ಕಲ್ಚರಲ್ ಹಿಸ್ಟ್ರಿ' ಎಂಬ ಪದ ಮತ್ತು ಪರಿಕಲ್ಪನೆ ಚರ್ಚೆಗೆ ಬಂದ ಹಾಗೆ ಕಾಣೆಯಾಗಿದ್ದ ಸಮುದಾಯ, ಸಂಗತಿಗಳು ಸಾಹಿತ್ಯದ ಪ್ರಮುಖ ಅಂಗಗಳಾಗಿ ಚರಿತ್ರೆಯನ್ನು ಸರಿಯಾದ ದಾರಿಗೆ ತಂದವು.

ಕೆ. ಗಂಗಾಧರ, ಹಾದಿಗಲ್ಲು ರಾಘವೇಂದ್ರರವರ 'ತೀರ್ಥಹಳ್ಳಿಯ ಸುತ್ತಮುತ್ತ' ಕೃತಿ ಈ ಹಾದಿಯಲ್ಲಿ ಪ್ರಮುಖ ಕೃತಿ. ಇದು ಏಕಕಾಲದಲ್ಲಿ ಮೌಖಿಕ ಚರಿತ್ರೆಯನ್ನು, ಸಾಂಸ್ಕೃತಿಕ ಚರಿತ್ರೆಯನ್ನು ಜಾನಪದ ವಿವರಗಳನ್ನು ಕಟ್ಟಿಕೊಡುತ್ತದೆ. ಈಗಾಗಲೇ ತೀರ್ಥಹಳ್ಳಿಯ ಬಗೆಗೆ ಸಾಕಷ್ಟು ಅಧ್ಯಯನಗಳು, ಮಲೆನಾಡಿನ ಬಗೆಗೆ ವಿವರಗಳು

ಸಾಕಷ್ಟು ಬಂದಿವೆ. ಅದೇ ಮೂಲದಿಂದ ಹಲವು ಕವಿಗಳು, ಚಿಂತಕರು ಮೂಡಿದ್ದಾರೆ. ಆ ಪಟ್ಟಿಯೇ ದೊಡ್ಡದಿದೆ. ಕುವೆಂಪುರವರಿಂದ ಯು.ಆರ್ ಅನಂತಮೂರ್ತಿಯವರೆಗೆ. ಅಲ್ಲಿಗೆ ನಿಲ್ಲದೆ ಮುಂದುವರಿಯುತ್ತಲೇ ಇದೆ. ಅಲ್ಲದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರ ವಿವರ 'ಗಾಂಧಿ' ಕೂಡ ಇಲ್ಲಿಗೆ ಬಂದದ್ದು, ಇಲ್ಲಿನ ಚಾರಿತ್ರಿಕ ಮೌಲ್ಯವನ್ನು ತಿಳಿಸುತ್ತದೆ. ಹೀಗೆ ಸಾಂಸ್ಕೃತಿಕವಾಗಿ ಸಮೃದ್ಧವಾಗಿರುವ ನೆಲವನ್ನು ಜಾನಪದೀಯವಾಗಿ, ಸಾಂಸ್ಕೃತಿಕವಾಗಿ ಅಧ್ಯಯನ ಈ ಕೃತಿಯಲ್ಲಿ ನಡೆಸಲಾಗಿದೆ.

ಇದು ಹೊಸ ರೀತಿಯ ಕೃತಿ ಎಂದೇನೂ ಭಾವಿಸಬೇಕಾಗಿಲ್ಲ. ಆದರೆ ಈಗಾಗಲೇ ಸಂಶೋಧನೆಗೊಂಡು ಚಲ್ಲಾಪಿಲ್ಲಿಯಾಗಿರುವ ಚಿಂತನೆಗಳನ್ನು ಒಟ್ಟಿಗೆ ಸಂಕಲಿಸಿದ್ದಾರೆ. ವಿಶೇಷ ಎಂದರೆ ಇಲ್ಲಿ ಆಯ್ಕೆ ಮಾಡಿಕೊಂಡ ಹಾದಿ ಜಾನಪದೀಯ ಮೂಲ. ಸಾಕಷ್ಟು ಜನರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಕೆಲವು ಕಡೆ ವಿಶ್ಲೇಷಿಸಲಾಗಿದೆ. ಸಾಮಾಜಿಕ ಸ್ತರ ವಿನ್ಯಾಸದ ವಿವರಗಳಿವೆ. ಬ್ರಾಹ್ಮಣರಿಂದ ಹಿಡಿದು ದೊಂಬರವರೆಗೆ ಆಚರಣೆ, ನಂಬುಗೆಗಳು, ಸ್ಥಳ ಪುರಾಣಗಳು, ಒಗಟು, ನಿಷೇಧ ಇತ್ಯಾದಿಗಳನ್ನು ಕಟ್ಟಿಕೊಟ್ಟಿದ್ದಾರೆ.

ಸ್ವತಃ ಲೇಖಕರ ಆತ್ಮಕಥನ/ ಅನುಭವದ ಕಥಾನಕದಂತಿರುವ 'ನನ್ನ ತೀರ್ಥಹಳ್ಳಿ' ಭಾಗವಿದೆ. ಅರವತ್ತು-ಎಪ್ಪತ್ತು ವರ್ಷಗಳ ಹಿಂದಿನ ತೀರ್ಥಹಳ್ಳಿಯನ್ನು ಕಾಣಿಸುವಾಗ ತಾನು ಕಂಡ ಬದುಕು, ಕಳೆದುಕೊಳ್ಳುತ್ತಿರುವ ಆತಂಕ, ಹೊಸ ಜಗತ್ತಿನಲ್ಲಿ ಬದುಕಲೇ ಬೇಕಾದ ಅನಿವಾರ್ಯವನ್ನು ನೋವಿನಿಂದಲೇ ವಿವರಿಸುತ್ತಾರೆ. ಆಧುನಿಕತೆ ಬಂದು ಹಳ್ಳಿಯ ಮೂಲ ಸ್ವರೂಪವನ್ನು ಆಧುನಿಕರಿಸಿದ ಬಗೆಗೆ ವಿಷಾದವಿದೆ.

ತಮ್ಮ ಬಾಲ್ಯದ ಅನುಭವಗಳನ್ನು ಕಟ್ಟಿಕೊಡುವಾಗ ಕೃತಿಯ ನಿಜವಾದ ಶೋಧ ಎದ್ದು ಕಾಣುತ್ತದೆ. ಆ ಭಾಗ ಹೊಸದೇ ಎನಿಸುವ ವಿವರಗಳ ದಾಖಲೆಗಳಾಗಿವೆ. ಇದುವೇ ಈ ಕೃತಿಯ ಬಹುಮುಖ್ಯ ಭಾಗ ಎಂಬುದು ನನ್ನ ತಿಳುವಳಿಕೆ.

ಇನ್ನುಳಿದಂತೆ 'ತೀರ್ಥಹಳ್ಳಿಗೆ ಗಾಂಧೀಜಿ' ಕುರಿತ ಲೇಖನ ತೀರ್ಥಹಳ್ಳಿಯ ಚಾರಿತ್ರಿಕ ಮಹತ್ವವನ್ನು ತಿಳಿಸುತ್ತದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದ ವಿವರಗಳನ್ನು ವಿವರಿಸುತ್ತಲೇ ತೀರ್ಥಹಳ್ಳಿ ತಾಲ್ಲೂಕು ಅಂದಿನಿಂದ ಪಡೆದ ಸ್ಥಿತ್ಯಂತರಗಳನ್ನೇ ಇಟ್ಟುಕೊಂಡು ಸಾಮಾಜಿಕ, ಭೌಗೋಳಿಕ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಅಲ್ಲಿನ ಕಸುಬು-ಕಲೆಗಾರಿಕೆಗಳು, ಕೌಶಲ್ಯಗಳು ವಿವಿಧ ಧರ್ಮಗಳ ನಡುವಿನ ಸಂಬಂಧಾಂತರಗಳು, ಕೃಷಿ ವಿವರಗಳು, ಕೃಷಿ ನಾಶವಾಗುತ್ತಿರುವ ವಿವರಣೆ, ಪ್ರಕೃತಿ ಮೇಲೆ ಎಂ.ಪಿ.ಎಂ.ನ ದಾಳಿ ವಿವರಗಳು ದಾಖಲಾಗಿವೆ.

'ಸ್ಥಳ ಪುರಾಣ'ದಲ್ಲಿ ತೀರ್ಥಹಳ್ಳಿಯನ್ನು ಕಟ್ಟಿಕೊಡುವಾಗ ಬಹುಪಾಲು ಶಿಷ್ಟ ಪುರಾಣಗಳ ಕಡೆ ಹೆಚ್ಚು ಮುಖ ಮಾಡಿದ್ದಾರೆ. ಮೌಖಿಕ ಪುರಾಣಗಳು ಗೌಣವಾಗಿವೆ. ಅಂದರೆ ಹೆಚ್ಚು ವೈದಿಕ ನೆಲೆಯ ನೋಟವೂ ಇದೆ ಎನಿಸುತ್ತದೆ. ಇದು ವೈದಿಕತೆಯನ್ನು ಪುನರ್ ಪ್ರತಿಷ್ಠಾಪಿಸಬೇಕೆಂಬ ಹಂಬಲವೋ ತಿಳಿಯುವುದಿಲ್ಲ.

ಚರಿತ್ರೆಗೆ ಸಂಬಂಧಿಸಿದ ವಿವರಗಳು, ವೀರಶೈವ ಮಠಗಳ ಪರಂಪರೆ, ಬಿದನೂರು, ಕವಲೇದುರ್ಗಗಳ ರಾಜಕೀಯ್ಕ ಇತಿಹಾಸವನ್ನು ಉಲ್ಲೇಖಿಸಿದ್ದಾರೆ. ಹಲವು ನಂಬಿಕೆ, ಸಂಪ್ರದಾಯ, ಹರಕೆ, ಆಚರಣೆಗಳು, ಧಾರ್ಮಿಕ ನಂಬಿಕೆಗಳು–ಜಕಣಿಮನೆ, ಗೋಡೆ ಚಿತ್ತಾರಗಳು, ಹತ್ತಿಹಾರ, ಕಾಣೆಯಾಗುತ್ತಿರುವ ಸಗಣಿಆಳು, ಮಣಿಕಟ್ಟಿನ ಶಾಸ್ತ್ರಗಳು, ಹಬ್ಬಗಳಾದ ಭೂಮಿ ಹುಣ್ಣಿಮೆ, ದೀಪಾವಳಿ, ಕೋಲಾಟ, ಮರಾಠಿಗರ ಬಾಳೆಸಾಂತು, ಉರುಸ್ ತಳ ಸಮುದಾಯಗಳಾದ ಮಾದಾರ, ಹಸಲರು, ಒಕ್ಕಲರು, ಹೊಲೆಯ, ದೊಂಬರು, ಗಣೇದೊಂಬರು, ಮುಸ್ಲಿಮರು ಮುಂತಾದವರ ಆಚರಣೆಗಳನ್ನು ಇಲ್ಲಿ ಕೊಡಲಾಗಿದೆ.

ದೊಂಬರ ವಿವರವನ್ನು ಹೇಳುವಾಗ ಕಮ್ಮಟದುರ್ಗ ಕುಮಾರರಾಮನ ಕತೆಯನ್ನು ವಿವರಿಸುತ್ತಾರೆ, ವಿಶ್ಲೇಷಿಸುವುದಿಲ್ಲ. ಈ ಥರದ ಕೊರತೆ ಈ ಕೃತಿಗಿದೆ. 'ಕುಮಾರರಾಮನ' ಕತೆ ತೀರ್ಥಹಳ್ಳಿಗೆ ತಲುಪಿರುವುದು ದೊಂಬರಿಂದ ಎಂಬ ವಿವರವಿದೆ. ಅದರೆ ವಿವರಗಳಲ್ಲಿ ಮಾತಂಗಿ ರಾಮನೊಂದಿಗೆ ಸತಿ ಹೋಗುತ್ತಾಳೆ. ಹಾಗಾಗಿ ಅವಳ ಪ್ರಾಣತ್ಯಾಗದ ಕುರುಹೇ 'ಮಾಸ್ತಿಗಲ್ಲು'(ಪು–೧೧೦) ಎನ್ನುತ್ತಾರೆ. ಅದರೆ ಮಾಸ್ತಿಗಲ್ಲುಗಳಿಗೆ ಅದಕ್ಕೂ ಹಿಂದಿನ ಚರಿತ್ರೆ ಇರುವುದನ್ನೇ ಲೇಖಕರು ಮರೆತಿದ್ದಾರೆ ಎನಿಸುತ್ತದೆ.

ಹೀಗೆ 'ತೀರ್ಥಹಳ್ಳಿಯ ಸುತ್ತಮುತ್ತ' ಕೃತಿಯ ರಚನೆಯ ಹಿಂದೆ ಕಳೆದು ಹೋಗುತ್ತಿರುವುದನ್ನು ಆಧುನಿಕತೆಗೆ ಪರಿಚಯಿಸುವುದು ವರ್ತಮಾನದ ತೀರ್ಥಹಳ್ಳಿಗೆ ಭೂತದ ತೀರ್ಥಹಳ್ಳಿಯ ಕತೆ ತಿಳಿಸುವುದು ಅಗಿದೆ. ಹೀಗಾಗಿ ತೀರ್ಥಹಳ್ಳಿಯ ಸತ್ತಮುತ್ತಲಿನ ಸುಮಾರು ೧೦೦ ವರ್ಷದ ಕಥನವಾಗಿ ಈ ಕೃತಿ ಬೆಳೆದಿದೆ. ೧೯೧೭ರ 'ತೀರ್ಥಹಳ್ಳಿ ತಾಲ್ಲೂಕು ಸಂಘದಿಂದ ಹಿಡಿದು ಮಹಮದೀಯರ ಮೊಬೈಲ್ ಅಂಗಡಿಯವರೆಗೆ ಈ ಕೃತಿ ಹರಿದಿದೆ.

ಕೆಲವು ಕಡೆ ತೀರ್ಥಹಳ್ಳಿಯ ಕಥನ ಕಟ್ಟುವ ಭರದಲ್ಲಿ ಪುನರುಕ್ತಿಗಳು ಬಂದಿವೆ. ಅವುಗಳನ್ನು ನಿಯಂತ್ರಿಸಬಹುದಿತ್ತು. ಈಗಾಗಲೇ ಚರ್ಚಿತವಾಗಿರುವ ವಿಷಯಗಳು ಅಧ್ಯಯನಗಳು ಇದರೊಂದಿಗೆ ಬಿಡಿಸಲಾಗದಂತೆ ಸಿಕ್ಕಿಕೊಂಡಿವೆ. ಆದಾಗ್ಯೂ ಈ ಕೃತಿಗೆ ಒಂದು ವಿಶಿಷ್ಟತೆ ಇದೆ. ಅದು ಅಲ್ಲಲ್ಲಿ ಚದುರಿದ್ದ ವಿವರಗಳನ್ನೂ ತಮ್ಮ ನೋಟ ಕ್ರಮದಿಂದ ಕಟ್ಟಿಕೊಟ್ಟ ತೀರ್ಥಹಳ್ಳಿಯ ಚರಿತ್ರೆಗೆ ಇಟ್ಟಿಗೆಯನ್ನು ನೀಡಿದ್ದಾರೆ. ಅವರಿಗೆ ಶುಭಾಶಯಗಳು.

ರವಿಕುಮಾರ್ ನೀಹ

೧೮. ಕನಕಗಿರಿ ನಾಯಕರ ಸಮುದಾಯದೊಟ್ಟಿಗಿನ ಆಡಳಿತ

ಕನಕಗಿರಿ ನಾಯಕರು, ಸಂ. ಡಾ. ತಾರಿಹಳ್ಳಿ ಹನುಮಂತಪ್ಪ,
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬, ೨೦೧೨, ಪುಟ–೧೪+೧೨೦+೧೨, ಬೆಲೆ ರೂ. ೧೬೦/-

ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯ ಇತಿಹಾಸದಲ್ಲಿ ಘನತೆ, ವೈಭವದಿಂದ ರಾಜ್ಯವಾಳಿ ತಮ್ಮ ನೆಲದ ಗ್ರುಣ, ಸತ್ವದ ಹಿರಿಮೆಯನ್ನು ಸಾರಿ, ಮಹಾನ್ ಸಾಮ್ರಾಟ ರಾಜರಂತೆ ಅವರ ನೆರಳಲ್ಲಿ ಬೆಳೆದು ಮುಂದೆ ಸ್ವತಂತ್ರವಾಗಿ ತಮ್ಮ ನೆಲದ ಕಂಪು ಶ್ರೀಮಂತಿಕೆಯನ್ನು ಹರಡಿ, ವೈಭವದಿಂದ ರಾಜ್ಯಭಾರ ಮಾಡಿದ್ದಾರೆ. ಕನಕಗಿರಿ ನಾಯಕರನ್ನು ಕುರಿತ ಪರಿಚಯವನ್ನು 'ಕನಕಗಿರಿ ನಾಯಕರು' ಎಂಬ ಶೀರ್ಷಿಕೆಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡನೆಯಾದ ಪ್ರಬಂಧಗಳ ಸಂಗ್ರಹದಲ್ಲಿ 'ಕನಕಗಿರಿ ನಾಯಕರು' ಕೃತಿಯನ್ನು ಡಾ. ತಾರಿಹಳ್ಳಿ ಹನುಮಂತಪ್ಪನವರು ಸಂಪಾದಿಸಿದ್ದಾರೆ.

'ಕಣ್ಣು ಇದ್ದರೆ ಕನಕಗಿರಿ ನೋಡು ಕಾಲು ಇದ್ದರೆ ಹಂಪಿ ನೋಡು' ಎಂಬ ಗಾದೆಯಿಂದ ಅದರ ಹಿರಿಮೆ, ವೈಭವ ಅರಸರ ಅಡಳಿತದ ಅವಧಿಯ ಸಾಧನೆಗಳು ಕಣ್ಣಿಗೆ ಗೋಚರವಾಗುತ್ತವೆ. ಈ ಪುಸ್ತಕದಲ್ಲಿ ನಾಡಿನ ಹಿರಿಯ ವಿದ್ವಾಂಸರು, ಪ್ರಬಂಧಕಾರರು ಕನಕಗಿರಿಯನ್ನು ಕುರಿತು ವೈವಿಧ್ಯಮಯವಾಗಿ ಮಂಡಿಸಿದ ೨೪ ಲೇಖನಗಳು ಇವೆ. ಕನಕಗಿರಿಯ ಪರಿಚಯ, ಭೌಗೋಳಿಕ ಹಿನ್ನೆಲೆ, ಕದನ ಕಲಿಗಳ ಸಾಹಸ, ನೆಲ ಜಲ ಇತಿಹಾಸ, ನಾಯಕರ ಕಾಲದ ಹಬ್ಬ ಹರಿದಿನ, ಜಾತ್ರೆ ಉತ್ಸವಗಳು, ಅವುಗಳ ಸಾಂಸ್ಕೃತಿಕ ಕೊಡುಗೆ, ಯುದ್ಧ ನೀತಿ, ಯುದ್ಧೋಪಕರಣಗಳು, ಕನಕಗಿರಿ ನಾಯಕರ ಕಾಲದ ಕೆರೆ, ಬಾವಿ, ಗುಡಿ, ಗೋಪುರಗಳು, ದೇವಾಲಯಗಳ ಚರ್ಚೆಯಿದೆ. ಅದರಲ್ಲೂ ವಿಶೇಷವಾದ ಕನಕಾಚಲ ದೇವಾಲಯ, ಕನಕಗಿರಿಯ ಸಿರಿ, ವೈಭವ, ಕಲೆ, ವಾಸ್ತುಶಿಲ್ಪ, ಸೈನ್ಯ ವ್ಯವಸ್ಥೆ, ರಾಜನೀತಿ, ಕೋಟೆಗಳ ಅಸ್ತಿತ್ವ ಮತ್ತು ಸಾಹಿತ್ಯ ಕನಕಗಿರಿ ನಾಯಕರ ಕೊಡುಗೆ ಕುರಿತ ಲೇಖನಗಳಿವೆ. ನಾಯಕರ ಕಾಲದ ರಾಜಕೀಯ ಇತಿಹಾಸ ಕನಕಗಿರಿ ಸಂಸ್ಥಾನದೊಂದಿಗೆ ಇತರ ನಾಯಕ ದೊರೆಗಳ ಸಂಬಂಧ ಅಂದಿನ ಕಾಲದ ಜಾನಪದ, ಶಾಸನಗಳ ಮಹತ್ವ ಹೈದ್ರಾಬಾದ್ ವಿಮೋಚನಾ ಚಳುವಳಿಯಲ್ಲಿ ಕನಕಗಿರಿ ನಾಯಕರ ಪಾತ್ರ, ಅಂದಿನ ನೀರಾವರಿ ವ್ಯವಸ್ಥೆ, ಬೇಟೆ ಪದ್ಧತಿ, ಕೃಷಿ, ಸಾಮಾಜಿಕ ಜೀವನ ಹೀಗೆ ಅಂದಿನ ಸಮಸ್ತ ವೈಭವಗಳ ವಿಶಾಲ ಚಿತ್ರಣವನ್ನು ಈ ಪುಸ್ತಕ ಮಾಡಿಕೊಡುತ್ತದೆ.

ಸುಶೀಲಾ ಸದಾಶಿವಯ್ಯ

೧೯. ಕರಾವಳಿ ಬಹುಮುಖತೆ

ಕರಾವಳಿ, ಜೀಯು ಹೊನ್ನಾವರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು, ೨೦೧೨, ಪುಟ-೧೬+೩೧೨, ಬೆಲೆ ರೂ. ೧೪೬/-

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಿಂದ ೨೦೧೨ರಲ್ಲಿ ಜೀಯು ಹೊನ್ನಾವರರವರ 'ಕರಾವಳಿ' ಕೃತಿಯು ಪ್ರಕಟಗೊಂಡಿರುವುದು ಸಂತೋಷದ ಸಂಗತಿ. ಜೀಯು ಅವರ ಅಯ್ದ ಬರಹಗಳನ್ನು, ಪ್ರಸಾರಾಂಗದ ಗೌರವ ನಿರ್ದೇಶಕ ಪ್ರೊ. ಡಿ.ಕೆ. ರಾಜೇಂದ್ರರವರು ಪುಸ್ತಕ ರೂಪದಲ್ಲಿ ತಂದಿರುವುದು ಶ್ಲಾಘನೀಯ.

ಈ 'ಕರಾವಳಿ' ಕೃತಿಯಲ್ಲಿ ಇರುವ ಬರಹಗಳು ಕರಾವಳಿಯ ಸಾಮಾಜಿಕ, ರಾಜಕೀಯ ಮೊದಲಾದ ವಿಷಯಗಳನ್ನು ಒಳಗೊಂಡಂತೆ ಇತರೆ ವಿಚಾರಗಳನ್ನು ಚರ್ಚಿಸುತ್ತವೆ. ವೈವಿಧ್ಯ ವಸ್ತು, ವಿಷಯ ಮತ್ತು ವೈಶಿಷ್ಟ್ಯಪೂರ್ಣ ಕೃತಿಯಾಗಿ ವೈಚಾರಿಕ ಚಿಂತನೆಗಳಿಂದ ಕೂಡಿದೆ. ಚಿಂತನೆ, ಮರುಚಿಂತನೆ ಅಡಿಯಲ್ಲಿ ಬರೆದಿರುವಂತೆ ಜೀಯು ಹೊನ್ನಾವರರವರು ಸಾಮಾಜಿಕ ಕಾಳಜಿಯುಳ್ಳ ಲೇಖಕರಾಗಿದ್ದಾರೆ.

ಪ್ರಸಾರಾಂಗದ ಗೌರವ ನಿರ್ದೇಶಕರಾದ ಪ್ರೊ. ಡಿ.ಕೆ. ರಾಜೇಂದ್ರರವರ 'ನಿರ್ದೇಶಕರ ಮಾತು'ಗಳಲ್ಲಿ ಪ್ರಸ್ತಾಪಿಸಲಾದ ವಿಷಯವೂ ಸಹ ಗಮನಾರ್ಹವಾದುದು. 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಮುಕ್ತ ವಿಶ್ವವಿದ್ಯಾನಿಲಯದ ಘೋಷಣೆ ಜ್ಞಾನ ಗಂಗೆಯನ್ನು ಎಷ್ಟು ವಿಧದಲ್ಲಿ ಎಷ್ಟು ರೂಪಗಳಲ್ಲಿ ತುಂಬಿ ಹಂಚಿದರೂ ಹೊಸತನ ಇದ್ದೇ ಇರುತ್ತದೆ ಎಂಬುದು ಅಕ್ಷರಶಃ ಸತ್ಯವಾಗಿರುತ್ತದೆ. ಕಾರಣ ಉನ್ನತ ಶಿಕ್ಷಣದ ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿಷಯಗಳನ್ನು ತಿಳಿಸುವ ಉದ್ದೇಶದಿಂದ ಹೊರ ತಂದಿರುವ ಇಂತಹ ವೈಚಾರಿಕ ಲೇಖನಗಳ ಕೃತಿಯು ವಿದ್ಯಾರ್ಥಿಗಳು ಬಹುವಿಧವಾಗಿ ಚಿಂತಿಸುವಂತೆ ಮಾಡುತ್ತದೆ.

ಕರಾವಳಿ ಕೃತಿಯು ಸುಮಾರು ೧೦೧ ಲೇಖನಗಳನ್ನು ಒಳಗೊಂಡ ಲೇಖನಗಳ ಗುಚ್ಛವೆನ್ನಬಹುದು. ಮೊದಲ ಲೇಖನವೇ 'ಠಾಗೂರರ ನೆನಪಿಗೆ' ಲೇಖನ ಗಮನ ಸೆಳೆಯುವಂತಹದ್ದು. ಠಾಗೂರರಿಗೆ ವರವಾಗಿದ್ದ ಕರಾವಳಿಯ ಕಡಲತೀರ, ಪ್ರಕೃತಿ, ರವೀಂದ್ರ ವ್ಯಕ್ತಿತ್ವ, ಕಾರವಾರದ ರಕ್ಷಣೆಗೆ, ಜನರ ರಕ್ಷಣೆಗೆ, ಸರ್ಕಾರದ ಯೋಜನೆಗಳು ಆದರೆ ಅಭಿವೃದ್ಧಿಯಾಗದ, ಆಗಬೇಕಾದ ಸಮಯಕ್ಕೆ ಆಗದೆ ಉಳಿದು ಜನರು ನಷ್ಟ ಅನುಭವಿಸುವಂತೆ ಮಾಡುವ ವಿಚಾರಗಳು ಹಲವಾರು ಇಲ್ಲಿವೆ. ಅನೇಕ ಲೇಖನಗಳಲ್ಲಿ ಮುಖ್ಯವಾಗಿ ಕಂಡುಬರುವ ಸರ್ಕಾರದ ಭರವಸೆಯ ಯೋಜನೆಗಳು ಬರೀ ಮಾತಿನಲ್ಲಿ ಉಳಿಯುವ ಅಭಿವೃದ್ಧಿ, ಕರಾವಳಿಯ ಕೆಲಸಗಳು ಶರಾವತಿ ನೆರೆ ನಿಲ್ಲಿಸಿದವರನ್ನು ಜನ ಸ್ಮರಿಸಲಿ ಎಂಬ ಲೇಖನ, ಶರಾವತಿ ನೆರೆ ಬಂದು ಉಂಟಾದ ನಷ್ಟವನ್ನು ಕುರಿತ ವಿಚಾರ, ಸರಕಾರದ ಸಾಂಕೇತಿಕ ಪರಿಹಾರದ ವಿಚಾರ, ಕೊಂಕಣ ರೈಲ್ವೆಯ ವಿಚಾರ ಹೀಗೆ ಒಂದೇ ಲೇಖನದಲ್ಲಿ ಹತ್ತು ಹಲವಾರು ವಿಚಾರಗಳನ್ನು ಚರ್ಚಿಸುತ್ತಲೆ ಸಾಗುತ್ತವೆ. 'ಯಕ್ಷಗಾನದ ಜೀವವೈವಿಧ್ಯ ಉಳಿಸುವ ಕಾರ್ಯಕ್ರಮಗಳು ದಾಖಲಾಗಲಿ' ಎಂಬ ಲೇಖನವು ಸಾಂಪ್ರದಾಯಿಕ ಕಲೆಗಳನ್ನು ಉಳಿಸುವ ಪ್ರಯತ್ನ ಲೇಖಕರ ಕಾಳಜಿಯಾಗಿ ಚರ್ಚಿತವಾಗುತ್ತದೆ.

ಮುಂದೆ ಸಾಗಿದಂತೆ ಕಾಡಿನ ಕೋಗಿಲೆ ಆಕಾಶವಾಣಿ, ಹೊನ್ನಾವರದ ಬಾವಿಯ ಸತ್ಯ ಕಥೆ, ಉತ್ತರ ಕನ್ನಡದ ಅಭಿವೃದ್ಧಿಗೆ ಉತ್ಸುಕರಾಗಿದ್ದ ಹೆಗಡೆ, ಅರಸು ಪಾಟೀಲ ಪೈಗಳ ನೆನಪು, ಹಳ್ಳಿಗಳ ಮುಕ್ತಿಗೆ ದುಡಿದ ಕಡವೆ ಎಂಬ ಲೇಖನವು 'ಕಡವೆಯ

ಗಾಂಧಿ' ಎಂದು ಕರೆಸಿಕೊಂಡಿದ್ದ ರಾಮಕೃಷ್ಣ ಹೆಗಡೆಯವರನ್ನು ಸ್ಮರಿಸುತ್ತದೆ. ಸಾಧಿಸಿದ್ದರೂ ದಾಖಲಾಗದ ಸಂಗೀತ ಚರಿತ್ರೆಯಲ್ಲಿ ದಾಖಲಾಗದ ಕಲ್ಪಾಗ ಗೋವಿಂದ ಹೆಗಡೆ, ಶಂಭಣ್ಣನಿಗೆ ಸಾವಿನ ಸುಳಿವಿತ್ತೇ? ಹೀಗೆ ಒಂದಾದ ಮೇಲೆ ಒಂದರಂತೆ ಸಾಗುವ ೧೧೧ ಲೇಖನಗಳೂ ವಸ್ತುವಿಶೇಷತೆಯಿಂದ ಓದುವಂತೆ ಪ್ರೇರೇಪಿಸುತ್ತವೆ.

ಒಟ್ಟು ಲೇಖನಗಳಲ್ಲಿ ಗುರುತಿಸಬಹುದಾದ ವಸ್ತುವನ್ನು ಹೀಗೆ ಒಂದು ಪಟ್ಟಿ ಮಾಡಬಹುದಾಗಿದೆ. ವ್ಯಕ್ತಿ ಸ್ಮರಣೆ, ಬಾಲ್ಯವಿವಾಹ, ಸಾಕ್ಷರತೆ, ಆಯುರ್ವೇದ, ವಾಹನ, ಪ್ರವಾಸಿಗರು, ಸರಕಾರದ ಯೋಜನೆ, ಕನ್ನಡದ ಬಗ್ಗೆ, ಹಸಿ ಸುಳ್ಳುಗಳ ರಾಜಕಾರಣಿ, ರಾಜಕೀಯ, ರಾಷ್ಟ್ರೀಯ ಹೆದ್ದಾರಿಗಳು, ತೆಂಗು-ಕಂಗು, ಹಣ್ಣು ತರಕಾರಿ, ನ್ಯಾಯದ ಬೆಲೆ, ರೈತರು, ಶಿಕ್ಷಣ ಸಂಸ್ಥೆಗಳು, ಆಧಾರ ಬ್ಯಾಂಕ್, ಬಂಡವಾಳ ಹೂಡಿಕೆ, ಕ್ರೀಡೆ, ಅಡಿಕೆ ಮಾರಾಟ, ಕೊಂಕಣ ರೈಲ್ವೆ ನೆಲದಾಹಿಗಳು, ಅಧಿಕಾರಿವರ್ಗ, ಮ್ಯಾಂಗನೀಸ್, ಆರೋಗ್ಯ, ಶಿಕ್ಷಣ, ಉಚಿತ ಯೋಜನೆ, ಹೃದಯ ಖಾಯಿಲೆಯ ಸಮಸ್ಯೆ, ಜನನಾಯಕರ ಬದುಕಿನ ಬಣ್ಣ, ದತ್ತು ವಿಚಾರ, ಹೆಣ್ಣಿಗೆ ಶಿಕ್ಷಣ, ಮತ್ಸೋದ್ಯಮ, ಮೀಸಲಾತಿ, ಮರ, ಗೋಶಾಲೆ, ಗೋಹತ್ಯೆ, ಗೋ ಮಾರಾಟ ಧರ್ಮಕ್ಷೇತ್ರದ ವಿಕಾರ, ಹಾಲಿನ ಕೊರತೆ, ದನಕಟ್ಟುವ ಬಗ್ಗೆ, ರಕ್ಷಣೆ, ಕಾನೂನು, ಅರಣ್ಯ, ಕರಾವಳಿ, ಉತ್ಸವ, ಪ್ಲಾಸ್ಟಿಕ್ ಚೀಲ, ನದೀ ತೀರದ ಜನರ ಗೋಳು, ನಿರಾಶ್ರಿತರ ಸಮಸ್ಯೆ, ಪ್ರಕೃತಿ ವಿಕೋಪ, ಹೋರಾಟ ಇನ್ನೂ ಮೊದಲಾದ ವಿಷಯಗಳ ಸಮಸ್ಯೆಗಳ ಕುರಿತ ವಿಚಾರಗಳನ್ನು ದಾಖಲಿಸುತ್ತಾರೆ.

ಇಲ್ಲಿನ ಬಹುತೇಕ ಲೇಖನಗಳಲ್ಲಿ ಪರಿಹಾರವನ್ನು ಜೀಯುರವರು ಸೂಚಿಸುತ್ತಾರೆ. ಜನಸಾಮಾನ್ಯರು, ಸಂಘಸಂಸ್ಥೆಗಳು, ಸರಕಾರ, ರಾಜಕಾರಣ, ಅಧಿಕಾರಿಗಳು ಏನು ಮಾಡಬೇಕು ಎಂಬುದನ್ನು ಸೂಕ್ತವಾಗಿ ಹೇಳುವ ಪ್ರಯತ್ನ ಮಾಡಿದ್ದಾರೆ. ವಸ್ತು ನಿಷ್ಠವಾಗಿ ವೈಚಾರಿಕವಾಗಿ ನೋಡುವ ಜೀಯು ಅವರ ಪ್ರಯತ್ನ ಸಾರ್ಥಕವೆನ್ನಬಹುದು. ಹೀಗೆ 'ಠಾಗೂರರ ನೆನಪಿಗೆ' ಎಂಬ ಲೇಖನದಿಂದ ಆರಂಭಗೊಂಡು 'ವಿಘ್ನ ತಡೆಯ ಲಾರದ ನೀನು ವಿಘ್ನಗಳನ್ನೆದುರಿಸಿ ಗೆಲುವು ಪಡೆಯುವ ಶಕ್ತಿಕೊಡು' ಎಂಬುವವರೆಗೆ ಕೊನೆಗೊಳ್ಳುವ, ಎಲ್ಲವನ್ನು ಎದುರಿಸಿ ನಿಲ್ಲುವ ಛಲವನ್ನು ಪ್ರಕಟಪಡಿಸುವ ದಿಟ್ಟತನ ಪ್ರತಿಯೊಬ್ಬನಲ್ಲೂ ಮೂಡಿದಾಗ ಜೀಯುರವರ ಶ್ರಮ ಸಾರ್ಥಕತೆ ಪಡೆಯಲು ಸಾಧ್ಯ.

ಇನ್ನು 'ಕರಾವಳಿ'ಯ ಮುಖಪುಟ ವಿನ್ಯಾಸವು ಕರಾವಳಿಯನ್ನೇ ಪ್ರತಿಬಿಂಬಿಸಿ ದಂತಿದೆ. ಜೀಯು ಹೊನ್ನಾವರರವರು ಕರಾವಳಿಯ ಮತ್ತಷ್ಟು ಸಮಸ್ಯೆಗಳಿಗೆ, ವೈಚಾರಿಕತೆಯನ್ನು ತಂದು ಪ್ರತಿಯೊಬ್ಬ ಪ್ರಜ್ಞಾವಂತನ ಮನಸ್ಸನ್ನು ಜಾಗೃತಿಗೊಳಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತಾಗಲಿ.

ಆರ್. ಶಾಂತ ಕಂಪಾರಹಳ್ಳಿ

೨೦. ಪ್ರಾದೇಶಿಕ ಪರಿಸರದ ಸಮಗ್ರ ಚಿತ್ರಣ

ಬಳ್ಳಾರಿ ಪರಿಸರದ ಸ್ಸಾಂಸ್ಕೃತಿಕ ಪರಂಪರೆ, ಡಾ. ವಾಸುದೇವ ಬಡಿಗೇರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬, ೨೦೧೨, ಪುಟ–೧೨+೩೬೬+೧೬, ಬೆಲೆ ರೂ. ೨೬೦/-

ರಾಷ್ಟ್ರದ ಸಮಗ್ರ ಇತಿಹಾಸವನ್ನು ಗುರುತಿಸುವಾಗ ಪ್ರಾದೇಶಿಕ, ಸ್ಥಳೀಯ, ಆಪ್ತ ವಿಷಯಗಳನ್ನು ಗುರುತಿಸಿಕೊಳ್ಳುವುದು ತೀರಾ ಕಡಿಮೆ. ಅವೆಲ್ಲ ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾಗುವ ಸಾಧ್ಯತೆಯೇ ಹೆಚ್ಚು. ಸ್ಥಳೀಯ ಘಟನಾವಳಿಗಳು, ಆಲೋಚನೆಗಳು, ಸಾಂಸ್ಕೃತಿಕ ಸಂಬಂಧಗಳ ಸಂಶೋಧನೆ, ಇವು ಅಧ್ಯಯನಗಳ ಮೂಲಕ ಸಮಗ್ರವಾಗಿ ನಿರೂಪಿಸಲ್ಪಡುವವರೆಗೆ ರಾಷ್ಟ್ರದ ಇತಿಹಾಸ ಪೂರ್ಣವಾಗುವುದಿಲ್ಲ. ಕರ್ನಾಟಕದಲ್ಲಿ ಬಳ್ಳಾರಿ ಪರಿಸರವನ್ನು ಸುದೀರ್ಘ ಸಂಶೋಧನೆಯ ಮೂಲಕ ಸ್ಥಳೀಯ ದೇಸಿ ಸಂಸ್ಕೃತಿ, ಚಿಂತನೆ ಪರಿಚಯಿಸುವ ಪ್ರಯತ್ನವೇ "ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆಗಳೊಂದಿಗೆ ಭಾಗ–೧". ಈ ಪುಸ್ತಕ ಡಾ. ವಾಸುದೇವ ಬಡಿಗೇರರವರ ಸಂಶೋಧನಾ ಕೃತಿ.

ಕರ್ನಾಟಕದ ಒಂದೊಂದು ಪ್ರದೇಶವೂ ತನ್ನದೇ ಆದ ಪ್ರಾದೇಶಿಕ ಕಂಪು, ದೇಸಿ ಸಂಸ್ಕೃತಿ, ವಿಭಿನ್ನ ರೀತಿಯ ಆಹಾರ, ಭಾಷೆ, ಸಂಸ್ಕೃತಿ, ಆಚಾರ–ವಿಚಾರ, ವಾಯುಗುಣ, ಭೌಗೋಳಿಕ ಪರಿಸರ ಹೀಗೆ ಪ್ರತಿಯೊಂದರಲ್ಲಿ ವಿಭಿನ್ನತೆ ಇದ್ದು, ಏಕತೆಯ ಕನ್ನಡತನವನ್ನು ಮೈಗೂಡಿಸಿಕೊಂಡು ಕನ್ನಡನಾಡಿನ ಹೆಮ್ಮೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ಸ್ಥಳೀಯ ವಿಷಯಗಳು, ಪುರಾತತ್ವ ವಿಚಾರಗಳು ಕರ್ನಾಟಕ ದೇವಾಲಯ ಕೋಶಗಳಂತಹ ಮಹತ್ವದ ದಾಖಲೆಗಳು, ಶಾಸನಗಳು ಆಯಾ ಪ್ರದೇಶದ ಕ್ಷೇತ್ರಕಾರ್ಯದಲ್ಲಿ ದಾಖಲಿಸುವ ಮಹತ್ವದ ಆಕರಗಳನ್ನು ಬಳಸಿಕೊಂಡು ಪ್ರಾದೇಶಿಕ ಸಂಸ್ಕೃತಿಗೆ ಸಂಬಂಧಿಸಿದ ಕೃತಿಗಳ ರಚನೆಗೆ ಸಹಕಾರಿಯಾಗುತ್ತದೆ.

ಕನ್ನಡನಾಡು ನುಡಿಯ ಪ್ರಾದೇಶಿಕ ಸೊಗಡನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ, ಚಲನಶೀಲ ಪ್ರಕ್ರಿಯೆಯಾಗಿ, ಹೊಸ ಆಲೋಚನೆಯ ನೆಲೆಯಲ್ಲಿ ಅಧ್ಯಯನ ನಡೆಯುತ್ತದೆ. ಸ್ಥಳೀಯ ಪರಿಸರದ ಸಾಂಸ್ಕೃತಿಕ ಸಮಸ್ಯೆಗಳನ್ನು ಸಮಕಾಲೀನ ಭಾಷಿಕ ಪ್ರಕ್ರಿಯೆಗಳನ್ನು ಅದರ ಅಧ್ಯಯನದ ಹೊಸ ಸಾಧ್ಯತೆಗಳನ್ನು ಚರ್ಚಿಸುವ, ರೂಪಿಸುವ, ಹೊಸಮಾರ್ಗಗಳತ್ತ ಮುಖಾಮುಖಿಯಾಗಿಸುವ ಅನಿವಾರ್ಯ ಅವಶ್ಯಕತೆ ಅಧ್ಯಯನದ ವಿಶೇಷತೆಯಾಗಿದೆ.

ಈ ಕೃತಿ ಸಂಶೋಧನಾ ಪ್ರಬಂಧವಾಗಿರುವುದರಿಂದ ಸ್ಥಳೀಯ ಇತಿಹಾಸ, ಜನಜೀವನ, ಪೌರಾಣಿಕ ಹಿನ್ನೆಲೆ, ಪ್ರಾಗಿತಿಹಾಸ ಭೌಗೋಳಿಕ, ರಾಜಕೀಯ, ಆಡಳಿತ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ದೇವಾಲಯ, ಮೂರ್ತಿ, ಶಿಲ್ಪಕಲೆ ಹೀಗೆ

ಪ್ರತಿಯೊಂದು ವಿಭಾಗವನ್ನು ಕೂಲಂಕಷವಾಗಿ ವಿಸ್ತರಿಸಿ, ಹೊಸ ಸಾಧ್ಯತೆಗಳ ನೆಲೆಯಲ್ಲಿ ನೋಡಿ ಚಿಂತಿಸುವ ಪ್ರಯತ್ನವಾಗಿದೆ.

ಶಾಸನದಲ್ಲಿ ಪೌರಾಣಿಕ ಕಥೆಗಳು ದಾಖಲಾಗಿರುವುದನ್ನು ಹಾಗೂ ಅದರಲ್ಲಿನ ಸ್ಥಳಗಳನ್ನೂ ಗುರ್ತಿಸಲಾಗಿದೆ. ರಾಜಕೀಯ, ಸಾಮಾಜಿಕ, ಸಾಹಿತ್ಯ, ಶಿಕ್ಷಣ, ಧರ್ಮ, ಶಿಲ್ಪಕಲೆ ಎಲ್ಲವನ್ನೂ ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆಯನ್ನು ಪುನರ್ ರಚಿಸುವಲ್ಲಿ ಪ್ರಾಗಿತಿಹಾಸ ಕಾಲದ ಅವಶೇಷ, ಸ್ಮಾರಕ, ಶಾಸನ, ಸಾಹಿತ್ಯ, ಜನಪದ ಮೌಖಿಕ ಆಕರಗಳು ಹೇರಳವಾಗಿ ದೊರೆಯುವುದನ್ನು ಈ ಗ್ರಂಥ ರಚನೆಯಲ್ಲಿ ಬಳಸಿಕೊಳ್ಳಲಾಗಿದೆ.

ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ ಭಾಗ–೧ರಲ್ಲಿ ಪ್ರಾರಂಭದ ಇತಿಹಾಸದ ಹೆಜ್ಜೆಗಳನ್ನು ಅಲ್ಲಿ ದೊರಕುವ ಶಾಸನಗಳನ್ನು, ಶಿಲ್ಪಗಳನ್ನು ಆಧಾರವಾಗಿಟ್ಟುಕೊಂಡು ದಾಖಲೆಗಳಾಗಿ ಪರಿಗಣಿಸಿ ಸ್ಥಳ ಪರಿಶೀಲನೆಯಲ್ಲಿ ಸಂಚಾರದ ಮೂಲಕ ಆಯಾ ಪ್ರದೇಶದ ಮಹತ್ವವನ್ನು ಕಟ್ಟಿಕೊಡುತ್ತಾರೆ. ಎಲ್ಲವನ್ನೂ ಸಮಗ್ರವಾಗಿ ನೋಡುವ ಪರಿಶೀಲಿಸುವ ಕಲ್ಪನೆ ಊಹೆಗಳಿಗೂ ಆಧಾರ ರೂಪವಾದ ದಾಖಲೆಗಳನ್ನು ಹೇಳುತ್ತಾ ಸ್ಥಳೀಯವಾದ ವಿಶೇಷವನ್ನು, ಇತಿಹಾಸ ಪುಟದಲ್ಲಿ ದಾಖಲಾಗದೆ ಉಳಿದಿರುವ ಅಂಶಗಳನ್ನು ಗಮನಿಸುತ್ತಾ ಆ ಕಾಲದ ಚರಿತ್ರೆಯ ಸ್ಪಷ್ಟ ಚಿತ್ರಣವನ್ನು ಗುರುತರವಾಗಿ ದಾಖಲಿಸಿರುವ ಪ್ರಯತ್ನವನ್ನು ಸಂಶೋಧಕರಾದ ಡಾ. ವಾಸುದೇವ ಬಡಿಗೇರರವರು ಮಾಡಿದ್ದಾರೆ.

ನಾವು ನಿಂತಿರುವ ಸ್ಥಳದ ಮಹಿಮೆಯೇ ನಮಗೆ ಗೊತ್ತಿಲ್ಲದೆ ಗೌಣವಾಗಿರುತ್ತದೆ. ಕಣ್ಣಿಗೆ ಕಾಣದ ದೂರದ ಪ್ರದೇಶಗಳ ವಿಶಿಷ್ಟತೆಯೇ ಮಹತ್ವದ್ದಾಗಿ ಕಾಣುವಂತಹ ಇಂದಿನ ದಿನಗಳಲ್ಲಿ ಈ ರೀತಿ ನಮ್ಮ ಸ್ಥಳದ ಮಹಿಮೆ, ಹಿರಿತನ ತಿಳಿಸಿ ಅದನ್ನು ಪೂರ್ಣವಾಗಿ ಚಾರಿತ್ರಿಕ ದಾಖಲೆಗಳೊಂದಿಗೆ ಅರಿಯುವಂತಹ, ತಮ್ಮ ನೆಲದ ಗುಣ ಸಂಪನ್ನತೆಯನ್ನು ಗೌರವಿಸುವ ಮನೋಭಾವವನ್ನು ಹೊಂದುವಂತೆ ಮಾಡುವಲ್ಲಿ ಪ್ರಾದೇಶಿಕ ಪರಂಪರೆಯ ಕೃತಿಗಳು ಸಹಕಾರಿಯಾಗುತ್ತವೆ. ಇಂತಹ ಸಾಂಸ್ಕೃತಿಕ ಮಹತ್ತಿನ ಯಶಸ್ವಿ ಚಿತ್ರಣವನ್ನು 'ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ'ಯನ್ನು ನಾಡಿನ ಜನತೆಗೆ ತಿಳಿಸಿಕೊಡುವಲ್ಲಿ ಸಹಕಾರಿಯಾಗಿದೆ. ಪ್ರಾದೇಶಿಕ ಪರಿಸರದ ಸಮಗ್ರ ಚಿತ್ರಣದ ಮಹತ್ವದ ಕೃತಿ ಇದಾಗಿದೆ.

ಸುಶೀಲಾ ಸದಾಶಿವಯ್ಯ

೨೧. ಕೊರಗ ಸಮುದಾಯದ ಅನನ್ಯತೆ

ಕೊರಗರು : ಸಮಕಾಲೀನ ಸ್ಪಂದನ, ಸಂ. ಡಾ. ಗಂಗಾಧರ ದೈವಜ್ಞ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬, ೨೦೧೨, ಪುಟ–೧೨+೮೪+೮, ಬೆಲೆ ರೂ. ೮೦/-

"ಕೊರಗರು : ಸಮಕಾಲೀನ ಸ್ಪಂದನ" ಪುಸ್ತಕವನ್ನು ಡಾ. ಗಂಗಾಧರ ದೈವಜ್ಞ ರವರು ಸಂಪಾದಿಸಿದ್ದಾರೆ. ಕೊರಗ ಬುಡಕಟ್ಟು ಸಮುದಾಯವನ್ನು ಕುರಿತು ಚಿಂತನೆ, ಅಭಿಪ್ರಾಯಗಳು, ಅವರ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಆಮೂಲಾಗ್ರವಾಗಿ ಚರ್ಚಿಸಿ ಒಂದೆಡೆ ಸಂಕಲಿಸಿದ ಲೇಖನಗಳು ಇಲ್ಲಿವೆ.

ಹಿಂದುಳಿದ ಒಂದು ಬುಡಕಟ್ಟು ಸಮುದಾಯದವರನ್ನು ಕುರಿತಂತೆ ಅಭಿಪ್ರಾಯ ಗಳನ್ನು ಆ ಸಮುದಾಯದವರಲ್ಲದ ಮೇಲ್ವರ್ಗದವರು ದೂರದಿಂದ ಅಥವಾ ಹತ್ತಿರದಿಂದ ನೋಡಿ ಬರೆಯುವುದರಿಂದ ಅವರ ಸಮಸ್ಯೆಗಳು, ಅವರಿಗಾದ ಅನ್ಯಾಯ ಗಳನ್ನು ಹೆಚ್ಚು ಆಪ್ತವಾಗಿ, ನೇರವಾಗಿ ಬರೆಯುವುದು ಕಷ್ಟದ ಕೆಲಸ. ಅಂತಹ ಬರವಣಿಗೆ ಸಮುದಾಯದ ಸ್ಪಷ್ಟ ಚಿತ್ರಣವನ್ನು ಕೊಡುವಲ್ಲಿ ಸೋಲುತ್ತದೆ. ಈ ಕೃತಿಯಲ್ಲಿ ಕೊರಗ ಸಮುದಾಯದವರನ್ನು ಕ್ಷೇತ್ರಕಾರ್ಯದ ಮೂಲಕ ದರ್ಶಿಸಿ ಲೇಖನದಲ್ಲಿ ಚರ್ಚಿಸಿದ್ದಾರೆ. ಜಾತಿಯಲ್ಲಿ ಕನಿಷ್ಠ ಎನಿಸಿಕೊಂಡು, ಅವರಿಗಾದ ನೋವು, ಅಪಮಾನ ಗಳನ್ನು ಮಾನವೀಯವಾಗಿ ನೋಡುವಂತೆ ಮೇಲ್ವರ್ಗದವರಿಗೆ ಬೌದ್ಧಿಕ ವರ್ಗದವರಿಗೆ ತಿಳಿಸಿಕೊಡುವಂತಹ, ಅವರಿಗೂ ಒಂದು ಉತ್ತಮ ಬದುಕು ಕೊಡಬೇಕೆನ್ನುವ ಪ್ರೇರಣೆ ನೀಡುವಂತಹ ಕೃತಿ.

ಕೊರಗ ಸಮುದಾಯದವರ ಬಗೆಗೆ ೧೦ ಲೇಖನಗಳು ಈ ಕೃತಿಯಲ್ಲಿದ್ದು, ಹಿಂದುಳಿದ ಬುಡಕಟ್ಟು ಸಮುದಾಯವಾದ ಕೊರಗ ಸಮುದಾಯಕ್ಕೆ ಅವರದೇ ಆದ ಭಾಷೆ, ಸಂಸ್ಕೃತಿ, ಸಂಪ್ರದಾಯ, ಇತಿಹಾಸ, ಪರಂಪರೆ ಅನನ್ಯತೆ, ಧರ್ಮ ಎಲ್ಲವೂ ಇದ್ದು, ಸಮಾಜದ ಮುಖ್ಯವಾಹಿನಿಯಲ್ಲಿ ಅವರ ಸ್ಥಾನಮಾನ, ಅಭಿವೃದ್ಧಿಯ ಜೊತೆಯಲ್ಲಿ ತಮ್ಮ ಉಳಿವಿಗಾಗಿ ನಿರಂತರ ಹೋರಾಟ, ದಿಕ್ಕು ತಪ್ಪಿಸುತ್ತಿರುವ ಅಭಿವೃದ್ಧಿ ಕಾರ್ಯ, ಚಿಂತನೆಗಳು, ಚಳುವಳಿಗಳು, ಜೊತೆಗೆ ತಮ್ಮ ಮೂಲದ ಅನನ್ಯತೆಯಿಂದ ದೂರವಾಗುವ ಆತಂಕದ ಮನೋಭಾವ, ಆಧುನಿಕತೆಯನ್ನು ಪೂರ್ಣ ಒಪ್ಪಿಕೊಳ್ಳಲಾರದ ನಡುವಿನ ಸಂಘರ್ಷದ ಕೀಳರಿಮೆಯ ಸ್ಥಿತಿ, ಅಭಿವೃದ್ಧಿಯ ಹೆಜ್ಜೆಗಳು ಹೀಗೆ ಹಲವು ಲೇಖನಗಳು ಭಾವನಾತ್ಮಕ ಒಳನೋಟಗಳನ್ನಿಟ್ಟುಕೊಂಡಂತೆ ಇಲ್ಲಿ ಚರ್ಚಿತವಾಗಿವೆ.

ಕೊರಗರ ಶಾರೀರಿಕ ಗುಣಲಕ್ಷಣಗಳು, ಆಹಾರಕ್ಕಾಗಿ ಕಾಡನ್ನು ಅವಲಂಬಿಸಿರುವ ಕೊರಗರಿಗೆ ಕಾಡೇ ದೈವ. ಪ್ರಕೃತಿಯೊಂದಿಗಿನ ಅನ್ಯೋನ್ಯ ಒಡನಾಟ, ಸತ್ಯ, ನಿಷ್ಠೆಗಳೇ ಅವರ ಧರ್ಮ. ಹಿರಿಯರಿಗೆ ಗೌರವ, ಕಿರಿಯರಿಗೆ ಪ್ರೀತಿ, ಇದೇ ಅವರ ಸಂಸ್ಕೃತಿ. ಇವರದು ಪ್ರಕೃತಿ ಧರ್ಮ. ಇವರ ಮೇಲೆ ಸರಕಾರದ ಅರಣ್ಯನೀತಿ, ಅಭಿವೃದ್ಧಿಯ ಪರಿಕಲ್ಪನೆ, ಅಜಲಿನಂತಹ ಅನಿಷ್ಟ ಪದ್ಧತಿಗಳು, ಆಧುನಿಕತೆ, ಜಾಗತೀಕರಣ, ವೈಜ್ಞಾನಿಕರಣದ ಪ್ರಭಾವದಿಂದ ಸಮುದಾಯದ ಬದುಕಿನ ಅತಂತ್ರದಲ್ಲಿದೆ. ಪರಂಪರೆ, ಆಧುನಿಕತೆಯ ನಡುವಿನ ಸಂಘರ್ಷ ವೈರುಧ್ಯಗಳಂತಹ ಎಷ್ಟೋ ಮಾಹಿತಿಗಳನ್ನು ನೀಡುತ್ತದೆ.

ಕೊರಗ ಬುಡಕಟ್ಟು ಸಮುದಾಯ ಪ್ರಾಚೀನ ಪರಂಪರೆಯ ಹಿನ್ನೆಲೆ ಸೀಮಿತ ಜನಸಂಖ್ಯೆಯಾದರೂ ತಮ್ಮ ಭಾಷೆ, ಸಂಸ್ಕೃತಿ, ಬಳಿ ಪದ್ಧತಿ, ಹಲವು ಆಚರಣೆಗಳ ಮೂಲಕ ಅವುಗಳನ್ನು ಆಸ್ತಿಗಳಂತೆ ಕಾಪಾಡಿಕೊಂಡು ಅನುಸರಿಸುತ್ತಾ, ತಮ್ಮ ನೈಜತೆಯನ್ನು ಕಾಪಾಡಿಕೊಳ್ಳುವ ಪ್ರಯತ್ನವೂ ಈ ಸಮುದಾಯ ಭಾಷೆಯ ಅಳಿವು ಎಂದರೆ ಅದು ಆ ಜನಾಂಗದ ಸಂಸ್ಕೃತಿ, ಪರಂಪರೆಯ ಅಳಿವು ಆಗಿರುತ್ತದೆ. ಅವರ ಪ್ರಾತಿನಿಧಿಕ ಮನೋಭಾವವನ್ನು ಕಳೆದುಕೊಳ್ಳುವ ದುರಂತವೂ ಆಗಿದೆ.

ನಿರ್ಲಕ್ಷಿಸಲ್ಪಟ್ಟ ಸಮುದಾಯಕ್ಕೂ ಕೂಡ ಅದರದೇ ಆದ ನಾಡಿನ ಪರಂಪರೆ, ಸಂಸ್ಕೃತಿ ಇರುತ್ತದೆ. ಆ ಹಿನ್ನೆಲೆಯಲ್ಲಿ ಆಯಾಯ ಸಮುದಾಯದ ಅಸ್ಮಿತೆಯನ್ನು ಉಳಿಸಿಕೊಂಡು ಹೋಗಬೇಕೆನ್ನುವ ಜವಾಬ್ದಾರಿಯುತವಾದ ಕಾರ್ಯವನ್ನು ಜೋಪಾನ ಮಾಡುವ ಮನೋಭಾವವು ಜಾಗೃತವಾಗಿರುವುದು ಇಲ್ಲಿ ಕಂಡುಬರುತ್ತದೆ. ಕನ್ನಡನಾಡಿನ ಸರ್ವತೋಮುಖ ಬೆಳವಣಿಗೆಗೆ ಪ್ರತಿಯೊಂದು ಸಮುದಾಯದ ಪಾತ್ರವೂ ಮಹತ್ತರ ವಾದದ್ದು. ಅಂತಹ ಮಹತ್ವವನ್ನು ಗುರುತಿಸಿ, ಕಾಪಾಡುವ ಹೊಣೆಗಾರಿಕೆಯನ್ನು ಕನ್ನಡ ವಿಶ್ವವಿದ್ಯಾಲಯ ಸಮರ್ಥವಾಗಿ ನಿಭಾಯಿಸುತ್ತಾ, ಕೊರಗ ಸಮುದಾಯದವರ ಬಗ್ಗೆ ಸ್ಪಷ್ಟ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ.

ಸುಶೀಲಾ ಸದಾಶಿವಯ್ಯ

೨೨. ಜನಪದ ಗಾದೆಗಳ ಅನನ್ಯತೆ

ಗಾದೆಗಳ ಅಧ್ಯಯನ, ಪ್ರಧಾನ ಸಂಪಾದಕರು–ಡಾ. ಎ. ರಂಗಸ್ವಾಮಿ, ಲೇಖಕರು–ಡಾ. ರಾಗೌ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ೨೦೧೨, ಪುಟ–೨೪+೭೮+೪, ಬೆಲೆ ರೂ. ೫೦/-

ಜನಪದ ಸಾಹಿತ್ಯದಲ್ಲಿ ಘನವಾದ ಹೆಸರು ಹೊಂದಿರುವ ಡಾ. ರಾಗೌರವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಭಾಷಾಭಿವೃದ್ಧಿ ಯೋಜನೆಯ 'ಜನಪ್ರಿಯ ಕನ್ನಡಮಾಲೆ' ಯಲ್ಲಿ ಪ್ರಕಟಪಡಿಸಿರುವ 'ಗಾದೆಗಳ ಅಧ್ಯಯನ' ಕೃತಿಯು ಮೌಲ್ಯಯುತವಾಗಿದೆ. ರಾಗೌರವರು ಗಾದೆ ಎಂದರೇನು? ಎಂಬುದರಿಂದ ಹಿಡಿದು ಅದರ ಸ್ವರೂಪ, ಲಕ್ಷಣಗಳು, ವರ್ಗೀಕರಣ ಹಾಗೂ ಇದುವರೆಗಿನ ಅಧ್ಯಯನದಲ್ಲಿ ಕಂಡುಕೊಂಡ ಹೊಸ ಹೊಳಹುಗಳ ವಿವರಗಳನ್ನು ಇಲ್ಲಿ ದಾಖಲಿಸಿದ್ದಾರೆ.

'ಗಾದೆಗಳ ಅಧ್ಯಯನ' ಕೃತಿಯಲ್ಲಿ ಒಟ್ಟು ಒಂಬತ್ತು ಅಧ್ಯಾಯಗಳಿದ್ದು, ಅದರಲ್ಲಿ ಗಾದೆಯ ಸ್ವರೂಪ, ಗಾದೆ: ಸೃಷ್ಟಿ ಮತ್ತು ಪ್ರಸಾರ, ಗಾದೆ: ಸಂಸ್ಕೃತಿ ಸಂದರ್ಭ, ಗಾದೆಯ ಭಾಷಾ ಶೈಲಿ, ಗಾದೆಗಳ ಸಾಹಿತ್ಯಕ ಮೌಲ್ಯ, ಗಾದೆಗಳ ವರ್ಗೀಕರಣ, ಗಾದೆಗಳ ಲೋಕದೃಷ್ಟಿ ಮತ್ತು ಉಪಯೋಗ, ಗಾದೆಗಳ ಅಧ್ಯಯನ ಚರಿತ್ರೆ, ಉಪಸಂಹಾರ

ಹೀಗೆ ಅಧ್ಯಾಯಗಳನ್ನು ವಿಭಾಗಿಸಿಕೊಂಡು, ಪ್ರತಿಯೊಂದು ಅಧ್ಯಾಯವನ್ನು ತುಂಬಾ ಆಪ್ತತೆಯಿಂದ ವಿವರಿಸಿದ್ದಾರೆ.

ಈಗಾಗಲೇ ಜನಸಮುದಾಯದಲ್ಲಿ ಪ್ರಚಲಿತವಿರುವ ಗಾದೆಗಳನ್ನು ಹಲವು ವಿದ್ವಾಂಸರು ಒಪ್ಪ ಓರಣದಿಂದ ಸಂಗ್ರಹಿಸಿ, ಅವುಗಳನ್ನು ಸೂಕ್ಷ್ಮ ರೀತಿಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅದೇ ರೀತಿಯಾದ ಒಂದು ಪ್ರಯತ್ನವನ್ನು ಡಾ. ರಾಗೌ ಅವರು 'ಜನಪ್ರಿಯ ಕನ್ನಡ ಮಾಲೆ'ಯಲ್ಲಿ ಈ ಕೃತಿಯನ್ನು ಪ್ರಕಟಿಸುವುದರೊಂದಿಗೆ ಗಾದೆಗಳ ಬಗೆಗೆ ಮತ್ತಷ್ಟು ಬೆಳಕು ಚೆಲ್ಲಿದ್ದಾರೆನ್ನಬಹುದು. ರಾಗೌರವರು ಗಾದೆಗಳು ಜನಸಾಮಾನ್ಯರ ಬದುಕಿನಲ್ಲಿ ಹಾಸುಹೊಕ್ಕಾಗಿ ಅನುಭವದ ಸಂಪತ್ತಾಗಿ ಹೇಗೆ ಸೇರಿಕೊಂಡಿವೆ ಎಂಬುದನ್ನು ಹಾಗೂ ಗಾದೆಗಳಲ್ಲಿ ಸತ್ವಯುತವಾದ ಅಂಶಗಳು ಸಂಸ್ಕೃತಿಯ ಭಾಗವಾಗಿ ಹೇಗೆ ಕಂಡುಬರುತ್ತವೆಂಬುದನ್ನು ಚರ್ಚಿಸಿದ್ದಾರೆ.

ಗಾದೆಗಳು ಬಹುಮುಖಿಯಾದ ರೀತಿಯಲ್ಲಿ ಮಾನವೀಯ ಮೌಲ್ಯಗಳನ್ನು ಹೇಗೆ ತನ್ನೊಡಲಲ್ಲಿ ಅಡಗಿಸಿಕೊಂಡಿವೆ ಎಂಬುದನ್ನು ತುಂಬಾ ಉತ್ಕೃಷ್ಟವಾಗಿ ಲೇಖಕರು ವಿವರಿಸಿದ್ದಾರೆ. ಗಾದೆ ಹೇಗೆ ಸೃಷ್ಟಿಗೊಂಡಿದೆ, ಅದರ ಪ್ರಸಾರ ಹೇಗಾಗಿದೆ ಎಂಬುದನ್ನು ಮತ್ತು ಮನುಷ್ಯನಷ್ಟೇ ಪ್ರಾಚೀನವಾಗಿರುವ ಇವುಗಳಲ್ಲಿ ಅಡಗಿರುವ ಮಹತ್ವದ ಅಂಶ ಎಂಥದ್ದು ಎಂಬುದನ್ನು ಸುದೀರ್ಘವಾಗಿ ಚರ್ಚಿಸಿದ್ದಾರೆ. ಹಾಗೆಯೇ ಇದುವರೆಗೂ ಯಾರ್‍ಯಾರು ಗಾದೆಗಳ ಬಗೆಗೆ ಅಧ್ಯಯನ ಮಾಡಿ ಕೃತಿಗಳನ್ನು ಹೊರತಂದಿದ್ದಾರೆ, ಆ ಕೃತಿಗಳಲ್ಲಿ ಯಾವ್ಯಾವ ಅಂಶಗಳು ತಾತ್ವಿಕವಾಗಿ ವ್ಯಕ್ತಗೊಂಡಿವೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ, ಅವುಗಳ ಪ್ರಾಮುಖ್ಯತೆಯನ್ನು ಚರ್ಚಿಸಿದ್ದಾರೆ. ಇದರ ಜೊತೆಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಗಾದೆಗಳ ಬಗೆಗೆ ಎಷ್ಟೆಲ್ಲಾ ಅಧ್ಯಯನಗಳು ನಡೆದಿವೆ ಎಂಬುದನ್ನು ಅಧ್ಯಯನಕಾರರ ವಿಶ್ಲೇಷಣೆಗಳೊಂದಿಗೆ ವಿವರಿಸಿದ್ದಾರೆ.

'ಸಂಸ್ಕೃತಿ ಸಂದರ್ಭ'– ಅಧ್ಯಾಯದಲ್ಲಿ ತುಂಬಾ ಪ್ರಾಮುಖ್ಯವೆನಿಸುವ ಗಾದೆಗಳನ್ನು ಪೂರಕವಾಗಿ ಅಲ್ಲಲ್ಲಿ ಕೊಡುತ್ತಾ, ಹಿತವೆನಿಸುವ ರೀತಿಯಲ್ಲಿ ಅರ್ಥಗರ್ಭಿತವಾಗಿ ವಿಶ್ಲೇಷಣೆ ಮಾಡುತ್ತಾ ಸರಾಗವಾಗಿ ನವಿರಾದ ಭಾಷೆಯಲ್ಲಿ ಹಂದರ ಹೊದಿಸಿದ್ದಾರೆ. ಇಲ್ಲಿನ ಗಾದೆಗಳೆಲ್ಲ ಬಹುವಿಷಯಕವಾಗಿದ್ದರೂ ಹಾಸ್ಯದ ಗಾದೆಗಳಂತೂ ತುಂಬಾ ಮನಸೆಳೆಯುತ್ತವೆ. "ಸಾಯ್ತೀನಿ ಸಾಯ್ತೀನಿ ಅಂತ ಸಾವಿರ ಕೋಳಿ ತಿಂದನಂತೆ" ಇದೇ ರೀತಿಯ ಹಾಸ್ಯ ಪ್ರವೃತ್ತಿಯ ಗಾದೆಗಳ ಚರ್ಚೆ ನಡೆಯುತ್ತದೆ. "ಅಡ್ಡಿಯಿಲ್ಲದೆ ಬೆಳೀತು ನಮ್ಮನೆ ಗೊಡ್ಡು ಹುಣಸೆಮರ" ಇಂತಹ, ಜನಪದರ ಅಗಾಧ ಶಕ್ತಿಯಿಂದ ಅಭಿವ್ಯಕ್ತಗೊಂಡ ಗಾದೆಗಳಲ್ಲಿ ರೂಪಕವು ಹೇಗೆ ನಿರ್ಭಿಡೆಯಾಗಿ ಹರಿಯುತ್ತದೆನ್ನುವುದನ್ನು ಹಲವು ಗಾದೆಗಳ ಮೂಲಕ ವಿಶ್ಲೇಷಿಸಿದ್ದಾರೆ.

ಗಾದೆಗಳ ವರ್ಗೀಕರಣದಲ್ಲಿ ಆರ್.ಎಸ್. ಬಾಗ್ಸ್‌ರವರ ವರ್ಗೀಕರಣವು 'ಭಾಷಿಕ ಬಗೆ' ಸಮಂಜಸವಾಗಿ ಕಂಡು ಬರುತ್ತಿಲ್ಲವೆನ್ನುತ್ತಾ, ಇದು 'ಸಾಹಿತ್ಯಿಕ ಬಗೆ'ಯಲ್ಲೂ

ಹೆಚ್ಚು ಸೂಕ್ತವೆಂದು ಪ್ರತಿಪಾದಿಸುತ್ತಾ, ಒಂದಷ್ಟು ರಾಬರ್ಟ್ ವಾರೆನ್‌ರವರ ಹತ್ತಿರ ನಿಂತುಕೊಳ್ಳುತ್ತಾ, ಕೊನೆಗೆ "ಗಾದೆಗಳ ಬಳಕೆ ಭಾಷೆಯೊಡನೆ ಇರುವುದಾದರೂ, ಅವುಗಳ ಉದ್ದೇಶ ಮುಖ್ಯವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯದೊಡನೆ ಸಂವಾದ ನಡೆಸುವುದೇ ಆಗಿರುತ್ತದೆ" ಎನ್ನುವ ನಿಲುವಿಗೆ ಬಂದು ನಿಲ್ಲುತ್ತಾರೆ.

ಗಾದೆಯಿಲ್ಲದ ಭಾಷೆಯಿಲ್ಲ. ಗಾದೆ ಗೊತ್ತಿಲ್ಲದ ಮನುಷ್ಯನಿಲ್ಲ. ಎಲ್ಲಾ ಭಾಷೆಗಳಲ್ಲಿರುವ ಗಾದೆಗಳು ಲೋಕದೃಷ್ಟಿಯನ್ನು ಒಳಗೊಂಡಿರುತ್ತವೆ. ಭಾಷೆ ಮತ್ತು ಸಂಸ್ಕೃತಿಯನ್ನು ದಾಟಿ, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿರುವುದು ಗಾದೆಗಳಲ್ಲಿ ಕಾಣಬಹುದು. ಆಧುನಿಕತೆ ಹೆಚ್ಚಾದಷ್ಟು ಗ್ರಾಮೀಣ ಸಂಸ್ಕೃತಿಗೆ ಹೊಡೆತ ಬೀಳುತ್ತದೆ. ಆಗ ಗಾದೆಗಳಂತಹವು ಕಣ್ಮರೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಸಹಜವಾಗಿ ಗಾದೆಗಳು ವೈಯಕ್ತಿಕತೆಯನ್ನು ಒಟ್ಟುಗೂಡಿಸಿ ಸಮೂಹ ದೃಷ್ಟಿಯನ್ನು ಅಭಿವ್ಯಕ್ತಿಗೊಳಿಸುತ್ತವೆ.

ಗಾದೆಗಳ ಅಧ್ಯಯನ ಚರಿತ್ರೆಯ ಅಧ್ಯಾಯದಲ್ಲಿ ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿರುವ ಗಾದೆಗಳು ಇತರ ಸಂಸ್ಕೃತಿಯ ಭಾಗವಾಗಿ ಹೇಗೆ ಕಂಡುಬರುತ್ತವೆಂಬುದನ್ನು ಲೇಖಕರ ಕೃತಿಗಳೊಂದಿಗೆ ವಸ್ತುನಿಷ್ಠವಾಗಿ ಚರ್ಚಿಸಿದ್ದಾರೆ. ಜಾಗತಿಕವಾಗಿ ಗಾದೆಗಳ ಸಂಗ್ರಹ, ವಿಶ್ಲೇಷಣೆ ನಡೆದಿರುವುದನ್ನು ಲೇಖಕರು ವಿವರಿಸುತ್ತಾ, ಭಾರತದ ಗಾದೆಗಳ ಅಧ್ಯಯನದ ಚರ್ಚೆ ನಡೆಸಿದ್ದಾರೆ. ಹಾಗೆಯೇ ಕನ್ನಡದಲ್ಲಿ ಮೊದಲಿಗೆ ಬಾಸೆಲ್‌ಮಿಷನ್ ಪ್ರೆಸ್ಸಿನಿಂದ ಪ್ರಕಟಗೊಂಡ ಕಿಟೆಲ್ ಅವರ ಕನ್ನಡ ಶಬ್ದಕೋಶದಲ್ಲಿರುವ ಗಾದೆಗಳ ಕೃತಿ ಪ್ರಥಮ ಸಂಕಲನವಾಗಿದೆ. ಇದರಿಂದ ಶುರುಗೊಂಡು ಅಚ್ಚಪ್ಪನವರ 'ಕನ್ನಡ ಗಾದೆಗಳು', 'ಗ್ರಂಥಸ್ಥ ಗಾದೆಗಳು', ಕೃಷ್ಣಶಾಸ್ತ್ರಿ ಜಂಗಮಕೋಟೆ ಅವರ ಗಾದೆಗಳ ಭಂಡಾರ ಭಾಗ–೧, ಟಿ.ವಿ. ವೆಂಕಟರಮಣಯ್ಯರ 'ಕನ್ನಡ ಗಾದೆಗಳ ಕೋಶ', ಮುಂದೆ ಸುಧಾಕರ ಅವರ 'ನಮ್ಮ ಸುತ್ತಿನ ಗಾದೆಗಳು', ಕಾಳೇಗೌಡ ನಾಗವಾರರವರ 'ಬೀದಿ ಮಕ್ಕಳು ಬೆಳದೋ', ಜೀನಹಳ್ಳಿ ಸಿದ್ದಲಿಂಗಪ್ಪನವರ 'ಹೊನ್ನಾಡಿನ ಗಾದೆಗಳು', ಮೈಸೂರು ವಿ.ವಿ.ಯ 'ಸಮಗ್ರ ಕನ್ನಡ ಗಾದೆಗಳು' ಹೀಗೆ ಹಲವು ವಿದ್ವಾಂಸರ ಸಂಗ್ರಹದ ಕೃತಿಗಳನ್ನು ನೀಡುವುದರೊಂದಿಗೆ ಚರ್ಚೆ ನಡೆಸಿದ್ದಾರೆ.

ಒಟ್ಟಾರೆ ರಾಗೌರವರ 'ಗಾದೆಗಳ ಅಧ್ಯಯನ' ೭೮ ಪುಟಗಳನ್ನು ಒಳಗೊಂಡ ಚಿಕ್ಕ ಕೃತಿಯಾದರೂ ಗಾದೆಗಳ ಬಗೆಗೆ ಇಷ್ಟೊಂದು ಸವಿವರವಾಗಿ ವಿಶ್ಲೇಷಣೆ ಮಾಡಿದ ಕೃತಿ ಮತ್ತೊಂದಿಲ್ಲವೆನ್ನಬಹುದು. ಗಾದೆಗಳು ಎಂದರೆ ಬಹುಪಾಲು ಸಂಗ್ರಹ, ಸಂಪಾದನೆ ಮತ್ತು ಪ್ರಸ್ತಾವನೆಯಲ್ಲೇ ನಿಂತುಬಿಡುವುದು ಹೆಚ್ಚಿರುತ್ತಿತ್ತು. ಅದನ್ನು ಮೀರಿ ಈ ಕೃತಿ ಗಾದೆಗಳ ಸಮಗ್ರ ಅಧ್ಯಯನದ ಕಡೆಗೆ ಮುನ್ನಡೆದಿರುವುದು ನಿಜಕ್ಕೂ ಆಶಾದಾಯಕ ಕೃತಿಯಾಗಿ ನಿಲ್ಲುತ್ತದೆ. ಈ ಕೃತಿಗೆ ಶಾಸ್ತ್ರೀಯವಾದ, ವೈಜ್ಞಾನಿಕವಾದ ತಳಸ್ಪರ್ಶಿಯಾಗಿ ಚರ್ಚಿಸಿದ ಹಿನ್ನೆಲೆ ಇರುವುದರಿಂದ ಗಾದೆಗಳ ಅಧ್ಯಯನಕ್ಕೆ ಉತ್ತಮ ಆಕರ ಕೃತಿಯಾಗಿ ನಿಲ್ಲುತ್ತದೆ, ಇಂತಹ ಕೃತಿ ನೀಡಿದ ಲೇಖಕರಿಗೆ ಧನ್ಯವಾದಗಳು.

ಕೆ.ವಿ. ಮುದ್ದವೀರಪ್ಪ

೨೩. ಜನಪದ ಸಿಂಗಾರ ಸಾಧನಗಳು

ಜನಪದ ಸಿಂಗಾರ ಸಾಧನಗಳು, ಪ್ರಧಾನ ಸಂಪಾದಕರು–ಡಾ. ಎ. ರಂಗಸ್ವಾಮಿ, ಲೇಖಕರು–ಡಾ. ಪಿ.ಕೆ. ರಾಜಶೇಖರ್, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನ್ನಿಲಯ, ಮೈಸೂರು, ೨೦೧೨, ಪುಟ–೨೪+೮೬+೪, ಬೆಲೆ ರೂ. ೬೦/-

"ಜನಪದ ಸಿಂಗಾರ ಸಾಧನಗಳು" ಎಂಬ ಕೃತಿಯನ್ನು ಲೇಖಕರಾದ ಡಾ. ಪಿ.ಕೆ. ರಾಜಶೇಖರ್‌ರವರು ಬರೆದಿದ್ದಾರೆ. ಡಾ. ಎ. ರಂಗಸ್ವಾಮಿಯವರು ಇದರ ಪ್ರಧಾನ ಸಂಪಾದಕರಾಗಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ 'ಜನಪ್ರಿಯ ಕನ್ನಡ ಮಾಲೆ' ಯೋಜನೆಯಡಿ ಈ ಪುಸ್ತಕವನ್ನು ಹೊರತಂದಿದ್ದಾರೆ.

ಈ ಕೃತಿಯನ್ನು ಲೇಖಕರು ಏಳು ಭಾಗವಾಗಿ ವಿಂಗಡಿಸಿದ್ದಾರೆ. ಅನಾದಿ ಕಾಲದಿಂದ ಆಧುನಿಕ ಕಾಲದವರೆಗೆ, ಅಂಗರಾಗಗಳು, ಕೇಶಾಲಂಕಾರ, ವದನಾಲಂಕಾರ, ಪೂಸಕ ಪರಿಮಳಗಳು, ಶರೀರಾಲಂಕಾರ, ಪಾದರಕ್ಷೆಗಳು ಮತ್ತು ಆಧುನಿಕರಲ್ಲಿ ಅಂಗರಾಗಗಳು ಇವೇ ಆ ಅಧ್ಯಾಯದ ಹೆಸರುಗಳು.

ಆದಿಮಾನವ ಕಾಲದಿಂದಲೂ ಅಲಂಕಾರಕ್ಕೆ ವಿಶಿಷ್ಟ ಮಹತ್ವವನ್ನು ಕೊಡುತ್ತ ಬಂದಿದ್ದಾರೆ, ಅಲಂಕಾರಕ್ಕೆ ಮಾನವ ಹೆಚ್ಚು ಮಹತ್ವ ಕೊಡುತ್ತಾ ಬಂದಿದ್ದಾನೆ. ನಮ್ಮಲ್ಲಿ ಶೃಂಗಾರ ಪ್ರಿಯರೇ ಹೆಚ್ಚು. ಶಿರದಿಂದ ಪಾದದವರೆಗೂ ಅಲಂಕಾರ ಸಾಧನಗಳಿವೆ. ಅದನ್ನು ಆದಿಕಾಲದಿಂದಲೂ ಉಪಯೋಗಿಸಿಕೊಂಡು ಬಂದಿದ್ದಾರೆ.

ಮೊದಲ ಅಧ್ಯಾಯದಲ್ಲಿ ಹಿಂದಿನ ಕಾಲದ ವೇಷಭೂಷಣಗಳ ಪರಿಚಯವಿದೆ. ಮೊದಲಿಗೆ ಆದಿಮಾನವ ಕೆಲವು ಪ್ರಾಣಿಗಳ ಚರ್ಮಗಳನ್ನು ಮಳೆ, ಗಾಳಿ, ಬಿಸಿಲುಗಳಿಂದ ರಕ್ಷಿಸಿಕೊಳ್ಳಲು ಬಳಸುತ್ತಿದ್ದನು. ಅನಂತರ ಅದು ಸಿಂಗಾರ ಸಾಧನವಾಗಿ ಪರಿಣಮಿಸಿತು. ಹಿಂದಿನ ಕಾಲದಲ್ಲಿ ಪರಿಮಳಪೂರಿತ ಹೂ, ಎಲೆ, ರಸಗಳು, ಪ್ರಾಣಿ ದಂತಗಳು, ಪಕ್ಷಿಗಳ ಗರಿಗಳು, ಕಾಡು ಮೇಡುಗಳಲ್ಲಿರುವ ಶಂಖ, ಸಿಂಪು, ಹವಳ, ಮುತ್ತು ರತ್ನವನ್ನು ಧರಿಸುತ್ತಿದ್ದರು. ನಂತರ ಲೋಹ ಸಿಕ್ಕಿದ ಮೇಲೆ ಅವುಗಳಿಂದ ಅಲಂಕರಿಸಿಕೊಳ್ಳುತ್ತಿದ್ದರು. ಶೃಂಗಾರ ಸಾಧನಗಳು ಅತ್ಯಂತ ಪ್ರಾಚೀನವಾದವು. ಶಿಲಾಯುಗದಲ್ಲಿ ಇಟಲಿಯ ಗಿರಿಮಾಲ್ಡಿ ಗುಹೆಗಳಲ್ಲಿ, ಸ್ವಿಡ್ಜರ್‌ಲ್ಯಾಂಡ್‌ನಲ್ಲಿ, ಈಜಿಪ್ಟಿನ ಪಿರಿಮಿಡ್ಡುಗಳ ಮಮ್ಮಿಗಳಲ್ಲಿ ಅಭರಣಗಳು ದೊರೆಕಿವೆ. ಸಿಂಧೂ ಜನರ ಒಡವೆಗಳು ಅನೇಕ ಬಗೆಯವು ಚೌಕಗಳು, ಕೂದಲುಕಟ್ಟುಗಳು, ನೇಯ್ದಪಟ್ಟಿಗಳು ಇನ್ನು ಮುಂತಾದವು ಬಳಕೆಯಲ್ಲಿದ್ದವು ಎಂಬುದನ್ನು ಲೇಖಕರು ತಿಳಿಸುತ್ತಾರೆ. ಮೊಹೆಂಜೊದಾರೋದ ಸ್ತ್ರೀ ಪುರುಷರಿಗೆಲ್ಲ ಅಭರಣಗಳೆಂದರೆ ಎಲ್ಲಿಲ್ಲದ ವ್ಯಾಮೋಹ. ಇವರಿಗೆ

ತ್ರಿಪತ್ರ, ನಕ್ಷೆ ಬಹಳ ಪ್ರೀತಿಪಾತ್ರವಾದುದು. ಸಿಂಧೂ ಕಣಿವೆಯ ಜನರು ಪ್ರಪಂಚದಲ್ಲಿಯೇ ಮೊತ್ತಮೊದಲ ಬಾರಿಗೆ ಹತ್ತಿಯ ಉಡುಪುಗಳನ್ನು ತಯಾರಿಸುತ್ತಿದ್ದರು. ಸಿಂಗಾರ ಸಾಧನಗಳ ಮೊದಲ ಉದ್ದೇಶ ಸೌಂದರ್ಯವರ್ಧಕವಾದರೂ ಅವುಗಳು ಸೌಂದರ್ಯ ರಕ್ಷಕವಾಗಿ, ಅನ್ಯಾಕರ್ಷಕವಾಗಿ, ರೋಗನಿವಾರಕವಾಗಿ, ಕ್ಷೇಮಚಿಂತಕವಾಗಿ ಬಂದಿವೆ. ಹೀಗಿರುವ ಸಿಂಗಾರ ಸಾಧನಗಳನ್ನು ಗಂಡಸರವು ಮತ್ತು ಹೆಂಗಸರವು ಎಂದು ಪ್ರಧಾನವಾಗಿ ಎರಡು ಗುಂಪಾಗಿ ವಿಂಗಡಿಸಿ ಲೇಖಕರು ಚರ್ಚಿಸುತ್ತಾರೆ.

ಎರಡನೆಯ ಅಧ್ಯಾಯದಲ್ಲಿ ಮಾನವ ಜನ್ಮ ದೊಡ್ಡದು. ಏಕೆಂದರೆ, ಅವನು ತನ್ನ ದೇಹದ ಕಾಳಜಿ ವಹಿಸಿ ಬೇಕಾದ ರೀತಿಯಲ್ಲಿ ಅಲಂಕಾರ ಮಾಡಿಕೊಳ್ಳಬಲ್ಲ. ಬೆಳಿಗ್ಗೆ ಏಳುತ್ತಲೇ ಮುಖ ತೊಳೆಯುವುದು, ಹಲ್ಲುಜ್ಜಿ ಸ್ನಾನ ಮಾಡಿ, ಶುಭ್ರವಸ್ತ್ರ ಧರಿಸಿ ಕೊಳ್ಳುವುದು ಹೀಗೆ ದಿನನಿತ್ಯದ ಸಹಜವಾದ ಕೆಲಸ. ಅಂಗರಾಗಗಳ ಕಲ್ಪನೆ ಮಾನವನಿಗೆ ಯಾವಾಗ ಬಂದಿತು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಆದರೆ ಚೀನಾದಲ್ಲಿ ಹಿಂದಿನ ಕಾಲದಲ್ಲಿ ಬಳಕೆಯಿತ್ತು ಎಂಬುದಕ್ಕೆ ಮೊದಲು ಹುಟ್ಟಿರಬಹುದು. ಈಜಿಪ್ಟಿನಲ್ಲಿ ಅಂಗರಾಗವಸ್ತುಗಳ ಮೂಲ ದಾಖಲೆಗಳಿವೆ. ಆದಿಮಾನವನು ಮಳೆಯಲ್ಲಿ ನೆನೆಯುವುದು ಹೊಳೆಯಲ್ಲಿ ಮುಳುಗಿ ನೀರಾಟವಾಡುವುದರಿಂದ ಸ್ನಾನದ ಕಲ್ಪನೆ ಬಂದಿರಬಹುದು. ಈಜಿಪ್ಟಿನವರು ಸ್ನಾನದ ತೊಟ್ಟಿ ನಿರ್ಮಿಸಿದವರಲ್ಲಿ ಮೊದಲಿಗರು ಎಂದು ಲೇಖಕರು ಗುರುತಿಸುತ್ತಾರೆ. ಗ್ರೀಕರಿಗೂ ರೋಮನ್ನರಿಗೂ ಅಂಗರಾಗಗಳ ವ್ಯಾಮೋಹವಿತ್ತು. ಇಟಲಿ, ಫ್ರಾನ್ಸ್, ಸ್ಪೇನ್‌ಗಳಲ್ಲಿ ಅಂಗರಾಗಗಳು ಜನಪ್ರಿಯವಾಗಿದ್ದವು. ಅಮೆರಿಕಾದಲ್ಲಿ ಕೇಶಾಲಂಕಾರ ಮತ್ತು ಶೃಂಗಾರ ಶಾಲೆಗಳಲ್ಲಿ ಕಾಂತಿವರ್ಧನೆ ಮಾಡುವುದಕ್ಕಾಗಿ ಬಳಸುವ ವಿಧಾನಕ್ಕೆ ಅಂಗರಾಗ ಕಲೆ ಎನ್ನುತ್ತಾರೆ. ಹೂವುಗಳ ಪರಿಮಳ ದ್ರವ್ಯಗಳು, ಮುಲಾಮುಗಳು ಮತ್ತು ಪುಡಿಗಳು ಅಂಗರಾಗದ ವಸ್ತುಗಳಾಗಿದ್ದವು. ಕೆಲವು ಸವರಿಕೊಳ್ಳುವುದು; ಕೆಲವು ಚಿಮುಕಿಸಿಕೊಳ್ಳುವುದು; ಕೆಲವು ತಿಕ್ಕಿಕೊಳ್ಳುವಂಥವು; ಈ ಎಲ್ಲವೂ ಮುಖದ ಬಣ್ಣ, ಮುಖದ ಆಕಾರ, ಕೂದಲು, ಕೈಗಳು, ಪಾದಗಳು ಮತ್ತು ದೇಹದ ಕಾಂತಿಯನ್ನು ಹೆಚ್ಚಿಸುವ ಸಾಧನಗಳಾಗಿ ಜನಪ್ರಿಯವಾಗಿವೆ.

ಮೂರನೆಯ ಅಧ್ಯಾಯ 'ಕೇಶಾಲಂಕಾರ'. ಆದಿಮಾನವ ಮೊದಲಿಗೆ ನಿಂತ ನಿಶ್ಚಲ ಕೊಳದಲ್ಲಿ ತನ್ನ ಪ್ರತಿಬಿಂಬ ನೋಡಿಕೊಂಡಿರಬಹುದು, ನಂತರ ಬೇಡದ ಕೂದಲನ್ನು ಬೆಣಚುಕಲ್ಲಿನಿಂದ ಕತ್ತರಿಸಿರಬಹುದು. ಅನಂತರ ಹರಿತವಾದ ಆಯುಧಗಳಿಂದ ಕತ್ತರಿಸಿರಬಹುದು. ಮೊದಲು ತಾನೆ ಕತ್ತರಿಸಲು ಪ್ರಯತ್ನಿಸಿರಬಹುದು. ನಂತರ ಬೇರೆಯವರ ಸಹಾಯದಿಂದ ಕತ್ತರಿಸಿರಬಹುದು. ಪ್ರಕೃತಿದತ್ತ ತಲೆಗೂದಲಿನ ಉದ್ದೇಶ ತಲೆಗೆ ಬೀಳುವ ಪೆಟ್ಟಿನಿಂದ ರಕ್ಷಣೆ ಪಡೆಯುವುದು. ಕೇಶಾಲಂಕಾರದಲ್ಲಿ ತಲೆ ಬಾಚುವ ಸಾಧನಗಳೆಂದರೆ ಮೂಳೆ, ದಂತ, ಕೊಂಬು ಅಥವಾ ಮರದಿಂದ ಹಣಿಗೆ, ಸಕ್ಕಟಿಗೆ ಮತ್ತು ಸೀರಣಿಗೆಯಲ್ಲಿ ತಲೆ ಬಾಚುತ್ತಿದ್ದರು. ಬಾಚಣಿಗೆ ಎಂದರೆ

ಬಾಚುವ ಹಣಿಗೆ. ಬಾಚಣಿಗೆಯು ತ್ರಿಪದಿಯಲ್ಲಿ ಮತ್ತು ಮಹಾಭಾರತದಲ್ಲಿ ದ್ರೌಪದಿಗೆ ಭೀಮನು ದುಶ್ಯಾಸನನ ದಾಡೆಯನ್ನೇ ಬಾಚಣಿಗೆ ಮಾಡಿಕೊಂಡು ತಲೆಬಾಚುತ್ತಾನೆ. ಸ್ತ್ರೀ ಪುರುಷರು ಸಮನಾಗಿ ಕೇಶಾಲಂಕಾರ ಮಾಡಿಕೊಳ್ಳುತ್ತಿದ್ದರು. ಸ್ತ್ರೀಯರು ಒಂದು ಜಡೆ, ಎರಡು ಜಡೆ, ಮೊಗ್ಗಿನ್ನಜಡೆ, ತಲೆಹೂವಿನಜಡೆ ಮತ್ತು ಮುತ್ತಿನ ಬಲೆಯ ಜಡೆ ಹಾಕಿಕೊಳ್ಳುತ್ತಿದ್ದರು. ಇತಿಹಾಸದ ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು ನಾರಾಯಣಪುರ, ವಿಜಯನಗರ ಇನ್ನು ಮುಂತಾದ ಕಡೆಗಳಲ್ಲಿ ಶಿಲ್ಪಕಲೆಗಳಲ್ಲಿ ವೈವಿಧ್ಯಮಯ ಕೇಶಾಲಂಕಾರವನ್ನು ಕಾಣಬಹುದಾಗಿದೆ. ಪುರುಷರು ಕ್ಷೌರದ ಕಲ್ಪನೆ ಇಲ್ಲದಿದ್ದ ಕಾಲದಲ್ಲಿ ಗಂಡಸರು ತಮ್ಮ ನೀಳವಾದ ಕೂದಲನ್ನು ಹೆಕ್ಕತ್ತಿನ ಕಡೆಗೆ ಎಳೆದು ಕಟ್ಟಿಕೊಳ್ಳುವುದು ರೂಢಿಯಲ್ಲಿತ್ತು. ತಲೆಸ್ನಾನಕ್ಕೆ ಬಳಸುವ ಸಾಧನಗಳು, ಕೂದಲು ಒಣಗಿಸುವ ಕ್ರಮಗಳು, ಗಮ್ಮಂದೆಣ್ಣೆ, ಬೇಡದ ಕೂದಲು, ಕೂದಲು ಉದುರುವುದನ್ನು ತಡೆಯಲು, ತಲೆಗೂದಲು ನರೆ ತಡೆಯಲು, ಕೂದಲು ಸೊಂಪಾಗಿ ಬೆಳೆಯಲು, ತಲೆ ಬೋಳಾಗದಿರಲು, ಹೊಟ್ಟು ಉದುರುತ್ತಿದ್ದರೆ ಮತ್ತು ಹೇನು ನಿವಾರಣೆಗೆ ಏನನ್ನು ಬಳಸಬೇಕೆಂದು ಲೇಖಕರು ಚೆನ್ನಾಗಿ ವಿವರಿಸಿದ್ದಾರೆ.

ನಾಲ್ಕನೆಯ ಅಧ್ಯಾಯ 'ವದನಾಲಂಕಾರ'. ಮಾನವ ಮುಖಕ್ಕೆ ಸಿಂಗಾರ ಮಾಡಿಕೊಳ್ಳುವುದರಲ್ಲಿ ಹೆಚ್ಚು ಆಸಕ್ತಿ ವಹಿಸಿಕೊಂಡು ಬಂದಿದ್ದಾನೆ. ಮನುಷ್ಯನ ದೇಹದ ಈ ಭಾಗವನ್ನು ಉತ್ತಮಾಂಗ ಎಂದು ಕರೆಯಲಾಗಿದೆ. ಮುಖದಲ್ಲಿ ಹಣೆ, ಕಣ್ಣುಹುಬ್ಬು, ಕಣ್ಣುಗಳು, ಮೂಗು, ಕಿವಿಗಳು, ಕೆನ್ನೆ ಮತ್ತು ತುಟಿಗಳು ಅಲಂಕಾರ ಮಾಡಿಕೊಳ್ಳುವ ಭಾಗಗಳು. ಅಲಂಕಾರಕ್ಕೆ ಇರುವ ಸಾಧನಗಳು ಕುಂಕುಮ, ಅರಿಶಿಣ, ವಿಭೂತಿ, ನಾಮ, ಸಾಧು, ಮಟ್ಟಿಕಪ್ಪು, ಮೇರುತ್ಗೆ, ಶ್ರೀಗಂಧ, ಚಂದ್ರ, ಕಣ್ಕಪ್ಪು(ಕಾಡಿಗೆ), ಕಣ್ಣಳ ಕಾಂತಿಗಾಗಿ, ಕಣ್ಣಳ ಸುತ್ತ ಕಪ್ಪು ಕಾಣಿಸಿದಾಗ, ಮುಖದ ಚರ್ಮ ಸುಕ್ಕುಗಟ್ಟದಿರಲು, ಮುಖದ ಕಲೆಗಳು ಮರೆಯಾಗಲು, ಮುಖಕಾಂತಿಯುಕ್ತವಾಗಿರಲು, ಮೊಡವೆ ನಿವಾರಣೆಗೆ, ತುಟಿ ಸಿಂಗಾರ, ಉಸಿರ ಪರಿಮಳ, ಹಲ್ಲು, ಹಲ್ಕಪ್ಪು ಮತ್ತು ಹಲ್ಲಿಟ್ಟು ಇವುಗಳ ಬಗ್ಗೆ, ಇಟ್ಟುಕೊಳ್ಳುವ ರೀತಿ, ಎಲ್ಲಿ ಹೇಗೆ ಸಿಗುತ್ತವೆ, ಹೇಗೆ ತಯಾರಿಸುವುದು ಎಂಬ ವಿವರವನ್ನು ಲೇಖಕರು ಕೂಲಂಕಷವಾಗಿ ಚರ್ಚಿಸುತ್ತಾರೆ.

ಐದನೆಯ ಅಧ್ಯಾಯದಲ್ಲಿ ಪೂಸಕ ಪರಿಮಳಗಳ ಬಗ್ಗೆ ಹೇಳಿದ್ದಾರೆ. ಅವು ಯಾವುವೆಂದರೆ ಶ್ರೀಗಂಧ, ಪುನುಗು, ಕಸ್ತೂರಿ, ಗೋರೋಚನ ಬಗ್ಗೆ ತಿಳಿಸಿದ್ದಾರೆ. ಆರನೆಯ ಅಧ್ಯಾಯದಲ್ಲಿ ಉಗುರುಗಳ ಅಲಂಕಾರ, ಗೋರಂಟಿ, ದೇಹದ ದುರ್ಗಂಧ ಪರಿಹಾರಕ್ಕೆ, ಚರ್ಮ ಮೃದುವಾಗಿ ಕಾಂತಿಯುಕ್ತವಾಗಿರಲು ಮತ್ತು ಹಚ್ಚೆಯ ಬಗ್ಗೆ ದೀರ್ಘವಾಗಿ ತಿಳಿಸಿದ್ದಾರೆ.

ಏಳನೆಯ ಅಧ್ಯಾಯದಲ್ಲಿ ವಿವಿಧ ಬಗೆಯ ಪಾದರಕ್ಷೆಗಳನ್ನು ಹೇಗೆ ಬಳಸಿ ಕೊಂಡಿದ್ದರು; ಈಗ ಹೇಗೆ ಬಳಸಿಕೊಳ್ಳುತ್ತಿದ್ದಾರೆ ಎಂಬುದನ್ನು ಹೇಳಿದ್ದಾರೆ. ಆದಿಮಾನವರು ಅರಣ್ಯದಲ್ಲಿ ಅಡ್ಡಾಡುವಾಗ ಕಾಲಿಗೆ ಕಲ್ಲು ಮುಳ್ಳು ಚುಚ್ಚುತ್ತವೆ

ಎಂದು ಮರದ ತೊಗಟೆ, ಒರಟಾದ ಎಲೆ ಅಥವಾ ಪ್ರಾಣಿಗಳ ಚರ್ಮವನ್ನು ಕಟ್ಟಿಕೊಂಡು ರಕ್ಷಣೆ ಪಡೆಯುತ್ತಿದ್ದರು. ಈ ರಕ್ಷಣೆಯೇ ಪಾದರಕ್ಷೆಗಳ ಮೂಲ ಉದ್ದೇಶವಾಗಿದೆ. ರಾಮಾಯಣ ಮತ್ತು ಮಹಾಭಾರತದಲ್ಲಿ ಪಾದರಕ್ಷೆಗಳ ಬಗ್ಗೆ ವಿವರವಿದೆ. ಜನಪದ ಮಹಾಭಾರತದಲ್ಲಿ ನಾಯಿಗೆ ಶಾಪಕೊಟ್ಟ ಪ್ರಸಂಗದಲ್ಲಿ ಪಾದುಕೆಯ ಪ್ರಸ್ತಾಪ ಬಂದಿದೆ. ಹನ್ನೆರಡನೆಯ ಶತಮಾನದಲ್ಲಿ ಹರಳಯ್ಯನಿಗೆ ಬಸವಣ್ಣ ಶರಣು ಶರಣಾರ್ಥಿ ಎಂದಿದ್ದಕ್ಕೆ ತನ್ನ ತೊಡೆಯ ಚರ್ಮದಲ್ಲಿ ಪಾದುಕೆಗಳನ್ನು ಹೊಲಿದ ಪ್ರಸಂಗವಿದೆ. ಜನಪದ ಕಾವ್ಯ ಮಲೆಯಮಾದೇಶ್ವರ ಮತ್ತು ಪ್ರಾಚೀನ ಭಾರತದ ಋತ್ವಿಜರು ಯಜ್ಞಕಾಲದಲ್ಲಿ ಹಂದಿ ಚರ್ಮ ಪಾದುಕೆ ಧರಿಸಿದ್ದರಂತೆ. ಪಾದರಕ್ಷೆಗಳನ್ನು ಹಸು, ಎಮ್ಮೆ, ಆಡು, ಕುರಿ ಮೊದಲಾದ ಪ್ರಾಣಿಗಳ ಚರ್ಮದಿಂದ ತಯಾರಿಸಲಾಗುತ್ತಿತ್ತು. ಇವುಗಳನ್ನು ಎಕ್ಕವಡ, ಎಕ್ಕಡ, ಕೆರ್ಪು, ಕೆರಪು, ಕೆರ ಇನ್ನು ಮುಂತಾದವುಗಳ ವಿವರ ಇರುವುದನ್ನು ಚರ್ಚಿಸಲಾಗಿದೆ.

ಎಂಟನೇ ಅಧ್ಯಾಯದಲ್ಲಿ 'ಆಧುನಿಕರಲ್ಲಿ ಅಂಗರಾಗಗಳು' ಎಂಬ ವಿಷಯದ ಬಗೆಗೆ ಚರ್ಚೆಯಿದೆ. ನಾಗರಿಕ ಯುಗದಲ್ಲಿ ನಾಗರಿಕತೆ ಹೆಚ್ಚಾದಂತೆ ಅಲಂಕಾರದ ಬಗ್ಗೆ ಇನ್ನೂ ಕಾಳಜಿ ಹೆಚ್ಚಾಯಿತು. ಈ ಅಂಗರಾಗಗಳಿಂದ ಕಂಪನಿಗಳು ಹುಟ್ಟಿದವು ಮತ್ತು ಮೂಲೆ ಮೂಲೆಗೂ ಒಂದೊಂದು ಬ್ಯೂಟಿ ಪಾರ್ಲರ್‌ಗಳು ತಲೆಯೆತ್ತಿವೆ.

ಒಟ್ಟಾರೆ 'ಜನಪದ ಸಿಂಗಾರ ಸಾಧನ'ದಲ್ಲಿ ಅಲಂಕಾರಿಕಾ ವಸ್ತುಗಳ ಬಗ್ಗೆ ಲೇಖಕರು ತುಂಬಾ ಮಾಹಿತಿಗಳನ್ನು ಇಟ್ಟುಕೊಂಡು ವಿವರಿಸಿದ್ದಾರೆ. ಅಂದಿನಿಂದ ಇಂದಿನವರೆಗೆ ಹೇಗೆ ಅಂಗರಾಗಗಳನ್ನು ಬಳಸುತ್ತಿದ್ದರು, ಬಳಕೆಯಲ್ಲಿನ ವೈಜ್ಞಾನಿಕ ಕಾರಣಗಳೊಂದಿಗೆ ಆಪ್ತತೆಯಿಂದ ವಿವರಿಸಿದ್ದಾರೆ. ನಮಗೆ ತಿಳಿಯದ ವಿಷಯಗಳು ತುಂಬಾ ಈ ಪುಸ್ತಕದಲ್ಲಿದೆ. ಓದುಗರಿಗೆ ಈ ಪುಸ್ತಕವನ್ನು ಕೊಟ್ಟ ಲೇಖಕರಿಗೆ ಧನ್ಯವಾದಗಳು.

ಆರ್.ಎನ್. ಪವಿತ್ರಮಾಲ

೨೪. ಹಳ್ಳಿಯ ಸಂಸ್ಕೃತಿ ಚಿತ್ರಣ

ನಮ್ಮೂರು ನಮ್ಮವರು, ಕಟಾವೀರನಹಳ್ಳಿ ಜನ್ನಪ್ಪ, ವಿದ್ಯಾ ಪ್ರಕಾಶನ, ಬೆಂಗಳೂರು, ೨೦೧೨, ಪುಟ–೨೦+೩೨೨, ಬೆಲೆ ರೂ. ೧೭೫/-

ಹಳ್ಳಿಗಳು ಆ ದೇಶದ ಸಂಸ್ಕೃತಿ, ಪರಂಪರೆಗಳ ಜನ ಜೀವನದ ಪ್ರತಿಬಿಂಬ; ಜೀವಂತಿಕೆಯ ಸ್ಪಂದನ, ಸದಾಕಾಲ ಉತ್ಸಾಹ, ವಿಭಿನ್ನ ಆಯಾಮದೊಂದಿಗೆ ಏಕತ್ವದಲ್ಲಿ ಬದುಕುವ ಅಪ್ಪಟ ದೇಸಿ ಶೈಲಿ ಬದುಕನ್ನು ಹಳ್ಳಿಗಳಲ್ಲಿ ಕಾಣಬಹುದು. ಜೀವನ ರೀತಿ–ನೀತಿಗಳನ್ನು ಒಟ್ಟಾಗಿ ನೋಡಿ ಪರಿಭಾವಿಸುವ, ಅದನ್ನು ಅಕ್ಷರ ರೂಪವಾಗಿಸುವ, ನನ್ನ ಊರು ನನ್ನ ಜನವಿರುವ ಈ ಮೇಲಿನ ಅಂಶಗಳು ಲೇಖಕರದೇ ಆತ್ಮಕಥನವಾಗುವ ಬರಹ ಈ ಪುಸ್ತಕದಲ್ಲಿದೆ.

ಲೇಖಕ ಕಟಾವೀರನಹಳ್ಳಿ ಜನ್ನಪ್ಪ ಇವರು "ನಮ್ಮೂರು-ನಮ್ಮವರು" ಎಂಬ ಪುಸ್ತಕ ಲೇಖಕನ ಆತ್ಮಕಥನವೂ ಆಗುತ್ತಾ ಜೊತೆಗೆ ಒಂದು ಪುಟ್ಟ ಗ್ರಾಮದ ಪೂರ್ಣ ಮಾಹಿತಿ ಕೊಡುತ್ತಾ ಆ ಹಳ್ಳಿಯ ಜನರನ್ನು ಕುರಿತು ಸಮಗ್ರವಾಗಿ ಕಟ್ಟಿಕೊಡುವ ಪ್ರಯತ್ನವು ಸಫಲಗೊಂಡಿದೆ.

ಕಟಾವೀರನಹಳ್ಳಿ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಪುಟ್ಟ ಗ್ರಾಮ. ಈ ಜಿಲ್ಲೆಯ ಪೂರ್ಣ ಮಾಹಿತಿ ಕೊಡುವಂತಹ ಗಮನವನ್ನು ತಾನು ಹುಟ್ಟಿ ಬೆಳೆದ ಹಳ್ಳಿಗೂ ಕೊಟ್ಟಿರುವುದು ಇಲ್ಲಿಯ ವಿಶೇಷ. ಲೇಖನಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ಮೊದಲು ತನ್ನ ಹಳ್ಳಿಯ ಭೌಗೋಳಿಕ ಪರಿಸರ, ಹಿನ್ನೆಲೆ, ಅದರ ಇತಿಹಾಸ, ಪರಂಪರೆ, ನಕ್ಷೆ, ಸ್ಮಾರಕ, ಖನಿಜಸಂಪತ್ತು, ಜಲಸಂಪತ್ತು, ಕೆರೆಕಟ್ಟೆ, ಜನಸಂಖ್ಯೆ, ದೇವಸ್ಥಾನ, ಶಾಲೆ, ಹಬ್ಬಗಳು ಎಲ್ಲದರ ಪೂರ್ಣ ಮಾಹಿತಿ ಕೊಡಲಾಗಿದೆ. ಭಾಗ-೨ರಲ್ಲಿ ಆ ಊರಿನಲ್ಲಿ ವಾಸ ಮಾಡುವ ಕುಟುಂಬಗಳ ವಿವರಗಳು ಬರುತ್ತವೆ. ಭಾಗ-೩ರಲ್ಲಿ ತನ್ನ ಕುಟುಂಬದ ವಿವರಗಳು, ಭಾಗ-೪ರಲ್ಲಿ ತನ್ನ ಹಳ್ಳಿಯಿಂದ ದೂರವಾಗಿ ಬೆಳೆದ ವ್ಯಕ್ತಿಗಳು, ತನ್ನ ಹಳ್ಳಿಯನ್ನು ಕಂಡ ಬಗೆಯನ್ನು ಕುರಿತ ಲೇಖನಗಳು ಇಲ್ಲಿವೆ. ಹೀಗೆ ಪೂರ್ಣ ಪ್ರಮಾಣದ ಮಾಹಿತಿಗಳನ್ನು ಕೊಡುವಂತಹ ಉದ್ದೇಶವನ್ನು ಹೊಂದಿರುವ ಲೇಖಕರು ಮೊದಲು ಕವಿಯಾಗಿ ಗುರ್ತಿಸಿಕೊಂಡವರು. ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವ ಜನ್ನಪ್ಪನವರು ತನ್ನ ಊರಿನ ಬಗ್ಗೆ ಹೊಂದಿರುವ ಅಭಿಮಾನ ಹೆಮ್ಮೆಯ ಪ್ರತೀಕವೇ ಈ ಪುಸ್ತಕ.

ಒಬ್ಬ ವ್ಯಕ್ತಿ ಬೆಳೆದು, ತನ್ನ ಸಾಧನೆಯ ಕ್ಷೇತ್ರದಲ್ಲಿ ತೊಡಗಿಸಿಕೊಂಡ ನಂತರ, ತನ್ನ ಮೂಲ ನೆಲದ ಬೇರುಗಳನ್ನು ಗುರ್ತಿಸಿಕೊಳ್ಳುವಂತಹ ಕೆಲಸವನ್ನು ಮಾಡುವವರು ಅತಿ ವಿರಳ ಮತ್ತು ಉದಾಸೀನ ಭಾವವೂ ಇರುತ್ತದೆ. ತನ್ನ ವ್ಯಕ್ತಿತ್ವವನ್ನು ಗುರ್ತಿಸಿಕೊಳ್ಳುವುದು ಹೆಮ್ಮೆಯ ಭಾವ ಎಂದು ಭಾವಿಸುವವರು ಕಡಿಮೆ. ಇಲ್ಲಿ ಲೇಖಕನಿಗೆ ತನ್ನ ಹಳ್ಳಿಯಿಂದ ಪಡೆದ ಋಣವನ್ನು ಸಂದಾಯ ಮಾಡುವ ಪ್ರಜ್ಞೆಯ ಜೊತೆಗೆ ಅಲ್ಲಿಯ ಸಾಮಾಜಿಕ ನೋಟವನ್ನು, ಅದರ ಪರಿವರ್ತನೆಯ ಹಾದಿಯನ್ನು ಧಾರ್ಮಿಕ, ವ್ಯವಹಾರಿಕ ಆರ್ಥಿಕ ಪಲ್ಲಟಗಳನ್ನು, ಸಂಬಂಧಗಳ ಸೂಕ್ಷ್ಮಗಳನ್ನು, ಆಪ್ತತೆಯ ಜೀವಂತಿಕೆಯನ್ನು, ಸೂಕ್ಷ್ಮ ಮನಸ್ಸಿನ ಚಿತ್ರಣವನ್ನು ಈ ಕೃತಿಯಲ್ಲಿ ಕಾಣಬಹುದು.

ಒಂದು ಹಳ್ಳಿಯ ಚಿತ್ರಣವೆಂದರೆ, ಅದು ಒಂದು ಹಳ್ಳಿಯಾಗಿ ಮಾತ್ರ ಉಳಿಯದೆ ಒಂದು ಜಿಲ್ಲೆಯ, ಒಂದು ದೇಶದ ಸಾಂಸ್ಕೃತಿಕ ಆಯಾಮಗಳ ಸ್ವಂತಿಕೆಯ ಚಿತ್ರಣವೂ ಆಗಿರುತ್ತದೆ. ಒಂದು ಹಳ್ಳಿಯ ಬದುಕು ಒಂದು ದೇಶದ ಬದುಕು ಆಗಿರುತ್ತದೆಂಬುದೇ ಇಲ್ಲಿಯ ವಿಶೇಷ. ಅಪ್ಪ-ಅಮ್ಮ, ಅಣ್ಣ-ತಮ್ಮ, ಅಕ್ಕ-ತಂಗಿ, ಸಂಬಂಧಿಗಳು, ಸ್ನೇಹಿತರು ಎಲ್ಲರ ಒಡನಾಟದಲ್ಲಿ ಬೆಳೆಯುವ ಜೀವಿಗಳು. ಚಿಗುರಿ ಮರವಾಗಿ, ಹೂವಾಗಿ ಫಲಭರಿತವಾಗಿ ಇತರ ಜೀವಿಗಳಿಗೆ ಆಶ್ರಯವಾಗುವ, ಸವಿಯಾಗುವ ಎಲ್ಲ ಪ್ರಕ್ರಿಯೆಗಳು

ಒಬ್ಬ ವ್ಯಕ್ತಿಯ ಬೆಳವಣಿಗೆಯಲ್ಲಿ ಇರುತ್ತದೆ. ತನ್ನ ಹಳ್ಳಿಯ ಚಿತ್ರಣದೊಂದಿಗೆ ತನ್ನ ಬದುಕಿನ ಸಫಲತೆಯನ್ನು ಅಲ್ಲಿ ಕಂಡ ಬೆರಗು, ಪರಿವರ್ತನೆ, ಋಣದ ಭಾವಗಳು ಮಿಳಿತ.

'ನಮ್ಮೂರು-ನಮ್ಮವರು" ಎಂಬುದು ಒಂದು ಹಳ್ಳಿಯ ಚಿತ್ರಣದ ಜೊತೆಗೆ ಲೇಖಕನ ಆತ್ಮಕಥನವಾಗಿ, ಆ ಹಳ್ಳಿಯ ಪ್ರತಿಯೊಬ್ಬ ವ್ಯಕ್ತಿಯ ಚಿತ್ರಣವೂ ಸೇರಿ ನಮ್ಮ ಸಂಸ್ಕೃತಿಯ ಅದ್ವಿತೀಯ ಚಿಂತನೆಯ ಭಾಗವೂ ಆಗಿ ಎಲ್ಲವನ್ನು ಒಳಗೊಂಡ ಸಮಗ್ರ ಚಿತ್ರಣ ಇಲ್ಲಿ ಅಡಗಿದೆ. ಬಹುಮುಖಿಯಾದ ವಿಷಯಗಳನ್ನು ಕ್ರೋಢೀಕರಿಸುವಲ್ಲಿ ಲೇಖಕರ ಶ್ರಮ-ಶ್ರದ್ಧೆಗಳ ಫಲವಾಗಿ, ಸಂಪೂರ್ಣ ಮಾಹಿತಿ ಹೊಂದಿರುವ ಉತ್ತಮ ಪುಸ್ತಕವಾಗಿ ರೂಪುಗೊಂಡಿದೆ.

ಸುಶೀಲಾ ಸದಾಶಿವಯ್ಯ

೨೫. ಮಾದಿಗ ಸಮುದಾಯದ ಸಾಂಸ್ಕೃತಿಕ ಅನಾವರಣ

ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು, ಡಾ. ಕೆ.ಆರ್.ಜೆ. ರಾಜಕುಮಾರ್ ಜೈ ಭೀಮ್ ಪ್ರಕಾಶನ, ಚಿತ್ರದುರ್ಗ, ೨೦೧೨, ಪುಟ-೧೬+೯+೩೨೪, ಬೆಲೆ ರೂ. ೨೦೦/-

ಒಂದು ದೇಶದ ಸಂವಿಧಾನವನ್ನು ರಚಿಸುವಾಗ ಆ ದೇಶದೊಳಗಿನ ಸಾಮಾಜಿಕ ವ್ಯವಸ್ಥೆಯನ್ನು ಒಂದು ಎಳ್ಳಿನ ಮೊನೆಯಷ್ಟೂ ಮರೆಯದೇ ಅಧ್ಯಯನ ಮಾಡಿರಬೇಕು. ಆಗ ಮಾತ್ರ ಆ ಸಂವಿಧಾನ ಆ ದೇಶದ ಸಮಸ್ತವನ್ನು ತನ್ನ ಹಿಡಿತದಲ್ಲಿ ಹಿಡಿಯಲು ಸಾಧ್ಯ.

ಈ ಮೇಲಿನ ಹೇಳಿಕೆಗಳು ಸಮುದಾಯದ ಸಮಷ್ಟಿಪ್ರಜ್ಞೆಯ ಪ್ರತಿಭೆ ಡಾ. ಬಿ.ಆರ್. ಅಂಬೇಡ್ಕರ್‌ರವರದು. ಈ ಹೇಳಿಕೆ ನನಗೆ ಸಂಪೂರ್ಣ ಅರ್ಥವಾದದ್ದು ಡಾ. ಕೆ.ಆರ್.ಜೆ. ರಾಜಕುಮಾರ್‌ರವರ ಪಿಎಚ್.ಡಿ. ಸಂಶೋಧನಾ ಪ್ರಬಂಧವಾದ 'ಸ್ವಾತಂತ್ರೋತ್ತರ ಕರ್ನಾಟಕದಲ್ಲಿ ಮಾದಿಗರು' ಎಂಬ ಕೃತಿಯನ್ನು ಓದಿದಾಗ.

ಒಂದು ಉತ್ತಮ ಸಾಮಾಜಿಕ ವ್ಯವಸ್ಥೆಗೆ ರಾಜಕೀಯ ಸಮಾನತೆ ಮಾತ್ರವಲ್ಲ ಧಾರ್ಮಿಕ ಸಮಾನತೆಯು ಎಷ್ಟರಮಟ್ಟಿಗೆ ಅಗತ್ಯವಿದೆಂಬುದನ್ನು ತಿಳಿಸಿದ ಕೃತಿ ಇದಾಗಿದ್ದು, ಅಸಂಖ್ಯಾತ ಓದುಗರ ಅಮೂಲ್ಯ ಪ್ರಬಂಧವಾಗಿದೆ.

ಬಾಬಸಾಹೇಬ ಅಂಬೇಡ್ಕರ್ ಭಾರತದ ಬೆಳಕು. ದೇಶದ ಸಮಸ್ತ ಶೋಷಿತ ಸಮುದಾಯದ ಆಶಾಕಿರಣ. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತ ದೇಶದ ಸಂವಿಧಾನ ಶಿಲ್ಪಿ. ಅವರು 'ನಾವು ವ್ಯಕ್ತಿ ಮೇಲೆ ಸವಾರಿ ಮಾಡುವುದನ್ನು, ಹಕ್ಕುಗಳನ್ನು ಕಸಿದುಕೊಳ್ಳುವುದನ್ನು ವಿರೋಧಿಸಬೇಕು. ವ್ಯಕ್ತಿ ಸ್ವಾತಂತ್ರ್ಯವೇ ಪ್ರಾಥಮಿಕ ಅಗತ್ಯವಾಗಬೇಕು' ಎಂದು ಹೇಳಿದರೂ ಕೂಡ

ಬಂದಮ್ಮ ಕೆರೆಗೆಹಾರವಾಗಿದ್ದು ನಿಜಕ್ಕೂ ಒಂದು ದುರಂತವೇ ಸರಿ. ನಾವೆಲ್ಲಾ ಜನಪದ ಕತೆಯಾದ 'ಕೆರೆಗೆ ಹಾರ'ದ ಭಾಗೀರಥಿ ಕತೆ ಕೇಳಿ ಮಮ್ಮಲ ಮರುಗಿದ್ದೆವು. ಆದರೆ ಗೌಡನ ಆಳಿನ ಹೆಂಡತಿ ತುಂಬು ಗರ್ಭಿಣಿ ಎರಡು ಕೆರೆಯ ಜಲಕ್ಕಾಗಿ ಜೀವವನ್ನೇ ಬಲವಂತವಾಗಿ ಬಲಿಕೊಟ್ಟು ವ್ಯಕ್ತಿ ಸ್ವಾತಂತ್ರ್ಯವನ್ನೇ ಕಿತ್ತುಕೊಂಡ ಸನ್ನಿವೇಶವನ್ನು ಪರಿಚಯಿಸಿದ ಸಂಶೋಧಕರು ವಿಶಿಷ್ಟ ಅಂಶಗಳನ್ನು ಶೋಧಿಸಿದ್ದಾರೆ.

ಈ ತರದ ಸನ್ನಿವೇಶಗಳು ಜೀವಂತಿಕೆಯನ್ನು ಪಡೆದುಕೊಂಡಿವೆ. ಕೆ.ಆರ್.ಜೆ. ರಾಜಕುಮಾರ್‌ರವರ ಕೃತಿಯಲ್ಲಿ ದಾರಿದ್ರ್ಯ ಮತ್ತು ಮೌಢ್ಯತೆ ನಮ್ಮೆಲ್ಲಾ ಸಮಸ್ಯೆಗಳಿಗೂ ನಿರಕ್ಷರತೆಯೇ ಕಾರಣವೆಂದು ಗೊತ್ತುಪಡಿಸಿದ ಕೃತಿ ಇದಾಗಿದ್ದು, ಮಾದಿಗ ಜನಾಂಗದಲ್ಲಿ ಹೆಚ್ಚು ಬಾಲ್ಯವಿವಾಹವಾಗುತ್ತಿದ್ದವು ಎಂದು ಹೇಳಿದ ಮಾತು ನಿಜಕ್ಕೂ ಈ ಸಂಪ್ರದಾಯ ಮೌಢ್ಯತೆಯ ಪ್ರತೀಕವೆನ್ನಬಹುದು.

ಬರೀ ಪುಸ್ತಕಗಳಿಂದಲೇ ನಿಜವಾದ ಶಿಕ್ಷಣ ಸಿಗುವುದಿಲ್ಲ. ಬದಲಾಗಿ ಒಬ್ಬ ತನ್ನ ಪರಿಸರದಿಂದಾಗಿ ಅನುಭವದಿಂದಾಗಿ ಕೂಡ ಜ್ಞಾನ ಸಂಪಾದಿಸಿಕೊಳ್ಳುತ್ತಾನೆ ಎಂಬುದು ಗೊತ್ತಾಗುತ್ತದೆ. ಈ ಕೃತಿ ಓದಿದಾಗ, ಬೃಹತ್ ಗ್ರಂಥಗಳನ್ನು ಓದುವುದರಿಂದ ಸದ್ಗುಣ ಪ್ರಾಪ್ತವಾಗುವುದಿಲ್ಲ. ಸತ್ಕಾರ್ಯಗಳನ್ನು ಮಾಡುವುದರಿಂದ ಸದ್ಗುಣ ಸಾಧ್ಯ ಎಂದು ಅರಿಸ್ಟಾಟಲ್‌ನು ಹೇಳಿದ್ದಾನೆ. ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು ಎಂಬ ಕೃತಿ ಯಾವ ಬೃಹತ್ ಗ್ರಂಥಗಳಿಗಿಂತ ಕಮ್ಮಿ ಇಲ್ಲ. ಅವರ ಸರಳ ಸಹಜ ನಿರೂಪಣಾ ಶೈಲಿ, ಕಾಠಿಣ್ಯವಲ್ಲ. ಭಾಷೆ, ಆಪ್ತತೆಯೆನಿಸುವ ಗ್ರಾಮ್ಯ ಘಾಟಿನಿಂದ ಮೂಗಿಗೆ ಅಡರುವ ಹಟ್ಟಿಯ ಅಕ್ಷರಗಳು ಹೀಗೆ ನಿಜಕ್ಕೂ ಇದೊಂದು ಅನುಭವದ ಊಟೆ.

ಮುನ್ನುಡಿಯನ್ನು ಬರೆದ ಪ್ರೊ. ಲಕ್ಷ್ಮಣ್ ತೆಲಗಾವಿಯವರ ಚಿಂತನೆಯಂತೆಯೇ ನಮಗೂ ಕೂಡ ಅನ್ನಿಸದಿರದು. ಇದೊಂದು ಮಾದಿಗ ಸಮುದಾಯದ ಕುರಿತಾದ ಕೇವಲ ಅಧ್ಯಯನದ ವಿಷಯವಾಗದೇ ಇದೊಂದು ಅಲಕ್ಷಿತ ಸಮುದಾಯದ ಸಹನೆ, ತಾಳ್ಮೆ, ಅಸಹಾಯಕತೆ, ಅನಿವಾರ್ಯತೆ, ಅನಕ್ಷರತೆಯ ಅನಾವರಣವಾಗಿದೆ ಎಂದರೆ ತಪ್ಪಾಗಲಾರದು. ಇದು ಕೇವಲ ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿನ ಮಾದಿಗರ ಬಗ್ಗೆ ಮಾತ್ರ ಹೇಳಿಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ಇದ್ದ ಅನೇಕ ಅಂಶಗಳತ್ತ ತಮ್ಮ ದೃಷ್ಟಿಯನ್ನು ಸಂಶೋಧಕರು ಹರಿಸಿದ್ದಾರೆ.

ಸಂಶೋಧಕರು ಸ್ವತಃ ಮಾದಿಗ ಸಮುದಾಯದವರೇ ಆದರೂ ಯಾವುದೇ ಹಿರಿಯರಿಗಿಂತ ಕಮ್ಮಿ ಇಲ್ಲದಂತೆ ಮಾಹಿತಿಯನ್ನು ಕಲೆ ಹಾಕಿದ್ದಾರೆ. ಒಪ್ಪ ಓರಣವಾಗಿ ಅತ್ಯಗತ್ಯವಾದದ್ದನ್ನೇ, ಮುಖ್ಯವಾದವುಗಳನ್ನೇ ದಾಖಲಿಸಿದ್ದಾರೆ. ಪ್ರತಿ ಕ್ಷೇತ್ರವನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡು ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಹೇಳಬೇಕಾದಷ್ಟನ್ನೇ ಹೇಳಬಹುದಾದುದ್ದನ್ನೇ ಹೇಳಿ ಓದುಗರ ಆಸಕ್ತಿಯನ್ನು ಉಳಿಸಿದ್ದಾರೆ. ಅಪೂರ್ಣವೆಂಬ ಅಲೆಯನ್ನು ದಾಟಿದ್ದಾರೆ.

ಮಾದಿಗ ಸಮುದಾಯದವರಿಗೆ ಈ ಕೃತಿ ಒಂದು ಕಾಮಧೇನು ರೂಪದಲ್ಲಿ ಪ್ರಕಟವಾಗಿದೆ. ಕಾರಣ ಈ ಜನಾಂಗದ ಸಂಪೂರ್ಣ ಕ್ಷೇತ್ರಾಧ್ಯಯನ ನಡೆದಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲವೊಂದು ಉದಾಹರಣೆಗಳನ್ನು ನೀಡುವುದಾದರೆ,

೧. ಟಿ.ಆರ್. ಸಿಂಗ್ ಪ್ರಕಾರ–ಮಹಾದಿಗ ಎಂದರೆ–ಕೆಳಗೆ ಇಳಿದು ಬಂದ ಶ್ರೇಷ್ಠ ಪುರುಷ, ಮಹಾಪುರುಷ ಇಳಿದು ಬಾ ಎಂಬುದು ನಿಜಕ್ಕೂ ಆಶ್ಚರ್ಯ ಮತ್ತು ಒಪ್ಪಿತವಾದ ಅಂಶವಾಗಿದೆ.

೨. ಇನ್ನು 'ಮಾದಿಗೊಡ್ಡು' ಇದು ನಮ್ಮದು ಎಂದು ಕೇಳುತ್ತಿದ್ದುದ್ದು ಪದ ನಿಷ್ಪನ್ನವಾದ ಪರಿ, ಅರ್ಥ ಸ್ಫುರಿಸುವಿಕೆಯ ರೀತಿ, ಮಾಹಿತಿ ಸಂಗ್ರಹಿಸಿದ ಬಗೆ, ಸಂಶೋಧನೆಯ ತಳಸ್ಪರ್ಶಿ ಅಧ್ಯಯನದ ಪ್ರತೀಕವೆಂದೇ ಹೇಳಬಹುದು.

೩. ಇನ್ನು ಮಾದಿಗರ ಪೂರ್ವಜರ ಅಣ್ಣ ತಮ್ಮಂದಿರ ಬಗ್ಗೆ ಅದರಲ್ಲೂ ಮಾದಿಗನೆ ಮೊದಲಿಗನೆಂದು ಈ ಮೊದಲಿಗನೆ ಮಾದಿಗ ಆಯಿತೆಂದು ಹೇಳಿರುವುದು ಒಂದು ಹೊಸ ವಿಶ್ಲೇಷಣೆ(ಅಣ್ಣ ತಮ್ಮಂದಿರು ಮಾದಿಗ, ನಾಯಕ, ಗೊಲ್ಲ).

೪. ಮಾದಿಗರ ಇತಿಹಾಸವನ್ನು ಕುರಿತ ಯಾವುದೇ ಚಾರಿತ್ರಿಕ ದಾಖಲೆಗಳು ದೊರಕದೆ ಹೋದರೂ ಪುರಾಣ, ಐತಿಹ್ಯಗಳು ಅವರ ಮೂಲವೃತ್ತಿ ಮತ್ತಿತರ ಅಂಶಗಳ ಮಾಹಿತಿಯನ್ನು ನೀಡುತ್ತದೆ. ಈ ಕೃತಿ ಹರಿಜನ ಎಂದರೆ ದೇವರಿಗೆ ಪ್ರಿಯರು ಎಂಬರ್ಥವನ್ನು ಪರಿಚಯಿಸುತ್ತದೆ.

೫. ಎಡಗೈ–ಬಲಗೈನ ಭಿನ್ನತೆಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಎಡಗೈನಲ್ಲಿ ವಿಶ್ವ ಬ್ರಾಹ್ಮಣ, ಬಲಗೈನಲ್ಲಿ ಒಕ್ಕಲಿಗ ಜಾತಿ ಬರುತ್ತದೆಂದು ಹೇಳಿದ ಅಂಶ ಅವರ ತಳಸ್ಪರ್ಶಿ ಕ್ಷೇತ್ರಕಾರ್ಯಕ್ಕೆ ಸಾಕ್ಷಿಯಾಗಿದೆ.

ಮುಂದುವರೆದು ಮಧ್ಯಕಾಲೀನ ಚಳುವಳಿಗಳ ಹಿನ್ನೆಲೆ, ವಚನಕಾರರ ಕಾಲ, ಮಾದಾರ ಚನ್ನಯ್ಯನವರ ವೃತ್ತಾಂತ, ದಲಿತ ಚಳುವಳಿಗಳು, ಮೀಸಲಾತಿಗಳ ಹೋರಾಟದ ಸಾಮಾಜಿಕ ಸ್ಥಿತಿ, ಆಹಾರ ಪದ್ಧತಿ, ನ್ಯಾಯಪದ್ಧತಿ, ಹಲ್ಲೆ–ದೌರ್ಜನ್ಯ ಪ್ರಕರಣಗಳು, ಮತಾಂತರಗಳು, ಮಾದಿಗರು ಮತ್ತು ಇತರ ಜಾತಿಗಳ ನಡುವಿನ ಸಂಬಂಧ, ಕರೆಬಾನಿ, ಆಯಗಾರಿಕೆ, ಗಂಜಿ ಬಟ್ಟೆ ಬಿಡುವ ಕಾರ್ಯ ಮುಂತಾದ ಅಂಶಗಳ ಬಗ್ಗೆ ಎಲ್ಲರಿಗಿಂತ ತುಸು ಭಿನ್ನವಾಗಿ ಪರಿಚಯಿಸಿದ ರೀತಿ ಸಂಶೋಧಕರ ಮೂಲ ಸಂಸ್ಕೃತಿಗಳ ಬಗೆಗಿನ ಅಗಾಧ ಅಧ್ಯಯನದ ಭಾಗವಾಗಿದೆ.

ಜಾಗತೀಕರಣ, ಆಧುನೀಕರಣ, ಖಾಸಗೀಕರಣದ ಭರಾಟೆಯಲ್ಲಿ ಮಾದಿಗರು ತಮ್ಮ ಜಾತಿಯನ್ನೇ ಮರೆತು ನಗರೀಕರಣದ ವ್ಯಾಮೋಹದಿಂದ ಉಚ್ಚಜಾತಿಯೊಳಗೆ ಒಂದಾಗಲು ಪ್ರಯತ್ನಿಸುತ್ತಿರುವ ಈ ಸಂದರ್ಭದಲ್ಲಿ ಸಂಶೋಧಕರು–ಜಾಡ್ಲ ಎಣ್ಣೆ ಆರಕದ ಮುದ್ದೆ, ಸವುಳು, ಹರಳಪ್ಪನ ಕಥೆ ಹೇಳುವ ಬಾಲ ಬಸವರ ಕಥೆಗಳನ್ನು ಪರಿಚಯಿಸಿದ ಬಗೆ ನಿಜಕ್ಕೂ ಅಭಿನಂದನಾರ್ಹ.

ಕೃತಿಯನ್ನ ಪರಿಚಯಿಸಿದ ಬಗೆ, ನಿರೂಪಣಾ ಶೈಲಿ ಓದುಗರಿಗೆ ಇಷ್ಟವಾಗುತ್ತದೆ. ವಿಷಯಗಳ ಅನುಕ್ರಮಣಿಕೆ, ನೈಜ ಮತ್ತು ಸಹಜವಾಗಿ, ಶಿಷ್ಟವಾಗಿ ದಾಖಲಿಸಿದ ಪರಿ ನಿಜಕ್ಕೂ ಬೆರಗುಗೊಳಿಸುವಂತೆ ಮಾಡಿದೆ.

ಈ ಕೃತಿಯ ಮೌಲ್ಯವನ್ನು ಹೆಚ್ಚಿಸಲು ನೆರವಾಗಿರುವ ಅಂಶವೆಂದರೆ,

೧. ಅಧ್ಯಯನಶೀಲತೆ.

೨. ಮಾಹಿತಿಗಳು ಸಂಗ್ರಹಣೆ.

೩. ಕಂಡ ಅಂಶಗಳನ್ನೇ ದಾಖಲಿಸಿರುವುದು.

೪. ಸಹಜತೆಗೆ ಮಹತ್ವ ಕೊಟ್ಟಿರುವುದು.

ಹೀಗೆ ಕೇವಲ ೩೦೦ ಪುಟಗಳ ಈ ಪುಟ್ಟ ಕೃತಿಯೊಳಗೆ ಕನ್ನಡಿಯಲ್ಲಿ ಆನೆಯನ್ನು ಅಡಗಿಸುವ ಪ್ರಯತ್ನ ಮಾಡಿದ್ದಾರೆ.

ನನ್ನ ಅಧ್ಯಯನದ ದೃಷ್ಟಿಯಲ್ಲಿ ಹೇಳುವುದಾದರೆ, ನನ್ನೊಳಗಿನ ಓದುಗನ ಮಿತಿಯಲ್ಲಿ ದಾಖಲಿಸಬಹುದಾದ ಅಂಶಗಳೆಂದರೆ– ಈ ಮಾದಿಗರ ಮತಾಂತರಗಳ ಬಗ್ಗೆ ಹೇಳುವ ಸಂದರ್ಭದಲ್ಲಿ ಹೇಳಿದ ಅಂಶಗಳಲ್ಲಿ ಬೌದ್ಧ ಮತ್ತು ಇಸ್ಲಾಂ ಮತಾಂತರರ ಬಗೆಗೆ ಸಾಧ್ಯವಾದಷ್ಟು ಉದಾಹರಣೆ ಸಮೇತ ಇನ್ನಷ್ಟು ಪೂರಕಾಂಶಗಳನ್ನು ಪರಿಚಯಿಸ ಬಹುದಿತ್ತು.

ಚಿತ್ರದುರ್ಗ, ಬಳ್ಳಾರಿ ಜಿಲ್ಲೆಯ ಮಾದಿಗರ ಬಗ್ಗೆ ಮಾತ್ರ ಹೇಳಿದೆ. ಅದರ ಜೊತೆಗೆ ಇನ್ನು ಅಕ್ಕ ಪಕ್ಕದ ಜಿಲ್ಲೆಯ ಸಾಮಾಜಿಕ ಸಾಂಸ್ಕೃತಿಕ ಅಂಶಗಳು ಅಧ್ಯಯನದ ಹಿನ್ನೆಲೆಯಲ್ಲಿ ಕೆಲವಾರು ವಿಶಿಷ್ಟ ಅಂಶಗಳನ್ನು ದಾಖಲಿಸಬಹುದಿತ್ತೇನೋ ಅನ್ನಿಸಿತು.

ಬಳಸಿದ ಭಾಷೆ ಸಾಂದರ್ಭಿಕವಾಗಿ ಗ್ರಾಮ್ಯ ಮತ್ತು ಮಾದಿಗರ ಹಟ್ಟಿಯ ಭಾಷೆಯಲ್ಲಿ ರಬಹುದಾಗಿತ್ತು(ಅಗತ್ಯವಿದ್ದ ಕಡೆ).

ಪ್ರಸ್ತುತ ಮಾದಿಗರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಂವಿಧಾನಾತ್ಮಕ ಕ್ರಮಗಳ ಬಗ್ಗೆ ಬೆಳಕನ್ನು ಚೆಲ್ಲಬಹುದಿತ್ತೇನೋ. ರಂಗಭೂಮಿ, ಚಲನಚಿತ್ರ, ಪತ್ರಿಕಾ ಮಾಧ್ಯಮ ಮಾದಿಗರು ನಡೆಸುತ್ತಿರುವ ವಿದ್ಯಾಸಂಸ್ಥೆಗಳು, ಮಾದಿಗರ ಸಾಧನೆ, ಪ್ರಸ್ತುತ ಜನಸಂಖ್ಯೆಯ ಅಂಕಿ–ಅಂಶ, ನಿರ್ಣಾಯಕ ಪಾತ್ರಗಳ ಬಗ್ಗೆ ವಿಸ್ತೃತ ಮಾಹಿತಿಯ ಅಗತ್ಯವಿತ್ತು.

ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಮಾದಿಗರ ಶೋಷಣೆ, ಅಲ್ಲಿನ ಸಾಮಾಜಿಕ ಸ್ಥಿತಿ, ರಾಷ್ಟ್ರೀಯ ಮಟ್ಟದಲ್ಲಿ ಮಾಡಿದ ಸಾಧನೆಗಳ ಬಗೆಗಿನ ಮಾಹಿತಿಯ ಅಗತ್ಯವೆನಿಸಿತು. ೧೯೨೫ರಲ್ಲಿ ಕೊರಟಗೆರೆಯಲ್ಲಿ ನಡೆದ ಪಂಚಮರ ಸಮ್ಮೇಳನ ಮತ್ತು ಮೈಸೂರು ಜಿಲ್ಲೆ ಎಡತೊರೆಯಲ್ಲಿ ಜರುಗಿದ ಸಮ್ಮೇಳನಗಳ ಬಗ್ಗೆ ಇನ್ನಷ್ಟು ಮಾಹಿತಿಗಳ ಅಗತ್ಯವಿತ್ತು.

ಈ ರೀತಿ ಕೆಲವು ಕೊರತೆಗಳನ್ನು ಹೊರತುಪಡಿಸಿದರೆ ಇದೊಂದು ಅರ್ಥಪೂರ್ಣ ಸಂಶೋಧನ ಕೃತಿಯಾಗಿದೆ. ಒಂದು ಜನಾಂಗದ ಬಗೆಗಿನ ಸಂಪೂರ್ಣ ಚಿತ್ರಣ ನೀಡುವ, ಇಡೀ ಸಮುದಾಯದ ಹಿನ್ನೆಲೆ–ಮುನ್ನಲೆಯನ್ನು ಪರಿಚಯಿಸುವ ಕೈದೀವಿಗೆ ಯಾಗಿದೆ. ಈಗಿನ ತಲೆಮಾರಿನ ಸಮುದಾಯದವರು ಕಡ್ಡಾಯವಾಗಿ ಓದಲೇಬೇಕಾದ

ಪ್ರತಿಯೊಬ್ಬರ ಮನೆ ಮನೆಗಳಲ್ಲಿ ಶಾಶ್ವತವಾಗಿ ಇಟ್ಟುಕೊಳ್ಳಬೇಕಾದ ಎಲ್ಲಾ ಅರ್ಹತೆಗಳನ್ನು ಈ ಕೃತಿ ಪಡೆದಿದೆ.

ಈ ತೆರನಾದ ಕೃತಿಗಳು ಈ ಸಂಶೋಧಕರಿಂದಲೇ ಹೊರಹೊಮ್ಮಲಿ. ಈ ಸಮುದಾಯದ ಹಿರಿಯಜ್ಜನಾಗಿ ಅವರ ಕೃತಿಗಳು ನಮಗೆ ಪರಿಚಯವಾಗಲಿ ಎಂಬುದೇ ನಮ್ಮೆಲ್ಲರ ಸದಾಶಯ.

ಕೊಟ್ಟ. ಶಂಕರ್

೨೬. ಮಾನವ ಮತ್ತು ಸಾಂಸ್ಕೃತಿಕ ಪಲ್ಲಟಗಳು

ಮಾನವ ಮತ್ತು ಸಾಂಸ್ಕೃತಿಕ ಪಲ್ಲಟಗಳು, ಸಂ. ಡಾ. ತಾರಿಹಳ್ಳಿ ಹನುಮಂತಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪುಟ–೯೫+೨೨೨, ಬೆಲೆ ರೂ. ೧೨೦/-

ಕನ್ನಡ ವಿಶ್ವವಿದ್ಯಾಲಯದ ಮಾನವ ಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ವಿದ್ಯಾಲಯ ಬೆಂಗಳೂರು ಇವರ ಸಹಯೋಗದಲ್ಲಿ ದಿನಾಂಕ ೧ ಮತ್ತು ೨ನೇ ಮಾರ್ಚ್ ೨೦೧೧ ರಂದು 'ಮಾನವ ಮತ್ತು ಸಾಂಸ್ಕೃತಿಕ ಪಲ್ಲಟಗಳು' ಎಂಬ ವಿಷಯ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಬೆಂಗಳೂರಿನ ಪ್ರತಿಷ್ಠಿತ ಮಹಾರಾಣಿ ಲಕ್ಷ್ಮೀಅಮ್ಮಣ್ಣಿ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು. ಅಲ್ಲಿ ಎರಡು ದಿನಗಳ ಕಾಲ ನಡೆದ ವಿಚಾರ ಸಂಕಿರಣದಲ್ಲಿ ಚರ್ಚೆಗೊಳಪಟ್ಟ ಮಾನವನ ಜೀವನಶೈಲಿ, ಆತನ ಆಹಾರ ಪದ್ಧತಿ, ಉಡುಗೆ–ತೊಡುಗೆಗಳು, ಮಾನವನ ಸ್ವಾರ್ಥದಿಂದಾಗಿ ನಡೆಯುತ್ತಿರುವ ಗೋಹತ್ಯೆ, ಸ್ತ್ರೀಹತ್ಯೆ, ಅಪರಾಧಗಳು, ಮುಗ್ಧಜೀವಿಗಳ ಮಾರಣ ಹೋಮ, ಅವಿಭಕ್ತ ಕುಟುಂಬಗಳ ನಾಶ ಇವಿಷ್ಟೆ ಅಲ್ಲದೆ ಇಂದಿನ ಶಿಕ್ಷಣ ಪದ್ಧತಿ, ರಾಜಕೀಯ ಸ್ಥಿತಿಗತಿ, ಧಾರ್ಮಿಕ ಜೀವನ, ಮೂಢನಂಬಿಕೆ, ಮಾನವನ ಅತೃಪ್ತ ಜೀವನ, ಅನ್ನದಾತನ ಆತ್ಮಹತ್ಯೆ, ಸಂಸ್ಕೃತಿಯ ಪಲ್ಲಟಗಳು ಇನ್ನಿತರ ಮೂಲಭೂತವಾದ ಸಮಸ್ಯೆಗಳನ್ನು ಕುರಿತು ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳನ್ನು ವಿದ್ವಾಂಸರಿಂದ ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ.

ಈ ಕೃತಿಯಲ್ಲಿ ವಿವಿಧ ಲೇಖಕರು ಮಂಡಿಸಿರುವ ಒಟ್ಟು ೨೨ ಪ್ರಬಂಧಗಳು ಸಂಗ್ರಹವಾಗಿವೆ. ಎಲ್ಲಾ ಪ್ರಬಂಧಗಳು ಹೊಸ ಹೊಸ ಹೊಳಹುಗಳ ಹಿನ್ನೆಲೆಯಲ್ಲಿ ಪ್ರಕಟಗೊಂಡಿವೆ.

ಸಮಾಜ ಮತ್ತು ಸಂಸ್ಕೃತಿ ಸಿದ್ಧ ವಸ್ತುಗಳಲ್ಲ. ಅವು ನಿರಂತರವಾಗಿ ಬದಲಾಗುವ ಸಂರಚನೆಗಳಾಗಿವೆ ಎನ್ನುವ ಅಂಶವನ್ನು ಸ್ಪಷ್ಟಪಡಿಸುತ್ತ 'ಮಾನವ ಮತ್ತು ಸಂಸ್ಕೃತಿ'ಯನ್ನು ಕುರಿತು ಡಾ. ಗಾದೆಪ್ಪರವರು ತಮ್ಮ ಪ್ರಬಂಧದಲ್ಲಿ ಚರ್ಚಿಸಿದ್ದಾರೆ.

ನಗರೀಕರಣದ ಸೆಳೆತಕ್ಕೆ ಸಿಲುಕಿ ಅದರ ಆಸೆಗಳಿಂದಾದ ದುಷ್ಪರಿಣಾಮಗಳು, ಗಣಿಗಾರಿಕೆಯಿಂದ ಉಂಟಾಗುವ ವಿನಾಶಗಳನ್ನು ಕುರಿತು 'ಮಾನವ ಮತ್ತು ನಗರೀಕರಣ' ಎಂಬ ಪ್ರಬಂಧದಲ್ಲಿ ಡಾ. ಗೋವಿಂದರವರು ತಿಳಿಸುತ್ತಾರೆ.

ಹೊಸ ಆವಿಷ್ಕಾರಗಳಿಂದ ಆಗುವ ಸಂಸ್ಕೃತಿಯ ಪಲ್ಲಟಗಳು, ಅದರಿಂದಾಗುವ ಸತ್ಪರಿಣಾಮಗಳು ಮತ್ತು ದುಷ್ಪರಿಣಾಮಗಳನ್ನು ಕುರಿತು 'ಮಾನವ ಮತ್ತು ಹೊಸ ಆವಿಷ್ಕಾರಗಳು' ಎಂಬ ಪ್ರಬಂಧದಲ್ಲಿ ಡಾ. ಎಂ.ಎಂ. ಕೊಟ್ರಸ್ವಾಮಿಯವರು ಚರ್ಚಿಸುತ್ತಾರೆ.

ಆಹಾರ ಪದ್ಧತಿಯ ಪಲ್ಲಟಗಳನ್ನು ಗುರ್ತಿಸಲು ಕರ್ನಾಟಕವನ್ನು ಪ್ರಾತಿನಿಧಿಕವಾಗಿ ಇಟ್ಟುಕೊಂಡು, ಆಧುನಿಕ ಬದುಕಿನಲ್ಲಿ ಪಾರಂಪರಿಕ ಆಹಾರ ಕ್ರಮವನ್ನು ಮರೆತು ಫಾಸ್ಟ್ ಫುಡ್‌ಗಳಂತಹ ಪದಾರ್ಥಗಳಿಂದ ಜನರ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ ಡಾ. ಅನುಪಮ ಎಚ್.ಎಸ್.ರವರು ತಮ್ಮ 'ಮಾನವ ಮತ್ತು ಆಹಾರ ಪದ್ಧತಿ' ಎಂಬ ಪ್ರಬಂಧದಲ್ಲಿ ಓದುಗರ ಗಮನವನ್ನು ಸೆಳೆದಿದ್ದಾರೆ.

ಆದಿಮಾನವನ ಕಾಲದಲ್ಲಿ ಸ್ತ್ರೀಯಿಂದ ಪ್ರಾರಂಭವಾದ ಕೃಷಿ, ನಂತರದ ದಿನಗಳಲ್ಲಿ ಪುರುಷನ ಕೈಸೇರಿ ಹಲವು ಬದಲಾವಣೆಗಳಿಗೆ ಒಳಗಾಗಿದ್ದನ್ನು, ಬೆಳೆದು ಬಂದ ಕೃಷಿ ಸಂಬಂಧಿ ಆಚರಣೆಗಳನ್ನು ಕುರಿತು 'ಕೃಷಿಯ ಪರಿಸರ ಅಂದು–ಇಂದು' ಎಂಬ ಪ್ರಬಂಧದಲ್ಲಿ ಸುರೇಶ ಕೆ.ಸಿ.ರವರು ಚರ್ಚಿಸಿದ್ದಾರೆ.

ನ್ಯಾಯ ಇತ್ಯರ್ಥದ ಒಂದು ವ್ಯವಸ್ಥೆಯಾಗಿರುವ ಪಂಚಾಯ್ತಿ ಕಟ್ಟೆಯ ವಿವರ, ನ್ಯಾಯ ನಿರ್ಣಯ ಕ್ರಮ ಮೊದಲಾದವುಗಳನ್ನು ಕುರಿತು ಡಾ. ತಾರಿಹಳ್ಳಿ ಹನುಮಂತಪ್ಪನವರು ತಮ್ಮ 'ಪಂಚಾಯ್ತಿ ವ್ಯವಸ್ಥೆ' ಎಂಬ ಪ್ರಬಂಧದಲ್ಲಿ ಚರ್ಚಿಸಿದ್ದಾರೆ. ಹಿಂದೂ ಸಮಾಜದಲ್ಲಿ ಒಡಮೂಡಿದ ವರ್ಣ ವ್ಯವಸ್ಥೆ, ತನ್ನ ಮುಖೇನ ಬಡವರನ್ನು, ಅನಕ್ಷರಸ್ಥರನ್ನು ತಮ್ಮ ಸ್ವಾರ್ಥಗಳಿಗೆ ಬಳಸಿಕೊಂಡು ಶೂದ್ರ, ದಲಿತನೆಂಬ ಹಣೆಪಟ್ಟಿ ಕಟ್ಟಿ ಆತನನ್ನು ಶೋಷಿಸುತ್ತಿರುವ ಕ್ರಮವನ್ನು ಶಿವಲಿಂಗಪ್ಪ ನಾಯಕ ಅವರು ತಮ್ಮ 'ಹಿಂದೂ ಸಂಪ್ರದಾಯ ಮತ್ತು ದಲಿತರು' ಎಂಬ ಪ್ರಬಂಧದಲ್ಲಿ ತಿಳಿಸುತ್ತಾರೆ.

ಮಾನವನ ಬುದ್ಧಿವಂತಿಕೆಯ ಅತಿರೇಕದಿಂದ ಉಂಟಾಗುತ್ತಿರುವ ಹಾನಿಗಳು ಮತ್ತು ಮನುಷ್ಯನ ಬುದ್ಧಿವಂತಿಕೆಯು ಆತನ ನಾಶದ ನಾಂದಿಯಾಗಿರುವುದನ್ನು ಭೀಮೇಶ್‌ರವರು ತಮ್ಮ 'ಮಾನವ ಮತ್ತು ನಾಗರಿಕ ಪ್ರಜ್ಞೆ' ಎಂಬ ಲೇಖನದಲ್ಲಿ ಚರ್ಚಿಸಿದ್ದಾರೆ.

ಪುರುಷ ಪ್ರಧಾನ ಸಮಾಜದಲ್ಲಿ ಧರ್ಮ, ಸಂಸ್ಕೃತಿ, ಕುಟುಂಬ, ವಿವಾಹ ಇತ್ಯಾದಿ ಸಂಸ್ಥೆಗಳ ಪೂರಕ ಆಕ್ರಮಣಗಳೊಂದಿಗೆ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಡಾ. ಶ್ರೀದೇವಿ ವಿ. ಆಲೂರರವರು ತಮ್ಮ 'ಮಹಿಳೆ ದೌರ್ಜನ್ಯವನ್ನು' ಎಂಬ ಪ್ರಬಂಧದಲ್ಲಿ ಚರ್ಚಿಸಿದ್ದಾರೆ.

ಬ್ರಿಟಿಷರ ಸಾಮ್ರಾಜ್ಯಶಾಹಿ ಮನೋಭಾವದಿಂದಾಗಿ ಅಪರಾಧಿಗಳೆಂಬ ಹಣೆಪಟ್ಟಿಯನ್ನು ಕಟ್ಟಿಕೊಂಡ ಬುಡಕಟ್ಟು ಜನಾಂಗಗಳು ಸ್ವಾತಂತ್ರ್ಯ ನಂತರವೂ ಸಹ ಮೂಲಭೂತ ಸೌಲಭ್ಯಗಳಿಲ್ಲದೆ ಬದುಕುವುದನ್ನು ಹಾಗೂ ಸೆಟ್ಲ್‌ಮೆಂಟಿನ ವಿಮುಕ್ತ ಬುಡಕಟ್ಟುಗಳು ಶೋಷಿತರಲ್ಲಿಯೇ ಶೋಷಿತರಾಗಿರುವುದನ್ನು ಡಾ. ಮಲ್ಲಿಕಾರ್ಜುನ ಮಾನ್ವಡೆಯವರು ತಮ್ಮ 'ವಿಮುಕ್ತ ಬುಡಕಟ್ಟುಗಳ ಶೋಷಣೆಯಲ್ಲಿ ವಿವಿಧ ಮುಖಗಳು' ಎಂಬ ಲೇಖನದಲ್ಲಿ ಓದುಗರ ಗಮನವನ್ನು ಸೆಳೆಯುತ್ತಾರೆ.

'ಛಪ್ಪರಬಂಧ' ಸಮುದಾಯ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ವಾಸಿಸುತ್ತಿದ್ದು ಅವರನ್ನು ಕುರಿತ 'ಛಪ್ಪರಬಂಧ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು' ಎಂಬ ತಮ್ಮ ಪ್ರಬಂಧದಲ್ಲಿ ಅವರ ಪಾರಂಪರಿಕ ಬಹುಮುಖಿ ವಿಷಯಗಳನ್ನು ವಿವರಿಸಿದ್ದಾರೆ.

ಎಲ್ಲಾ ಧರ್ಮಗಳು ಬಯಸುವ ಮನುಕುಲದ ಹಿತವನ್ನು ಕುರಿತು, ಪರಮ ಶ್ರೇಷ್ಠವಾದ ಭಾರತೀಯ ಸಂಸ್ಕೃತಿಯ ವಿಚಾರಧಾರೆಗಳನ್ನು ಮಾಣಿಕ್ಯಪ್ಪ ಬಿ. ರವರು ತಮ್ಮ 'ಮಾನವ ಮತ್ತು ಮನುಕುಲ' ಎಂಬ ಪ್ರಬಂಧದಲ್ಲಿ ಚರ್ಚಿಸಿದ್ದಾರೆ. ಅವಿಭಕ್ತ ಕುಟುಂಬಗಳ ವಿಘಟನೆಗೆ ಕಾರಣಗಳನ್ನು ತಿಳಿಸುತ್ತ ಆ ಕುಟುಂಬಗಳ ಸ್ಥಿತಿಗತಿಗಳನ್ನು, ಬಾಂಧವ್ಯಗಳನ್ನು ಧರ್ಮವೀರ ಕೆ.ಹೆಚ್.ರವರು ತಮ್ಮ 'ಅವಿಭಕ್ತ ಕುಟುಂಬಗಳ ನಾಶ' ಎಂಬ ಪ್ರಬಂಧದಲ್ಲಿ ಚರ್ಚಿಸಿದ್ದಾರೆ.

ಒಟ್ಟಾರೆ ಇಲ್ಲಿ ಸಂಪಾದನೆಗೊಂಡ ಎಲ್ಲಾ ಲೇಖನಗಳು ಆಧುನಿಕತೆ ಮತ್ತು ಪರಂಪರೆಯ ಮುಖಾಮುಖಿಯ ಬಗ್ಗೆ ಕೂಲಂಕಷವಾಗಿ ಚರ್ಚಿಸಿವೆ.

ಲಕ್ಷ್ಮೀಕಾಂತ ಗೌರೀಪುರ

೨೭. ಲಂಬಾಣಿಗಳ ಪರಿಚಯಾತ್ಮಕ ಬದುಕಿನ ನೋಟಗಳು

ಲಂಬಾಣಿಗಳ ಪಾರಂಪರಿಕ ಬದುಕು, ಜಿ. ಪಳನಿಸ್ವಾಮಿ ಜಾಗೇರಿ, ಪ್ರ. ಸೆಲ್ವಿಬಾಯಿ ಪಿ. ಜಾಗೇರಿ ಆರ್.ಬಿ. ತಾಂಡ, ಸತ್ತೆಗಾಲ ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ. ೨೦೧೨, ಪುಟ–೧೫+೧೦೮, ಬೆಲೆ ರೂ. ೧೦೦/-

ಲಂಬಾಣಿಗಳು ಹಿಂದುಳಿದ ಜನಾಂಗವಾದರೂ, ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ, ಸಂಪ್ರದಾಯ, ಆಚರಣೆ, ನಂಬಿಕೆಗಳನ್ನು ಹೊಂದಿರುವ ಒಂದು ಸಮುದಾಯ. ತಮ್ಮ ಜನಾಂಗದವರೊಂದಿಗೆ ತಾಂಡಗಳಲ್ಲಿ ವಾಸಿಸುವ ಅವರ ಪಾರಂಪರಿಕ ಬದುಕನ್ನು ಕುರಿತು ಜಿ.ಪಳನಿಸ್ವಾಮಿ ಜಾಗೇರಿ ಅವರು ಬರೆದಿರುವ "ಲಂಬಾಣಿಗಳ ಪಾರಂಪರಿಕ ಬದುಕು" ಪುಸ್ತಕದಲ್ಲಿ ಅವರ ಬದುಕಿನ ರೀತಿ ನೀತಿಗಳನ್ನು ಕುರಿತು ಪರಿಚಯಿಸುವ ಪರಿಚಯಾತ್ಮಕ ಲೇಖನಗಳು ಇವೆ. ತಾವು ಅದೇ ಜನಾಂಗದವರಾಗಿ ತಮ್ಮ ಬಗ್ಗೆ ಅವರೇ ಬರೆದಿರುವುದರಿಂದ ಮಾಹಿತಿಗಳು ನಿಖರವಾಗಿ, ಸ್ಪಷ್ಟತೆಯಿಂದ ಕೂಡಿದೆ.

ತಮ್ಮ ಹಿರಿಯರಿಂದ ಕೇಳಿ ತಿಳಿದುಕೊಂಡು ಬರೆದಿರುವ ಲೇಖನಗಳು, ಆ ಜನಾಂಗದ ವಿಶಿಷ್ಟತೆಯನ್ನು ದಾಖಲಿಸುವ ಪ್ರಯತ್ನವಾಗಿಯೂ ಇವೆ.

ಲೇಖಕರು ಈಗಾಗಲೇ ಕೆಲವು ಪುಸ್ತಕಗಳನ್ನು ರಚನೆ ಮಾಡಿದ್ದು, ತಮ್ಮ ಸಮಾಜದ ಆಚರಣೆಗಳನ್ನು ಕುರಿತು ಬರೆಯುವ ಪ್ರಯತ್ನವಾಗಿವುದರಿಂದ ವಿಷಯ ಸಂಗ್ರಹಣೆಯಲ್ಲಿ ಯಾವುದೇ ಲೋಪವಾಗಲಿ, ಅತಿಶಯವಾದ ಹೊಗಳಿಕೆ ಇಲ್ಲದೆ ಸಹಜತೆ ಈ ಪುಸ್ತಕದಲ್ಲಿದೆ. ಲಂಬಾಣಿಗಳ ಪರಿಚಯ, ಇತಿಹಾಸ, ಗೋತ್ರಗಳು, ಆಚರಣೆ, ಹಬ್ಬ ಹರಿದಿನಗಳು ಆ ಜನಾಂಗದ ಗುರುಗಳು, ಭಾಷೆ, ಕಥೆ, ಕವನ, ವ್ಯಕ್ತಿ ಚಿತ್ರಣವನ್ನು ಪರಿಚಯಿಸುತ್ತಾ ಮಾಹಿತಿ ನೀಡಿದವರ ದಾಖಲೆಯನ್ನೂ ಮಾಡಿದ್ದಾರೆ. ಅವರು ಮುಖ್ಯ ವಾಹಿನಿಯಲ್ಲಿ ಗುರುತಿಸಿಕೊಳ್ಳುವ ಪ್ರಯತ್ನದಲ್ಲಿ ಹಲವು ಸಂಘ–ಸಂಸ್ಥೆಗಳ ಮೂಲಕ ಕಾರ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವುದು ಹಾಗೂ ಅವರು ಪ್ರಗತಿ ಹಾದಿಯಲ್ಲಿರುವುದನ್ನು ಸೂಚಿಸುತ್ತದೆ.

ಲಂಬಾಣಿಗಳೆಂದರೆ ತಕ್ಷಣ ನೆನಪಿಗೆ ಬರುವುದು ಹೆಣ್ಣು ಮಕ್ಕಳು ಧರಿಸುವ ಗಾಢ ಕೆಂಪು ಬಣ್ಣದ ಉಡುಗೆ, ಅದಕ್ಕೆ ಮಾಡಿದ ಗಾಜಿನ ಕಸೂತಿ, ವಿಶಿಷ್ಟ ರೀತಿಯ ಅಭರಣಗಳು ಇವೆಲ್ಲ ಅವರದೇ ಆದ ಸ್ವಂತಿಕೆಯನ್ನು ಇಂದಿಗೂ ಉಳಿಸಿಕೊಂಡು ಬಂದಿವೆ. ಅದೇ ರೀತಿ ಅವರು ಆಚರಿಸುವ ಹಬ್ಬಗಳು ವಿಶಿಷ್ಟವಾದವು. ಲೇಖಕರು ತಮ್ಮ ಜನಾಂಗದವರ ಬಗ್ಗೆ ತಿಳಿಸಿಕೊಡುವ ಪ್ರಯತ್ನಮಾಡಿ ಸಫಲರಾಗಿದ್ದಾರೆ. ಫೋಟೋ ಸಹಿತವಾದ ದೃಶ್ಯಗಳು ಅವರ ಮಾಹಿತಿಗೆ ಆಕರ್ಷಕತೆ ಮತ್ತು ಸ್ಪಷ್ಟತೆಯನ್ನು ಕೊಟ್ಟು ಉತ್ತಮ ಸಂಗ್ರಹ ಪುಸ್ತಕವಾಗಿ ಹೊರಬಂದಿದೆ.

ಸುಶೀಲಾ ಸದಾಶಿವಯ್ಯ

೨೮. ಜಾನಪದದ ಹೊಸ ಕ್ಷೇತ್ರಗಳ ಅಧ್ಯಯನ

ಜಾನಪದ ವಾಡೆ, ನಾಡೋಜ ಪ್ರೊ. ಹಂಪ ನಾಗರಾಜಯ್ಯ, ಪ್ರ. ಅರ್ಕಾವತಿ ಬಡಾವಣೆ, ಬೆಂಗಳೂರು–೪೦, ೨೦೧೨, ಪುಟ–೬+೧೩೮, ಬೆಲೆ ರೂ. ೭೨/-

ನಮ್ಮ ಹಿರಿಯ ವಿದ್ವಾಂಸರಲ್ಲೊಬ್ಬರಾದ ಡಾ.ಹಂಪನಾ ಅವರು ಜಾನಪದದ ಬಗ್ಗೆ ಅಧ್ಯಯನ ನಡೆಸಿ ಈ ಹಿಂದೆ ಪ್ರಕಟಿಸಿದ್ದ ಬಿಡಿಬಿಡಿಯಾದ ಪುಟ್ಟ ಪುಸ್ತಕಗಳ ಒಟ್ಟು ಸಂಪುಟವಿದು. ಇದರಲ್ಲಿ 'ಜಾತ್ರೆಗಳು', 'ಆಕಾಶ ಜಾನಪದ' ಹಾಗೂ 'ವಡ್ಡಾರಾಧನೆ ಮತ್ತು ಜಾನಪದ' ಎಂಬ ವಿವರ ಪೂರ್ಣ ಬರಹಗಳೂ, ಬೇರೆ ಸಂದರ್ಭದಲ್ಲಿ ಅವರು ಬರೆದ ಎರಡು ಜಾನಪದ ಸಂಬಂಧಿ ಲೇಖನಗಳು ಸೇರಿ ಈ ಸಂಪುಟ ರೂಪುಗೊಂಡಿದೆ. ಜೊತೆಗೆ ಡಾ. ಜಿ.ಆರ್. ತಿಪ್ಪೇಸ್ವಾಮಿಯರು (ಈಗ ಮೈಸೂರು ವಿ.ವಿ.ಯ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರು) ಹಂಪನಾ ಅವರನ್ನು ಕುರಿತು ಬರೆದ ಲೇಖನವೂ ಇದೆ.

'ಕರ್ನಾಟಕದ ಜಾತ್ರೆಗಳು' ಕೃತಿ ಮೊದಲು ಪ್ರಕಟವಾಗಿದ್ದು ೧೯೮೫ರಲ್ಲಿ. 'ಆಕಾಶ ಜಾನಪದ' ಕೂಡ ಅದೇ ವರ್ಷ ಪ್ರಕಟವಾದದ್ದು. 'ವಡ್ಡಾರಾಧನೆ ಮತ್ತು ಜಾನಪದ' ಪ್ರಕಟವಾದದ್ದು ೧೯೯೭ರಲ್ಲಿ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆಯಾ ವಿಷಯಗಳನ್ನು ಕುರಿತು ಅವು ಮೊಟ್ಟಮೊದಲ ವಿಸ್ತೃತ ಬರಹಗಳಾಗಿದ್ದವು ಎನ್ನುವುದು.

ಇಲ್ಲಿನ ಮೂರು ಲೇಖನಗಳಲ್ಲಿ ಸಾಕಷ್ಟು ವಿಸ್ತಾರವಾದ ಮಾಹಿತಿಗಳಿವೆ. 'ಜಾತ್ರೆಗಳು' ಲೇಖನದಲ್ಲಿ ಜಾತ್ರೆಗಳ ಸ್ವರೂಪ, ವೈವಿಧ್ಯತೆ, ತೇರಿನ ಮಾದರಿ, ತೇರು ಎಳೆಯುವ ಆಚರಣೆ ಇವುಗಳನ್ನು ವಿವರಿಸುವ ಜೊತೆಗೆ ನಾಡಿನ ಹಲವೆಡೆಯ ಜಾತ್ರೆಗಳ ಬಗ್ಗೆ ಸಂಕ್ಷಿಪ್ತವಾದ ಟಿಪ್ಪಣಿಗಳಿವೆ. ಇಲ್ಲಿ ಕೋಲಾರ ಜಿಲ್ಲೆ ಮೇಲೂರಿನ ಜಾತ್ರೆಯಿಂದ ಹಿಡಿದು ಚಿತ್ರದುರ್ಗದ ನಾರಾಯಣಗೊಂಡನಹಳ್ಳಿಯ ಮುತ್ತಮ್ಮನ ಜಾತ್ರೆ, ಶಿವಮೊಗ್ಗ ಜಿಲ್ಲೆಯ ಉಕ್ಕಡಗಾತ್ರಿ ಜಾತ್ರೆಯವರೆಗೂ ಮಾಹಿತಿಗಳಿವೆ ಎಂದರೆ ಲೇಖಕರು ಅದೆಷ್ಟು ಕಾಲದಿಂದ ಮಾಹಿತಿ ಸಂಗ್ರಹಿಸಿದ್ದರು ಎಂಬುದು ಅರಿವಾಗುತ್ತದೆ. ಕೆಲವು ಜಾತ್ರೆ/ದೇವರುಗಳ ಬಗೆಗಿನ ಐತಿಹ್ಯ ಕೂಡ ಇಲ್ಲಿ ದಾಖಲಾಗಿದೆ.

ಜಾತ್ರೆಗಳನ್ನು ಕುರಿತು ಅನಂತರದಲ್ಲಿ ವಿಸ್ತಾರವಾದ ಅಧ್ಯಯನಗಳನ್ನು ಕೆಲವರು ನಡೆಸಿದ್ದಾರೆ. ಕನಿಷ್ಠ ಪಕ್ಷ ಎರಡು ಪಿಎಚ್.ಡಿ. ನಿಬಂಧಗಳೂ ಕೂಡ ಬಂದಿವೆ. ಇಷ್ಟಿದ್ದರೂ ಹಂಪನಾ ಅವರು ಇಲ್ಲಿನ ಈ ಲೇಖನ ಈಗಲೂ ಉಪಯುಕ್ತವಾಗಿಯೇ ಇದೆ.

'ಆಕಾಶ ಜಾನಪದ' ಲೇಖನವೂ ಮೂವತ್ತು ಪುಟಗಳಷ್ಟು ವಿಸ್ತಾರದ್ದು. ಇದರಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳು, ಮಳೆ, ಮಿಂಚು, ಗುಡುಗು, ಕಾಮನಬಿಲ್ಲು, ಇತರ ಗ್ರಹಗಳು–ಇಂಥವುಗಳಿಗೆ ಸಂಬಂಧಿಸಿದಂತೆ ವಿವಿಧ ದೇಶಗಳವರಲ್ಲಿ, ಜನಾಂಗದವರಲ್ಲಿ ಇದ್ದ ನಂಬಿಕೆ, ಆಚರಣೆಗಳನ್ನು ಸ್ಥೂಲವಾಗಿ ನಿರೂಪಿಸಿದ್ದಾರೆ. ಆಕಾಶಕ್ಕೆ ಸಂಬಂಧಿಸಿದ ವಿದ್ಯಮಾನಗಳನ್ನು ಕುರಿತ ಜಾನಪದ ದೃಷ್ಟಿಕೋನದಲ್ಲಿನ ವೈವಿಧ್ಯತೆ ಇಲ್ಲಿ ಒಂದೇ ಅವಲೋಕನಕ್ಕೆ ಗೋಚರವಾಗುವಂತಿದೆ. ಆಧಾರ ಗ್ರಂಥಗಳ ಮಾಹಿತಿ ಇಲ್ಲ ಎಂಬೊಂದು ಕೊರತೆಯನ್ನು ಬಿಟ್ಟರೆ ಇದು ಮಾಹಿತಿಪೂರ್ಣವಾದ ಉಪಯುಕ್ತ ಲೇಖನ.

ಇಲ್ಲಿನ ಮೂರನೆಯ ಲೇಖನವು 'ವಡ್ಡಾರಾಧನೆ' ಗ್ರಂಥದಲ್ಲಿ ಕಾಣಿಸುವ ಜಾನಪದ ಅಂಶಗಳನ್ನು ಸಂಗ್ರಹವಾಗಿ ನಿರೂಪಿಸುತ್ತದೆ. ಅಲ್ಲಿನ ಕತೆಗಳಲ್ಲಿ ದಾಖಲಾಗಿರುವ ಆಗಿನ ಕಾಲದ ಜೀವನ ಪದ್ಧತಿಗಳು, ಸಂಪ್ರದಾಯಗಳು, ಭಾಷಾರೂಢಿಗ್ಗಳು, ಆಶಯಗಳು, ಕತೆಗಳ ಜಾನಪದ ಸ್ವರೂಪ– ಇವನ್ನೆಲ್ಲ ಕುರಿತ ನಿರೂಪಣೆ ಇಲ್ಲಿದೆ(ಇತ್ತೀಚೆಗೆ ವಡ್ಡಾರಾಧನೆಯ ಜಾನಪದೀಯ ಅಧ್ಯಯನವನ್ನು ಮಾಡಿರುವ ಪಿಎಚ್.ಡಿ. ನಿಬಂಧವೇ ಬೇರೊಬ್ಬ ಯುವ ಲೇಖಕರಿಂದ ಹೊರಬಂದಿದೆ.). ಇದೂ ಸಹ ಒಂದು ಉಪಯುಕ್ತ ಲೇಖನ.

ಡಾ. ಹಂಪನಾ ಅವರ ಈ 'ಜಾನಪದ ವಾಡೆ' ಅನೇಕ ಉಪಯುಕ್ತ ಮಾಹಿತಿ, ಒಳನೋಟಗಳನ್ನು ಒದಗಿಸುವ ಒಂದು ಉಪಯುಕ್ತ ಕೃತಿಯಾಗಿದೆ.

ಎಸ್.ಪಿ. ಪದ್ಮಪ್ರಸಾದ್

೨೯. ಮುಕ್ತ ಸಂಸ್ಕೃತಿ ಮತ್ತು ಹಂಪಿ ಪರಿಸರ

ಮುಕ್ತ ಸಂಸ್ಕೃತಿ ಮತ್ತು ಹಂಪಿ ಪರಿಸರ, ಡಾ. ಹೆಬ್ಬಾಲೆ ಕೆ. ನಾಗೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪುಟ–೨೨+೧೩೬, ಬೆಲೆ ರೂ. ೮೦/-

ಹಂಪಿ ಒಂದು ಸಾಂಸ್ಕೃತಿಕ ನಗರಿ. ಒಂದು ಕಾಲದಲ್ಲಿ ತುಂಬ ವೈಭವಯುತವಾಗಿದ್ದ ನಗರ. ದೇಶ ವಿದೇಶದವರನ್ನು ತನ್ನತ್ತ ಆಕರ್ಷಿಸಿ ಪ್ರಶಂಸೆಗೆ ಪಾತ್ರವಾದ ನಗರ. ಅನೇಕ ಕಾಲದ ಹೊಡೆತಗಳಿಗೆ ಸಿಕ್ಕಿ ಹಂಪೆ ಹಾಳು ಕೊಂಪೆಯಾಯಿತು. ಪ್ರವಾಸೋದ್ಯಮ ಬೆಳೆದ ಮೇಲೆ ಹಂಪೆಯನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲಾಗಿದೆ.

ಡಾ. ಹೆಬ್ಬಾಲೆ ಕೆ. ನಾಗೇಶರವರ "ಮುಕ್ತ ಸಂಸ್ಕೃತಿ ಮತ್ತು ಹಂಪಿ ಪರಿಸರ" ಎಂಬ ಕೃತಿಯು ಹಂಪಿಯ ಸಾಂಸ್ಕೃತಿಕ ಅಧ್ಯಯನವಾಗಿದೆ. ಹಂಪಿ ವಿಶ್ವವಿದ್ಯಾಲಯದ ಪ್ರಸಾರಾಂಗವು ಇಂತಹ ನೂರಾರು ಉಪಯುಕ್ತ ಪುಸ್ತಕಗಳನ್ನು ಕಡಿಮೆ ಬೆಲೆಯಲ್ಲಿ ಎಲ್ಲರಿಗೂ ತಲುಪುವಂತೆ ಮಾಡುತ್ತಿರುವುದು ಒಂದು ಹೆಮ್ಮೆಯ ವಿಷಯವಾಗಿದೆ.

ಲೇಖಕರು ಈ ಕೃತಿಯಲ್ಲಿ ಆರು ಭಾಗಗಳನ್ನಾಗಿ ಮಾಡಿಕೊಂಡು ವಿವರಿಸಿದ್ದಾರೆ;–

೧. ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಮಾಲೋಕನ
೨. ಹಬ್ಬಗಳ ಉಗಮ ಮತ್ತು ಸ್ವರೂಪ
೩. ಜಾತ್ರೆಯ ವಿಕಾಸದ ನೆಲೆ
೪. ಜನಪದರ ಆಚರಣೆಗಳು
೫. ಸಮಕಾಲೀನ ವೃತ್ತಿಗಳ ಪಾರಂಪರಿಕ ಜ್ಞಾನ
೬. ಸಾಮಾಜಿಕ ಸಂಸ್ಕೃತಿಗಳ ಸ್ಥಿತ್ಯಂತರಗಳು

ಸಾಮಾಜಿಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಅವಲೋಕನ ಎಂಬ ಭಾಗದಲ್ಲಿ ಸಾಮಾಜಿಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ವಿವರವಾಗಿ ಚರ್ಚಿಸಿದ್ದಾರೆ. ಸಾಮಾಜಿಕವಾಗಿ ಜಾತಿ ವ್ಯವಸ್ಥೆಯನ್ನು ವಿವರಿಸುತ್ತಾರೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ಪ್ರಧಾನ ವರ್ಗವಾಗಿತ್ತು. ಬ್ರಾಹ್ಮಣರಿಗೆ ಹೆಚ್ಚು ಮನ್ನಣೆ ಹಾಕಲಾಗುತ್ತಿತ್ತು. ಕ್ಷತ್ರಿಯರು ರಾಜಕೀಯದಲ್ಲಿ ಪ್ರಾಬಲ್ಯ ಪಡೆದರೆ, ವೈಶ್ಯರು ವ್ಯಾಪಾರದಲ್ಲಿ ಹೆಚ್ಚುಗಾರಿಕೆಯನ್ನು ಪಡೆದಿದ್ದರು. ಉಳಿದಂತೆ ಒಕ್ಕಲಿಗರು, ಗಾಣಿಗರು, ಆಚಾರಿಗಳು, ಕುಂಬಾರರು, ದರ್ಜಿಗಳು, ಕ್ಷೌರಿಕರು, ನೇಕಾರರು ಉಳಿದ ಕಸುಬುಗಳಲ್ಲಿ ನಿರತರಾಗಿದ್ದುದನ್ನು ವಿವರಿಸಿದ್ದಾರೆ.

ಇನ್ನು ಧಾರ್ಮಿಕ ವಿಷಯಕ್ಕೆ ಬಂದರೆ ಬೌದ್ಧರು, ಜೈನರು, ವೈಷ್ಣವರು, ಮುಸ್ಲಿಂ ಮುಂತಾದ ಧರ್ಮದವರು ಇದ್ದರೆಂದು ವಿವರಿಸಿದ್ದಾರೆ. ದೇವದಾಸಿ ಪದ್ಧತಿ, ಬಸವಿ ಬಿಡುವ ಪದ್ಧತಿ ಆಚರಣೆಯಲ್ಲಿದ್ದವು. ಮೇಲ್ವರ್ಗದಲ್ಲಿ ಬಾಲ್ಯವಿವಾಹ ಪದ್ಧತಿ ಇತ್ತು. ಗೌಡ ಗ್ರಾಮದ ಮುಖ್ಯಸ್ಥನಾಗಿದ್ದ, ಶಾನುಭೋಗ ಗ್ರಾಮದ ಲೆಕ್ಕಿಗನಾಗಿರುತ್ತಿದ್ದ ಈ ರೀತಿ ಅನೇಕ ವಿಚಾರಗಳನ್ನು ವಿವರವಾಗಿ ಮಂಡಿಸಿದ್ದಾರೆ.

ಹಬ್ಬಗಳ ಉಗಮ ಮತ್ತು ಸ್ವರೂಪ ಭಾಗದಲ್ಲಿ ಹಬ್ಬಗಳ ಬಗ್ಗೆ ವಿಸ್ತೃತ ಮಾಹಿತಿ ನೀಡಿದರೆ, ಹಬ್ಬಗಳು ಜನಪದರ ಅವಿಭಾಜ್ಯ ಅಂಗಗಳಿದ್ದಂತೆ ಕಾಲಕಾಲಕ್ಕೆ ತಮ್ಮ ಅನುಕೂಲಕ್ಕೆ ತಕ್ಕಂತೆ ಹಬ್ಬಗಳನ್ನು ಆಚರಿಸುತ್ತಾರೆ. ಹಬ್ಬಗಳು ಸಂಸ್ಕೃತಿಯ ಸಂಕೇತಗಳು ಮತ್ತು ಅವರ ನಂಬಿಕೆಗಳು ಹಂಪಿಯಲ್ಲಿ ಆಚರಣೆಯಲ್ಲಿದ್ದ ಹಬ್ಬಗಳ ಬಗ್ಗೆ ಮಾಹಿತಿಗಳನ್ನು ನೀಡಿದ್ದಾರೆ. ಹಬ್ಬಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ;–

೧. ಪ್ರಕೃತಿಗೆ ಸಂಬಂಧಿಸಿದ ಹಬ್ಬಗಳು–ಸಂಕ್ರಾಂತಿ, ಯುಗಾದಿ.
೨. ದೈವಗಳಿಗೆ ಸಂಬಂಧಿಸಿದ ಹಬ್ಬಗಳು–ಗೌರಿ–ಗಣೇಶ, ಜೋಕುಮಾರ, ಶಿವರಾತ್ರಿ, ಹುಣ್ಣಿಮೆ.
೩. ವ್ಯಕ್ತಿಗಳಿಗೆ ಸಂಬಂಧಿಸಿದ ಹಬ್ಬಗಳು–ವಿಜಯ ದಶಮಿ, ಬಲಿಪಾಡ್ಯಮಿ, ಕ್ರಿಸ್‌ಮಸ್, ಶ್ರೀ ರಾಮನವಮಿ.
೪. ಪ್ರಾಣಿಗಳಿಗೆ ಸಂಬಂಧಿಸಿದ ಹಬ್ಬಗಳು–ಮಣ್ಣೆತ್ತಿನ ಅಮವಾಸ್ಯೆ, ನಾಗರ ಪಂಚಮಿ.

ಈ ಹಬ್ಬಗಳ ಹುಟ್ಟು ಪ್ರಾಮುಖ್ಯತೆಗಳನ್ನು ವಿವರಿಸುವುದರೊಂದಿಗೆ ಜನಪದರು ಅನೇಕ ಆಚರಣೆಗಳನ್ನು ಉತ್ಸವಗಳನ್ನು ಮಾಡುವುದನ್ನು ವಿವರಿಸಿದ್ದಾರೆ. ಜಾತ್ರೆಯ ವಿಕಾಸದ ನೆಲೆಯ ಭಾಗದಲ್ಲಿ ಅನೇಕ ಜಾತ್ರೆ ಉತ್ಸವಗಳ ಬಗ್ಗೆ ಪ್ರೋತ್ಸಾಹಕರಾಗಿದ್ದರು. ಅವರ ದಾನ, ಧರ್ಮ ಮತ್ತು ಪಾಲ್ಗೊಳ್ಳುವಿಕೆಯಿಂದ ಜಾತ್ರೆಗೆ ಮತ್ತಷ್ಟು ಮೆರುಗು ಬರುತ್ತಿತ್ತು. ಜಾತ್ರೆಗಳಲ್ಲಿ ಹಂಪಿ ವಿರೂಪಾಕ್ಷನ ಜಾತ್ರೆ, ವೀರಭದ್ರೇಶ್ವರ ಜಾತ್ರೆ, ಆಂಜನೇಯ ಜಾತ್ರೆಗಳು ಮುಖ್ಯವಾಗಿದ್ದವು. ಸ್ತ್ರೀ ಪ್ರಧಾನ ಜಾತ್ರೆಗಳಲ್ಲಿ ನಿಜಲಿಂಗಮ್ಮನ ಜಾತ್ರೆ, ನರೆಗಲ್ಲಮ್ಮ ಜಾತ್ರೆ ಮುಖ್ಯವಾಗಿವೆ. ಉತ್ಸವಗಳಂತೂ ಅನೇಕ ವೈಭವಗಳಿಂದ ಕೂಡಿರುತ್ತಿದ್ದವು. ಲಕ್ಷ್ಮಿ ಉತ್ಸವ, ಹನುಮಂತನ ಉತ್ಸವ, ವಡ್ಡಮ್ಮ ಉತ್ಸವ ಮುಂತಾದವು ಮುಖ್ಯವಾಗಿವೆ.

ದುಗ್ಗೇನಹಳ್ಳಿ ಸಿದ್ದೇಶ

೩೦. ಮಹತ್ವದ ಸಂಗ್ರಹ ರೂಪ

ಕರಾವಳಿ ಜಿಲ್ಲೆಗಳ ಜೈನ ಪರಂಪರೆ, ಎಲ್.ಡಿ. ಬಲ್ಲಾಳ್ ಬಿ.ಎ.,ಬಿ.ಎಲ್., ಹೇಮಾಂಶು ಪ್ರಕಾಶನ, ಮಂಗಳೂರು, ೨೦೧೨, ಪುಟ–೧೦+೧೨೬, ಬೆಲೆ ರೂ. ೧೨೫/-

ಕನ್ನಡ ನಾಡಿಗೆ ಜೈನಧರ್ಮದ ಕೊಡುಗೆ ಮಹತ್ವವಾದದ್ದು. ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗ ಕ್ರಮದಲ್ಲಿ ಪ್ರಾರಂಭ ಕಾಲವನ್ನು ಜೈನ ಧರ್ಮದ ಯುಗವೆಂದೇ ಗುರುತಿಸಿದೆ. ಮತ ಪ್ರಚಾರವೇ ಪ್ರಧಾನವಾದರೂ ಧರ್ಮ, ಸಾಹಿತ್ಯ, ಇತಿಹಾಸ, ಸಂಸ್ಕೃತಿ, ನಾಡು-ನುಡಿಗೆ ಜೈನ ಧರ್ಮದ ಕೊಡುಗೆ ಅಪೂರ್ವವಾದುದಾಗಿದೆ.

"ಕರಾವಳಿ ಜಿಲ್ಲೆಗಳ ಜೈನ ಪರಂಪರೆ" ಎಲ್. ಡಿ. ಬಲ್ಲಾಳ್‌ರವರು ಸಂಪಾದಿಸಿರುವ ಕೃತಿ. ವೃತ್ತಿಯಲ್ಲಿ ನ್ಯಾಯವಾದಿಗಳಾಗಿ ತಮ್ಮ ಧರ್ಮದ ಇತಿಹಾಸ, ಪರಂಪರೆ, ಸಂಸ್ಕೃತಿಯ ಮೂಲ ಬೇರುಗಳನ್ನು ಇಂದಿನ ಯುವ ಪೀಳಿಗೆಗೆ ತಲುಪಿಸುವ ಸಹಜ ಆಸಕ್ತಿಯಿಂದ ಸಂಗ್ರಹಿಸಿ ಈ ಪುಸ್ತಕದ ಮೂಲಕ ಕಟ್ಟಿಕೊಟ್ಟಿರುವುದು ಮಹತ್ವದ ಕಾರ್ಯವಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ ತುಳು ಸಂಸ್ಕೃತಿ ಪ್ರಾಚೀನವಾದದ್ದು. ಅಷ್ಟೇ ವೈಶಿಷ್ಟ್ಯ ಪೂರ್ಣವಾದದ್ದು. ಭಾಷೆ, ಕಲೆ, ಸಾಹಿತ್ಯ, ಅಡುಗೆ ಎಲ್ಲವೂ ತನ್ನದೇ ಆದ ಪ್ರತ್ಯೇಕತೆಯನ್ನು ಹೊಂದಿ, ತನ್ನ ಹಿರಿಮೆಯನ್ನು ತೋರಿಸುವಂತಹ ಮಹತ್ವವನ್ನು ಇಂದಿಗೂ ಉಳಿಸಿಕೊಂಡು ಬಂದಿದೆ.

ಕರ್ನಾಟಕದಲ್ಲಿ ಜೈನ ಪರಂಪರೆ ಕ್ರಿಪೂ. ೩ನೆಯ ಶತಮಾನದಲ್ಲೇ ಅಸ್ತಿತ್ವ ಇರುವುದನ್ನು ಗುರ್ತಿಸುತ್ತಾರೆ. ನಂತರದಲ್ಲಿ ಬಂದ ಅರಸು ಮನೆತನಗಳು ಹೆಚ್ಚು ಪ್ರಾಬಲ್ಯವನ್ನು ಹೊಂದಿ ರಾಜ್ಯಭಾರ ಮಾಡಿ ಸಾಹಿತ್ಯ, ಸಂಸ್ಕೃತಿ, ನುಡಿಗೆ ಅಪಾರ ಕೊಡುಗೆ ನೀಡಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲೇ ಮೊಟ್ಟಮೊದಲಿಗರಾಗಿದ್ದಾರೆ. ರಾಜರ ಆಸ್ಥಾನದಲ್ಲಿದ್ದ ಪ್ರಮುಖ ಕವಿಗಳು ಮಹತ್ವದ ಕೃತಿಗಳನ್ನು ರಚಿಸುವುದಕ್ಕೆ ಕಾರಣ ರಾಗಿದ್ದಾರೆ. ಜೈನಧರ್ಮದ ಯುಗವನ್ನು ಸು. ಕ್ರಿ.ಶ. ೧೨ನೇ ಶತಮಾನದವರೆಗೆ ಗುರ್ತಿಸಿದ್ದಾರೆ. ನಂತರ ಬಂದ ಸಾಮಂತರು, ಪಾಳೆಯಗಾರರು, ಮಾಂಡಳೀಕರು ಕ್ರಿ.ಶ. ೧೩೩೬ ರಿಂದ ಕ್ರಿ.ಶ. ೧೬೧೨ರವರೆಗೆ ತುಳುನಾಡನ್ನು ಸುಮಾರು ಒಂದು ಸಾವಿರ ವರ್ಷಗಳ ಕಾಲ ಆಳಿದ್ದಾರೆ. ಹೊಯ್ಸಳರು ವಿಜಯನಗರದ ಅರಸರನ್ನು ಸಾರ್ವಭೌಮರೆಂದು ಪರಿಗಣಿಸಿ, ಅವರಿಗೆ ಕಪ್ಪಕಾಣಿಕೆಗಳನ್ನು ಕೊಟ್ಟು ತಮ್ಮ ವ್ಯಾಪ್ತಿಯಲ್ಲಿ ಸ್ವತಂತ್ರವಾಗಿ ರಾಜ್ಯಭಾರ ಮಾಡುತ್ತಿದ್ದರು. ಅವರ ರಾಜ್ಯಭಾರದ ಅವಧಿಯಲ್ಲಿ ಆದ ಮಹತ್ವದ ಕಾಲಘಟ್ಟಗಳನ್ನು ಚರಿತ್ರೆ, ನಾಡು-ನುಡಿ, ಸಂಸ್ಕೃತಿಗೆ ಕೊಟ್ಟ ಕಾಣಿಕೆಯನ್ನು ಗುರ್ತಿಸುವ ಅರಸು ಮನೆತನಗಳ, ಅರಮನೆಗಳ ಫೋಟೋ, ಭಗವಾನ್ ಬಾಹುಬಲಿಯ ಮೂರ್ತಿಗಳ ವಿವರಗಳೊಂದಿಗೆ ಛಾಯಾಚಿತ್ರ ನೀಡಿರುವುದು ಕೃತಿಯ ಸೌಂದರ್ಯವನ್ನು ಹೆಚ್ಚು ಮಾಡಿದೆ.

ತುಳುನಾಡಿನ ಸಂಸ್ಕೃತಿಯೆಂದರೆ ಜೈನ ಸಂಸ್ಕೃತಿಯ ಇತಿಹಾಸವೆಂದೇ ಅರ್ಥ. ತುಳುನಾಡಿಗೆ ಜೈನಧರ್ಮದ ಆಗಮನ ಕ್ರಿ.ಶ.೧೦ನೆಯ ಶತಮಾನದಲ್ಲಿ ಆಗಿ ನಂತರ ಸುಮಾರು ೨೫೦ ವರ್ಷಗಳ ಕಾಲ ಎಲ್ಲಾ ಧರ್ಮಿಯರ ಜೊತೆ ಪರಸ್ಪರ ಅನ್ಯೋನ್ಯತೆಯಿಂದ ಆಳ್ವಿಕೆ ನಡೆಸಿದ್ದರು. ವೇಣೂರಿನ ಅಜಿಲರು, ಬಂಗಾಡಿಯ ಬಂಗರು, ಪುತ್ತಿಗೆ

ಈ ಕೃತಿಯು ೨೦೧೨ರಲ್ಲಿ ಮೊದಲ ಮುದ್ರಣವನ್ನು ಕಂಡಿದ್ದು, ಲೇಖಕರು ಒಬ್ಬ ಸ್ತ್ರೀಯಾಗಿ, ಮಹಿಳಾ ಯಕ್ಷಗ್ಣಾನ ಕಲಾವಿದೆಯರ ನೋವು, ನಲಿವು, ಸಮಸ್ಯೆಗಳನ್ನು ಬಹಳ ಹತ್ತಿರದಿಂದ ಬಲ್ಲವರಾಗಿದ್ದು, ಆ ಎಲ್ಲಾ ಅಂಶಗಳನ್ನು, ಅನುಭವಗಳನ್ನು ಕೃತಿಯೊಳಗೆ ದಾಖಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮಹಿಳಾ ಯಕ್ಷಗಾನದ ಇತಿಹಾಸವನ್ನು ಬಹಳ ಸಮರ್ಪಕವಾಗಿ ವಿಶ್ಲೇಷಿಸುವ ಈ ಕೃತಿಯು ಮಹಿಳಾ ಯಕ್ಷಗಾನದ ಸುಮಾರು ನೂರು ವರ್ಷಗಳ ಇತಿಹಾಸದಲ್ಲಿ ಇಂದು ಮರೆಯಾಗಿರುವ ಅನೇಕ ಹೊಸ ಸಂಗತಿಗಳನ್ನು ಬೆಳಕಿಗೆ ತರುವ ಪ್ರಯತ್ನವನ್ನು ಮಾಡಿದ್ದಾರೆ.

ಯಕ್ಷಗಾನಕ್ಕೆ ಸಂಬಂಧಿದಂತೆ ಅದರಲ್ಲೂ ನಿರ್ದಿಷ್ಟವಾಗಿ ಮಹಿಳೆಯ ಕೊಡುಗೆ, ಯಕ್ಷಗಾನ ರಂಗ ಪ್ರಪಂಚದೊಳಗಿನ ಮಹಿಳಾ ಜಗತ್ತು ಮತ್ತು ಯಕ್ಷಗಾನ ಮಹಿಳಾ ಕಲಾವಿದರ ಇತಿಹಾಸ ಕಥನವನ್ನು ಈ ಸಂಶೋಧನಾ ಕೃತಿಯು ನಿರೂಪಿಸುತ್ತದೆ.

೧೦೫ ಜನ ಸ್ತ್ರೀ ವೇಷಧಾರಿಗಳ ಪಟ್ಟಿಯನ್ನು ಅವರ ಹೆಸರು, ಹುಟ್ಟಿದ ವರ್ಷ, ರಂಗ ಪ್ರವೇಶ ಮಾಡಿದ ವರ್ಷ, ಮೇಳ, ವೇಷಗಳ ಸಹಿತವಾಗಿ ಅವರ ಸಂಪೂರ್ಣ ವಿವರಗಳನ್ನು ಕೃತಿಯು ೧೫೨ನೇ ಪುಟದಿಂದ ೧೫೭ ಪುಟಗಳವರೆಗೆ ವಿವರವಾಗಿ ದಾಖಲಿಸಿದ್ದಾರೆ. ಸ್ತ್ರೀ ವೇಷಗಳ ವೈವಿಧ್ಯವನ್ನು, ವೇಷಭೂಷಣ, ಅಭಿನಯದ ಭಾವಗಳನ್ನು ಅದಕ್ಕೆ ಸಂಬಂಧಿಸಿದ ಹಲವು ಛಾಯಾಚಿತ್ರಗಳ ಮೂಲಕ ದಾಖಲಿಸಿದ್ದಾರೆ.

ಲೇಖಕರೇ ಹೇಳಿಕೊಳ್ಳುವಂತೆ 'ಯಕ್ಷ ಸ್ತ್ರೀ' ಎಂಬ ಈ ಸಂಶೋಧನಾ ಮಹಾಪ್ರಬಂಧದಲ್ಲಿ 'ಸ್ತ್ರೀ' ಎಂಬ ಪದವನ್ನು ಎರಡು ಆಯಾಮಗಳಲ್ಲಿ ಗ್ರಹಿಸಲಾಗಿದೆ. ಪುರುಷ ಪ್ರಧಾನವೆನಿಸಿದ ಯಕ್ಷಗಾನದಲ್ಲಿ ಪುರುಷರು ಸ್ತ್ರೀ ಪಾತ್ರವನ್ನು ಧರಿಸಿ, ರಂಗದಲ್ಲಿ ಅದನ್ನು ನಿರ್ವಹಿಸುವ ಬಗೆ ಒಂದು ಆಯಾಮವಾದರೆ, ಮಹಿಳೆಯರೇ ಒಂದು ಪ್ರಸಂಗದ ಎಲ್ಲಾ ಪಾತ್ರಗಳನ್ನು ಧರಿಸಿ ರಂಗದಲ್ಲಿ ನಿರ್ವಹಿಸುವ ಬಗೆ ಇನ್ನೊಂದು ಆಯಾಮವಾಗಿದೆ. ಎಂದರೆ ಇದು ಯಕ್ಷಗಾನದಲ್ಲಿ ಪುರುಷರು ಧರಿಸುವ ಸ್ತ್ರೀ ಪಾತ್ರಗಳೂ ಸ್ತ್ರೀಯರು ಧರಿಸುವ ಎಲ್ಲಾ ಪಾತ್ರಗಳನ್ನು ಒಳಗೊಂಡಿರುವುದಾಗಿದೆ ಎಂದಿದ್ದಾರೆ.

ಡಾ. ಎನ್. ನಾಗವೇಣಿಯವರ ಸಂಶೋಧನಾ ಮಹಾಪ್ರಬಂಧವಾದ ಈ ಕೃತಿಯು ಒಟ್ಟು ಒಂಬತ್ತು ಅಧ್ಯಾಯಗಳು ಮತ್ತು ಅನುಬಂಧದ ಭಾಗಗಳನ್ನು ಒಳಗೊಂಡಿದೆ. ಪ್ರತಿ ಅಧ್ಯಾಯವು ಕೆಲವು ಉಪ ಅಧ್ಯಾಯಗಳನ್ನು ಹೊಂದಿದ್ದು, ಮೊದಲ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ, ಉದ್ದೇಶ, ವ್ಯಾಪ್ತಿ ಹಾಗೂ ಈವರೆಗಿನ ಅಧ್ಯಯನದ ಸಮೀಕ್ಷೆಯನ್ನು ಮಾಡಲಾಗಿದೆ.

'ಪೂರ್ವರಂಗದ ಸ್ತ್ರೀ ವೇಷಗಳು' ಎಂಬ ಎರಡನೆಯ ಅಧ್ಯಾಯದಲ್ಲಿ ಐದು ಉಪ ಅಧ್ಯಾಯಗಳಿದ್ದು ಸುಮಾರು ಎಪ್ಪತ್ತೈದು–ಎಂಬತ್ತು ವರ್ಷಗಳ ಹಿಂದೆ

ಪೂರ್ವರಂಗದಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಸ್ತ್ರೀ ವೇಷಗಳು, ವೇಷಭೂಷಣ ಹಾಗೂ ರಂಗಕ್ರಿಯೆಗಳನ್ನು ಕುರಿತು ಚರ್ಚಿಸಲಾಗಿದೆ. ಇಂದು ಬಳಕೆಯಲ್ಲಿರುವ ಪೂರ್ವರಂಗದ ಸ್ತ್ರೀವೇಷಗಳ ವೇಷಭೂಷಣದ ವೈಶಿಷ್ಟ್ಯ, ರಂಗಕ್ರಿಯೆಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಿಸಿದ್ದಾರೆ.

"ಸ್ತ್ರೀ ವೇಷ" ಎಂಬ ೩ನೇ ಅಧ್ಯಾಯವು ಹತ್ತು ಉಪಅಧ್ಯಾಯಗಳನ್ನು ಒಳಗೊಂಡಿದ್ದು, ಯಕ್ಷಗಾನ ಪ್ರಸಂಗಗಳಲ್ಲಿ ಬರುವ ಸ್ತ್ರೀ ವೇಷ ರಚನೆಯನ್ನು ಕುರಿತ ಅಧ್ಯಯನವಾಗಿದ್ದು, ಸ್ತ್ರೀವೇಷ ಹಾಗೂ ಸ್ತ್ರೀ ಪಾತ್ರಗಳ ಒಟ್ಟಂದದ ಬದಲಾವಣೆಯಲ್ಲಿ ಹಲವಾರು ನಡೆಸಿದ ಪ್ರಯೋಗಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

'ಸ್ತ್ರೀ ವೇಷ ಮತ್ತು ವೇಷಧಾರಿ; ಚೌಕಿಯ ಒಳಗೆ ಮತ್ತು ಹೊರಗೆ' ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಮೂರು ಉಪ ಅಧ್ಯಾಯಗಳಿದ್ದು ಸ್ತ್ರೀ ವೇಷಗಳು ಚೌಕಿಯಲ್ಲಿ, ರಂಗದಲ್ಲಿ ಮತ್ತು ರಂಗದ ಹೊರಗಡೆ ಇರುವ ರೀತಿಯನ್ನು ಅಧ್ಯಯನಕ್ಕೆ ಒಳಪಡಿಸ ಲಾಗಿದೆ. ಸ್ತ್ರೀ ವೇಷವೊಂದು ಚೌಕಿಯಲ್ಲಿ ನಿರ್ಮಾಣವಾಗುವ ಸಂದರ್ಭ, ಪುರುಷ ಕಲಾವಿದರು ಸ್ತ್ರೀವೇಷ ಧರಿಸುವುದು ಮತ್ತು ಸ್ತ್ರೀ ಪಾತ್ರಧಾರಿಗಳಾಗುವಲ್ಲಿನ ಅವರ ಮನಸ್ಥಿತಿ ಹಾಗೂ ಪ್ರದರ್ಶನದಲ್ಲಿ ಸ್ತ್ರೀ ವೇಷದ ಸ್ಥಾನವನ್ನು ಈ ಭಾಗದಲ್ಲಿ ವಿಶ್ಲೇಷಿಸಿದ್ದಾರೆ.

'ಸ್ತ್ರೀ ಪಾತ್ರಗಳು; ಪ್ರಸಂಗದರ್ಶನ ಮತ್ತು ಪ್ರದರ್ಶನ' ಎಂಬ ಐದನೆಯ ಅಧ್ಯಾಯದಲ್ಲಿ ಹತ್ತು ಉಪಅಧ್ಯಾಯಗಳಿದ್ದು, ವಿವಿಧ ಸ್ತ್ರೀಪಾತ್ರಗಳ ಅಧ್ಯಯನ ನಡೆಸಲಾಗಿದೆ.

'ಹೆಣ್ಣು ಬಣ್ಣ; ಪ್ರಸಂಗದರ್ಶನ ಮತ್ತು ಪ್ರದರ್ಶನ' ಎಂಬ ಆರನೆಯ ಅಧ್ಯಾಯದಲ್ಲಿ ಆರು ಉಪ ಅಧ್ಯಾಯಗಳಿದ್ದು, ಹೆಣ್ಣು ಬಣ್ಣಗಳ ಕುರಿತು ಅಧ್ಯಯನ ನಡೆಸಲಾಗಿದೆ. ಪುರಾಣ ಪ್ರಸಂಗಗಳಲ್ಲಿ ಬರುವ ಹದಿನೈದಕ್ಕೂ ಹೆಚ್ಚು ಹೆಣ್ಣು ಬಣ್ಣಗಳ ರಂಗಕ್ರಿಯೆ, ಪ್ರಸಂಗ ಹಾಗೂ ರಂಗದಲ್ಲಿ ಅವುಗಳಿಗಿರುವ ಆದ್ಯತೆಗಳನ್ನು ಇಲ್ಲಿ ಚರ್ಚಿಸಿದ್ದಾರೆ.

"ಸ್ತ್ರೀಪಾತ್ರಧಾರಿಗಳ ಇತಿಹಾಸ ಮತ್ತು ಅವರ ಕೊಡುಗೆ" ಎಂಬ ಏಳನೆಯ ಅಧ್ಯಾಯದಲ್ಲಿ ಮೂರು ಉಪ ಅಧ್ಯಾಯಗಳಿದ್ದು, ೧೯೦೦ರಿಂದ ಈವರೆಗಿನ ಪ್ರಮುಖ ಸ್ತ್ರೀ ವೇಷಧಾರಿಗಳ ಇತಿಹಾಸವನ್ನು ಕಟ್ಟಿಕೊಟ್ಟಿದ್ದಾರೆ. ಲೇಖಕರು ಈ ಅವಧಿಯನ್ನು ೧೯೦೦ರಿಂದ ೧೯೩೦ ರವರೆಗೆ, ೧೯೩೦ರಿಂದ ೧೯೫೦ರವರೆಗೆ, ೧೯೫೦ರಿಂದ ೧೯೮೦ ರವರೆಗೆ ಹಾಗೂ ೧೯೮೦ರಿಂದ ಇತ್ತೀಚಿನವರೆಗೆ ಎಂದು ೪ ವಿಭಾಗಗಳಾಗಿ ಮಾಡಿ ಕೊಂಡಿದ್ದಾರೆ.

'ಮಹಿಳಾ ಯಕ್ಷಗಾನ' ಎಂಬ ೮ನೆಯ ಅಧ್ಯಾಯದಲ್ಲಿ ಮೂರು ಉಪ ಅಧ್ಯಾಯಗಳಿದ್ದು, ಕನ್ನಡ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ಮಹಿಳಾ ಯಕ್ಷಗಾನ ರಂಗಭೂಮಿ, ಮಹಿಳಾ ಯಕ್ಷಗಾನ ಪ್ರಸಂಗಕರ್ತರು, ಹಿಮ್ಮೇಳ ಕಲಾವಿದರು, ಮುಮ್ಮೇಳ

ಕಲಾವಿದರು, ಸಂಶೋಧಕರು ಮತ್ತು ಸಂಘಟಕರ ಕುರಿತು ಮಾಹಿತಿ ಕಲೆಹಾಕಿ ಅಧ್ಯಯನ ನಡೆಸಿದ್ದಾರೆ.

ಯಕ್ಷಗಾನವನ್ನು ಕುರಿತಂತೆ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳನ್ನು, ಹೊರಬಂದಿರುವ ಕೃತಿಗಳನ್ನು ಕುರಿತು ಚರ್ಚಿಸಿದ್ದಾರೆ. ಅಲ್ಲದೆ ಕೃತಿರಚನೆಗಾಗಿ ಅವರು ವಹಿಸಿರುವ ಕಾಳಜಿ, ಕ್ಷೇತ್ರಕಾರ್ಯ ಹಾಗೂ ಬಳಸಿಕೊಂಡಿರುವ ಸಾಮಗ್ರಿಗಳು, ಪರಾಮರ್ಶನ ಗ್ರಂಥಗಳು ವಿಪುಲವಾದವು ಹಾಗೂ ಅವರ ಅಪಾರವಾದ ಶ್ರಮವನ್ನು ಸೂಚಿಸುವಂತಹವುಗಳಾಗಿವೆ.

ಲಕ್ಷ್ಮೀಕಾಂತ ಗೌರೀಪುರ

೩೨. ಯಕ್ಷಗಾನದ ಚಿಂತನೆ

ಯಕ್ಷಸಿರಿ, ಪ್ರಸಂ. ಡಾ. ಕೆ. ಚಿನ್ನಪ್ಪಗೌಡ, **ಸಂ.** ಡಾ. ರಾಜಶ್ರೀ, ಸತೀಶ್ ಕೊಣಾಜೆ, ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ, ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ-೫೭೪೧೯೯, ೨೦೧೨, ಪುಟ-೧೨೦, ಬೆಲೆ ರೂ. ೬೦/-

ಮಂಗಳೂರು ವಿಶ್ವವಿದ್ಯಾನಿಲಯ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದಿಂದ ಪ್ರಕಟಿಸುತ್ತಿರುವ ಎರಡನೆಯ ಕೃತಿ 'ಯಕ್ಷಸಿರಿ'. ಪ್ರಸ್ತುತ ಕೃತಿಯಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಎಂಟು ಲೇಖನಗಳಿವೆ. ಯಕ್ಷಗಾನದ ನಡೆಯಿಂದ ಪ್ರಾರಂಭಿಸಿ ಯಕ್ಷಶಿಕ್ಷಣದವರೆಗೆ ಚರ್ಚೆಗೊಳ್ಳುವ ಈ ಲೇಖನಗಳು ಯಕ್ಷಗಾನದ ಭಿನ್ನ ಆಯಾಮಗಳನ್ನು ನಮಗೆ ಪರಿಚಯ ಮಾಡಿಕೊಡುತ್ತವೆ.

ಅಮೃತ ಸೋಮೇಶ್ವರ ಅವರು ಯಕ್ಷಗಾನದ ನಡೆಯ ಬಗ್ಗೆ ಚರ್ಚಿಸುತ್ತ 'ಕಲೆಯೊಂದು ಪರಂಪರೆಯ ಶ್ರೀಮಂತಿಕೆಯಲ್ಲಿ ವರ್ತಮಾನವನ್ನೂ ಒಳಗೊಳ್ಳುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಹಳೆಯ ಮತ್ತು ಹೊಸ ಮನೋವೃತ್ತಿಗಳು ಔಚಿತ್ಯ ಪ್ರಜ್ಞೆಯಿಂದಿರುವ/ಇರಬೇಕಾದ ಎಚ್ಚರವನ್ನು ಅನುಭವಿಸುತ್ತಲೇ ಪ್ರತಿಭಾವಂತ ಕಲಾವಿದ ಕಲೆಯೊಳಗೆ ತನ್ನದೊಂದು ಛಾಪನ್ನು ಕಾಣಿಸುವ' ಬಗ್ಗೆ ತಿಳಿಸಿದ್ದಾರೆ. ಕಲಾನಿರ್ಮಿತಿ ಸೃಜನಶೀಲತೆಯಿಂದ ಕೂಡಿದ್ದರೂ ಅದು ಸ್ವೇಚ್ಛಾ ವಿಹಾರವಾಗಬಾರದು; ಒಂದು ವೇಳೆ ಕಲಾವಿದನಲ್ಲಿ ಇಂತಹದೊಂದು ಅಹಂ ಮೊಳೆತು ಸ್ವೇಚ್ಛಾ ಎನ್ನುವುದು ಚಿಗುರೊಡೆಯತೊಡಗಿದರೆ ಕಲೆಗಿಂತ ಅಧಿಕ ಪ್ರಮಾಣದಲ್ಲಿ ಕಲಾವಿದನ ಅವನತಿಗೆ ಕಾರಣವಾಗುತ್ತದೆ. ಕಲೆ ಬದುಕಾಗಬೇಕು ನಿಜ. ಯಕ್ಷಗಾನ ಇಂದು ಪೌರಾಣಿಕ ಕಥಾನಕಗಳಿಗಷ್ಟೇ ಸೀಮಿತವಾಗದೆ ಜಾನಪದ, ಐತಿಹಾಸಿಕ, ಕಾಲ್ಪನಿಕ ಕಥಾನಕಗಳಿಗೆ

ವಿಸ್ತರಿಸಿದೆ. ಹಾಗೆ ಬದಲಾದ ರಂಗಸ್ಥಳದ ವಿನ್ಯಾಸ ಎಲ್ಲವೂ ಅದರ ನಡೆಯ ಸೂಚಕ. ಆದರೆ, ಯಕ್ಷಗಾನ ಸಾಂಕೇತಿಕತೆಯ ಪ್ರಜ್ಞೆ ಇಲ್ಲದೆ ವಾಸ್ತವಿಕ ನೆಲೆಯಲ್ಲಿ ತನ್ನ ಗಂಭೀರತೆಯನ್ನು ಸಡಿಲಗೊಳಿಸಿಕೊಳ್ಳುತ್ತಿರುವ ಬಗ್ಗೆ ಲೇಖಕರು ಆತಂಕಗೊಳ್ಳುತ್ತಾರೆ.

ಇಂತಹದ್ದೇ ಆತಂಕವನ್ನು ಇಂದಿನ ಜಾಹೀರಾತು(ಸೆವೆನಪ್ ಪಾನೀಯಕ್ಕೆ ಸಂಬಂಧಿಸಿದಂತೆ ಬೀದಿಬದಿಯಲ್ಲಿ ಯಕ್ಷಗಾನದ ವೇಷಧಾರಿ ಅದನ್ನು ಕುಡಿದು ಕುಣಿಯುವ ಹಾಗೆ ಹುಡುಗಿಯೊಬ್ಬಳನ್ನು ತನ್ನ ನಿಲುವು ಭಂಗಿಯ ತೊಡೆಯ ಮೇಲೆ ಮಲಗಿಸಿಕೊಳ್ಳುವಂತಹದ್ದು)ಗಳಲ್ಲಿ ಮೌಲ್ಯಯುತ ಕಲೆಯೊಂದನ್ನು ಅಪಮೌಲ್ಯ ಗೊಳಿಸುತ್ತಿರುವಲ್ಲಿ ಕಾಣಬಹುದು. ಈ ಸಂದರ್ಭದಲ್ಲಿ ಕಲೆ ಬದುಕಾಗದೆ ಹೊಟ್ಟೆಪಾಡಾ ಗುತ್ತದೆ. ಪ್ರೇಕ್ಷಕರಾದ ನಾವು ಜಾಣಕುರುಡರಂತೆ ವರ್ತಿಸುತ್ತಿದ್ದೇವೆ.

ಅಮೃತ ಸೋಮೇಶ್ವರರ "ಭೂತಭಾರಿ"ತನದ ಬಗೆಗಿನ ಆತಂಕಕ್ಕೆ ಕಾರಣಗಳೆಂಬಂತೆ ಪ್ರೊ. ಎಂ.ಎಲ್. ಸಾಮಗ ಮೌನದಲ್ಲಿ ಅರ್ಥೈಸಬೇಕಾದ ಪ್ರಸಂಗವನ್ನು ಅತೀ ಮಾತಿನಿಂದ ಕಿಕ್ಕಿರಿದ ಶಬ್ದಗಳಿಂದ ಅರ್ಥೈಸುವ ವ್ಯರ್ಥ ಪ್ರಯತ್ನ ಮಾಡಲಾಗುತ್ತಿದೆ. ಇದಕ್ಕೆ ಶ್ರೋತೃಗಳು ಮೌನವನ್ನು ಅರ್ಥೈಸಿಕೊಳ್ಳಲಾಗದ ಸ್ಥಿತಿ ಕಾರಣ ಎಂಬುದನ್ನು ಚರ್ಚಿಸಿದ್ದಾರೆ. ಸುಭದ್ರಾ ಕಲ್ಯಾಣ ಪ್ರಸಂಗವನ್ನು ಇಂದಿನ ಪ್ರೇಮ ವಿವಾಹದ ಸಾಧಕ ಬಾಧಕಗಳ ಹಿನ್ನೆಲೆಯಲ್ಲಿ ಚರ್ಚಿಸಿ ಅರ್ಥೈಸಿದ್ದಾರೆ.

ಅಂಬಾತನಯ ಮುದ್ರಾಡಿ ಅವರು 'ಯಕ್ಷಗಾನ ಅರ್ಥಗಾರಿಕೆಯಲ್ಲಿ ರಸ ಪ್ರತಿಪಾದನೆಯ' ಬಗ್ಗೆ ಚರ್ಚಿಸುತ್ತ ಯಕ್ಷಗಾನದ ಮಾತು ಪ್ರಾಸಂಗಿಕವಾಗಿದ್ದು, ಪ್ರಸ್ತುತದ ಸನ್ನಿವೇಶಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಕಲಾವಿದನೆಂದಿಗೂ ಪ್ರೇಕ್ಷಕರ ಮಟ್ಟಕ್ಕೆ ಇಳಿದು ಹೋಗಬಾರದು. ಕಲೆಯ ಎತ್ತರಕ್ಕೆ ಪ್ರೇಕ್ಷಕರನ್ನು ಎಳೆದು ತರಬೇಕು" ಎಂಬುದನ್ನು ಅರ್ಥವತ್ತಾಗಿ ಚರ್ಚಿಸಿದ್ದಾರೆ

ಡಾ. ನಾಗವೇಣಿ ಮಂಚಿ ಅವರು 'ಯಕ್ಷಗಾನ ಮತ್ತು ಮಹಿಳೆಯ' ಬಗ್ಗೆ ಚಿಂತಿಸುತ್ತ ಗಣಪತಿ ಭಟ್ ಅವರನ್ನು ಸ್ತ್ರೀ ವೇಷದಲ್ಲಿನ ಅಭಿನಯಕ್ಕೆ ಮೆಚ್ಚಿ ನೋಟಿನ ಮಾಲೆ ಹಾಕುವುದು ಒಂದು ಹಂತದ್ದಾಗಿದ್ದರೆ, ಅದೇ ಪಾತ್ರಕ್ಕೆ ಮತ್ತೊಬ್ಬರು ಚೂರಿಯಿಂದ ಇರಿಯುವುದನ್ನು ಓದಿದಾಗ ಅವರ ಆ ಅಭಿನಯದ ಕ್ರಿಯಾಶೀಲತೆ ಅರ್ಥವಾಗುತ್ತದೆ. ಮಹಿಳೆಯೊಬ್ಬಳು ಪುರುಷ ಪಾತ್ರಗಳನ್ನು ನಿರ್ವಹಿಸುವುದು ಸುಲಭ. ಆದರೆ ಗಂಡಸು ರಂಭೆ, ಊರ್ವಶಿ, ಮೇನಕೆಯವರಂತಹ ಅಪ್ಸರೆ ಪಾತ್ರಗಳ ಚಂಚಲತೆಯನ್ನು, ಸೀತೆ, ಚಂದ್ರಮತಿಯವರಂತಹ ಪಾತ್ರಗಳ ಸಾತ್ವಿಕತೆಯನ್ನು, ಕೈಕೆ, ಕುಂತಿ, ಚಿತ್ರಾಂಗದೆ, ಸುಭದ್ರೆಯವರಂತಹ ಗಂಭೀರ ಮತ್ತು ರಾಜಸಗುಣಗಳ ಅಭಿನಯವನ್ನು ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸಬೇಕಾಗುತ್ತದೆ. ಇದನ್ನು ಗಣಪತಿ ಭಟ್ ಅವರು ಸರಿದೂಗಿ ಸಿದ್ದಾರೆ. ಪೂರ್ವದಲ್ಲಿ ಪ್ರತಿಯೊಬ್ಬ ಪಾತ್ರಧಾರಿಯೂ ಕೋಡಂಗಿ ಕುಣಿತದ ಮೂಲಕವೇ ರಂಗಪ್ರವೇಶ ಮಾಡುತ್ತಿದ್ದರು. ಆದರೆ ಈಚೆಗೆ ಯಕ್ಷಗಾನ ನೃತ್ಯ ಕೇಂದ್ರಗಳ ಮೂಲಕ

ತರಬೇತಿ ಪಡೆದು ರಂಗಪ್ರವೇಶಿಸಲಾಗುತ್ತಿದೆ. ಇದರಿಂದ ಭಿನ್ನ ಅನುಭವಗಳಿಲ್ಲದೆ ಪೂರ್ವರಂಗದ ಹಲವು ಘೇಷಗಳು ಮರೆಯಾಗುತ್ತಿರುವುದನ್ನು ಲೇಖಕರು ಗುರುತಿಸಿದ್ದಾರೆ.

ಶೇಣಿಯವರ ಹಿನ್ನೆಲೆಯಲ್ಲಿ 'ಯಕ್ಷಗಾನ ಪಾತ್ರ ನಿರ್ಮಾಣದ' ಬಗ್ಗೆ ಉಜಿರೆ ಅಶೋಕ್ ಭಟ್ ಅವರು ಪ್ರಸ್ತಾಪಿಸುತ್ತ ಅನೇಕ ಪ್ರಸಂಗಗಳನ್ನು ಚರ್ಚೆಗೆ ಎತ್ತಿಕೊಳ್ಳುತ್ತಾರೆ. ಅದರಲ್ಲಿ ಹಿರಣ್ಯಕಶಿಪುವಾಗಿ ಪ್ರಹ್ಲಾದನಿಗೆ ವಿಷ ಕುಡಿಸುವ ಸಂದರ್ಭದ ಪ್ರಸಂಗದಲ್ಲಿ, ಭೀಷ್ಮವಿಜಯ, ಚೂಡಾಮಣಿ ಪ್ರಸಂಗಗಳ ಚರ್ಚೆಯ ಮೂಲಕ ಡಾ. ಶೇಣಿ ಗೋಪಾಲಕೃಷ್ಣ ಭಟ್ಟರ ಕಲಾವಂತಿಕೆಯನ್ನು ತಿಳಿಸಿಕೊಟ್ಟಿದ್ದಾರೆ.

ಯಕ್ಷಗಾನ ಪರಂಪರೆಯನ್ನು ಸಮಗ್ರವಾಗಿ ಅರ್ಥೈಸಿಕೊಳ್ಳುವುದರ ಮೂಲಕ ಮುಂದಿನ ತಲೆಮಾರಿಗೆ ವರ್ಗಾಯಿಸುವ ಸಲುವಾಗಿ ಡಾ. ಸುಂದರ ಕೇನಾಜೆಯವರು ಸಮಗ್ರತೆಯ ನೆಲೆಯಲ್ಲಿ ಯಕ್ಷ ಶಿಕ್ಷಣವನ್ನು ಪರಿಚಯಿಸಿದ್ದಾರೆ. ಆದರೆ ಆ ನಿಟ್ಟಿನಲ್ಲಿ ಫಲಕಾರಿಯಾಗಲು ಎಡತಾಕಬಹುದಾದ ತೊಡಕುಗಳೂ ಲೇಖಕರಿಂದ ಚರ್ಚೆಗೊಂಡಿವೆ.

ಹೀಗೆ 'ಯಕ್ಷಸಿರಿ' ಒಟ್ಟಾರೆ ಯಕ್ಷಗಾನದ ಪರಿಚಯ ಮಾಡಿಕೊಡುವಲ್ಲಿ ಯಶಸ್ಸಿನ ಅಡಿ ಇಟ್ಟಿದೆ.

ಸ್ವಾಮಿ. ನ. ಕೋಡಿಹಳ್ಳಿ

೩೩. ಶಿಲ್ಪಕಲೆಗಳಲ್ಲಿ ಜನಪದ ವೈವಿಧ್ಯತೆ

ಮಾಟದೊಳಗಣ ನೋಟ, ಡಾ. ಶಿವಾನಂದ ಎಚ್. ಬಂಟನೂರ, ಯಾಜಿ ಪ್ರಕಾಶನ, ಭೂಮಿ, ಎಂ.ಪಿ. ಪ್ರಕಾಶನಗರ, ಹೊಸಪೇಟೆ–೫೮೩೨೦೧, ೨೦೧೨, ಪುಟ–೮+೧೦೦, ಬೆಲೆ ರೂ. ೧೨೦/-

ಶಿಲ್ಪಕಲೆ ಕುರಿತ ಡಾ. ಶಿವಾನಂದ ಎಚ್. ಬಂಟನೂರ ಅವರ ಪುಸ್ತಕ 'ಮಾಟದೊಳಗಣ ನೋಟ'ವನ್ನು ನೋಡಿ, ಓದಿ ಕಲಾವಿದನ ಸೃಜನಶೀಲ ಚಿಂತನೆ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಬಂಟನೂರರು ನಿರ್ಮಿಸಿರುವ ಹಲವು ಶಿಲ್ಪಕಲೆಗಳನ್ನು ನಾನು ಮಯೂರ ಪತ್ರಿಕೆಯಲ್ಲಿ ನೋಡಿದ್ದೆ. ಅದರಲ್ಲಿ ನನ್ನ ವಿಶೇಷ ಗಮನಸೆಳೆದಿದ್ದ ಪ್ರಸ್ತುತ ಕೃತಿಯ ಮುಖಪುಟದಲ್ಲಿನ ಮರದಿಂದ ಕೆತ್ತಲ್ಪಟ್ಟ ಮನುಷ್ಯನನ್ನು ಸುತ್ತುವರೆದ ಸೊಳ್ಳೆಬತ್ತಿಯನ್ನು ಒಳಗೊಂಡ ಕಲಾಕೃತಿ. ಈ ಕಲಾಕೃತಿ ತಲೆಕೆಳಗೆ ಮಾಡಿ ಬಿದ್ದಿದ್ದು ಅದಕ್ಕೆ ಸುತ್ತಿಕೊಂಡಿರುವ ಚಕ್ರಾಕಾರದ ಸೊಳ್ಳೆ ಬತ್ತಿ. ಆ ಮನುಷ್ಯಾಕೃತಿಯನ್ನು ಹೇಗೆ ಬೇಕಾದರೂ ಹೊರಳಾಡಿಸಬಹುದು ಅಂದರೆ ಸೊಳ್ಳೆಗಳಿಂದ ತಪ್ಪಿಸಿಕೊಳ್ಳಲು ನಾವು ಬಳಸುವ ಸೊಳ್ಳೆ ಬತ್ತಿ ಮನುಷ್ಯನನ್ನು ಅವನತಿಯ ಹಂತಕ್ಕೆ ಕೊಂಡ್ಯೊಯಬಲ್ಲದು ಎಂಬುದನ್ನು ಸಂಕೇತಿಸುತ್ತದೆ.

ಹಾಗೇ ಕೃತಿಯಲ್ಲಿ ಮುಂದುವರಿದರೆ ಬಂಟನೂರರ ಬರಹ ಮತ್ತು ಅವರಿಂದ ರಚಿಸಿಲ್ಪಟ್ಟ ಶಿಲ್ಪಕೃತಿ ಹಾಗೂ ವಿ.ಟಿ. ನಾಯಿಂದ್ರಕರ್ ನಾಗನಗೌಡರ, ವಿಜಯರಾವ್, ನಾಗಪ್ಪ ಪ್ರಧಾನಿ ಅವರಿಂದ ರೂಪುಗೊಂಡ ಶಿಲ್ಪಗಳು ಓದು ಮತ್ತು ನೋಟಕ್ಕೆ ನಿಲುಕುತ್ತವೆ. ಮೊದಲಿಗೆ ಬಂಟನೂರ ಅವರ ಶಿಲ್ಪಕಲೆ ಕುರಿತ ಲೇಖನಗಳ ಬಗ್ಗೆ ಹೇಳುವುದಾದರೆ ಶಿಲ್ಪಕಲೆಯ ಬಗೆಗಿನ ಒಂಬತ್ತು ಲೇಖನಗಳಿವೆ. 'ಆರಾಧನೆಯಲ್ಲಿ ಲೋಹಶಿಲ್ಪಗಳು' ಲೇಖನದಲ್ಲಿ ಕೆತ್ತಿ ತೆಗೆಯುವುದು, ಮೆತ್ತಿ ರೂಪಿಸುವುದು, ಎರಕಹೊಯ್ಯುವುದು, ಹಲವು ವಸ್ತುಗಳನ್ನು ಜೋಡಿಸಿ, ಅಂಟಿಸಿ ರೂಪಿಸುವುದು ಎಂಬ ನಾಲ್ಕು ಬಗೆಯ ಶಿಲ್ಪಗಳ ರಚನೆಯ ಬಗ್ಗೆ ತಿಳಿಸಿದ್ದಾರೆ. ಶಿಲ್ಪಗಳ ಆರಾಧನೆಯ ಬಗ್ಗೆ ಚರ್ಚಿಸುತ್ತ 'ಮಣಿಗಳಮೂರ್ತಿ ಲೋಕಹಿತವನ್ನು, ಬಂಗಾರದ್ದು ಪುಷ್ಟಿಯನ್ನು, ಬೆಳ್ಳಿಯದು ಯಶಸ್ಸನ್ನು, ತಾಮ್ರದ್ದು ಸಂತಾನವನ್ನು, ಕಲ್ಲಿನದು ಹೆಚ್ಚಿನ ಭೂಮಿಯನ್ನು ಒದಗಿಸುತ್ತದೆ ಎಂಬ ನಂಬಿಕೆ ಜನರಲ್ಲಿದೆ' ಎಂದು ಹೇಳುತ್ತ ಮಣ್ಣಿನ ಮೂರ್ತಿಗಳ ಬಗ್ಗೆ ಇರುವ ನಂಬಿಕೆಗಳನ್ನು ಚರ್ಚಿಸಿಲ್ಲ. ಗಣಪತಿ, ಗೌರಿ, ಮಾರಮ್ಮ, ಮಳೆರಾಯ ಇವೇ ಮೊದಲಾದ ಆರಾಧನಾ ಶಿಲ್ಪಗಳು ಹಳ್ಳಿ ಜನರಲ್ಲಿ ಪೂಜಿಸಲ್ಪಡುವ ಮತ್ತು ಅವುಗಳ ಬಗೆಗೆ ವಿಶೇಷ ನಂಬಿಕೆ ಇರುವುದನ್ನು ನಾವು ಗುರುತಿಸಬಹುದಾಗಿದೆ. ವಿಶೇಷವಾಗಿ ಬರಗಾಲದ ಸಂದರ್ಭದಲ್ಲಿ ಪ್ರತಿಹಳ್ಳಿಗರು ಸಾಮೂಹಿಕವಾಗಿ ಜೇಡಿಮಣ್ಣಿನಿಂದ ರಚಿಸಲ್ಪಟ್ಟ ಮಳೆರಾಯನನ್ನು ನಿರ್ದಿಷ್ಟ ಕಾಲದವರೆಗೆ ಆರಾಧಿಸಿ ವಿಸರ್ಜಿಸುತ್ತಾರೆ. ಅವುಗಳ ನಿರ್ಮಿತಿಯೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಎರಕಹೊಯ್ಯುವ ವಿಧಾನವನ್ನು ಸವಿವರಗೊಳಿಸಿದ್ದಾರೆ. ಕಲ್ಲು, ಮರ, ರತ್ನ, ಲೋಹ, ಗಾರೆಯಂತೆ ವರ್ತಮಾನದ ಸಂದರ್ಭದಲ್ಲಿ ಗಾಜು ಫೈಬರ್, ರಬ್ಬರ್‌ಗಳು ಶಿಲ್ಪರಚನೆಯಲ್ಲಿ ಬಳಕೆಗೊಳ್ಳುತ್ತ ಆಧುನಿಕತೆಯನ್ನು ಒಳಗೊಳ್ಳುತ್ತಿರುವುದನ್ನು ಗುರುತಿಸಿದ್ದಾರೆ.

ಆಚರಣೆಯಲ್ಲಿ ಜನಪದ ಶಿಲ್ಪಗಳ ಬಗ್ಗೆ ಚರ್ಚಿಸುವಾಗ ಜೋಕುಮಾರಸ್ವಾಮಿ ಮತ್ತು ಲಜ್ಜಾಗೌರಿ ಶಿಲ್ಪಗಳ ಬಗ್ಗೆ ವಿವರಿಸಿರುವುದು ಸರಿಯಷ್ಟೆ. ಸರಳ ಮಾಧ್ಯಮವಾದ ಸಗಣಿಯಿಂದ ರಚಿಸಿ ಆಚರಿಸಲ್ಪಡುವ ಶಿಲ್ಪಗಳ ಬಗ್ಗೆ ಹೆಚ್ಚೇನೂ ಹೇಳದೆ ಸಗಣಿಯ ಮಾಧ್ಯಮದ ಬಗ್ಗೆ ಅಷ್ಟೆ ಹೇಳಿ ಕೈಬಿಟ್ಟಿದ್ದಾರೆ. ಅವರು ನೀಡಿರುವ ಒಂದು ಫೋಟೋ ಸಗಣಿ ಮಾಧ್ಯಮದಿಂದ ಕೂಡಿದೆ. ದೀಪಾವಳಿಯ ಸಂದರ್ಭದಲ್ಲಿ ಪ್ರತಿಮನೆಗಳಲ್ಲಿ ಸಗಣಿಯಿಂದ ತಿಪ್ಪಮ್ಮನನ್ನು ರಚಿಸಿ ಉಚ್ಚಳ್ಳು ಹೂ, ಜೋಳದ ತೆನೆ, ರಾಗಿ ತೆನೆ, ಕುಂಬಳದ ಹೂ, ಅಣ್ಣೆ ಹೂ ಇತ್ಯಾದಿಗಳಿಂದ ಅಲಂಕರಿಸಿ ಮೂರರಿಂದ ಐದು ದಿನಗಳವರೆಗೆ ಪೂಜಿಸುತ್ತಾರೆ. ಕೆಲವೆಡೆ ನಡುಮನೆಯ ಗೋಡೆಯಲ್ಲಿ, ಅಷ್ಟೇ ಅಲ್ಲದೆ ಮನೆಯ ಅಂಗಳದಲ್ಲೂ ಈ ಶಿಲ್ಪ ರಚನೆಗೊಳ್ಳುತ್ತದೆ. ಈ ಬಗ್ಗೆ ಚರ್ಚಿಸಿದ್ದರೆ ಅಧ್ಯಯನದ ವ್ಯಾಪಕತೆ ಮತ್ತಷ್ಟು ಹೆಚ್ಚುತ್ತಿತ್ತು.

ಹಿಂದೂ ರಾಜರುಗಳು ಮೂರ್ತಿ ಆರಾಧಕರಾದ್ದರಿಂದ ಶಿಲ್ಪಕಲೆಗೆ, ಮುಸಲ್ಮಾನ ರಾಜರು ಮೂರ್ತಿ ಆರಾಧಕರಲ್ಲದ ಕಾರಣ ವಾಸ್ತುಶಿಲ್ಪಕ್ಕೆ ಆದ್ಯತೆ ನೀಡಿದರು. ಅಜಂತ, ಎಲ್ಲೋರ, ಬಾದಾಮಿ, ಐಹೊಳೆ, ಹಂಪಿ ಮುಂತಾದ ಕಡೆಗಳಲ್ಲಿನ ದೇವಾಲಯಗಳು, ಗೋಳಗುಮ್ಮಟ, ಇಬ್ರಾಹಿಂ ರೋಜ, ಜುಮ್ಮಾ ಮಸೀದಿ, ಗಗನ ಮಹಲ್‌ಗಳು ಭಿನ್ನ ಆಸಕ್ತಿಯಿಂದ ಕಲೆಯನ್ನು ಬೆಳೆಸಿರುವ ಬಗ್ಗೆ ಬಂಟನೂರರು ಸಂದರ್ಭನುಸಾರ ಚರ್ಚಿಸಿದ್ದಾರೆ.

'ಮನೆಯೆಂಬ ಸುಂದರ ವಾಸ್ತುಶಿಲ್ಪಗಳು' ಲೇಖನದಲ್ಲಿ ಬೆಂಡೆಗುಂಬಳಿ, ಹೊನ್ನಕಿರಣಗಿ, ಖಾಜನಗೌಡರ ಮನೆ, ದುಬುಲಗೂಡಿಯ ಚಿತ್ರಸಹಿತ ವಾಸ್ತುಶಿಲ್ಪದ ಬಗ್ಗೆ ಮಾಹಿತಿ ನೀಡಿದ್ದಾರೆ. ವಿದೇಶಿಗರು ನಮ್ಮಲ್ಲಿನ ಮನೆಗಳ ವಾಸ್ತುಶಿಲ್ಪವನ್ನು ಅಧ್ಯಯನ ಮಾಡಲು ಬರುವುದು ನಮ್ಮ ಗೃಹ ವಾಸ್ತುಶಿಲ್ಪದ ಮಹತ್ವವನ್ನು ತಿಳಿಸುತ್ತದೆ.

ಒಟ್ಟಾರೆ "ಮಾಟದೊಳಗಣ ನೋಟ" ಕೃತಿ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ತರ ಕೃತಿ. ಶಿಲ್ಪಕಲೆಯನ್ನೂ ಕುರಿತ ಕೃತಿಗಳು ಅಪರೂಪವೆನಿಸಿದರೂ ಶಿವಾನಂದ ಬಂಟನೂರರ ಶಿಲ್ಪಕೃತಿಗಳು ಉತ್ತಮ ಕೃತಿಯೆನಿಸಿದೆ.

ಸ್ವಾಮಿ ನ. ಕೋಡಿಹಳ್ಳಿ

೩೪. ಧಾರವಾಡ ಜಿಲ್ಲೆಯ ಜನಪದ ಕಲಾವಿದರು

ಧಾರವಾಡ ಜಿಲ್ಲೆಯ ಜನಪದ ಕಲಾವಿದರು, ಡಾ. ಶಾಲಿನಿ ರಘುನಾಥ, ಕರ್ನಾಟಕ ಜಾನಪದ ಅಕಾಡೆಮಿ, ಜೆ.ಸಿ. ರಸ್ತೆ, ಬೆಂಗಳೂರು, ೨೦೧೨, ಪುಟ–೧೮+೧೭೮, ಬೆಲೆ ರೂ. ೬೦/-

ಮಾನವ ಸಂಘಜೀವಿ ಮತ್ತು ಶೃಂಗಾರ ಜೀವಿ. ಆದಿಯಿಂದಲೂ ಅನೇಕ ಕಲೆಗಳನ್ನು ಕಂಡುಕೊಳ್ಳುತ್ತ ತನ್ನ ಜೀವನದ ರಸಘಟ್ಟಗಳಲ್ಲಿ ಸಾಗುತ್ತ ಬಂದಿರುವುದನ್ನು ಚರಿತ್ರೆ ಬಿಚ್ಚಿಡುತ್ತ ಹೋಗುತ್ತದೆ. ಜನಪದ ಕಲೆಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವ ಹೊಣೆಗಾರಿಕೆಯನ್ನು ಜನಪದ ಕಲಾವಿದರು ರೂಢಿಸಿಕೊಂಡು ಬಂದಿದ್ದಾರೆ. ಭಾರತದಂತಹ ವೈವಿಧ್ಯಪೂರ್ಣ ಸಮುದಾಯಗಳನ್ನು ಹೊಂದಿರುವ ನಾಡಿನಲ್ಲಂತು ಅಗಾಧವಾದ ಜನಪದ ಕಲೆಗಳಿವೆ. ಅವು ಅವರ ಆಚರಣೆ ಸಂಪ್ರದಾಯ ಹಾಗೂ ಮನರಂಜನೆಯ ಸಾಧನಗಳು ಕೂಡ ಆಗಿವೆ.

ಇಂತಹ ಜಾನಪದವನ್ನು ಉಳಿಸುವ ಬೆಳೆಸುವ ಅಧ್ಯಯನ ಮಾಡುವ ದೃಷ್ಟಿಯಿಂದ 'ಕರ್ನಾಟಕ ಜಾನಪದ ಆಕಾಡೆಮಿ'ಯ ಕಾರ್ಯ ಸ್ತುತ್ಯಾರ್ಹವಾದದ್ದು. ಅಲ್ಲಿ 'ಜನಪದ ಜಗಲಿ', 'ಜನಪದ ಸಂಭ್ರಮ', 'ಗ್ರಾಮೀಣ ಚಿತ್ರಕಲಾ ಪ್ರದರ್ಶನ' ಮೊದಲಾದ ಯೋಜನೆಗಳು ಚಾಲ್ತಿಯಲ್ಲಿದ್ದು ಮುಂದುವರೆದು 'ಬೆಳ್ಳಿ ಮಾಲಿಕೆ'ಯ ಸರಣಿಯ ಅಡಿಯಲ್ಲಿ ಪ್ರಕಟಿಸಿರುವ "ಧಾರವಾಡ ಜಿಲ್ಲೆಯ ಜನಪದ ಕಲಾವಿದರು" ಎಂಬ ಕೃತಿ ಮಾಹಿತಿಯುಕ್ತ, ಸರಳತೆ, ಸ್ಪಷ್ಟತೆಯಿಂದ ಕೂಡಿದ್ದು ಕಲಾವಿದರನ್ನು ಅಕ್ಷರ ಲೋಕಕ್ಕೆ

ಪರಿಚಯಿಸುತ್ತಿರುವುದು ಮತ್ತು ಈ ಕೃತಿಯನ್ನು ರೂಪಿಸಿದ ಡಾ.ಶಾಲಿನ ರಘುನಾಥ ಅವರ ಕಾರ್ಯ ಶ್ಲಾಘನೆಗೆ ಅರ್ಹವಾದುದ್ದು.

ಈ ಕೃತಿಯು ಜನಪಡರ ತಮ್ಮ ಮೂಲವೃತ್ತಿಯೊಂದಿಗೆ ಹವ್ಯಾಸಿಯಾಗಿ ರೂಪಿಸಿಕೊಂಡು ಬಂದಿರುವ ಕಲೆಗಳನ್ನು ಮತ್ತು ಅವುಗಳನ್ನು ಪ್ರದರ್ಶಿಸುವ ಹಿರಿಯ ೯೬ ಕಲಾವಿದರನ್ನು ನಮಗೆ ಪರಿಚಯಿಸುತ್ತದೆ. ಜಾತಿ, ಮತ, ಧರ್ಮ-ಭೇದಗಳನ್ನು ಮೀರಿ ಕಲೆಗಳಲ್ಲಿ ತಮ್ಮೊಡನೆ ತೊಡಗಿಸಿಕೊಂಡ ಅವರ ಅನನ್ಯ ಜೀವನಾನುಭವ ನಮ್ಮೆಲ್ಲರಿಗೆ ಮಾರ್ಗದರ್ಶಕವಾಗಿದೆ.

ಈ ಕೃತಿಯಲ್ಲಿ ೧. ಸಂಪ್ರದಾಯ ಪದಗಳ ಹಾಡುಗಾರರು (ಆಚರಣೆ ಕಲೆಗೆ ಸಂಬಂಧಿಸಿದ ಹಾಡುಗಳು), ೨. ಇನ್ನಿತರ ಜನಪದ ಹಾಡುಗಾರರು (ಗೀಗಿ, ಲಾವಣಿ, ಹಂತಿ, ಏಕತಾರಿ, ಭಜನೆ, ಡೊಳ್ಳಿನಪದ, ಹೋಳಿಪದ ಇತ್ಯಾದಿ ಪದಗಳ ಹಾಡುಗಾರರು) ೩. ಜನಪದ ವಾದನಕಾರರು (ಕಣಿ, ಜಗ್ಗಲಿಗೆ, ದಿಮ್ಮು, ಕರಡಿಮಜಲು, ಚೌಗಡಿಮಜಲು, ಹಲಗೆ, ಡೋಲು, ಶಹನಾಯಿ ಕಲಾವಿದರು) ೪. ಜನಪದರ ರಂಗಭೂಮಿ ಕಲಾವಿದರು (ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತ, ಸಂಗ್ಯಾಬಾಳ್ಯಾ ಕಲಾವಿದರು) ೫. ಜನಪದ ಕುಣಿತದ ಕಲಾವಿದರು, ೬. ಲಂಬಾಣಿಗೀತೆ ಮತ್ತು ನೃತ್ಯಗಳ ಕಲಾವಿದರು ೭. ಜನಪದ ಶಿಲ್ಪ ಕಲಾವಿದರು ಎಂಬ ಅಧ್ಯಾಯಗಳಿವೆ. ಕಲಾವಿದರ ಪರಿಚಯ, ವೃತ್ತಿ ಕೌಶಲ್ಯ ಪ್ರದರ್ಶನದ ಮಾಹಿತಿ, ಆ ಕಲೆಯ ಬಗ್ಗೆ ಅವರಿಗಿರುವ ಪ್ರೀತಿ ಅದನ್ನು ಮುಂದಿನ ತಲೆಮಾರಿಗೆ ತಲುಪಿಸುವ ಶ್ರಮ, ಪ್ರಶಸ್ತಿಗಳು ಹೀಗೆ ಅವರ ಜನಪದ ಕೈಂಕರ್ಯವನ್ನು ದಾಖಲಿಸಿದ್ದಾರೆ.

ಇಂತಹ ಜನಪದ ಕಲಾವಿದರಲ್ಲಿ ಪ್ರಾಸಂಗಿಕವಾಗಿ ಕೆಲವರ ವೈಶಿಷ್ಟ್ಯವನ್ನು ಚರ್ಚಿಸುವುದಾದರೆ ಸಂಪ್ರದಾಯದ ಹಾಡುಗಳನ್ನು ಹೇಳುವ ಕಲಾವಿದರು ಈ ಜಿಲ್ಲೆಯಲ್ಲಿ ಹೆಚ್ಚು ಇರುವುದು ಕಂಡುಬರುತ್ತದೆ. ೪-೫ ಕಲಾವಿದರು ಗುಂಪು ಕಟ್ಟಿಕೊಂಡು ಕರೆದಲ್ಲಿ ಹೋಗಿ ಸೋಬಾನೆ ಪದ ಹಾಡಿ ಬರುವುದನ್ನು ಕಾಣಬಹುದು. ಈ ಹಾಡುಗಾರಿಕೆಯಲ್ಲಿ ಹೆಚ್ಚಾಗಿ ಮಹಿಳೆಯರೇ ಆದರೂ ಶ್ರೀ ಶಿವಾಜಿ ತುಳುಜಮ್ಮನವರ ಮತ್ತು ಶ್ರೀಅಡಿವೆಪ್ಪ ಬ್ಯಾಹಟ್ಟಿ ಎಂಬ ಪುರುಷರು ಕೂಡ ಮಹಿಳೆಯರ ಕಂಠದಂತೆಯೇ ಈ ಸೋಬಾನೆ ಪದವನ್ನು ಕರಗತ ಮಾಡಿಕೊಂಡು ಹಾಡುವುದನ್ನು ಕಾಣಬಹುದು. ಇನ್ನು ಉಳಿದ ಪುರುಷ ಹಾಡುಗಾರರು ಗೀಗೀ, ಲಾವಣಿ, ಹಂತಿ, ಏಕತಾರಿ, ಭಜನೆ ಡೊಳ್ಳಿನ ಪದ ಇತ್ಯಾದಿ ಪದಗಳನ್ನು ಹಾಡುತ್ತಾರೆ. ಇವರಲ್ಲಿ ಶ್ರೀ ನಿಂಗನಗೌಡ ಮುಂಡರಗಿಯಂಥವರು 'ಜಾನಪದಶ್ರೀ' ಪ್ರಶಸ್ತಿಯನ್ನು ಪಡೆದಿದ್ದಾರೆ. ಶ್ರೀ ದಾವಲಸಾಬರಂತಹವರು ವಿಶಿಷ್ಟ ರಿವಾಯಿತಪದ ಹಾಡುವಲ್ಲಿ ಪ್ರಮುಖರು. ಹಾಗೆ ಗಿರಿಯಾಲದ ಶ್ರೀ ವೆಂಕಪ್ಪ ಪುಲಿಯಂತಹ ಶ್ರೇಷ್ಠ ಕರಡಿವಾದನ ಕಲಾವಿದರನ್ನು ಈ ಜಿಲ್ಲೆ ಹೊಂದಿದೆ. ಅವರಿಗೆ ೨೦೦೮-೨೦೦೯ರ ಸಾಲಿನ 'ಜಾನಪದಶ್ರೀ' ಪ್ರಶಸ್ತಿ ಕೂಡ ಬಂದಿದೆ.

ಶ್ರೀಮತಿ ಲಕ್ಕವ್ವ ಲಮಾಣಿ ಕಲಾವಿದೆಯ ಮುಂದಾಳತ್ವದಲ್ಲಿ ಲಂಬಾಣಿ ಸಮುದಾಯದ ಮಹಿಳೆಯರು ಅವರ ಉಡುಗೆ-ತೊಡುಗೆ ಹಾಡುಗಳು ಮತ್ತು ನೃತ್ಯಗಳಿಂದ ಕೂಡಿದ ಹಾಡುಗಳನ್ನು ಹಾಡಿಕೊಂಡು ಬಂದಿದ್ದಾರೆ. ಹಿಂದೂಗಳ ಜೊತೆಗೆ ಮುಸಲ್ಮಾನರಾದ ಶ್ರೀ ಹುಸೇನ ಸಾಬ ಹಸನಸಾಬ ಮಾತೋರ್ಜಿಯವರು ಕಲೆಯಲ್ಲಿ ನಿಷ್ಣಾತರಾಗಿರುವುದು. ಶ್ರೀಮತಿ ಹನೀಫಾ ಮುಕ್ತುಂ ಸಲಾಮುಲ್ಲಾ ಮತ್ತು ಶ್ರೀಮತಿ ಹಸೇನಬಿ ಮನ್ನಾಸಾಬ ಪೆಂಡಾರಿ ಅವರು ಮುಸಾಲ್ಮಾನರಾದರೂ ಹಿಂದೂ ಸಂಪ್ರದಾಯದ ಹಾಡುಗಳನ್ನು ಹಾಡುವ ಉತ್ತಮ ಕಲಾವಿದರು. ಹಾಗೆ ಜಾನಕಮ್ಮ ಫಕೀರಪ್ಪ ಭಜಂತ್ರಿಯವರು ಕನ್ನಡ, ಉರ್ದು, ಕೊಂಕಣಿ ಭಾಷೆಗಳಲ್ಲಿ ಕುಟ್ಟುವ ಪದ, ಸೋಬಾನೆಪದ ಮತ್ತು ಒಗಟುಗಳ ಸ್ವಾರಸ್ಯಕರ ವಿವರವಿದೆ. ಅಲ್ಲದೇ ಅವರು ಮುಸ್ಲಿಂ ಮದುವೆಗಳಲ್ಲಿ ಉರ್ದು ಭಾಷೆಯಲ್ಲಿಯೇ ಪದಗಳನ್ನು ಹಾಡುತ್ತ ಬಂದಿದ್ದಾರೆ.

ಮೂರ್ತಿ ಕೆತ್ತಲು ಅಪಾರ ಪರಿಶ್ರಮ ಜಾಣ್ಮೆ, ತಾಳ್ಮೆ ಇರಬೇಕು. ಇಂತಹ ಜನಪದ ಶಿಲ್ಪ ಕಲಾವಿದರಾದ ಈರಪ್ಪ, ಈಶ್ವರಪ್ಪ ಬಡಿಗೇರ ಅವರು ಈ ಕಲೆಯನ್ನು ಸದ್ದಿಲ್ಲದೆ ಮಾಡುತ್ತಿದ್ದು ಬಸವಣ್ಣ, ಸುಭಾಷ್ ಚಂದ್ರ ಬೋಸ್, ಅಂಬೇಡ್ಕರ್ ಇತ್ಯಾದಿ ಪ್ರಮುಖರ ಮೂರ್ತಿಗಳನ್ನು ಕೆತ್ತಿರುವುದು ಉಲ್ಲೇಖಯೋಗ್ಯವಾದದ್ದು.

ಡಾ. ಶಾಲಿನ ರಘುನಾಥರವರು ಈ ಕೃತಿಯಲ್ಲಿ ಧಾರವಾಡ ಜಿಲ್ಲೆಯ ೬೦ ವರ್ಷ ದಾಟಿದ ಕಲಾವಿದರನ್ನು ಪರಿಚಯಿಸುವ ಧಾಟಿ ಮತ್ತು ಅದನ್ನು ಉಳಿಸುವ ಅವರ ಪರಿಶ್ರಮ ಜೊತೆಗೆ ಅವರ ಛಾಯಾಚಿತ್ರ ಮತ್ತು ಕೊನೆಯಲ್ಲಿ ಕಲಾವಿದರ ಪೂರ್ಣ ವಿಳಾಸ ನೀಡಿರುವುದು ಸಂಶೋಧನ ಆಸಕ್ತರಿಗೆ ಪೂರಕವಾಗಿದೆ. ಒಟ್ಟಾರೆಯಾಗಿ ಕಲಾವಿದರು ಕೋಮುಸೌರ್ಹದತೆಗೆ ಕೊಡುವ ಮಹತ್ವವನ್ನು ಪ್ರಗತಿಪರರು, ಆಧುನಿಕರು, ನಾಗರಿಕರು, ಬುದ್ಧಿಜೀವಿಗಳು ಎಂಬ ಹಣೆಪಟ್ಟಿ ಕಟ್ಟಿಕೊಂಡು ಹೋರಾಡುವ ನಾವುಗಳು ಕಲಿಯಬೇಕಾದ್ದು ಬಹಳಷ್ಟಿರುವುದು ಈ ಕೃತಿಯಿಂದ ವೇದ್ಯವಾಗುತ್ತದೆ.

ಮಾರುತಿ ಡಿ.

೩೫. ಯಕ್ಷಗಾನ ಪರಂಪರೆಯ ಒಳನೋಟ

ಯಕ್ಷಮುಡಿ, ಸಂ.ಡಾ.ರಾಜಶ್ರೀ, ಶಿಶಿರ್ ಎಂ.ಕೆ., ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ-೫೭೪೧೯೯, ೨೦೧೨, ಪುಟ-೧೭೬, ಬೆಲೆ ರೂ. ೯೦/-

ಹಲವು ವಿಶಿಷ್ಟ ಕಲೆಗಳ ತವರೂರು ಎನಿಸಿರುವ ಕರ್ನಾಟಕ ರಾಜ್ಯವು, ರಾಮಾಯಣ, ಮಹಾಭಾರತ, ಕುರುಕ್ಷೇತ್ರ ಮೊದಲಾದ ಪೌರಾಣಿಕ ನಾಟಕಗಳಷ್ಟೆ ಅಲ್ಲದೆ ದೊಡ್ಡಾಟ,

ಸಣ್ಣಾಟ, ಶ್ರೀಕೃಷ್ಣ ಪಾರಿಜಾತ ಮತ್ತು ಯಕ್ಷಗಾನ ಕಲೆಗಳಿಗೆ ಪ್ರಸಿದ್ಧವಾಗಿದೆ. ಇಂತಹ ಯಕ್ಷಗಾನ ಕಲೆಗೆ ಸಂಬಂಧಿಸಿದಂತೆ ಹಲವು ಉಪಯುಕ್ತ ಕೃತಿಗಳು ಹೊರಬಂದಿದ್ದು, ಈ ಸಾಲಿಗೆ ಪ್ರಸ್ತುತ 'ಯಕ್ಷಮುಡಿ' ಕೃತಿಯು ಸಹ ಸೇರಿದೆ.

ಪ್ರಸ್ತುತ 'ಯಕ್ಷಮುಡಿ' ಕೃತಿಯು ಯಕ್ಷಗಾನ ಅಧ್ಯಯನ ಕೇಂದ್ರವು ೨೦೧೦-೧೧ರ ಶೈಕ್ಷಣಿಕ ವರ್ಷದಲ್ಲಿ ನಡೆಸಿದ ಪ್ರಚಾರೋಪನ್ಯಾಸ ಲೇಖನಗಳ ಸಂಪುಟವಾಗಿದೆ.

ಇದರಲ್ಲಿ ಯಕ್ಷಗಾನದ ಇತಿಹಾಸ, ಸಾಂಸ್ಕೃತಿಕ ಪ್ರಸ್ತುತತೆ, ಪ್ರಸಂಗ ಸಾಹಿತ್ಯ, ಯಕ್ಷಗಾನ ಶಿಕ್ಷಣ ಮೊದಲಾದ ವಿಷಯಗಳನ್ನು ಕುರಿತ ಲೇಖನಗಳಿವೆ.

ಪ್ರಸ್ತುತ 'ಯಕ್ಷಮುಡಿ' ಕೃತಿಯಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದಂತೆ ವಿವಿಧ ಲೇಖಕರು ರಚಿಸಿರುವ ಒಟ್ಟು ೧೩ ಲೇಖನಗಳಿವೆ. ಇವುಗಳಲ್ಲಿ ಯಕ್ಷಗಾನದ ಕಲಾರಚನೆಯ ಸ್ವರೂಪದ ಶಾಸ್ತ್ರೀಯ ವಿಶ್ಲೇಷಣೆ, ಅದು ಹೊಂದಿರುವ ಪ್ರಾದೇಶಿಕ ಸಂಬಂಧ, ಅಲ್ಲಿ ಅಭಿವ್ಯಕ್ತಗೊಳ್ಳುವ ನವರಸಗಳು ಮೊದಲಾದವುಗಳನ್ನು ಕುರಿತು ಚರ್ಚಿಸಿದ್ದಾರೆ.

ಯಕ್ಷಗಾನದ ಕಲಾರಚನೆಯ ವಿಶ್ಲೇಷಣೆಯಿಂದ ತೊಡಗಿ, ಯಕ್ಷಗಾನದ ಉಳಿವು ಮತ್ತು ಬೆಳವಣಿಗೆಯವರೆಗಿನ ಚಿಂತನೆಗಳನ್ನು ಇಲ್ಲಿನ ಲೇಖನಗಳು ಮುಂದಿಟ್ಟಿವೆ.

ಡಾ. ಎಂ. ಪ್ರಭಾಕರ ಜೋಶಿಯವರು ತಮ್ಮ 'ಯಕ್ಷಗಾನ ಕಲಾರಚನಾ ಸ್ವರೂಪ' ಎಂಬ ಲೇಖನದಲ್ಲಿ ಯಕ್ಷಗಾನದ ವಿನ್ಯಾಸ, ಅಂಗೋಪಾಂಗಗಳನ್ನು ವಿವರಿಸಿ ಅವುಗಳ ಒಟ್ಟಾಗಿ ಕೆಲಸ ಮಾಡುವ ಕ್ರಮವನ್ನು ಬಹಳ ಮುಖ್ಯವಾಗಿ ಚರ್ಚಿಸಿದ್ದಾರೆ.

ತಾರಾನಾಥ ವರ್ಕಾಡಿಯವರು ತಮ್ಮ 'ಯಕ್ಷಗಾನ ಪ್ರಾದೇಶಿಕತೆ ಮತ್ತು ವೈವಿಧ್ಯತೆ' ಎಂಬ ಲೇಖನದಲ್ಲಿ ಯಕ್ಷಗಾನದ ವೈವಿಧ್ಯಗಳನ್ನು ಅದು ಹೊಂದಿರುವ ಪ್ರಾದೇಶಿಕತೆಯ ನೆಲೆಗಳನ್ನು ಲೇಖನದಲ್ಲಿ ಚರ್ಚಿಸಿದ್ದಾರೆ. ಯಕ್ಷಗಾನದ ಪ್ರಾದೇಶಿಕ ಪ್ರಭೇದಗಳು ಮತ್ತು ಅವುಗಳ ಅನನ್ಯ ವೈಶಿಷ್ಟ್ಯಗಳನ್ನು ವಿವರವಾಗಿ ಚರ್ಚಿಸಿದ್ದಾರೆ. ಯಕ್ಷಗಾನದ ಪ್ರದರ್ಶನದ ಬಗೆಗಳು, ಪ್ರಾದೇಶಿಕ ತಿಟ್ಟುಗಳು, ತಾಳಮದ್ದಳೆ, ಮೂಡಲಪಾಯ, ದೊಡ್ಡಾಟ, ಸಣ್ಣಾಟ, ಜೋಡಾಟ, ಕೂಡಾಟ, ಯಕ್ಷರಂಗ, ಯಕ್ಷರೂಪಕ, ಗೊಂಬೆಯಾಟ, ಪ್ರಸಂಗ, ರಂಗಪರಿಕರ ಮೊದಲಾಗಿ ಯಕ್ಷಗಾನದ ಒಟ್ಟಂದವನ್ನು ನಿರೂಪಿಸಿದ್ದಾರೆ.

ದೇರಾಜೆ ಸೀತಾರಾಮಭಟ್ಟರು ತಮ್ಮ 'ಯಕ್ಷಗಾನ ಮತ್ತು ಸಂವಾದೀ ಕಲೆಗಳು' ಎಂಬ ಲೇಖನದಲ್ಲಿ ಯಕ್ಷಗಾನದ ಎಲ್ಲಾ ಬಗೆಗಳಲ್ಲಿ ಇರುವ ಮೂಲಧಾತು ಒಂದೇ ಎಂಬ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ.

'ಯಕ್ಷಗಾನದಲ್ಲಿ ನವರಸಗಳು' ಎಂಬ ಲೇಖನದಲ್ಲಿ ವರ್ಕಾಡಿ ರವಿ ಅಲೆವೂರಾಯ ಅವರು ಯಕ್ಷಗಾನದಲ್ಲಿ ನವರಸಗಳ ಸ್ಥಾನ ವಿವೇಚನೆ ಮತ್ತು ಅವುಗಳು ಪ್ರದರ್ಶನದ ಸಂದರ್ಭದಲ್ಲಿ ಅಭಿವ್ಯಕ್ತಗೊಳ್ಳುವ ವಿಧಾನಗಳನ್ನು ಚರ್ಚಿಸಿದ್ದಾರೆ.

'ತಾಳಮದ್ದಳೆ ಅರ್ಥಗಾರಿಕೆಯಲ್ಲಿ ಶಬ್ದಗಳನ್ನು ಒಡೆಯುವ ಕಲೆ' ಎಂಬ ಡಾ. ರಮಾನಂದ ಬನಾರಿಯವರ ಲೇಖನದಲ್ಲಿ ಅರ್ಥಗಾರಿಕೆಯನ್ನು, ಶಬ್ದಗಳನ್ನು ಒಡೆಯುವ ಕಲೆ ಎಂದಿರುವುದು ವಿಶೇಷವಾಗಿದೆ. ಅರ್ಥಗಾರಿಕೆಯಲ್ಲಿನ ಕೆಲವು ಪದಗಳನ್ನು ಮತ್ತು ಪ್ರಸಂಗಗಳ ಪದ್ಯಗಳ ಸಾಲುಗಳನ್ನು ಆಯ್ದುಕೊಂಡು ಯಕ್ಷಗಾನದ ಅರ್ಥ ಮತ್ತು ವ್ಯಾಕರಣಕ್ಕೆ ಅನುಗುಣವಾಗಿ ವಿಶ್ಲೇಷಿಸಿದ್ದಾರೆ.

ರಾಧಾಕೃಷ್ಣ ಕಲ್ಚಾರ್‌ರವರು ತಮ್ಮ 'ಸಾಂಸ್ಕೃತಿಕ ಪಲ್ಲಟಗಳು ಮತ್ತು ತಾಳಮದ್ದಳೆ' ಎಂಬ ಲೇಖನದಲ್ಲಿ ಹೇಳುವ ತಾಳಮದ್ದಳೆಯು ತನ್ನ ಒಳಗಿನ ಮತ್ತು ಹೊರಗಿನ ಪರಿವರ್ತನೆಗಳೊಂದಿಗೆ ಆಧುನಿಕ ಸವಾಲುಗಳಿಗೆ ಸಮರ್ಥವಾಗಿ ಪ್ರತಿಕ್ರಿಯಿಸಿತು, ಎಂಬ ಮಾತುಗಳು ಬಹಳ ಮುಖ್ಯವಾಗಿವೆ.

'ಯಕ್ಷಗಾನ ಹಿಮ್ಮೇಳ ಮತ್ತು ಪ್ರಸಂಗ ಸಾಹಿತ್ಯ' ಎಂಬ ಲೇಖನದಲ್ಲಿ ಪ್ರೊ. ಎಸ್.ವಿ. ಉದಯಕುಮಾರ ಶೆಟ್ಟಿಯವರು ಭಾಗವತ, ಮದ್ದಳೆ, ಚೆಂಡೆ ಮೊದಲಾದ ಯಕ್ಷಗಾನ ಹಿಮ್ಮೇಳಗಳನ್ನು ಕುರಿತು ವಿವೇಚಿಸುತ್ತ ಯಕ್ಷಗಾನದ ರಾಗ, ತಾಳಗಳು, ಪ್ರಸಂಗ ಸಾಹಿತ್ಯ ಮತ್ತು ಪದ್ಯಗಳ ಮಹತ್ವವನ್ನು ಸೂಕ್ಷ್ಮವಾಗಿ ಪರಿಚಯಿಸಿಕೊಟ್ಟಿದ್ದಾರೆ. ಕಾಲ್ಪನಿಕ ಪ್ರಸಂಗಗಳಾದರೂ ಸ್ವೀಕರಿಸಬಹುದು ಎಂಬ ಧೋರಣೆ ಇವರದಾಗಿದೆ.

'ಧರ್ಮನೀತಿಜ್ಞ ಮತ್ತು ರಾಜನೀತಿಜ್ಞನಾಗಿ ಶ್ರೀಕೃಷ್ಣ' ಎಂಬ ಲೇಖನದಲ್ಲಿ ಪ್ರೊ.ಮಧೂರು ಮೋಹನ ಕಲ್ಲೂರಾಯರು ಮಹಾಭಾರತದ ಬಹುಮುಖ್ಯ ಪಾತ್ರವಾದ ಶ್ರೀಕೃಷ್ಣನ ವ್ಯಕ್ತಿತ್ವದ ಸಂಕೀರ್ಣತೆಯನ್ನು ತೆರೆದಿಡುತ್ತ, ಕೃಷ್ಣನ ಬದುಕನ್ನು ಸಾಂದರ್ಭಿಕ ಕಾಲ ಮತ್ತು ಘಟನೆಗಳೊಂದಿಗೆ ವಿಶ್ಲೇಷಿಸಿದ್ದಾರೆ.

'ಯಕ್ಷಗಾನ ಸಂಘಟನೆ' ಎಂಬ ಲೇಖನದಲ್ಲಿ ಮುರಳಿ ಕಡೇಕಾರ್‌ರವರು ಯಕ್ಷಗಾನ ಕ್ಷೇತ್ರದಲ್ಲಿ ಆಗಬೇಕಾಗಿರುವ ಸಂಘಟನೆಯ ಅಗತ್ಯ ಮತ್ತು ಅದರ ಸ್ವರೂಪವನ್ನು ಕುರಿತು ಚರ್ಚಿಸಿದ್ದಾರೆ.

ಗುಂಡ್ಮಿ ಸದಾನಂದ ಐತಾಳರು ತಮ್ಮ 'ಬಡಗುತಿಟ್ಟು ಯಕ್ಷಗಾನದಲ್ಲಿ ವಾಣಿಜ್ಯೀಕರಣದ ಪ್ರಭಾವ' ಎಂಬ ಲೇಖನದಲ್ಲಿ ಬಡಗುತಿಟ್ಟು ಯಕ್ಷಗಾನದಲ್ಲಿ ಉಂಟಾದ ವಾಣಿಜ್ಯೀಕರಣ, ಅದಕ್ಕೆ ಕಾರಣಗಳು, ಅದರಿಂದಾದ ಸಾಧಕ, ಬಾಧಕಗಳನ್ನು ರಂಗದಲ್ಲಿ ಉಂಟಾದ ಬದಲಾವಣೆಗಳನ್ನು ಕುರಿತು ವಿವೇಚಿಸಿದ್ದಾರೆ.

'ಯಕ್ಷಗಾನದಲ್ಲಿ ಆಧುನಿಕ ಸ್ಪರ್ಶ' ಎಂಬ ಲೇಖನದಲ್ಲಿ ನಾ. ಕಾರಂತ ಪೆರಾಜೆಯವರು ಆಧುನಿಕತೆಯು ಯಕ್ಷಗಾನ ಕ್ಷೇತ್ರಕ್ಕೆ ಪ್ರವೇಶಿಸಿದ ನಂತರದಲ್ಲಿ ಆ ಕ್ಷೇತ್ರದಲ್ಲಿ ಉಂಟಾದ ಬದಲಾವಣೆಗಳು, ಯಕ್ಷಗಾನದ ಮೇಲೆ ಬೀರಿದ ಪರಿಣಾಮಗಳನ್ನು ಕುರಿತು ಚರ್ಚಿಸುತ್ತ, ಅಧುನಿಕತೆಯ ಹೆಸರಿನಲ್ಲಿ ಆಗುತ್ತಿರುವ ವಿರೂಪಗಳು, ಅಶಿಸ್ತನ್ನು ತಡೆದು ಯಕ್ಷಗಾನವನ್ನು ಸಂರಕ್ಷಿಸಬೇಕಾದ ಅನ್ವಯಿಕ ನೆಲೆಯನ್ನು ಕುರಿತು ಸೂಚಿಸುತ್ತಾರೆ.

'ಯಕ್ಷಗಾನದ ಕಾಲಮಿತಿ ಪ್ರಯೋಗ' ಎಂಬ ಲೇಖನದಲ್ಲಿ ಶ್ರೀಧರ್ ಡಿ.ಎಸ್.ರವರು ಯಕ್ಷಗಾನದ ಬಯಲಾಟ ಮತ್ತು ತಾಳಮದ್ದಳೆಯ ಕಾಲಮಿತಿಯ ಅಗತ್ಯವನ್ನು

ಪ್ರತಿಪಾದಿಸುತ್ತ ಯಕ್ಷಗಾನದ ಅಭಿಮಾನಿ ಪ್ರೇಕ್ಷಕವರ್ಗ, ಚಿಂತಕವರ್ಗ ಕಾಲಮಿತಿಯ ಅಗತ್ಯವನ್ನು ಬಲವಾಗಿ ಪ್ರತಿಪಾದಿಸುವುದನ್ನು ಸಮರ್ಥಿಸುವುದನ್ನು, ಆ ಸಮರ್ಥನೆಯ ಹಿಂದೆ ಇರುವ ವೈಜ್ಞಾನಿಕ ಚಿಂತನೆಯನ್ನು, ಪ್ರಾಯೋಗಿಕ ಅನುಭವವನ್ನು ಕುರಿತು ತಿಳಿಸುತ್ತ ಅನ್ಯ ಮಾಧ್ಯಮಗಳ ಹೊಯ್ಲಿನಿಂದ ಯಕ್ಷಗಾನವನ್ನು ಉಳಿಸುವ ಕಳಕಳಿಯನ್ನು ಒತ್ತಿ ಹೇಳುತ್ತಾರೆ.

'ಯಕ್ಷಗಾನ ಉಳಿವು ಮತ್ತು ಬೆಳವಣಿಗೆ' ಎಂಬ ಲೇಖನದಲ್ಲಿ ಡಾ. ಭಾಸ್ಕರಾನಂದ ಕುಮಾರ್‌ರವರು ಯಕ್ಷಗಾನದ ಉಳಿವನ್ನು ಅದರ ಬೆಳವಣಿಗೆಯನ್ನು ಒತ್ತಿ ಹೇಳುತ್ತ 'ತಮ್ಮ ಆಟ ಹಿಂದೆ ಕಂಡ ಆಟ ಹೊಸ ಹೊದಿಕೆಯೊಂದಿಗೆ ಬರಲಿ' ಎಂಬ ಆಶಯದೊಂದಿಗೆ, 'ನಮ್ಮ ಹಿಂದಿನ ಆಟ ಉಳಿಯಲಿ ಹಾಗೆಯೇ ಆ ಆಟ ಆರೋಗ್ಯಕರವಾಗಿ ಬೆಳೆಯಲಿ' ಎಂಬ ಹಾರೈಕೆಯೊಂದಿಗೆ ಲೇಖನ ಕೊನೆಗೊಳ್ಳುತ್ತದೆ.

ಒಟ್ಟಾರೆ ಯಕ್ಷಗಾನವು ಈ ನಾಡಿನ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಒಳಗೊಂಡು ಪರಂಪರೆಯಲ್ಲಿ ಅಸ್ಮಿತೆಯನ್ನು ಉಳಿಸಿಕೊಂಡೇ ಬಂದಿತ್ತು. ಆದರೆ ಇಂದು ಆಧುನಿಕತೆಯಿಂದ ತಮ್ಮ ತಮ್ಮ ನೆಲೆಗಳನ್ನು ಕಳೆದುಕೊಳ್ಳುವ ಆತಂಕದ ಛಾಯೆಯಲ್ಲಿರುವ ಇಂತಹ ಉಪನ್ಯಾಸಗಳು, ಅವುಗಳನ್ನು ಒಳಗೊಂಡ ಸಂಕಲಿತ ಕೃತಿ ಬಂದಿರುವುದು ತುಂಬಾ ಮುಖ್ಯವಾಗಿದೆ.

ಲಕ್ಷ್ಮೀಕಾಂತ ಗೌರಿಪುರ

೩೬. ಹಾಲುಮತ ಮತ್ತು ಅದರ ಗುರುಪರಂಪರೆ

ಹಾಲುಮತ ಸಂಗಮ ಕುಲಗುರು ಭಿಂಗಯ್ಯ, ಡಾ. ಲಿಂಗದಹಳ್ಳಿ ಹಾಲಪ್ಪ, ಪ್ರ: ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ. ಪ್ರಕಾಶನಗರ, ಹೊಸಪೇಟೆ-೫೮೩೨೦೧, ೨೦೧೨, ಪುಟ-೧೦+೧೩೨, ಬೆಲೆ ರೂ. ೧೪೦/-

ಜಾನಪದ ಸಂಗ್ರಹಣೆ ಹೆಚ್ಚಾದಷ್ಟೂ ಒಳ ಸೂಕ್ಷ್ಮಗಳ ಕಡೆಗೆ ತನ್ನ ಚಲನೆಯನ್ನು ಪಡೆದುಕೊಂಡ ಈ ಜಾನಪದ ಶೋಧಕಾರ್ಯ ನಿಧಾನವಾಗಿ ಪ್ರತಿ ಮನುಷ್ಯನ ತನ್ನತನದ ಹುಡುಕಾಟದ ಕಡೆಗೆ ಸಾಗಿದೆ. ಈ ಸಕಾರಣದಿಂದಾಗಿ ನೆಲಮೂಲ ಸಂಸ್ಕೃತಿಯನ್ನು ಅರಿಯುವ ಮತ್ತು ಅದನ್ನು ವಿಶ್ಲೇಷಿಸಿಕೊಳ್ಳುವ ಪ್ರಯತ್ನ ಸಾಕಷ್ಟು ಬೆಳೆಯುತ್ತಿದೆ. ತಳಸಮುದಾಯಗಳು ತಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುತ್ತಿವೆ. ಈ ನಿಟ್ಟಿನಲ್ಲಿಯೇ ಡಾ. ಲಿಂಗದಹಳ್ಳಿ ಹಾಲಪ್ಪ ಅವರ 'ಹಾಲುಮತ ಸಂಗಮ ಕುಲಗುರು ಭಿಂಗಯ್ಯ' ಕೃತಿಯನ್ನು ವಿಶ್ಲೇಷಿಸಿಕೊಳ್ಳಬಹುದು.

ಡಾ. ಹಾಲಪ್ಪನವರಿಗೆ ಸಾಮಾಜಿಕ ಚರಿತ್ರೆಯ ಮತ್ತು ಸಾಂಸ್ಕೃತಿಕ ಇತಿಹಾಸದ ಬಗ್ಗೆ ತಮ್ಮದೇ ಆದ ವಿಶಿಷ್ಟ ಕುತೂಹಲವಿದೆ. ರಾಷ್ಟ್ರೀಯ ಮತ್ತು ಪ್ರಾದೇಶಿಕ ಎಂಬ ಪದ ಬಳಕೆಗಿಂತ ಭಿನ್ನವಾಗಿ ಸ್ಥಳೀಯ ಎಂಬುದು ಸೀಮಿತ ಪ್ರದೇಶದ ವಿಸ್ತಾರವಾದ ವಿವರಗಳ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಹಾಗಾಗಿಯೇ ಇಂದು ಸ್ಥಳೀಯ ಅಧ್ಯಯನಗಳು ಹೆಚ್ಚು ಮಹತ್ವವನ್ನು ಪಡೆಯುತ್ತಿವೆ. ಲೋಕಲ್ ಎಂದು ಕರೆಯಬಹುದಾದ ಆ ಪ್ರದೇಶದ ಜನಾಂಗಿಕವಾದ ನಂಬಿಕೆ, ಆಚರಣೆ, ಪರಂಪರೆ, ಸಂಪ್ರದಾಯ, ಅಡುಗೆ, ಊಟ, ಉಡುಗೆ-ತೊಡುಗೆ, ಐತಿಹ್ಯ-ನಂಬಿಕೆಗಳು ಹೆಚ್ಚು ವ್ಯಾಪಕವಾಗಿ ವಿಶ್ಲೇಷಣೆಗೆ ಒಳಪಡುತ್ತವೆ.

ಡಾ. ಹಾಲಪ್ಪನವರು ಆಯ್ದುಕೊಂಡ ಹಾಲುಮತದ ವಿಶ್ಲೇಷಣೆಗಳು ಇಲ್ಲಿ ವಿಪುಲ ವಿವರಗಳೊಂದಿಗೆ ತೆರೆದುಕೊಂಡಿವೆ. 'ಕುರುಬ' ಎಂದಾಗ ನಮ್ಮ ಸ್ಮೃತಿಪಟಲದಲ್ಲಿ ನಿಲ್ಲುವ ಒಂದೇ ಒಂದು ಚಿತ್ರಣಕ್ಕಿಂತ ಭಿನ್ನವಾಗಿ ಎಣ್ಣೆ ಕುರುಬ, ಉಣ್ಣೆ ಕುರುಬ, ಅಣ್ಣೆ ಕುರುಬ ಎಂದಾಗ ಧ್ವನಿಸುವ ಸ್ಥಳೀಯ ನೆಲೆಗಟ್ಟು ಬೇರೆಯದೇ ಚಿಂತನೆಗಳ ಒಳಸೂಕ್ಷ್ಮಗಳನ್ನು ಸೃಜಿಸುತ್ತದೆ. ಇಂತಹ ಮೂಲ ಸೆಲೆಯನ್ನು ಹಿಡಿಯಬಲ್ಲ ಸಂಶೋಧನಾ ಪ್ರತಿಭೆ ಹಾಲಪ್ಪನವರ 'ಭಿಂಗಯ್ಯ'ದಲ್ಲಿ ಆಗಾಗ ಹೊಮ್ಮುತ್ತದೆ.

ಹಾಲುಮತದ ಇತಿಹಾಸವನ್ನು ಹೆಕ್ಕುವ ಕೆಲಸ ಈಗಾಗಲೇ ಹಲವಾರು ದಶಕಗಳಿಂದ ಬೆಳೆದು ಬಂದಿದೆ. ವಿಶೇಷವೆಂದರೆ ಹಾಲಪ್ಪನವರು ವಿಶಿಷ್ಟ ಆಚರಣೆಯ 'ಭಿಂಗಯ್ಯ'ನ ಪರಂಪರೆಯನ್ನು ವಿವರಿಸುತ್ತಾ ಹಾಲುಮತದ ವಶೀಲಿಗಿಳಿಯುತ್ತಾರೆ. 'ಹಾಲುಮತ ಎಂಬುದು ಒಂದು ಜಾತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ; ಇಂದು ಹಾಲುಮತ ಕುರುಬಗೌಳಿ ಎಂದರೆ ಅದನ್ನು ಒಂದು ಜಾತಿ ಎಂದು ಪರಿಗಣಿಸುತ್ತಿರುವುದು ದುರದೃಷ್ಟಕರ' ಎನ್ನುತ್ತಾರೆ.

'ಭಿಂಗಯ್ಯ' ಕೃತಿಯ ಪ್ರಾರಂಭದಲ್ಲೇ ಹೇಳಿರುವಂತೆ ಹಾಲುಮತದ ಗುರು ಪರಂಪರೆಯನ್ನು ಗುರುತಿಸಿ ವಿವರಿಸುವುದು ಇದರ ಮುಖ್ಯ ಉದ್ದೇಶ. ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕಿನ ಖಂಡುಗದಹಳ್ಳಿಯ ಸೋಮೇಶ್ವರ ಎಂಬ ಕುರುಬ ಜನಾಂಗದ ಸಂಗಮಕುಲ(ಸಂಗಮಗೊಲ>ಸಂಗೇಗೊಲ)ದ ದೈವ ಈ ಕೃತಿಯ ಕೇಂದ್ರಬಿಂದು(ಲೇಖಕರ ಮಾತು 'ಅಧ್ಯಯನದ ಅಂತರಂಗ')ವಾಗಿರುವುದು ಸ್ಪಷ್ಟಗೋಚರ. ಡಾ. ಹಾಲಪ್ಪನವರು ಕುರುಬ ಸಮುದಾಯದ ಗುರು ಪರಂಪರೆಗಳ ಶೋಧಕ್ಕೆ ಹೊಸತೊಂದು ಪರಂಪರೆಯನ್ನು ಸೇರಿಸಿದ್ದಾರೆ ಎನಿಸುತ್ತದೆ. ಯಾಕೆಂದರೆ ಹಾಲುಮತದ ಗುರುಪರಂಪರೆಯಲ್ಲಿ ಸಿದ್ಧತ್ರಯರ ಗುರುಪರಂಪರೆಯನ್ನು ಕಾಣುತ್ತೇವೆ. ಸಿದ್ಧರಾಮ, ರೇವಣ್ಣಸಿದ್ಧ ಮತ್ತು ಅಮೋಘಸಿದ್ಧ ಎಂಬ ಮೂರು ಗುರು ಪರಂಪರೆಗಳು ಚಿರಪರಿಚಿತವಾದವು. ಈ ಮೂರು ಗುರುಪರಂಪರೆಗಳ ಕವಲುಗಳಾಗಿ ದಳವಾಯಿ, ಒಡೆಯರು, ದಾಸಯ್ಯಗಳು, ಗೊರವರು, ಪೂಜಾರರು, ಚೌಡಿಕೆಯವರು ಎಂಬ

ಗುರುವರ್ಗಗಳನ್ನು ನೀಡಿರುವ ಡಾ. ಆರ್. ರಾಜಪ್ಪ ದಳವಾಯಿ ಈ ಭಂಗಿ ಅಥವಾ ಭೃಂಗಿ ಅಥವಾ ಭಿಂಗಯ್ಯಗಳ ಕುರಿತು ವಿವರಿಸಿಲ್ಲವಾದ್ದರಿಂದ ಹಾಲಪ್ಪನವರು ಈ ಗುರುಪರಂಪರೆಯನ್ನು ಗುರುತಿಸಿದ ಮೊದಲಿಗರಿರಬೇಕು. ಈ ಭಿಂಗಯ್ಯ ಆಚರಣೆ ಕೇವಲ ಖಂಡುಗದಹಳ್ಳಿಯ ಸೋಮೇಶ್ವರ ದೇವಸ್ಥಾನದ ಒಕ್ಕಲುಗಳಲ್ಲಿ ಮಾತ್ರವಿರುವುದು ವಿಶೇಷ. ಇದರ ಆಚರಣೆ, ಪದ್ಧತಿ, ದೀಕ್ಷಾವಿಧಾನ, ಮೂಲನೆಲೆ, ಹಿನ್ನೆಲೆ, ಸಾಮಾಜಿಕ, ಆಧುನಿಕ ನೆಲೆಗಳನ್ನು ವಿಶ್ಲೇಷಿಸುವಲ್ಲಿ ಹಾಲಪ್ಪನವರ ಕ್ರಮ ವಿಭಾಗೀಕರಣ ಮತ್ತು ನಿರೂಪಣಾ ಕ್ರಮ ತುಂಬಾ ಅಚ್ಚುಕಟ್ಟಾಗಿದೆ.

ಡಾ. ಹಾಲಪ್ಪನವರ 'ಹಾಲುಮತ ಸಂಗಮ ಕುಲಗುರು ಭಿಂಗಯ್ಯ' ಕೃತಿ ಒಂಬತ್ತು ಅಧ್ಯಾಯಗಳ ಜೊತೆಗೆ ಸುಮಾರು ಹತ್ತು ಅನುಬಂಧಗಳನ್ನು ಒಳಗೊಂಡಿದ್ದು ಅಧ್ಯಯನ ಪೂರ್ಣತ್ವವನ್ನು ಸೂಚಿಸುತ್ತವೆ. 'ಭಿಂಗಯ್ಯನೆಂದರೆ...' ಎಂಬ ಅಧ್ಯಾಯದಲ್ಲಿ ಭಿಂಗಯ್ಯನ ಹಿನ್ನೆಲೆ, ಮುನ್ನೆಲೆ ಜೊತೆಗೆ ಆಧುನಿಕತೆಯ ನೆಲೆಯನ್ನು ವಿವರಿಸಲಾಗಿದೆ. ಎರಡನೆಯ ಅಧ್ಯಾಯ ಹಾಲುಮತ ಜನಾಂಗದ ಪೂರ್ವನೆಲೆಯನ್ನೂ ವಿಶಿಷ್ಟವಾಗಿ ವಿಶ್ಲೇಷಿಸಿರುವ ಡಾ. ಹಾಲಪ್ಪನವರು ನೆಲಮೂಲ ಸಂಸ್ಕೃತಿಯ ಆದಿ ಸಂಸ್ಕೃತಿಯ ಜೊತೆಗೆ ಆರ್ಯ ದ್ರಾವಿಡ ಸಂಗತಿಗಳಿಗಿಂತ ಹಿಂದಿನ ಕಾಡ ಬೇಡ ಸಂಸ್ಕೃತಿಯನ್ನು ಕೂಡ ಹೈನುಗಾರಿಕೆಯ ನೆಲೆಯಲ್ಲಿ ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ.

ಈ ಸಂಯುಕ್ತ ಹಾಲುಮತ ಸಮುದಾಯವು ಜೀವಪರ ಮತ್ತು ಪರಿಸರಪರ ಸಂಸ್ಕೃತಿಯನ್ನು ಹೊಂದಿತ್ತು ಎಂಬುದಕ್ಕೆ ಆಧಾರಗಳಿವೆ. ಲೇಖಕರು ದನ, ಕುರಿ, ಮೇಕೆಯಂತಹ ಸಾಕು ಪ್ರಾಣಿಗಳ ಸಾಂಗತ್ಯದಲ್ಲಿ ಕುರುಬ, ಕುರುಂಬ, ಕರುಕ, ದನಗಾರ, ಮರವ ಹಟ್ಟಿಕಾರ, ಕೊಳಲೇಕಾರ, ಹಳಬ ಮುಂತಾದ ಮೂಲ ನಾಮಾಂಕಿತ ಸಮೇತ ಸಂಶೋಧಿಸಿದ್ದಾರೆ. ವೇದಗಳಿಂದ ಆಧುನಿಕದವರೆಗೆ ಬಂದ ಪಯಣವನ್ನು ಸ್ಥೂಲವಾಗಿ ಗುರ್ತಿಸಿದ್ದಾರೆ. ಮೂಲದಲ್ಲಿ ಬೇಡರು ಎಂಬ ಜಾತಿ ವಿಶಾಲ ಹಾಲುಮತದ ಕುರುಬರ ಒಂದು ಪಂಗಡವಾಗಿದೆ. ಬೇಡರು ಮತ್ತು ಮ್ಯಾಸಬೇಡರು ಕೂಡ ಕುರುಬರೆ? ಎಂಬ ಸಂಶಯ ಮೂಡುವುದು ಇಲ್ಲಿದೆ. ಹಾಗೆಯೇ ತಮಿಳಿನ ಜಾಡರು ಕೂಡ ಕುರುಬರೇ ಎಂದು ನಿರೂಪಿಸಿರುವುದು ಎಷ್ಟರಮಟ್ಟಿಗೆ ಸತ್ಯ ಎಂಬ ಸಂಶಯವಿದೆ. ಜಾಡಿಯವರು ಕುರುಬರು ಎಂಬುದು ನಿಜವಿರಬಹುದು. ಆದರೆ ಜಾಡಿ ಎಂಬುದು ಕೆಲವು ಜನಾಂಗಗಳಲ್ಲಿ ಒಂದು ಸಂಪ್ರದಾಯ. ದೇವರಿಗೆ ಪಟ್ಟಗಟ್ಟಲು, ಮದುಮಗ ಮದುವಣಗಿತ್ತಿಗೆ ಅರಿಶಿಣ ಹಚ್ಚುವ ಸಂದರ್ಭದಲ್ಲಿ ಜಾಡಿ ಹಾಕುತ್ತಾರೆ. ಇಲ್ಲಿ ಜಾಡಿ ಎಂಬುದು ಒಂದು ಹಾಸುಗಂಬಳಿಯ ಸಂಪ್ರದಾಯವಷ್ಟೆ ಇದೂ ಒಂದು ಸಂಶಯವಿದೆ.

ಇನ್ನು ಉಣ್ಣೆ ನೇಕಾರ ಕುರುಬರಲ್ಲಿ ಕೆಲವರು ಬುಟ್ಟಿ ನೇಕಾರರಾದರು. ಅವರು ನೇಕಾರ>ದೇವಾಂಗ>ಜಾಡರೆಂದು ಕರೆಸಿಕೊಳ್ಳುವ ಹೊಸವರ್ಗ ಉದಯವಾಯಿತು (ಪುಟ-೧೨) ಎಂದಿರುವ ಡಾ. ಹಾಲಪ್ಪನವರ ನಿರೂಪಣೆ ಬಹಳ ವಿಚಿತ್ರವಾಗಿದೆ

ಮತ್ತು ಚರ್ಚಾಸ್ಪದವಾಗಿದೆ. ಹಾಲು ಕರೆಯುವ ಪಶುಗಳೆಲ್ಲಾ ಹಾಲುಮತಸ್ಥರಾಗುವ ವಿಶಾಲಾರ್ಥದ ಗ್ರಹಿಕೆ ಉತ್ತಮವಾಗಿರಬಹುದು. ಆದರೆ ಜನಾಂಗಿಕ ಪ್ರತಿಷ್ಠೆಗಳಾಗಿಸುವ ಕ್ರಮ ಸೂಕ್ತವಾಗಲಾರದು. ಈ ದೃಷ್ಟಿಯಿಂದ ಈ ಕೃತಿಯ ಕೆಲವು ಭಾಗಗಳನ್ನು ಸಂಶಯದಿಂದಲೇ ನೋಡಬೇಕಾಗುತ್ತದೆ.

ಇನ್ನು ಮೂರನೇ ಅಧ್ಯಾಯದಲ್ಲಿ ಭಿಂಗಯ್ಯ ಪದ ನಿಷ್ಪತ್ತಿ ಹಾಗೂ ಪೌರಾಣಿಕ ಹಿನ್ನೆಲೆಯನ್ನು ಬಹಳ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಖಂಡುಗದಹಳ್ಳಿಯ ನಿಷ್ಪತ್ತಿಯ ಜೊತೆಗೆ ಪೌರಾಣಿಕತೆ ಮತ್ತು ಸೋಮೇಶ್ವರ ಮತ್ತು ಪರಿವಾರದ ದೇವರುಗಳನ್ನು ಸವಿವರವಾಗಿ ಪರಿಚಯಿಸಿರುವುದು ಉತ್ತಮವಾಗಿದೆ. ಬೀದಿಬಸಪ್ಪ, ಭರಮಪ್ಪ, ಚೌಡಮ್ಮ, ಜಡೆಯಮ್ಮ ಎಲ್ಲ ಪರಿವಾರದ ಜೊತೆ ಜಾನಪದದ ಕಥೆಯನ್ನು ವಿವರಿಸಿದ್ದಾರೆ. ಮುಂದಿನ ಅಧ್ಯಾಯದಲ್ಲಿ ಭಿಂಗಯ್ಯನ ದೀಕ್ಷಾ ಪದ್ಧತಿಯನ್ನು ಸವಿವರಗಳೊಂದಿಗೆ ಸಮಯಗಳಿಗೆ, ಹೊಳೆಯನ್ನಾಯ, ದೀಕ್ಷಾ ಅರ್ಹತೆ, ಪಟ್ಟಗಟ್ಟುವ ವಿಧಾನಗಳನ್ನು ಸಹ ವಿವರಿಸಿದ್ದಾರೆ. ಮುಂದಿನ ಅಧ್ಯಾಯಗಳಲ್ಲಿ ಭಿಂಗಯ್ಯ ದೀಕ್ಷೆ ಪಡೆದವರ ಕೌಟುಂಬಿಕ ನೆಲೆ, ಸಾಮಾಜಿಕ ನೆಲೆ ಮತ್ತು ಧಾರ್ಮಿಕ ಆಚರಣೆಗಳನ್ನು ಚಿತ್ರಿಸಿರುವುದು ವಿವರಣಾತ್ಮಕವಾಗಿದೆ. ಸೋಮಬೀರಪ್ಪನ ಜಾತ್ರೆಯಲ್ಲಿ ಕುರುಬ ಸಮುದಾಯದ ಪಾತ್ರ ವಿವರಣೆ ಇದೆ.

ಭಿಂಗಯ್ಯನ ಗುರುಪರಂಪರೆಯ ಸ್ಥಾನಮಾನ, ಆಧುನಿಕ ಸಮಾಜದಲ್ಲಿ ಭಿಂಗಯ್ಯನ ಸಾಂಸ್ಕೃತಿಕ ನೆಲೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಕಾಣಬಹುದಾಗಿದೆ. ಒಟ್ಟಾರೆ ಭಿಂಗಯ್ಯನಂತಹ ಹಾಲುಮತದ ಸಂಪ್ರದಾಯವೊಂದು ತೆರೆಮರೆಯಲ್ಲಿ ನಾಶವಾಗುವ ಸಂದರ್ಭದಲ್ಲಿ ಅದನ್ನು ಹೆಕ್ಕಿ ತೆಗೆದು ಸಂಪೂರ್ಣ ವಿವರಗಳೊಂದಿಗೆ ನೀಡಿರುವುದ ಡಾ. ಹಾಲಪ್ಪನವರ ಸಂಶೋಧನೆಯ ಹೆಗ್ಗಳಿಕೆ. ವಿಷಯವನ್ನು ಗ್ರಹಿಸಿರುವ ವಿಧಾನ ಮತ್ತು ನಿರೂಪಣಾ ಕ್ರಮ ಲೇಖಕರ ವಿದ್ವತ್ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ.

ಡಾ. ಲಿಂಗದಹಳ್ಳಿ ಹಾಲಪ್ಪನವರ ವೈಚಾರಿಕ ದೃಷ್ಟಿಕೋನದ ಮಾತುಗಳು ನಿರೂಪಣಾ ಶೈಲಿಯನ್ನು ಉತ್ತಮಗೊಳಿಸುತ್ತವೆ; ಜನಾಂಗಿಯ ಅಧ್ಯಯನವನ್ನು ಓದುವವರಿಗೆ ಸೃಜನಾತ್ಮಕವಾಗಿ ಮೆಚ್ಚೆನಿಸುತ್ತವೆ. ಅದೇ ಸಂದರ್ಭದಲ್ಲಿ ವೈಚಾರಿಕತೆಯ ವೈರುಧ್ಯವೆಂಬಂತೆ ಒಂದು ಜನಾಂಗಿಯ ಪರವಾದ ಹಮ್ಮುಗಳೂ ಅಲ್ಲಲ್ಲಿ ಚಿಮ್ಮಿದಾಗ ಪೇಲವ ಎನಿಸಿಬಿಡುತ್ತವೆ. ವೃತ್ತಿಯಲ್ಲಿ ವಿದ್ಯುತ್ ಅಭಿಯಂತರರಾದ ಡಾ. ಲಿಂಗದಹಳ್ಳಿ ಹಾಲಪ್ಪನವರು ಸಂಶೋಧನೆಯಲ್ಲಿಯೂ ಅದ್ಭುತವಾದ ಸಾಧಕರಾಗಿದ್ದಾರೆ. ನಮ್ಮತನದ ಇತಿಹಾಸದ ಗತವೈಭವದ ಪುರಾತನ ನಂಬಿಕೆ, ಐತಿಹ್ಯ, ಆಚಾರ, ವಿಚಾರಗಳ, ಸ್ಮಾರಕ ಪುರಾವೆಗಳು ಮಣ್ಣಲ್ಲಿ ಮಣ್ಣಾಗಿ ಕಣ್ಮರೆಯಾಗುವ ಮುನ್ನ ಅಂತಹ ಸಂಗತಿಗಳನ್ನು ದಾಖಲಿಸುವ ಜಾಗೃತ ಪ್ರಜ್ಞೆಯ ಅನಿವಾರ್ಯತೆ ಈ ಹೊತ್ತಿನ ಅಗತ್ಯ. ಡಾ. ಲಿಂಗದಹಳ್ಳಿ ಹಾಲಪ್ಪ ಈ ನಿಟ್ಟಿನಲ್ಲಿ ಅಭಿನಂದನಾರ್ಹರು.

ಆ ಜಾಗೃತಿಯನ್ನು, ಸಂಪ್ರದಾಯ ಮಹತ್ವವನ್ನು ಅವರು ಹೇಳಿದಂತೆ ಹೇಳಬಹುದಾದರೆ ಅಕ್ಷರಬಲ್ಲವರಿಂದ ಪುರಾಣಗಳು ಹುಟ್ಟಿ ಇತಿಹಾಸವನ್ನು ಮರೆಮಾಚುತ್ತವೆ. ಆದರೆ ಪರಂಪರಾಗತ ಆಚರಣೆಗಳು ಇನ್ನೂ ಉಳಿದುಕೊಂಡು ಬಂದು ಐತಿಹಾಸಿಕ ಸತ್ಯವನ್ನು ಅನಾವರಣಗೊಳಿಸಿವೆ.

ಎಚ್.ಕೆ. ನರಸಿಂಹಮೂರ್ತಿ

೩೭. ಜನಪದ ಕಥಾಲೋಕ

ಜನಪದ ಕಥಾಲೋಕ, ಡಾ. ಕೆ.ಆರ್. ಸಂಧ್ಯಾರೆಡ್ಡಿ, ಶಶಿ ಪಬ್ಲಿಕೇಷನ್ಸ್, ಜಾಲಮಂಗಲ, ರಾಮನಗರ, ೨೦೧೨, ಪುಟ–೨೫೬+೭, ಬೆಲೆ ರೂ. ೧೭೫/-

ಚೈತನ್ಯದ ಚಿಲುಮೆಯಾದ ಜಾನಪದ ಸಾಹಿತ್ಯದಲ್ಲಿ ಜನಪದ ಕಥಾ ಸಾಹಿತ್ಯ ಎಂದಿಗೂ ಬತ್ತದ ಜೀವನದಿ. ಇದು ಜೀವನಾನುಭವದ ಗಣಿಯೂ ಆಗಿದ್ದು. ಬಹಳ ಚರ್ಚಿತ ಹಾಗೂ ಎಲ್ಲರಿಗೂ ಬಹು ಹತ್ತಿರವಾದ ಸಾಹಿತ್ಯ ಪ್ರಕಾರವಾಗಿದೆ. ಆಧುನಿಕತೆಯ ಸಂದರ್ಭದಲ್ಲಿ ಮರೆಯಾಗುತ್ತಿರುವ ಜಾನಪದ ಕತೆಗಳನ್ನು ಶ್ರಮವಹಿಸಿ ಪ್ರೀತಿಯಿಂದ ಸಂಗ್ರಹಿಸುತ್ತಿರುವುದು ಒಂದು ಕಡೆಯಾದರೆ, ಅಂತಹ ಸಂಗ್ರಹಗಳಲ್ಲಿನ ಕತೆಗಳನ್ನು ವಿವಿಧ ನೆಲೆಗಳಲ್ಲಿ, ದೃಷ್ಟಿಕೋನಗಳಲ್ಲಿ ಅಭ್ಯಸಿಸುತ್ತಿರುವ ಕ್ರಮ ಇನ್ನೊಂದು ಬಗೆಯಾಗಿದೆ. ಇಂತಹ ಅಧ್ಯಯನಗಳ ಸಾಲಿಗೆ ಸೇರುವಂತಹುದು ಡಾ.ಕೆ.ಆರ್.ಸಂಧ್ಯಾರೆಡ್ಡಿಯವರ ಕೃತಿಯಾದ 'ಜಾನಪದ ಕಥಾಲೋಕ'.

ಜನಪದ ಕಥೆಗಳ ಅಧ್ಯಯನ, ಸಂಶೋಧನೆ ನಡೆಸುವವರಿಗೆ ಅತ್ಯಗತ್ಯವಾಗಿ ಬೇಕಾದ ಅಮೂಲ್ಯ ಕೃತಿಯಾಗಿರುವ ಇದು ೨೦೧೨ರಲ್ಲಿ ಪ್ರಥಮ ಮುದ್ರಣವನ್ನು ಕಂಡಿದ್ದು, ಇದನ್ನು ಲೇಖಕರು ತಮ್ಮ ಗುರುಗಳಾದ ಸಿ.ಪಿ.ಕೆ. ಹಾಗೂ ರಾಗೌರವರಿಗೆ ಅರ್ಪಣೆ ಮಾಡಿದ್ದಾರೆ.

ಈ ಕೃತಿಯಲ್ಲಿ ಒಟ್ಟು ೧೮ ಲೇಖನಗಳಿದ್ದು, ಲೇಖಕರೇ ಹೇಳಿಕೊಳ್ಳುವಂತೆ "ಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ ನಾನು ಜಾನಪದ ಸಂಬಂಧವಾಗಿ ಬರೆಯುತ್ತ ಬಂದಿರುವ ಲೇಖನಗಳ ಪೈಕಿ, ಜನಪದ ಕಥೆಗಳಿಗೆ ಸಂಬಂಧಿಸಿದ ಕೆಲವು ಲೇಖನಗಳನ್ನು ಮಾತ್ರ ಈ ಸಂಕಲನದಲ್ಲಿ ಸೇರಿಸಲಾಗಿದೆ" ಎಂದಿದ್ದಾರೆ

ಕನ್ನಡ ಜನಪದ ಕಥೆಗಳು ಎಂಬ ಮೊದಲ ಲೇಖನದಲ್ಲಿ ಕನ್ನಡ ಜನಪದ ಕಥೆಗಳಲ್ಲಿ ಕಂಡುಬರುವ ಕಟ್ಟು ಕಥೆಗಳು, ರಮ್ಯ ಕಥೆಗಳು, ಮಾಟ ಮತ್ತು ಅದ್ಭುತ ಕಥೆಗಳು, ಪ್ರಾಣಿ ಕಥೆಗಳು, ಸೂತ್ರ ಕಥೆಗಳು, ಹಾಸ್ಯ ಕಥೆಗಳು, ವಂಚಕರ ಕಥೆಗಳು, ನೀತಿ ಕಥೆಗಳು, ಅವುಗಳ ಗುಣ, ಲಕ್ಷಣ ಆಶಯಗಳನ್ನು ಕುರಿತು ಚರ್ಚಿಸುತ್ತ ಕನ್ನಡ ಜನಪದ ಕಥೆಗಳ ಅಧ್ಯಯನದ ಇತಿಹಾಸ ಹಾಗೂ ಕನ್ನಡದಲ್ಲಿ ಇನ್ನು ಮುಂದೆ ನಡೆಯಬೇಕಾಗಿರುವ ಅಧ್ಯಯನದ ಮಾರ್ಗಗಳನ್ನು ಗುರುತಿಸಿದ್ದಾರೆ.

'ಆಶಯ ಮತ್ತು ಆಶಯ ಸೂಚಿ' ಎಂಬ ಲೇಖನದಲ್ಲಿ ಆಶಯ ಎಂದರೇನು? ಆಶಯವನ್ನು ಕುರಿತಾದ ಥಾಮ್ಸನ್ ಪರಿಕಲ್ಪನೆ, ಆ ಪರಿಕಲ್ಪನೆಯಲ್ಲಿನ ನ್ಯೂನತೆಗಳು ಹಾಗೂ ಕನ್ನಡದ ಕಥಾ ಸಂಕಲನಗಳಲ್ಲಿ ಸಿಗುವ ಕೆಲವು ಆಶಯಗಳು ಹಾಗೂ ಪ್ರಭೇದಗಳನ್ನು ಕುರಿತು ಚರ್ಚಿಸಿದ್ದಾರೆ.

'ವರ್ಗ ಮತ್ತು ವರ್ಗಸೂಚಿ' ಎಂಬ ಲೇಖನದಲ್ಲಿ ಜನಪದ ಕಥೆಗಳ ವರ್ಗ ಸೂಚಿಯನ್ನು ಕುರಿತು, ಆರ್ನೆ ಥಾಂಸನ್ನನ ಹಾಗೂ ಪ್ರಾಪ್‌ರವರ ಕಥೆಗಳ ವರ್ಗಸೂಚಿ ಯನ್ನು ಹಾಗೂ ಆ ವರ್ಗಸೂಚಿಯ ನ್ಯೂನತೆಗಳನ್ನು ಕುರಿತು ಚರ್ಚಿಸಿದ್ದಾರೆ. ಅಲ್ಲದೆ ಮಾದರಿಗಾಗಿ ಕನ್ನಡ ಜನಪದ ಕತೆಗಳ ವರ್ಗಸೂಚಿಯನ್ನು ಸಹ ನೀಡಿದ್ದಾರೆ.

'ಕನ್ನಡ ಜನಪದ ಕಥೆಗಳ ನಾಯಕ' ಎಂಬ ಲೇಖನದಲ್ಲಿ ಜನಪದ ಕಥಾನಾಯಕನನ್ನು ಕುರಿತು ಆತನ ಲಕ್ಷಣಗಳು, ಕಾರ್ಯದಕ್ಷತೆಯನ್ನು ತಿಳಿಸುತ್ತ, ಈ ಲೇಖನದಲ್ಲಿ ಜನಪದ ಕಥಾನಾಯಕನಿಗೆ ಸಂಬಂಧಿಸಿದಂತೆ ತಿಳಿಸಿರುವ ಅಂಶಗಳೆಲ್ಲವೂ ಕನ್ನಡದ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ಜನಪದ ಕಥಾನಾಯಕ ಹೇಗೆ ಚಿತ್ರಿಸಲ್ಪಟ್ಟಿದ್ದಾನೆ ಎಂಬುದಕ್ಕಷ್ಟೆ ಸೀಮಿತವಾಗಿರುವುದನ್ನು ತಿಳಿಸುತ್ತಾರೆ.

'ಕಥೆಗಳಲ್ಲಿ ಹೆಣ್ಣು' ಲೇಖನದಲ್ಲಿ ಕಥೆಗಳಲ್ಲಿ ಚಿತ್ರಿತವಾಗಿರುವ ಹೆಣ್ಣನ್ನು ಕುರಿತು ಚರ್ಚಿಸುತ್ತ ಜನಪದ ಸಂಸ್ಕೃತಿಯ ಮೇಲೆ ಮೇಲುಸಂಸ್ಕೃತಿಯ ನಡಾವಳಿಗಳನ್ನು ಪ್ರತಿಷ್ಠಾಪಿಸುವ ಪ್ರಯತ್ನ ನಡೆದಿರುವುದನ್ನು ಕುರಿತು ಬಹುಮುಖ್ಯವಾಗಿ ಚರ್ಚಿಸುತ್ತಾರೆ.

'ಸಾಹಿತ್ಯಿಕ ಅಧ್ಯಯನ' ಎಂಬ ಲೇಖನದಲ್ಲಿ ಕಥೆಗಳಲ್ಲಿನ ಶೈಲಿ, ತಂತ್ರ, ಒಲ್ರಿಕ್‌ರವರ ವಿಚಾರಗಳು, ಕ್ರಿಯೆ, ಪುನರಾವರ್ತನೆಯನ್ನು ಹಾಗೂ ಸಂಖ್ಯಾ ವಿಧಾನಗಳನ್ನು, ಕತೆಯ ನಿರೂಪಣೆಯಲ್ಲಿ ಕೆಲವು ನಿರ್ದಿಷ್ಟ ವಿಷಯಗಳನ್ನು ಹೇಳಲು ಪರಂಪರೆ ಯಿಂದಲೇ ಸಿದ್ಧವಾದ ಕೆಲವು ನುಡಿಗಟ್ಟುಗಳನ್ನು ಬಳಸುವುದನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.

'ಸಾಹಿತ್ಯಿಕ ಸೌಂದರ್ಯ' ಲೇಖನದಲ್ಲಿ ಕಥೆಯ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ವೈಯಕ್ತಿಕ ಪ್ರತಿಭೆಯನ್ನು ಬೆಳಗಿಸಲು ಕತೆಗಾರನಿಗಿರುವ ಅವಕಾಶವನ್ನು ಕುರಿತು ವಿಶ್ಲೇಷಿಸುತ್ತ ಕಥೆಯ ವಿಶಿಷ್ಟ ಸೌಂದರ್ಯಕ್ಕೆ ಕಾರಣವಾಗಿರುವ ಭಾಷೆ, ಲಯ, ಶೈಲಿಗಳನ್ನು, ಸೌಂದರ್ಯವನ್ನು ಕುರಿತು ಹೇಳುತ್ತಾರೆ. ಕಥೆಗಳಲ್ಲಿರುವ ಹಾಸ್ಯ, ಜೀವನಾನುಭವ, ಮಾಗಿದ ಬದುಕಿನ ಪರಿಪೂರ್ಣ ಚಿತ್ರಣಗಳು ಕಥೆಯಲ್ಲಿನ ಸಾಹಿತ್ಯಿಕ ಸೌಂದರ್ಯವನ್ನು ಕುರಿತು ಚರ್ಚಿಸುತ್ತಾರೆ.

'ಪ್ರಾಣಿ ಕಥೆಗಳು' ಎಂಬ ಲೇಖನದಲ್ಲಿ ಪ್ರಾಣಿ ಪಾತ್ರಗಳನ್ನು ಕುರಿತು, ಪ್ರಾಣಿಕತೆಗಳ ವರ್ಗೀಕರಣವನ್ನು ಕುರಿತು ಸ್ಟಿತ್ ಥಾಂಸನ್ನರ ವರ್ಗೀಕರಣದ ಹಿನ್ನೆಲೆಯಲ್ಲಿ ಚರ್ಚಿಸುತ್ತ ಪ್ರಾಣಿಕಥೆಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ನಡೆಯಬೇಕಾದ ಕಾರ್ಯಗಳ ಪಟ್ಟಿ ಮಾಡಿದ್ದಾರೆ.

'ಕೈಗಾರಿಕಾ ಕಥನಗಳು' ಲೇಖನದಲ್ಲಿ ಕೈಗಾರಿಕಾ ಕಥನಗಳು ರೂಪುಗೊಳ್ಳುವ ಪ್ರಕ್ರಿಯೆ ಮೇಲಧಿಕಾರಿಗಳ ಕಥೆಗಳು, ಮೇಲಧಿಕಾರಿ ಮತ್ತು ಅಧೀನ ಉದ್ಯೋಗಿ ಕಥೆಗಳು, ಒಬ್ಬ ಉನ್ನತಾಧಿಕಾರಿಯ ಪಕ್ಷಪಾತತನವನ್ನು ಕುರಿತ ಕಥೆ, ಬೆಸ್ತುಬಿದ್ದ ಅಧಿಕಾರಿಯ ಕಥೆ, ಕೀಟಲೆಯ ಕಥೆಗಳು, ಪೂರ್ವಗ್ರಹದ ಕತೆಗಳು, ಹಾಸ್ಯ–ಬಡಾಯಿಯ ಕತೆಗಳು, ಸಂಸ್ಥಾ ವೈಶಿಷ್ಟ್ಯದ ಕತೆಗಳು, ಅಪಘಾತದ ಕತೆಗಳು, ಅಪಘಾತದ ಒಂದು ತಮಾಷೆ ಕತೆ, ಕಾರ್ಖಾನೆಯ ಏಳುಬೀಳಿನ ಕತೆಗಳು, ಪಿತೂರಿಯ ಕತೆಗಳು, ಅನ್ವೇಷಣೆಯ ಕತೆಗಳು, ಕೈಗಾರಿಕಾ ಜನಪದ ಕತೆಗಳ ಉದ್ದೇಶ ಮತ್ತು ಪ್ರಯೋಜನ ಗಳನ್ನು ಕುರಿತು ಸುದೀರ್ಘವಾಗಿ ಚರ್ಚಿಸಿದ್ದಾರೆ.

ಕನ್ನಡದ ಈಡಿಪಸ್–ವಿಧಿಯಮ್ಮನ ಕಥೆ ಎಂಬ ಲೇಖನದಲ್ಲಿ ಗ್ರೀಕ್‌ನ ಈಡಿಪಸ್ ಕತೆ ಹಾಗೂ ಜನಪದ ಕತೆಯಾದ ವಿಧಿಯಮ್ಮನ ಕತೆಗಳನ್ನು ಕುರಿತು ಚರ್ಚಿಸುತ್ತ ಪರಸ್ಪರ ವಿರೋಧವಾದ ಸಂಗತಿಗಳನ್ನು ಪ್ರತಿಬಿಂಬಿಸುವ ಕಾರಣದಿಂದಲೇ ಕಥೆಗಳು ಜನಪದ ಸಂಸ್ಕೃತಿಯ ಒಳನೋಟಗಳನ್ನು ಒದಗಿಸುವ, ಅತ್ಯಂತ ಸ್ವಾರಸ್ಯಕರ ಆಕರವಾಗಿದೆ ಎಂಬುದನ್ನು ತಿಳಿಸುತ್ತಾರೆ.

'ಅತ್ತೆ ಸೊಸೆಯರ ಕತೆಗಳು' ಲೇಖನದಲ್ಲಿ ಕರ್ನಾಟಕದ ಎಲ್ಲ ಪ್ರದೇಶಗಳಲ್ಲೂ ಕಂಡುಬರುವ ಅತ್ತೆಸೊಸೆಯರ ಕಥೆಗಳನ್ನು ಕುರಿತು ಚರ್ಚಿಸುತ್ತ, ಅತ್ತೆಸೊಸೆಯರ ಕಥೆಗಳ ಸ್ವರೂಪ, ವಸ್ತುವಿನ ವಿಶ್ಲೇಷಣೆ ಮತ್ತು ಇವು ಹೇಗೆ ನಮ್ಮ ಸಂಸ್ಕೃತಿಯ ವಿಶಿಷ್ಟ ಪ್ರಕಾರವಾಗಿವೆ ಎಂಬುದರ ಅಧ್ಯಯನವೇ ಪ್ರಸ್ತುತ ಪ್ರಬಂಧದ ಉದ್ದೇಶ ಎಂದು ತಿಳಿಸುತ್ತಾರೆ.

'ಅಡಚಣೆಯ ಓಟ' ಲೇಖನದಲ್ಲಿ ಅಡಚಣೆಯ ಓಟವನ್ನು ಕುರಿತು, ಅದರಲ್ಲಿರುವ ಹಲವು ಪ್ರಭೇದಗಳನ್ನು ಕುರಿತು ಚರ್ಚಿಸುತ್ತಾರೆ.

'ಅಡುಗೂಲಜ್ಜಿ' ಎಂಬ ಲೇಖನದಲ್ಲಿ ಕನ್ನಡ ಕಥೆಗಳಿಗೆ ವಿಶಿಷ್ಟವಾದ ಹಾಗೂ ಕಥಾನಾಯಕನಿಗೆ ಯಾವಾಗಲೂ ಸಹಾಯಕಳಾಗಿ, ಕರುಣಾಮಯಿಯಾಗಿಯೇ ಕಾಣಿಸಿಕೊಳ್ಳುವ ಅಡುಗೂಲಜ್ಜಿಯ ಪಾತ್ರ ಪರಿಕಲ್ಪನೆಯನ್ನು ಕುರಿತು ಚರ್ಚಿಸಿದ್ದಾರೆ.

'ಉತ್ಪ್ರೇಕ್ಷೆಯ ಕತೆಗಳು' ಲೇಖನದಲ್ಲಿ ಉತ್ಪ್ರೇಕ್ಷೆಯೇ ಪ್ರಧಾನವಾಗಿ ಇವು ಅಸಾಧ್ಯವೆನ್ನುವಷ್ಟು ಮಟ್ಟಿಗಿರುವ ಇವುಗಳಲ್ಲಿ ಜನಪದರ ಅಗಾಧವಾದ ಕಲ್ಪನಾ ಸಾಮರ್ಥ್ಯ, ಪ್ರತಿಭೆ, ಜಾಣ್ಮೆ ಹಾಗೂ ಹಾಸ್ಯ ಪ್ರಜ್ಞೆಗಳಿರುವುದನ್ನು ಹಾಗೂ ಈ ಸೃಷ್ಟಿಯಲ್ಲಿ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ, ಪ್ರತಿಯೊಂದು ವಸ್ತುವಿಗೂ, ಪ್ರತಿಯೊಂದು ಜೀವಿಗೂ ವಿಶಿಷ್ಟವಾದ ಒಂದು ಶಕ್ತಿಯಿದೆ, ಸಾಮರ್ಥ್ಯವಿದೆ ಎಂಬುದನ್ನು ಧ್ವನಿಸುವ ಕಥೆಗಳನ್ನು ಕುರಿತು ಚರ್ಚಿಸುತ್ತಾರೆ.

'ಗಾದೆಯ ಕಥೆಗಳು' ಎಂಬ ಲೇಖನದಲ್ಲಿ ಗಾದೆಗಳ ಹಿಂದಿರುವ ಕಥೆಗಳನ್ನು ಕುರಿತು ಅಂತಹ ಕತೆಗಳು ಹುಟ್ಟುವ ಸಂದರ್ಭಗಳನ್ನು ಕುರಿತು, ಪಿ.ಕೆ. ರಾಜಶೇಖರ ಅವರ ಸಂಕಲನದಲ್ಲಿನ ಗಾದೆಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

'ಚಿತ್ರದುರ್ಗ ಜಿಲ್ಲೆಯ ಕಥೆಗಳ ವೈಶಿಷ್ಟ್ಯ' ಲೇಖನದಲ್ಲಿ ಜಿಲ್ಲೆಯ ಜನಪದ ಕತೆಗಳನ್ನು ಅಲ್ಲಿನ ಭಾಷೆ, ಆಡುನುಡಿಯ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ಇಲ್ಲಿನ ಪರಿಸರಕ್ಕೆ ವಿಶಿಷ್ಟವಾದ ಬೈಗುಳ ಪದಗಳನ್ನು ಕುರಿತು ವಿವರಿಸುತ್ತ, ಚಿತ್ರದುರ್ಗ ಜಿಲ್ಲೆಯಲ್ಲಿ ಸಂಗ್ರಹವಾಗಿರುವ ಜನಪದ ಕತೆಗಳನ್ನು ಕುರಿತು ಚರ್ಚಿಸಿದ್ದಾರೆ.

'ಜೀ.ಶಂ.ಪ ಜನಪದ ಕಥಾಸಂಕಲನಗಳು' ಎಂಬ ಲೇಖನದಲ್ಲಿ ಜೀ.ಶಂ.ಪ.ರವರೇ ಸ್ವತಃ ಸಂಗ್ರಹಿಸಿರುವ ನಾಲ್ಕು ಜನಪದ ಸಂಕಲನಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

'ರೂಪನಿಷ್ಠ ಅಧ್ಯಯನ' ಎಂಬ ಲೇಖನದಲ್ಲಿ ಕಥೆಗಳನ್ನು ರೂಪನಿಷ್ಠ ದೃಷ್ಟಿಯಿಂದ ಅಭ್ಯಸಿಸಿದ ಪ್ರಾಪ್‌ನ ವಿಚಾರಗಳನ್ನು ಕುರಿತು ಚರ್ಚಿಸುತ್ತ ಕನ್ನಡದ ಕಥೆಗಳಲ್ಲಿ ಕಂಡು ಬರುವ ಕ್ರಿಯೆ, ರೂಪನಿಷ್ಠ ಅಧ್ಯಯನದ ಕಡೆ ಹರಿಸಬೇಕಾದ ಗಮನವನ್ನು ಕುರಿತು ಚರ್ಚಿಸಿದ್ದಾರೆ. ಕೃತಿಯ ಕೊನೆಯಲ್ಲಿ ಲೇಖನಗಳ ಸಂದರ್ಭಸೂಚಿ, ಆಕರ ಕಥಾಸಂಕಲನಗಳು ಹಾಗೂ ಡಾ. ಕೆ.ಆರ್. ಸಂಧ್ಯಾರೆಡ್ಡಿಯವರ ಪ್ರಕಟಿತ ಕೃತಿಗಳ ವಿವರಗಳಿವೆ.

ಲಕ್ಷ್ಮೀಕಾಂತ ಗೌರಿಪುರ

೩೮. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಜಾನಪದೀಯತೆ

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಜಾನಪದೀಯತೆ, ಡಾ. ರಾಜೇಗೌಡ ಹೊಸಹಳ್ಳಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦೦೦೬, ೨೦೧೨, ಪುಟ–೨೪+೭೦+೪, ಬೆಲೆ ರೂ. ೫೦/-

ಶಿಷ್ಟ ಸಾಹಿತ್ಯ ಹುಟ್ಟಲು ಜನಪದ ಸಾಹಿತ್ಯವೇ ಮೂಲ ಪ್ರೇರಣೆಯಾಗಿರುತ್ತದೆಂಬುದಕ್ಕೆ ಬಿ.ಎಂ.ಶ್ರೀ.ಯವರು ಹೇಳಿರುವ 'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಮಾತು ಅಕ್ಷರಶಃ ಸತ್ಯವೆನಿಸುತ್ತದೆ. ಏನೇ ಸಾಹಿತ್ಯಿಕವಾಗಿ ಮಾತನಾಡಿದರೂ ಅದು ಜನಪದದ ಮೂಲ ಸೆಲೆಯಿಂದಲೇ ಹೊರಹೊಮ್ಮುತ್ತದೆ. ಪ್ರಾಚೀನದಿಂದಲೇ ಶಿಷ್ಟಸಾಹಿತ್ಯದಲ್ಲಿ ಅದರಲ್ಲೂ ಬಾದಾಮಿ ಶಾಸನ(ಕ್ರಿ.ಶ. ೭೦೦)ದಲ್ಲಿ ತ್ರಿಪದಿಯ ಮೂರು ಪದ್ಯಗಳು ದೊರೆತಿರುವುದನ್ನು ಗಮನಿಸಿದರೆ, ಜನಪದ ಮಟ್ಟುಗಳು ರೂಢಿಯಲ್ಲಿದ್ದವು ಎಂಬುದನ್ನು ಗುರುತಿಸಬಹುದು. ಹಾಗೆಯೇ ಮುಂದುವರೆದು ಒನಕೆಹಾಡು, ಬೆದಂಡೆ, ಚೆತ್ತಾಣದಂತಹ ಜನಪದಕಾವ್ಯ ರೂಪಗಳು ದೊರೆತಿರುವುದು ಶಿಷ್ಟಕ್ಕಿಂತ ಜಾನಪದಕ್ಕೆ ಹೆಚ್ಚು ಒಲವಿತ್ತು ಎಂಬುದನ್ನು ಕಾಣುತ್ತೇವೆ. ಕವಿಗಳು ಮಾರ್ಗವನ್ನು ಅನುಸರಿಸುತ್ತಿದ್ದರೂ ಎಲ್ಲೋ ಒಂದು ಕಡೆ ದೇಸಿಯ ಅಂಶಗಳಿಗೆ ಒತ್ತು ಕೊಡುತ್ತಿದ್ದರೆಂಬುದಕ್ಕೆ ಕವಿರಾಜಮಾರ್ಗಕಾರನ 'ಕುರಿತೋದದೆಯುಂ

ಕಾವ್ಯಪ್ರಯೋಗ ಪರಿಣತಿ ಮತಿಗಳ್', ಪಂಪನ 'ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳ್ ತಳ್ವುದು', ರನ್ನನ 'ಪೊಸದೇಶಿಯ ಬೆಡಗಿನದು' ಮಾತುಗಳು ಜನಪದ ಅಂಶಗಳನ್ನು ಸಾಕ್ಷೀಕರಿಸುತ್ತವೆ.

ಡಾ. ರಾಜೇಗೌಡ ಹೊಸಹಳ್ಳಿಯವರು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಜಾನಪದೀಯತೆಯ ಹುಡುಕಾಟವನ್ನು ವಡ್ಡಾರಾಧನೆಯ ಕೃತಿಯಿಂದ ಮುದ್ದಣನ ರಾಮಾಶ್ವಮೇಧದವರೆಗೆ ಹುಡುಕಾಟ ನಡೆಸಿದ್ದಾರೆ. ಕೃತಿಯ ಪೀಠಿಕಾ ಭಾಗದಲ್ಲಿ ಕವಿಗಳಲ್ಲಿನ ಜಾನಪದೀಯತೆಯ ಆಪ್ತತೆಯು ಹೇಗೆ ಸುಪ್ತಗೊಂಡಿದೆಂಬುದನ್ನು ತಿಳಿಸುತ್ತಾ ಶಿಷ್ಟ ಮತ್ತು ದೇಸಿಯ ನಡುವಿನ ತುಲನೆಯನ್ನು ಹೇಳುತ್ತಲೇ ದೇಸಿಯು ಕಣ್ಮರೆಯ ಆತಂಕದಲ್ಲಿರುವಾಗ ಅದರ ಬಗೆಗಿನ ಜಾಗೃತಿ ಮತ್ತು ಅರಿವಿನ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ. ಲೇಖಕರೇ ಹೇಳುವಂತೆ "ನಮ್ಮ ಕನ್ನಡ ಜಾನಪದವನ್ನು ನಮ್ಮ ಕವಿಗಳು ತಮ್ಮ ಕಾವ್ಯಗಳಲ್ಲಿ ಆದಿಕಾಲದಿಂದ ನವೋದಯ ಕಾಲದ ಆರಂಭದವರೆಗೆ ಹೇಗೆ ಬಳಸಿಕೊಂಡಿದ್ದಾರೆಂದು ಅರಿಯುವುದು ಸಹ ಈ ಕೃತಿಯ ಒಂದು ಪ್ರಧಾನ ಅಂಶ" ಎಂದಿದ್ದಾರೆ.

ಎಲ್ಲಾ ಧರ್ಮೀಯ ಕವಿಗಳು ತಮ್ಮನ್ನೂ ಧರ್ಮಕ್ಕೆ ಸಮರ್ಪಿಸಿಕೊಂಡಿದ್ದರೂ ಆ ಧರ್ಮವನ್ನು ಎಲ್ಲೋ ಒಂದು ಕಡೆ ಮೀರಿ ನಡೆಯುವುದರೊಂದಿಗೆ ತಾವಿರುವ ನೆಲವನ್ನು ಮತ್ತು ಅಲ್ಲಿನ ಜನಪದ ಸಂಸ್ಕೃತಿಯನ್ನು ಕಾವ್ಯಗಳಲ್ಲಿ ತರುವುದನ್ನು ಮರೆತಿಲ್ಲ. ಬಹಳ ಶ್ರೇಷ್ಠವೆನಿಸುವ ಶಿಷ್ಟ ಆಕರಗಳನ್ನು ಬಳಸಿಕೊಂಡರೂ ಜನಾಂಗದ ಗಾದೆ, ಒಗಟು, ನುಡಿಗಟ್ಟು, ಆಚಾರ-ವಿಚಾರ, ಆಚರಣೆ, ಸಂಪ್ರದಾಯ, ಸಂಸ್ಕೃತಿಯನ್ನು ಕವಿಗಳ ಕಾವ್ಯಗಳಲ್ಲಿ ಹೇಳಿರುವುದನ್ನು ಈ ಕೃತಿಯಲ್ಲಿ ಲೇಖಕರು ಗುರುತಿಸಿದ್ದಾರೆ.

ಅಧ್ಯಾಯ ಎರಡರಲ್ಲಿ ಕನ್ನಡ ಪ್ರಾಚೀನ ಗದ್ಯ ಹಾಗೂ ಜನಪದ ಕಥಾಮಂಜರಿಯಲ್ಲಿ ಗದ್ಯ ಕೃತಿ ವಡ್ಡಾರಾಧನೆಯ ಹತ್ತೊಂಬತ್ತು ಕಥೆಗಳಲ್ಲಿ ಜನಪದರ ಬದುಕಿನ ಒಟ್ಟು ಅನುಭವಗಳನ್ನು ಸೆರೆಹಿಡಿದ್ದಾರೆಂಬುದನ್ನು ಲೇಖಕರು ಒಂದೊಂದಾಗಿ ಗುರುತಿಸುತ್ತಾ ಹೋಗಿದ್ದಾರೆ. ಇಲ್ಲಿ ಬರುವ ನಾಣ್ನುಡಿಗಳು, ನುಡಿಗಟ್ಟುಗಳು, ಕಥೆಯ ವಿವಿಧ ಆಯಾಮದಲ್ಲಿ ಅಡಗಿರುವ ಜನಪದರ ಆಚಾರ ವಿಚಾರಗಳು, ಸಂಸ್ಕೃತಿಯ ಹಂದರಗಳನ್ನು ಇಲ್ಲಿ ಹೇಳಿದ್ದಾರೆ.

ಅಧ್ಯಾಯ ಮೂರರಲ್ಲಿ ಚಂಪೂಕಾವ್ಯಗಳು, ಕಥನಗಳು ಮತ್ತು ಜಾನಪದೀಯತೆ ಯಲ್ಲಿ ಪಂಪ, ರನ್ನ, ದುರ್ಗಸಿಂಹ, ನಯಸೇನ, ಬ್ರಹ್ಮಶಿವ, ಜನ್ನ, ನೇಮಿಚಂದ್ರ, ನಾಗರಾಜ ಕವಿಗಳ ಕಾವ್ಯಗಳಲ್ಲಿ ಜಾನಪದ ಅಂಶಗಳನ್ನು ಎಲ್ಲೆಲ್ಲಿ ಬಳಸಿಕ್ಕೊಂಡಿದ್ದಾರೆ, ಏಕೆ ಬಳಸಿಕೊಂಡಿದ್ದಾರೆ ಎಂಬುದನ್ನು ಉದಾಹರಣೆ ಸಹಿತ ಚರ್ಚಿಸುತ್ತಾ ಕವಿ ಪಂಪ ದೇಶಿ ಭಾಷೆಯ ಬೆಡಗನ್ನು ಹೇಗೆ ಅರಿತಿದ್ದಾನೆನ್ನುವುದನ್ನು ವಿವರಿಸಿದ್ದಾರೆ. ಈ ಕೃತಿಯಲ್ಲಿನ ಗಾದೆಗಳ ಪಟ್ಟಿಯನ್ನೇ ಕೊಡುತ್ತಾರೆ. ಜನಪದ ಆಟಗಳಾದ ಗುಳ್ಳೆಗೊಟ್ಟಿ,

ಉಳಿಸೆಂಡು, ಮರಗೆರಸಿಯಂತಹ ಆಟ ಮೊದಲಾದವುಗಳನ್ನು ಚರ್ಚಿಸುತ್ತಾರೆ. ಕೂಡಾವಳಿಯ ವಿಚಾರ, ಹಬ್ಬ ಹರಿದಿನಗಳ ವಿಚಾರ, ಗ್ರಾಮ್ಯಸಂಸ್ಕೃತಿಯ ಚಿತ್ರಣ, ವಿಜಯಯಾತ್ರೆ ಆಚರಿಸುವ ಆಚರಣೆಗಳು, "ಅಕ್ಕಿಗೊಟ್ಟು ಮಡಗೂಳುಣ್ಬಂದಮಂ ಪೋಲದೆ", "ಸೋರ್ದುದು ಕೊಳಗೊಂಡ ಗರ್ವರಸಂ" ಎನ್ನುವ ಜಾನಪದೀಯ ತಿಳಿವಳಿಕೆಗಳನ್ನು ಕಾಣಬಹುದು.

ಅಧ್ಯಾಯ ಐದರಲ್ಲಿ ವಚನ ಸಾಹಿತ್ಯ ಮತ್ತು ಜಾನಪದೀಯತೆಯಲ್ಲಿ ವಚನಕಾರರು ಸಮುದಾಯದಲ್ಲಿದ್ದು ಅನುಭಾವಿಕ ನೆಲೆಯಲ್ಲಿ ಕಾಯಕದ ಮಹತ್ವ ಮೆರೆಯುತ್ತಾ ಏಕದೇವನಿಗೆ ನಿಷ್ಠರಾಗುತ್ತಾ ಸಮಾಜದ ಅಸಮಾನತೆಯನ್ನು ತಿದ್ದುತ್ತಾ, ಕೆಳವರ್ಗದ ಕುಂಬಾರ, ಬೇಡ, ಬೆಸ್ತ, ಜಾಡ, ಬಡಗಿ, ಚೌರದವ ಹೀಗೆ ಕೊನೆಗೆ ಸೂಳೆಯ ರಂಥವರೆಲ್ಲರೂ ಸೇರಿ ಅನುಭವದ ಚರ್ಚೆಯಲ್ಲಿ ಧೈರ್ಯವಾಗಿ ಭಾಗವಹಿಸುವುದನ್ನು ಚರ್ಚಿಸುತ್ತಾರೆ. ವಚನಕಾರರು ವೈಚಾರಿಕ ನೆಲೆಯಲ್ಲಿದ್ದು, ಜನಪದರ ಮೂಢನಂಬಿಕೆ ಕಂದಾಚಾರಗಳ ಬಗೆಗೆ ಅಲ್ಲಿ ವಿರೋಧದ ಚಿತ್ರಣವಿದೆ.

ಅಧ್ಯಾಯ ಆರರಲ್ಲಿ ಮಧ್ಯಕಾಲೀನ ಸಾಹಿತ್ಯ ಮತ್ತು ಜಾನಪದೀಯತೆಯಲ್ಲಿ ಹರಿಹರನಿಂದ ಹಿಡಿದು ಕುಮಾರವ್ಯಾಸನವರೆಗೆ ಚರ್ಚಿಸಿದ್ದಾರೆ. ಹರಿಹರ ದೇಸಿಕವಿ. ಸಾಮಾನ್ಯವಾಗಿ ಸಮುದಾಯದಲ್ಲಿ ಬದುಕಿದ ಶಿವಶರಣರನ್ನು ನೆಲಕ್ಕೆ ಹೇಗೆ ಒಗ್ಗಿಕೊಂಡು ಬದುಕಿದರೆಂಬುದನ್ನು ಚರ್ಚಿಸುತ್ತಾ ರಗಳೆಯಲ್ಲಿ ಕಂಡು ಬರುವ ಗಾದೆಗಳು, ನುಡಿಗಟ್ಟುಗಳ ಬಳಕೆಯನ್ನು ಹೇಳಿದ್ದಾರೆ. ರಾಘವಾಂಕನ ಕಾವ್ಯಗಳಲ್ಲಿಯೂ ನಾಣ್ನುಡಿಗಳು, ನುಡಿಗಟ್ಟುಗಳು ಹೆಚ್ಚು ಕಾಣಸಿಗುತ್ತವೆ. ಮತ್ತೊಬ್ಬ ದೇಸಿ ಕವಿಯಾದ ಕುಮಾರವ್ಯಾಸನ ಕಾವ್ಯದಲ್ಲಿನ ಉತ್ಕೃಷ್ಟ ಜಾನಪದೀಯತೆಯ ವಿವರಗಳನ್ನು ಸ್ಥೂಲವಾಗಿ ಚರ್ಚಿಸಿದ್ದಾರೆ.

ಅಧ್ಯಾಯ ಏಳರಲ್ಲಿ ದಾಸ ಸಾಹಿತ್ಯ ಇತ್ಯಾದಿ ಮತ್ತು ಜಾನಪದೀಯತೆಯಲ್ಲಿ ಆಸ್ತಿಕವಾದದಲ್ಲಿ ಸಮುದಾಯದ ಸಮಾಜ ನಿರ್ಮಾಣ ಸಾಧ್ಯವೆಂಬುದನ್ನು ಜನಪದರಲ್ಲಿ ದಾಸಪಂಥ ಹೇಗೆ ಒಡಮೂಡಿತ್ತೆಂಬುದನ್ನು ಲೇಖಕರು ಚರ್ಚಿಸುತ್ತಾರೆ. ಸರ್ವಜ್ಞನು ಸಮುದಾಯದೊಳಗಿದ್ದು, ಅಲ್ಲಿ ಬಳಸುವ ಎಲ್ಲಾ ಜನಪದ ಸಾರವನ್ನು ತನ್ನ ವಚನಗಳಲ್ಲಿ ಕಟ್ಟಿದ್ದಾನೆ. ಇಲ್ಲಿ ಬಳಕೆಯಾಗಿರುವ ಗಾದೆಗಳು, ಒಗಟುಗಳು, ನುಡಿಗಟ್ಟುಗಳು ಪ್ರಾಮುಖ್ಯ ವಾಗಿವೆ. ಜನಪದ ಕೃಷಿ, ಬದುಕು, ಮಳೆ, ನಂಬಿಕೆ, ಮೂಢನಂಬಿಕೆ ಹೀಗೆ ಗ್ರಾಮೀಣ ಬದುಕಿನ ಸರ್ವ ಪದರಗಳಲ್ಲೂ ಸರ್ವಜ್ಞ ಜನಪದರು ಒಂದೇ ನೆಲೆಯಲ್ಲಿ ಕಾಣುವಷ್ಟರ ಮಟ್ಟಿಗೆ ಕಂಡು ಜನಪದ ಕವಿಯೆನಿಸಿದ್ದಾನೆ. ಇವರಂತೆ ಸಂತ ಶಿಶುನಾಳ ಷರೀಫ, ನಂಜುಂಡ, ರತ್ನಾಕರವರ್ಣಿ, ದೇವಚಂದ್ರ, ಮುದ್ದಣನಂಥವರು ಜಾನಪದ ಸೊಗಡಿನ ಕವಿಗಳಾಗಿರುವುದನ್ನು ಅವರ ಕೃತಿಗಳನ್ನು ಒರೆಹಚ್ಚಿ ಅತಿಸೂಕ್ಷ್ಮವಾಗಿ ಚರ್ಚಿಸಿದ್ದಾರೆ.

ಒಟ್ಟಾರೆ ಪ್ರಾಚೀನ ಕವಿಗಳಲ್ಲಿ ಜಾನಪದ ಪ್ರೇಮವೆಷ್ಟಿತ್ತೆಂಬುದನ್ನು ಕೃತಿಗಳ ಅಗಾಧ ಓದಿನ ಆಳದ ಹಿನ್ನೆಲೆಯಲ್ಲಿ ಸೂಕ್ಷ್ಮವಾದ ರೀತಿಯಲ್ಲಿ ಚರ್ಚಿಸಿದ್ದಾರೆ.

ಕೆ.ವಿ. ಮುದ್ದವೀರಪ್ಪ

೩೯. ಭಾರತೀಯರ ಜೀವಂತ ರಂಗೋಲಿ ಕಲೆ

ಕರಾವಳಿ ಕರ್ನಾಟಕದ ರಂಗೋಲಿ ಕಲೆ, ಡಾ. ಭಾರತಿ ಮರವಂತೆ, ಪುಸ್ತಕ ನಿಧಿ, ಗಾವಳಿ ಶಾಲೆ ಹತ್ತಿರ, ಅಂಚೆ ಹಳ್ಳಾಡಿ- ಹರ್ಕಾಡಿ, ಕುಂದಾಪುರ, ೨೦೧೨, ಪುಟ-೨೬೪+೩೨, ಬೆಲೆ ರೂ. ೩೦೦/-

ಬಹು ಸಂಸ್ಕೃತಿಗಳ ತವರಾದ ಭಾರತದಲ್ಲಿ ರಂಗೋಲಿ ಕಲೆ ಭಾರತೀಯತೆಯನ್ನು ಪ್ರತಿನಿಧಿಸುವ ಸಾಂಪ್ರದಾಯಿಕ ಕಲೆ. ಆರಾಧನಾ ಪ್ರಧಾನ ಕಲೆಯಾದ ರಂಗೋಲಿ ಭಾರತೀಯರ ಬದುಕಿನಲ್ಲಿ ದೈವಶ್ರದ್ಧೆಯ ನೆರಳಲ್ಲಿ ಬೆಳೆದು ನಂಬಿಕೆ ವಿಶ್ವಾಸಗಳಿಗೆ ಕಾರಣವಾಗಿ ಅಲಂಕಾರ ಕಲೆಯಾಗಿ ಮಾರ್ಪಟ್ಟು ಸಂಭ್ರಮ ಸಂತೋಷಗಳನ್ನು ಹೆಚ್ಚಿಸುತ್ತಾ ನಿರಂತರವಾಗಿ ಭಾರತೀಯರೊಂದಿಗೆ ಬದುಕುತ್ತಿರುವ ಜೀವಂತ ಕಲೆ ಎನಿಸಿದೆ.

ಒರಿಸ್ಸ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗುಜರಾತ್, ರಾಜಸ್ಥಾನ, ಬಂಗಾಳ, ತಮಿಳುನಾಡು ಮೊದಲಾದ ಭಾರತದ ವಿವಿಧ ರಾಜ್ಯಗಳಲ್ಲಿ ಕೋಲಂ ಅಲ್ಪನಾ, ಮಂಡನಾ, ಸಾಥೀಯಾ, ಮುಗ್ಗು ಝೆಟ್ಟಿ, ರಂಗೋಳಿ ಎಂಬ ವಿಧ ವಿಧ ಹೆಸರುಗಳಲ್ಲಿ ರಂಗೋಲಿ ಕಲೆ ವ್ಯಾಪಕವಾಗಿ ಕಾಣಸಿಗುತ್ತದೆ. ಡಾ. ಭಾರತಿ ಮರವಂತೆಯವರು ಕರ್ನಾಟಕದಲ್ಲಿ ಅದರಲ್ಲೂ ಕರಾವಳಿ ಕರ್ನಾಟಕದ ವೈಶಿಷ್ಟ್ಯಪೂರ್ಣವಾದ ರಂಗೋಲಿ ಕಲೆಯನ್ನು 'ಕರಾವಳಿ ಕರ್ನಾಟಕದ ರಂಗೋಲಿ ಕಲೆ' ಎಂಬ ಪುಸ್ತಕದಲ್ಲಿ ಸವಿವರವಾಗಿ ಅಧ್ಯಯನ ನಡೆಸಿದ್ದಾರೆ. ಸಂಶೋಧನಾ ಕೃತಿಯೊಂದಕ್ಕೆ ಇರಬೇಕಾದ ಗಂಭೀರತೆ ವ್ಯಾಪಕತೆ, ಸಂಶೋಧನಾ ದೃಷ್ಟಿಯನ್ನು ಈ ಕೃತಿಯ ಪ್ರತಿ ಅಧ್ಯಾಯದಲ್ಲೂ ಗಮನಿಸ ಬಹುದು. ಭಾರತೀಯ ಸಾಂಪ್ರದಾಯಿಕ ಕಲೆಯೊಂದನ್ನು ಐತಿಹಾಸಿಕ ಹಿನ್ನೆಲೆಯೊಂದಿಗೆ ವಿವರಿಸುವ ಜೊತೆಗೆ ವರ್ತಮಾನದಲ್ಲಿ ರಂಗೋಲಿಯ ಸ್ಥಾನಮಾನ, ಭವಿಷ್ಯತ್ತಿನಲ್ಲಿ ರಂಗೋಲಿ ಎದುರಿಸಬೇಕಾದ ಸವಾಲುಗಳ ಬಗ್ಗೆ ಈ ಕೃತಿ ವಿಶ್ಲೇಷಿಸುತ್ತದೆ. ಮಾನವನ ಬದುಕಿನ ಸಂಭ್ರಮದಲ್ಲಿ ರಂಗೋಲಿಯ ಸ್ಥಾನವನ್ನು ವಿಶೇಷವಾಗಿ ಗುರುತಿಸಿ ರಂಗೋಲಿ ಕಲೆಗೆ ಗೌರವಯುತ ಸ್ಥಾನವನ್ನು, ಮಾನ್ಯತೆಯನ್ನು ಈ ಅಧ್ಯಯನ ನೀಡುವಲ್ಲಿ ಯಶಸ್ವಿಯಾಗಿದೆ.

ರಂಗೋಲಿ ಕಲೆಯನ್ನು ಆವಿಷ್ಕರಿಸಿದ ಮಾನವನ ಮಾನಸಿಕ ವಿಚಾರದಿಂದ ಹಿಡಿದು ಅದಕ್ಕಾಗಿ ಆತ ಆಯ್ದುಕೊಂಡ ಆಕರ-ಪರಿಕರಗಳ ಜೊತೆಗೆ ಮಾನವನ

ಬದುಕಿನ ಸ್ಥಿತ್ಯಂತರಗಳ ಜೊತೆಗೆ ರಂಗೋಲಿ ಕಲೆಯೂ ಪಡೆದುಕೊಂಡ ವಿವಿಧ ವಿನ್ಯಾಸಗಳನ್ನು ಪ್ರಾಚೀನರಿಂದ, ಆಧುನಿಕರವರೆಗೆ ಈ ಕೃತಿ ಸಂಶೋಧನಾ ದೃಷ್ಟಿಯಲ್ಲಿ ಚರ್ಚಿಸಿರುವುದು ಮೌಲಿಕವಾಗಿದೆ. ರಂಗೋಲಿ ಅಲ್ಪವಾದುದು ಎಂದು ನಿರ್ಲಕ್ಷ್ಯಕ್ಕೆ ಒಳಗಾಗಿ ವಿರಳ ಅಧ್ಯಯನಕ್ಕೆ ಕಾರಣವಾದ ಈ ಹೊತ್ತಿನಲ್ಲಿ ರಂಗೋಲಿ ಕುರಿತ ಕ್ಷೇತ್ರಕಾರ್ಯ ಆಧಾರಿತ ಈ ಅಧ್ಯಯನ ಮುಂದಿನ ಅಧ್ಯಯನಗಳಿಗೆ ನೆರವಾಗಿರುವುದು ಕೃತಿಯ ಹೆಗ್ಗಳಿಕೆಯಾಗಿದೆ.

ಮಾನವನ ಭಾವನೆಗಳ ಮೂರ್ತ ಅಭಿವ್ಯಕ್ತಿಗಳಲ್ಲಿ ಕೌಶಲ್ಯಪೂರ್ಣ ಅಭಿವ್ಯಕ್ತಿ ರಂಗೋಲಿ ಕಲೆ. ದೇವರನ್ನು ಒಲಿಸಿಕೊಳ್ಳುವ ಆರಾಧನಾ ಕಲೆಯಾಗಿ ಆರಂಭಗೊಂಡು ಸಂತೋಷವನ್ನು ಹೆಚ್ಚಿಸುವ ಅಲಂಕಾರ ಕಲೆಯಾಗಿ ಬೆಳೆದು ರಂಗೋಲಿ ಕಲೆ ಜನಪದ ಬದುಕಿನೊಳಗೆ ಬದುಕಿನ ತತ್ವವಾಗಿ ಅಳವಟ್ಟಿದೆ. ಧರ್ಮ ಶ್ರದ್ಧೆಯ ನೆರಳಲ್ಲಿ ಅರಳಿದ್ದ ರಂಗೋಲಿ ಕಲೆ ಇಂದು ಉದಾರೀಕರಣ, ಜಾಗತೀಕರಣ, ವೈಚಾರಿಕ ಕಾರಣಗಳಿಂದಾಗಿ ಅಳಿಯದೆ ಜನಪ್ರಿಯ ಕಲೆಯಾಗಿ ಉಳಿದಿರುವ ಬಗ್ಗೆ ಕೃತಿ ಚರ್ಚಿಸುತ್ತದೆ. ಇಂದು ಅಳಿವಿನ ಅಂಚಿಗೆ ತಲುಪುತ್ತಿರುವ ಜಾನಪದ ಕಲೆಗಳ ಉಳಿಯುವಿಕೆ ಈ ಅಧ್ಯಯನದ ಮೂಲಕ ಹೊಸ ಸಾಧ್ಯತೆಗಳು ಸಿಗುತ್ತವೆ.

ಮಾನವನ ಕಲಾರಾಧನೆ ವಿಕಾಸಗೊಂಡ ರಂಗೋಲಿ ಮೂಲಕ ಪಡೆದುಕೊಂಡ ವಿವಿಧ ಮುಖಗಳ ಪರಿಚಯ ಮೊದಲ ಅಧ್ಯಾಯದಲ್ಲಿದೆ. ರಂಗೋಲಿ ಕಲೆಯ ಎಲ್ಲೆ, ಸಂಸ್ಕೃತಿಗಳ ಗಡಿರೇಖೆಗಳನ್ನು ಮೀರಿ ನಿಂತರೂ ಆಯಾ ಸಂಸ್ಕೃತಿ ಸಮುದಾಯ ಪ್ರಾದೇಶಿಕ ಹಿನ್ನೆಲೆಯಲ್ಲಿ ಕಲೆ ತನ್ನದೇ ರೀತಿಯಲ್ಲಿ ವೈಶಿಷ್ಟ್ಯಪೂರ್ಣವಾಗಿದೆ. ಕರಾವಳಿ ಕರ್ನಾಟಕದ ಐತಿಹಾಸಿಕ, ಸಾಂಸ್ಕೃತಿಕ, ಭೌಗೋಳಿಕ ವಿಶಿಷ್ಟತೆಗಳು ರಂಗೋಲಿ ಕಲೆಯನ್ನು ಹೇಗೆ ಶ್ರೀಮಂತಗೊಳಿಸಿದೆ ಎಂಬುದನ್ನು ಈ ಅಧ್ಯಾಯ ವಿವರಿಸುತ್ತದೆ.

ಮುಂದಿನ ಅಧ್ಯಾಯದಲ್ಲಿ ರಂಗೋಲಿ ಕಲೆಯ ಮೂಲ ಅರಸುವಿಕೆಯಲ್ಲಿ ಪ್ರಾಚೀನ ಗುಹಾಚಿತ್ರಗಳು, ಬಂಡೆಕಲ್ಲುಗಳ ಚಿತ್ರಗಳು ಪ್ರಧಾನ ಎಂಬುದನ್ನು ಲೇಖಕಿ ತಮ್ಮ ಸಂಶೋಧನಾ ದೃಷ್ಟಿಯಿಂದ ವಿವರಿಸುತ್ತಾರೆ. ಆದರೆ ರಂಗೋಲಿ ಪದಕ್ಕೆ ಕೊಡುವ ನಿಷ್ಪತ್ತಿಗಳು ಈ ಮೂಲದ ಬಗ್ಗೆ ಸಂಶಯಾತ್ಮಕ ಪ್ರಶ್ನೆಗಳನ್ನು ಎತ್ತುತ್ತವೆ. ಇಲ್ಲಿ ಚರ್ಚಿಸಿ ತೀರ್ಮಾನಕ್ಕೆ ಬರುವ ಅವಕಾಶವನ್ನು ಲೇಖಕಿ ಕೈಚೆಲ್ಲಿದ್ದಾರೆ. ಬಹುಶಃ ರಂಗೋಲಿಯನ್ನು ಚಿತ್ರಕಲೆಯ ಭಾಗವಾಗಿ ನೋಡುತ್ತಿರುವುದರಿಂದ ಹಲವು ಸಂಶಯಗಳಿಗೆ ಎಡೆ ಮಾಡಿಕೊಡುತ್ತದೆ. ಇಲ್ಲಿಯೇ ಕರಾವಳಿ ಭಾಗ ಮಾತ್ರವಲ್ಲದೆ ಬಂಗಾಳ, ತಮಿಳುನಾಡು, ರಾಜಸ್ಥಾನ, ಗುಜರಾತ್, ಒರಿಸ್ಸಾ ಮೊದಲಾದ ಪ್ರದೇಶಗಳಲ್ಲಿನ ರಂಗೋಲಿ ಕಲೆಯ ವೈಶಿಷ್ಟ್ಯತೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿರುವುದು ಮಾಹಿತಿಪೂರ್ಣವಾಗಿದೆ.

ರಂಗೋಲಿ ಕಲೆಗೆ ಸಂಬಂಧಿಸಿದಂತೆ ಮಂಗಲಕರ ಭಾವಗಳು ಸಾಹಿತ್ಯರೂಪದಲ್ಲಿ ಹರಿದಿರುವುದನ್ನು ಲೇಖಕಿ ಸಂಗ್ರಹಿಸಿಕೊಟ್ಟಿರುವುದು ಶ್ಲಾಘನೀಯ. ರಾಗಿ ಬೀಸುವಾಗ,

ಭತ್ತ ಕುಟ್ಟುವಾಗ, ಕೃಷಿ ಚಟುವಟಿಕೆಗಳಲ್ಲಿ ತೊಡಗಿದಾಗ ಹಾಡುವ ಜನಪದ ಸಾಹಿತ್ಯಕ್ಕಿಂತ ಭಿನ್ನವಾಗಿ ರಂಗೋಲಿ ಹಾಕುವ ಸಮಯದಲ್ಲಿ ಹೆಚ್ಚು ಶ್ರದ್ಧೆ, ಭಕ್ತಿಗಳಿರುವುದನ್ನು ಸಂಗ್ರಹಿಸಿರುವ ಗೀತೆಗಳಲ್ಲಿ ಗುರುತಿಸಬಹುದು. ಜನಪದರಂತೆ ಶಿಷ್ಟ ಕವಿಗಳು ರಂಗೋಲಿಯ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಬದುಕಿನ ತತ್ವಗಳನ್ನು ಈ ಸಾಹಿತ್ಯದಲ್ಲಿ ರಂಗೋಲಿ ಎಳೆಗಳ ಮೂಲಕ ಬಿಡಿಸಿಟ್ಟಿದ್ದಾರೆ. ಮದುವೆ ಸಮಯದಲ್ಲಿ ಹಸೆಯಾಗಿ ಮನಸ್ಸಾನ್ನಾವರಿಸಿ, ಕೃಷ್ಣನನ್ನು ಸ್ವಾಗತಿಸಲು ವಿದುರ ಗೋಪಿಕೆಯರು ಹಾಕುವ ರಂಗೋಲಿಯ ಸಂಭ್ರಮ, ಹೆಣ್ಣು ಮಕ್ಕಳು ಸೂರ್ಯೋದಯಕ್ಕೆ ಮುನ್ನವೆ ಎದ್ದು ರಂಗೋಲಿ ಹಾಕಲೇಬೇಕೆಂಬ ಧಾರ್ಮಿಕ ನೀತಿ, ಮನೆಯೊಳಗಿನ ಅಶುಭವನ್ನು ಮೌನವಾಗಿ ಸಂವಹಿಸುವ ರಂಗೋಲಿಯನ್ನು ಜನಪದ ಗೀತೆ, ಕಥೆಗಳಲ್ಲಿ ಲೇಖಕಿ ಸಂಗ್ರಹಿಸಿ ಕೊಟ್ಟಿರುವುದು ರಂಗೋಲಿಯೊಟ್ಟಿಗೆ ಮಾನವ ಬದುಕಿನ ಆತ್ಮೀಯ ಸಂಬಂಧವನ್ನು ಮನವರಿಕೆ ಮಾಡಿಕೊಡುತ್ತದೆ. ಅಲ್ಲದೆ ಶಾಸನಗಳಿಂದ, ಹಳಗನ್ನಡದಿಂದ ಹೊಸಗನ್ನಡದವರೆಗೆ ರಂಗೋಲಿ ಕುರಿತು ಹಲವು ಕವಿಗಳ ಉಲ್ಲೇಖಗಳನ್ನು ದಾಖಲಿ ಸಿರುವ ಭಾರತೀಯವರ ಶ್ರಮ ಸಾರ್ಥಕವೆನಿಸಿದೆ.

ಇಡೀ ಕೃತಿಯಲ್ಲಿ ವಿವಿಧ ಸಮುದಾಯಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ಹಾಕುವ ರಂಗೋಲಿಯನ್ನು ಸಚಿತ್ರವಾಗಿ ವಿವರಿಸಿದ್ದಾರೆ. ಕರಾವಳಿ ಕರ್ನಾಟಕದಲ್ಲಿ ನೆಲೆಸಿರುವ ಗಾಮೊಕ್ಕಲಿಗರು, ಕರಿಒಕ್ಕಲು, ಗೊಂಡರು, ಗೌಡ ಬ್ರಾಹ್ಮಣ, ಮುಕ್ರಿ, ಹಲಸರು, ಗೌಳಿಗ ಮೊದಲಾದ ಸಮುದಾಯಗಳಲ್ಲಿ ಜನನ, ಉಪನಯನ, ಋತು ಆಚರಣೆ, ಮದುವೆ, ಮರಣ ನಂತರ ಆಚರಣೆಗಳಲ್ಲಿ ರಂಗೋಲಿ ಕಲೆ ಸ್ಥಾನ ಪಡೆದಿದೆ. ನಾಗಮಂಡಲ, ನಾಗರಚನೆ ಈ ಭಾಗದಲ್ಲಿ ಗುರುತಿಸಲೇಬೇಕಾದ ರಂಗೋಲಿ ಕಲೆ ಎಂಬುದನ್ನು ಕೃತಿಯು ನಿರೂಪಿಸಿದೆ.

ಕೃತಿಯಲ್ಲಿ ವಿಶೇಷವೆನಿಸುವುದು ರಂಗೋಲಿ ಕಲಾವಿದರನ್ನು ಗುರುತಿಸಿ ಅವರನ್ನು ದಾಖಲಿಸಿರುವುದು. ಶ್ರೀಮತಿ ಸುಕ್ರಿ ಬೊಮ್ಮಗೌಡ, ಹನುಮಿಕ್ಷೇತ್ರಗೌಡ, ಬಿ.ಪಿ. ಬಾಯರಿ, ಶ್ರೀಮತಿ ಕಾಮಾಕ್ಷಿ ಅಮ್ಮ ಮೊದಲಾದ ಎಲೆಮರೆ ಕಾಯಿಯಂತಿದ್ದ ಕಲಾವಿದರನ್ನು ಪರಿಚಯಿಸಿ ಸದಾ ನೆನಪಿನಲ್ಲಿಯುಳಿವಂತೆ ಮಾಡಿದ್ದಾರೆ. ಜೊತೆಗೆ ರಂಗೋಲಿ ರಚಿಸಲು ಬಳಸುವ ಆಕರ–ಪರಿಕರಗಳು ರಂಗೋಲಿ ವಿಧಗಳನ್ನು ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕರಾವಳಿ ಕರ್ನಾಟಕದ ರಂಗೋಲಿ ಕಲೆ ಭೂತ–ಭವಿಷ್ಯಗಳನ್ನು ಹೇಳುವ ಈ ಸಂಶೋಧನಾ ಕೃತಿ ಭಾರತೀಯ ಸಾಂಸ್ಕೃತಿಕ ಅಂಶವೊಂದನ್ನು ಪುನರುಜ್ಜೀವನ ಗೊಳಿಸುವಂತಿದೆ. ದೇಶಿ ಕಲೆಗಳು ಅಳಿವಿನ ಅಂಚಿಗೆ ಸರಿಯುತ್ತಿರುವ ಈ ಹೊತ್ತಿನಲ್ಲಿ ಇಂತಹ ಸಾಂಸ್ಕೃತಿಕ ಅಧ್ಯಯನಗಳು ಮುಖ್ಯವಾಗಿದೆ. ಆದಿವಾಸಿ ಜೀವನದಲ್ಲಿ ಧರ್ಮ ಶ್ರದ್ಧೆಯ ಫಲವಾಗಿ ಆರಂಭಗೊಂಡು ಇಂದು ವೃತ್ತಿ ಮಾಧ್ಯಮವಾಗಿ ಬೆಳೆದು ನಿಂತಿರುವ

ರಂಗೋಲಿ ಕಲೆಯನ್ನು ವ್ಯವಸ್ಥಿತವಾಗಿ ಈ ಕೃತಿ ಅಧ್ಯಯನಕ್ಕೆ ಒಳಪಡಿಸಿದೆ. ರಂಗೋಲಿ ಭವಿಷ್ಯದಲ್ಲಿ ಲೇಖಕಿ ಕಂಡುಕೊಂಡಿರುವ ಫಲಿತಗಳು ಈ ಸಂದರ್ಭಕ್ಕೆ ಕೊಂಚ ಮಟ್ಟಿಗೆ ಅಪ್ರಸ್ತುತ ಎನಿಸುತ್ತದೆ. ಜೊತೆಗೆ ಸ್ತ್ರೀ ಪ್ರಧಾನ ಕಲೆಯಾದ ರಂಗೋಲಿಯನ್ನು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸದ ಕೊರತೆಯೊಂದು ಕೃತಿಯಲ್ಲಿ ಕಪ್ಪುಚುಕ್ಕೆಯಾಗಿ ಉಳಿದಿದೆ. ಅಧ್ಯಯನದ ಕೊನೆಯಲ್ಲಿ ನೀಡಿರುವ ಪ್ರಾದೇಶಿಕ ಭಾಷಾಪದಗಳ ಸೂಚಿ ಭಾಷಿಕ ಅಧ್ಯಯನದ ಸಾಧ್ಯತೆಯೊಂದನ್ನು ಎತ್ತಿಹಿಡಿಯುತ್ತದೆ. ಒಟ್ಟಾರೆ ಮಾನವನ ಬದುಕಿನ ಸಕಲವೂ ಸಂಸ್ಕೃತಿಯ ಹೆಸರಿನಲ್ಲಿ ಅಧ್ಯಯನಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಇಂತಹ ಅಧ್ಯಯನಗಳು ಹೆಚ್ಚಾಗಬೇಕಿದೆ.

ರೇಣುಕಾ ಎಚ್.ಆರ್.

೪೦. ಜನಪದ ಕುಣಿತಗಳ ಅಧ್ಯಯನ

ಜನಪದ ಕುಣಿತಗಳು, ಡಾ. ಎಚ್.ಆರ್. ಚೇತನ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦೦೦೬, ೨೦೧೨, ಪುಟ–೨೪+೭೦+೪, ಬೆಲೆ ರೂ. ೫೦/-

ಡಾ. ಎಚ್. ಆರ್.ಚೇತನರವರು ಬರೆದಿರುವ 'ಜನಪದ ಕುಣಿತಗಳು' ಕೃತಿಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿರುವ ೧೨೬ ಪುಸ್ತಕಗಳಲ್ಲಿ ಇದು ಒಂದು.

ಈ ಕೃತಿಯ ಪರಿವಿಡಿಯಲ್ಲಿ–ಪ್ರಸ್ತಾವನೆ, ಹಿನ್ನೆಲೆ, ಹುಟ್ಟು, ಬೆಳವಣಿಗೆ, ಸಾಹಿತ್ಯ, ವಾದ್ಯಗಳು, ಉಡುಗೆ–ತೊಡುಗೆಗಳು, ಮನರಂಜಕ ಕುಣಿತಗಳು, ಆಚರಣಾತ್ಮಕ ಕುಣಿತಗಳು, ಅಳಿವು–ಉಳಿವು, ಉಪಸಂಹಾರ ಹೀಗೆ ವಿಭಾಗಗಳನ್ನು ಸೂಚಿಸಲಾಗಿದೆ. ವಿಶಿಷ್ಟವೆನಿಸುವ ಚಿತ್ರಗಳು ಕೃತಿಯಲ್ಲಿವೆ.

ಜನಪದ ಕುಣಿತಗಳು ಸಂಸ್ಕೃತಿಯ ಮೂಲವಾಗಿವೆ. ಮನುಷ್ಯನ ಮನರಂಜನೆಯ, ಆಚರಣೆಯ ಪ್ರತಿನಿಧಿಗಳಾಗಿವೆ. ನಮ್ಮ ಯುವಜನಾಂಗಕ್ಕೆ ಈ ಕಾಲದ ಆಧುನಿಕತೆ ಹುಚ್ಚಿನಲ್ಲಿ ಜನಪದ ಕುಣಿತಗಳ ಬಗ್ಗೆ ಪರಿಚಯವಾಗಬೇಕೆಂಬ ಆಶಯದೊಂದಿಗೆ ಇದರ ರಚನೆಯು ಮಹತ್ವವಾಗಿದೆ. ಕಂದಾಚಾರಗಳು ಎಂಬ ನಂಬಿಕೆ ಹೋಗಿ ನಮ್ಮ ಸಂಸ್ಕೃತಿ ಜನಜೀವನದ ಅಂಗ ಎಂಬ ದೃಷ್ಟಿ ಬೆಳೆಯಬೇಕಿದೆ. ಅದ್ದರಿಂದ ಈ ವಿಚಾರ ಜನಸಾಮಾನ್ಯರಿಗೆ ಸರಳವಾಗಿ ಅರ್ಥವಾಗುವಂತೆ ಹೇಳಬೇಕಾಗಿದೆ. ಈ ಸಂಸ್ಕೃತಿ ಉಳಿಸಲು ಕರ್ನಾಟಕದಲ್ಲಿ ಸ್ವಲ್ಪ ಮಟ್ಟಿಗೆ ಪ್ರಯತ್ನ ನಡೆಯುತ್ತಿದೆ. ಜನಪದ ಸಾಹಿತ್ಯ ಮತ್ತು ಕಲೆಗಳಿಗಾಗಿ ಸುಮಾರು ಅರ್ಧಶತಮಾನದ ಹಿಂದೆಯೇ ಅಕಾಡೆಮಿ

ಯನ್ನು ಸ್ಥಾಪಿಸಲಾಗಿದೆ. ವಿಶ್ವವಿದ್ಯಾನಿಲಯಗಳು ಪದವಿಯನ್ನು ನೀಡುತ್ತಿವೆ. ಇಡೀ ಜಗತ್ತಿನಲ್ಲಿ ಪ್ರಪ್ರಥಮವಾಗಿ ಜಾನಪದ ವಿಶ್ವವಿದ್ಯಾಲಯ ಆರಂಭವಾಗಿದೆ. ಈ ದಿಕ್ಕಿನಲ್ಲಿ ಸಂಘ ಸಂಸ್ಥೆಗಳು ಆಸಕ್ತಿ ತಳೆದಿವೆ. ಪುರುಷರ ಕುಣಿತವನ್ನು ಈಗ ಮಹಿಳೆಯರು ಕಲಿತು ಪುರುಷರನ್ನು ನಾಚಿಸುವ ಮಟ್ಟಿಗೆ ಅದ್ಭುತವಾಗಿ ಪ್ರದರ್ಶಿಸುತ್ತಿದ್ದಾರೆ.

ಜನಪದ ಕುಣಿತಗಳು ಮಾನವನ ಜೀವನದ ಜೊತೆ ಬೆಸೆದುಕೊಂಡಿವೆ. ರಾಮಾಯಣ, ಮಹಾಭಾರತದಲ್ಲೂ ವಿವಿಧ ರೀತಿಯ ಕುಣಿತಗಳಿವೆ. ಕ್ರಿಸ್ತ ಪೂರ್ವದಿಂದ ಭಾರತಕ್ಕೆ ಬಂದ ಪಾಶ್ಚಾತ್ಯ ಪ್ರವಾಸಿಗರು ಜನಪದ ಕುಣಿತಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಜನಪದ ಹುಟ್ಟಿಕೊಂಡಿದ್ದು ಅನೇಕ ಕಾರಣಗಳಿಂದ. ಆದರೆ ಅದು ಬೆಳೆದು ಬಂದದ್ದು ಬೇರೆ ರೀತಿ ಮತ್ತು ಆಯಾ ವಾತಾವರಣಕ್ಕೆ ತಕ್ಕಂತೆ ಆಗಿವೆ. ಪ್ರಕೃತಿ ಮಧ್ಯೆ ಉಂಟಾಗುವ ಘಟನೆಗಳೇ ಇವುಗಳ ಹುಟ್ಟಿಗೆ ಕಾರಣವಿರಬಹುದು. ಸಾಮಾನ್ಯವಾಗಿ ಅತಿ ಸಂತೋಷ ವಾದಾಗ, ಅತೀ ಭಯವಾದಾಗ ಅವನ ದೇಹ ಒಂದು ರೀತಿಯ ಸ್ಪಂದನಕ್ಕೊಳ ಗಾಗುವುದೇ ಕುಣಿತವಾಗಿರಬಹುದು.

ಜನಪದ ಕುಣಿತ ಜನಪದ ಕಲೆಗಳ ಮೂಲ. ಮಾನವ ಮೊದಮೊದಲು ಮಕ್ಕಳ ಹಾಗೇ ಕುಣಿದು ನಂತರ ಲಯಬದ್ಧತೆಯನ್ನು ಕಲಿತುಕೊಂಡನು. ಮನುಷ್ಯ ನವಿಲು ಕುಣಿತ, ಕೀಲುಕುದುರೆ ಕುಣಿತ, ಕಾಡೆಮ್ಮೆ ಕುಣಿತ, ಹುಲಿವೇಷ ಮತ್ತು ನಾಗನೃತ್ಯ ಇನ್ನು ಮುಂತಾದ ಪ್ರಕೃತಿಯ ನೇರಾನುಕರಣೆಗಳೇ ಜನಪದ ಕುಣಿತಗಳಾಗಿವೆ. ಮೊದಲಿಗೆ ಅನುಕರಣೆಯಿಂದ ಹುಟ್ಟಿದ ಕುಣಿತ ನಂತರ ಸಾಮಾಜಿಕ, ಧಾರ್ಮಿಕ ಆಚರಣೆಗಳಲ್ಲಿ ಸೇರಿಕೊಂಡಿವೆ. ಲೌಕಿಕ ಕುಣಿತಗಳು, ಗಂಡಸರ ಕುಣಿತಗಳು, ಹೆಂಗಸರ ಕುಣಿತಗಳು ಹೀಗೆ ಹಲವು ಕುಣಿತಗಳಿವೆ. ಸಾಹಿತ್ಯಕ್ಕೆ ಬಂದರೆ, ಜನಪದ ಕುಣಿತಗಳಲ್ಲಿ ಸಾಹಿತ್ಯದ ಪಾತ್ರ ಮುಖ್ಯವಾದದ್ದು. ಅದು ದೈವ ಮೂಲದ್ದಾಗಿರಬಹುದು ಅಥವಾ ಮನರಂಜಕ ಮೂಲದ್ದಾಗಿರಬಹುದು. ದೈವಮೂಲ ಕಲೆಗಳಲ್ಲಿ ವೀರಭದ್ರನ ಕುಣಿತ, ಕಂಸಾಳೆ, ಡೊಳ್ಳು ಕುಣಿತ, ಎಲ್ಲಮ್ಮನ ಕುಣಿತ ಭೂತರಾಯನ ಕುಣಿತಗಳು–ಈ ಎಲ್ಲಾ ಕುಣಿತದ ಹಿಂದೆ ಒಂದೊಂದು ಕಥೆಯಿದೆ. ದಕ್ಷಯಜ್ಞದ ಕಥೆಯು ವೀರಭದ್ರನ ಕುಣಿತದಲ್ಲಿ ಬರುತ್ತದೆ. ಹಾಗೆ ಮಲೆಯಮಾದೇಶ್ವರ ಕಥೆಯಲ್ಲಿ ಕಂಸಾಳೆ ಕುಣಿತ ಬರುತ್ತದೆ. ಮನರಂಜಕ ಕುಣಿತಗಳಲ್ಲಿ ದೈವಮೂಲ ಕುಣಿತಗಳಂತೆ ಒಂದು ನಿರ್ದಿಷ್ಟವಾದ ಧಾರ್ಮಿಕ ಸಾಹಿತ್ಯ ಇರುವುದಿಲ್ಲ. ಉದಾ; ಪಟಾ ಕುಣಿತ, ಹಲಿಗೆ ಕ್ಣುಣಿತ ನಂತರ ವಾದ್ಯಗಳ ಜೊತೆಗೆ ನಾಲ್ಕು ರೀತಿಯ ವಾದ್ಯಗಳಾದ ೧. ಚರ್ಮದ ವಾದ್ಯಗಳು, ೨. ತಂತಿ ವಾದ್ಯಗಳು, ೩. ಊದುವ ವಾದ್ಯಗಳು, ೪. ತಾಳ ವಾದ್ಯಗಳು ಎಂದು ಲೇಖಕರು ವಿವರಿಸಿದ್ದಾರೆ. ಚರ್ಮ ವಾದ್ಯಗಳಲ್ಲಿ ರಂಗದ ಕುಣಿತ, ಸೋಮನ ಕುಣಿತ, ಪೂಜಾ ಕುಣಿತವಿದ್ದರೆ, ತಂತಿವಾದ್ಯಗಳಲ್ಲಿ ಬೆರಳು, ಕಡ್ಡಿ ಅಥವಾ ಚಕ್ಕೆಗಳಿರುತ್ತವೆ.

ಊದುವ ವಾದ್ಯಗಳಲ್ಲಿ ಕೊಳಲು, ವಾಲಗ, ಕಹಳೆ, ಕೊಂಬುಗಳಿದ್ದರೆ, ತಾಳ ವಾದ್ಯದಲ್ಲಿ ಕಂಸಾಳೆ, ತಾಳ, ಗಂಟೆ, ಗೆಜ್ಜೆಗಳನ್ನು ಹೆಸರಿಸಿದ್ದಾರೆ.

ಇದಾದನಂತರ ಉಡುಗೆ-ತೊಡುಗೆಗಳ ಬಗ್ಗೆ ಚರ್ಚಿಸಿದ್ದಾರೆ. ಆಯಾಯ ಪಾತ್ರಕ್ಕೆ ಒಗ್ಗುವ ರೀತಿಯಲ್ಲಿ ಉಡುಗೆಗಳು ಇರುತ್ತವೆನ್ನುತ್ತಾರೆ. ಬ್ರಹ್ಮನಿಗೆ ಸೌಮ್ಯ ಉಡುಗೆ, ಶಿವನಿಗೆ ವಿಭೂತಿ, ಕೊರಳಿಗೆ ಹಾವಿನಾಭರಣ, ಚರ್ಮದುಡುಗೆ, ವಿಷ್ಣುವಿಗೆ ನಾನಾತರದ ಒಡವೆಗಳನ್ನು ಧರಿಸುತ್ತಾರೆ. ಪ್ರಾಣಿವೇಷಗಳನ್ನು ಅಂದರೆ ಹುಲಿವೇಷ, ಕರಡಿವೇಷವನ್ನು ಅದರದರ ಸ್ವಾಭಾವಿಕ ರೀತಿಯಲ್ಲಿ ಬಣ್ಣ ಬಳಸುತ್ತಾರೆ ಮತ್ತು ರೇಷ್ಮೆವಸ್ತ್ರಗಳನ್ನು ಬಳಸುತ್ತಾರೆ. ಒಡವೆಗೆ ಸಂಬಂಧಿಸಿದಂತೆ ಶೈವರು ಕವಡೆಗಳನ್ನು ಧರಿಸುತ್ತಾರೆ. ವೈಷ್ಣವರು ಮಣಿಗಳನ್ನು ಧರಿಸುತ್ತಾರೆ. ವೈಷ್ಣವ ಸಂಪ್ರದಾಯದ ಕಲಾವಿದರು ತಲೆಗೆ ರೇಷ್ಮೆಯ ಕೆಂಪು ವಸ್ತ್ರವನ್ನು ಸುತ್ತಿದರೆ, ಶೈವರು ಕಾವಿಯ ಬಣ್ಣದ ವಸ್ತ್ರವನ್ನು ಸುತ್ತುತ್ತಾರೆ. ಹೀಗೆ ಉಡುಗೆ-ತೊಡುಗೆಗಳ ಬಗೆಗೆ ಸವಿವರ ನೀಡುತ್ತಾರೆ.

ಮನರಂಜಕ ಕುಣಿತಗಳಲ್ಲಿ ಕೋಲಾಟ, ಪಂಜಿನ ಕುಣಿತ, ರಂಗದ ಕುಣಿತ ಗಾರುಡಿ ಗೊಂಬೆ ಕುಣಿತ, ಮರಗಾಲು ಕುಣಿತ, ಹುಲಿವೇಷ, ಕರಡಿಕುಣಿತ, ಸುಗ್ಗಿ ಕುಣಿತ ಹೀಗೆ ಹಲವಾರು ಕುಣಿತದ ಬಗ್ಗೆ ಹೇಳಿದ್ದಾರೆ. ಕೋಲಾಟವು ನಾಡಿನಾದ್ಯಂತ ಕಂಡುಬರುವ ಜನಪದ ಕುಣಿತ, ಕೋಲುಕುಣಿತ ಮತ್ತು ಕೋಲಾಟವು ಹಬ್ಬ-ಹರಿದಿನ, ಮದುವೆ-ಮುಂಜಿ, ಜಾತ್ರೆ-ಉತ್ಸವ-ಮರೆವಣಿಗೆ ಹೀಗೆ ಎಲ್ಲಾ ಕಡೆ ಪ್ರದರ್ಶಿಸುತ್ತಾರೆ. ಹಾಗೆಯೇ ರಂಗದ ಕುಣಿತದ ಬಗ್ಗೆ ವಿವರಿಸಿದ್ದಾರೆ.

ಆಚರಣಾತ್ಮಕ ಕುಣಿತಗಳು ದೈವಮೂಲವಾದದ್ದು, ಶಕ್ತಿಮೂಲವಾದದ್ದು ಅಥವಾ ಭಯಮೂಲವಾದದ್ದು ಆಗಿವೆ. ಸೋಮನ ಕುಣಿತ, ಪೂಜಾ ಕುಣಿತ, ಪಟಾ ಕುಣಿತ, ಗೊರವರ ಕುಣಿತ, ಡೊಳ್ಳು ಕುಣಿತ, ಕಂಸಾಳೆ, ಕರಗದ ಕುಣಿತ ಇವೆಲ್ಲವೂ ಆಚರಣಾತ್ಮಕ ಕುಣಿತಗಳು. ಸೋಮನ ಕುಣಿತ ಗ್ರಾಮದೇವತೆಗೆ ಸಂಬಂಧಿಸಿದ್ದು, ಪೂಜಾ ಕುಣಿತ ಸಾಮಾನ್ಯವಾಗಿ ಪಟಲದಮ್ಮನ ಮೆರೆಯುವ ವಿಗ್ರಹವೆಂದೇ ಹೇಳಬಹುದು. ಗೊರವರ ಕುಣಿತ ಮೈಲಾರಲಿಂಗ ಸಂಪ್ರದಾಯದ ಒಂದು ವಿಶಿಷ್ಟವಾದ ಕುಣಿತ. ಕಂಸಾಳೆ ಮಲೆಮಾದೇಶ್ವರನಿಗೆ ಸಂಬಂಧಿಸಿದ್ದರೆ, ಡೊಳ್ಳು ಕುಣಿತ ಜನಪದ ಕುಣಿತಗಳಲ್ಲಿ ಗಂಡುಕಲೆ ಎಂದು ಹೆಸರು ಪಡೆದಿದೆ. ಹೀಗೆ ಕುಣಿತಗಳು ಯಾವ ಯಾವ ದೇವರಿಗೆ ಸಂಬಂಧಿಸಿವೆ, ಯಾವ್ಯಾವ ಸಂದರ್ಭದಲ್ಲಿ ಕುಣಿಯುತ್ತಾರೆಂಬುದನ್ನು ವಿವರಿಸಿದ್ದಾರೆ.

ಸಾಮಾಜಿಕ ಜೀವನದಲ್ಲಿ ಅನೇಕ ಬದಲಾವಣೆಯ ಸಂದರ್ಭದಲ್ಲಿ ಅನೇಕ ಜೀವನ ವಿಧಾನಗಳು ಮಾರ್ಪಾಡಾಗುವುದು ಅಥವಾ ಮರೆಯಾಗುವುದು ಅನಿವಾರ್ಯ. ಹಾಗೆ ಜನಪದ ಕುಣಿತಗಳು ಕಾಲಕಾಲಕ್ಕೆ ಮರೆಯಾಗುತ್ತಾ ಹೋಗುತ್ತಿವೆ. ಅದರಲ್ಲಿ ಒನಕೆ ಕುಣಿತದಂಥ ಕುಣಿತಗಳು ನೆನಪಾಗಿ ಉಳಿದಿವೆ. ವೇಷಭೂಷಣಗಳಲ್ಲಿ ಮೂಲದ

ಸರಳತೆ ಮಾಯವಾಗಿ ಕಡು ಬಣ್ಣಗಳನ್ನು ಧರಿಸುವುದು ಅನಗತ್ಯ. ಜನಪದ ಕುಣಿತಗಳಲ್ಲಿ ಸಾಹಿತ್ಯದ ಪಾತ್ರ ಕಡಿಮೆ. ಹೀಗಾಗಿ ಈ ದೃಷ್ಟಿಯಿಂದ ಕೂಡ ಅನೇಕ ಕುಣಿತಗಳು ಅಳಿವಿನ ಅಂಚಿಗೆ ತಲುಪಿವೆ.

ಒಟ್ಟಾರೆ ಎಚ್.ಆರ್. ಚೇತನರವರು ಜನಪದ ಕುಣಿತಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ್ದಾರೆ. ಜನಪದ ಕುಣಿತಗಳು ಯಾವ ರೀತಿ, ಯಾವ ಬಗೆ, ಎಲ್ಲಿ ಪ್ರಸಿದ್ಧಿ ಪಡೆದಿವೆಂಬುದನ್ನು ಚೆನ್ನಾಗಿ ತಿಳಿಸಿಕೊಟ್ಟಿದ್ದಾರೆ. ಮುಂದಿನ ಪೀಳಿಗೆಗೆ ಈ ಪುಸ್ತಕ ತುಂಬಾ ಉಪಯುಕ್ತವಾಗಿದೆ. ಸಂಶೋಧಕರಿಗೆ ಜನಪದ ಕುಣಿತಗಳ ಬಗ್ಗೆ ತಿಳಿದುಕೊಳ್ಳಲು ಅನುಕೂಲಕರವಾಗಿದೆ. ಈ ಕುಣಿತಗಳು ಅಳಿವಿನಂಚಿನಲ್ಲಿರುವುದು ತುಂಬಾ ವಿಷಾದವಾಗುತ್ತದೆ. ನಮ್ಮ ಮುಂದಿನ ಯುವಕರಿಗೆ ಅರಿವು ಮೂಡಿಸಲು ಇಂತಹ ಉಪಯುಕ್ತವಾದ ಪುಸ್ತಕವನ್ನು ಪ್ರಕಟಿಸಿರುವುದು ಪ್ರಶಂಸನೀಯವಾದುದು.

ಆರ್.ಎನ್. ಪವಿತ್ರಮಾಲ

೪೧. ಬುಡಕಟ್ಟು ಜಾನಪದ

ಬುಡಕಟ್ಟು ಜಾನಪದ, ಡಾ.ಪಿ.ಕೆ.ಖಂಡೋಬ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೫೭೦೦೦೬, ೨೦೧೨, ಪುಟ-೨೪+೮೬+೪, ಬೆಲೆ ರೂ. ೬೦ /-

ಬುಡಕಟ್ಟು ಜನಾಂಗಗಳ ಬಗೆಗೆ ಬಹಳಷ್ಟು ನಿಖರವಾಗಿ ತುಂಬಾ ಆಪ್ತತೆಯಿಂದ ತಳಸ್ಪರ್ಶಿಯ ಅಧ್ಯಯನ ಮಾಡಿದವರ ಸಾಲಿನಲ್ಲಿ ಡಾ. ಪಿ.ಕೆ. ಖಂಡೋಬರವರ ಹೆಸರು ಮಹತ್ವದ್ದಾಗಿದೆ. ಬುಡಕಟ್ಟುಗಳ ಸ್ಥೂಲ ಪರಿಚಯದಲ್ಲಿ ಒಟ್ಟು ೩೩ ಬುಡಕಟ್ಟುಗಳನ್ನು ಹೆಸರಿಸುತ್ತ ಕರ್ನಾಟಕದಲ್ಲಿ ಅವರು ಎಲ್ಲೆಲ್ಲಿ ನೆಲೆಗೊಂಡಿದ್ದಾರೆ, ಅವರ ಸಾಂಸ್ಕೃತಿಕ ಸ್ವರೂಪವೆಂತಹದ್ದು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಅವುಗಳಲ್ಲಿ ಕಾಡುಗೊಲ್ಲ ಸಮುದಾಯವು ಚಿತ್ರದುರ್ಗ, ತುಮಕೂರು, ಬಳ್ಳಾರಿ, ಬೀದರ ಜಿಲ್ಲೆಗಳಲ್ಲಿ ನೆಲೆಗೊಂಡು ವಿಭಿನ್ನವಾದ ನಂಬಿಕೆ, ಸಂಪ್ರದಾಯಗಳನ್ನು ನೆರವೇರಿಸಿಕೊಂಡು ಬರುವುದನ್ನು ತಿಳಿಸುತ್ತಾರೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪನನ್ನು ಆರಾಧ್ಯ ದೈವವಾಗಿಸಿಕೊಂಡು ಬದುಕನ್ನು ನಿರ್ಮಿಸಿಕೊಂಡು ಬಂದಿದ್ದಾರೆ. ಆತನ ಮೇಲೆ ಗಣೆಯೊಂದಿಗಿನ ಕಾವ್ಯವು ತುಂಬಾ ವಿಶಿಷ್ಟವಾದುದು. ಅವರ ಕುಲ ಕಸುಬು ಪಶುಪಾಲನೆಯಾಗಿದೆ. ಹಲವು ಪಂಗಡಗಳೊಂದಿಗೆ ವೈವಿಧ್ಯವೆನಿಸುವ ಆಚರಣೆಗಳು ಇವರಲ್ಲಿ ರೂಢಿಯಲ್ಲಿವೆಂಬುದನ್ನು ತಿಳಿಸಿದ್ದಾರೆ. ಹಸಲರು ಪ್ರಧಾನವಾಗಿ ಬೇಟೆಯ ವೃತ್ತಿಯನ್ನು ಒಳಗೊಂಡಿದ್ದರೂ ಕೂಲಿ, ವ್ಯವಸಾಯ, ಕೃಷಿಕಾರ್ಮಿಕರಾಗಿ, ಮೀನುಗಾರರಾಗಿ ಕಾಣಿಸಿಕೊಳ್ಳುತ್ತಾರೆ. ಅವರ ವೃತ್ತಿಗಳು,

ಊಟೋಪಚಾರಗಳು, ದೈಹಿಕ ಲಕ್ಷಣಗಳು, ಪಾರಂಪರಿಕವಾಗಿ ಪೂಜಿಸುವ ದೈವಗಳನ್ನು ವಿವರಿಸುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ನೆಲೆಸಿರುವ ಸಿದ್ಧಿಯರು ನೀಗ್ರೋ ಮೂಲದವರಾಗಿದ್ದು, ದೈಹಿಕವಾಗಿ ತುಂಬಾ ವಿಶಿಷ್ಟ ಲಕ್ಷಣಗಳನ್ನು ಒಳಗೊಂಡಿದ್ದಾರೆ. ಕೃಷಿ ಕಾರ್ಮಿಕರಾಗಿ ತಮ್ಮದೇ ಆದ ವಿಭಿನ್ನ ಆಹಾರ ಪದ್ಧತಿಯನ್ನು ಸಹ ಆಚರಿಸಿಕೊಂಡು ಬಂದಿದ್ದಾರೆ. ಸುಡುಗಾಡು ಸಿದ್ಧರು ತೆಲುಗು ಮೂಲದವರಾಗಿದ್ದು, ಉತ್ತರ, ಮಧ್ಯ ಕರ್ನಾಟಕ ಜಿಲ್ಲೆಗಳಲ್ಲಿ ಸುಡುಗಾಡನ್ನು ಕಾಯುವುದರೊಂದಿಗೆ ಭಿಕ್ಷಾಟನೆಯನ್ನು ವೃತ್ತಿಯಾಗಿಸಿ ಕೊಂಡಿದ್ದಾರೆ. ಶಿವನ ಆರಾಧನೆಯೇ ಮುಖ್ಯ ಕರ್ತವ್ಯವಾಗಿರುತ್ತದೆ. ಹಕ್ಕಿಪಿಕ್ಕಿಯರು ಕರ್ನಾಟಕದ ಉದ್ದಗಲಕ್ಕೂ ವಾಸಿಸುತ್ತ ತರಾವರಿ ಹೆಸರಿನಿಂದ ಗುರುತಿಸಿಕೊಂಡು, ಬೇಟೆಯನ್ನು ಪ್ರಧಾನ ವೃತ್ತಿಯನ್ನಾಗಿಸಿಕೊಂಡಿದ್ದರೂ ಕಳ್ಳತನ ದರೋಡೆ ವೃತ್ತಿಗಳಲ್ಲಿ ತೊಡಗಿಸಿಕೊಂಡವರೆಂದು ಹೇಳುತ್ತಾರೆ. ಬುಡಬುಡಕೆಯವರು ಕರ್ನಾಟಕಕ್ಕೆ ಮಹಾರಾಷ್ಟ್ರ ಭಾಗದಿಂದ ಬಂದಿದ್ದರೂ ಇವರ ಸಂಚಾರ ಒಂದು ಕಡೆ ನೆಲೆಗೊಳ್ಳದೆ ಊರೂರು ಸುತ್ತುತ್ತ ಹಕ್ಕಿಶಾಸ್ತ್ರ ಹೇಳುವ, ಹಕ್ಕಿ ಪಣಕಟ್ಟುವ ಪದ್ಧತಿ ನೆರವೇರಿಸುತ್ತ ಮಂತ್ರತಂತ್ರಗಳನ್ನು ಮಾಡುತ್ತಾ ಜೀವನ ನಡೆಸುತ್ತಿದ್ದರು ಎನ್ನುತ್ತಾರೆ.

ಕರ್ನಾಟಕದುದ್ದಕ್ಕೂ ಕಂಡುಬರುವ ದೊಂಬರು ದೈಹಿಕ ಕಸರತ್ತಿನ ಹಾಗೂ ಚಮತ್ಕಾರಿಕೆ ಪ್ರದರ್ಶನದಿಂದ, ಅಂಗಸಾಧನೆಯಿಂದ ಧಾನ್ಯ, ಹಣ ಪಡೆದು ಜೀವಿಸುತ್ತಾರೆ. ಕೊರಮ ಜನಾಂಗದವರು ತಮಿಳುನಾಡು ರಾಜ್ಯದಿಂದ ಬಂದಿದ್ದಾರೆ. ಪ್ರಧಾನವಾಗಿ ಬುಟ್ಟಿ ಹೆಣೆಯುವ, ಕಣಿ ಹೇಳುವುದರಲ್ಲಿ ಉದರ ತುಂಬಿಸಿಕೊಳ್ಳುತ್ತಾರೆ. ಬೆಟ್ಟಗುಡ್ಡಗಳ ಗವಿಗಳಲ್ಲಿ ಜೀವಿಸುತ್ತಿದ್ದ ಇರುಳರು ಇಂದು ಗುಡಿಸಲು, ಮನೆ ಕಟ್ಟಿಕೊಂಡು ಜೀವಿಸುತ್ತಿದ್ದಾರೆ. ಹಾಗೆಯೇ ಪ್ರಧಾನ ಕಸುಬು ಜೇನು ಕೀಳುವುದು ಎನ್ನುತ್ತಾರೆ. ಆಂಧ್ರ ಮೂಲದವರಾದ ಗೊಂಡರು ಸದ್ಯ ಉತ್ತರ ಕರ್ನಾಟಕದ ಭಾಗದಲ್ಲಿ ಕಂಡುಬರುತ್ತಾರೆ. ಇವರು ತೆಲುಗು-ಕನ್ನಡ ಎರಡನ್ನೂ ಮಾತನಾಡುತ್ತಾರೆ. ಬೇಟೆ ವೃತ್ತಿಯಿಂದ ಕೃಷಿಯ ಕಡೆಗೆ ಹೊರಳಿದರು. ಕರಾವಳಿ ಭಾಗದಲ್ಲಿ ನೆಲೆಸಿರುವ ಕೊರಗರು ವಿಶಿಷ್ಟ ದೈಹಿಕ ಲಕ್ಷಣ ಹೊಂದಿರುವವರು. ಹಲವು ಆಚರಣೆಗಳನ್ನು ನೆರವೇರಿಸಿಕೊಂಡು ಬಂದಿದ್ದಾರೆ. ಬುಟ್ಟಿ ತಯಾರಿಕೆ, ಜೇನು ಸಂಗ್ರಹದ ಮೂಲಕ ಜೀವನ ಸಾಗಿಸುತ್ತಾರೆ. ತುಂಬಾ ವಿಶಿಷ್ಟವೆನಿಸುವ ಸಂಸ್ಕೃತಿ ಹೊಂದಿರುವ ಸೋಲಿಗರಲ್ಲಿ ಹಲವು ಉಪ ಪಂಗಡಗಳಿವೆ. ಪ್ರಧಾನವಾಗಿ ಬೇಸಾಯ ಮಾಡಿಕೊಂಡಿದ್ದರೂ, ಉಪಕಸುಬುಗಳು ಹೆಚ್ಚಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸಿಸುವ ಹಾಲಕ್ಕಿ ಒಕ್ಕಲಿಗರು ಪಶುಪಾಲನೆ, ಕೃಷಿ ವೃತ್ತಿ ಅವಲಂಬಿಸಿದವರು. ವ್ಯವಸ್ಥೆಯಲ್ಲಿ ಮಾತೃಪ್ರಧಾನತೆಯೇ ಆಗಿದ್ದು, ಈ ಬುಡಕಟ್ಟಿನಲ್ಲಿ ತಾಯಿ ಸ್ಥಾನ ಮಹತ್ವವಾದುದಾಗಿದೆ. ಅಲ್ಪಸಂಖ್ಯಾತರಾಗಿರುವ,

ಅತಿಮಾನುಷ ಶಕ್ತಿಗಳಿಗೆ ಹೆಚ್ಚು ಪ್ರಾಮುಖ್ಯ ನೀಡುವ ಮುಕ್ರಿಯರು, ಕೃಷಿ ಕಾರ್ಮಿಕರಾಗಿದ್ದಾರೆ. ಮರಾಠಿ ಭಾಷೆಯ ಮರಾಠಿ ಗೌಳಿಗರು ಉತ್ತರ ಕರ್ನಾಟಕದಲ್ಲಿ ಹೈನುಗಾರಿಕೆಯನ್ನು ಮೂಲ ಕಸುಬಾಗಿಸಿಕೊಂಡಿದ್ದಾರೆ. ವಿಶಿಷ್ಟ ಉಡುಗೆ-ತೊಡುಗೆಯಿರುವ ಇವರು ಹಲವು ರೀತಿಯ ಕಲೆಯಲ್ಲಿ ಪ್ರಾವೀಣ್ಯರಾಗಿದ್ದಾರೆ.

ಉಳಿದ ಬುಡಕಟ್ಟುಗಳಾದ ಕುಡುಬಿಯರು, ಕಾಡುಕುರುಬರು, ಮ್ಯಾಸಬೇಡರು, ಜೇನುಕುರುಬ, ಕಿಳ್ಳೇಕ್ಯಾತ, ಕೊಂಡಮಾಮರು, ಗೌಡಾಲು, ಕುಡಿಯ-ಮಲೆಕುಡಿಯ, ಕರೆಒಕ್ಕಲು, ಎರವರು, ಫಣಿಯರು, ಲಂಬಾಣಿಯರು, ಮೇದರು, ಗೊಲ್ಲರು(ಕೋಲೆ ಬಸವರು), ಹಗಲು ವೇಷದವರು, ಕಿನ್ನರಿ ಜೋಗಿಗಳು, ಟೋಕ್ರೆ ಕೋಳಿ, ಗೊಂದಲಿಗರು, ಹೆಳವರು ತಮಗೆ ಇಷ್ಟವೆನಿಸುವ ಹಲವು ವೃತ್ತಿಗಳನ್ನು ಅವಲಂಬಿಸಿದ್ದಾರೆ. ವಿಶಿಷ್ಟ ರೀತಿಯ ಆಚಾರ-ವಿಚಾರಗಳು, ಪಾರಂಪರಿಕವಾಗಿ ಅನುಸರಿಸಿರುವ ಸಂಪ್ರದಾಯಗಳು, ಉಡುಗೆ-ತೊಡುಗೆಗಳು, ವೈವಿಧ್ಯದ ಆಹಾರ ಪದ್ಧತಿ, ಪ್ರಧಾನ ವೃತ್ತಿಯೊಂದಿಗಿನ ಕರಕುಶಲ ಕಲೆಗಳು, ಕಣ್ಮನ ಸೆಳೆಯುವ ಅನೇಕ ರೀತಿಯ ಪ್ರದರ್ಶನ ಕಲೆಗಳು, ತಮ್ಮದೇ ಆದ ಆರೋಗ್ಯ ಪದ್ಧತಿಗಳು, ನಿಸರ್ಗದ ಜೊತೆಗಿನ ಅವಿನಾಭಾವ ಸಂಬಂಧ, ಅದರಲ್ಲಿನ ದೈವತ್ವದ ಅತಿಮಾನುಷ ವಿಚಾರಗಳನ್ನು ಲೇಖಕರು ಸ್ಥೂಲವಾಗಿ ವಿವರಿಸಿದ್ದಾರೆ.

ಪ್ರತಿ ಬುಡಕಟ್ಟುಗಳ ವೃತ್ತಿಗಳು, ವಿಶಿಷ್ಟವೆನಿಸುವ ಉಡುಗೆ-ತೊಡುಗೆಗಳು, ಉತ್ಕೃಷ್ಟವೆನಿಸುವ ಪ್ರದರ್ಶನ ಕಲೆಗಳ ಫೋಟೋಗಳನ್ನು ಔಚಿತ್ಯಪೂರ್ಣವಾಗಿ ಅಲ್ಲಲ್ಲಿ ನೀಡಿರುವುದು ಕೃತಿಯ ಗಾಂಭೀರ್ಯ ಹೆಚ್ಚಿಸಿದೆ. ಜನಪದ ಸಂಸ್ಕೃತಿಯ ಕಣಜ ಗಳಾಗಿರುವ ಬುಡಕಟ್ಟುಗಳು ಆಧುನಿಕತೆಯ ಅಬ್ಬರದಲ್ಲಿ ತಮ್ಮ ಅಸ್ಮಿತೆಯನ್ನು ಕಳೆದುಕೊಳ್ಳುವ ಆತಂಕದಲ್ಲಿವೆ. ಎಲ್ಲಾ ಬುಡಕಟ್ಟುಗಳು ಒಕ್ಕಲೆಬ್ಬಿಸುವ ಭಯದಿಂದ, ನಾಡಿನ ಆಕರ್ಷಣೆಯಿಂದ, ಪ್ರಭುತ್ವದ ಯೋಜನೆಗಳಿಂದ ಕಾಡಿನಿಂದ ಸದ್ಯ ಹೊರಬರಲು ಹವಣಿಸುತ್ತಿವೆ. ನಾಡಿನಲ್ಲಿಯೇ ಬೇರೆ ಬೇರೆ ವೃತ್ತಿ ಮತ್ತು ಉಪವೃತ್ತಿಗಳಿಂದ ಜೀವಿಸುತ್ತ ಶ್ರೇಷ್ಠವೆನಿಸುವ ಸಂಸ್ಕೃತಿಯ ಆರಾಧನೆಯನ್ನು ಮಾಡುತ್ತಿದ್ದವರೆಲ್ಲ ಈಗ ದೊರೆಯುವ ಸೌಲಭ್ಯಗಳಿಂದ ಆಧುನಿಕತೆಯ ಪರಿವರ್ತನೆಯ ಗಾಳಿಯಲ್ಲಿ ಬದಲಾಗಿ ಮೂಲದ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಬುಡಕಟ್ಟುಗಳು ಮೂಲದ ಸಂಸ್ಕೃತಿಯನ್ನು, ತಮ್ಮತನವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗುತ್ತಿವೆಂದೇ ಹೇಳಬಹುದು. ಈ ಎಲ್ಲದರ ಮಗ್ಗುಲುಗಳನ್ನು ಎಳೆ ಎಳೆಯಾಗಿ ಬಿಚ್ಚಿಡುವ ಕೆಲಸದಲ್ಲಿ ಈ ಕೃತಿಯ ಲೇಖಕರು ಯಶಸ್ವಿಯಾಗಿದ್ದಾರೆ.

ಕೆ.ವಿ. ಮುದ್ದವೀರಪ್ಪ

೪೨. ಜನಪದ ಗೀತೆಗಳಲ್ಲಿ ಹೆಣ್ಣಿನ ಸಂವೇದನೆ

ಜನಪದ ಗೀತ ಪ್ರಕಾರಗಳು, ಡಾ. ಕುಮಾರಚಲ್ಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦೦೦೬, ೨೦೧೨, ಪುಟ–೨೪+೬೪+೪, ಬೆಲೆ ರೂ. ೪೦/-

ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ 'ಜನಪ್ರಿಯ ಕನ್ನಡ ಮಾಲೆ'ಯಲ್ಲಿ ಪ್ರಕಟವಾಗಿರುವ ಒಂದು ನೂರ ಇಪ್ಪತ್ತೇಳು ಪುಸ್ತಕಗಳಲ್ಲಿ ಡಾ. ಕುಮಾರ ಚಲ್ಯರವರು ಬರೆದಿರುವ 'ಜನಪದ ಗೀತಪ್ರಕಾರಗಳು' ಒಂದಾಗಿದೆ. ಈ ಕೃತಿ ಕನ್ನಡ ಜನಪದ ಗೀತ ಸಾಹಿತ್ಯವನ್ನು ತುಂಬಾ ಸೂಕ್ಷ್ಮವಾಗಿ ಬಹುಮುಖಿಯಾದ ಅಂಶಗಳೊಂದಿಗೆ ಆಪ್ತತೆಯಿಂದ ವಿಶ್ಲೇಷಣೆಗೆ ಒಳಪಡಿಸಿದೆ. ಹೆಣ್ಣನ್ನು ಕೇಂದ್ರೀಕರಿಸಿಕೊಂಡು ಆಕೆಯ ಬದುಕು ಹಲವು ಮಜಲುಗಳಲ್ಲಿ ಹೇಗೆ ನಿರ್ಮಾಣಗೊಂಡಿದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

೬೩ ಪುಟಗಳಲ್ಲಿರುವ ಈ ಪುಟ್ಟ ಕೃತಿಯು ಒಂದು ಅಧ್ಯಾಯದಲ್ಲಿ ಹಲವು ಭಾಗಗಳನ್ನು ಮಾಡಿಕೊಂಡು ವಿಸ್ತಾರವಾದ ಮಾಹಿತಿಗಳೊಂದಿಗೆ ಶಾಸ್ತ್ರೀಯವಾಗಿ ಚರ್ಚಿತಗೊಂಡಿದೆ. ಈಗಾಗಲೇ ನಾಡಿನ ಜಾನಪದ ವಿದ್ವಾಂಸರು ನಾಡಿನಾದ್ಯಂತ ಓಡಾಡಿ ಕ್ಷೇತ್ರಕಾರ್ಯದಲ್ಲಿ ಸಂಪಾದಿಸಿದ ಜನಪದ ಗೀತೆಗಳನ್ನು ಸಂಗ್ರಹಿಸಿ, ಅಕ್ಷರ ರೂಪದಲ್ಲಿ ಪ್ರಕಟಿಸಿರುವ ಗೀತೆಗಳನ್ನು ಲೇಖಕರು ಸುದೀರ್ಘವಾಗಿ ಅಧ್ಯಯನ ಮಾಡಿ, ಸೂಕ್ತವಾದ ಪರಿಕಲ್ಪನೆಯೊಂದಿಗೆ ವಿಭಾಗಿಸಿ, ನಂತರ ಅದಕ್ಕೆ ಸಂಬಂಧಿಸಿದ ಗೀತೆಗಳನ್ನು ಇಲ್ಲಿ ಕೊಡುವುದರೊಂದಿಗೆ ಅರ್ಥಪೂರ್ಣವಾದ ವಿಶ್ಲೇಷಣೆ ನೀಡಿದ್ದಾರೆ.

ವಿಶ್ಲೇಷಣೆಗೆ ಬಳಸಿರುವ ಪದ್ಯಗಳೆಲ್ಲವೂ ತ್ರಿಪದಿಗಳಾಗಿವೆ. ಸಾಮಾನ್ಯವಾಗಿ ಈ ತ್ರಿಪದಿಗಳು ಸಮುದಾಯದಲ್ಲಿ ನೈಜವಾಗಿ ಬಳಕೆಯಾಗುತ್ತಿದ್ದರಿಂದ ಎಂಥವರಿಗಾದರೂ ಇವು ಅರ್ಥವಾಗುತ್ತವೆ. ಅವುಗಳ ಅರ್ಥ, ಆಶಯವು ಕೂಡ ಕೇಳುಗರಿಗೂ, ಓದುಗರಿಗೂ ಬಹುಬೇಗನೇ ಮನವರಿಕೆಯಾಗುತ್ತದೆ. ಹಲಸಂಗಿ ಗೆಳೆಯರು ಸಂಪಾದಿಸಿರುವ 'ಗರತಿಯ ಹಾಡುಗಳು' ಕೃತಿಯಲ್ಲಿನ ತ್ರಿಪದಿಗಳನ್ನು ಇಲ್ಲಿ ಹೆಚ್ಚು ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ. ಈ ಗೀತೆಗಳು ಕನ್ನಡ ನಾಡಿನ ಜನಮಾನಸದಲ್ಲಿ ಉಳಿದಿರುವುದರಿಂದ ಅವುಗಳಿಗೆ ಹೊಸ ತೆರನಾದ ಅರ್ಥವಿವರಣೆಯನ್ನು ನೀಡಿ ಕೃತಿಯು ಹೊಸಹೊಳಹುಗಳನ್ನು ನೀಡುತ್ತಾ ಮೌಲ್ಯ ಹೆಚ್ಚಿಸಿಕೊಂಡಿದೆ.

ಜನಪದರ ಜೀವನದಲ್ಲಿ ಪ್ರತಿಯೊಂದಕ್ಕೂ ಅರ್ಥವಿದೆ. ಎಲ್ಲವುದಕ್ಕೂ ಗೌರವ ಕೊಡುತ್ತಾರೆ. ಬೆಳಗಿನಿಂದ ಸಂಜೆಯವರೆಗೆ ದುಡಿಮೆಯಲ್ಲಿನ ಶ್ರಮ ನೀಗಿಸಲು ಹಾಡು ಕಟ್ಟಿಕೊಂಡು ಹಾಡುತ್ತಾರೆ. ಆ ಹಾಡಿನಲ್ಲಿ ಬದುಕಿನ ಎಲ್ಲಾ ಮಗ್ಗುಲುಗಳು ಕಾಣುತ್ತೇವೆ. ಬೆಳಗಿನ ಜಾವ ಎದ್ದಾಗ ದೈವಶ್ರದ್ಧೆಯ ಭಕ್ತಿ ಅವರಲ್ಲಿ ಎದ್ದು ಕಾಣುತ್ತದೆ.

ಗರತಿಯಾದವಳು ತನಗೆ ಅನ್ನ ಕೊಡುವ ಭೂಮಿತಾಯಿಯನ್ನು "ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯ ಎದ್ದೊಂದು ಗಳಿಗೆ ನೆನೆದೇನು" ಎಂದು ಸ್ಮರಿಸುತ್ತಾಳೆ. ದೈವದ ಸ್ತುತಿಯನ್ನು ಮಾಡುವಾಗ ಬಸವಣ್ಣ, ನಾರಾಯಣ, ಬಿಳಿಗಿರಿ ರಂಗಯ್ಯ, ಮಾದಯ್ಯ, ಸಿದ್ಧರಾಮ, ಚಾಮುಂಡಿ ಹೀಗೆ ತಮಗೆ ಇಷ್ಟವಾಗುವ ಹಲವು ಪ್ರಾದೇಶಿಕ ದೈವಗಳನ್ನು ನಿಷ್ಕಲ್ಮಷ ರೀತಿಯಲ್ಲಿ ತಮ್ಮ ಕಷ್ಟ-ಸುಖಗಳನ್ನು ತೋಡಿಕೊಳ್ಳುವುದಕ್ಕಾಗಿ ನೆನಪಿಸಿಕೊಳ್ಳುತ್ತಾಳೆ. ದೈವದ ಸ್ತುತಿಯಲ್ಲಿ ಡಾಂಭಿಕತೆಯಿಲ್ಲ, ಆಡಂಬರಯಿಲ್ಲ, ಕುಯುಕ್ತಿಯಿಲ್ಲದೆ, ಭಾವ ಪ್ರಧಾನವಾಗಿ ಭಕ್ತಿಯನ್ನು ವ್ಯಕ್ತಪಡಿಸುವುದುಂಟು.

ಕೌಟುಂಬಿಕ ಗೀತೆಗಳಲ್ಲಿ ಕುಟುಂಬದ ಕಣ್ಣಾಗಿರುವ ಹೆಣ್ಣು ಇಲ್ಲಿ ಬರುವ ಸದಸ್ಯರೊಂದಿಗೆ ಹೇಗೆ ಬದುಕುತ್ತಾಳೆಂಬುದನ್ನು ಗೀತೆಗಳಲ್ಲಿರುವ ಅಂಶಗಳ ಆಶಯ ಚಿತ್ರಿಸುತ್ತಾರೆ. ಹೆಣ್ಣು ಅಜ್ಜಿಯಾಗಿ, ತಾಯಿಯಾಗಿ, ಅಕ್ಕನಾಗಿ, ತಂಗಿಯಾಗಿ, ಸೊಸೆಯಾಗಿ, ಹೆಂಡತಿಯಾಗಿ, ಅತ್ತಿಗೆಯಾಗಿ ಹೀಗೆ ಹಲವು ತೆರನಾದ ಸ್ಥಾನಗಳಲ್ಲೂ ಅವುಗಳಿಗೆ ಜೀವತುಂಬಿರುವುದನ್ನು ಕವಿತೆಗಳಲ್ಲಿ ಗುರುತಿಸುತ್ತಾರೆ. ಕುಟುಂಬದಲ್ಲಿ ಸಾಮರಸ್ಯ ತುಂಬುವ ಶಕ್ತಿಯಿರುವುದು ಹೆಣ್ಣಿಗೆ ಮಾತ್ರ. ತನಗೆ ನೋವಾದರೂ ಪರರಿಗೆ ನೋವು ಕೊಡಲು ಅಕೆ ಒಪ್ಪಳು. ತನ್ನಿಂದ ಯಾರಿಗೂ ನೋವಾಗಬಾರದೆಂದು ಸದಾ ಬಯಸುತ್ತಾಳೆ. ಹೆಣ್ಣಿಗೆ ತಾನು ಹುಟ್ಟಿದ ತವರೆಂದರೆ ಎಲ್ಲಿಲ್ಲದ ಹಿಗ್ಗು. ತವರನ್ನು ಮತ್ತೆ ಮತ್ತೆ ನೋಡಬೇಕೆಂಬ ತವಕ. ಅಪ್ಪ–ಅಮ್ಮ, ಅಣ್ಣ–ತಮ್ಮ, ಅಕ್ಕ–ತಂಗಿ, ಅತ್ತಿಗೆ ಹೀಗೆ ಇವರ ಧ್ಯಾನವೇ ಅಧಿಕ. ಗಂಡನ ಪ್ರೀತಿ, ಗಂಡನಿಲ್ಲದ ಬದುಕು ಬಾಡಿಗೆ ಎತ್ತು ದುಡಿಯುವ ಸ್ಥಿತಿ, ಮಕ್ಕಳ ಮೇಲಿನ ವಾತ್ಸಲ್ಯ, ಸಂತಾನವಿಲ್ಲದ ಬೇಸರ, ಬಂಜೆಯೆಂಬ ಶಬ್ದದ ತಿರಸ್ಕಾರ, ಸವತಿಯ ತಿರಸ್ಕಾರ, ಅತ್ತೆ–ಮಾವಂದಿರ ಆದರಣೆ ಇವೆಲ್ಲವು ಗರತಿಯಲ್ಲಿನ ದಿನನಿತ್ಯದ ಅಂಶಗಳಾಗಿರುವುದನ್ನು ಇಲ್ಲಿ ಗೀತೆಗಳೊಂದಿಗೆ ವಿವರಿಸಿದ್ದಾರೆ.

ಹೆಣ್ಣು–ಗಂಡಿನ ನಡುವೆ ಆಕರ್ಷಣೆ ಸಹಜವಾದದ್ದು. ಇಬ್ಬರ ನಡುವೆ ಯಾವ ಹಂತದಲ್ಲಿ ಪ್ರೀತಿ ಅಥವಾ ಪ್ರಣಯ ಹುಟ್ಟುತ್ತದೆಂದು ಹೇಳಲು ಸಾಧ್ಯವಿಲ್ಲ. ವಿವಾಹ ಪೂರ್ವದ ಪ್ರಣಯ, ಒಲಿದೂ ವಿವಾಹವಾಗದವರು, ಅನ್ಯಸ್ತ್ರೀ ಅಥವಾ ಅನ್ಯಪುರುಷ ಸಂಬಂಧವುಳ್ಳವರ ಚಿತ್ರಣಗಳು ಇಲ್ಲಿ ಚಿತ್ರಿತವಾಗಿವೆ. "ಕನ್ನಡಿ ಕೈತಪ್ಪಿ ಹನ್ನೆರಡು ಚೂರಾದೊ ಹೆಣ್ಣಿನ ಮನಸ್ಸ ಎರಡಾದೊ ಬಾಳೆಯ ದಿಂಡಿನಲಿ ನಾರ ಎಳೆದಂಗೆ" ಹೆಣ್ಣು ನೀತಿ–ನಿಯಮಗಳನ್ನು ಮೀರದ ರೀತಿಯಲ್ಲಿ ಚೌಕಟ್ಟಿನಲ್ಲಿ ಬಾಳಬೇಕೆಂದು ಜನಪದರು ಭಾವಿಸಿದ್ದಾರೆ.

ಹಾಲು–ನೀರು ಬೆರೆತ ಹಾಗೆ ದಂಪತಿಗಳು ಸದಾ ಒಂದು ನಾಣ್ಯದ ಎರಡೂ ಮುಖಗಳಂತೆ ಒಂದು ಜೀವದಂತೆ ಬದುಕಬೇಕು. ಅವರಲ್ಲಿ ಅನನ್ಯವಾದ ಪ್ರೀತಿ,

ವಿರಸವಿರದ ಪ್ರೇಮ ಪ್ರಕೃತಿ ಸಹಜವಾಗಿರಬೇಕು. ಬದುಕಿನಲ್ಲಿ ಬಡತನವಿದ್ದರೂ ಪ್ರೀತಿಗೆ ಬಡತನವಿರಬಾರದು. ದಾಂಪತ್ಯದಲ್ಲಿ ಕಷ್ಟ–ಸುಖಗಳು ಬಂದರೂ ಅವುಗಳನ್ನು ಮೆಟ್ಟಿ ನಿಲ್ಲಬೇಕು. "ಗಂಡ–ಹೆಂಡಿರ ಜಗಳ ಗಂಧ ತೀಡಿದಾಂಗ ಲಿಂಗಕ ನೀರು ಎರೆದಾಂಗ। ಹಿರಿ ಹೊಳೆಯ ಗಂಗವ್ವ ಸಾಗಿ ಹರಿದಾಂಗ॥" ಎಂಬಂತೆ ಒಬ್ಬರಿಗೊಬ್ಬರು ಅರಿತು ಬಾಳುವಂತಾಗಬೇಕು. ಹೆಂಡತಿಗೆ ಮಕ್ಕಳ ಭಾಗ್ಯವೇ ಅಮೃತ. ಅದಿಲ್ಲದ ಜೀವನ ಬಾಡಿಗೆ ಎತ್ತು ದುಡಿದಂಗೆ. 'ಕಂದನಂಥ ಮಕ್ಕಳಿರಲವ್ವ ಮನಿತುಂಬ' ಎನ್ನುತ್ತಾ ಮಕ್ಕಳೊಂದಿಗಿನ ವಾತ್ಸಲ್ಯದ ನೆಲೆಗಳು ಸಂಪತ್ತು ಸುರಿದರೂ ಸಿಗಲಾರದೆಂದು ಭಾವಿಸುತ್ತಾಳೆ. ಹಾಗೆಯೇ ಅದಕ್ಕಾಗಿ ಅವಳು ಕನವರಿಸುತ್ತಾ ತುಡಿಯುತ್ತಾಳೆ.

ಜನಪದರ ಬದುಕಿನಲ್ಲಿ ನಂಬಿಕೆಗಳೇ ಸಂಪ್ರದಾಯಗಳಾಗಿ ರೂಪುಗೊಂಡು ತದನಂತರ ಆಚರಣೆಗಳು ರೂಢಿಗೆ ಬರುತ್ತವೆ. ಸಂಪ್ರದಾಯದ ಹಾಡುಗಳು ಬ್ರಾಹ್ಮಣ ಸಮುದಾಯದಲ್ಲಿ ಉಳಿದು ಬಂದಿರುವುದನ್ನು ಲೇಖಕರು ಗುರುತಿಸುತ್ತಾರೆ. ರಾಮಾಯಣ–ಮಹಾಭಾರತದ ಕಥನಗಳನ್ನು ಹಾಡಿನ ರೂಪದಲ್ಲಿ ಹಾಡುತ್ತಾರೆ. ಹಾಗೆಯೇ ದೇವರ ಸ್ತುತಿಪರ ಹಾಡುಗಳು, ವ್ರತದ ಹಾಡುಗಳು, ಜಾತಕರ್ಮ, ನಾಮಕರಣ, ಮದುವೆ, ಸೀಮಂತ ಮುಂತಾದ ಆಚರಣೆಗೆ ಸಂಬಂಧಿಸಿದ ಹಾಡುಗಳಿರುವುದನ್ನು ಕಾಣಬಹುದು. ಜನಪದರು ಚಂದ್ರನನ್ನು ಆರಾಧಿಸುವ ಬೆಳ್ದಿಂಗಳಪ್ಪನ ಪೂಜೆಯ ಪದಗಳು, ಹೋಳಿಯ ಕಾಮನಹಬ್ಬದ ಪದಗಳು, ಮಾರ್ನವಮಿ ಪದಗಳು, ಅಂಟಿಗೆ–ಪಂಟಿಗೆ ಪದಗಳು, ಭಾಗವಂತಿಕೆ ಪದಗಳು, ಗೌರಿ–ಗಣೇಶ–ಹುತ್ತರಿ ಇತ್ಯಾದಿ ಸಂದರ್ಭಗಳಲ್ಲಿ ಆಚರಣಾ ಪದಗಳು ರೂಢಿಯಲ್ಲಿ ರುವುದನ್ನು ಗುರುತಿಸುತ್ತಾರೆ. ಉದಾಹರಣೆಯಾಗಿ "ಎಳ್ಳು ಹೊಲದಾಗಿರುವ ಡೊಳ್ಳು ಹೊಟ್ಟೆಯ ಬೆನವ ಎಳ್ಳಿನುಂಡೀಯ ಪನಿವಾರ। ತಂದೀನಿ ಎಳ್ಳಷ್ಟು ಮತಿಯ ಕೊಡು ನಮಗ॥" ಇಂತಹ ಹಲವು ಹಾಡುಗಳ ವಿಶ್ಲೇಷಣೆಯನ್ನು ಮಾಡಿದ್ದಾರೆ.

ಮಾನವನ ಬದುಕಿನಲ್ಲಿ ದುಡಿಮೆಯನ್ನು ಅತಿ ಮುಖ್ಯವಾಗಿ ಪರಿಗಣಿಸಿದ್ದು, ಅದರಿಂದಲೇ ತಾನು ಸುಖವಾಗಿದ್ದೇನೆಂಬ ಭಾವನೆಯೂ ಕೂಡ ಅವನಲ್ಲಿತ್ತು. ಸೋಮಾರಿತನದ ಮನಸ್ಸು ಅವನ ಹತ್ತಿರ ಸುಳಿಯುತ್ತಿರಲಿಲ್ಲ. ಕಾಯಕವೇ ಕೈಲಾಸವೆಂದು ಬಲವಾಗಿ ನಂಬಿದ್ದವನು. ತನ್ನ ದುಡಿಮೆಯ ಶ್ರಮ ಹೋಗಲಾಡಿಸಲು ಹಾಡುಗಳನ್ನು ಕಟ್ಟಿಕೊಂಡು ಹಾಡುತ್ತಿದ್ದನು. ನಿತ್ಯದಲ್ಲಿ ಎದ್ದಾಗ, ಬೀಸುವಾಗ, ಕುಟ್ಟುವಾಗ, ಉಳುವಾಗ, ನಾಟಿ ಮಾಡುವಾಗ, ಕಳೆ ಕೀಳುವಾಗ, ಕೊಯ್ಲು ಮಾಡುವಾಗ, ಏತ(ನಿರಂತರವಾಗಿ ನೀರೆತ್ತುವಾಗ)ದಂತಹ ಶ್ರಮಪೂರಿತ ಕೆಲಸ ನಿರ್ವಹಿಸುವಾಗ ಜನಪದರು ಹಾಡುಗಳನ್ನು ನಿರ್ಮಾಣ ಮಾಡಿಕೊಂಡಿರುವುದನ್ನು ಇಲ್ಲಿ ಕೆಲವನ್ನು ವಿಶ್ಲೇಷಣೆಗೆ ಬಳಸಿಕೊಂಡಿದ್ದಾರೆ. ಮಳೆಗಾಲದಲ್ಲಿ ಮಳೆ ಬರದೇ ಇದ್ದಾಗ 'ಯಾತಕ್ಕೇ ಮಳಿ ಹೋದವೋ ಶಿವಶಿವಾ, ಲೋಕ ತಲ್ಲಣಿಸುತಾವೋ', "ಒಕ್ಕಲಗೇರ್‍ಯಾಗ ಮಳಿರಾಜಾ। ಅವರು ಮಕ್ಕಳು ಮಾರ್‍ಯಾರ

ಮಳಿರಾಜಾ ಮಕ್ಕಳು ಮಾರಿ ರೊಕ್ಕಾ ಹಿಡಕಂಡು ಭತ್ತಂತ ತಿರುಗ್ಯಾರ ಮಳಿರಾಜಾ॥" ಎನ್ನುವ ಭೀಕರ ಬರಗಾಲದ್ಧ ಚಿತ್ರಣವನ್ನು ಕೊಡುವ ಪದಗಳು ಇಲ್ಲಿ ಕಾಣುತ್ತೇವೆ. ಇದೇ ರೀತಿ ಹಲವು ವೃತ್ತಿ ಅವಲಂಬಿಸಿದ ಜನಾಂಗಗಳ ವೃತ್ತಿಗನುಗುಣವಾಗಿ ಹಾಡುಗಳು ಸೃಷ್ಟಿಗೊಂಡಿವೆ.

ಹಾಸ್ಯವು ಜನಪದರ ಜೀವನದ ಒಂದು ಭಾಗವಾಗಿದೆ. ಹಾಸ್ಯ ಪರಸ್ಪರ ಬಾಂಧವ್ಯ ವನ್ನು ಬೆಸೆಯುವ ಸಂಗತಿಯಾಗಿದೆ. ಇದರಲ್ಲಿ ಮುಖ್ಯವಾಗಿ ದ್ವೇಷಾಸೂಯೆಗಳು ಸುಳಿಯದೇ ಮಮತೆ, ವಾತ್ಸಲ್ಯ, ಸ್ನೇಹದ ವಾತಾವರಣಗಳನ್ನು ಹುಟ್ಟಿಹಾಕುವಂಥದ್ದು. ಹೆಚ್ಚು ಪಾಲು ದಾಂಪತ್ಯದ ಪ್ರಣಯ ಸನ್ನಿವೇಶಗಳಲ್ಲಿ ಹಾಸ್ಯ ವ್ಯಕ್ತವಾಗುವುದನ್ನು ತಿಳಿಸುತ್ತಾರೆ. ಮದುವೆಗಳ ಸಂದರ್ಭಗಳಲ್ಲೂ ಹೆಣ್ಣು-ಗಂಡುಗಳನ್ನು ಸಲಿಗೆಗೆ ತರಲು ಒಗಟು ರೀತಿಯಲ್ಲಿ ಹೆಸರು ಹೇಳಿಸುವ ಹಾಡುಗಳು ಬಹಳಷ್ಟಿವೆ.

ಪೌರಾಣಿಕ ಗೀತೆಗಳಲ್ಲಿ ಶಿಷ್ಟ ದೈವಗಳ ಆರಾಧನೆ ಜನಪದರಲ್ಲಿ ಮೊದಲಿನಿಂದಲೂ ರೂಢಿಸಿಕೊಂಡು ಬಂದಿರುವುದನ್ನು ಕಾಣಬಹುದು. ರಾಮಾಯಣದ ಸೀತಾ ವನವಾಸ, ಮಹಾಭಾರತದ ದ್ರೌಪದಿಯ ಕಥನ, ಶಿವ ಪತ್ನಿಯರಾದ ಗಂಗೇಗೌರಿ ಸಂಘರ್ಷದ ಹಾಡುಗಳು, 'ಶಿವನೂ ಭಿಕ್ಷಕೆ ಬಂದ ನೋಡು ಬಾರೇ ತಂಗಿ, ಅವನಿಗಿಂತ ಚೆಲುವನಿಲ್ಲ ನೀಡುಬಾರೆ' ಎಂಬಂತಹ ಶಿವನ ಸುತ್ತ ಹಬ್ಬಿರುವ ಕಥನಗಳು, ಶ್ರೀಕೃಷ್ಣನ ಕುರಿತ ಹಾಡುಗಳೇ ಮೊದಲಾದ ಪುರಾಣ ದೈವಗಳ ಹಾಡುಗಳು ಹಬ್ಬಿರುವುದನ್ನು ಇಲ್ಲಿ ಒಂದೊಂದಾಗಿ ಚರ್ಚಿಸಿದ್ದಾರೆ.

ಹೆಣ್ಣು ಹಾಡು ಕಟ್ಟುವುದರಲ್ಲಿ ಮೊದಲಿಗಳು. ಅಂದರೆ ಅವಳ ಮನಸ್ಸಿನಲ್ಲಿ ಏಳುವ ಮಾನಸಿಕ ತುಮುಲಗಳನ್ನು ಅಕ್ಷರದ ಮೂಲಕ ಅಭಿವ್ಯಕ್ತಿಸುತ್ತಾಳೆ. ಅದರಲ್ಲೂ ತಾನು ಹೆತ್ತ ಮಗನ ಲಾಲನೆ ಪಾಲನೆಯಲ್ಲಿನ ಲಾಲಿಪದಗಳು ತುಂಬಾ ಅಮೂಲ್ಯವಾಗಿವೆ. "ನಡೆದು ಬಾ ಕಂದಯ್ಯ ನಡಗೀಯ ನೋಡೇನ ಪದುಮದ ಪಾದ ಬಲಗಾಲ। ಕಂದಯ್ಯ ಕಿರಿಗೆಜ್ಜೆ ಇಡಿಸಿ ನೋಡೇನ॥" ಎಂಬ ಗೀತೆಗಳಲ್ಲಿ ತಾಯಿಯ ಹಂಬಲ ವ್ಯಕ್ತವಾಗುತ್ತದೆ. ಮಡಿಲು ತುಂಬುವ ಹಾಡುಗಳು, ಸೋಬಾನೆಯಂತಹ ಹಲವು ಮದುವೆಯ ಹಾಡುಗಳು, ಕೋಲಾಟದ ಹಾಡುಗಳು, ಗುಮ್ಮಟೆ ಹಾಡುಗಳು, ಅರ್ಜುನ ಜೋಗಿ ಹಾಡುಗಳು, ಭಜನೆ ಹಾಡುಗಳು, ಗಂಡಸರ ಹಾಡುಗಳು, ಮಕ್ಕಳನ್ನು ಅತಿರಮಿಸುವ ಜೋಗುಳದ ಹಾಡುಗಳು, ಹಾಗೆಯೇ ಪ್ರದರ್ಶನ ಕಲೆಗಳ ಸಂದರ್ಭಗಳಲ್ಲಿ ಹಾಡುವ ಹಾಡುಗಳು ಎಲ್ಲಾ ಜನಪದ ಗೀತೆಗಳ ಎಲ್ಲಾ ಮಗ್ಗುಲುಗಳನ್ನು ಸೂಕ್ಷ್ಮ ಮನಸ್ಸಿನಿಂದ ಲೇಖಕರು ಚರ್ಚಿಸಿದ್ದಾರೆ. ಎಲ್ಲದಕ್ಕೂ ಜನಪದರು ಹಾಡು ಕಟ್ಟಿ ಹಾಡಿರುವುದನ್ನು ಕಾಣಬಹುದು. ಜನಪದ ಗೀತೆಗಳ ಎಲ್ಲಾ ಮಗ್ಗುಲುಗಳನ್ನು ಸೂಕ್ಷ್ಮ ಮನಸ್ಸಿನಿಂದ ಲೇಖಕರು ಚರ್ಚಿಸಿದ್ದಾರೆ.

ಕೆ.ವಿ. ಮುದ್ದವೀರಪ್ಪ

೪೩. ಜನಪದ ಸಾಹಿತ್ಯ ಪರಂಪರೆಯ ಅಧ್ಯಯನದ ಸಮೀಕ್ಷೆ

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನ, ಡಾ. ಕೃಷ್ಣಮೂರ್ತಿ ಹನೂರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦೦೦೬. ೨೦೧೨, ಪುಟ–೨೪+೬೬+೪, ಬೆಲೆ ರೂ. ೪೦/-

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನವು ಶುರುಗೊಂಡು ಶತಮಾನಕ್ಕೆ ಕಾಲಿಡುವ ಹಂತದಲ್ಲಿರುವಾಗ ಇದರ ಪರಂಪರೆಯನ್ನು ಅವಲೋಕಿಸುತ್ತಿರುವುದು ವಿಶೇಷವಾಗಿದೆ. ಇದು ನಡೆದುಬಂದ ಹಾದಿಯಲ್ಲಿ ಅನೇಕ ಸವಾಲುಗಳು, ಸಮಸ್ಯೆಗಳು ಎದುರಾದರೂ ಹಿಂದಕ್ಕೆ ನೋಡದೆ ಸಾಕಷ್ಟು ಸಮೃದ್ಧ ಫಸಲನ್ನು ಅಕ್ಷರ ರೂಪಕ್ಕೆ ತಂದುಕೊಟ್ಟಿರುವುದು ಹಾಗೂ ತೀವ್ರಗತಿಯಲ್ಲಿ ಅದರಲ್ಲಿನ ಹೊಸ ಹೊಸ ಸೂಕ್ಷ್ಮ ಒಳನೋಟಗಳು ಬಹುಮುಖಿ ಹಾಗೂ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಅವಕಾಶ ದೊರೆಯುತ್ತಿರುವುದು ಕೂಡ ಸಂತೋಷದ ಸಂಗತಿಯಾಗಿದೆ.

ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ 'ಜನಪ್ರಿಯ ಕನ್ನಡ ಮಾಲೆ'ಯಲ್ಲಿ ಪ್ರಕಟವಾಗಿರುವ ಒಂದು ನೂರ ಇಪ್ಪತ್ತೇಳು ಪುಸ್ತಕಗಳಲ್ಲಿ ಡಾ. ಕೃಷ್ಣಮೂರ್ತಿ ಹನೂರುರವರು ಬರೆದಿರುವ 'ಕನ್ನಡ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನ'ದಲ್ಲಿ ಎಂಬತ್ತು ವರ್ಷಗಳ ಜಾನಪದ ಪರಂಪರೆಯ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನವನ್ನು ತುಂಬಾ ಸೂಕ್ಷ್ಮ ರೀತಿಯಲ್ಲಿ ಆರು ಅಧ್ಯಾಯಗಳಲ್ಲಿ ವಿಶ್ಲೇಷಣೆ ಮಾಡಿಕೊಟ್ಟಿರುವುದನ್ನು ಕಾಣಬಹುದು.

ಕೃಷ್ಣಮೂರ್ತಿ ಹನೂರುರವರು ಕನ್ನಡ ಜಾನಪದ ಸಾಹಿತ್ಯದಲ್ಲಿ ಇದುವರೆಗೂ ಆಗಿರುವ ಅಧ್ಯಯನವೆಷ್ಟು, ಮುಂದೆ ಆಗಬೇಕಾಗಿರುವ ಅಧ್ಯಯನವೆಷ್ಟು ಎಂಬುದನ್ನು ತಿಳಿಸುತ್ತಾರೆ. ಸಮಗ್ರ ಜನಜೀವನವನ್ನು ಅಭ್ಯಾಸಿಸಿದ ಮೊದಲ ಜನಪದ ಕೃತಿ ಅರ್ಚಕ ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ', 'ಹಳ್ಳಿಯ ಹಾಡು'(೧೯೩೩). ತಮ್ಮ ಗ್ರಾಮದ ಸಮಗ್ರ ಬದುಕಿನ ವಿವರಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ಅದೇ ರೀತಿ ಜನಪದ ಗೀತೆಗಳ ಸಂಗ್ರಹದಲ್ಲಿ ಹಲಸಂಗಿ ಗೆಳೆಯರ 'ಗರತಿಯ ಹಾಡು', ಬಿ.ಎಸ್. ಗದ್ದಗೀಮಠರ 'ಉತ್ತರ ಕರ್ನಾಟಕದ ಜನಪದ ಗೀತೆಗಳು' ಬೆಟಗೇರಿ ಕೃಷ್ಣಶರ್ಮರ 'ಹಳ್ಳಿಯ ಹಾಡುಗಳು' ಕೃತಿಗಳು ಸಂಗ್ರಹ, ಸಂಪಾದನೆಗೆ ಸುಮಾರ್ಗವನ್ನು ಹಾಕಿಕೊಟ್ಟ ಮಹತ್ವದ ಕೃತಿಗಳಾಗಿವೆಂಬುದನ್ನು ಲೇಖಕರು ಸೂಚಿಸುತ್ತ ಆ ಕೃತಿಗಳ ಉತ್ಕೃಷ್ಟತೆಯನ್ನು ತಿಳಿಸುತ್ತಾರೆ. ಹಾಗೆಯೇ ಮಾಸ್ತಿಯವರು ಮತ್ತು ಎಚ್.ಎಲ್. ನಾಗೇಗೌಡರು ರೆವಿನ್ಯೂ ಅಧಿಕಾರಿಗಳಾಗಿದ್ದರೂ ಜಾನಪದ ಸಂಸ್ಕೃತಿಯ ಅಧ್ಯಯನ ಮತ್ತು ಸಂರಕ್ಷಣೆಯ ಬಗೆಗೆ ತೋರಿದ ಕಾಳಜಿ ಅನನ್ಯವಾದುದು.

ಇದೇ ಹಾದಿಯಲ್ಲಿ ಜನಪದ ಗೀತೆಗಳ ಸಂಗ್ರಹ, ವಿಮರ್ಶೆ, ಸಂಶೋಧನೆಗಳಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕರಾಕೃ, ಮತಿಘಟ್ಟ ಕೃಷ್ಣಮೂರ್ತಿ, ಜೀಶಂಪ,

ಪಿ.ಆರ್. ತಿಪ್ಪೇಸ್ವಾಮಿ, ಹಾ.ಮಾ. ನಾಯಕ, ದೇಜಗೌ, ಸ.ಚ. ಮಹಾದೇವನಾಯಕ, ಪಿ.ಕೆ. ರಾಜಶೇಖರರಂಥವರು ದಕ್ಷಿಣ ಕರ್ನಾಟಕದಲ್ಲಿ ನಿರಂತರವಾಗಿ ಕೆಲಸ ನಿರ್ವಹಿಸಿದರೆ, ಉತ್ತರ ಕರ್ನಾಟಕದಲ್ಲಿ ಎಂ.ಎಸ್. ಲಠ್ಠೆ, ಬಿ. ಹೆಂಡಿ, ಆರ್.ಸಿ. ಹಿರೇಮಠರವರು ಪ್ರಮುಖವಾಗಿದ್ದಾರೆ. ಕರಾವಳಿ ಭಾಗದಲ್ಲಿ ಎಲ್.ಆರ್. ಹೆಗ್ಗಡೆ, ಎನ್.ಆರ್. ನಾಯಕ, ಶಾಂತಿ ನಾಯಕ, ಅಮೃತ ಸೋಮೇಶ್ವರ, ಬಿ.ಎ. ವಿವೇಕ ರೈ, ಕೆ. ಚಿನ್ನಪ್ಪಗೌಡ, ಎಸ್.ಎ. ಕೃಷ್ಣಯ್ಯ, ಕು.ಶಿ. ಹರಿದಾಸಭಟ್ಟರ ಜನಪದದ ಅಧ್ಯಯನಶೀಲತೆ ಕೂಡ ಮುಖ್ಯವಾಗಿದೆ. ಇಲ್ಲಿ ಹೆಸರಿಸಿರುವ ಪರಂಪರೆಯ ವಿದ್ವಾಂಸರ ಕೃತಿಗಳ ಶ್ರೇಷ್ಠತೆಯನ್ನು ಕ್ವಚಿತ್ತಾದ ಪರಿಚಯದೊಂದಿಗೆ ಮತ್ತು ಅವರ ಅನನ್ಯ ಕೊಡುಗೆಯನ್ನು ಇಲ್ಲಿ ಸ್ಮರಿಸಲಾಗಿದೆ.

ಮಹಾಕಾವ್ಯಗಳ ಬಗೆಗೆ ಮಾತನಾಡುವಾಗ ಜಗತ್ತಿನ ಜನಪದ ಕಾವ್ಯರಾಶಿಗೆ ಸೇರ್ಪಡೆಗೊಳ್ಳುವಂತಹ ಉತ್ಕೃಷ್ಟ ಮಹಾಕಾವ್ಯಗಳು ಕನ್ನಡದಲ್ಲಿ ದೊರೆತಿರುವುದು ಹೆಗ್ಗಳಿಕೆಯ ವಿಷಯವಾಗಿದೆ. ಅದರಲ್ಲಿ ಪಿ.ಕೆ.ರಾಜಶೇಖರವರು ಸಂಪಾದಿಸಿರುವ 'ಮಲೆಮಹದೇಶ್ವರ' ಜೀಶಂಪರವರು ಸಂಪಾದಿಸಿರುವ 'ಮಂಟೇಸ್ವಾಮಿ ಕಾವ್ಯ' ಹೊರಬಂದವು. ಕನ್ನಡ ವಿಶ್ವವಿದ್ಯಾಲಯದಿಂದ ಬುಡಕಟ್ಟು ಮಾಲೆಯಲ್ಲಿ ಜಾಗತಿಕವಾಗಿ ಶ್ರೇಷ್ಠವೆನಿಸುವ ಕಾವ್ಯಗಳನ್ನು ಹಿ.ಚಿ. ಬೋರಲಿಂಗಯ್ಯ, ಚಲುವರಾಜು, ಕೇಶವನ್ ಪ್ರಸಾದ್, ಮಂಜುನಾಥ ಬೇವಿನಕಟ್ಟಿ, ಸ.ಚಿ. ರಮೇಶ್, ಕೆ.ಎಂ. ಮೇತ್ರಿ, ವೆಂಕಟೇಶ್ ಇಂದ್ವಾಡಿ ಇವರೆಲ್ಲರೂ ಸೂಕ್ತವೆನಿಸುವ ರೀತಿಯಲ್ಲಿ ಸಂಪಾದಿಸಿಕೊಟ್ಟಿದ್ದಾರೆ. ಈ ಕೃತಿಗಳನ್ನು ಬಹುಮುಖಿಯಾಗಿ, ಅಂತರ್‌ಶಿಸ್ತೀಯವಾಗಿ ಹೊಸ ಹೊಸ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಎನ್.ಆರ್. ನಾಯಕರ 'ಗಾಮೊಕ್ಕಲ ಭಾರತ', ಪಿ.ಕೆ.ರಾಜಶೇಖರವರ 'ಜನಪದ ಮಹಾಭಾರತ', ರಾಗೌರವರ 'ಜನಪದ ರಾಮಾಯಣ'ದಂತಹ ಸಂಪಾದಿತ ಕೃತಿಗಳಲ್ಲಿ ಸಾಂಸ್ಕೃತಿಕ ಮುಖಾಮುಖಿಯ ಅಧ್ಯಯನ ನಡೆದಿದೆ. ಈ ಕಾವ್ಯಗಳು ಅಕ್ಷರ ರೂಪಕ್ಕೆ ಇಳಿಯಲು ಸಂಪಾದಕರು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾಗಿ ಹಗಲೆನ್ನದೆ ಇರುಳೆನ್ನದೆ ಹಾಡಿದ ವಕ್ತೃಗಳ ಕೊಡುಗೆಯೂ ಅನನ್ಯವಾಗಿದೆ.

ಎರಡನೇ ಅಧ್ಯಾಯದ 'ಜನಪದ ಕಥೆಗಳು' ಭಾಗದಲ್ಲಿ ಕಥೆಗಳ ಮೂಲವನ್ನು ಶೋಧಿಸುತ್ತಾ, ಅವುಗಳ ಅಧ್ಯಯನ ನಡೆದ ಕಾಲಮಾನವನ್ನು ತಿಳಿಸುತ್ತಾರೆ. ಇವುಗಳನ್ನು ಹೇಳುವ ವಕ್ತೃಗಳು ತಾವು ಕಲಿತಿರುವುದನ್ನು ಪರರಿಗೆ ಹೇಳುವುದರೊಂದಿಗೆ ಅವುಗಳ ಸಂರಕ್ಷಣೆಯನ್ನು ನೋಡಿಕೊಳ್ಳುತ್ತಿದ್ದರು. ಜನಪದ ಕಥೆಗಳ ಸಂಗ್ರಹ–ಸಂಪಾದನೆ ಸ್ವಲ್ಪ ತಡವಾಗಿ ನಡೆದಿರುವುದನ್ನು ಲೇಖಕರು ಗುರುತಿಸುತ್ತಾರೆ. ತಡವಾಗಿಯಾದರೂ ಎಂ.ಎ. ಜಯಚಂದ್ರರವರ 'ಧವಳಶ್ರೀ', ರಾಗೌರವರ 'ಕರ್ನಾಟಕ ಜನಪದ ಕಥೆಗಳು',

ಜೀಶಂಪರವರ 'ಕನ್ನಡ ಜನಪದ ಕಥೆಗಳು' ಮೊದಲ ಹಂತದಲ್ಲಿ ಹೊರತರುತ್ತಾರೆ. ಮುಂದೆ ಜಿ.ವಿ. ದಾಸೇಗೌಡರು, ಬೋರೇಗೌಡರು, ಎಚ್.ಜೆ. ಲಕ್ಕಪ್ಪಗೌಡರು, ಟಿ.ಎಸ್. ರಾಜಪ್ಪನವರು, ಸಿಂಪಿ ಲಿಂಗಣ್ಣನವರು, ತೀ.ನಂ. ಶಂಕರನಾರಾಯಣರವರು, ಕೃಷ್ಣಮೂರ್ತಿ ಹನೂರುರವರು, ದೇನಾ ರಾಮೇಗೌಡರು, ಎಲ್.ಆರ್. ಹೆಗ್ಗಡೆಯವರು, ಎ.ಕೆ. ರಾಮಾನುಜಂರವರು, ಜೀನಹಳ್ಳಿ ಸಿದ್ದಲಿಂಗಪ್ಪರವರು, ಕುರುವ ಬಸವರಾಜು ರಂಥವರು ಕತೆಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಿದರು. ಸಂಗ್ರಹಿಸಿರುವ ಕೃತಿಗಳಲ್ಲಿ ಎಷ್ಟು ಕಥೆಗಳಿವೆ? ಆ ಕಥೆಗಳ ಒಟ್ಟು ಸ್ವರೂಪವೇನು? ಆಶಯವೆಂಥದ್ದು ಎಂಬುದನ್ನು ಎಲ್ಲಾ ಸಂಗ್ರಹಕರು ತಮ್ಮ ತಮ್ಮ ಕೃತಿಗಳಲ್ಲಿ ಚರ್ಚಿಸಿದ್ದಾರೆ. ಮುಂದೆ ಕಥೆಗಳ ವರ್ಗೀಕರಣ, ಅವುಗಳ ಅಧ್ಯಯನದ ಮಹತ್ವವನ್ನು ಆಪ್ತತೆಯಿಂದ ಸಂಶೋಧನೆ ನಡೆಸಿರುವುದನ್ನು ವಿವರಿಸುತ್ತಾರೆ.

ಮೂರನೇ ಅಧ್ಯಾಯದ 'ಜನಪದ ಗಾದೆ ಮತ್ತು ಒಗಟು' ಭಾಗದಲ್ಲಿ ಈ ಎರಡೂ ಪ್ರಕಾರಗಳು ಜನಸಮೂಹದಲ್ಲಿ ಹಾಸುಹೊಕ್ಕಾಗಿ ಹೇಗೆ ಬಳಕೆಯಲ್ಲಿವೆಂಬುದನ್ನು ವಿವರಿಸುತ್ತಾರೆ. ಶಿಷ್ಟಸಾಹಿತ್ಯದಲ್ಲಿ ಕವಿಗಳಲ್ಲಿ ನೈಜವಾಗಿ ಗಾದೆಗಳ ಬಳಕೆ ಹೇಗಿವೆ ಎಂಬುದನ್ನು ತಿಳಿಸುತ್ತಾರೆ. ಪ್ರಾರಂಭದಲ್ಲಿಯೇ ಮುಳಿಯ ತಿಮ್ಮಪ್ಪನವರು ಪಂಪನ ಕೆಲವು ಗಾದೆಗಳನ್ನು ಕುರಿತ ಚರ್ಚೆ, ಎಚ್.ಎಸ್. ಅಚ್ಚಪ್ಪಯ್ಯನವರ ಕನ್ನಡ ಕಾವ್ಯಗಳಿಂದ ಹತ್ತು ಸಾವಿರ ಗಾದೆಗಳ ಸಂಗ್ರಹ, ಅಬೆಡುಬೋಯಿಸ್‌ರ ಗಾದೆಗಳ ಸಂಗ್ರಹ, ಹರ್ಮನ್ ಮೊಗ್ಲಿಂಗ್‌ರ ಕನ್ನಡ ಗಾದೆಗಳ ಸಂಗ್ರಹ, ಡೆನಿಯಲ್ ಸ್ಯಾಂಡರಸನ್‌ರ ಕಥಾಸಂಗ್ರಹದಲ್ಲಿ ೪೧೧ ಗಾದೆಗಳ ಸಂಗ್ರಹ, ಕಿಟೆಲ್ಲರ 'ಇಂಗ್ಲೀಷ್ ಕನ್ನಡ ಅರ್ಥಕೋಶ'ದ ೪೨೬೦ ಗಾದೆಗಳ ಸಂಗ್ರಹಗಳು ಪ್ರಾರಂಭ ಕಾಲಕ್ಕೆ ಮುಖ್ಯ ಸಂಗ್ರಹ ಕೃತಿಗಳಾಗಿವೆ. ನಂತರ ವಿರೂಪಾಕ್ಷ ಮಠದ, ದಂಡಿನಶಿವರದ ನರಸಿಂಹಮೂರ್ತಿ, ಕೃಷ್ಣಶಾಸ್ತ್ರಿ ಜಂಗಮಕೋಟೆ, ರಾಮಾರಾಧ್ಯರು, ರಾಗೌರವರು, ಬಿ.ಬಿ. ಹೆಂಡಿ, ಎಂ.ಎಸ್. ಲಠ್ಠೆ, ಕಾಳೇಗೌಡ ನಾಗವಾರ ಇನ್ನೂ ಮುಂತಾದವರೂ ಗಾದೆಗಳ ಸಂಗ್ರಹದಲ್ಲಿ ಪ್ರಾಮಾಣಿಕ ಸೇವೆಗೈದಿದ್ದಾರೆ. ಇವುಗಳ ಅಧ್ಯಯನಗಳ ಬಗೆಗೂ ಲೇಖಕರು ಈ ಕೃತಿಯಲ್ಲಿ ಚರ್ಚೆ ನಡೆಸಿದ್ದಾರೆ.

ಒಗಟುಗಳ ನಿಷ್ಪತ್ತಿ, ಪರಂಪರೆಯಲ್ಲಿರುವ ಅದರ ಬೇರೆ ಬೇರೆ ಹೆಸರುಗಳ ಚರ್ಚೆ, ಅದರ ಸ್ವರೂಪ, ಲಕ್ಷಣದ ಬಗೆಗೆ ಸ್ಥೂಲ ಪರಿಚಯ ಮಾಡಿ, ಸಂಗ್ರಹ ಕಾರ್ಯ ಹೇಗೆ ಇದುವರೆಗೂ ನಡೆದಿದೆಂಬುದನ್ನು ಇಲ್ಲಿ ಚರ್ಚೆ ನಡೆಸಿದ್ದಾರೆ. ಪ್ರಾರಂಭದಲ್ಲಿ ದೇವುಡು ನರಸಿಂಹಶಾಸ್ತ್ರಿಯವರ 'ಕರ್ನಾಟಕ ಸಂಸ್ಕೃತಿ' ಕೃತಿಯಲ್ಲಿ ಒಗಟಿನ ಅರ್ಥ ಕಟ್ಟಿಕೊಡುತ್ತಾರೆ. ರಾಗೌರವರ 'ನಮ್ಮ ಒಗಟುಗಳು' ಕೃತಿಯಲ್ಲಿ ಸವಿಸ್ತಾರವಾದ ಮುನ್ನುಡಿಯನ್ನು ಬರೆದು ಒಗಟಿನ ವ್ಯಾಖ್ಯಾನ, ವರ್ಗೀಕರಣ, ಪ್ರಯೋಜನ, ಅದು ಬೆಳೆದು ಬಂದ ಬಗೆಯನ್ನು ತಿಳಿಸುತ್ತಾರೆ. ಇದರಲ್ಲಿ ಸೋಮಶೇಖರ ಇಮ್ರಾಪುರ

ಅವರ 'ಸಾವಿರದ ಒಗಟುಗಳು' ಕೃತಿ ಬಹುಮುಖ್ಯ ಸಂಗ್ರಹ ಕೃತಿಗಳಲ್ಲಿ ಒಂದು. ಆರ್.ಸಿ. ಹಿರೇಮಠ, ದೇಜಗೌ, ಎಚ್.ಜೆ. ಲಕ್ಕಪ್ಪಗೌಡ, ಕುರುವ ಬಸವರಾಜು, ಹಿ.ಶಿ. ರಾಮಚಂದ್ರ ಗೌಡ, ಸುಧಾಕರ, ಮೈಲಹಳ್ಳಿ ರೇವಣ್ಣರಂತಹ ಮಹಾನ್ ವಿದ್ವಾಂಸರುಗಳು ಸಂಗ್ರಹಿಸಿದ ವೈವಿಧ್ಯವೆನಿಸುವ ಒಗಟುಗಳನ್ನು ವರ್ಗೀಕರಣ ಮಾಡಿ ಸೂಕ್ತ ವಿಶ್ಲೇಷಣೆ ನೀಡಿರುವುದನ್ನು ವಿವರಿಸಿದ್ದಾರೆ.

ಯಕ್ಷಗಾನ ಬಯಲಾಟದ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಪ್ರಚಲಿತವಿರುವ ಪುರಾಣ ಕೃತಿಗಳಾದ ರಾಮಾಯಣ, ಮಹಾಭಾರತ ಕಥಾನಕಗಳನ್ನು ವಸ್ತುವಾಗಿಸಿಕೊಂಡು ಆಟದಲ್ಲಿ ಪ್ರಯೋಗಗೊಳ್ಳುತ್ತಿದ್ದವು ಎಂಬುದನ್ನು ತಿಳಿಸಿದ್ದಾರೆ. ಕರ್ನಾಟಕದ ಉತ್ತರದಲ್ಲಿ ಪಡುವಲಪಾಯ, ದಕ್ಷಿಣದಲ್ಲಿ ಮೂಡಲಪಾಯ, ಕರಾವಳಿಯಲ್ಲಿ ಯಕ್ಷಗಾನ ಬಯಲಾಟದ ಒಳಮಗ್ಗುಲುಗಳನ್ನು ಚರ್ಚಿಸಿದ್ದಾರೆ. ಯಕ್ಷಗಾನದಲ್ಲಿ ಪೌರಾಣಿಕ ಕಥನಗಳ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಹಾಗೆಯೇ ಇಲ್ಲಿನ ಸಾಹಿತ್ಯ ರಚನೆ, ಉತ್ತರದಲ್ಲಿ ಆಟಗಳ ವಿವರ, ಅಲ್ಲಿನ ಸಂಗ್ರಹ, ಸಂಗ್ರಹಕಾರರ ವೈಯಕ್ತಿಕ ಚಿತ್ರಣ, ನಾಟಕಗಳ ನೋಡುಗರಲ್ಲಿನ ನಿರಾಸಕ್ತಿ ಕುರಿತ ವಿವರಗಳು ಇಲ್ಲಿವೆ.

ಇತರ ಪ್ರಕಾರಗಳ ಅಧ್ಯಯನದ ಅಧ್ಯಾಯದಲ್ಲಿ ಬುಡಕಟ್ಟುಗಳ ಸಮಗ್ರ ಅಧ್ಯಯನ ನಡೆಯಲು ಕಾರಣರಾದ ಬರಗೂರು ರಾಮಚಂದ್ರಪ್ಪರವರ ನಿಜವಾದ ಕಾಳಜಿಯ ವಿವರವಿದೆ. ಅಕಾಡೆಮಿಗಳ, ಸಂಘ-ಸಂಸ್ಥೆಗಳ, ವಿಶ್ವವಿದ್ಯಾನಿಲಯಗಳ ವತಿಯಿಂದ ಪ್ರಕಟಗೊಂಡ ಸ್ಮರಣ ಸಂಚಿಕೆಗಳು, ಜನಪದವನ್ನು ಕುರಿತ ಮಹತ್ವದ ಯೋಜನೆಗಳಲ್ಲಿ ಪ್ರಕಟಗೊಂಡ ಕೃತಿಗಳು, ಈ ಎಲ್ಲಾ ಕಾರ್ಯಗಳ ನಿರ್ವಹಣೆಗೆ ಕಾರಣರಾದ ವಿದ್ವಾಂಸರ ವಿವರವನ್ನು ಲೇಖಕರು ಇಲ್ಲಿ ನೀಡಿದ್ದಾರೆ. ಕನ್ನಡನಾಡು ಸಮೃದ್ಧ ಜನಪದ ಕಲೆಗಳ ಬೀಡು. ಹಲವು ಪ್ರಕಾರಗಳು ಭಕ್ತಿ, ಆರಾಧನೆ, ಜ್ಞಾನ, ಮನರಂಜನೆಯ ನೆಲೆಯಲ್ಲಿ ಪ್ರದರ್ಶನಗೊಳ್ಳುತ್ತವೆ. ಕಂಸಾಳೆ, ಡೊಳ್ಳು, ಕರಡಿಮಜಲು, ವೀರಗಾಸೆ ಮುಂತಾದ ಕುಣಿತಗಳು, ಹಗಲುವೇಷ, ಚೌಡಿಕೆ, ಚಿಟ್‌ಮೇಳ, ಮುಖವೀಣೆಯಂತಹ ಕಲಾವಿದರ ದಂಡು ನಮ್ಮಲ್ಲಿರುವುದನ್ನು ಮತ್ತು ಅವರಿಂದ ಕಲೆಗಳ ಸಂರಕ್ಷಣೆಯು ಆಗುತ್ತಿರುವುದನ್ನು ತಿಳಿಸಿದ್ದಾರೆ.

ಒಟ್ಟಾರೆ ಕನ್ನಡ ಜನಪದ ಸಾಹಿತ್ಯ ಸಮೃದ್ಧವಾಗಿದೆ. ಅದನ್ನು ಸಮುದಾಯಗಳಿಂದ ಹೆಕ್ಕಿತೆಗೆದು ಅಕ್ಷರ ರೂಪಕ್ಕಿಳಿಸುವುದಕ್ಕಾಗಿ ಸರ್ವರೂ ಬದ್ಧರಾಗಬೇಕಿದೆ. ಒಂದು ಶತಮಾನದಿಂದಲೂ ಜನಪದ ಸಂಗ್ರಹ, ವಿಮರ್ಶೆ, ಸಂಶೋಧನೆಯಂತಹ ಅಧ್ಯಯನದ ಕೆಲಸಗಳನ್ನು ಪಾಶ್ಚಿಮಾತ್ಯರ ಮಾರ್ಗದರ್ಶನದಂತೆ ಕನ್ನಡ ವಿದ್ವಾಂಸರು ತುಂಬಾ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿದ್ದಾರೆ. ಜನಪದ ಸಂಸ್ಕೃತಿಯನ್ನು ಪರಂಪರೆಯಲ್ಲಿ ಹೇಗೆ ಕಟ್ಟಿಕೊಳ್ಳಲಾಗಿದೆಂಬುದನ್ನು ಕೃಷ್ಣಮೂರ್ತಿ ಹನೂರುರವರು ಅರವತ್ತೇಳು ಪುಟದಲ್ಲಿ ಅವಲೋಕಿಸಿರುವುದು ನಿಜಕ್ಕೂ ಶ್ಲಾಘನೀಯ ಕೆಲಸ.

ಕೆ.ವಿ. ಮುದ್ದವೀರಪ್ಪ

೪೪. ಕರ್ನಾಟಕ ಜಾನಪದ ಅಕಾಡೆಮಿಯ ಸಾಧನ ಸಮೀಕ್ಷೆ

ಕರ್ನಾಟಕ ಜಾನಪದ ಅಕಾಡೆಮಿ ಹಿನ್ನೋಟ: ೨೦೦೮–೧೨,
ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಪ್ರ. ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಭವನ, ೨ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–೫೬೦೦೦೨, ೨೦೧೨, ಪುಟ–೧೨+೯೨+೨೫, ಬೆಲೆ ರೂ. ಇಲ್ಲ

ಕರ್ನಾಟಕ ಜಾನಪದ ಅಕಾಡೆಮಿ ಹಿನ್ನೋಟ: ೨೦೦೮–೨೦೧೨ವರೆಗೆ ನಡೆದ ಅಕಾಡೆಮಿಯ ಎಲ್ಲಾ ರಚನಾತ್ಮಕ ಕಾರ್ಯಕ್ರಮಗಳನ್ನು ತುಂಬಾ ಸೂಕ್ಷ್ಮ ದೃಷ್ಟಿಯಿಂದ ಸವಿವರವಾಗಿ ಡಾ.ಮೀರಾಸಾಬಿಹಳ್ಳಿ ಶಿವಣ್ಣರವರು ಕಟ್ಟಿಕೊಟ್ಟಿದ್ದಾರೆ. ಜಾನಪದ ಅಕಾಡೆಮಿಯು ರಾಜ್ಯಾದ್ಯಂತ ಹಲವು ಕಾರ್ಯಕ್ರಮಗಳಲ್ಲಿ ವಿಚಾರಗೋಷ್ಠಿಗಳನ್ನು, ಸಮಾವೇಶಗಳನ್ನು, ಕಲಾ ಪ್ರದರ್ಶನಗಳನ್ನು, ಜಾನಪದಕ್ಕೆ ಸೇವೆ ಸಲ್ಲಿಸಿದ ವಿದ್ವಾಂಸ–ಕಲಾವಿದರನ್ನು ಗೌರವಿಸುವ ಗುರುತರ ಜವಾಬ್ದಾರಿಗಳನ್ನು ತುಂಬಾ ಪ್ರಾಮಾಣಿಕವಾಗಿ ನಡೆಸಿಕೊಂಡು ಬರುತ್ತಿದೆ. ಸ್ಥಳೀಯ ಸಂಘ–ಸಂಸ್ಥೆಗಳ, ವಿಶ್ವವಿದ್ಯಾನಿಲಯಗಳ ಸಹಾಯ ಸಹಕಾರಗಳನ್ನು ಪಡೆದುಕೊಂಡು ಉತ್ತಮ ರೀತಿಯಲ್ಲಿ ಜಾನಪದ ಸಂಸ್ಕೃತಿಯನ್ನು ಉಳಿಸುವ, ಸಮೃದ್ಧಿಗೊಳಿಸುವ ಕಾಯಕದಲ್ಲಿ ನಿರತವಾಗಿದೆ ಎಂಬುದನ್ನು ಓದುಗರಿಗೆ ಮನದಟ್ಟು ಮಾಡಿಕೊಡುವುದಕ್ಕಾಗಿ ಈ ಕೃತಿಯನ್ನು ಕರ್ನಾಟಕ ಜಾನಪದ ಅಕಾಡೆಮಿ ಹೊರತಂದಿದೆ.

ಹಿನ್ನೋಟ(೨೦೦೮–೨೦೧೨)ಕೃತಿಯು ೨೨ ಅಧ್ಯಾಯಗಳಲ್ಲಿ ವಿಭಾಗೀಕರಿಸಿಕೊಂಡು ಅಕಾಡೆಮಿಯ ಒಳಗಡೆ ಹೊರಗಡೆ ನಡೆಯುವ ಚಟುವಟಿಕೆಗಳು, ಸಾಹಿತ್ಯ ಕೃತಿಗಳನ್ನು ಹೊರತರುವ ಕಾರ್ಯಗಳು, ಜಾನಪದ ಕಲಾವಿದರಿಗೆ ನ್ಯಾಯಯುತವಾಗಿ ಸಿಗಬೇಕಾದ ಸೌಲಭ್ಯ ಒದಗಿಸುವಲ್ಲಿ ತೋರುವ ಪ್ರಾಮಾಣಿಕ ಕಾರ್ಯಗಳು ಹೇಗೆ ನಡೆಯುತ್ತಿವೆ ಎಂಬುದನ್ನು ಒಂದೊಂದಾಗಿ ವಿವರಿಸಿದ್ದಾರೆ. ಅದೇ ರೀತಿಯಲ್ಲಿ ನಡೆದ ಚಟುವಟಿಕೆಗಳ ಪ್ರಾತ್ಯಕ್ಷಿಕೆಯ ಫೋಟೋಗಳನ್ನು ಕೃತಿಯ ಕೊನೆಯಲ್ಲಿ ಕೊಟ್ಟಿರುವುದು ವಿಶೇಷವಾಗಿದೆ.

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೦ರ ನವೆಂಬರ್ ಇರಂದು ಪ್ರಾರಂಭಗೊಂಡು ತಾತ್ವಿಕವಾದ ಧ್ಯೇಯೋದ್ದೇಶಗಳನ್ನು ಒಳಗೊಂಡು ಅವುಗಳನ್ನು ಈಡೇರಿಸುತ್ತಾ ಎಲ್ಲಿಯೂ ಹಿಂದಕ್ಕೆ ನೋಡದೆ ಸೃಜನಾತ್ಮಕ ಕೆಲಸ ಕಾರ್ಯಗಳನ್ನು ಕ್ರಿಯಾಶೀಲತೆಯಿಂದ ನಡೆಸುತ್ತಾ ಬಂದಿದೆ. ಅಧ್ಯಕ್ಷರ, ಸದಸ್ಯರ ಚಿಂತನೆಯೊಂದಿಗೆ ರಚನಾತ್ಮಕ ಕಾರ್ಯಗಳನ್ನು ಈಡೇರಿಸುತ್ತಾ ಸಾಗಿಬಂದಿರುವುದನ್ನು ತಿಳಿಸುತ್ತಾರೆ. ೨೦೦೮ರ ಅಕ್ಟೋಬರ್ ೧೦ರಂದು ಯಕ್ಷಗಾನ ವಿಭಾಗ ಪ್ರತ್ಯೇಕಿಸಲ್ಪಟ್ಟು ಸದ್ಯ 'ಕರ್ನಾಟಕ ಜಾನಪದ ಅಕಾಡೆಮಿ' ಹೆಸರಿನಲ್ಲಿ ಕೆಲಸ ನಿರ್ವಹಿಸಲಾಗುತ್ತಿದೆ.

ಪ್ರಸ್ತುತ ಈ ಕೃತಿಯಲ್ಲಿ ಒಟ್ಟು ೨೨ ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡು ಅಕಾಡೆಮಿಯ ಮೂಲೋದ್ದೇಶಗಳನ್ನು ಮತ್ತು ಅದು ನಡೆದುಬಂದ ದಾರಿಯನ್ನು

ಲೇಖಕರು ಸವಿಸ್ತಾರವಾಗಿ ವಿವರಿಸಿದ್ದಾರೆ. ಪ್ರಾಥಮಿಕವಾಗಿ ಈ ನೆಲದ ಜನಪದ ಸಂಸ್ಕೃತಿಯನ್ನು ಸಂಗ್ರಹ-ಸಂಪಾದನೆ ಮಾಡಿ ಅದಕ್ಕೆ ಅರ್ಥಪೂರ್ಣವಾದ ವಿಶ್ಲೇಷಣೆ ಕೊಡುವುದರ ಮುಖಾಂತರ ಜಾನಪದ ಉಳಿಸುವ, ಸಂವರ್ಧನೆ ಮಾಡುವ ಕೆಲಸವನ್ನು ನಿರಂತರವಾಗಿ ಅಕಾಡೆಮಿ ನಡೆಸಿಕೊಂಡು ಬರುತ್ತಿರುವುದನ್ನು ಇಲ್ಲಿ ಚಿತ್ರಿಸಲಾಗಿದೆ.

ಅಕಾಡೆಮಿಯ ಧ್ಯೇಯೋದ್ದೇಶಗಳಾದ ಜಾನಪದ ಸಾಹಿತ್ಯ-ನೃತ್ಯಾದಿ ಕಲೆಗಳ ಪ್ರೋತ್ಸಾಹ-ಪೋಷಣೆ, ಅದರ ಸಂಗ್ರಹ-ಅಧ್ಯಯನ-ವಿಮರ್ಶೆ-ಸಂಶೋಧನೆ-ಪ್ರಕಟಣೆ, ಜಾನಪದ ಗ್ರಂಥಭಂಡಾರ, ಧ್ವನಿಮುದ್ರಿಕೆಗಳ ಭಂಡಾರ, ವಸ್ತುಸಂಗ್ರಹಾಲಯಗಳ ಸ್ಥಾಪನೆ ಹೀಗೆ ಹಲವು ವಿಷಯಗಳ ಚರ್ಚೆಯಿದೆ. ಇದರಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ ಕಲಾವಿದರ ಮತ್ತು ವಿದ್ವಾಂಸರನ್ನು ಗುರುತಿಸಿ ಗೌರವಿಸುವುದು, ಅಧ್ಯಯನ ನಡೆಸುವ ವಿದ್ಯಾರ್ಥಿಗಳಿಗೆ ಉತ್ತೇಜನ, ಶಾಲಾ ಕಾಲೇಜುಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸುವುದು, ನಿಘಂಟು-ವಿಶ್ವಕೋಶಗಳ ಪ್ರಕಟಣೆಗಳಿಗೆ ಒತ್ತು ಕೊಟ್ಟಿರುವುದು. ಸಂಘ-ಸಂಸ್ಥೆಗಳ ಸಹಾಯ-ಸಹಕಾರ ಕೋರಿ ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳನ್ನು ಮಾಡುವುದರೊಂದಿಗೆ ಹತ್ತಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಯಶಸ್ವಿಗೊಳಿಸಿರುವುದನ್ನು ಇಲ್ಲಿ ತಿಳಿಸಿದ್ದಾರೆ. ಹೀಗೆ ಜಾನಪದದ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ನೆರವೇರಿಸಿ ಕೊಂಡು ಬರುತ್ತಿರುವುದನ್ನು ಇಲ್ಲಿ ಆಮೂಲಾಗ್ರವಾಗಿ ವಿವರಿಸಿದ್ದಾರೆ. ಅಕಾಡೆಮಿಯ ಮೊದಲ ಅಧ್ಯಕ್ಷರಾದ ಡಾ. ಎಚ್.ಎಲ್. ನಾಗೇಗೌಡರವರು ಉತ್ತಮ ರೀತಿಯಲ್ಲಿ ಕೆಲಸಕಾರ್ಯಗಳನ್ನು ನೆರವೇರಿಸುವುದರೊಂದಿಗೆ ಅಸ್ತಿಭಾರ ಹಾಕಿದರು. ಮುಂದೆ ಏಳು ಅಧ್ಯಕ್ಷರನ್ನು ಕಂಡ ಅಕಾಡೆಮಿಯು ಮಹತ್ವವೆನಿಸುವ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ನಾಡಿಗೆ ಸಮರ್ಪಿಸಿದೆ. ನಾಡಿನಾದ್ಯಂತ ರಾಜ್ಯ, ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳು, ಸಮ್ಮೇಳನಗಳು-ಸಮಾವೇಶಗಳಲ್ಲಿ ವೈಶಿಷ್ಟ್ಯವೆನಿಸುವ ಲೇಖನಗಳು ಮಂಡನೆಗೊಂಡು ಅರ್ಥಪೂರ್ಣವೆನಿಸುವ ಸ್ಪಂದನೆ ದೊರಕಿರುವುದನ್ನು ಕಾಣಬಹುದು. ಜಾನಪದ ಸಂಭ್ರಮ ಕಾರ್ಯಕ್ರಮಗಳಲ್ಲಿ-ಜಾನಪದ ಜಗಲಿ, ಇದರಲ್ಲಿ ಗ್ರಾಮ-ತಾಲ್ಲೂಕು-ಜಿಲ್ಲಾ ಜಾನಪದ ಸಂಭ್ರಮಗಳು ವೈವಿಧ್ಯಪೂರ್ಣವೆನಿಸುವ ರೀತಿಯಲ್ಲಿ ಯಶಸ್ವಿಗೊಳಿಸಿರುವುದನ್ನು ಕಾಣಬಹುದು. ಜಾನಪದ ಸಂವರ್ಧನೆ-ಸಂರಕ್ಷಣೆಯ ಹಿನ್ನೆಲೆಯಲ್ಲಿ ಶಿಕ್ಷಕರ ಕಮ್ಮಟಗಳು ನಾಡಿನ ಶಾಲೆಗಳಲ್ಲಿಯೇ ಜರುಗಿ, ಅಲ್ಲಿನ ವಿದ್ಯಾರ್ಥಿ ಸಮುದಾಯಕ್ಕೆ ಜಾನಪದದಲ್ಲಿ ಜಾಗೃತಿ ಮೂಡಿಸಲು ಅವಕಾಶ ಮಾಡಿದೆ.

ಕನ್ನಡ ನಾಡಿನ ಜಾನಪದ ಸಂಸ್ಕೃತಿಯನ್ನು ದಾಖಲೀಕರಣ ಮಾಡಲು ವಿದ್ವಾಂಸ ವರ್ಗ ತುಂಬಾ ಆಪ್ತತೆಯಿಂದ ಕೆಲಸ ಮಾಡಿದೆ. ಅದೇ ರೀತಿ ಸಂಘ-ಸಂಸ್ಥೆಗಳ

ಪಾತ್ರವು ಹಿರಿದಾಗಿದೆ. ಅಕಾಡೆಮಿಯು ಕೂಡ ಸ್ಥಾಪನೆಗೊಂಡಂದಿನಿಂದ ಇದುವರೆಗೂ ಬಹುಮುಖಿಯಾದ ಪುಸ್ತಕಗಳನ್ನು ಪ್ರಕಟಿಸಿರುವುದನ್ನು ಶಿವಣ್ಣನವರು ದಾಖಲೆಯಾಗಿ ಕೃತಿ–ಲೇಖಕರ ಪಟ್ಟಿಯನ್ನು ಕಾಲಾನುಕ್ರಮದಲ್ಲಿ ಅಧ್ಯಯನಕಾರರಿಗೆ ಅನುಕೂಲಕ್ಕಾಗಿ ನೀಡಿದ್ದಾರೆ. ಅಕಾಡೆಮಿಯ ಮಹತ್ವದ ಯೋಜನೆ ಹಾಗೂ ಅಧ್ಯಕ್ಷರಾದ ಗೊ.ರು. ಚನ್ನಬಸಪ್ಪನವರ ಕನಸಿನ ಕೂಸಾದ ಜಾನಪದ ನಿಘಂಟು ಮೂರು ಸಂಪುಟಗಳು ಪ್ರಕಟಗೊಂಡಿವೆ. ಈ ಸಂಪುಟಗಳು ರೂಪುಗೊಳ್ಳಲು ಹಾಕಿದ ಶ್ರಮ, ಸವೆಸಿದ ಹಾದಿ, ನಾಡಿನ ವಿದ್ವಾಂಸರ ಸಹಾಯ–ಸಹಕಾರಗಳನ್ನು ತುಂಬು ಮನಸ್ಸಿನಿಂದ ಸ್ಮರಿಸುವುದನ್ನು ಕಾಣಬಹುದು.

ಜನಪದ ಲೋಕದ ದಿಗ್ಗಜರೆಂದರೆ ಕಲಾವಿದರು. ಇವರಿಲ್ಲದೆ ಜಾನಪದವಿಲ್ಲ. ಇವರಿಂದ ಇಂದು ಪಾರಂಪರಿಕವಾಗಿ ಕಲೆ, ಸಾಹಿತ್ಯ ಉಳಿದುಬಂದಿರುವುದನ್ನು ಕಾಣಬಹುದು. ಇದನ್ನು ಅರಿತ ಗೊ.ರು.ಚ.ರವರು ಇವರ ಬದುಕನ್ನು ಹಸನುಗೊಳಿಸಲು ಸಹಾಯ–ಸಹಕಾರಗಳನ್ನೊದಗಿಸಲು 'ಕಲಾವಿದರ ಕ್ಷೇಮನಿಧಿ ಯೋಜನೆ'ಯನ್ನು ಸ್ಥಾಪಿಸಿ ಸ್ವತಃ ಅವರೇ ಲಕ್ಷಾಂತರ ಹಣವನ್ನು ನಿಧಿಗೆ ಹಾಕುವುದರೊಂದಿಗೆ ಮಾದರಿಯಾಗಿ ನಾಡಿನ ದಾನಿಗಳು ಸಹಾಯಹಸ್ತವನ್ನು ನೀಡಿರುವುದನ್ನು ಇಲ್ಲಿ ಹಣದ ಪಟ್ಟಿಯೊಂದಿಗೆ ದಾಖಲೆ ನೀಡಿದ್ದಾರೆ.

ನಾಡಿನ ಹೆಸರಾಂತ ಜಾನಪದ ವಿದ್ವಾಂಸರ, ಕಲಾವಿದರ ಸಾಧನೆಯನ್ನು ಸಾಕ್ಷ್ಯಚಿತ್ರದಲ್ಲಿ ಅವರ ಅಪೂರ್ವ ವಿಷಯಗಳನ್ನು ದಾಖಲೀಕರಣ ಮಾಡಿರುವುದು ಭವಿಷ್ಯದ ದೃಷ್ಟಿಯಿಂದ ಉತ್ತಮ ಕೆಲಸವೆನ್ನಬಹುದು. ಅಕಾಡೆಮಿ ಇದುವರೆಗೂ ನಿರ್ಮಿಸಿರುವ ಸಾಕ್ಷ್ಯಚಿತ್ರಗಳ ಪಟ್ಟಿಯನ್ನು ಇಲ್ಲಿ ನೀಡಿದ್ದಾರೆ. ಹಾಗೆಯೇ ೧೯೮೮ನೇ ಸಾಲಿನಿಂದ ೨೦೧೧ರವರೆಗೆ ಜಾನಪದ ಅಕಾಡೆಮಿಯ ಪ್ರತಿಷ್ಠಿತ 'ಜಾನಪದಶ್ರೀ' ಪ್ರಶಸ್ತಿಯ ಪಟ್ಟಿಯನ್ನು ಓದುಗರ ಅನುಕೂಲಕ್ಕಾಗಿ ಇಲ್ಲಿ ನೀಡಿದ್ದಾರೆ. ಮೊದಲ ಜಾನಪದ ಪ್ರಶಸ್ತಿ ಪಡೆದ ಡಾ. ಎಸ್.ಕೆ. ಕರೀಂಖಾನ್‌ರವರಿಂದ ಪ್ರಾರಂಭಗೊಂಡು ಶ್ರೀಮತಿ ದರೋಜಿ ಈರಮ್ಮನವರೆಗೆ ಪಟ್ಟಿ ಇಲ್ಲಿದೆ.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಗೊಳ್ಳಲು ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ಗೊ.ರು. ಚನ್ನಬಸಪ್ಪರವರ ಶ್ರಮ ಹೆಚ್ಚಿದೆ. ಆಗಿನ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಗೊ.ರು.ಚ.ರವರ ಮನವಿ ಮೇರೆಗೆ ದಿಟ್ಟ ನಿರ್ಧಾರ ಮಾಡಿ, ಜಗತ್ತಿನಲ್ಲಿಯೇ ಪ್ರಥಮವೆನಿಸುವ ರೀತಿಯಲ್ಲಿ ಜಾನಪದ ವಿಶ್ವವಿದ್ಯಾಲಯ ಸ್ಥಾಪಿಸಲು ಎಲ್ಲ ತರಹದ ಪೂರ್ವವಿಷಯಗಳಿಗೆ ಒಪ್ಪಿಗೆ ನೀಡಿದರು. ನಂತರ ಬಂದ ಮಾನ್ಯ ಮುಖ್ಯಮಂತ್ರಿಗಳಾದ ಸದಾನಂದಗೌಡರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿ ಗ್ರಾಮದಲ್ಲಿ ಉದ್ಘಾಟಿಸಿದರು. ಜಾನಪದ

ವಿಶ್ವವಿದ್ಯಾಲಯ ಸ್ಥಾಪನೆಯಿಂದ ಜಾನಪದದ ಬಹುಮುಖಿಯಾದ ಅಧ್ಯಯನ ಹಾಗೂ ಅಂತರ್‌ಶಿಸ್ತೀಯ ಅಧ್ಯಯನ ನಡೆಸಲು ಅನುಕೂಲವಾಗಲಿದೆನ್ನಬಹುದು.

ಜಗತ್ತಿನ ಎಲ್ಲಾ ವಿಚಾರಗಳನ್ನು ನಾವು ಕುಳಿತ ಜಾಗದಲ್ಲಿ ಪಡೆಯಲು ಸಾಧ್ಯವಿರುವುದು ಇಂದು ಉತ್ತುಂಗಕ್ಕೆ ಬೆಳೆದಿರುವ ತಂತ್ರಜ್ಞಾನದಿಂದ ಮಾತ್ರ. ಅದಕ್ಕಾಗಿಯೇ ಕರ್ನಾಟಕ ಜಾನಪದಕ್ಕೇ ಸಂಬಂಧಿಸಿದ ಮಾಹಿತಿಗಳು ಅಂತರ್ಜಾಲದಲ್ಲಿ ಒಂದೆಡೆ ದೊರೆಯುವಂತಾಗಬೇಕೆಂಬ ಉದ್ದೇಶದಿಂದ ತಾಣದ ಉದ್ಘಾಟನೆಯನ್ನು ಮಾಡಲಾಗಿದೆ. ಜಾನಪದ ಅಕಾಡೆಮಿಯ ತುಂಬಾ ವಿಶೇಷವೆನಿಸುವ ಕಾರ್ಯಕ್ರಮ ೨೦೧೦ರಲ್ಲಿ ಡಿಸೆಂಬರ್ ೧ರಿಂದ ೫ವರೆಗೆ ನಡೆದ ಗೊಂಬೆ ಉತ್ಸವ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪೂರ್ಣ ಪ್ರಾಯೋಜಕತ್ವದಡಿಯಲ್ಲಿ ಅರ್ಥಪೂರ್ಣ ರೀತಿಯಲ್ಲಿ ನಡೆದಿದ್ದನ್ನು ಲೇಖಕರು ದಾಖಲೆ ಮಾಡಿದ್ದಾರೆ.

ಕರ್ನಾಟಕ ಜಾನಪದ ಅಕಾಡೆಮಿಯ ತುಂಬಾ ಜವಾಬ್ದಾರಿಯುತ ಕೆಲಸವೆಂದರೆ, ಪ್ರತಿವರ್ಷ ನಾಡಿನ ಶ್ರೇಷ್ಠ ಜಾನಪದ ಕಲಾವಿದರನ್ನು, ವಿದ್ವಾಂಸರನ್ನು ಹಾಗೂ ಸಾಹಿತ್ಯ ಕೃತಿಗಳನ್ನು ಗುರುತಿಸಿ ಕಾಲಕಾಲಕ್ಕೆ ಪ್ರಶಸ್ತಿಗಳನ್ನು ನೀಡುವುದು. ಈ ಕೆಲಸವನ್ನು ನಿರಂತರವಾಗಿ, ಪ್ರಾಮಾಣಿಕವಾಗಿ ಆಯಾಯ ವರ್ಷ ನೆರವೇರಿಸುತ್ತಾ ಬಂದಿದೆ. ೨೦೦೭ರಿಂದ ೨೦೧೨ರವರೆಗೆ ನೀಡಿರುವ ಜಾನಪದ ತಜ್ಞ ಪ್ರಶಸ್ತಿಗಳಾದ, ಜೀಶಂಪ ಪ್ರಶಸ್ತಿ, ಗದ್ದಗಿಮಠ ಪ್ರಶಸ್ತಿ, ಜನಪದ ಕಲಾ ಪ್ರಶಸ್ತಿ, ಸಾಹಿತ್ಯ ಕೃತಿಗಳ ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಇಲ್ಲಿ ಕೊಟ್ಟಿದ್ದಾರೆ.

ಕರ್ನಾಟಕದ ಚರಿತ್ರೆಯಲ್ಲಿ ದಾಖಲೆಯಾಗಿ ನಿಲ್ಲುವಂತಹ ವಿಷಯವೆಂದರೆ ೨೦೧೧ರ ಡಿಸೆಂಬರ್ ೨೨ರಿಂದ ೨೫ವರೆಗೆ ಬೀದರ್‌ನಲ್ಲಿ ನಡೆದ ಅಖಿಲ ಭಾರತ ಜಾನಪದ ಸಮ್ಮೇಳನವು ವಿಶ್ರಾಂತ ಕುಲಪತಿಗಳಾದ ನಾಡೋಜ ಪುರಸ್ಕೃತರಾದ ಡಾ. ದೇ. ಜವರೇಗೌಡರ ಸರ್ವಾಧ್ಯಕ್ಷತೆಯಲ್ಲಿ ಅದ್ದೂರಿಯಾಗಿ ಅರ್ಥಪೂರ್ಣವಾಗಿ ನಡೆಯಿತು. ದೇಶದ ನಾನಾ ಕಡೆಯಿಂದ ಆಗಮಿಸಿದ ಕಲಾ ತಂಡಗಳ ವೈವಿಧ್ಯವೆನಿಸುವ ಪ್ರದರ್ಶನ, ಜನಪದ ಪರಂಪರೆಯನ್ನು ಕಟ್ಟಿಕೊಡುವ ಪ್ರಬಂಧ ಮಂಡನೆ, ಉತ್ಕೃಷ್ಟವೆನಿಸುವ ಜನಪದ ಸಾಹಿತ್ಯ ಕೃತಿಗಳ ಲೋಕಾರ್ಪಣೆ ನಡೆಯಿತು.

ಕರ್ನಾಟಕ ಜಾನಪದ ಅಕಾಡೆಮಿಯ ಪ್ರತಿಯೊಂದು ಸೃಜನಾತ್ಮಕ ಕಾರ್ಯಕ್ರಮಗಳ ಜರುಗುವಿಕೆಗೆ ಸಹಾಯ–ಸಹಕಾರ ನೀಡಿದವರ ಪಟ್ಟಿಯನ್ನು ನೀಡುವುದರೊಂದಿಗೆ ಅವರನ್ನು ಹೃತ್ಪೂರ್ವಕವಾದ ರೀತಿಯಲ್ಲಿ ಸ್ಮರಿಸಲಾಗಿದೆ. ಪ್ರತಿ ಕಾರ್ಯಕ್ರಮದಲ್ಲಿ ನಾಡಿನ ವಿದ್ವಾಂಸರು ಯಾರ್‍ಯಾರು ಭಾಗವಹಿಸಿದ್ದರೆಂಬುದನ್ನು ಪಾಲುಗೊಂಡವರು ಭಾಗದಲ್ಲಿ ಪಟ್ಟಿ ಕೊಟ್ಟಿದ್ದಾರೆ. ಹಾಗೆಯೇ ತುಂಬಾ ಸೂಕ್ತವೆನಿಸುವ ಕಾರ್ಯಕ್ರಮಗಳ ಛಾಯಾಚಿತ್ರಗಳನ್ನು ಕೊನೆಯಲ್ಲಿ ನೀಡಿರುವುದು ವಿಶೇಷವಾಗಿದೆ.

ಒಟ್ಟಾರೆ ೨೦೦೮–೨೦೧೨ರವರೆಗೆ ಕರ್ನಾಟಕ ಜಾನಪದ ಅಕಾಡೆಮಿಯಲ್ಲಿ ಜರುಗಿರುವ ವಿವಿಧ ರೀತಿಯ ಕಾರ್ಯಕ್ರಮಗಳ ವಿಶ್ಲೇಷಣೆಯನ್ನು ಅಚ್ಚುಕಟ್ಟಾಗಿ ಇಲ್ಲಿ ಮಾಡಿಕೊಟ್ಟಿರುವುದಕ್ಕೆ ಡಾ. ಮೀರಾಸಾಬಿಹಳ್ಳಿ ಶಿವಣ್ಣರವರು ಅಭಿನಂದನಾರ್ಹರು.

ಕೆ.ವಿ. ಮುದ್ದವೀರಪ್ಪ

೪೫. ಜಾನಪದ ಅಧ್ಯಯನಕ್ಕೆ ಒಂದು ಸುಂದರ ಕನ್ನಡಿ

ಜಾನಪದ ಪ್ರಕಾರಗಳು, ಡಾ. ರಾಗೌ, ತನುಮನು ಪ್ರಕಾಶನ, ಎಚ್.ಐ.ಜಿ. ೧೨೬೭, ಕಾವ್ಯಲೋಕ, ೧ನೇ ತಿರುವು, ಶ್ರೀ ರಾಂಪುರ ೨ನೇ ಹಂತ, ಮೈಸೂರು–೫೭೦೦೨೩, ೨೦೧೨, ಪುಟ–೩೪೮, ಬೆಲೆ ರೂ. ೨೫೦/-

ಕನ್ನಡ ಜಾನಪದ ಕ್ಷೇತ್ರದಲ್ಲಿ ಡಾ. ರಾಗೌರವರು ಸಂಗ್ರಹ, ಸಂಪಾದಕರಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ ಹೆಚ್ಚು ಕೆಲಸ ಮಾಡಿದವರು. ಅದರಲ್ಲೂ ಗಾದೆ ಹಾಗೂ ಒಗಟುಗಳ ಬಗೆಗೆ ಅಪಾರವಾದ ಕ್ಷೇತ್ರಕಾರ್ಯದೊಂದಿಗೆ ಸಂಗ್ರಹ–ಸಂಪಾದನೆ ಮಾಡಿ ಸೂಕ್ತ ಪ್ರಸ್ತಾವನೆಯನ್ನು ಬರೆದು ಶಾಸ್ತ್ರೀಯ ನೆಲೆಗಟ್ಟಿನಲ್ಲಿ ಕ್ರಮಬದ್ಧ ರೀತಿಯಲ್ಲಿ ವರ್ಗೀಕರಿಸಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಡಾ. ರಾಗೌರವರ ಅಮೂಲ್ಯವೆನಿಸುವ ಕೃತಿಗಳಲ್ಲಿ ತುಂಬಾ ವಿದ್ವತ್‌ಪೂರ್ಣವಾದ ಕೃತಿಯೆಂದರೆ 'ಜಾನಪದ ಪ್ರಕಾರಗಳು'. ಜಾನಪದ ಕ್ಷೇತ್ರದಲ್ಲಿ ಇಡಿಯಾಗಿ ಸಾಹಿತ್ಯ ಪ್ರಕಾರಗಳ ಬಗೆಗೆ ವಿಶ್ಲೇಣಾತ್ಮಕವಾಗಿ ಕಟ್ಟಿಕೊಟ್ಟಿರುವ ಕೃತಿಗಳಲ್ಲಿ ಇದೇ ಮೊದಲೆನ್ನ ಬಹುದು. ಜನಪದ ಸಾಹಿತ್ಯ ಮತ್ತು ಸಾಹಿತ್ಯೇತರ ಪ್ರಕಾರಗಳ ವಿವರಗಳ ಬಗೆಗೆ ಸುದೀರ್ಘವಾಗಿ ಈಗಾಗಲೇ ಚರ್ಚಿಸಲಾಗಿದೆ. ಒಟ್ಟು ೩೪೧ ಪುಟಗಳಲ್ಲಿ ಜಾನಪದ ಪ್ರಕಾರಗಳ ಆಮೂಲಾಗ್ರ ವಿಶ್ಲೇಷಣೆ ಮಾಡಿದ್ದಾರೆ.

ಹತ್ತೊಂಬತ್ತು ಅಧ್ಯಾಯಗಳಲ್ಲಿ ಒಂದೊಂದು ವಿಷಯದ ಬಗೆಗೆ ತುಂಬಾ ಸೂಕ್ಷ್ಮ ರೀತಿಯಲ್ಲಿ ಆಳವಾದ ಅಧ್ಯಯನದ ಭಾಗವಾಗಿ ಚರ್ಚೆ ನಡೆದಿದೆ. ಪ್ರತಿ ಪ್ರಕಾರದಲ್ಲಿ ಇದುವರೆಗೂ ಆಗಿರುವ ಅಧ್ಯಯನದ ವಿಷಯವನ್ನು ಪ್ರಸ್ತಾಪಿಸುತ್ತಾ, ಸಮುದಾಯಗಳಲ್ಲಿ ರೂಢಿಯಲ್ಲಿರುವ ಸಾಹಿತ್ಯವನ್ನು ಸಂಗ್ರಹಿಸಿದ ರೀತಿ ಹಾಗೂ ಅದರ ಅಧ್ಯಯನದಲ್ಲಿ ಕಂಡುಕೊಂಡ ಹೊಸ ಹೊಸ ಸೂಕ್ಷ್ಮಗಳ ವಿವರಗಳನ್ನು ಆಪ್ತತೆಯಿಂದ ಚರ್ಚಿಸಿದ್ದಾರೆ. ಪಾಶ್ಚಿಮಾತ್ಯರಲ್ಲಿ ಆಯಾಯ ಪ್ರಕಾರದಲ್ಲಿ ಆಗಿರುವ ಅಧ್ಯಯನದ ಮಾದರಿಗಳನ್ನು ಪೂರಕವಾಗಿ ವಿವರಿಸುತ್ತಾ, ಸಕಾರಣದಿಂದ ಮುನ್ನಡೆಯುತ್ತಾರೆ. ಯಾವುದೇ ವಿಷಯಗಳನ್ನು ಪ್ರಸ್ತಾಪಿಸುವಾಗ ಸಂಶೋಧನೆಯ ನೆಲೆಗಟ್ಟಿನಲ್ಲಿ ಹಲವು ಪರಾಮರ್ಶನ ಗ್ರಂಥಗಳ ಪರಾಮರ್ಶನೆಯಿಂದ ಅಡಿಟಿಪ್ಪಣಿಯೊಂದಿಗೆ ಅಚ್ಚುಕಟ್ಟಾದ, ಶಾಸ್ತ್ರಬದ್ಧವಾದ ರೀತಿಯಲ್ಲಿ ಕೃತಿ ನಿರ್ಮಾಣಗೊಂಡಿದೆ.

ಮೊದಲ ಅಧ್ಯಾಯ ಶಿಶುಪ್ರಾಸದಲ್ಲಿ ವೈವಿಧ್ಯವೆನಿಸುವ ಸಾಹಿತ್ಯದ ಎಲ್ಲಾ ಮಗ್ಗುಲುಗಳನ್ನು ಚರ್ಚಿಸಲಾಗಿದೆ. ಶಿಶುಪ್ರಾಸಗಳಲ್ಲಿಯೂ ಒಂದು ಪರಂಪರೆಯಿದೆ. ಜನಪದ ಸಾಹಿತ್ಯವು ಹೇಗೆ ತಲೆಮಾರಿನಿಂದ ತಲೆಮಾರಿಗೆ ಹರಿದು ಬರುತ್ತದೆಯೋ ಅದೇ ರೀತಿ ಶಿಶುಪ್ರಾಸಗಳು ಕೂಡ ತಲೆಮಾರಿನಿಂದ ತಲೆಮಾರಿಗೆ ಬಂದಿರುವಂಥದ್ದು. ವಾಕ್ ಸಂಪ್ರದಾಯದಲ್ಲಿರುವ ಶಿಶುಪ್ರಾಸಗಳು ವಿಸ್ತೃತ ಮನರಂಜನೆಯನ್ನು ನೀಡುತ್ತವೆ. ಪ್ರಾಸಬದ್ಧವಾಗಿರುವ ಶಿಶುಗೀತೆಗಳ ಬಳಕೆ ಅವುಗಳಲ್ಲಿ ಸಾಹಿತ್ಯದ ವಸ್ತು ಅಡಗಿದೆ. ಅದರ ಭಾಷೆ, ಭಾವವನ್ನು ಬಹುಮುಖಿ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಮಕ್ಕಳು ಆಟವಾಡುವಾಗ ಆಟಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ಗೀತೆಗಳನ್ನು ಹಾಡುತ್ತಾರೆ. ಮಕ್ಕಳು ಹಾಡುವ ಗೀತೆಗಳ ಉದಾಹರಣೆಗಳ ಸಹಿತ ಚರ್ಚೆಯನ್ನು ಪಶ್ಚಿಮದ ವಿವರಗಳೊಂದಿಗೆ ಈ ನೆಲದ ಶಿಶುಪ್ರಾಸಗಳನ್ನಿಟ್ಟಿಕೊಂಡು ಲೇಖಕರು ವಿಶ್ಲೇಷಿಸುತ್ತಾರೆ.

ಜಾನಪದ ಸಾಹಿತ್ಯದಲ್ಲಿ ಜನಪದ ಗೀತೆಗಳಿಗೆ ಮೊದಲ ಸ್ಥಾನವಿದೆ. ಶ್ರಮದಲ್ಲಿ, ಸಂತೋಷದಲ್ಲಿ, ರಂಜನೆಯಲ್ಲಿ, ನಂಬಿಕೆ–ಸಂಪ್ರದಾಯಗಳಲ್ಲಿ–ಆಚರಣೆಗಳಲ್ಲಿ ಜನಪದರು ಕಟ್ಟಿಕೊಂಡಿರುವ ಗೀತೆಗಳು ಕನ್ನಡದಲ್ಲಿ ಸಮೃದ್ಧವಾಗಿವೆ. ಇದುವರೆಗೂ ದೊರೆತಿರುವ ತ್ರಿಪದಿಗಳು, ಮುಕ್ತಕಗಳು, ಏಳೆ ಗೀತೆಗಳನ್ನು ಇಲ್ಲಿ ಲೇಖಕರು ಶಾಸ್ತ್ರೀಯ ವಾಗಿ ಚರ್ಚಿಸಿದ್ದಾರೆ. ಜನಪದ ಗೀತೆಗಳಲ್ಲಿ ಯೌವ್ವನ, ಮದುವೆ, ಮುಪ್ಪು, ಸಾವು ಮುಂತಾದ ಸನ್ನಿವೇಶಗಳಲ್ಲಿ ಏಕ ಇಲ್ಲವೇ ಸಮೂಹದೊಂದಿಗೆ ಹಾಡುವ ಗೀತೆಗಳಾಗಿ ರುತ್ತವೆ. ಜನಪದರ ಬದುಕಿನ ಸಂಸ್ಕೃತಿಯನ್ನು ಹಾಡಿನ ಮೂಲಕ ಕಟ್ಟಿರುವುದು ಕಾಣುತ್ತದೆ. ಮಕ್ಕಳ ಗೀತೆಗಳು, ಹೆಂಗಸರ ಗೀತೆಗಳು, ಗಂಡಸರ ಗೀತೆಗಳು ಹೀಗೆ ವಿಭಾಗಿಸಿಕೊಂಡು ಗೀತೆಗಳನ್ನು ಚರ್ಚಿಸಲಾಗಿದೆ. ತವರಿನ ಗೀತೆಗಳು, ಶೋಭಾನೆ ಗೀತೆಗಳು, ರಂಜನೆಯ ಗೀತೆಗಳು, ಗಂಡ–ಹೆಂಡಿರ ಪ್ರೇಮ–ಪ್ರಣಯಗೀತೆಗಳು, ವಿರಸದ ಗೀತೆಗಳು, ಬಂಜೆತನದ ಗೀತೆಗಳು, ಮಕ್ಕಳ ಗೀತೆಗಳಲ್ಲಿ ತೊಟ್ಟಿಲ ಹಾಡುಗಳು, ಬೇಸಾಯದ ಹಾಡುಗಳು, ಮಳೆ ಮೇಲಿನ ಹಾಡುಗಳು, ಸುಗ್ಗಿಯ ಹಾಡುಗಳು, ಪ್ರಕೃತಿಯ ಹಾಡುಗಳು ಹೀಗೆ ವೈವಿಧ್ಯವೆನಿಸುವ ಗೀತೆಗಳ ವಿಶ್ಲೇಷಣೆಯಂತೂ ಅಚ್ಚುಕಟ್ಟಾಗಿದೆ.

ಕನ್ನಡ ಜನಪದ ಸಾಹಿತ್ಯದಲ್ಲಿ ಲಾವಣಿಗಳು ಬಹುಮುಖ್ಯವಾಗಿ ಐತಿಹಾಸಿಕ ಮತ್ತು ಪ್ರಸ್ತುತ ನೆಲೆಯಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣಬಹುದು. ಲಾವಣಿಗಳ ಮೂಲದ್ರವ್ಯ ಕಥನದ ವಿಷಯ. ಪಾಶ್ಚಾತ್ಯರಲ್ಲಿನ 'ಬ್ಯಾಲೆಡ್' ಕನ್ನಡದಲ್ಲಿ ಪರ್ಯಾಯವಾಗಿ ಕಥನಗೀತೆಯೆಂಬ ಹೆಸರಿದೆ. ಜನಪದ ಗೀತೆಗಳನ್ನು ಅಶಿಕ್ಷಿತ ಜನಾಂಗದವರು ನಿರ್ಮಿಸಿದ್ದರೆ, ಲಾವಣಿಗಳು ಬಹುಪಾಲು ಸುಶಿಕ್ಷಿತರಿಂದ ನಿರ್ಮಾಣಗೊಂಡವು ಗಳಾಗಿವೆ. ಮಹಾಕಾವ್ಯಕ್ಕಿಂತ ಭಿನ್ನವಾದ ಲಾವಣಿಗಳು ಏಕಘಟನೆಯ ಮೇಲೆ ನಿಂತಿರುತ್ತವೆ. ತುಂಬಾ ಪ್ರಾಚೀನ ಕಾಲದಿಂದ ರಚನೆಗೊಂಡವುಗಳಲ್ಲ. ೧೫ನೇ

ಶತಮಾನದಿಂದ ಈಚೆಗೆ ನಿರ್ಮಾಣಗೊಂಡಿವೆಂಬುದನ್ನು ವಿದ್ವಾಂಸರು ಗುರುತಿಸುತ್ತಾರೆ. ಫ್ಲೀಟ್‌ರು ಸಂಗ್ರಹಿಸಿದ ಲಾವಣಿಗಳಿಂದ ಪ್ರಾರಂಭಗೊಂಡು ಪ್ರಸ್ತುತ ಕಾಲದವರೆಗೆ ರಚನೆಗೊಂಡಿರುವುದನ್ನು ಚರ್ಚಿಸಲಾಗಿದೆ.

ಜಾನಪದ ಪ್ರಕಾರಗಳಲ್ಲಿ ಜನಪದ ಕಥೆಗಳಿಗೆ ಎಲ್ಲಿಲ್ಲದ ಆದರಣೀಯತೆ ಇದೆ. ಮಕ್ಕಳಿಗಾಗಿ ಮೀಸಲಿದ್ದ, ಅಜ್ಜಿಕಥೆಯೆಂತಲೇ ಪ್ರಸಿದ್ಧವಾಗಿದ್ದ ಕತೆಗಳು ಬಾಯಿಂದ ಬಾಯಿಗೆ ಹರಿದುಬಂದಿವೆ. ಕಥೆಗಳಲ್ಲಿ ಹಲವು ಒಳಪ್ರಕಾರಗಳನ್ನು ಹೊಂದಿವೆ. ಸುಖಾಂತ್ಯ ಕಥೆಗಳು, ದುಃಖಾಂತ್ಯ ಕಥೆಗಳು, ಮಾನುಷ ಕಥೆಗಳು, ಅತಿಮಾನುಷ ಕಥೆಗಳು ಎಂದು ವಿಭಾಗಿಸಿದರೂ ಇದರಲ್ಲಿ ಇನ್ನೂ ಒಳಪಂಗಡಗಳಿವೆ. ಆರ್.ಎಸ್. ಬಾಗ್ಸ್‌ನ ವರ್ಗೀಕರಣದಲ್ಲಿ ನಡೆದಿರುವ ಚರ್ಚೆಗಳನ್ನು ಇಲ್ಲಿ ಲೇಖಕರು ವಿವರಿಸುತ್ತಾರೆ. ಕಥೆ ಹೇಳುವ ಮತ್ತು ಕೇಳುವ ಪದ್ಧತಿಗಳು ಇಂದು ನಿನ್ನೆಯದಲ್ಲ. ಪರಂಪರೆಯಲ್ಲಿ ಒಬ್ಬರಿಂದ ಒಬ್ಬರಿಗೆ ಹರಿದುಬಂದಿವೆ. ಅವುಗಳ ಆಶಯ, ವರ್ಗದ ವರ್ಗೀಕರಣದ ಹಿನ್ನೆಲೆಯಲ್ಲಿ ಜಾಗತಿಕ ಜಾನಪದ ವಿದ್ವಾಂಸರುಗಳಾದ ಸ್ಟಿತ್ ಥಾಮ್ಸನ್, ಆಂಟಿ ಆರ್ನೆಯವರ ಮಾಹಿತಿಗಳೊಂದಿಗೆ ಭಾರತೀಯ ಹಾಗೂ ಪಾಶ್ಚಿಮಾತ್ಯ ತತ್ವ ಸಿದ್ಧಾಂತದಡಿಯಲ್ಲಿ ಕಥಾ ಪರಂಪರೆಯಲ್ಲಿ ನಡೆದ ಅಧ್ಯಯನಗಳನ್ನು ಇಟ್ಟುಕೊಂಡು ಇದುವರೆಗಿನ ಅಧ್ಯಯನದ ವಿವರಗಳ ಚರ್ಚೆಯನ್ನು ಸ್ಥೂಲವಾಗಿ ನಡೆಸಿದ್ದಾರೆ. ಹಾಗೆಯೇ ಜನಪದ ಕಥೆಗಳ ಅಧ್ಯಾಯದಲ್ಲಿ ವೈಜ್ಞಾನಿಕವಾದ ವ್ಯವಸ್ಥಿತ ಸಂಗ್ರಹ, ವರ್ಗೀಕರಣ, ಇದುವರೆಗೂ ನಡೆದ ಸಂಶೋಧನಾತ್ಮಕ ಅಧ್ಯಯನಗಳು ಬಹುಮುಖಿಯಾಗಿ ಹೇಗೆ ನಡೆದಿವೆಂಬುದನ್ನು ವಿವರಿಸಿದ್ದಾರೆ.

ಜಾಗತಿಕವಾಗಿ ಗಾದೆಗಳ ಸಂಗ್ರಹ, ಅಧ್ಯಯನ ತೀವ್ರವಾಗಿ ನಡೆದಿದೆ. ಕನ್ನಡದಲ್ಲೂ ಸಹ ಅದೇ ರೀತಿಯಾದ ಸಂಗ್ರಹ, ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಮಾತಿನ ಮಧ್ಯದಲ್ಲಿ ಗಾದೆಗಳನ್ನು ಬಳಕೆ ಮಾಡುವುದು, ಮಾತನ್ನು ಕಡಿಮೆ ಮಾಡಿ ಅರ್ಥಪೂರ್ಣವಾದ ಗಾದೆ ಬಳಸಿ, ಅರ್ಥ ಹೆಚ್ಚು ಮಾಡುವುದು ಗಾದೆಗಳ ವೈಶಿಷ್ಟ್ಯವೂ ಆಗಿದೆ. ಗಾದೆಗಳು ಸಮುದಾಯಗಳ ಅನುಭವದ ಮೂಸೆಯಲ್ಲಿ ಮೂಡಿವೆ. ಗಾದೆಗಳು ವಾಮನನಂತೆ ಕಂಡುಬಂದರೂ ತ್ರಿವಿಕ್ರಮನಂತೆ ಅರ್ಥ ವ್ಯಕ್ತಪಡಿಸುತ್ತವೆ. ಗಾದೆಗಳು ಜನಜೀವನದ ವ್ಯಾಪಕವಾದ ಸತ್ವ, ತತ್ವವಾಗಿದ್ದು, ಜನಜೀವನದಂತೆ ವೈಶಾಲ್ಯತೆಯನ್ನು ವೈವಿಧ್ಯವನ್ನು ಹೊಂದಿವೆ. ಲೇಖಕರು ಗಾದೆಯ ನಿಷ್ಪತ್ತಿ, ಅವುಗಳ ಅರ್ಥ ವಿವರಣೆ, ಪರಂಪರೆಯಲ್ಲಿ ನಡೆದ ಅಧ್ಯಯನಗಳು, ಇದುವರೆಗೂ ದೊರೆತ ಗಾದೆಗಳ ವರ್ಗೀಕರಣ, ಅವುಗಳ ಸವಿಸ್ತಾರವಾದ ವಿಶ್ಲೇಷಣೆ ಈ ಭಾಗದಲ್ಲಿ ಮಾಡಿದ್ದಾರೆ. ಗಾದೆಗಳ ಸಾಹಿತ್ಯಿಕ ಮೌಲ್ಯದಲ್ಲಿ ಗಾದೆಗಳು "ಹಲವರ ಜ್ಞಾನ, ಒಬ್ಬನ ವಿವೇಕ" ಎಂಬ ವರ್ಣನೆಗೆ ಪಾತ್ರವಾಗಿವೆ. "ಕೈ ಹಿಡಿದ ಹೆಂಡ್ರು ಬೆನ್ನು ಹತ್ತಿದ ಚರ್ಮ", "ಅತ್ತೆ ಮನೇಲಿ ಹೆಂಗಿದ್ದಿ ಮಗಳೆ ಅಂದ್ರೆ ಮುಳ್ಳಾಗೆ ಹಾದಿ ನಡೆದ್ಹಂಗೆ ಮೊಳಕೈಗೆ ಚಿಲಕ ಹೊಡೆದ್ಹಂಗೆ"

ಇಂತಹ ಗಾದೆಗಳು ಅಭಿವ್ಯಕ್ತಿಯಲ್ಲಿ ವಿಶಿಷ್ಟವಾಗಿ ಕಾಣುತ್ತವೆ. ಹಾಗೆಯೇ ಭಾಷಾಭಿವ್ಯಕ್ತಿಯಲ್ಲಿ ನಾಟಕೀಯತೆಯೂ ಇದೆ.

ಒಗಟು ಹಳ್ಳಿಯ ಬಾಳಿನ ಸಾರಿಗೆ ಹಾಕಿದ ಒಗ್ಗರಣೆ, ಹಾರಿಸಿದ ಹಾಸ್ಯದ ಚಟಾಕಿ, ಗೂಢಾರ್ಥದ ಹಿನ್ನೆಲೆಯಲ್ಲಿ ಸೃಷ್ಟಿಗೊಂಡ ಮುಕ್ತಕಗಳು, ಇವುಗಳು ಇಬ್ಬರ ನಡುವೆ ನಡೆಯುವ ಪ್ರಶ್ನೋತ್ತರ ಮಾಲಿಕೆಯಲ್ಲಿರುವುವು. ಹೀಗೆ ಹಲವು ರೀತಿಯ ವೈವಿಧ್ಯ ಮತ್ತು ವೈಶಿಷ್ಟ್ಯಗಳ ಸಾರವಿರುವ ಒಗಟುಗಳು ಬುದ್ಧಿ ಪ್ರಧಾನವಾದವುಗಳಾಗಿವೆ. ಒಗಟುಗಳ ನಿಷ್ಪತ್ತಿ, ಶಿಷ್ಟ ಮತ್ತು ಜನಪದ ಸಾಹಿತ್ಯ ಪರಂಪರೆಯಲ್ಲಿ ಯಾವ್ಯಾವ ಹೆಸರಿನಲ್ಲಿ ಬಳಕೆಯಲ್ಲಿದ್ದವು, ಒಗಟಿಗೂ ರೂಪಕಕ್ಕೂ ಇರುವ ನಿಕಟ ಸಂಬಂಧ ವೆಂತಹದ್ದು, ಹಾಸ್ಯಮಯತೆ ಹಾಗೂ ಪ್ರಕೃತಿ ಸಾಮ್ಯತೆ ಹೇಗಿದೆಯೆಂಬುದನ್ನು ಭಾರತೀಯ ಮತ್ತು ಪಾಶ್ಚಿಮಾತ್ಯರ ಚಿಂತನೆಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಬಹಳ ಪ್ರಸಿದ್ಧ ಒಗಟು "ಒಂದಾಣೆ ಕೊಟ್ಟು ಬರಿಸ್ತಿ ಎರಡಾಣೆ ಕೊಟ್ಟು ನೋಡುಸ್ತಿ ಮೂರಾಣೆ ಕೊಟ್ಟು ತರಿಸ್ತಿ ನಾಲ್ಕಾಣೆ ಕೊಟ್ಟು ಮಾಡಿಸ್ತಿ ತೋಳಿನಲ್ಲಿ ಮಿಂಡ ತೊಡೆ ಮೇಲೆ ಗಂಡ ಈ ಒಗಟು ಬಿಡಿಸಲಾರದವನಿಗೆ ಅಗ್ನಿಕುಂಡ". ಇಂತಹ ಕಥನಾತ್ಮಕವಾದ ಒಗಟುಗಳು ಸ್ಪರ್ಧೆಯ ನೆಲೆಗಟ್ಟಿನಲ್ಲಿಯೇ ಹೆಚ್ಚು ವ್ಯಕ್ತವಾಗುತ್ತವೆ. ಗಾದೆಗಳ ರೀತಿಯಲ್ಲಿ ಸುಲಭವಾಗಿ ಮಾತಿನ ಮಧ್ಯದಲ್ಲಿ ಬಳಕೆಯಾಗುವಂಥವುಗಳಲ್ಲ. ಪುರುಸೊತ್ತಿನ ಸಂದರ್ಭದಲ್ಲಿ ಇಬ್ಬರ ಅಥವಾ ಹಲವು ಜನರ ನಡುವೆ ನಡೆಯುವಂಥವು ಆಗಿರುತ್ತವೆ. ಒಗಟುಗಳ ಅಭಿವ್ಯಕ್ತಿ ತಂತ್ರದಲ್ಲಿ ಭಾಷೆ ಪ್ರಧಾನವಾದುದು. ಉಪಮಾ, ರೂಪಕದಲ್ಲಿ ಒಗಟುಗಳು ಬಳಕೆಯಾಗುತ್ತವೆ. ಅಭಿವ್ಯಕ್ತಿ ರೂಪದಲ್ಲಿ ಸಂಭಾಷಣಾ ತಂತ್ರವೂ ಮುಖ್ಯವಾಗಿದೆ. ಒಗಟುಗಳ ಸಾಹಿತ್ಯಿಕ ಸ್ವಾರಸ್ಯದಲ್ಲಿ ರೂಪಕ, ಉಪಮೆ ಪ್ರತಿಮಾದಿ ಅಲಂಕಾರ ಸಾಧನಗಳಿಂದ ಸಾಹಿತ್ಯಿಕ ನೆಲೆ ನಿರ್ಮಾಣಗೊಳ್ಳುತ್ತದೆ. ಒಮ್ಮೊಮ್ಮೆ ಸಾಹಿತ್ಯಿಕ ಮೌಲ್ಯ ವಸ್ತುವಿನಿಂದ ನಿರ್ಧಾರವಾಗದಿದ್ದರೂ ಅಭಿವ್ಯಕ್ತಿಯ ಕ್ರಮದಿಂದ ನಿರ್ಣೀತವಾಗುವಂಥದ್ದು. ಜೊತೆಗೆ ಹಾಸ್ಯ ಮತ್ತು ವಿಡಂಬನೆಗಳು ಒಗಟುಗಳಲ್ಲಿ ಸ್ವಾರಸ್ಯವಾಗಿ ಕಂಡುಬರುತ್ತವೆ. ಒಗಟುಗಳಲ್ಲಿ ಸಾಂಸ್ಕೃತಿಕ ವಿಚಾರಗಳು ಎಂಬ ಅಧ್ಯಾಯದಲ್ಲಿ ಸಮುದಾಯಗಳಲ್ಲಿರುವ ಒಗಟುಗಳು ಬದುಕಿನ ಜೀವದ್ರವ್ಯಗಳಾಗಿರುತ್ತವೆ. "ಸುತ್ತಿ ಸುತ್ತಿ ಬರುತ್ತೀಯಾ ನನಗಾಗಿ ಮೇಲೊಬ್ಬ ಕೂತವ್ನೆ ನಿನಗಾಗಿ ನನ್ನಿಂದ ನಿನ್ನ ಪ್ರಾಣ ಹತವಾಗಿ" ಇದಕ್ಕೆ ಅರ್ಥ 'ಗಾಣದಹುಳು-ಮೀನು'. ಹೀಗೆ ಉತ್ತಮ ಸಾಹಿತ್ಯಿಕ ಒಗಟಿನ ರೂಪವಾಗಿದೆ. ಇದರಲ್ಲಿ ನಾಟಕೀಯ ಸ್ವರೂಪವೂ ಅಭಿವ್ಯಕ್ತವಾಗಿದೆ.

ಕರ್ನಾಟಕದಲ್ಲಿ ಕೋಲಾಟವು ತುಂಬಾ ವಿಶಿಷ್ಟವಾದ ಕಲೆಯಾಗಿದೆ. ಬಯಲಲ್ಲಿ ತಂಡ ಕಟ್ಟಿಕೊಂಡು ಯೌವ್ವನದಿಂದ ವೃದ್ಧಾಪ್ಯದವರೆಗಿನ ವ್ಯಕ್ತಿಗಳು ಸೇರಿಕೊಂಡು ಕೋಲುಗಳಿಡಿದು ಲಯಕ್ಕೆ ಬದ್ಧವಾಗಿ ಕಥನಗಳುಳ್ಳ ಹಾಡುಗಳನ್ನು ಹಾಡುತ್ತಾ ನೋಡುಗರನ್ನು ಮಂತ್ರಮುಗ್ಧರನ್ನಾಗಿಸುವ ಶಕ್ತಿ ಈ ಆಟಕ್ಕಿದೆ. ಲೇಖಕರು ರಚನೆಯ

ದೃಷ್ಟಿಯಿಂದ ಕೋಲಾಟದ ಗೀತೆಗಳನ್ನು ಭಾವಗೀತಾತ್ಮಕ ಮತ್ತು ಕಥನಾತ್ಮಕಗಳೆಂದು ಎರಡು ಭಾಗಗಳಾಗಿ ವಿಭಾಗಿಸುತ್ತಾ, ಪ್ರಣಯ, ಭಕ್ತಿ ಮತ್ತು ಹಾಸ್ಯಗಳೆಂದು ವಸ್ತುವಿನ ದೃಷ್ಟಿಯಿಂದ ವಿಭಜಿಸಿ, ಸಂಕ್ಷಿಪ್ತವಾಗಿ ಆಪ್ತತೆಯಿಂದ ವಿವರಿಸುತ್ತಾರೆ.

'ಜನಪದ ಕಲೆಗಳು ಮತ್ತು ಮನೋರಂಜನೆ' ಅಧ್ಯಾಯದಲ್ಲಿ ಮಾನವನ ಜೀವನದ ಒಂದು ಹಂತದಲ್ಲಿ ಪ್ರಾರಂಭಗೊಂಡ ಕಲೆಗಳು ಸಂಸ್ಕೃತಿಯ ಭಾಗವಾಗಿ ವ್ಯಕ್ತವಾಗಿವೆ. ಪರಂಪರೆಯಲ್ಲಿರುವ ಕಲೆಗಳನ್ನು ಧಾರ್ಮಿಕ ಮತ್ತು ಲೌಕಿಕ ಎಂದು ವಿಭಾಗಿಸುತ್ತಾ, ಧಾರ್ಮಿಕ ಕಲೆಗಳು ಅತಿಪ್ರಾಚೀನವಾಗಿದ್ದು, ಲೌಕಿಕಕ್ಕೆ ಬಹಳ ಇತಿಹಾಸವಿಲ್ಲವೆನ್ನುವುದನ್ನು ವಿವರಿಸುತ್ತಾರೆ. ಅದಕ್ಕೆ ಸಕಾರಣಗಳನ್ನು ನೀಡುತ್ತಾರೆ. ಕಲೆಗಳು ಹಬ್ಬ ಹರಿದಿನ, ಉತ್ಸವಗಳಲ್ಲಿ ಪ್ರದರ್ಶನಗೊಳ್ಳುತ್ತವೆ. ಕಲೆಗಳು ಮನರಂಜನೆಗಾಗಿ ಅಷ್ಟೇ ಅಲ್ಲ. ಪ್ರತಿಯೊಂದು ಜನಪದ ಕಲೆಯು ಕ್ರಿಯಾತ್ಮಕವಾದುದು. ಅವು ಬದುಕಿನ ವಿವಿಧ ಚಟುವಟಿಕೆಗಳೊಂದಿಗೆ ಬೆರೆತುಹೋಗಿರುವಂಥವುಗಳು ಎನ್ನುತ್ತಾರೆ ಲೇಖಕರು.

ಜನಪದ ಪುರಾಣ, ಐತಿಹ್ಯ ನಂತರ ಮತ್ತೊಂದು ಸ್ಥಾನವನ್ನು ತುಂಬುತ್ತದೆ. ಪುರಾಣ ದೈವಿಕ ನೆಲೆಯನ್ನು ಒಳಗೊಳ್ಳುತ್ತದೆ. ಆದರೆ ಐತಿಹ್ಯ ಒಂದು ಘಟನೆ ನಡೆದಿದೆ ಎಂದು ಹೇಳುವಾಗ ಖಚಿತತೆಯಿಂದ ದೂರ ಉಳಿಯುತ್ತದೆಂದು ಹೇಳಬಹುದು. ಪುರಾಣ-ಐತಿಹ್ಯ-ಇತಿಹಾಸ ಹೀಗೆ ಮೂರಕ್ಕೂ ಇರುವ ವ್ಯತ್ಯಾಸ, ಸಂಬಂಧ, ಅವುಗಳ ನಿಜವಾದ ಅರ್ಥ, ಅವುಗಳ ವರ್ಗೀಕರಣ, ಅವುಗಳ ಪ್ರಕಾರಗಳು, ವಿಭಿನ್ನ ರೀತಿಯಲ್ಲಿ ದೊರೆತಿರುವ ಐತಿಹ್ಯ-ಪುರಾಣಗಳಲ್ಲಿ ಪ್ರಧಾನವಾಗಿ ಯಾವುವು ಸಿಕ್ಕಿವೆ ಅವುಗಳ ವೈಶಿಷ್ಟ್ಯವೇನು-ಎಂಬುದನ್ನು ಚರ್ಚಿಸಿದ್ದಾರೆ.

ಜನಪದ ಆಟಗಳು, ಜನಪದ ನಂಬಿಕೆಗಳು, ಜನಪದ ಅಡುಗೆ ಈ ಮೂರು ಅಧ್ಯಾಯಗಳಲ್ಲಿ ಜನಪದರು ರೂಢಿಸಿಕೊಂಡು ಬಂದಿರುವ ಆಟಗಳು ಯಾವುವು, ಅವುಗಳಲ್ಲಿ ದೈಹಿಕವಾಗಿ, ಮಾನಸಿಕವಾಗಿ ಮನುಷ್ಯನಿಗೆ ಆಗುವ ಅನುಕೂಲಗಳಾವುವು ಎಂಬುದನ್ನು ವಿವರಿಸುತ್ತಾರೆ. ಜನಪದರ ಬದುಕು ನಂಬಿಕೆಯ ಮೇಲೆ ನಿಂತಿದೆ. ಈ ನಂಬಿಕೆಗಳು ವೈಜ್ಞಾನಿಕ ಯುಗದಲ್ಲೂ ಜನರ ಭಾಗವಾಗಿ ಹೇಗೆ ಉಳಿದುಬಂದಿವೆಂಬುದನ್ನು ಸವಿವರದೊಂದಿಗೆ ಚರ್ಚಿಸಿದ್ದಾರೆ. ಜನಪದರ ಅಡುಗೆಯಲ್ಲಿ ನಾಡಿನ ಉದ್ದಗಲದಲ್ಲಿ ಪ್ರದೇಶ ಪ್ರದೇಶಕ್ಕೂ ವೈವಿಧ್ಯವೆನಿಸುವ ತರಾವರಿಯ ರುಚಿಗಳನ್ನು ಒಳಗೊಂಡ ಪ್ರಕಾರಗಳಿವೆ. ಹೀಗೆ ಇರುವ ಅಡುಗೆ ಪದ್ಧತಿ ಸಂಶೋಧನ ಕ್ಷೇತ್ರವಾಗಿ ರೂಪುಗೊಂಡು ಅಧ್ಯಯನದ ಸಾಮಗ್ರಿಯಾಗಿ ಹೇಗೆ ಪರಿಗಣಿಸಬಹುದು ಎಂಬುದನ್ನು ತಿಳಿಸಿದ್ದಾರೆ. ಸಾಂಪ್ರದಾಯಿಕ ಆಹಾರ ಪದ್ಧತಿ, ಆಧುನಿಕ ಆಹಾರ ಪದ್ಧತಿಯಲ್ಲಿನ ವ್ಯತ್ಯಾಸಗಳು, ಸಂಬಂಧಗಳು ಅವುಗಳಲ್ಲಿ ಆಗಿರುವ ಸ್ಥಿತ್ಯಂತರಗಳು, ಜನಪದ ಅಡುಗೆಯು ಇಂದು ಉದ್ಯಮೀಕರಣಗೊಳ್ಳುತ್ತಿರುವಾಗಿನ ಅಪಾಯದ ವಿವರವನ್ನು ಇಲ್ಲಿ ಚರ್ಚಿಸಿದ್ದಾರೆ.

ಒಟ್ಟಾರೆ ಜಾನಪದ ಕ್ಷೇತ್ರದಲ್ಲಿ ಇದುವರೆಗೂ ಇದ್ದ ಒಂದು ಕೊರತೆಯನ್ನು ನೀಗಿಸುವ ಪ್ರಾಮಾಣಿಕ ಪ್ರಯತ್ನದಲ್ಲಿ ಡಾ.ರಾಗೌರವರು 'ಜಾನಪದ ಪ್ರಕಾರಗಳು' ಕೃತಿಯನ್ನು ಹೊರತರುವ ಮುಖಾಂತರ ಯಶಸ್ವಿಯಾಗಿದ್ದಾರೆ. ಲೇಖಕರೇ ಮುನ್ನುಡಿಯಲ್ಲಿ "ಜಾನಪದ ವೈವಿಧ್ಯತೆವನ್ನು ನೋಡಬೇಕೆಂದರೆ, ಅದರ ಪ್ರಕಾರಗಳಿಗೆ ಹೋಗಬೇಕಾಗುತ್ತದೆ. ಜಾನಪದದಲ್ಲಿ ಅನೇಕ ಪ್ರಕಾರಗಳಿದ್ದು, ಒಂದೊಂದನ್ನೂ ಹಲವು ಆಯಾಮಗಳಲ್ಲಿ ಅಧ್ಯಯನ ಮಾಡಬಹುದಾಗಿದೆ. ಜಾನಪದವನ್ನು ವರ್ಗೀಕರಿಸುವುದರ ಮೂಲಕ ಪ್ರಕಾರಗಳ ಗುರುತಿಸುವಿಕೆ ಆರಂಭವಾಯಿತು. ಜಾನಪದವನ್ನು ಶಾಬ್ದಿಕ ಮತ್ತು ಶಾಬ್ದಿಕವಲ್ಲದ ಜಾನಪದವೆಂದು ಗುರುತಿಸುವುದರ ಮೂಲಕ ಇದು ಮೊದಲಿನಂತೆ ತೋರುವುದು. ಇದನ್ನು ಜನಪದ ಸಾಹಿತ್ಯ ಮತ್ತು ಜನಪದ ಸಾಹಿತ್ಯೇತರ ವರ್ಗಗಳೆಂದೂ ಕರೆಯಲಾಗಿದೆ. ಹೀಗೆ ಜಾನಪದ ವರ್ಗೀಕರಣ ಮತ್ತು ಪ್ರಕಾರಗಳ ನಿರ್ದೇಶನ ಕಾರ್ಯ ಮತ್ತು ಆ ಕುರಿತ ಚರ್ಚೆಗಳು ನಡೆಯುತ್ತಲೇ ಇವೆ; ಅದಕ್ಕೊಂದು ಮುಕ್ತಾಯ ಹಾಡುವುದು ಇವೊತ್ತಿಗೂ ಕಷ್ಟವಾಗಿದೆ. ಆದಕಾರಣ ಜಾನಪದದ ಸಂಕೀರ್ಣ ಸ್ವರೂಪವನ್ನು ಇದು ತಿಳಿಸುತ್ತದೆ ಎಂದೇ ನನ್ನ ಅನಿಸಿಕೆ" ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಶಿಷ್ಟ ಸಾಹಿತ್ಯದಲ್ಲಿ 'ಸಾಹಿತ್ಯ ಪ್ರಕಾರಗಳ' ಬಗೆಗೆ ಅಧ್ಯಯನಗಳು ತೀವ್ರವಾಗಿ ನಡೆದಿವೆ. ಜಾನಪದ ಸಾಹಿತ್ಯದಲ್ಲಿ ಪ್ರಕಾರಗಳನ್ನು ಕುರಿತ ಬಿಡಿ ಬಿಡಿ ಲೇಖನ ರೂಪದಲ್ಲಿ ಪ್ರಕಟಗೊಂಡಿವೆ. ಆದರೆ ಈ ರೀತಿಯಾದ ಒಟ್ಟುಗೂಡಿದ ಹಲವು ಪ್ರಕಾರಗಳನ್ನು ವಿಶ್ಲೇಷಣೆ ಮಾಡಿದ ಕೃತಿ ಇದೇ ಮೊದಲೆನ್ನಬಹುದು. ಇಂತಹ ಅಮೂಲ್ಯ ಕೃತಿಯನ್ನು ಹೊರತಂದಿದ್ದಕ್ಕೆ ಲೇಖಕರಿಗೆ ಹೃತ್ಪೂರ್ವಕ ಧನ್ಯವಾದಗಳು.

ಕೆ.ವಿ. ಮುದ್ದವೀರಪ್ಪ

೪೬. ಕನ್ನಡ– ಮರಾಠಿ ಸಾಂಸ್ಕೃತಿಕ ಬಾಂಧವ್ಯ

ಕನ್ನಡ–ಮರಾಠಿ ಸಾಂಸ್ಕೃತಿಕ ಬಾಂಧವ್ಯ, ಡಾ. ವಿಠಲರಾವ್ ಟಿ. ಗಾಯಕ್ವಾಡ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩೨೭೬, ೨೦೧೨, ಪುಟ–೧೪+೧೭೭, ಬೆಲೆ ರೂ. ೧೨೦/-

ಭಾಷೆ ಹೇಗೆ ಸಂಸ್ಕೃತಿಯನ್ನು ಪೋಷಿಸುತ್ತಾ ಬಂದಿದೆಯೋ ಹಾಗೆಯೇ ಸಂಸ್ಕೃತಿಯೂ ಭಾಷೆಗೆ ತನ್ನದೆಲ್ಲವನ್ನೂ ಧಾರೆ ಎರೆಯುತ್ತಾ ಬರುದಿರುವುದನ್ನು ನೋಡಬಹುದಾಗಿದೆ. ಭಾಷೆ ಭಾಷೆಗಳ ನಡುವೆ ಬಿಡಿಸಲಾರದಂತಹ ಸಂಬಂಧವಿರುವುದು ಎಷ್ಟು ಸತ್ಯವೋ ಸಂಸ್ಕೃತಿ ಸಂಸ್ಕೃತಿಯ ನಡುವೆ ಕಗ್ಗಂಟಿರುವುದು ಅಷ್ಟೇ ಸತ್ಯ. ಕನ್ನಡ ಮತ್ತು ಮರಾಠಿ ಭಾಷೆಗಳು ಬೇರೆ ಬೇರೆಯಾಗಿದ್ದರೂ ಈ ಎರಡೂ

ಭಾಷೆಗಳ ಸಂಸ್ಕೃತಿಗಳ ಬಾಂಧವ್ಯವೂ ಗಾಢವಾಗಿರುವುದೂ ಅಷ್ಟೇ ಸತ್ಯವಿದಿತವಾದ ಸಂಗತಿ. ಭಾಷೆ ಭಾಷೆಗಳ ನಡುವೆ ಹಾಗೂ ಸಂಸ್ಕೃತಿ ಸಂಸ್ಕೃತಿಗಳ ನಡುವಣ ಕೊಡುಕೊಳ್ಳುವಿಕೆ ಇಂದು ನಿನ್ನೆಯದಲ್ಲ. ಇವುಗಳಿಗೆ ಶತಶತಮಾನಗಳ ದಾಖಲೆಗಳಿವೆ. ಇಂತಹ ಸತ್ಯ ವಿದಿತ ಸಂಗತಿಗಳನ್ನು ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಹೊರತಂದ ಕೀರ್ತಿ ಡಾ. ವಿಠಲರಾವ್ ಟಿ. ಗಾಯಕ್ವಾಡ್‌ರವರಿಗೆ ಸಲ್ಲುತ್ತದೆ. ಎರಡೂ ಸಂಸ್ಕೃತಿಗಳ ಬಾಂಧವ್ಯದ ಹೊಸ ಹೊಸ ಸಂಗತಿಗಳನ್ನು ಮುದ್ರಿಸಿ ಹೊತ್ತಿಗೆಯ ರೂಪದಲ್ಲಿ ಹೊರತಂದ ಕೀರ್ತಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಬೇಕಾಗಿದೆ. ಸಂಸ್ಕೃತಿ–ಸಂಸ್ಕೃತಿಗಳ ನಡುವಿನ ಬಾಂಧವ್ಯವನ್ನು ದಾಖಲಿಸುವಾಗ ವಿಶೇಷವಾಗಿ ಗಡಿನಾಡ ಪ್ರದೇಶ/ಜಿಲ್ಲೆಗಳನ್ನು ಹೆಚ್ಚು ಕೇಂದ್ರೀಕರಿಸಬೇಕಾಗುತ್ತದೆ. ಇಂತಹ ವಿಶೇಷವಾದ ಕಾರ್ಯವನ್ನು ಮಾಡಿ ಈ ಹೊತ್ತಿಗೆಯಲ್ಲಿ ದಾಖಲಿಸಲಾಗಿದೆ. ಗಡಿನಾಡ ಪ್ರದೇಶ/ಜಿಲ್ಲೆಗಳ ಧಾರ್ಮಿಕ, ರಾಜಕೀಯ ಹಾಗೂ ಸಾಹಿತ್ಯಿಕ ಅಂಶಗಳನ್ನು ಒಳಗೊಂಡಂತೆ ಕನ್ನಡ ಭಾಷೆಯಲ್ಲಿ ಮರಾಠಿ ಭಾಷೆಯ ಅಂಶಗಳನ್ನು ಮರಾಠಿ ಭಾಷೆಯಲ್ಲಿ ಕನ್ನಡ ಭಾಷೆಯ ಅಂಶಗಳೂ ದಾಖಲಾಗಿರುವುದು ಹೆಚ್ಚು ಗಮನಾರ್ಹ ಸಂಗತಿ.

ರಾಜಕೀಯವಾಗಿ ಕನ್ನಡ ಹಾಗೂ ಮರಾಠಿ ಅಥವಾ ಕರ್ನಾಟಕ ಹಾಗೂ ಮಹಾರಾಷ್ಟ್ರಗಳನ್ನು ಅವಲೋಕಿಸಿದಾಗ ಇವೆರಡರ ಬಾಂಧವ್ಯ ಬಿಡಿಸಲಾಗದ ನಂಟು ಬೆಸೆದುಕೊಂಡಿರುವುದು ಗಮನಾರ್ಹ ಸಂಗತಿ. ಕನ್ನಡದ ಲಾಕ್ಷಣಿಕ ಗ್ರಂಥವನ್ನು ರಚಿಸಿದ ಶ್ರೀವಿಜಯ ತನ್ನ ಕವಿರಾಜಮಾರ್ಗದಲ್ಲಿ ಹೇಳಿರುವಂತೆ ಕನ್ನಡ ನಾಡು ಕಾವೇರಿಯಿಂದ ಗೋದಾವರಿ ನದಿಯ ಆಚೆಗೂ ಹಬ್ಬಿತ್ತು ಎಂದು ಹೇಳುವಲ್ಲಿ ಕನ್ನಡದ ಪ್ರಾಬಲ್ಯ ಮಹಾರಾಷ್ಟ್ರದವರೆಗೂ ವ್ಯಾಪಿಸಿತ್ತೆಂಬುದು ಖಚಿತವಾಗುತ್ತದೆ. ಚಾಲುಕ್ಯ ಚಕ್ರವರ್ತಿ ಎರಡನೇ ಪುಲಕೇಶಿ ನರ್ಮದಾ ನದಿ ತೀರದಲ್ಲಿ ಹರ್ಷವರ್ಧನನನ್ನು ಸೋಲಿಸಿ 'ದಕ್ಷಿಣ ಪಥೇಶ್ವರ'ನೆಂಬ ಬಿರುದು ಪಡೆದಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಶಾತವಾಹನರು, ಬಾದಾಮಿ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಪೇಶ್ವೆಗಳು ಮುಂತಾದ ಹಲವು ಪ್ರಮುಖ ರಾಜವಂಶರುಗಳು ಮಹಾರಾಷ್ಟ್ರದ ಕೆಲವು ಪ್ರದೇಶಗಳನ್ನು ಒಳಗೊಂಡಂತೆ ಕರ್ನಾಟಕವನ್ನಾಳಿ ಇಲ್ಲಿನ ಜನರ ನಡುವೆ ಸಾಂಸ್ಕೃತಿಕ ಕೊಡುಕೊಳ್ಳುವಿಕೆಗೆ ಕಾರಣಕರ್ತರಾಗುವ ಮೂಲಕ ಸಾಂಸ್ಕೃತಿಕ ಬಾಂಧವ್ಯ ವನ್ನು ಪೋಷಿಸಿದ್ದಾರೆ. ಈ ರಾಜರುಗಳ ಅಧಿಕಾರದ ಅವಧಿಯಲ್ಲಿ ಜಾರಿಗೆ ತಂದ ಆಚರಣೆಗಳು, ಕಾನೂನು ಕಟ್ಟಳೆಗಳು, ಸಂಪ್ರದಾಯಗಳು–ಇವೆಲ್ಲವೂ ಆಕಾಲದ ಜನರನ್ನು ಸಾಂಸ್ಕೃತಿಕ ತೆಕ್ಕೆಗೆ ಒಡ್ಡಿವೆ ಹಾಗೂ ಅವೆಲ್ಲವೂ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲ್ಪಟ್ಟಿವೆ.

ಹಲವಾರು ಕಾರಣಗಳಿಂದಾಗಿ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದು ನೆಲೆಸಿರುವ ಲಕ್ಷಾಂತರ ಮರಾಠಿ ಕುಟುಂಬದವರೊಂದಿಗೆ ಕನ್ನಡಿಗರೂ ಅನ್ಯೋನ್ಯ ಜೀವನ ನಡೆಸುತ್ತಿರುವುದು ಸತ್ಯವಾದ ಸಂಗತಿ. ಹಾಗೆಯೇ ನಮ್ಮ ಕನ್ನಡಿಗರೂ ಮಹಾರಾಷ್ಟ್ರದಲ್ಲಿ ನೆಲೆಸಿದ್ದು, ಅಲ್ಲಿನ ಅಚಾರ–ವಿಚಾರಗಳಿಗೆ ಬದ್ಧರಾಗಿರುವುದರ ಮೂಲಕ ಕರ್ನಾಟಕ ಮಹಾರಾಷ್ಟ್ರಗಳ(ಕನ್ನಡ–ಮರಾಠಿ) ಸಾಂಸ್ಕೃತಿಕ ಬಾಂಧವ್ಯವನ್ನು ಪೋಷಿಸುವಲ್ಲಿ ಎಲ್ಲರೂ ಬದ್ಧರಾಗಿದ್ದಾರೆ.

ಸಾಹಿತ್ಯಿಕ ಅಂಶಗಳನ್ನು ಅವಲೋಕಿಸಿದಾಗ ಕವಿರಾಜಮಾರ್ಗದಲ್ಲಿ ಕನ್ನಡಿಗರ ಕೆಚ್ಚೆದೆಯನ್ನು ಕುರಿತಂತೆ ಗುಣಗಾನ ಮಾಡಿರುವುದಕ್ಕೆ ಸರಿಸಮಾನವಾಗಿ ಹಲವಾರು ಮರಾಠಿ ಕೃತಿಗಳಲ್ಲಿ ಉಲ್ಲೇಖಗೊಂಡಿರುವುದು ಗಮನಾರ್ಹ ಸಂಗತಿ. ಸಾಯುವವರೆಗೂ ಹಿಂತಿರುಗದೆ ಹೋರಾಡುವ ಮರಹಟ್ಟಿ>ಮರಾಠಾ ಎಂದು ಹೇಳುವಲ್ಲಿ ಕನ್ನಡಿಗ ಕೆಚ್ಚೆದೆಯ ವೀರರೆಂಬುದು ತಿಳಿದುಬರುತ್ತದೆ. ಈ ಎರಡೂ ಭಾಷಿಕರು ಹೋರಾಟಗಾರರು ಶ್ರಮಜೀವಿಗಳು, ಕಲಿಗಳು, ಅತ್ಯುಗ್ರರು ಎಂದು ತಿಳಿಯಬಹುದಾಗಿದೆ. ಹಾಗೆಯೇ ಕನ್ನಡದ ಕೆಲವು ಪ್ರಮುಖ ಕೃತಿಗಳಲ್ಲಿ ಮರಾಠಿ ಭಾಷೆಯ ಪದಗಳೂ ಮರಾಠಿ ಕೃತಿಗಳಲ್ಲಿ ಕನ್ನಡ ಭಾಷೆಯ ಪದಗಳೂ ಬಳಕೆಗೊಂಡಿರುವುದು ಉಲ್ಲೇಖಾರ್ಹ. ಕನ್ನಡದ ಹಲವು ಕೃತಿಗಳು ಮರಾಠಿ ಭಾಷೆಗೂ ಮರಾಠಿ ಭಾಷೆಯ ಕೃತಿಗಳು ಕನ್ನಡಕ್ಕೂ ಅನುವಾದಗೊಳ್ಳುವ ಮೂಲಕ ಅಲ್ಲಿನ ಸಂಸ್ಕೃತಿ ಆಚಾರ ವಿಚಾರಗಳು ಕನ್ನಡಿಗರಲ್ಲಿ ಒಗ್ಗಿಕೊಂಡಿರುವುದಲ್ಲದೇ ಕನ್ನಡಿಗರ ಆಚಾರ ವಿಚಾರಗಳು ಮರಾಠಿಗರಲ್ಲಿ ಸೇರಿಹೋಗಿರುವುದನ್ನು ಕಾಣಬಹುದಾಗಿದೆ.

ಶತಶತಮಾನಗಳಿಂದ ಒಟ್ಟೊಟ್ಟಿಗೆ ಬೆರೆತು ಬದುಕುತ್ತಾ ಬಂದಿರುವಂತಹ ಕನ್ನಡ–ಮರಾಠಿ ಭಾಷಿಕರು ಒಬ್ಬರಿಂದ ಒಬ್ಬರು ಪ್ರಭಾವಿತರಾಗುತ್ತಾ ಬಂದಿದ್ದಾರೆ. ಒಬ್ಬರಿಗೊಬ್ಬರು ಮಾದರಿಗಳಾಗಿ ನಿಂತಿದ್ದಾರೆ. ಸಂಸ್ಕೃತಿಯ ಏಕನೆಲೆಯಲ್ಲಿ ಭಿನ್ನ ಭಾಷಿಕರಾದರೂ ಸಾಮಾಜಿಕವಾಗಿ, ಸಾಹಿತ್ಯಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಈ ದ್ವಿಭಾಷಿಕರ ನಡುವೆ ಹೆಚ್ಚು ಸಾಮ್ಯತೆಗಳಿರುವುದು ಕಂಡುಬರುತ್ತದೆ. ಅಂದರೆ ಈ ಎರಡೂ ಭಾಷೆಗಳು ಒಂದಕ್ಕೊಂದು ಪ್ರೇರಣೆ, ಪ್ರಭಾವ ಬೀರುತ್ತಾ ಒಂದು ವಿಶಿಷ್ಟ ಸಾಂಸ್ಕೃತಿಕ ಬಾಂಧವ್ಯವನ್ನು ರೂಪಿಸಿಕೊಂಡಿವೆ ಎಂಬುದು ಗಮನಿಸಬೇಕಾದಂತಹ ಸಂಗತಿಯಾಗಿದೆ. ಕಾವೇರಿಯಿಂದ ಗೋದಾವರಿವರೆಗಿನ ಕನ್ನಡ ನಾಡನ್ನು ಕುರಿತು ಕವಿರಾಜಮಾರ್ಗಕಾರನು ಉಲ್ಲೇಖಿಸಿರುವುದು ಸಹ ಇಲ್ಲಿ ಗಮನಾರ್ಹ ಸಂಗತಿಯಾಗಿದೆ.

ಹಬ್ಬ–ಹರಿದಿನಗಳು, ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳಲ್ಲಿಯೂ ಎರಡೂ ಭಾಷಿಕರ ನಡುವೆ ಸಮನ್ವತೆಯ ವಿಚಾರಗಳು ವಿಶಿಷ್ಟವಾಗಿ ಕಂಡುಬಂದಿರುವುದಲ್ಲದೆ ಮನುಷ್ಯ ರೂಪಿತ ಸಂಸ್ಕೃತಿ ಏಕರೂಪತೆಯ ಸ್ವರೂಪದಿಂದ ವಿಶಿಷ್ಟವಾಗಿ ವ್ಯಾಪಿಸುವ ಮೂಲಕ ಇಂದಿಗೂ ಅದರ ಬಾಂಧವ್ಯದ ಎಳೆಗಳು ಉಳಿದುಕೊಂಡು ಬಂದಿವೆ.

ಇವೆಲ್ಲವುಗಳ ನಡುವೆ ಯಾವ ಭಾಷಿಕ ಸಂಸ್ಕೃತಿ ಪ್ರಧಾನ, ಯಾವ ಭಾಷಿಕ ಸಂಸ್ಕೃತಿ ಅಧೀನ ಎಂಬ ಭಾವನೆಗಳು ಬರಬಾರದು ಹಾಗೆ ಬಂದರೆ ಅದು ಪ್ರಧಾನ, ಅಧೀನ ಎಂಬ ಭೇದಗಳಿಗೆ ಕಾರಣವಾಗಬಹುದು. ಏಕೆಂದರೆ ಯಾವುದೇ ಸಂಸ್ಕೃತಿಯಲ್ಲಿ ಭೇದಭಾವ ಎಂಬುದೇ ಇರುವುದಿಲ್ಲ. ವಿಶಿಷ್ಟವಾಗಿ ಗೋಚರಿಸುವ ಸಂಸ್ಕೃತಿ ಇಂಥ ಸೀಮಿತವಾದ ಗೋಡೆಯನ್ನು ನಿರ್ಮಿಸಿಕೊಂಡಿರುವುದಿಲ್ಲ. ಎಲ್ಲಾ ಸಂಸ್ಕೃತಿಗಳ ಉತ್ತಮ ಅಂಶಗಳನ್ನು ತನ್ನ ತೆಕ್ಕೆಗೆ ಒಳಗು ಮಾಡಿಕೊಳ್ಳುತ್ತಾ ಬೆಳೆದು ಬರುತ್ತಿರುತ್ತದೆ. ಕನ್ನಡ–ಮರಾಠಿ ಸಂಸ್ಕೃತಿಗಳೂ ಇದಕ್ಕೇನೂ ಹೊರತಾದವುಗಳಲ್ಲ. ಒಟ್ಟಿನಲ್ಲಿ ಸಂಸ್ಕೃತಿ ಒಂದು; ಭಾಷೆಗಳು ಭಿನ್ನ ಎಂಬ ನೆಲೆಯಿಂದಲೇ ಕನ್ನಡ ಮರಾಠಿ ಸಾಂಸ್ಕೃತಿಕ ಬಾಂಧವ್ಯದ ವಿಚಾರಗಳನ್ನು ಕುರಿತು ಲೇಖಕರು ಸುದೀರ್ಘವಾಗಿ ಚರ್ಚಿಸಿದ್ದಾರೆ.

ಒಟ್ಟಾರೆ ಕರ್ನಾಟಕ ಮತ್ತು ಮಹಾರಾಷ್ಟ್ರ ಭಿನ್ನ ಭಿನ್ನ ರಾಜ್ಯಗಳಾದರೂ ಸಾಂಸ್ಕೃತಿಕವಾಗಿ ಒಂದೇ ಎಂಬಂತೆ ವಿಶಿಷ್ಟವಾದ ಬಾಂಧವ್ಯವನ್ನು ರೂಪಿಸಿಕೊಂಡು ಬಂದಿವೆ. ನೆರೆಹೊರೆ ರಾಜ್ಯಗಳೊಂದಿಗೆ ಹೇಗೆ ಅನ್ಯೋನ್ಯತೆಯನ್ನು ಕಾಪಾಡಿಕೊಂಡು ಬಂದಿವೆಯೋ ಅದಕ್ಕೆ ಮಿಗಿಲಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳು ತಮ್ಮ ಸಂಬಂಧವನ್ನು ಕಾಪಾಡಿಕೊಂಡು ಬಂದಿರುವುದು ವಿಶೇಷ ಸಂಗತಿಯಾಗಿದೆ. ಈ ಎರಡು ರಾಜ್ಯಗಳಿಗೆ ನಿರ್ದಿಷ್ಟ ಗಡಿರೇಖೆಗಳು ಇದ್ದರೂ ಸಹ ಕಾಲದಿಂದ ಕಾಲಕ್ಕೆ ಅವು ಬದಲಾಗುತ್ತಲೇ ಬಂದಿವೆ. ಆದರೆ ಸಾಂಸ್ಕೃತಿಕವಾಗಿ ಹಾಗೂ ಭಾಷಿಕವಾಗಿ ಎಲ್ಲೂ ಒಂದನ್ನೊಂದು ಹತ್ತಿಕ್ಕುವ ವಿಚಾರಗಳ ನಡೆದಿಲ್ಲ. ಸಹ್ಯಾದ್ರಿ ವಿಂಧ್ಯಪರ್ವತಗಳು, ಕೃಷ್ಣಾ, ಗೋದಾವರಿ, ಕಾವೇರಿ ಮತ್ತು ತುಂಗಾಭದ್ರಾ ನದಿಗಳು ನಡುವಣ ವಿಶಾಲ ಭೂಪ್ರದೇಶವು ಈ ಎರಡೂ ರಾಜ್ಯಗಳನ್ನು ಒಳಗೊಂಡಿದೆ. ಕನ್ನಡ–ಮರಾಠಿ ಈ ಎರಡೂ ರಾಜ್ಯಗಳನ್ನು ಒಳಗೊಂಡಿರುವ ಪ್ರಮುಖ ಭಾಷೆಗಳಾಗಿವೆ. ಭಿನ್ನ ಭಾಷಾವರ್ಗಕ್ಕೆ ಸೇರಿದ ಭಾಷೆಗಳಾದರೂ ಪರಸ್ಪರ ಒಟ್ಟೊಟ್ಟಿಗೆ ಬದುಕುತ್ತಾ ಒಂದಕ್ಕೊಂದು ಪ್ರೇರಕವಾಗಿ, ಪೋಷಕವಾಗಿ ಇಂದಿಗೂ ಬಾಂಧವ್ಯವನ್ನು ಬೆಸೆದುಕೊಂಡೇ ಇದ್ದು, ಅವಳಿ ಸಹೋದರ ಭಾಷೆಗಳು ಎಂಬ ವಿಶಿಷ್ಟ ಸಂಸ್ಕೃತಿಯ ರೀತಿಯಲ್ಲಿ ಭಾಜನಕ್ಕೆ ಪಾತ್ರವಾಗಿವೆ. ಹಾಗಾಗಿ ಈ ಎರಡೂ ಭಾಷೆಗಳೂ ವೈರಿಗಳಲ್ಲ ಎಂಬುದನ್ನು ಲೇಖಕರು ಗುರುತಿಸಿದ್ದಾರೆ.

ಮಂಜುನಾಥಯ್ಯ. ಕೆ.ಪಿ.

೪೭. ಕಚ್ಚೆಗೌಳಿಗರ ಪರಂಪರೆ ಮತ್ತು ಆಧುನಿಕತೆ

ಕಚ್ಚೆಗೌಳಿಗರ ಪರಂಪರೆ ಮತ್ತು ಆಧುನಿಕತೆ, ಡಾ. ಗಂಗಾಧರ ದೈವಜ್ಞ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬, ೨೦೧೨, ಪುಟ–೧೧+೧೪೪+೮, ಬೆಲೆ ರೂ. ೧೦೦/-

ಭಾರತ ದೇಶ ಅನೇಕ ಬುಡಕಟ್ಟು ಸಂಸ್ಕೃತಿಗಳ ನೆಲೆಬೀಡು. ಇದರಲ್ಲಿ ಪ್ರಮುಖವಾಗಿ ನಾವು ಪರಿಗಣಿಸಿ ಅಧ್ಯಯನ ಮಾಡುವ ಸಂಪತ್ತು ಎಂದರೆ ಪೂರ್ವ ಸಂಸ್ಕೃತಿಗಳದ್ದು. ಇಂದಿಗಾಗಲೇ ಅನೇಕ ಸಂಸ್ಕೃತಿಗಳು ನಾಶ ಹೊಂದಿದ್ದು, ಅವು ಆಧುನಿಕ ನಾಗರಿಕ ಸಮುದಾಯಗಳ ಜೊತೆ ಸಮ್ಮಿಲನಗೊಂಡು ತನ್ನದೇ ಆದ ಪಾರಂಪರಿಕ ಅಚಾರ-ವಿಚಾರ ಆಲೋಚನೆಗಳನ್ನು ಬದಿಗೆ ತಳ್ಳಿ ಹೊಸ ಸಂಪ್ರದಾಯಗಳತ್ತ ಮುಖ ಮಾಡಿರುವಂತಹದ್ದನ್ನು ಕಾಣಬಹುದು.

ಡಾ. ಗಂಗಾಧರ ದೈವಜ್ಞರವರು ಹೊರತಂದಿರುವ ಕಚ್ಚೆಗೌಳಿಗರ ಪರಂಪರೆ ಮತ್ತು ಆಧುನಿಕತೆ ಎಂಬ ಕಿರುಹೊತ್ತಿಗೆಯಲ್ಲಿ ಪ್ರಸ್ತಾಪಿಸಿರುವ ಗೌಳಿ ಸಮುದಾಯದ ಬುಡಕಟ್ಟು ಸಂಸ್ಕೃತಿ ಮತ್ತು ಆಧುನಿಕ ಸಂಸ್ಕೃತಿಗಳ ಸಮ್ಮಿಲನವು ಭಾರತ ದೇಶದಲ್ಲಿ ಹೇಗೆ ಸ್ಥಿತ್ಯಂತರಗೊಂಡಿದೆ ಎಂಬುದನ್ನು ಚರ್ಚಿಸಿದ್ದಾರೆ. ಮಹಾರಾಷ್ಟ್ರದಲ್ಲಿ ರಾಜ್ಯ ಇದ್ದಂತಹ ಕಚ್ಚೆ ಗೌಳಿಗರು ಸರ್ಕಾರದ ನಿರ್ಬಂಧಕ್ಕೆ ತಲೆಬಾಗಿ ಅನೇಕ ಕಡೆ ವಲಸೆ ಹೋಗಿರುವ ಗೌಳಿಗರು ಕರ್ನಾಟಕ ಸಮೃದ್ಧಿಯ ಪ್ರದೇಶಗಳಲ್ಲಿ ಬಂದು ನೆಲೆ ನಿಂತರು ಎಂದು ಹೇಳಬಹುದು.

ಸರ್ಕಾರ ಈ ಬುಡಕಟ್ಟುಗಳ ಮೇಲೆ ನಿರ್ಬಂಧ ಹೇರಲು ಮುಖ್ಯ ಕಾರಣ ಇವರು 'ಕುಮ್ರಿ ಬೇಸಾಯ'(ಕಾಡನ್ನು ನಾಶ ಮಾಡಿ ಆ ಜಾಗದಲ್ಲಿ ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದರು) ಮಾಡುತ್ತಿದ್ದರು. ಮತ್ತು ಇವರು ಕಾಡಿನಲ್ಲಿರುವ ಪ್ರಾಣಿಗಳನ್ನು ಬೇಟೆಯಾಡುತ್ತ ತಮ್ಮ ಆಹಾರಕ್ಕೆ ಬಳಸಿಕೊಳ್ಳುವ ಪದ್ಧತಿ ಇತ್ತು. ಹಾಗಾಗಿ ಇವರನ್ನು ಮಹಾರಾಷ್ಟ್ರದಲ್ಲಿ ಇರಲು ನಿರ್ಬಂಧಿಸಲಾಯಿತು. ಆಗ ಅವರು ಕರ್ನಾಟಕದ ನಾನಾ ಪ್ರದೇಶಗಳಲ್ಲಿ ನೆಲೆನಿಂತರು. ಇತ್ತೀಚಿನ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇವರಿಗೆ ಎಲ್ಲಾ ಕ್ಷೇತ್ರಗಳಲ್ಲಿ ವಿಶೇಷ ಮೀಸಲಾತಿ ಕೊಡುತ್ತ ಬಂದಿವೆ. ಕೆಲವು ಕಡೆ ಇವರು ಸಂಪೂರ್ಣ ಆಧುನಿಕ ಸಮಾಜದ ಜೊತೆ ಬೆರೆತು ಜೀವನ ಮಾಡುತ್ತಿದ್ದಾರೆ ಎಂದು ಲೇಖಕರು ಗುರುತಿಸುತ್ತಾರೆ.

ಎಷ್ಟೇ ಆಧುನಿಕತೆಗೆ ಹೊಂದಿಕೊಂಡಿದ್ದರೂ ಗೌಳಿಗರು ಆಧುನಿಕತೆಗೆ ಬದಲಾಗಿದ್ದಾರೆ ಎಂಬುದು ಮರೀಚಿಕೆ. ಏಕೆಂದರೆ ಗೌಳಿಗರಲ್ಲಿ ಸಂಪ್ರದಾಯ, ಆಚಾರ-ವಿಚಾರಗಳು ಇನ್ನೂ ಬದಲಾವಣೆ ಆಗಿಲ್ಲ. ಏಕೆಂದರೆ ವಾಡೆ(ವಾಡ) ಎಂಬ ಶಬ್ದವನ್ನು ಬಳಸುವ ಗೌಳಿಗರು ಮಹಾರಾಷ್ಟ್ರದ ಬದುಕು ಮತ್ತು ಪರಂಪರೆಯ ಬಗ್ಗೆ ಒಲವು ಮತ್ತು ಅಭಿಮಾನವನ್ನು ತೋರಿಸುವುದರ ಜೊತೆ ಜೊತೆಗೆ ಪ್ರಬಲ ಸಂಸ್ಕೃತಿಗಳಿಂದ ದೂರವಿದ್ದು, ತಮ್ಮ ಪೂರ್ವಜರ ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳಲು ಯತ್ನಿಸುತ್ತಿರುವುದು ತನ್ನ ಸಂಸ್ಕೃತಿಯ ಸ್ವಾಭಿಮಾನದ ವಿಚಾರವೆನ್ನಬಹುದು.

ಗೌಳಿ ಬುಡಕಟ್ಟು ಸಮುದಾಯದಲ್ಲಿ ಜ್ಯೋತಿಷ ಮತ್ತು ವಾಸ್ತು ನಂಬಿಕೆ ಹೆಚ್ಚಿರುವುದನ್ನು ಕಾಣುತ್ತೇವೆ. ಕಾಡಿನಲ್ಲಿ ಸಿಗುವ ಅನೇಕ ವಿವಿಧ ಪದಾರ್ಥಗಳನ್ನು

ತೆಗೆದುಕೊಂಡು ಅದರಿಂದ ಕೊಟ್ಟಿಗೆ ಅಥವಾ ಗುಡಿಸಲನ್ನು ನಿರ್ಮಿಸಿಕೊಳ್ಳುವ ಸಂದರ್ಭದಲ್ಲಿ ಗೌಳಿಗರು ತಲೆಗೆ ಸುತ್ತಿಕೊಳ್ಳುವ ರುಮಾಲು(ಪಾಗೋಡಿ) ಎಂಬ ವಸ್ತ್ರದಿಂದ ಪಾಯಕಟ್ಟು(ಅಳತೆ) ಮಾಡುತ್ತಿದ್ದರು. ಜೊತೆಗೆ ಅಗ್ನಿಮೂಲೆ, ದೇವರಮೂಲೆ ಇತ್ಯಾದಿಗಳೆಂದು ಗುರ್ತಿಸಿಕೊಳ್ಳುತ್ತಿದ್ದರು ಎಂಬುದು ಈ ಕೃತಿಯಿಂದ ತಿಳಿದು ಬರುತ್ತದೆ.

'ಇತ್ಯ' ಎಂದು ಕರೆಯಲ್ಪಡುವ ಒಂದು ಆಚರಣೆಯನ್ನು ಗೃಹಪ್ರವೇಶ ಮಾಡುವ ಸಂದರ್ಭದಲ್ಲಿ ಮನೆಯ ಯಜಮಾನ ಅಕ್ಕಿಯನ್ನು ಗೋಮೂತ್ರದಲ್ಲಿ ಬೆರೆಸಿ ಅದನ್ನು ಬಿಳಿ ವಸ್ತ್ರದಲ್ಲಿ ಕಟ್ಟಿ ದೇವರ ಜಗಲಿಯ ಮೇಲೆ ಇಟ್ಟು ಪೂಜಿಸುವ ಸಂಪ್ರದಾಯವನ್ನು ಕಾಣುತ್ತೇವೆ. ಈ ರೀತಿಯ ಅನೇಕ ನಂಬಿಕೆಗಳು ಆಚರಣೆಯಲ್ಲಿದ್ದವು.

ಭಾರತೀಯ ವಿವಿಧ ಸಂಸ್ಕೃತಿಗಳಲ್ಲಿ ಸಾಮಾನ್ಯವಾಗಿ ಪಿತೃ ಪ್ರಧಾನತೆಯಿದ್ದು, ನಾವು ಅವಲೋಕಿಸಿದ ಅನೇಕ ಪುರಾಣಗಳಲ್ಲಿ ಹಿರಿಯ ಮಗನಿಗೆ ಪಟ್ಟ ಮತ್ತು ಆಡಳಿತ, ಅಧಿಕಾರ ಕೊಡುತ್ತೇವೆ. ಅದೇ ಸಂಸ್ಕೃತಿಯು ಸಹ ಗೌಳಿ ಸಮುದಾಯದ ಆಚರಣೆಯಲ್ಲಿದೆ. ಮಧ್ಯಭಾರತ ಪ್ರಾಂತ್ಯಗಳಲ್ಲಿದ್ದ ಗೌಳಿಯವರು ಶೈವ ಮತ್ತು ವೈಷ್ಣವ ದೇವತಾರಾಧಕರಾಗಿದ್ದಾರೆ. ಇದರ ಜೊತೆಗೆ ಶಕ್ತಿ ದೈವಗಳಾದ ಚೌಡಿ ಮತ್ತು ಕಾಳಿಯರೂ, ಮಹಾಮಾಯಿ, ಭೈರವಿ ಹಾಗೂ ಮಾರಿಯರೇ ನಮ್ಮ ಕುಟುಂಬಗಳ ರಕ್ಷಕರೆಂಬ ಬಲವಾದ ನಂಬಿಕೆ ಇವರಲ್ಲಿದೆ.

ಗೌಳಿಗರು ಆಚರಿಸುವ ಹಬ್ಬ-ಹರಿದಿನಗಳು ಸಾಮಾನ್ಯವಾಗಿ ರೂಢಿಯಲ್ಲಿರುವ ಸಂಪ್ರದಾಯದಂತೆ ಯುಗಾದಿ, ಹೋಳಿ, ಹುಣ್ಣಿಮೆ, ಭೂಮಿಪೂಜೆ, ಶಿವರಾತ್ರಿ, ಕಾರ್ತೀಕ, ದಸರಾ ಎಂಬ ಇತ್ಯಾದಿ ಹಬ್ಬಗಳನ್ನು ಆಚರಿಸುವುದು ವಾಡಿಕೆಯಿದೆ.

ಗೌಳಿಗರಲ್ಲಿ ಕೆಲವು ನಿಕೃಷ್ಟ ಆಚರಣೆಗಳನ್ನು ಕಾಣುತ್ತೇವೆ. ಅದರಲ್ಲೂ ಪ್ರಮುಖವಾಗಿ ಗರ್ಭ ಧರಿಸಿದ ಹೆಣ್ಣು ಗಂಡನೊಡನೆ ಮಾತನಾಡುವುದನ್ನು ನಿಲ್ಲಿಸಬೇಕು. ಗರ್ಭಿಣಿಯಾದ ಹೆಂಡತಿ ಜೊತೆಗೆ ಸಲುಗೆಯಿಂದ ಇರುವ ಸಂದರ್ಭದಲ್ಲಿ ಲೈಂಗಿಕ ಸಂಪರ್ಕ ಹೊಂದಿದರೆ ಅಂತಹ ಸಂದರ್ಭದಲ್ಲಿ ಗರ್ಭಿಣಿಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹೆರಿಗೆಯ ಸಂದರ್ಭದಲ್ಲಿ ಹೆಣ್ಣಿಗೆ ಊರಿನ ಹೊರಗಡೆ ಪ್ರತ್ಯೇಕ ಗುಡಿಸಲು ಹಾಕಿ ಏಳು ದಿನಗಳವರೆಗೂ ಮುಟ್ಟು ತಗಲಬಾರದು ಎಂಬ ನಂಬಿಕೆಯಿಂದ ಈ ರೀತಿಯ ಕೆಟ್ಟ ಆಚರಣೆಗಳು ರೂಢಿಯಲ್ಲಿರುವುದು ಕಾಣಬಹುದಾಗಿದೆ. ವಿವಿಧ ಸಂಸ್ಕೃತಿಗಳಲ್ಲಿ ಇದ್ದ ಹಾಗೆಯೇ ಹುಟ್ಟಿನ ಸಂದರ್ಭದಾಚರಣೆಗಳು ನಾಮಕರಣ, ಋತುಮತಿ, ಆಚರಣೆಗಳು, ಮದುವೆ, ಕನ್ಯಾನ್ವೇಷಣೆ, ಕನ್ಯಾ ನಿಶ್ಚಯ, ತೆರ ಅಥವಾ ವಧುದಕ್ಷಿಣೆ, ಜವಳಿ ತೆಗೆಸುವುದು, ಮದುವೆ ಚಪ್ಪರ, ತಾಳಿಶಾಸ್ತ್ರ, ಧಾರೆ ನಂತರ ವಿನೋದದಾಟಗಳು, ಉಂಗುರದಾಟ, ದೇವರ ಕರೆಯುವ ಶಾಸ್ತ್ರ, ದಂಪತಿಗಳ ಮೆರವಣಿಗೆ, ಮನೆ ತುಂಬಿಸಿಕೊಳ್ಳುವ ಶಾಸ್ತ್ರಗಳು ಕ್ರಮಬದ್ಧವಾಗಿ ನಡೆಯುತ್ತವೆ. ಗೌಳಿಗರಲ್ಲಿ ಅಪಹರಣ ಪದ್ಧತಿಯ ವಿವಾಹಗಳನ್ನು ಕಾಣುತ್ತೇವೆ. ಇದರ ಜೊತೆಗೆ

ಪ್ರಗತಿಪರ ಆಲೋಚನೆಗಳನ್ನು ಸಹ ಗೌಳಿಗರಲ್ಲಿ ಕಾಣಬಹುದು. ಅಂತಹವುಗಳೆಂದರೆ ಮರುಮದುವೆ, ವಿಧವಾ ವಿವಾಹ ಜಾರಿಯಲ್ಲಿರುವುದನ್ನು ಕಾಣುತ್ತೇವೆ.

ಗೌಳಿ ಸಮುದಾಯದ ಊಟೋಪಚಾರಗಳಾದ ಮಾಂಸಾಹಾರ ಮಾದಕ ಪಾನೀಯಗಳು ಇದರ ಜೊತೆಗೆ ಆಧುನಿಕ ಆಹಾರ ಪದ್ಧತಿಯ ಪ್ರಭಾವ ಸಹ ಹೆಚ್ಚಾಗಿರುವುದು ಕಾಣುತ್ತೇವೆ. ತಾವು ರೂಢಿಸಿಕೊಂಡು ಬಂದಿರುವ ವೈದ್ಯ ಪದ್ಧತಿಯಿಂದ ದೂರಸರಿದು, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂಬುದನ್ನು ಲೇಖಕರು ತಿಳಿಸುತ್ತಾರೆ.

ಒಟ್ಟಾರೆ ಲೇಖಕರು ಹೇಳುವಂತೆ ಬುಡಕಟ್ಟಿನ ಎಲ್ಲ ಲಕ್ಷಣಗಳನ್ನು ಹೊಂದಿರುವ ಗೌಳಿ ಸಮುದಾಯವನ್ನು ಕರ್ನಾಟಕ ಸರ್ಕಾರ ಪರಿಶಿಷ್ಟ ಪಂಗಡದಲ್ಲಿ ಸೇರಿಸಿಲ್ಲವೆಂಬ ಕೊರಗು ಪ್ರಗತಿಪರ ಚಿಂತಕರಲ್ಲಿದೆ. ಇಂದು ಈ ಸಮುದಾಯದಲ್ಲಿ ಪುರುಷ ಮತ್ತು ಹೆಣ್ಣುಮಕ್ಕಳು ಕುಡಿತಕ್ಕೆ ದಾಸರಾಗಿದ್ದಾರೆ. ಇಂತಹ ಸಮುದಾಯಕ್ಕೆ ಸರ್ಕಾರ ಉತ್ತಮ ಸೌಲಭ್ಯಗಳನ್ನು ನೀಡಿ ಅವರನ್ನು ಸಮಾಜಮುಖಿಯನ್ನಾಗಿ ಮಾಡುವಂತಹ ಕಾರ್ಯ ನಡೆಯಬೇಕಿದೆ.

ಕರಿಯಣ್ಣ ಈ.

೪೮. ಗ್ರಾಮಗಳ ಸಂಸ್ಕೃತಿ ದರ್ಶನ

ಗ್ರಾಮದರ್ಶನ(ಮಂಡ್ಯ ಜಿಲ್ಲೆಯ ಗ್ರಾಮಗಳ ಸಂಕ್ಷಿಪ್ತ ನೋಟ) ಸಂಪುಟ–೪, ಪ್ರೊ.ಸಿ.ಸಿದ್ದರಾಜು ಆಲಕೆರೆ, ಚನ್ನಟ್ಟಿ ಪ್ರಕಾಶನ, ಮಂಡ್ಯ, ೨೦೧೨, ಪುಟ– ೮+೪+೧೨೪, ಬೆಲೆ ರೂ. ೧೩೦/-

ಗ್ರಾಮಗಳು ಸಂಸ್ಕೃತೀಕರಣದಿಂದ ತಮ್ಮ ಒಡಲೊಳಗೆ ಅಡಗಿಸಿಕೊಂಡಿದ್ದ ಪರಂಪರೆಯ ಸರಕನ್ನು ಕಳೆದುಕೊಳ್ಳುತ್ತಿವೆ. ಅವುಗಳ ಮಹತ್ವದ ವಿಷಯವನ್ನು ಹೇಳುವವರು ಇಂದು ಕಾಣುತ್ತಿಲ್ಲ. ಆ ಹಿನ್ನೆಲೆಯಲ್ಲೇ ಅವುಗಳ ಅವಜ್ಞೆಯು ಎದ್ದು ಕಾಣುತ್ತಿದೆ. ಹಿಂದೆ ಒಂದೊಂದು ಕಲ್ಲಿಗೂ ಒಂದೊಂದು ರೀತಿಯಾದ ಕಥನಗಳಿದ್ದವು. ದೈವತ್ವದ ಭಾವನೆಯಿಂದ ನಂಬಿಕೆ, ಆಚರಣೆಯಂತಹ ಚಟುವಟಿಕೆಗಳನ್ನು ಅಲ್ಲಿನವರು ಪಾರಂಪರಿಕವಾಗಿ ರೂಢಿಸಿಕೊಂಡು ಬಂದಿದ್ದಾರೆ. ಅವುಗಳ ಮೇಲಿನ ಗೌರವದಿಂದ ಅದಕ್ಕಿರುವ ಕಥನಗಳನ್ನಷ್ಟೇ ಉತ್ಸಾಹದಿಂದ ಹಿರೀಕರು ಕೂಡ ತಮ್ಮ ಮುಂದಿರುವ ಪೀಳಿಗೆಗೆ ಹೇಳುತ್ತಿದ್ದರು. ಇವುಗಳನ್ನು ಕೇಳಿದವರು ಇಂದು ತಮ್ಮ ಮುಂದಿರುವ ಪೀಳಿಗೆಗೆ ಆಸ್ಥೆವಹಿಸಿ ಯಾರು ಹೇಳುತ್ತಿಲ್ಲವಾದ್ದರಿಂದ ಮತ್ತು ಈಗಿನವರೂ ಕೇಳಲು ಸಹ ಆಸಕ್ತಿ ತೋರಿಸುತ್ತಿಲ್ಲವಾದ್ದರಿಂದ ಪರಂಪರೆಯನ್ನು ಕೊಂಡೊಯ್ಯಲು ಸಾಧ್ಯವಾಗುತ್ತಿಲ್ಲವೆಂಬ ಕೊರಗು ಈಗ ಕಂಡುಬರುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರೊ. ಸಿದ್ದರಾಜು ಆಲಕೆರೆಯವರು ಕಷ್ಟಪಟ್ಟು ಊರೂರು ತಿರುಗಿ ಮಾಹಿತಿಗಳನ್ನು

ಸಂಗ್ರಹಿಸಿ, ಅಕ್ಷರ ರೂಪದಲ್ಲಿ ಸೆರೆಹಿಡಿದು ಗ್ರಾಮದರ್ಶನ ಸಂಪುಟಗಳನ್ನು ಹೊರತಂದಿರುವುದು ಮತ್ತು ಇದೇ ರೀತಿ ಅಧ್ಯಯನ ಮುಂದುವರೆಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಕೆಲಸವೆನ್ನಬಹುದು.

ಪ್ರೊ. ಸಿದ್ದರಾಜು ಆಲಕೆರೆಯವರು ಹೊಸ ದೃಷ್ಟಿಕೋನದಲ್ಲಿ ಹೊಸದೇನನ್ನಾದರು ಕಟ್ಟಿಕೊಡಬೇಕೆಂಬ ಆಲೋಚನೆಯಿಂದ ಮಂಡ್ಯ ಜಿಲ್ಲೆಯ ಗ್ರಾಮಗಳ ಸಂಕ್ಷಿಪ್ತ ನೋಟದ ಗ್ರಾಮದರ್ಶನ ಸಂಪುಟ-೪ರಲ್ಲಿ ಇಪ್ಪತ್ತಾರು ಗ್ರಾಮಗಳ ಕ್ವಚಿತ್ತಾದ ಮಾಹಿತಿಯನ್ನು ನೈಜ ಚಿತ್ರಣದೊಂದಿಗೆ ಇಲ್ಲಿ ಚಿತ್ರಿಸಿಕೊಟ್ಟಿದ್ದಾರೆ. ಲೇಖಕರು ಐತಿಹಾಸಿಕ ಸ್ಮಾರಕಗಳ ಚಿತ್ರಣದೊಂದಿಗೆ ಆ ಊರಿನ ನಿಷ್ಪತ್ತಿ, ಸ್ಥಳಪುರಾಣ, ಐತಿಹ್ಯ, ಕಥನ, ಆಚರಣೆ, ನಂಬಿಕೆ, ಸಂಪ್ರದಾಯಗಳನ್ನು ಹೇಳುತ್ತಾರೆ. ಗ್ರಾಮದಲ್ಲಿನ ಮನೆಗಳೆಷ್ಟು? ಯಾವ್ಯಾವ ಧರ್ಮಗಳು, ಜಾತಿಗಳು ಊರುಗಳಲ್ಲಿವೆ? ಅವರ ವೃತ್ತಿಗಳೇನು? ಧರ್ಮ-ಜಾತಿವಾರು ಜನಸಂಖ್ಯೆಯೆಷ್ಟಿವೆ ಎಂಬುದನ್ನು ಸವಿವರವಾಗಿ ತಿಳಿಸಿದ್ದಾರೆ.

ಗ್ರಾಮಗಳ ಅಧ್ಯಯನ ಸಂದರ್ಭದಲ್ಲಿ ಪ್ರತಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಎಷ್ಟು ಕಿ.ಮೀ. ದೂರದಲ್ಲಿದೆ? ಅವುಗಳ ಭೌಗೋಳಿಕ ಪರಂಪರೆಯೊಂದಿಗೆ ಸ್ಥಳದ ಮಹತ್ವ ನೀಡಿ, ಐತಿಹಾಸಿಕ ಹಿನ್ನೆಲೆಯನ್ನು ಹೇಳುತ್ತಾ ಆ ಕಾಲದಲ್ಲಿ ಆಳಿದ ಅರಸರು, ನಿರ್ಮಾಣ ಮಾಡಿದ ದೇವಾಲಯಗಳು, ಶಾಸನಗಳು, ವೀರಗಲ್ಲುಗಳು, ವಿಶೇಷವೆನಿಸುವ ಶಿಲ್ಪಾಕೃತಿಗಳು ಯಾವ್ಯಾವ ರೀತಿಯ ಕಥನ ಪರಂಪರೆಯನ್ನು ಒಳಗೊಂಡಿವೆ ಎಂಬುದನ್ನು ಇಲ್ಲಿ ಕ್ಷೇತ್ರಕಾರ್ಯದ ಮುಖಾಂತರ ಮಾಹಿತಿ ಸಂಗ್ರಹಿಸಿ ಸ್ಥೂಲವಾಗಿ ವಿವರಿಸಿದ್ದಾರೆ.

ಮಂಡ್ಯ ಜಿಲ್ಲೆ ವಿಶಿಷ್ಟವೆನಿಸುವ ಸಾಂಸ್ಕೃತಿಕ ಪರಂಪರೆಯನ್ನು ಒಳಗೊಂಡಿದೆ. ಅಲ್ಲಿರುವ ಐತಿಹಾಸಿಕ ಸ್ಮಾರಕಗಳ ಹಿನ್ನೆಲೆ ಹಾಗೂ ಅವುಗಳ ಸ್ಥಿತಿಗತಿ, ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಹಿನ್ನೆಲೆ, ರಾಜಕೀಯ ವಾತಾವರಣ ಹೀಗೆ ಇವೆಲ್ಲವುಗಳ ಸಾರದ ವಿವರಗಳು ಇಲ್ಲಿ ದಾಖಲಾಗಿವೆ.

ಈ ಕೃತಿಯಲ್ಲಿ ಪ್ರಾಮುಖ್ಯವೆನಿಸುವ ಕೆಲವು ವಿಚಾರಗಳು ಇವೆ. ಅವುಗಳಲ್ಲಿ ಆತಕೂರು ಗ್ರಾಮದಲ್ಲಿ ನಾಯಿಗಾಗಿ ಹಾಕಿರುವ ಸ್ಮಾರಕದ ಕುರುಹು(ಶಾಸನ) ವಿಶೇಷವೆನಿಸಿದೆ. ಗಂಗರ ದೊರೆ ಬೂತುಗನು ತನ್ನ ಸೇವಕ ಮಣಲಾರನು ಯುದ್ಧದಲ್ಲಿ ನೀಡಿದ ಸಹಾಯಕ್ಕಾಗಿ ಕಾಳಿಯೆನ್ನುವ ನಾಯಿಯನ್ನು ನೀಡಿರುತ್ತಾನೆ. ಮುಂದೆ ಆ ನಾಯಿ ಒಡೆಯನ ಮೆಚ್ಚುಗೆಗೆ ಪಾತ್ರವಾಗುತ್ತದೆ. ಒಮ್ಮೆ ಹಂದಿಯೊಂದಿಗೆ ಹೋರಾಡಿ ವೀರಮರಣ ಹೊಂದಿದಾಗ ಸಮಾಧಿ ಮಾಡಿ ಅದಕ್ಕಾಗಿ ಮಣಲಾರನು ಒಂದು ಶಾಸನ ಸ್ಥಾಪಿಸಿ, ಸ್ಮಾರಕದ ನಿರ್ವಹಣೆಗೆ ಗೊರವನನ್ನು ನೇಮಿಸಿದನು. ಇಂತಹ ಸಾಂಸ್ಕೃತಿಕ ಮಹತ್ತನ್ನು ಸಾರುವ ಶಾಸನ ಹಾಗೂ ಇನ್ನಿತರ ಸ್ಮಾರಕಗಳ ಬಗೆಗೆ ಕಥನಗಳನ್ನು ಸಂಗ್ರಹಿಸಿ ತಿಳಿಸಿದ್ದಾರೆ.

ಹೀಗೆ ಇದೇ ಗ್ರಾಮದಲ್ಲಿ ಚನ್ನಾಜಮ್ಮಳು ಅಗ್ನಿ ಪ್ರವೇಶ ಮಾಡಿದ ಕಥನ, ಲಕ್ಷ್ಮೀ ಜೀವ ಸಮಾಧಿಯಾದ ಕಥನ, ಮೆಳ್ಳಹಳ್ಳಿಯ ಮಾರಮ್ಮ ಗ್ರಾಮದೇವತೆಯ ಕಥನ, ಕೊತ್ತನಹಳ್ಳಿಯ ಹೊನ್ನಾರತಿ ಲಕ್ಷ್ಮಿಯ ಕಥನ ಮುಂತಾದವುಗಳು ಇಲ್ಲಿ ದಾಖಲಾಗಿವೆ.

ಈ ಕೃತಿಯನ್ನು ಅವಲೋಕಿಸಿದಾಗ ಬಹುಪಾಲು ಪ್ರಾಥಮಿಕ ವಿಷಯಗಳಿಗೆ ಮಾತ್ರ ಹೆಚ್ಚು ಒತ್ತನ್ನು ನೀಡಿದ್ದಾರೆ. ಕೆಲವು ಗ್ರಾಮಗಳ ವಿಷಯವೂ ಅಪೂರ್ಣವಾಗಿದ್ದು, ಸರಿಯಾದ ರೀತಿಯಲ್ಲಿ ಮಾಹಿತಿ ಸಂಗ್ರಹದ ಕೊರತೆಯಿರುವುದರಿಂದ ಅಪೂರ್ಣವಾಗಿ ವಿವರಿಸಿದ್ದಾರೆ. ಉದಾಹರಣೆಗೆ ಕಾಡನಪುರದೊಡ್ಡಿ, ದೇವೇಗೌಡನದೊಡ್ಡಿ, ತಿಟ್ಟಮಾರನ ಹಳ್ಳಿಯ ಮಾಹಿತಿಗಳು ಸರಿಯಾಗಿ ಹೇಳಲಾಗಿಲ್ಲ. ಈ ಗ್ರಾಮಗಳ ವಿಷಯಗಳನ್ನು ಇನ್ನೂ ಹೆಚ್ಚಿನ ಪಾಲು ಹೇಳಲು ಸಾಧ್ಯವಿತ್ತೆಂದು ಅನಿಸುತ್ತದೆ. ಮಾಹಿತಿಗಳ ವಿವರಣೆ ನೀಡುವಾಗ ತೇಲಿಸಿಕೊಂಡು ಹೋಗುವುದು ಅಲ್ಲಲ್ಲಿ ಕಂಡುಬರುತ್ತದೆ. ಈ ಕೃತಿಯಲ್ಲಿ ಕ್ಷೇತ್ರಕಾರ್ಯದ ವಿಸ್ತಾರವಾದ ಅನುಭವ ಹೆಚ್ಚಿದೆಯೆನಿಸಿದರೂ ಅಭಿವ್ಯಕ್ತಿಯ ಅಪರಿಪೂರ್ಣತೆ ಎದ್ದು ಕಾಣುತ್ತದೆ. ಯಾವ ವಿಷಯವನ್ನು ಸಹ ಶಾಸ್ತ್ರಬದ್ಧವಾದ, ಕ್ರಮಬದ್ಧವಾದ ರೀತಿಯಲ್ಲಿ ಹೇಳಲು ಸಾಧ್ಯವಾಗಿಲ್ಲ.

ಕೃತಿಯ ಪ್ರತೀ ಪುಟದಲ್ಲೂ ತಪ್ಪುಗಳು ಕಂಡುಬರುತ್ತವೆ. ಉದಾಹರಣೆಗೆ ೨೬ನೇ ಪುಟದಲ್ಲಿ 'ಮಣಲಾರ' ಅನ್ನುವ ಕಡೆ 'ಮಣಲೆರ'ಯೆಂದು ಪ್ರಿಂಟಾಗಿದೆ. ಇಲ್ಲಿ ಓದುಗರಿಗೆ ಯಾವುದು ಸರಿ, ಯಾವುದು ತಪ್ಪುಯೆನ್ನುವುದು ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗೆಯೇ ವಾಕ್ಯದೋಷವಂತೂ ಅಲ್ಲಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಡಿ.ಟಿ.ಪಿ. ಮಾಡಿದ ನಂತರ ತಪ್ಪಿರುವ ಪದಗಳನ್ನು, ವಾಕ್ಯಗಳನ್ನು ಲೇಖಕರು ತಿದ್ದುಪಡಿ ಮಾಡಿ ಪ್ರಕಟಿಸಿದ್ದರೆ ಚೆನ್ನಾಗಿತ್ತೆಂದು ನನ್ನ ಭಾವನೆ. ಆದರೂ ಈ ಸಾಧನೆಯೆನ್ನಂತೂ ನಾವೆಲ್ಲರೂ ಮೆಚ್ಚಲೇಬೇಕಿದೆ.

ಕೆ.ವಿ. ಮುದ್ದವೀರಪ್ಪ

□□

೩

ಜೀವನ ಪರಿಚಯ ಕೃತಿಗಳು

೪೯. ಜಾನಪದಕ್ಕೆ ಜೀವ ತುಂಬಿದ ಗಾರುಡಿಗ

ಜಾನಪದ ತಜ್ಞ ಮತಿಘಟ್ಟ ಕೃಷ್ಣಮೂರ್ತಿ, ಎಂ.ಕೆ. ರಮಾದೇವಿ,
ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು–೫೬೦೦೦೨, ೨೦೧೨, ಪುಟ–೧೪+೫೬+೮,
ಬೆಲೆ ರೂ. ೨೦/-

ಹಳ್ಳಿಯಲ್ಲಿನ ಹೆಂಗಸರು ಹಾಡುವ ಸಾಂಪ್ರದಾಯಿಕ ಜನಪದ ಗೀತೆಗಳಾದ ಕುಟ್ಟುವ, ಬೀಸುವ ಹಾಡುಗಳು, ನಾಟಿಪದಗಳು, ಮತ್ತು ಜನಪದರ ಸಂಪ್ರದಾಯ ಆಚರಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಬಾಲಕ ಮುಂದೆ ಬೆಳೆಯುತ್ತ ಅವುಗಳ ಜಾಡು ಹಿಡಿದು ಕ್ಷೇತ್ರಕಾರ್ಯ ಮಾಡಿ ಜನಪದ ಸಾಹಿತ್ಯ ಸಂಗ್ರಹಿಸಿ ಅವುಗಳಿಗೆ ತಳಸ್ಪರ್ಶಿಯ ಅರ್ಥ/ ವ್ಯಾಖ್ಯಾನ ನೀಡಿ ಪ್ರಕಟಿಸಿ ಕರ್ನಾಟಕ ಜಾನಪದ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ಮತಿಘಟ್ಟ ಕೃಷ್ಣಮೂರ್ತಿ ನೀಡಿದವರು. ಜಾನಪದ ತಜ್ಞ, ಜಾನಪದ ಭೀಷ್ಮ, ಗಾಂಧಿವಾದಿ ಮತ್ತು ಜಾನಪದ ಶುದ್ಧಾಂತಃಕರಣ ಎಂದೇ ಖ್ಯಾತಿಯಾದವರು ಮತಿಘಟ್ಟ ಕೃಷ್ಣಮೂರ್ತಿ.

ಇಂತಹ ಶ್ರೀಯುತರ ಬಗ್ಗೆ ಶತಮಾನೋತ್ಸವ ಸಂದರ್ಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯು ವ್ಯಕ್ತಿ ಪರಿಚಯ ಕೃತಿಯನ್ನು ಪ್ರಕಟಣೆ ಮಾಡಿದೆ. ಈ ಕೃತಿಯ ಜವಾಬ್ದಾರಿ ಹೊತ್ತವರು ಮತಿಘಟ್ಟ ಕೃಷ್ಣಮೂರ್ತಿಯವರ ಪ್ರೀತಿಯ ಮಗಳು ಎಂ.ಕೆ ರಮಾದೇವಿಯವರು. 'ರಮಾದೇವಿ ಅವರು ಮೂಲತಃ ಜೀವನ ಚರಿತ್ರಕಾರರೇನಲ್ಲ. ಆದರೂ ಒಂದು ಜೀವನ ಚರಿತ್ರೆಯನ್ನು ಎಷ್ಟು ವಾಸ್ತವವಾಗಿ ಅಚ್ಚುಕಟ್ಟಾಗಿ ನಿರೂಪಿಸ ಬಹುದೆಂಬುದನ್ನು ತಮ್ಮ ಈ ಕೃತಿಯ ಮೂಲಕ ತೋರಿಸಿದ್ದಾರೆ' ಎಂದು ಮುನ್ನುಡಿ ಯಲ್ಲಿ ಗೊ.ರು. ಚೆನ್ನಬಸಪ್ಪನವರು ಹೇಳುವ ಮಾತು ವ್ಯಕ್ತಿ ಪರಿಚಯವನ್ನು ಸಮರ್ಥ ವಾಗಿ ಕಟ್ಟಿರುವುದಕ್ಕೆ ಸಾಕ್ಷಿಯಾಗಿದೆ.

ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಮತಿಘಟ್ಟ ಎಂಬ ಗ್ರಾಮದಲ್ಲಿ ಶ್ರೀ ಲಿಂಗಣ್ಣ ಶ್ರೀಮತಿ ಚನ್ನಮ್ಮ ದಂಪತಿಗಳಿಗೆ ತಾ–೧೨–೦೭–೧೯೧೨ರಲ್ಲಿ ಕೊನೆಯ ಮಗನಾಗಿ

ಮತಿಘಟ್ಟ ಕೃಷ್ಣಮೂರ್ತಿಯವರು ಜನಿಸಿದರು. ಶ್ರೀಯುತರಿಗೆ ಎಲ್. ಗುಂಡಪ್ಪ, ಮುತ್ತು ರಾಮಸ್ವಾಮಿ ಎಂಬ್ಬ ಇಬ್ಬರು ಅಣ್ಣಂದಿರು, ಲಕ್ಷ್ಮೀದೇವಿ ಎಂಬ ಅಕ್ಕ ಒಬ್ಬಳು ಇದ್ದರು.

ಮತಿಘಟ್ಟ ಕೃಷ್ಣಮೂರ್ತಿ ಅವರು ತಮ್ಮ ಅಕ್ಕ ಇದ್ದ ಬೆಳವಾಡಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣ ಮುಗಿಸಿ ಮಾಧ್ಯಮಿಕ ವಿದ್ಯಾಭ್ಯಾಸಕ್ಕಾಗಿ ಬೇಲೂರಿನ ಸರ್ಕಾರಿ ಶಾಲೆಗೆ ಸೇರಿದರು. ಈ ತರಗತಿಯಲ್ಲಿ ಕೃಷ್ಣಮೂರ್ತಿ ಎಂಬುವರು ಮೂರುಜನ ಇದ್ದಿದ್ದರಿಂದ ಹಾಜರಿ ಹಾಕುವಾಗ ಹಾಗೂ ಇತರೆ ಸಂದರ್ಭಗಳಲ್ಲಿ ಕೃಷ್ಣಮೂರ್ತಿ ಎಂದರೆ ಮೂವರೂ ಉತ್ತರಿಸುತ್ತಿದ್ದರು. ಈ ಗೊಂದಲ ತಪ್ಪಿಸಲು ಗುರುಗಳು ಶಾನುಭೋಗರ ಮಗ ಕೃಷ್ಣಮೂರ್ತಿ ಮತ್ತೊಬ್ಬರು ಎಚ್. ಕೃಷ್ಣಮೂರ್ತಿ ಇವರಿಗೆ ಮತಿಘಟ್ಟದ ಕೃಷ್ಣಮೂರ್ತಿ ಎಂದು ಹೆಸರಿಟ್ಟರು. ಹೀಗೆ ಇವರ ಹೆಸರಿನ ಮುಂದೆ ಹುಟ್ಟೂರಿನ ಹೆಸರು ಸೇರಿಕೊಳ್ಳಲು ಕಾರಣವಾಯಿತು.

ಈ ಸಂದರ್ಭದಲ್ಲಿಯೇ ಬೇಲೂರಿನಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಗಾಂಧೀಜಿಯವರ ಭಾಷಣಕ್ಕೆ ಮಾರುಹೋದ ಮತಿಘಟ್ಟ ಕೃಷ್ಣಮೂರ್ತಿ ಮಿಲ್ ಬಟ್ಟೆಯನ್ನು ಸುಟ್ಟು ಖಾದಿ ಧರಿಸಲು ಪ್ರಾರಂಭಿಸಿ ಗಾಂಧಿ ತತ್ವವನ್ನು ಬಲವಾಗಿ ನಂಬಿ ತಮ್ಮ ಜೀವನದ ಕೊನೆಯವರೆಗೂ ಆಚರಣೆಗೆ ತಂದರು. ಮತಿಘಟ್ಟ ಕೃಷ್ಣಮೂರ್ತಿ ಎಲ್. ಎಸ್. ಪಾಸಾದ ನಂತರ ಚಿಕ್ಕಮಗಳೂರಿನ ಹೈಸ್ಕೂಲ್‌ಗೆ ಸೇರಿ ಕೋಡೆ ಶ್ರೀಕಂಠಯ್ಯನವರ ಮನೆಯಲ್ಲಿ ವಾಸವಿದ್ದು, ವಾರಾನ್ನದ ಊಟ ಮಾಡುತ್ತ ಪೇಟೆ ಮಕ್ಕಳಿಗಿಂತ ಇಂಗ್ಲೀಷ್‌ನಲ್ಲಿ ಹೆಚ್ಚು ಅಂಕಗಳಿಸಿ, ಹಳ್ಳಿಯ ಹುಡುಗರು ಪಟ್ಟಣದ ಹುಡುಗರಿಗಿಂತ ಕಡಿಮೆ ಇಲ್ಲ ಎಂಬುದನ್ನು ಸಾಧಿಸಿ ತೋರಿಸಿದರು. ನಂತರ ಕಾಲೇಜು ಶಿಕ್ಷಣಕ್ಕೆ ಬೆಂಗಳೂರಿಗೆ ಬಂದ ಮತಿಘಟ್ಟ ಕೃಷ್ಣಮೂರ್ತಿ ಸ್ವಾತಂತ್ರ್ಯ ಚಳುವಳಿ ದೇಶದಲ್ಲೆಡೆ ವ್ಯಾಪಿಸಿದ ನಿಟ್ಟಿನಲ್ಲಿ ತಮ್ಮ ಕಾಲೇಜು ಶಿಕ್ಷಣಕ್ಕೆ ತಿಲಾಂಜಲಿ ಇಟ್ಟು ತಮ್ಮ ಹುಟ್ಟೂರು ಮತಿಘಟ್ಟಕ್ಕೆ ಬಂದು ಗಾಂಧಿ ಚಿಂತನೆಯನ್ನು ಸಾಕಾರಗೊಳಿಸಲು ರಚನಾತ್ಮಕ ಕಾರ್ಯ ಕ್ರಮಗಳನ್ನು ಕೈಗೊಂಡು ಜೈಲುವಾಸ ಅನುಭವಿಸಿದರು.

ಈ ಹೊತ್ತಿಗಾಗಲೇ ಹಾಸನದ ಹೆಸರಾಂತ ನಾಟೀ ವೈದ್ಯರಾದ ಹೆಚ್. ಕೃಷ್ಣಮೂರ್ತಿ ಗಳ ಮಗಳಾದ ಲಲಿತಳನ್ನು ಮದುವೆಯಾದರು. ಶ್ರೀಯುತರಿಗೆ ಹತ್ತು ಹೆಣ್ಣು ಮಕ್ಕಳು ಒಬ್ಬ ಮಗ ಇದ್ದಾರೆ. ಮಗುವಾಗಿದ್ದಾಗ ತಾಯಿ ಹೇಳುತ್ತಿದ್ದ ಹಾಡುಗಳಿಂದಲೇ ನಿದ್ರಿಸುತ್ತಿದ್ದ ಮತಿಘಟ್ಟ ಕೃಷ್ಣಮೂರ್ತಿ ಮದುವೆ ಮುಂತಾದ ಸಂಪ್ರದಾಯ ಆಚರಣೆಗಳಲ್ಲಿ ಹಾಡುಗಳನ್ನು ಆಸಕ್ತಿಯಿಂದ ಆಲಿಸುತ್ತಿದ್ದರು. ನಂತರ ಅವುಗಳ ಸಂಗ್ರಹಣಾ ಕಾರ್ಯಕ್ಕೆ ಕೈ ಹಾಕಿದರು. ಅದರಲ್ಲೂ ಅವರಿಗೆ ಗಂಡು ಮಗು ಜನಿಸಿದಾಗ ಶಾಸ್ತ್ರಿಯೊಬ್ಬರು ಒಂದು ವರ್ಷ ಕಾಲ ಮಗ ಮತ್ತು ತಂದೆ ಪರಸ್ಪರ ಮುಖ ನೋಡಬಾರದು, ನೋಡಿದರೆ ಒಬ್ಬರಿಗೆ ಕೇಡು ಆಗುತ್ತದೆ ಎಂದು ಹೇಳಿದುದನ್ನು ನಂಬಿ ಮನೆಯವರಿಗೂ

ಆ ವಿಷಯ ತಿಳಿಸದಲೇ ಮನೆಬಿಟ್ಟು ಹೋದರು. ಆ ಸಮಯದಲ್ಲಿ ಕರ್ನಾಟಕದ(ಬೀದರ್ ಜಿಲ್ಲೆ ಬಿಟ್ಟು) ಎಲ್ಲಾ ಪ್ರದೇಶದಲ್ಲಿ ಸುತ್ತಿ ಜನಪದಗೀತೆ, ಲಾವಣಿ, ಕಥನ, ಕಥೆಗಳನ್ನು ಸಂಗ್ರಹಿಸುವುದಕ್ಕೆ ಉಪಯೋಗಿಸಿಕೊಂಡಿದ್ದರ ಫಲವಾಗಿಯೇ ಮತಿಘಟ್ಟ ಕೃಷ್ಣಮೂರ್ತಿಯವರ ಜಾನಪದ ಕೃತಿಗಳಾದ ನಾಡಪದಗಳು, ನಮ್ಮ ಹಳ್ಳಿಯ ಹಾಡುಗಳು, ಏಳುಕೊಳ್ಳದ ಎಲ್ಲಮ್ಮ, ಕನ್ನಡ ಸಾಹಿತ್ಯ ಭಂಡಾರ ಸಂಪುಟ, ಗೀತೆಗಳು(ಸಂಪುಟ-೧ ೧೦೦೦ ಪುಟ ಮೀರಿದ್ದು) ಗೃಹಿಣಿಗೀತೆಗಳು(ಸಂಪುಟ-೨ ೧೦೦೦ ಪುಟ ಮೀರಿದ್ದು) ಹೊನ್ನಹೊತ್ತಿಗೆ, ಹಾಸನ ಜಿಲ್ಲಾ ಕೋಲಾಟದ ಪದಗಳು, ಕಿರುಲಾವಣಿಗಳು, ಪ್ರಕಟಣೆ ಕಾಣಲು ಸಹಕಾರಿಯಾಯಿತು.

ಮತಿಘಟ್ಟ ಕೃಷ್ಣಮೂರ್ತಿ ಅವರು ಕೇವಲ ಜಾನಪದ ಕ್ಷೇತ್ರವಲ್ಲದೆ ಸಾಹಿತ್ಯ ಸೃಷ್ಟಿಯನ್ನು ಸಹ ಮಾಡಿದ್ದಾರೆ. ಅಲ್ಲದೆ ಪತ್ರಿಕೆಗಳಲ್ಲೂ ಕೆಲಸ ಮಾಡಿದ ಅವರು ಕನ್ನಡ ಮಾಧ್ಯಮ ಶಿಕ್ಷಣ ಸಂಸ್ಥೆಯನ್ನು ಕೂಡ ಕಟ್ಟಿ ಬೆಳೆಸಿರುವುದನ್ನು ಕಾಣಬಹುದು. ಪಚ್ಚೆತೆನೆ(ಕಥೆಗಳು) ಮರಗಿ, ಸರ್ವೋದಯ, ಕಳಸಾಪುರದ ಹುಡುಗರು(ಕಾದಂಬರಿ), ಗಂಡನಪೂಜೆ, ಹೊಂಬಾಳೆ, ಹೊಸಹಳ್ಳಿ, ಭರತಪ್ಪನ ಸೊಂಟಕ್ಕೆ ಗಂಟೆ(ನಾಟಕ). ಅಷ್ಟೆ ಅಲ್ಲದೆ ಪಂಚತಂತ್ರದ ಕಥೆಗಳು, ಕನ್ನಡ ಜನಪದ ಮಕ್ಕಳ ಕಥೆಗಳು, ದೇಶಾಂತರ ನೀತಿ ಕಥೆಗಳು ಇವು ಪ್ರಕಟಣೆಗೊಂಡ ಕೃತಿಗಳಾಗಿವೆ. ಜೇನುಗೂಡು(ಮಕ್ಕಳ ನಾಟಕಗಳ ಸಂಗ್ರಹ) ೧೪ ಲಾವಣಿಗಳು, ಗುಣವಂತೆ ಪ್ರಕಟಿತ ಕೃತಿಗಳು ೪೦೦೦ ಜನಪದ ಹಾಡುಗಳ ಸಂಗ್ರಹ, ಕಥೆಗಳ ಸಂಗ್ರಹ(೧೫೦ ಕಥೆಗಳು) ಅಪ್ರಕಟಿತ ಕೃತಿಗಳಾಗಿವೆ.

ಮತಿಘಟ್ಟ ಕೃಷ್ಣಮೂರ್ತಿ ಅವರು ತಮ್ಮ ಅರ್ಥಪೂರ್ಣ ಕೆಲಸಗಳಿಂದಲೇ ಮಾಸ್ತಿ, ಬೇಂದ್ರೆ, ಅನಕೃ, ಕರೀಂಖಾನ್ ಮುಂತಾದ ದಿಗ್ಗಜರಿಂದ ಪ್ರಶಂಸೆಗೆ ಪಾತ್ರರಾದರು. ಸಾಹಿತ್ಯ ಕ್ಷೇತ್ರವಲ್ಲದೆ ತಮ್ಮ ಗ್ರಾಮ ಸಮುದಾಯದ ಕ್ಷೇಮಕ್ಕೆ ದುಡಿದಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿ ಜೈಲುವಾಸ ಅನುಭವಿಸಿ ಖಾದಿ ಪ್ರಚಾರ ಮಾಡಿದ್ದಾರೆ. ಕನ್ನಡಪರ ಚಳುವಳಿಗಳಲ್ಲಿ ತಮ್ಮನ್ನು ತಾವು ಕ್ರಿಯಾಶೀಲರಾಗಿ ತೊಡಗಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿದ್ದರೂ ಆ ಹೆಸರಿನಲ್ಲಿ ಸರ್ಕಾರದಿಂದ ಯಾವುದೇ ಸವಲತ್ತು ಪಡೆಯದೇ ಸ್ವಾಭಿಮಾನಿಯಾಗಿದ್ದರು.

ಶ್ರೀಯುತರು ರಾಜ್ಯಪ್ರಶಸ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ ಒಳಗೊಂಡಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಆ ಎಲ್ಲಾ ಪ್ರಶಸ್ತಿ ಪಟ್ಟಿಯನ್ನು ಲೇಖಕರು ಅನುಬಂಧದಲ್ಲಿ ಉಲ್ಲೇಖಿಸಿದ್ದಾರೆ. ಹಾಗೇ ಮತಿಘಟ್ಟ ಕೃಷ್ಣಮೂರ್ತಿ ಅವರ ಜೀವಮಾನದಲ್ಲಿ ನಡೆದ ಜಾನಪದೀಯವೇ ಎನಿಸುವ ಅನೇಕ ಪ್ರಸಂಗಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಉದಾ:- ಹಾವು ಹೊಕ್ಕ ಮನೆಗೆ ದೋಷ ನಿವಾರಣೆಗೆ ಶಾಂತಿ ಮಾಡಿಸುವುದು, ಮನೆಗೆ ಬಂದ ಕಷ್ಟಗಳ ಪರಿಹಾರಕ್ಕೆ ಕೇರಳದ ಬ್ಯಾರಿಯಿಂದ ಅಂಜನ ಹಾಕಿಸುವುದು, ಹುಟ್ಟಿದ ಮಗುವಿನ ನಕ್ಷತ್ರ ದೋಷದ ಪರಿಹಾರವಾಗಿ ತಂದೆ ಮಗ ಒಂದು ವರ್ಷ

ಒಂದೇ ಕಡೆ ಇರಬಾರದೆಂದು ಶಾಸ್ತ್ರಿಗಳು ಹೇಳುವುದು, ಬಿಟ್ಟಿದ್ದ ಜಡೆಯನ್ನು ಹಟ್ಟಿಯ ಹುಡುಗಿಯರು ಕತ್ತರಿಸಿದ ಮೇಲೆ ಮತಿಘಟ್ಟ ಕೃಷ್ಣಮೂರ್ತಿ ಅವರು ಕ್ರಾಪು ಬಿಟ್ಟಿದ್ದು ಇತ್ಯಾದಿ ವಿಷಯಗಳನ್ನು ಲೇಖಕರು ಮನೋಜ್ಞವಾಗಿ ವಿವರಿಸಿದ್ದಾರೆ.

ಲೇಖಕರು ಮತಿಘಟ್ಟ ಕೃಷ್ಣಮೂರ್ತಿಯವರ ಕೃತಿಗಳ ಹೆಸರು ಹೇಳುತ್ತಲೇ ಕೆಲವು ಕೃತಿಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿದ್ದಾರೆ. ಅಲ್ಲದೆ ಅನುಬಂಧದಲ್ಲಿ ಮತಿಘಟ್ಟ ಕೃಷ್ಣಮೂರ್ತಿರವರ ಅಪರೂಪದ ಛಾಯಾಚಿತ್ರಗಳನ್ನು ಕೊಟ್ಟಿದ್ದಾರೆ. ಶ್ರೀಯುತರು ತುಂಬು ಜೀವನ ನಡೆಸಿ, ೨೦೦೬ ಜುಲೈ ೨೭ ರಂದು ಪಂಚಭೂತಗಳಲ್ಲಿ ಲೀನರಾದರು.

ಮಾರುತಿ .ಡಿ

೫೦. ಜನಪದ ಚೇತನ ಎಚ್. ಎಲ್. ನಾಗೇಗೌಡರು

ನಾ ಕಂಡಂತೆ ನನ್ನ ತಂದೆ, ಶಾಂತಸ್ವಾಮಿ (ನಾಗಸುತೆ), ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು-೫೬೦೦೫೦, ೨೦೧೨, ಪುಟ-೩೨, ಬೆಲೆ ರೂ. ೨೦/-

"ನಾ ಕಂಡಂತೆ ನನ್ನ ತಂದೆ" ಕೃತಿಯನ್ನು ಶಾಂತಸ್ವಾಮಿ (ನಾಗಸುತೆ) ಇವರು ತಮ್ಮ ತಂದೆ ಎಚ್.ಎಲ್. ನಾಗೇಗೌಡರ ಬಗ್ಗೆ ಬರೆದಿರುವ ಕಿರುಹೊತ್ತಿಗೆ. ಇದು ಕರ್ನಾಟಕ ಜಾನಪದ ಪರಿಷತ್ತಿನ 'ಜನಪ್ರಿಯ ಜಾನಪದ ಪುಸ್ತಕಮಾಲೆ'ಯಿಂದ ಪ್ರಕಟವಾಗಿದೆ.

ಎಚ್.ಎಲ್. ನಾಗೇಗೌಡರು ಈ ನಾಡಿನ ಬಹುಮುಖ ಪ್ರತಿಭೆ. ಉನ್ನತ ವ್ಯಕ್ತಿತ್ವ ಒಳಗೊಂಡ ಚಿಂತಕ, ಸಾಧಕ, ಜಾನಪದ ಜಂಗಮ. ಅವರ ಮಗಳು ತನ್ನ ಪ್ರೀತಿಯ ತಂದೆಯನ್ನು ಕುರಿತು ಅವರು ಅಧಿಕಾರಿಯಾಗಿ, ಸಾಹಿತಿಯಾಗಿ, ಜನಪದ ತಜ್ಞರಾಗಿ, ಸಂಶೋಧಕರಾಗಿ, ಜಾನಪದ ಲೋಕದ ರೂವಾರಿಯಾಗಿ, ಹೇಗೆ ಸೇವೆಯಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದರೆಂಬುದನ್ನು ವಿವರಿಸಿದ್ದಾರೆ.

ರಸಋಷಿ ಕುವೆಂಪುರವರ ಆದರ್ಶಗಳನ್ನು ಅಳವಡಿಸಿಕೊಂಡು ಜೀವನಯಾತ್ರೆ 'ಅನಂತವಾಗಿ ಕೊನೆಯನೆಂದೂ ಮುಟ್ಟದ ಅನಿಕೇತನ'ವಾಗುತ್ತದೆ. ಇವರ ಬಹುಮುಖ ಸಾಧನೆಗೆ ಸಂದ ಪ್ರಶಸ್ತಿಗಳು ಹಲವು. ಪಂಪ ಪ್ರಶಸ್ತಿ, ನಾಡೋಜ, ಜಾನಪದ ಭೀಷ್ಮ, ಪಿತಾಮಹ, ಜಾನಪದ ಮೇರು, ಚುಂಚಶ್ರೀ ಪ್ರಶಸ್ತಿ ಹೀಗೆ ಅವರು ಸಾಹಿತ್ಯ ಕ್ಷೇತ್ರದ ಬರಹ, ಸಾಧನೆಯಿಂದ ಹಿರಿಮೆ ಗಳಿಸಿದರು.

ಸಾಹಿತ್ಯ ರಚನೆಯಲ್ಲಿ ಸುಮಾರು ಮೂವತ್ತೈದಕ್ಕೂ ಹೆಚ್ಚು ಕೃತಿಗಳನ್ನು ನೀಡಿದ್ದಾರೆ. "ಪ್ರವಾಸಿ ಕಂಡ ಇಂಡಿಯಾ"ದ ಎಂಟು ಮಹಾಸಂಪುಟಗಳು(ಅನುವಾದ), ಸರೋಜಿನಿ ದೇವಿ, ದೊಡ್ಡ ಮನೆ(ಕಾದಂಬರಿ), ನನ್ನೂರು, ಭೂಮಿಗೆ ಬಂದ ಗಂಧರ್ವ, ಕಂಡು ಕೇಳಿದ ಕಥೆಗಳು, ಹೆಳವರು ಮತ್ತು ಅವರ ಕಾವ್ಯಗಳು, ಅನುವಾದಗಳು, ಕವನ

ಸಂಕಲನಗಳು, ನಾಗಸಿರಿ, ನಾಗಸಂಪಿಗೆ(ಆತ್ಮಕಥನ), ಸಾವಿರ ಪುಟಗಳ ಜಾನಪದ ಕೋಶ(ಇದು ಜಾನಪದಕ್ಕೆ ಮೀಸಲಾದ ನಿಘಂಟು), ಪ್ರವಾಸಿ ಕಥನಗಳು, 'ಮಲೆನಾಡ ವಾಲ್ಮೀಕಿ'(ಕುವೆಂಪುರವರನ್ನು ಕುರಿತದ್ದು,) ಹೀಗೆ ಅವರು ವಿಶಿಷ್ಟವೆನಿಸುವ ಸಾಹಿತ್ಯ ಕೃತಿಗಳನ್ನು ನೀಡಿದ್ದಾರೆ.

೧೯೪೪ರಲ್ಲಿ ಸಿವಿಲ್ ಸರ್ವಿಸ್ ಸ್ಪರ್ಧಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಗೆಜೆಟೆಡ್ ಹುದ್ದೆಗೆ ಆಯ್ಕೆಯಾಗಿ ಐ.ಎ.ಎಸ್. ಅಧಿಕಾರಿಯಾಗಿ ೧೯೭೮ರಲ್ಲಿ ರಾಜ್ಯ ಲೋಕಸೇವಾ ಆಯೋಗದ ಸದಸ್ಯತ್ವದಿಂದ ನಿವೃತ್ತರಾಗುವವರೆಗೆ ಜಾನಪದದಲ್ಲಿ ನಿಕಟವಾದ ಒಡನಾಟ ದೊಂದಿಗೆ ಉತ್ತಮ ಸೇವೆ ನೀಡಿದ ಗರಿಮೆ ಅವರದು.

ಲೇಖಕಿ ತನ್ನ ತಂದೆಯ ಬಗ್ಗೆ ಅಪಾರ ಗೌರವಾದರಗಳಿಂದ ಅವರು ಹುಟ್ಟಿ ಬೆಳೆದ ಹೆರಗನಹಳ್ಳಿ ದೊಡ್ಡಮನೆ, ಹಳ್ಳಿಯ ಚಿತ್ರಣ, ಹಟ್ಟಿಯ ದನಕರುಗಳು, ಅಲ್ಲಿಯ ಜಾನಪದ ಜೀವನದ ಸೊಬಗು, ಅನ್ಯೋನ್ಯತೆ ತುಂಬಿದ ಕುಟುಂಬದ ಪ್ರೀತಿ, ಅಕ್ಕರೆ, ಒಡನಾಟ ಎಲ್ಲವನ್ನು ತಮ್ಮ ನೆನಪಿನ, ಅನುಭವದ ಆಸರೆಯಲ್ಲಿ ಬರಹವಾಗಿಸಿದ್ದಾರೆ. ಅಂದಿನ ದಿನಗಳ ಹಾಡು, ಹಸೆ, ಗೀತೆ, ಕಥೆ, ಮದುವೆಯ ದಿನಗಳಲ್ಲಿನ ಸಡಗರ, ಸಂಭ್ರಮ, ಸೋಬಾನೆ ಪದಗಳ ಹಾಡಿನ ದನಿ, ಕೂಡು ಕುಟುಂಬದ ಆಪ್ತ ಸಂಬಂಧಗಳು, ಸಂಬಂಧಗಳ ಹಿರಿಮೆ, ಸಂತೃಪ್ತ ಕುಟುಂಬದ ಸ್ವಾಸ್ಥ್ಯ, ಎಲ್ಲವನ್ನೂ ಲೇಖಕಿ ಆಪ್ತವಾಗಿ ಬರೆದಿದ್ದಾರೆ. ತನ್ನ ತಂದೆ ಹುಟ್ಟಿ ಬೆಳೆದ ಹಳ್ಳಿಯಲ್ಲಿನ ತಾತನ ಮನೆಯನ್ನು ಪ್ರೀತಿ ಗೌರವದಿಂದ ಅಲ್ಲಿಗೆ ಹೋಗಿ ಬರುವುದರ ಮೂಲಕ ನೆನಪುಗಳನ್ನು ಜೀವಂತ ಉಳಿಸಿಕೊಂಡಿದ್ದಾರೆ.

ತಂದೆಯವರು ಅಧಿಕಾರದ ಒತ್ತಡದ ನಡುವೆ ಮಕ್ಕಳ ವಿದ್ಯಾಭ್ಯಾಸ, ರಜೆಯಲ್ಲಿ ಕಾಲಹರಣ ಮಾಡದೆ ಓದು, ಕಸೂತಿ, ಹಿಂದಿ ಕಲಿಕೆ, ಬಟ್ಟೆ ಹೊಲಿಯುವುದು ಇಂತಹ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಂತೆ ಹೇಳುತ್ತಿದ್ದರು. ಲೇಖಕಿಯು ತನ್ನ ತಂದೆ ತಾಯಿಗಳ ಋಣವನ್ನು ಎಂದೂ ತೀರಿಸಲಾಗದು ಎಂದು ನೆನಪಿಸಿಕೊಂಡು ಕೃತಜ್ಞರಾಗುತ್ತಾರೆ. ಎಚ್.ಎಲ್. ನಾಗೇಗೌಡರು ತಮ್ಮ ಕಠಿಣ ಪರಿಶ್ರಮದ ಹಾದಿಯಲ್ಲಿ ಸಾಗಿ ಜಾನಪದ ಲೋಕಕ್ಕಾಗಿ ತನು-ಮನ-ಧನವನ್ನು ಸಮರ್ಪಿಸಿ, ನಾಡಿಗೆ ಹಿರಿಮೆ ಗೌರವವನ್ನು ತಂದುಕೊಟ್ಟು ತಮ್ಮ ಬದುಕನ್ನು ಸಾರ್ಥಕ ಮಾಡಿಕೊಂಡ ಹಿರಿಯ ಚೇತನ.

ಜೀವನ ಚರಿತ್ರೆಯನ್ನು ಅತಿ ಹೊಗಳಿಕೆಯಿಲ್ಲದೆ ಅವರ ಭಾವಗಳನ್ನು, ಸಾಧನೆಗಳನ್ನು, ಹಿರಿತನವನ್ನು ಕಪಟವಿಲ್ಲದೆ ನೈಜ ಶೈಲಿಯಲ್ಲಿ ಸಹಜವಾಗಿ ದಾಖಲಿಸುವುದರ ಮೂಲಕ ಲೇಖಕಿ ತಮ್ಮ ತಂದೆಗೆ ಈ ಕಿರುಹೊತ್ತಿಗೆಯಲ್ಲಿ ಗೌರವ ಸಮರ್ಪಿಸಿದ್ದಾರೆ.

ಸುಶೀಲಾ ಸದಾಶಿವಯ್ಯ

೫೧. ಜಾನಪದ ನಾಯಕಿ

ಜಾನಪದ ತಜ್ಞೆ ಶ್ರೀಮತಿ ಶಾಂತಿನಾಯಕ, ಸುಮುಖಾನಂದ ಜಲವಳ್ಳಿ, ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು–೫೬೦೦೫೦, ೨೦೧೨, ಪುಟ–೩೬, ಬೆಲೆ ರೂ. ೨೦/-

ಜಾನಪದ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿರುವ ಅದಮ್ಯ ಚೇತನ 'ಶ್ರೀಮತಿ ಶಾಂತಿನಾಯಕ'ರನ್ನು ಕುರಿತು ಸುಮುಖಾನಂದ ಜಲವಳ್ಳಿಯವರು ಬರೆದಿರುವ ವ್ಯಕ್ತಿ ಪರಿಚಯದ ಕೃತಿ. ಇದು ಕರ್ನಾಟಕ ಜಾನಪದ ಪರಿಷತ್ತಿನ ಜನಪ್ರಿಯ ಜಾನಪದ ಪುಸ್ತಕಮಾಲೆಯಿಂದ ಹೊರಬಂದಿದೆ.

ಜಾನಪದ ಅವಸಾನದ ಅಂಚಿನಲ್ಲಿದ್ದಾಗ ಅದನ್ನು ಮತ್ತೆ ಪುನರುಜ್ಜೀವನಗೊಳಿಸುವ, ದಾಖಲಿಸುವ, ಸಂರಕ್ಷಿಸುವ ಕೆಲಸವನ್ನು ಮುಂದಿನ ಆಧುನಿಕ ಪೀಳಿಗೆಗೆ ಉಳಿಯುವಂತೆ ಮಾಡಿದ ಕೀರ್ತಿ ಜಾನಪದ ತಜ್ಞೆ ಶಾಂತಿನಾಯಕರಿಗೆ ಸಲ್ಲುತ್ತದೆ. ಮಹಿಳೆಯಾಗಿ ಅವರ ಸಾಧನೆ ಅನನ್ಯವಾದದ್ದು.

ನಮ್ಮ ಜೀವನ ಶೈಲಿಯ ಬೇರುಗಳು ಜಾನಪದದಲ್ಲಿವೆ. ಅದರ ಸಂರಕ್ಷಣೆಯಿಂದ ಅದರ ಸಾರರೂಪವಾದ ನಮ್ಮ ಸಂಸ್ಕೃತಿ, ಪರಂಪರೆ, ನಡೆ–ನುಡಿ, ಉಡುಗೆ–ತೊಡುಗೆ, ಆಹಾರ ಎಲ್ಲವೂ ನಮಗೆ ಸಿಗುತ್ತದೆ. ಅಂತಹ ಸಂರಕ್ಷಣೆಯ ಜವಾಬ್ದಾರಿಯ ಕಾರ್ಯವನ್ನು ಶಾಂತಿನಾಯಕರು ಮಾಡಿ ಈಗಿನವರಿಗೆ ಉಳಿಸಿಕೊಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರಿ ಊರಿನಲ್ಲಿ ಹುಟ್ಟಿದ ಶ್ರೀಮತಿ ಶಾಂತಿನಾಯಕರ ಕುಟುಂಬವೆಲ್ಲಾ ಜನಪದ ಮನೋಭಾವ ಹೊಂದಿದ್ದವರು. ಮನೆಮದ್ದು ಬಲ್ಲವರು. ಜನಪದ ಹಾಡು, ಕತೆಗಳನ್ನು ಹೇಳುವ ಚತುರತೆ ಹೊಂದಿದ್ದ ಮನೆಯಲ್ಲಿ ಬೆಳೆದ ಶಾಂತಿನಾಯಕರು ಉಪಾಧ್ಯಾಯಿನಿಯಾಗಿ ಹಳ್ಳಿಯ ಶಾಲೆಯಲ್ಲಿ ಸೇವೆಮಾಡಿ ಹೆಸರು ಮಾಡಿದರು. ಸಮಾಜಸೇವೆ ಕ್ಷೇತ್ರದಲ್ಲಿ ತೊಡಗಿಸಿಕೊಂಡು ವಯಸ್ಕರ ಶಿಕ್ಷಣ ಆಂದೋಲನದ ಸಾಕ್ಷರತೆಯಲ್ಲಿ ಹಳ್ಳಿ ಹಳ್ಳಿ ಸುತ್ತಿ ಗ್ರಾಮೀಣ ಮಹಿಳೆಯರಲ್ಲಿ ಅಕ್ಷರ ಪ್ರೀತಿ ಹೆಚ್ಚಿಸಿದರು. ಸಮತಾ ಪತ್ತಿನ ಸಹಕಾರ ಸಂಘದಿಂದ ಮಹಿಳಾ ಸಬಲೀಕರಣ ಹಿನ್ನೆಲೆಯಲ್ಲಿ ಆರ್ಥಿಕ ಸ್ವಾತಂತ್ರ್ಯ ದೊರಕಿಸಿಕೊಟ್ಟರು. ಭೂಮಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿಗಮ ಸ್ಥಾಪನೆ, ಹೀಗೆ ಅನೇಕ ಸಂಘ ಸಂಸ್ಥೆಗಳ ಸ್ಥಾಪನೆ ಮತ್ತು ಒಡನಾಟದಿಂದ ಗ್ರಾಮೀಣ ಭಾಗದ ಮಹಿಳೆಯರ ಏಳಿಗೆಗೆ ಕಾರಣಕರ್ತರಾದರು.

ತಮ್ಮ ನಿವೃತ್ತಿಯ ನಂತರ ಜಾನಪದ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡು, ಜನಪದ ಆಟಗಳು, ಆಹಾರಕ್ರಮ, ಪಾನೀಯ, ಮನೆಮದ್ದು, ಹಳ್ಳಿಯ ಹಾಡುಗಾರ್ತಿಯರಿಂದ ಹಾಡುಗಳು ಸಂಗ್ರಹ(ಇದು ೧೦ ಸಾವಿರಕ್ಕೂ ಹೆಚ್ಚು ಪುಟಗಳಲ್ಲಿ)

ಪ್ರಕಟವಾಗಿದೆ. ಔಷಧಿ ಸಸ್ಯಗಳ ಸಂರಕ್ಷಣೆ, ಉಪಯೋಗ, ಮಹತ್ವವನ್ನು ಕುರಿತು ಹಲವು ಕಾರ್ಯಕ್ರಮಗಳನ್ನು ನೀಡಿದರು.

ಜಾನಪದ ಪುಸ್ತಕ ಪ್ರಕಟಣೆಗೆ ಎಂದೇ ತಮ್ಮದೇ ಆದ ಜಾನಪದ ಪ್ರಕಾಶನ ಸಂಸ್ಥೆ ಹುಟ್ಟುಹಾಕಿದರು. 'ಜಾನಪದ ದೀಪಾರಾಧನೆ' ಎಂಬ ವೇದಿಕೆಯಿಂದ ಜಾನಪದ ಕಾರ್ಯಕ್ರಮಗಳನ್ನು ಮಾಡಿ ನಾಡಿನಾದ್ಯಂತ ಜನಪದವನ್ನು ಪರಿಚಯಿಸಿದ, ಸತ್ಕರಿಸಿದ ಕೀರ್ತಿ ಈ ದಂಪತಿಗಳಿಗೆ ಸಲ್ಲುತ್ತದೆ. ಅವರ ಪತಿ ಎನ್.ಆರ್.ನಾಯಕರ ಬೆಂಬಲದಿಂದ ಸತಿ–ಪತಿಗಳೊಂದಾಗಿ ಜಾನಪದಕ್ಕಾಗಿ ದುಡಿದರು.

ಇವರು ಹೊರತಂದ ಕೃತಿಗಳು ಮೂವತ್ತಕ್ಕೂ ಮೀರಿವೆ. ಜಾನಪದ ಕೃತಿ, ಜಾನಪದೇತರ ಕೃತಿಗಳು, ಸಂಪಾದಿತ ಕೃತಿಗಳು ಹೀಗೆ ಜಾನಪದ ವಿಮರ್ಶಾ ಕೃತಿಗಳನ್ನು ಹೊರತಂದು ಜಾನಪದ ಮತ್ತು ಕನ್ನಡ ಸಾಹಿತ್ಯ ಎರಡನ್ನೂ ಹಿರಿದಾಗಿಸಿದರು. ಗಣಿತ, ಆಭರಣ, ಪಾನೀಯ ಹೀಗೆ ಇಡೀ ಒಂದು ಸಮುದಾಯದ ಸಂಸ್ಕೃತಿಯ ಚಿತ್ರಣವನ್ನು ಕಟ್ಟಿಕೊಡುವ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 'ಜಾನಪದ ತಜ್ಞೆ'(೧೯೯೮) ಪ್ರಶಸ್ತಿ ಸಂದಿದೆ. ಈ ಪ್ರಶಸ್ತಿ ಪಡೆದ ಮೊದಲ ಮಹಿಳೆಯಾಗಿದ್ದಾರೆ. ಕನ್ನಡ ಸಾಹಿತ್ಯದ ಮಲ್ಲಿಕಾ ಪ್ರಶಸ್ತಿ, ಪದ್ಮಭೂಷಣ ಡಾ. ಬಿ. ಸರೋಜದೇವಿ ಸಾಹಿತ್ಯ ಪ್ರಶಸ್ತಿ, ಜಿಲ್ಲಾ ಉತ್ತಮ ಲೇಖಕಿ ಪ್ರಶಸ್ತಿ, ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿಗಳು ಹೀಗೆ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಅವರನ್ನು ಗೌರವಿಸಿವೆ.

ದೀಪಾರಾಧನೆ, ಕಲಶ, ಜಾನಪದ ಬೆಳ್ಳಿದೀಪಾರಾಧನೆ, ಮರುದಿಬ್ಬಣ ಎಂಬವು ಇವರ ಅಭಿನಂದನಾ ಗ್ರಂಥಗಳು. ಸದಾ ಕ್ರಿಯಾಶೀಲರಾಗಿರುವ ಶಾಂತಿನಾಯಕರು ಜಾನಪದ ಕ್ಷೇತ್ರಕ್ಕೆ ಒಂದು ವರವಾಗಿದ್ದಾರೆ. ಇಂತಹ ಸಮರ್ಥ ಸಂಘಟನಾ ಮಹಿಳೆ ಯಾಗಿರುವ ಶಾಂತಿನಾಯಕರನ್ನು, ಜಾನಪದದ ಮಹಿಳಾ ಚೇತನವನ್ನು ಚಾತುರ್ಯದ ತಮ್ಮ ಕಿರುಹೊತ್ತಿಗೆಯಲ್ಲಿ ಸುಮುಖಾನಂದರು ಚಿತ್ರಿಸಿಕೊಟ್ಟಿದ್ದಾರೆ.

ಸುಶೀಲಾ ಸದಾಶಿವಯ್ಯ

೫೨. ಹರಿಕಥೆ ದಿಗ್ಗಜ ಡಾ. ಲಕ್ಷ್ಮಣದಾಸ್

ಡಾ. ಲಕ್ಷ್ಮಣದಾಸ್, ಗುಡಿಹಳ್ಳಿ ನಾಗರಾಜ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦೦೦೨, ೨೦೧೨, ಪುಟ–೮+೮೦, ಬೆಲೆ ರೂ. ೫೦/-

ಡಾ. ಲಕ್ಷ್ಮಣದಾಸ್‌ರವರು ಕರ್ನಾಟಕದ ಪ್ರಮುಖ ಕೀರ್ತನೆಕಾರರಲ್ಲಿ ಒಬ್ಬರಾಗಿದ್ದಾರೆ. ನಾಗರಿಕತೆಯ ಹೆಸರಲ್ಲಿ ದೇಸಿ ಕಲೆ ಹಾಗೂ ಸಂಸ್ಕೃತಿಯನ್ನು ತಿರಸ್ಕರಿಸುತ್ತಿರುವ ಈ ಕಾಲದಲ್ಲಿ ಹರಿಕಥೆಯಂತಹ ಗ್ರಾಮೀಣ ಹಾಗೂ ಪುರಾತನ ಕಲೆಯನ್ನು ಕುರಿತು

ಲಕ್ಷ್ಮಣದಾಸರಿಂದ ಅರಿವು ಮೂಡಿಸುವ ಪ್ರಯತ್ನದ ಫಲವಾಗಿ ಹೊರ ತಂದಿರುವ ಪುಸ್ತಕವಾಗಿದೆ ಎಂದರೆ ತಪ್ಪಾಗಲಾರದು. ಲಕ್ಷ್ಮಣದಾಸ್ ಅವರಂತಹ ಹರಿಕಥೆ ಹಾಗೂ ರಂಗಕಲೆಯ ಹಿರಿಯರನ್ನು ಕುರಿತು ತಿಳಿದುಕೊಳ್ಳುವ ಸದಾವಕಾಶ ಈ ಪುಸ್ತಕದ ಮೂಲಕ ನಮಗೆ ಒದಗಿದೆ.

ಗುಡಿಹಳ್ಳಿ ನಾಗರಾಜರವರು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಬರೆದುಕೊಟ್ಟಿರುವ 'ಡಾ. ಲಕ್ಷ್ಮಣದಾಸ್' ಕೃತಿಯು ೮೦ ಪುಟಗಳಲ್ಲಿ ಹಬ್ಬಿದೆ. ಬಡತನದ ಮೂಲದಿಂದ ಬಂದು ಕಲೆಯೇ ಬದುಕು, ಕಲೆಯೇ ದೈವ ಎನ್ನುವ ರೀತಿಯಲ್ಲಿ ಬದುಕಿ ಮೇರು ಸ್ಥಾನಕ್ಕೇರಿದ ಡಾ. ಲಕ್ಷ್ಮಣದಾಸ್‌ರವರ ವ್ಯಕ್ತಿಚಿತ್ರಣವನ್ನು ಇಲ್ಲಿ ಸೆರೆಹಿಡಿದು ಹಾಗೂ ನಾಡಿನ ಜನಕ್ಕೆ ತಲುಪಿಸಿರುವುದಕ್ಕೆ ಲೇಖಕರು ಸ್ತುತ್ಯರ್ಹರು.

ಹರಿಕಥೆಯಂತಹ ದೇವರ ಸ್ಮರಣೆ, ಕೀರ್ತನೆಗಳನ್ನು ಹಾಡಲು ಮೇಲ್ಜಾತಿಯ ಜನ ಮಾತ್ರ ಅರ್ಹರು ಎಂಬ ನಂಬಿಕೆಯಿದ್ದ ಕಾಲದಲ್ಲಿ ಪರಿಶಿಷ್ಟ ಜಾತಿಯೊಂದರಿಂದ ಬಂದ ಲಕ್ಷ್ಮಣದಾಸರು ಕಲೆ ಎನ್ನುವುದು ಸಾಧಕನ ಸ್ವತ್ತು ಎಂಬುದನ್ನು ಸಾಧಿಸಿದ್ದಾರೆ. ಅದಕ್ಕೆ ಜಾತಿ ಹಾಗೂ ಶ್ರೀಮಂತಿಕೆಯ ಅಗತ್ಯವಿಲ್ಲ ಎನ್ನುವುದನ್ನು ತೋರಿಸಿ ಕೊಟ್ಟರು. ಹರಿಕಥೆ ಹೇಳುವುದರಲ್ಲಿ ಪರಿಣಿತನಾದವನನ್ನು 'ದಾಸ' ಎನ್ನುತ್ತಾರೆ. ದಾಸ ಎನ್ನುವುದು ಬಹುದೊಡ್ಡ ಗೌರವ ಕೊಡುವ ಪದ ಹಾಗೂ ಅದನ್ನು ಪಡೆದವರನ್ನು ಸಮಾಜ ಬಹಳ ಗೌರವದಿಂದ ಕಾಣುತ್ತದೆ. ಆದರೆ ಈ ಗೌರವವನ್ನು ಪಡೆಯುವುದು ಲಕ್ಷ್ಮಣದಾಸರ ಪಾಲಿಗೆ ಸುಲಭವಾಗಿರಲಿಲ್ಲ. ಅವಿಭಕ್ತ ಕುಟುಂಬದ ಹಿನ್ನೆಲೆಯಿಂದ ಬಂದ ಲಕ್ಷ್ಮಣದಾಸರು ಹರಿಕಥಾ ದಾಸರಂತಹ ಗೌರವಾನ್ವಿತ ಸ್ಥಾನಕ್ಕೆ ಬರಲು ತುಂಬಾ ಶ್ರಮಪಟ್ಟಿದ್ದಾರೆ. ಶಾಲಾ ದಿನಗಳಲ್ಲಿ ನಾಟಕ, ಯಕ್ಷಗಾನದಂತಹ ಕಲೆಗೆ ಮಾರುಹೋಗಿ ಒಂದು ಹಂತದ ವಿದ್ಯಾಭ್ಯಾಸದಲ್ಲಿ ಅನುತ್ತೀರ್ಣರಾದರೂ ಸಹ ಕಲಾ ಸರಸ್ವತಿ ಅವರ ಕೈಬಿಡಲಿಲ್ಲ. ಕಲೆಯ ಬಗ್ಗೆ ಅವರಿಗಿದ್ದ ಅಪಾರ ಆಸಕ್ತಿ ಹಾಗೂ ಗೌರವ ಅವರಿಗೆ ವರದಾನವಾಯಿತು.

ಈ ಪುಸ್ತಕದಲ್ಲಿ ಲೇಖಕರು ನಾಟಕ ಹಾಗೂ ಯಕ್ಷಗಾನದ ಕುರಿತಾದ ಹಲವಾರು ವಿಷಯಗಳನ್ನು ವಿಸ್ತೃತವಾಗಿ ಚರ್ಚಿಸಿದ್ದಾರೆ. ಸಿನಿಮಾ ಹಾಗೂ ಅಬ್ಬರದ ಸಂಗೀತವನ್ನು ಮಾತ್ರ ಕೇಳಿ ಗೊತ್ತಿರುವ ನಮಗೆ ೫೦ರ ದಶಕದ ನಾಟಕಗಳು ಹಾಗೂ ಅದಕ್ಕೆ ಪ್ರೇಕ್ಷಕ ಪ್ರಭುಗಳು ಕೊಡುತ್ತಿದ್ದ ಮನ್ನಣೆಯನ್ನು ಓದಿದಾಗ ಆಶ್ಚರ್ಯವಾಗುತ್ತದೆ. ನಾಟಕ ಕಂಪನಿಗಳು ಪ್ರದರ್ಶನಕ್ಕೆ ಬರುತ್ತಿದ್ದ ರೀತಿ ಹಾಗೂ ಪರಿಕರಗಳನ್ನು ಜೋಡಿಸುತ್ತಿದ್ದ ರೀತಿಯನ್ನು ಜನರು ಆಸಕ್ತಿಯಿಂದ ನೋಡುತ್ತಿದ್ದ ಹಾಗೂ ಸ್ವಾಗತಿಸುತ್ತಿದ್ದ ರೀತಿ ನಮ್ಮನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಸದಭಿರುಚಿಯ ಸಾಹಿತ್ಯ ಹಾಗೂ ಅದನ್ನು ಯೋಗ್ಯ ರೀತಿಯಲ್ಲಿ ಪ್ರಸ್ತುತಪಡಿಸುವ ಕಲಾವಿದರ ಕಲೆ ಎಲ್ಲವೂ ನಮ್ಮನ್ನು ಚಕಿತಗೊಳಿಸುತ್ತದೆ.

ಸರ್ಕಾರಿ ಉದ್ಯೋಗದಲ್ಲಿದ್ದುಕೊಂಡು ಸಹ ಊರೂರು ಸುತ್ತಿ ಲಕ್ಷ್ಮಣದಾಸರು ಹರಿಕಥೆಯ ಕಾರ್ಯಕ್ರಮಗಳ್ನನ್ನು ನಡೆಸಿಕೊಡುತ್ತಿದ್ದ ಪರಿ ಅವರಿಗೆ ಆ ಕಲೆಯ ಬಗ್ಗೆ ಇರುವ ಗೌರವವನ್ನು ತೋರಿಸುತ್ತದೆ. ಕಲಾರಾಧಕರು ಕೌಟುಂಬಿಕ ಜೀವನಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿರಲಿಲ್ಲ ಎಂಬ ಮಾತು ಲಕ್ಷ್ಮಣದಾಸರ ವಿಚಾರದಲ್ಲಿ ಅಕ್ಷರಶಃ ಸತ್ಯವಾಗಿದೆ. ಕೂಡು ಕುಟುಂಬದಲ್ಲಿ ಅನುಸರಿಸಿಕೊಂಡು ಹೋಗಿ ಜೀವನ ನಡೆಸಿದ ಶ್ರೀಯುತರ ಪತ್ನಿಯವರ ತಾಳ್ಮೆ ಅಭಿನಂದನಾರ್ಹ. ಇಲ್ಲಿ ಒಂದು ವಿಚಾರ ಸ್ಪಷ್ಟವಾಗುತ್ತದೆ; ದಾಸರ ಸಾಧನೆ ಅವರೊಬ್ಬರದೇ ಅಲ್ಲ. ಅದರಲ್ಲಿ ಅವರ ಪತ್ನಿಯ ಪಾಲು ಸಹ ಇದೆ. ಏಕೆಂದರೆ ಯಾವುದೇ ಮನುಷ್ಯ ತನ್ನ ವೃತ್ತಿ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂದರೆ ಸಂಗಾತಿಯ ಸಹಕಾರ ಅತ್ಯಗತ್ಯ. ತಮ್ಮ ವೈಯಕ್ತಿಕ ಹಾಗೂ ಹಿತಾಸಕ್ತಿಗಳನ್ನು ಬದಿಗೊತ್ತಿ ನಿಸ್ವಾರ್ಥತೆಯಿಂದ ಪತಿಗೆ ಸಹಕಾರ ನೀಡಿದ ಪತ್ನಿಗೆ ಸಾಧನೆಯ ಕಿರೀಟ ತೊಡಿಸಲೇಬೇಕು.

ಒಟ್ಟಾರೆ ಶ್ರೀಯುತರು ಹರಿಕಥೆಯ ಸತ್ವ-ಸಾರಗಳನ್ನು ಚೆನ್ನಾಗಿ ಅರಿತು ಅದರಲ್ಲಿ ಪಾಂಡಿತ್ಯ ಪಡೆದವರು. ಅವರ ಸಾಧನೆ ಇತರರಿಗೆ ಮಾದರಿಯಾಗಿ, ನೇಪಥ್ಯಕ್ಕೆ ಸರಿದುಹೋದ ಗ್ರಾಮೀಣ ಕಲೆಗಳನ್ನು ಬೆಳಕಿಗೆ ತಂದ ಲಕ್ಷ್ಮಣದಾಸರನ್ನು ಸರಿಯಾಗಿ ಅರ್ಥೈಸಿಕೊಂಡು ಗುಡಿಹಳ್ಳಿ ನಾಗರಾಜರವರು ಈ ಕೃತಿಯನ್ನು ಹೊರತಂದಿರುವುದು ಕಲಾಕಾರನ ಕಲೆ ಶಾಶ್ವತವಾಗಿ ಯುವಪೀಳಿಗೆಗೆ ಸ್ಫೂರ್ತಿಯಾಗಲು ದಾರಿದೀಪವಾಗಲು ಈ ಮುಖಾಂತರ ಸಾಧ್ಯವಾಗಿದೆ.

ಬಿ.ಸಿ. ವೀಣಾ, ತುಮಕೂರು

□□

೬

ಪದ್ಯ/ಗದ್ಯ ಸಂಗ್ರಹಗಳು

೫೩. ವಿಶಿಷ್ಟ ಜನಪದ ಕಾವ್ಯಗಳು

ನಾಡವರ ಪುರಾಣ ಕಥನ ಕಾವ್ಯಗಳು, ಸಂ. ಡಾ. ಎನ್.ಆರ್. ನಾಯಕ, ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ, ೨೦೧೨, ಪುಟ–೫+೬೪, ಬೆಲೆ ರೂ. ೪೦/-

ಉತ್ತರ ಕನ್ನಡ ಜಿಲ್ಲೆಯ ನಾಡವ ಸಮುದಾಯದಲ್ಲಿ ಒಂದು ಕಾಲಕ್ಕೆ ತುಂಬಾ ಪ್ರಚಲಿತವಿದ್ದ ಜನಪದ ಗೀತೆ, ಕತೆ, ಕಥನಗೀತೆಗಳನ್ನು ಡಾ.ಎನ್.ಆರ್.ನಾಯಕ ದಂಪತಿಗಳು ಕಳೆದ ಅರ್ಧಶತಮಾನದಿಂದ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಪ್ರಸ್ತುತ ಕೃತಿಯಲ್ಲಿಯೂ ಅವರು ಐದು ಪುರಾಣ ಕಥನಕಾವ್ಯಗಳನ್ನು ಕೊಟ್ಟಿದ್ದಾರೆ. ಇಲ್ಲಿರುವ ಕಥನಕಾವ್ಯಗಳೆಂದರೆ– ಮುಂಡಾಳದುರ್ಗಿ ಅಥವಾ ಸೀತೆಮದುವೆ(೫ ಪುಟಗಳು), ಪಾಂಡುಭೂಪತಿ(೪ ಪುಟಗಳು), ದ್ರೌಪದಿ(೧೩ ಪುಟಗಳು), ರುಕ್ಮಿಣಿ(೪ ಪುಟಗಳು) ಹಾಗೂ ಚಂದ್ರಾವಳಿ (೧೦ ಪುಟಗಳು). ಎಂದಿನಂತೆ ಡಾ.ನಾಯಕರ ಸಂಪಾದನಾ ಕಾರ್ಯ ಶಿಸ್ತುಬದ್ಧವಾಗಿದೆ. ಆರಂಭದಲ್ಲಿ ಒಂದು ಪೀಠಿಕೆ ಇದ್ದು, ಅದರಲ್ಲಿ ನಾಡವರು ಮತ್ತು ಅವರ ಜನಪದ ಸಾಹಿತ್ಯದ ಬಗ್ಗೆ ಒಂದಷ್ಟು ಮಾಹಿತಿ, ವಕ್ತೃ ಹಾಗೂ ಸಂಗ್ರಹಣೆಯ ಕಾಲ ಕುರಿತ ಮಾಹಿತಿ, ನಂತರ ಪ್ರತಿ ಕಥನ ಕಾವ್ಯದ ಸಾರಾಂಶ ಇವನ್ನು ನೀಡಲಾಗಿದೆ. ಅನಂತರ ಗೀತೆಗಳನ್ನು ನೀಡಲಾಗಿದೆ.

ಗೀತೆಗಳಿಗೆ ಅಗತ್ಯವಿರುವಲ್ಲೆಲ್ಲ ಅಡಿಟಿಪ್ಪಣಿಯಲ್ಲಿ ಶಬ್ದಾರ್ಥಗಳನ್ನು ನೀಡಿದ್ದಾರೆ. ಇಲ್ಲಿ ನೀಡಿರುವ ಕಥನಕಾವ್ಯಗಳಲ್ಲಿನ ಕತೆಯೇ ಬಹುಮುಖ್ಯ ಆಕರ್ಷಣೆ. 'ಸೀತೆಯ ಮದುವೆ' ಎಂಬ ಮೊದಲ ಕಾವ್ಯದ ಕತೆಯಂತೂ ತೌಲನಿಕ ಅಧ್ಯಯನದ ಧೃಷ್ಟಿಯಿಂದ ತುಂಬ ಉಪಯುಕ್ತ. ಪಾಂಡವರು ತಾವು ವನವಾಸಕ್ಕೆ ಹೋಗುವ ಕಾಲದಲ್ಲಿ ತಂಗಿ ಎಂದು ಸ್ವೀಕರಿಸಿ ಅಡಗಿಸಿಟ್ಟ ಮುಂಡಾಳದುರ್ಗಿ ಎಂಬ ಸ್ತ್ರೀಯನ್ನು ರಾವಣ ಸಣ್ಣ ನೊಣದ ರೂಪದಲ್ಲಿ ಬಂದು ಕೆಡಿಸುವುದು, ಅದನ್ನು ತಿಳಿದ ರಾಮಲಕ್ಷ್ಮಣರು ರಾವಣನನ್ನು ಕರೆಸಿ ಅವನೊಡನೆ ಆಕೆಯ ಮದುವೆ ಮಾಡಿಸುವುದು, ಅವರಿಬ್ಬರಿಗೆ

ಹುಟ್ಟಿದ ಮಗಳು ಸೀತೆಯನ್ನು ತಂದು, ಲಂಕೆಗೆ ಆಪತ್ತು ಎಂದು ಪೆಟ್ಟಿಗೆಯಲ್ಲಿಟ್ಟು ತೇಲಿಬಿಡುವುದು, ಆ ಮಗು ಜನಕನ ಕೈಗೆ ಸಿಕ್ಕಿ ಸೀತೆಯಾಗಿ ಬೆಳೆಯುವುದು, ಮುಂದೆ ಲಕ್ಷ್ಮಣ ದೈವವಿತ್ತ ಬಿಲ್ಲೊಂದನ್ನು ಮುರಿದು ಸೀತೆಯನ್ನು ಗೆದ್ದು ಅಣ್ಣ ಇನ್ನೂ ಅವಿವಾಹಿತನಾಗಿರುವುದರಿಂದ ಆತನಿಗೆ ಆಕೆಯನ್ನು ಮದುವೆ ಮಾಡಿ ಕೊಡುವುದು ಇಲ್ಲಿನ ಕಥಾ ಸಾರಾಂಶ. ಜೈನ-ಬೌದ್ಧ ವಾಲ್ಮೀಕಿ ರಾಮಾಯಣದ ಅಂಶಗಳನ್ನು ಮಹಾಭಾರತದ ಘಟನೆಗಳನ್ನು ಕಲಸು ಮೇಲೋಗರ ಮಾಡಿ ತಮ್ಮದೇ ಆದೊಂದು ಕಥನವನ್ನು ಸೃಷ್ಟಿಸಿಕೊಂಡಿರುವ ನಾಡವ ಜಾನಪದರ ವೈಶಿಷ್ಟ್ಯತೆ ಇಲ್ಲಿ ಎದ್ದು ಕಾಣುತ್ತದೆ. ಇಂಥ ಅದೆಷ್ಟೋ ರಾಮಾಯಣ, ಮಹಾಭಾರತಗಳು ಈ ದೇಶದಲ್ಲಿವೆಯೋ ಯಾರಿಗೆ ಗೊತ್ತು.

ಉಳಿದ ಕಥನಗೀತೆಗಳಲ್ಲೂ ಸಹ ನಮ್ಮ ಪರಿಚಿತ ಕಥನಕ್ಕಿಂತ ಭಿನ್ನವಾದ ಕೆಲವಾದರೂ ಅಂಶಗಳಿವೆ. ಸುಂದರವಾಗಿ ಮುದ್ರಿತವಾಗಿರುವ ಈ ಪುಟ್ಟ ಪುಸ್ತಕ ರಾಮಾಯಣ-ಮಹಾಭಾರತ-ಭಾಗವತದ ಕಥನಗಳ ತೌಲನಿಕ ಅಧ್ಯಯನಕ್ಕೆ ಉಪಯುಕ್ತವಾಗಿದೆ.

ಎಸ್. ಪಿ. ಪದ್ಮಪ್ರಸಾದ್

೫೪. 'ಜನಪದ ಕಾವ್ಯ- ಬಾಲನಾಗಮ್ಮ: ಒಂದು ನೋಟ'

ಜನಪದ ಕಾವ್ಯ- ಬಾಲನಾಗಮ್ಮ, ಸಂ. ಡಾ. ಮೈಸೂರು ಉಮೇಶ್, ಅಮೋಘ ಪ್ರಕಾಶನ, ನಂ. ೨೩೩, ೧ನೇ ಕ್ರಾಸ್, ಗಣಪತಿ ದೇವಾಲಯದ ಹಿಂಭಾಗ, ಕೆ.ಎನ್.ಪುರ, ಮೈಸೂರು-೫೭೦೦೧೯., ೨೦೧೨, ಪುಟ-೧೦+೫೦, ಬೆಲೆ ರೂ. ೧೦೦/-

ಕನ್ನಡ ಸಾಹಿತ್ಯಕ್ಕೆ ಅತ್ಯಂತ ಪ್ರಾಚೀನ ಎನ್ನಬಹುದಾದ ಈ ನೆಲದ ಜನಪದವು ಸಮೃದ್ಧ ಸಾಹಿತ್ಯವನ್ನು ನೀಡಿ ಶ್ರೀಮಂತಗೊಳಿಸಿದೆ. ಹಾಗೆಯೇ ಎಷ್ಟೇ ಹಳೆಯದಾದರೂ ಹಾಡುವಾಗೆಲ್ಲ ಅದರ ತಾಜಾತನವೇ ತುಂಬಿರುತ್ತದೆ. ಹಳ್ಳಿಯ ಮುಗ್ಧ ಹೆಣ್ಣುಮಗಳಂತೆ ಸೌಜನ್ಯವೂ ಅವರೆಯ ಸೊಗಡಿನ ಸುವಾಸನೆಯಿಂದ ಕೂಡಿದ ರೀತಿಯಲ್ಲಿ ಜನಪದವೂ ಸದಾ ನಳನಳಿಸುತ್ತದೆ.

ಇಂತಹ ರೀತಿಯ ದೊಂಬಿದಾಸರ ಕಾವ್ಯ ಬಾಲನಾಗಮ್ಮ ಜನಪದ ಕಾವ್ಯವು ಒಂದಾಗಿದೆ. ಡಾ. ಮೈಸೂರು ಉಮೇಶ್‌ರವರು ಸಂಪಾದಿಸಿ ಕನ್ನಡ ಜನಪದ ಕಾವ್ಯಲೋಕಕ್ಕೆ ನೀಡಿರುವುದು ಶ್ಲಾಘನೀಯ. ಈ ಕಾವ್ಯವನ್ನು ದೊಂಬಿದಾಸರ ಕಾವ್ಯವೆಂದೇ ಕರೆಯಲಾದ್ದರಿಂದ ಉಮೇಶರವರು ಮೈಸೂರಿನ ಹುಣಸೂರು ರಸ್ತೆಯ ದೊಂಬಿದಾಸರ ಕೇರಿಯಲ್ಲೇ ಈ ಕಾವ್ಯವನ್ನು ಹಾಡಿಸಿ ಸಂಗ್ರಹಿಸಿದ್ದಾರೆ.

ಸಾಮಾನ್ಯವಾಗಿ ಬಾಲನಾಗಮ್ಮನ ಕಥೆಯನ್ನು ಅತ್ಯಂತ ಚಿಕ್ಕಂದಿನಲ್ಲೇ ಕೇಳಿದ್ದೇವೆ. ಜನಸಾಮಾನ್ಯರಲ್ಲಿ ಬಾಲನಾಗಮ್ಮನ ಕಥೆ ಒಂದು ಭಯ ತರಿಸುವ ಕಥೆಯಾಗಿದೆ.

ಮಂತ್ರವಾದಿಗಳು ಮಂಕುಬೂದಿ ಎರಚಿ ಬಾಲನಾಗಮ್ಮನನ್ನು ಕರೆದುಕೊಂಡು ಹೋದಂತೆ ಹೆಣ್ಣು ಮಕ್ಕಳನ್ನು, ಮದ್ವೆಯಾದ ಗಂಡುಳ್ಳ ಗರತಿಯರನ್ನೂ ಮಾಯಾ ವೇಷದಲ್ಲಿ ಬರುವ ಮಂತ್ರವಾದಿಗಳು ಭಿಕ್ಷೆಯ ನೆಪವೊಡ್ಡಿ ಮಂಕುಬೂದಿ ಎರಚಿ ಕರೆದುಕೊಂಡು ಹೋಗುತ್ತಾರೆ. ಮನೆಯಲ್ಲಿ ಒಬ್ಬರೇ ಇದ್ದಂತಹ ಸಂದರ್ಭದಲ್ಲಿ ಯಾರಿಗೂ ಭಿಕ್ಷೆಯನ್ನು ಕೊಡಕೂಡದು ಎಂದು ಹಿರಿಯರು ಸೊಸೆ, ಹೆಣ್ಣುಮಕ್ಕಳಿಗೆ ಹೇಳುವ ಪರಿಪಾಠವಿತ್ತು. ಬಾಲನಾಗಮ್ಮ ನಾಯಿಯ ರೂಪ ಪಡೆದು ಮಂತ್ರವಾದಿಯ ಹಿಂದೆ ಹೋಗುವ ಪರಿಯು, ಚಿಕ್ಕವರಿದ್ದಾಗ ಎಳೆಯ ಮನಸ್ಸಿನ ಮೇಲೆ ತುಂಬಾ ಪರಿಣಾಮ ಬೀರುತ್ತಿತ್ತು. ಇಂತಹ ಒಂದು ಚಿತ್ರಣ ಬಾಲನಾಗಮ್ಮನ ಕಾವ್ಯದ ಬಹುಮುಖ್ಯ ಭಾಗವಾಗಿ ಈ ಜನಪದ ಕಾವ್ಯದಲ್ಲಿ ಕಾಣಿಸಿಕೊಳ್ಳುತ್ತದೆ.

ಬಾಲನಾಗಮ್ಮನನ್ನೂ ನಾಯಿ ಮಾಡಿಕೊಂಡು ಮಾಯಲ ಮರಾಟಿಯು ಕರಕೊಂಡು ಹೋಗುವುದು, ಗುಹೆಯಲ್ಲಿ ಇರಿಸುವುದು, ಈ ಪಾಠದಲ್ಲಿ ಕಂಡುಬರುತ್ತದೆ. ಈ ಒಂದು ಘಟನೆ ನಮ್ಮ ರಾಮಾಯಣದ ಸೀತೆಯನ್ನು ರಾವಣ ಮಾರುವೇಷದಲ್ಲಿ ಬಂದು ಭಿಕ್ಷೆಯನ್ನು ಬೇಡಿ ಕರೆದುಕೊಂಡು ಹೋಗುವ ಪ್ರಸಂಗವನ್ನು ನೆನಪಿಗೆ ತರುತ್ತದೆ.

ಈ ಕೃತಿಯಲ್ಲಿ ಭೂಲಕ್ಷ್ಮೀದೇವಿಗೆ ಸಂತಾನವಿಲ್ಲದ ಕಾರಣಕ್ಕಾಗಿ ಮಕ್ಕಳ ಹಂಬಲವುಂಟಾಗುತ್ತದೆ. ಆ ನಂತರ ಭೂಲಕ್ಷ್ಮೀಯು ಚಾಟಿಂಗ ಮಹಾಋಷಿಯನ್ನು ಬೇಡುವುದು, ನಾಗರಾಜನ ಅನುಮತಿಯಿಲ್ಲದೆ ಏಳು ಹಣ್ಣುಗಳನ್ನು ಅದರಲ್ಲೂ ಮಾವಿನ ಹಣ್ಣುಗಳನ್ನು ಕಿತ್ತುಕೊಳ್ಳುವುದು, ಆ ಹಣ್ಣುಗಳನ್ನು ತಿಂದು ಏಳು ಜನ ಹೆಣ್ಣು ಮಕ್ಕಳನ್ನು ಪಡೆಯುವುದು. ನಾಗರಾಜ ಕಚ್ಚಲು ಮುಂದಾಗುವುದು. ಭೂಲಕ್ಷ್ಮೀಯು ಬದುಕಬೇಕೆಂಬ ಆಸೆಯಿಂದ ಮೂರು ತಿಂಗಳು ವಾಯಿದೆ ಕೇಳುವುದು, ನವಭೋಜರಾಜನಿಗೆ ಮರುಮದುವೆ ಆಗದಂತೆ ಭಾಷೆ ಕೇಳುವುದು, ಅರಗಿನ ಅರಮನೆಗೆ ಸಮುದ್ರದಲ್ಲಿ ಚಂಡಿನಾಕಾರದಲ್ಲಿ ಹೋಗಿ ಭೂಲಕ್ಷ್ಮೀಯನ್ನು ಕೊನೆಗೂ ಕಚ್ಚುವುದು, ಕಿರಿಯ ಮಗಳಿಗೆ ನಾಗರತ್ನ ಧರಿಸುವುದು ಹೀಗೆ ಒಂದೊಂದೇ ಕಥಾ ಭಾಗವು ಸರಾಗವಾಗಿ ಸಾಗುತ್ತದೆ. ಕಥೆಯು ಬೆಳೆದಂತೆ ಮಂತ್ರಿ ಮಗಳಾದ ಮಂದಲನನ್ನು ರಾಜ ಮರುಮದುವೆಯಾಗುವುದು, ಏಳು ಜನ ಮಕ್ಕಳಿಗೆ ಮದ್ದಿನ ಮರಿಯಪ್ಪ ಮದ್ದು ಹಾಕುವುದು, ಮಲತಾಯಿ ಧೋರಣೆಯಿಂದ ಮಕ್ಕಳನ್ನು ಹಲವಾರು ವಿಧದಲ್ಲಿ ಹಿಂಸಿಸುವುದು, ಸತ್ತು ಹೋದ ತಾಯಿ ಮಕ್ಕಳ ಗೋಳನ್ನು ಕೇಳಿ ಅವರನ್ನು ರಕ್ಷಿಸುವುದು, ಮಕ್ಕಳ ಮೇಲಿನ ಮಮತೆ ವಾತ್ಸಲ್ಯವೂ ತಾಯಿಗೆ ನಿರಂತರವಾಗಿ ಉಳಿದಿರುತ್ತದೆ ಎಂಬುದನ್ನು ಸೂಚಿಸುತ್ತದೆ.

ಭೂಲಕ್ಷ್ಮೀಯ ಪಾತ್ರ ಬಹುಮುಖ್ಯವಾಗಿ ಈ ಬಾಲನಾಗಮ್ಮನ ಕಥೆಯಲ್ಲಿ ಮೂಡಿದೆ. ತನ್ನ ಮಕ್ಕಳಿಗೆ ಅಪಾಯವಿದೆ ಎಂಬುದನ್ನು ಅರಿತ ತಾಯಿಯು ಸದಾ ರಕ್ಷಿಸಲು ಮುಂದಾಗುತ್ತಾಳೆ. ಭೂ ಲಕ್ಷ್ಮೀಯ ಅಣ್ಣ ಗಲ್ಬರ್ಭ ರಾಜನ ಏಳೂ ಜನ ಗಂಡು

ಮಕ್ಕಳಿಗೆ ತಂಗಿಯ ಏಳು ಜನ ಹೆಣ್ಣು ಮಕ್ಕಳನ್ನು ಮದುವೆ ಮಾಡಿಸಿ ಉಳಿಸುವ ಪ್ರಯತ್ನ ನಡೆಯುತ್ತದೆ.

ಏಳು ಜನ ಗಂಡು ಮಕ್ಕಳು ವನವನ್ನೆಲ್ಲಾ ಸುತ್ತುವಾಗ ಮಾಯಲ ಮರಾಟಿ ಎಂಬ ಮಂತ್ರವಾದಿಯು ಅವರನ್ನೆಲ್ಲಾ ಕಲ್ಲು ಮಾಡಿ ೩ ತಿಂಗಳ ಬಾಣಂತಿಯಾದ ಬಾಲನಾಗಮ್ಮನನ್ನೂ ಇಷ್ಟಪಡುತ್ತಾನೆ. ಭಿಕ್ಷೆಯನ್ನು ಬೇಡುವ ನೆಪದಲ್ಲಿ ಬಾಲನಾಗಮ್ಮ ನನ್ನೂ ನಾಯಿಯಾಗಿ ಮಾಡಿ ಕರೆದುಕೊಂಡು ಹೋಗುವುದು, ಬಿಟ್ಟು ಬಂದ ಬಾಲಕ ಮೂರು ವರ್ಷದವನಾಗಿ ಬೆಳೆದು ತನ್ನ ತಾಯಿಯ ಹುಡುಕಾಟದಲ್ಲಿ ತೊಡಗುವುದು, ಮುದುಕಿಯೊಬ್ಬಳ ಸಹಾಯದಿಂದ ವಿಷಯ ಅರಿತು ತನ್ನ ತಾಯಿಯನ್ನು ಉಳಿಸುವ ಪ್ರಯತ್ನ ನಡೆಯುತ್ತದೆ. ಮಾಯಲ ಮರಾಟಿಯ ಪ್ರಾಣ ಯಾವುದರಲ್ಲಿ ಇದೆಯೆಂಬದನ್ನು ತನ್ನ ತಾಯಿಯಿಂದಲೇ ತಿಳಿದು ಆ ಮಾಯಾವಿಯನ್ನು ಸಂಹರಿಸುವುದು, ತನ್ನ ರಾಜ್ಯಕ್ಕೆ ತಂದೆ, ತಾಯಿ ದೊಡ್ಡಪ್ಪರೊಂದಿಗೆ ಹಿಂತಿರುಗಿ ಚತುರನಾದ ಬಾಲನಾಗಮ್ಮನ ಮಗನಿಗೆ ಪಟ್ಟಕಟ್ಟುವುದು, ರಾಜ್ಯಭಾರ ಮಾಡುತ್ತ ಸಂತೋಷದಿಂದಿರುವುದು–ಹೀಗೆ ಕಥೆಯು ಸಾಗಿ ಮುಕ್ತಾಯವಾಗುತ್ತದೆ. ಸುಮಾರು ೫೦೦ ಪದ್ಯಗಳಲ್ಲಿ ಈ ಕಾವ್ಯ ಸಾಗುತ್ತದೆ. ಭಾಷೆಯೂ ಕೂಡ ಅತ್ಯಂತ ಸರಳವಾಗಿದೆ.

ಈ ಬಾಲನಾಗಮ್ಮನ ಹಾಡಿನಲ್ಲಿ ಅನೇಕ ಜನಪದ ಅಂಶಗಳು ಕಂಡು ಬರುತ್ತದೆ. ಆದರೆ ಎಲ್ಲೂ ಉಪಕಥೆಗಳು ಕಂಡು ಬರುವುದಿಲ್ಲ. ಈ ಬಾಲನಾಗಮ್ಮ ಕಾವ್ಯದಲ್ಲಿ ನೇರ ಕಥಾನಾತ್ಮಕತೆಯೇ ಪ್ರಧಾನವಾಗಿದೆ. ಈ ಕೃತಿಯು ಸರಳ, ನೇರ, ರಮ್ಯತೆಯಿಂದ ಕೂಡಿದೆ. ಹಾಡಿನ ಸಾಲುಗಳಲ್ಲಿ ಮುಖ್ಯವಾಗಿ ಪ್ಲುತಾಕ್ಷರವನ್ನು ಕಾಣುತ್ತೇವೆ.

ಈ ಕೃತಿಗೆ ಡಾ. ಬಿ.ಎಸ್. ತಲ್ವಾಡಿಯವರ 'ದೊಂಬಿದಾಸರ ಬಾಲನಾಗಮ್ಮ' ಶೀರ್ಷಿಕೆಯಡಿ ಬರೆದಿರುವ ಬರಹವು ಇಡೀ ಕಥೆಯ ಹಂದರವನ್ನು ಮತ್ತು ಆಶಯವನ್ನು ಸೂಚಿಸುತ್ತದೆ. ಇದೇ ಈ ಕಾವ್ಯಕ್ಕೆ ಪ್ರಸ್ತಾವನೆಯಂತಿದ್ದು, ಸಂಪಾದಕರು ಪ್ರತ್ಯೇಕವಾಗಿ ಪ್ರಸ್ತಾವನೆಯನ್ನೇನೂ ಬರೆದಿಲ್ಲ.

ಒಟ್ಟಾರೆ ಈ ಪುಟ್ಟ ಕೃತಿಯಲ್ಲಿ ದಕ್ಷಿಣ ಕರ್ನಾಟಕದ ಜನಪ್ರಿಯ ಜನಪದ ಕಥೆಯೊಂದು ಕಾವ್ಯರೂಪದಲ್ಲಿ ಉಳಿದುಕೊಂಡು ಬಂದಿದೆ. ಈ ಕೃತಿಯಿಂದಾಗಿ ಕಥೆಯ ತೌಲನಿಕ ಅಧ್ಯಯನಕ್ಕೆ ಮತ್ತೊಂದು ಪಾಠ ದೊರೆತಂತಾಗಿದೆ.

ಆರ್. ಶಾಂತ ಕಂಪಾರಹಳ್ಳಿ

೫೫. ಅಂಚೆ ಜಾನಪದ

ಅಂಚೆ ಜಾನಪದ, ಸಂ. ಶ್ರೀ ಎಂ.ಆರ್.ಪ್ರಭಾಕರ, ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦೦೦೨, ೨೦೧೨, ಪುಟ–೮+೬೯, ಬೆಲೆ ರೂ. ೧೫೦/-

ಜಗತ್ತಿನ ವಿವಿಧ ರಾಷ್ಟ್ರಗಳು ಕಳೆದ ೧೭೦ ವರ್ಷಗಳಲ್ಲಿ ತಮ್ಮ ಅಂಚೆ ಇಲಾಖೆಗಳ ಮೂಲಕ ಬಿಡುಗಡೆ ಮಾಡಿರುವ ಅಂಚೆ ಚೀಟಿಗಳಲ್ಲಿ ಜಗತ್ತಿನ ಜಾನಪದವಿರುವ ಅಂಚೆ ಚೀಟಿಗಳನ್ನು ಆಯ್ದು ಪ್ರಕಟಿಸಿರುವ ಶ್ರೀ ಎಂ.ಆರ್. ಪ್ರಭಾಕರ ಅವರ 'ಅಂಚೆ ಜಾನಪದ' ಸಚಿತ್ರ ಕೃತಿಯು ಭಿನ್ನ ಬಗೆಯ ಕುತೂಹಲಕರ ಪ್ರಯತ್ನವಾಗಿದೆ.

ಇಲ್ಲಿನ ೬೫ ಶೀರ್ಷಿಕೆಗಳ ಅಡಿಯಲ್ಲಿ, ಪ್ರಾಥಮಿಕ ಅಥವಾ ಪರಿಚಯಾತ್ಮಕ ಟಿಪ್ಪಣಿಗಳ ಸಹಿತ ಚಿತ್ರಿಸಲ್ಪಟ್ಟಿರುವ ಜಗತ್ತಿನ ವಿವಿಧ ಜನಾಂಗಗಳ ಜಾನಪದ ಜಗತ್ತು ಅಧ್ಯಯನಾತ್ಮಕ ಆಕರ ಕೋಶವಾಗಿ ಪರಿಣಮಿಸಲ್ಪಟ್ಟಿರುವುದು ಗ್ರಂಥದ ವಿಶೇಷವಾಗಿದೆ.

ಎಲ್ಲಕ್ಕೂ ಮೊದಲು ಜಗತ್ತಿನ ಪುರಾಣ ಮತ್ತು ಜನಪದೀಯ ಕಥನಗಳಲ್ಲಿದ್ದ ಅಂಚೆಯ ಕಲ್ಪನೆಯನ್ನು ಸಂಪರ್ಕ ಸಾಧನವಾಗಿ ರೂಪಿಸಿ, ಸಾರ್ವಜನಿಕ ಸೇವೆಯಾಗಿ ಕಲ್ಪಿಸಿದ ಸಾಮ್ರಾಜ್ಯಶಾಹಿ ರಾಷ್ಟ್ರವಾದ ಇಂಗ್ಲೆಂಡ್ ತನ್ನ ತಾಯಿ ನೆಲದಲ್ಲಿ ಪ್ರಥಮ ಬಾರಿಗೆ ೧೮೪೦ರಲ್ಲಿ ಮೊದಲ ಅಂಚೆಚೀಟಿಯನ್ನು ಹೊರತಂದಿತು. ತನ್ನ ವಸಾಹತು ರಾಷ್ಟ್ರ ಭಾರತದಲ್ಲಿ ೧೮೫೨ರಲ್ಲಿ ಪ್ರಥಮ ಅಂಚೆಚೀಟಿಯನ್ನು ಹೊರತರುತ್ತದೆ. ೧೭೦ ವರ್ಷಗಳ ಇತಿಹಾಸ ಹೊಂದಿರುವ ಭಾರತದ ಅಂಚೆ ಸೇವೆಯ ಇತಿಹಾಸದೊಂದಿಗೆ ಜಗತ್ತಿನ ಅಂಚೆಚೀಟಿಗಳ ಪ್ರಕಟಣೆಯ ಇತಿಹಾಸವೂ ತಳುಕು ಹಾಕಿಕೊಂಡಿರುವುದು ಸೇರಿದಂತೆ, ಬ್ರಿಟಿಷ್ ಪ್ರಭುತ್ವವು ತನ್ನ ಆಡಳಿತವನ್ನು ವ್ಯವಸ್ಥಿತಗೊಳಿಸಿ ಬಿಗಿಗೊಳಿಸಲು ಬಳಸಿದ ಅಂಚೆ ಸೇವೆಯ ಉಪಉತ್ಪನ್ನದಂತೆ ಕಾಣುತ್ತದೆ. ಅಂಚೆಚೀಟಿಗಳು ನಿರುದ್ದೇಶ ವೆಂಬಂತೆ ಬಿಡುಗಡೆಗೊಳ್ಳುತ್ತ ಸಾಗಿದ್ದರೂ ಕಳೆದೆರಡು ಶತಮಾನಗಳುದ್ದಕ್ಕೂ ಭಾರತವನ್ನೂ ಒಳಗೊಂಡು ಜಗತ್ತಿನ ಮಾನವೇತಿಹಾಸ, ಸಂಸ್ಕೃತಿ, ಜಾನಪದ, ರಾಜಕೀಯ ಚರಿತ್ರೆಯನ್ನು ಒಳಗೊಂಡು ಖಚಿತಗೊಳಿಸುತ್ತ ಸಾಗಿದ್ದು ಕುತೂಹಲಕರ ವಿದ್ಯಮಾನವಾಗಿದೆ.

ಅದರಲ್ಲೂ ಮುಖ್ಯವಾಗಿ ವಸಾಹತು ಆಕ್ರಮಣ ಹಾಗೂ ಆಧುನಿಕ ನಾಗರಿಕತೆಯ ನಿರ್ಣಾಯಕ ಪರಿಣಾಮಗಳಿಂದಾಗಿ ಕ್ಷಣ ಕ್ಷಣವೂ ಸಾವಿನ ಭೀತಿಗೊಳಗಾಗಿ ತತ್ತರಿಸುತ್ತಿರುವ ಜನಪದೀಯ ಜೀವನವನ್ನು ಖಚಿತವಾಗಿ ಸೆರೆಹಿಡಿದು ದಾಖಲಿಸಲು ಪ್ರಯತ್ನಿಸಿರುವುದು ಜಗತ್ತಿನ ಪ್ರತಿಯೊಂದು ದೇಶವೂ ತೀವ್ರವಾಗಿ ಮತ್ತು ಸಮಾನವಾಗಿ ಆಲೋಚಿಸಿರುವುದು ಗಮನಾರ್ಹವಾಗಿದೆ.

ಮಹತ್ವಾಕಾಂಕ್ಷೆಯೇನೂ ಇಲ್ಲದಂತಿರುವ ಈ ಅಂಚೆಚೀಟಿಗಳ ಪ್ರಕಟಣಾ ಪ್ರಕ್ರಿಯೆ ತನಗೆ ಗೊತ್ತಿರದೇ ತಾನೊಂದು ಸಾಂಸ್ಕೃತಿಕ/ಮಾನವಶಾಸ್ತ್ರೀಯ ಅಥವಾ ಜಾನಪದ ಇತಿಹಾಸವೊಂದನ್ನು ರಚಿಸಿಬಿಟ್ಟಿರುವ ಸಾಂಸ್ಕೃತಿಕ ವಿದ್ಯಮಾನವೊಂದನ್ನು ಸಂಘಟಿಸುವ ಕಾರ್ಯವೊಂದನ್ನು ಈ ಪುಸ್ತಕದ ಲೇಖಕ ಶ್ರೀಎಂ.ಆರ್. ಪ್ರಭಾಕರ ಮಾಡಿಬಿಟ್ಟಿದ್ದಾರೆ.

ಈ ಕೃತಿಯಲ್ಲಿ ಸಂಗ್ರಹಿಸಲ್ಪಟ್ಟಿರುವ ಅಂಚೆಚೀಟಿಗಳು ಸೂಚಿಸುತ್ತಿರುವಂತೆ ಜಗತ್ತು ಜನಪದೀಯ ಮೂಲರೂಪಗಳಿಂದ ಆಧುನಿಕ ನಾಗರಿಕತೆಯತ್ತ ಚಲಿಸುತ್ತಾ

ಸಾಗಿರುವುದೂ ಕೂಡ ಇಲ್ಲಿ ಹೋಲಿಕೆ, ವ್ಯತ್ಯಾಸಗಳ ವೈದೃಶ್ಯದಲ್ಲಿ ಕಾಣಸಿಗುವ ಅಂಶವಾಗಿದೆ. ಆದ್ದರಿಂದ ಜಗತ್ತು ತನ್ನ ೧೭೦ ವರ್ಷಗಳ ಅಂಚೆಚೀಟಿಗಳ ಪ್ರಕಟಣೆಯ ದೀರ್ಘಾವಧಿ ಇತಿಹಾಸದಲ್ಲಿ ತನ್ನ ಸಾಂಸ್ಕೃತಿಕ ಸ್ಮೃತಿ ಮತ್ತು ನಾಗರಿಕತೆಯ ಆಕರ್ಷಣೆಗಳ ನಡುವಿನ ಒತ್ತಡದಲ್ಲಿ ಇಕ್ಕಡೆಗೂ ತುಯ್ಯುತ್ತ ಸಂಗ್ರಹಿಸಿದ ನೆನಪಿನ ಮಾಲಿಕೆಯಂತೆ ಓದುಗರಿಗೆ ಅಲ್ಲಲ್ಲಿ ನೋಡುಗರಿಗೆ ಅನ್ನಿಸುತ್ತದೆ

ಈ ಕೃತಿಯಲ್ಲಿ ಸಂಗ್ರಹಿಸಲ್ಪಟ್ಟಿರುವ ಅಂಚೆಚೀಟಿಗಳಲ್ಲಿರುವ ಚಿತ್ರಗಳ ಮೂಲಕವೇ ಜಗತ್ತಿನ ಜನಪದೀಯ ಸಾಂಸ್ಕೃತಿಕ ಇತಿಹಾಸ ಎಲ್ಲವೂ ಸಮಗ್ರವಾಗಿ ಲಭಿಸಿದೆ ಅನ್ನುವಂತಿಲ್ಲ. ಏಕೆಂದರೆ, ಈ ಮೊದಲೇ ಹೇಳಿದಂತೆ ಬ್ರಿಟಿಷ್ ಪ್ರಭುತ್ವವು ತನ್ನ ಆಡಳಿತವನ್ನು ಆವೃತಗೊಳಿಸಿ ವಿಸ್ತರಿಸುವ, ವ್ಯವಸ್ಥಿತಗೊಳಿಸಿ ಬಿಗಿಗೊಳಿಸುವ ಭಾಗವಾಗಿ ಅಂಚೆ ಸೇವೆಯನ್ನು ಕಲ್ಪಿಸಲಾಗಿತ್ತೆನ್ನುವ ಅಂಶವನ್ನು ಮರೆಯದಂತೆ ಆಲೋಚಿಸಿದರೆ ಮಾತ್ರ ಈ ಅಂಚೆಚೀಟಿಗಳ ಕ್ರೋಢೀಕರಣದಾಚೆಗೆ ನಮ್ಮ ವಿಶ್ಲೇಷಣೆ ಬೌದ್ಧಿಕ ಆಲೋಚನೆಯಾಗಿ ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದೆ ಹೋದಲ್ಲಿ ಅಂಚೆ ಚೀಟಿಗಳ ಹವ್ಯಾಸಿ ಸಂಗ್ರಹಕಾರನ ಬಾಲ(ಬಾಲಿಶ) ಹವ್ಯಾಸದಂತೆ ಸ್ಥಗಿತಗೊಳ್ಳುವ ಅಪಾಯವಾಗಿ ಪರಿಣಮಿಸಿಬಿಡುತ್ತದೆ.

ತನ್ನ ಎಲ್ಲಾ ವಸಾಹತುಶಾಹಿಯಂತೆ ಅಂಚೆಚೀಟಿಗಳ ಪ್ರಕಟಣೆಯಲ್ಲೂ ತನ್ನ ಹಿತಾಸಕ್ತಿಗಳ ಕುರಿತು ಎಚ್ಚರದಿಂದಿದ್ದ ಬ್ರಿಟಿಷ್ ಸಾಮ್ರಾಜ್ಯಶಾಹಿ ಪ್ರಭುತ್ವದಂತೆ ಜಗತ್ತಿನ ಇನ್ನಿತರ ರಾಷ್ಟ್ರಪ್ರಭುತ್ವಗಳೂ ತಮ್ಮ ಕಣ್ಣಳತೆಯಲ್ಲೇ ಹಿತಾಸಕ್ತಿಗಳ ರಕ್ಷಣೆಯ ಎಚ್ಚರದಲ್ಲೋ ನಡೆದಿರಬಹುದಾದ ಈ 'ಪ್ರಕಟಣೆ'ಯ ವಿದ್ಯಮಾನವನ್ನು ಈ ಕಾರಣದಿಂದಾಗಿಯೇ ರಾಜಕೀಯ ಮುಕ್ತ ಶುದ್ಧ ಸಾಂಸ್ಕೃತಿಕ ದಾಖಲೆಯೆಂದು ಹೇಳಲಾಗುವುದಿಲ್ಲ. ಇಷ್ಟೆಲ್ಲವನ್ನು ಹೇಳಿದರೂ ಜಗತ್ತಿನ ಮಾನವೇತಿಹಾಸದ ದಾಖಲೆಯೆಂದರೆ ಅದು ಅಧಿಕಾರ ಕೇಂದ್ರಗಳು ಮತ್ತು ಸಮುದಾಯಗಳ ನಡುವೆ ಸ್ವಾತಂತ್ರ್ಯಕ್ಕಾಗಿ ನಡೆದ ಸಂಘರ್ಷವೆಂದು ತಿಳಿಯಬಹು ದಾದಲ್ಲಿ ಆ ಎಲ್ಲ ನೋವಿನ, ವಿಷಾದದ, ಗೆಲುವಿನ, ಸಂತಸದ ಚಿತ್ರಗಳು ಕೆಲವಾದರೂ ಇಲ್ಲಿ ದಾಖಲಾಗಿವೆ ಎಂದು ಹೇಳಬಹುದಾಗಿದೆ.

ಕೊನೆಯದಾಗಿ, ನಾನಿಲ್ಲಿ ಎತ್ತಿರುವ ತಕರಾರಿಗೆ ಸಮರ್ಥನೆಯನ್ನು ಅಪೇಕ್ಷಿಸಿದ್ದಲ್ಲಿ ಇಂತಹ ಪ್ರಶ್ನೆಗಳನ್ನು ಕೇಳಿಕೊಳ್ಳಬಹುದೆಂದು ಕಾಣುತ್ತದೆ. ೧. ಇಲ್ಲಿ ಸಂಗ್ರಹಿಸಲ್ಪಟ್ಟಿರುವ ಅಂಚೆಚೀಟಿಗಳಲ್ಲಿ ಆಸ್ಟ್ರೇಲಿಯಾದ ಮೂಲನಿವಾಸಿಗಳ ಸಾಂಸ್ಕೃತಿಕ ಚಿತ್ರಿಕೆಗಳಾಗಲೀ ಅಥವಾ ೨. ಅಮೆರಿಕಾದ ಮೂಲನಿವಾಸಿ ರೆಡ್ ಇಂಡಿಯನ್ನರ ಸಂಸ್ಕೃತಿಗಳ ಮೇಲಾದ ಧಾಳಿಯ ವಿವರಗಳಾಗಲಿ ಅಥವಾ ೩. ಆಫ್ರಿಕಾದ ಮೂಲನಿವಾಸಿಗಳನ್ನು ಗುಲಾಮರಾಗಿ ಪರಿವರ್ತಿಸಿದ ಅಮಾನವೀಯ ಚರಿತ್ರೆಯ ವಿವರಗಳಾಗಲಿ ಇಲ್ಲಿಲ್ಲವಲ್ಲ ಏಕೆ. ಈ ಸಂಗ್ರಹಕರಿಗೆ ಈ ಅಂಚೆಚೀಟಿಗಳು ಸಿಗಲಿಲ್ಲವೂ ಅಥವಾ ಆಯಾ ಪ್ರಭುತ್ವಗಳು ಅಂತಹ ಅಂಚೆಚೀಟಿಗಳನ್ನು ಹೊರತರಲಿಲ್ಲವೊ? ಹೀಗೆ ಈ ಕೃತಿ ತನ್ನ ವಿಶಿಷ್ಟತೆಯನ್ನು

ಪ್ರಕಟಿಸುತ್ತಲೇ ಹೊಸ ಶೋಧನೆಗಳತ್ತಲೂ ಪ್ರೇರಣೆ ನೀಡಬಲ್ಲದಾಗಿದೆ ಎಂದು ಹೇಳಬಹುದಾಗಿದೆ. ಇವೆಲ್ಲಾ ಇಲ್ಲವುಗಳ ನಡುವೆ ಎಂ.ಆರ್. ಪ್ರಭಾಕರ ಅವರು ಜಗತ್ತಿನ ಪಾರಂಪರಿಕ ಸಾಂಸ್ಕೃತಿಕ ಮಹತ್ತನ್ನು ಅಂಚೆಚೀಟಿಗಳ ಸಂಗ್ರಹಣೆಯಿಂದ ಈ ಕೃತಿಯಲ್ಲಿ ಅನಾವರಣ ಮಾಡಿದ್ದಾರೆ.

ಕೆ.ಪಿ. ನಟರಾಜು

೫೬. ಕುಂಚಿಟಿಗರು

ಕುಂಚಿಟಿಗರು, ಸಂ. ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಕುಂಚಿಟಿಗರ ಮಹಾ ಸಮ್ಮೇಳನ ಸಮಿತಿ–೨೦೧೨ ೪೬, ಕೆ.ಎಸ್.ವಿ.ನಿಲಯ, ೧೧ನೇ ಮುಖ್ಯರಸ್ತೆ, ಮಿಲ್ಲರ್ ರಸ್ತೆ, ವಸಂತನಗರ, ಬೆಂಗಳೂರು–೫೨ ಪುಟ–೩೦+೬೦+೫೨೨+೪೮, ಬೆಲೆ ರೂ. ೧೦೦೦/-

೧೯೭೯ರಿಂದ ಶುರುವಾದ ಜನಾಂಗಿಕ ಸಾಂಸ್ಕೃತಿಕ ಅಧ್ಯಯನಗಳು ಮೂಲೆಗುಂಪಾಗಿದ್ದ ಸಂಸ್ಕೃತಿ, ಸಮುದಾಯಗಳನ್ನು ಪ್ರಧಾನಧಾರೆಗೆ ತರುವಲ್ಲಿ ಆರಂಭದ ಹಾದಿಯನ್ನು ತೆರೆದವು. ಜನಾಂಗೀಯ ಅಧ್ಯಯನಗಳು ಇತ್ತೀಚೆಗೆ ಒಂದು ತಾತ್ವಿಕ ನೆಲೆಗೆ ತಲುಪುತ್ತಿವೆ. ಕೆಲವೊಮ್ಮೆ ಇಂಥ ಅಧ್ಯಯನಗಳು ಸಂಕುಚಿತ ಸ್ಥಿತಿಗೂ ಎಳೆದೊಯ್ದಿರುವ ಉದಾಹರಣೆಗಳೂ ಸಾಕಷ್ಟಿವೆ. ತಮ್ಮ ಮೂಲ ಪರಂಪರೆ ಹಿನ್ನೆಲೆಗಳನ್ನು ಹುಡುಕಿಕೊಳ್ಳುವುದು 'ರಾಜಕೀಯ ತಂತ್ರಗಾರಿಕೆ'. ಬಹುಪಾಲು ಅಧ್ಯಯನಗಳು ಮತ್ತು ಸಾಹಿತ್ಯದ ಶೋಧನೆಗಳ ಹಿಂದೆ ಕೆಲಸ ಮಾಡುವುದು ಈ ರಾಜಕಾರಣವೇ. ಆ ಮೂಲಕ ತಾವು, ತಮ್ಮ ಸಮುದಾಯ ಅಧಿಕಾರ ಕೇಂದ್ರಕ್ಕೆ ಹವಣಿಸುವುದು ಈ ಹೊತ್ತಿನ ಪ್ರಧಾನ ಮೌಲ್ಯವಾಗಿದೆ. ಇದು ತಪ್ಪಲ್ಲ. ಕಾಲ ಮಿತಿ ಈ ರೀತಿಯಲ್ಲಾದರೂ ಪ್ರತಿ ಜಾತಿಗಳು ತಾತ್ವಿಕವಾಗಿ ತಮ್ಮ ಗಟ್ಟಿತನವನ್ನು, ಇರುವಿಕೆಯನ್ನು ಅಧಿಕಾರ ಕೇಂದ್ರದೆದುರು ಮಂಡಿಸಬಹುದು. ಇಲ್ಲಿಯವರೆಗೆ ಅಧಿಕಾರದಿಂದ ವಂಚಿತವಾದ ಎಷ್ಟೋ ಸಮುದಾಯಗಳ ಇಂಥ ಅಧ್ಯಯನಗಳ ಮೂಲಕ ಒಂದಷ್ಟು ಆಸೆಗುಟುಕನ್ನು ಇಟ್ಟುಕೊಳ್ಳಬಹುದು.

ಈ ಕೃತಿ 'ಕುಂಚಿಟಿಗರ ಮಹಾಸಮ್ಮೇಳನ ೨೦೧೨' ನಡೆದ ನೆನಪಿನಲ್ಲಿ ಬಿಡುಗಡೆಗೊಂಡಿರುವ ಸ್ಮರಣ ಸಂಚಿಕೆ. ಸ್ಮರಣ ಸಂಚಿಕೆಗಳು ಆ ಹೊತ್ತಿನ ತುರ್ತಿನ ಕಾರಣಕ್ಕೋ ಅಥವಾ ಅನಿವಾರ್ಯಕ್ಕೋ ಕೆಲವೊಮ್ಮೆ ಹಠಮಾರಿತನದಿಂದಲೇ ರೂಪುಗೊಳ್ಳುತ್ತವೆ. ಹೀಗಾಗಿ ಸ್ಮರಣ ಸಂಚಿಕೆಗಳನ್ನು ಗಂಭೀರವಾಗಿ ಪರಿಗಣಿಸುವ ಸಾಧ್ಯತೆ ಕಡಿಮೆ. ಪ್ರಕಟಗೊಂಡ ಒಂದು ವರ್ಷದ ತನಕ ಜೀವಂತವಾಗಿರುತ್ತವೆ. ನಂತರ ಹೇಳ ಹೆಸರಿಲ್ಲದಂತಾಗುತ್ತವೆ.

ಈ ಕೃತಿ ಈ ಮೇಲೆ ಹೇಳಿದಂತಿಲ್ಲವೆಂಬುದೇ ತೃಪ್ತಿಯ ವಿಚಾರ. ಆದರೆ ಇದಕ್ಕೆ 'ಸ್ಮರಣ ಸಂಚಿಕೆ' ಎಂದು ಸಂಪಾದಕರೇ ಕರೆದಿರುವುದರ ಔಚಿತ್ಯ ತಿಳಿಯುವುದಿಲ್ಲ. ಯಾಕೆಂದರೆ ಈ ಕೃತಿ ತನ್ನೊಡಲಿನಲ್ಲಿ ಆಕರ ಕೃತಿಯಾಗುವ ಎಲ್ಲ ಸಾಧ್ಯತೆಗಳನ್ನು ಒಳಗೊಂಡಿದೆ. ಈ ಹಿಂದೆ ಇದೇ ಸಮುದಾಯದ 'ಹೇಮಾವತಿ' ಎಂಬ ಸ್ಮರಣ ಸಂಚಿಕೆ ತುಮಕೂರಿನಲ್ಲಿ ಪ್ರಕಟಗೊಂಡಿತು. ಅದರ ವಿಸ್ತಾರ ರೂಪಿಯಾಗಿ ಆಕರ ಕೃತಿಯಾಗಿ ಕಟ್ಟಿಕೊಂಡಿದೆ.

ಈ ಕೃತಿಯಲ್ಲಿ ಒಟ್ಟು ೧೪೯ ಲೇಖನಗಳಿವೆ(ಕವಿತೆಗಳನ್ನು ಸೇರಿ). ೬೭೦ ಪುಟಗಳಲ್ಲಿ ಸಂಕಲಿತಗೊಂಡು ಬಾಹ್ಯ ಮತ್ತು ಅಂತರ್ಯದಲ್ಲಿ ಶ್ರೀಮಂತ ಕೃತಿಯಾಗಿ ಹೊಮ್ಮಿದೆ. ಗಂಭೀರ ಅಧ್ಯಯನಕ್ಕೆ ಒಳಪಟ್ಟಂತೆ ರಚಿತವಾದ ಲೇಖನಗಳು ಇದರಲ್ಲಿ ಅಡಕಗೊಂಡಿವೆ. ಈ ಬೃಹತ್ ಕೃತಿಯನ್ನು ಒಳಸ್ವರೂಪವನ್ನಿಟ್ಟುಕೊಂಡು ಈ ರೀತಿ ನೋಡಬಹುದೆನಿಸುತ್ತದೆ.

೧. ಜನಾಂಗದ ಸಾಂಸ್ಕೃತಿಕ ಚರಿತೆ
೨. ಧಾರ್ಮಿಕ/ಆಧ್ಯಾತ್ಮಿಕ ಪರಂಪರೆ
೩. ಜನಾಂಗದ ಸಾಧನೆ
೪. ಜನಾಂಗದ ಸಾಧಕರ ವಿವರ
೫. ಜನಾಂಗದ ವಾಸ್ತವ ಸ್ಥಿತಿಗತಿ
೬. ರಾಜಕೀಯ ಆಯಾಮ
೭. ಜಾನಪದ ಆಚರಣೆ, ಸಮುದಾಯದ ನಂಬುಗೆ, ಸಾಂಸ್ಕೃತಿಕ ನಾಯಕರ ವಿವರ ಇತ್ಯಾದಿ ಆಯಾಮಗಳಲ್ಲಿ ಕೃತಿ ಅನಾವರಣಗೊಂಡಿದೆ. ಈ ಕ್ರಮ ಸ್ಥೂಲವಾದುದಾದರೂ ಜನಾಂಗದ ಇಡೀ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಡುತ್ತದೆ.

ಕುಂಚಿಟಿಗರು ಇಡೀ ಒಕ್ಕಲಿಗ ಸಮುದಾಯದಲ್ಲಿಯೇ ಅವಗಣನೆಗೆ ಒಳಗಾದ ಸಮುದಾಯ. ಜಾತಿಯಲ್ಲಿನ ಒಳವೈರತ್ವದಲ್ಲಿ ಕೊರಗಿ ಕೊರಟಗೆರೆ, ಶಿರಾ, ಮಧುಗಿರಿ, ಪಾವಗಡ, ಚಿತ್ರದುರ್ಗ ಜಿಲ್ಲೆ, ಮಡಕಶಿರಾ ಇತ್ಯಾದಿ ಪ್ರದೇಶಗಳಲ್ಲಿ ಚದುರಿಹೋಗಿರುವ ಈ ಸಮುದಾಯವನ್ನು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹಿಂದಕ್ಕೆ ಸರಿಸಲಾಗಿದೆ. ಪರಿಣಾಮವಾಗಿ ರಾಜಕೀಯವಾಗಿ ಪ್ರಾಬಲ್ಯವನ್ನು ಪಡೆಯಲು ಹಕ್ಕು ಕೇಳುವುದು ಸಹಜವೇ. ಹಾಗಾಗಿ ಗೌಡ ಜಾತಿಯ ಹೆಸರೇಳಿಕೊಂಡು ಅಧಿಕಾರ ಅನುಭವಿಸುತ್ತಿರುವ ಅದೇ ಜಾತಿಯ ಪ್ರಬಲ ಸಮುದಾಯದ ಎದುರು ತನ್ನ ಅಸ್ಮಿತೆಯನ್ನು ತೋರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಈ ಕೃತಿಯಲ್ಲಿ ಸಂಕಲಿತಗೊಂಡಿರುವ ಲೇಖನಗಳು ಜನಾಂಗದ ಮೂಲವನ್ನು ಶೋಧಿಸಿರುವ ಸಂಶೋಧನಾ ಸ್ವರೂಪದವಾಗಿವೆ.

ಡಾ. ಬಿ. ರಾಜಶೇಖರಪ್ಪ, ಎಂ.ಎಚ್. ನಾಗರಾಜು, ಕೆಂಕರೆ ಹನುಮಂತೇಗೌಡ, ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಪ್ರೊ. ಶಿವರಾಮಯ್ಯ, ಡಾ. ಎನ್. ನಂದೀಶ್ವರ,

ಡಾ. ಕೆ. ನಾಗಭೂಷಣ, ಡಾ. ಕೆ.ವಿ. ಮುದ್ದವೀರಪ್ಪ, ಎಂ. ವೀರಕ್ಯಾತಯ್ಯ ಮುಂತಾದ ಪರಿಣಿತ ವಿದ್ವಾಂಸರ ಲೇಖನಗಳು ಸಾಂಸ್ಕೃತಿಕ ಸ್ವರೂಪವನ್ನು ಅನಾವರಣಗೊಳಿಸುತ್ತವೆ. ಡಾ. ದೊಡ್ಡರಂಗೇಗೌಡರ ಕವಿತೆಗಳು ಈ ಕೃತಿಗೆ ಮೆರುಗನ್ನು ನೀಡಿವೆ. ಜನಾಂಗದ ಬೆಳವಣಿಗೆ, ವಿಸ್ತಾರದ ನೆಲೆಯನ್ನು ಹೇಳುತ್ತಾ ಸದ್ಯದ ಸ್ಥಿತಿಯನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಅನಾವರಣಗೊಳಿಸುತ್ತದೆ. ಈ ವಿವರಣೆಗಳ ಮೂಲಕ ಕೇವಲ ಜನಾಂಗದ ಹಿನ್ನೆಲೆಯಲ್ಲಿ ಅಷ್ಟೇ ಈ ಕೃತಿ ಮನ್ನಣೆ ಪಡೆದಿದೆ ಎಂಬರ್ಥವಲ್ಲ. ಒಂದು ಜನಾಂಗೀಯ ಅಧ್ಯಯನಕ್ಕೆ ಇರಬೇಕಾದ ಸೂಕ್ಷ್ಮತೆ, ಸಂಶೋಧನಾ ಕ್ಷಮತೆ ಎಲ್ಲವೂ ಸಮುದಾಯದ ಅಧ್ಯಯನಕ್ಕೆ ದಿಕ್ಸೂಚಿಯಾಗಿ ನಿರ್ಮಾಣಗೊಂಡಿದೆ.

ನನ್ನ ಗಮನಕ್ಕೆ ಬಂದ ಹಾಗೆ ಚಾರಿತ್ರಿಕ ಕಾಲಘಟ್ಟದೊಳಗೆ ಜನಾಂಗದ ಹಿನ್ನೆಲೆ, ವಿವರಗಳನ್ನು ಜಾನಪದದ ಹಿನ್ನೆಲೆಯಲ್ಲಿ ಶೋಧಿಸಲಾಗಿದೆ; ಚರ್ಚಿಸಲಾಗಿದೆ. ಆದರೆ ಚಾರಿತ್ರಿಕ ಪೂರ್ವಕಾಲದ ಜನಾಂಗದ ಮಾನವಶಾಸ್ತ್ರೀಯ ಚರ್ಚೆ ಅಗತ್ಯವಿತ್ತು. ಪಣವ್ಯವಸ್ಥೆ, ಚಾರಿತ್ರಿಕ ಪೂರ್ವಕಾಲದ ಜನಾಂಗದ ಬೆಳವಣಿಗೆ, ಇತರ ಸಣ್ಣಪುಟ್ಟ ಜಾತಿಗಳೊಂದಿಗಿನ ಸಂಬಂಧ, ಪಶುಪಾಲನಾ ವ್ಯವಸ್ಥೆಯಲ್ಲಿನ ಇತರ ಜಾತಿಗಳೊಂದಿಗಿನ ಒಡನಾಟ, ಕುಲದೈವಗಳ ಸಂದರ್ಭದಲ್ಲಿ ಇತರ ಜಾತಿ(ಗೊಲ್ಲ ಇರಬಹುದು, ಕುರುಬ, ಮಾದಿಗ ಇರಬಹುದು ಅಥವಾ ಯಾವುದೇ ಪಶುಪಾಲನಾ ಕುಲ)ಪರಂಪರೆಯೊಂದಿಗಿನ ಸಂಬಂಧಗಳ ವಿಶ್ಲೇಷಣೆ ಅಗತ್ಯವಿತ್ತು. ಯಾಕೆಂದರೆ ಏನೇ ನಾವು ನಮ್ಮದೇ ಪ್ರತ್ಯೇಕ ಜನಾಂಗದಲ್ಲಿಯೇ ಇರುತ್ತೇವೆ ಎಂದುಕೊಂಡರೂ ಭಿನ್ನ ಸಮುದಾಯಗಳ ಜತೆಯೇ ಬದುಕಬೇಕಾಗುತ್ತದೆ.

ಈ ಕೊರತೆಗಳನ್ನು ಸೂಚಿಸುತ್ತಿದ್ದೇನೆ ಎಂದ ಮಾತ್ರಕ್ಕೆ ಕೃತಿ ಅಪೂರ್ಣವಾಗಿದೆ ಎಂದಲ್ಲ. ಈ ಕೃತಿಗೆ ಸಾಕಷ್ಟು ವ್ಯಾಪ್ತಿಯಿದೆ. ಅಳ-ಅರಿವಿದೆ. ಕುಂಚಿಟಿಗ ಪದದ ನಿಷ್ಪತ್ತಿಯಿಂದ ಹಿಡಿದು, ಶಾಸನದಲ್ಲಿ ಜನಾಂಗದ ಉಲ್ಲೇಖ, ಬೆಡಗು, ಕುಲಗೋತ್ರ, ಸ್ಥಳನಾಮ, ರಾಜಕೀಯ ಪರಂಪರೆ, ಅರಸು ಮನೆತನ, ಕುಲದೇವರು, ಕುಲಾಡಳಿತ ವ್ಯವಸ್ಥೆ, ಅನ್ಯಧರ್ಮದ ಪ್ರಭಾವ, ವೀಳ್ಯದ ವೈಶಿಷ್ಟ್ಯ, ಸುತ್ತಮುತ್ತ ಪ್ರಾಂತ್ಯಗಳಲ್ಲಿ ಕುಂಚಿಟಿಗರ ವ್ಯಾಪ್ತಿ ಇಷ್ಟೆಲ್ಲ ಸರಕು ಸಾಮಗ್ರಿಗಳು ಈ ಕೃತಿಯಲ್ಲಿ ಒಡಮೂಡಿವೆ.

ಒಂದಷ್ಟು ಸಮಾಜಶಾಸ್ತ್ರೀಯ ಅಧ್ಯಯನಕ್ಕೂ ಬೇಕಾದ ವಿವರ, ಹಿನ್ನೆಲೆಗಳನ್ನು ಈ ಕೃತಿ ಒದಗಿಸುತ್ತದೆ. ಚರಿತ್ರೆಯನ್ನು ಕಟ್ಟುವ ಮತ್ತು ಹುಡುಕುವ ಹೊಣೆಗಾರಿಕೆಯನ್ನು ಇಲ್ಲಿನ ಸಂಪಾದಕರು/ಮಂಡಳಿ ಸಮರ್ಥವಾಗಿ ನಿರ್ವಹಿಸಿದ್ದಾರೆ. ಒಂದಷ್ಟು ವ್ಯಕ್ತಿಪೂಜೆಗಳನ್ನು, ಪುನರುಕ್ತಿಗಳನ್ನು ಲೇಖಕರು ನಿಯಂತ್ರಿಸಬಹುದಾಗಿತ್ತು. ಅದಾಗ್ಯೂ ಈ ಕೃತಿ ಮೌಲಿಕ ಪರಾಮರ್ಶನ ಕೃತಿಯಾಗಿ ಹೊರಹೊಮ್ಮಿರುವುದು ಎದ್ದು ಕಾಣುತ್ತದೆ.

ರವಿಕುಮಾರ್ ನೀಹ

೫೭. ಮಂಟೇಸ್ವಾಮಿ ಕಾವ್ಯ(ಓದು ಪಠ್ಯ)

ಮಂಟೇಸ್ವಾಮಿ ಕಾವ್ಯ ಓದು ಪಠ್ಯ, ಸಂ. ಡಾ. ವೆಂಕಟೇಶ ಇಂದ್ವಾಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ– ೫೮೩೨೭೬, ೨೦೧೨, ಪು, ३೦+೧३೪, ಬೆಲೆ ರೂ. ೧೨೦/-

ಕನ್ನಡ ವಿಶ್ವವಿದ್ಯಾಲಯ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಪ್ರಕಟಿಸಿರುವ 'ಮಂಟೇಸ್ವಾಮಿ ಕಾವ್ಯ' ಓದುಪಠ್ಯ ಪುಸ್ತಕ ಜನಪದ ಮಹಾಕಾವ್ಯಗಳ ಸಂಗ್ರಹ ಸಂಪಾದನಾ ರೀತಿಗೆ ಹೊಸ ಪರಿಕಲ್ಪನೆಯನ್ನು ತಂದು ಕೊಟ್ಟಿದೆ. ಅಲ್ಲದೆ ಕಾಲಧರ್ಮಕ್ಕೆ ತಕ್ಕಂತೆ ತನ್ನ ರೂಪಧಾರಣ ಮಾಡಿಕೊಳ್ಳುತ್ತ ಹೊಸರೂಪ ಧರಿಸುತ್ತಲೇ ಸಾಗುವ ಅಗತ್ಯಗುಣ ಜಾನಪದಕ್ಕಿದೆ ಎಂಬುದರ ದಿಕ್ಸೂಚಿಯಾಗಿದೆ. ಮೌಖಿಕ ಮಹಾಕಾವ್ಯಗಳ ಓದುಪಠ್ಯ ಈ ಕೃತಿಯಿಂದ ಅನಾವರಣಗೊಂಡಿದೆ ಎಂದರೆ ತಪ್ಪಾಗದು.

ಈವರೆಗೆ ನಡೆದು ಬಂದಿದ್ದ ಪ್ರಾಚೀನ ಕೃತಿಗಳ ಸಂಪಾದನಾ ಕ್ರಮ ಅಥವಾ ಒಬ್ಬ ಹಾಡುಗಾರ ಇಲ್ಲವೇ ಕಲಾ ತಂಡ ಹಾಡಿದ ಜನಪದ ಮಹಾಕಾವ್ಯವನ್ನು ಅಕ್ಷರ ರೂಪಕ್ಕಿಳಿಸಿ ಪ್ರಕಟಿಸುವ ಕ್ರಮಗಳಲ್ಲಿದ್ದ ತೊಡಕುಗಳನ್ನು ಮನವರಿಕೆ ಮಾಡಿಕೊಂಡು, ಶ್ರೀಸಾಮಾನ್ಯರ ವಾಚನಾಭಿರುಚಿಗೆ ಅನುಕೂಲವಾಗುವ ರೀತಿಯಲ್ಲಿ ಸುಲಭ, ಸರಳವಾದ ಮಾದರಿಯೊಂದನ್ನು ರೂಪಿಸಿರುವ ಈ ಕೃತಿಯ ಸಂಪಾದಕರ ಪರಿಶ್ರಮ ಮೆಚ್ಚುವಂಥದು.

ಪುಟಸಂಖ್ಯೆ ಹೆಚ್ಚಿದ್ದರೆ ಮಾತ್ರ ಮಹಾಕಾವ್ಯ ಎನ್ನುವ ಅಕ್ಷರ ಪರಂಪರೆಯ ನಿಯಮ ಮೌಖಿಕ ಮಹಾಕಾವ್ಯಗಳಿಗೆ ಅನ್ವಯಿಸುವುದಿಲ್ಲ. ಬೃಹತ್ ಗಾತ್ರದ ಪಠ್ಯಗಳ ನಿರ್ಮಾಣದಿಂದ ವಾಕ್ ಪರಂಪರೆಯ ಮಹಾಕಾವ್ಯಗಳ ಓದುಗರ ಸಂಖ್ಯೆ ಇಳಿಮುಖವಾಗುತ್ತಿದೆ.

ಇದನ್ನು ಸೂಕ್ಷ್ಮವಾಗಿ ಗ್ರಹಿಸಿರುವ ಈ ಕೃತಿಯ ಸಂಪಾದಕರು ಶಿಷ್ಟ ಮಹಾಕಾವ್ಯಗಳನ್ನು ಓದುಗರಿಗೆ ತಲುಪಿಸಲು, ಅರ್ಥೈಸಲು, ಸಂಗ್ರಹಗಳು, ಸರಳ ಸಂಪಾದನೆಗಳು ಬಂದ ಹಾಗೆ, ಮೌಖಿಕ ಮಹಾಕಾವ್ಯಗಳ 'ಓದುಪಠ್ಯ'ಗಳನ್ನು ಪುನರ್ ರೂಪಿಸುವ ಆರಂಭದ ಹೆಜ್ಜೆಯಾಗಿ, ಈ ಕೃತಿಯನ್ನು ಹೆಚ್ಚು ಓದುಗರಿಗೆ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

ಈ ಎಲ್ಲಾ ಮುಖ್ಯಾಂಶಗಳನ್ನು ಗಮನದಲ್ಲಿರಿಸಿಕೊಂಡು 'ಓದುಪಠ್ಯ'ವನ್ನು ರೂಪಿಸಲು ಮುಂದಾಗಿದ್ದಾರೆ. ಈ ಸಲುವಾಗಿ ಈ ಹಿಂದೆ ಪ್ರಕಟವಾಗಿರುವ ಐದು ಸಂಪಾದನಾ ಪಠ್ಯಗಳನ್ನು ಆಕರವಾಗಿ ಬಳಸಿಕೊಂಡಿರುವ ಸಂಪಾದಕರ ಸಾಹಸ, ಸಾಮಾನ್ಯವೆನಿಸದು. ಆ ಪಠ್ಯಗಳಲ್ಲಿ ಬರುವ ಪುನರಾವರ್ತನೆಗಳನ್ನು ಕೈ ಬಿಟ್ಟು ಸಾಹಿತ್ಯಕವಾಗಿ ಈ ಪಠ್ಯವನ್ನು ರೂಪಿಸಿದ್ದಾರೆ. ಯಾವ ವರ್ಣನೆ ಯಾವ ಭಾಗಕ್ಕೆ

ಸಮಂಜಸವಾಗುತ್ತದೆ ಎಂಬುದನ್ನು ಅರಿತು, ಉಪಕಥೆಗಳು ಎಲ್ಲಿ ಬಂದರೆ ಸೂಕ್ತವಾಗುತ್ತದೆ ಎನ್ನುವುದನ್ನು ಕೂಡ ಹಲವು ರೀತಿಯಲ್ಲಿ ಆಲೋಚನೆ ಮಾಡಿ ಈ ಕೃತಿಯನ್ನು ಸಿದ್ಧಪಡಿಸಿದ್ದಾರೆ.

ಒಬ್ಬ ಕಲಾವಿದ ನಾಲ್ಕಾರು ಮಹಾಕಾವ್ಯಗಳನ್ನು ಹಾಡಬಲ್ಲ. ಇದರಿಂದಾಗಿ ಒಂದು ಮೌಖಿಕ ಮಹಾಕಾವ್ಯದಲ್ಲಿ ಬರುವ ವರ್ಣನೆಯನ್ನು ಪ್ರಸಂಗವನ್ನು ಯಥಾವತ್ತಾಗಿ ಮತ್ತೊಂದು ಮಹಾಕಾವ್ಯ ಹಾಡುವಾಗ ಸೇರಿಸಿಬಿಡುತ್ತಾನೆ. ಉದಾಹರಣೆಗೆ ಮಂಟೇಸ್ವಾಮಿ ಕಾವ್ಯದಲ್ಲಿ ಮುತ್ತತ್ತಿರಾಯನ ಪ್ರಸಂಗವಿದೆ. ಬಿಳಿರಂಗನ ಕತೆಯ ವರ್ಣನೆಗಳನ್ನೆಲ್ಲಾ ಯಥಾವತ್ತಾಗಿ ಮುತ್ತತ್ತಿರಾಯನಿಗೆ ಬಳಸುತ್ತಾನೆ. ಕೆಲವು ವರ್ಣನೆಯ ವಿಷಯದಲ್ಲೂ ಈ ಹಿಂದಿನ ಮಾತನ್ನೇ ಹೇಳಬಹುದು. ಮಂಟೇಸ್ವಾಮಿ ಕತೆಯನ್ನು ಹಾಡುವ ಎಲ್ಲ ಕಲಾವಿದರು ಮಡಿವಾಳ ಮಾಚಯ್ಯನ ಸಾಲಿನಲ್ಲಿ ಮಾಚಯ್ಯನನ್ನು ಸಿರಿಯಾಳನಾಗಿ ಮಾರ್ಪಡಿಸುತ್ತಾರೆ. ಕಾರಣವೆಂದರೆ, ಶ್ರವ್ಯಕಾವ್ಯದಲ್ಲಿ ಈ ಕತೆ ದುಃಖ ಪ್ರಧಾನವಾಗಿರುವುದರಿಂದ, ಹೆಂಗಳೆಯರಿಗೆ ಇಷ್ಟವಾದ್ದರಿಂದ ಎಲ್ಲರೂ ಕಡ್ಡಾಯವಾಗಿ ಇದನ್ನು ಹಾಡುತ್ತಾರೆ. ಆದರೆ 'ಓದುಪಠ್ಯ' ರೂಪಿಸುವಾಗ ಕೂಡ 'ಇದು ಇದ್ದೇ ಇರಬೇಕು' ಎಂಬ ಅವಿವಾರ್ಯತೆ ಕಂಡು ಬರುವುದಿಲ್ಲ. ಆದರೆ ಮೌಖಿಕ ಪಠ್ಯಗಳ ಚರಿತ್ರೆ ರಚಿಸುವ ಸಂದರ್ಭದಲ್ಲಿ ಅನಿವಾರ್ಯವೆನ್ನುವಂತೆ ಅದನ್ನು ಬಳಸಿಕೊಳ್ಳ ಬೇಕಾಗುತ್ತದೆ.

ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಬರುವ ವರ್ಣನೆಗಳು ಅಲ್ಲಲ್ಲಿ ಪುನರಾವರ್ತನೆ ಯಾಗುತ್ತಿರುತ್ತವೆ. ಉದಾಹರಣೆಗೆ ಕಥಾನಾಯಕರ ಬಿರುದುಗಳ ವರ್ಣನೆ, ಜಂಗಮರ ವರ್ಣನೆ, ಪಾಂಚಾಳರ ಸಿರಿವಂತಿಕೆ ವರ್ಣನೆ, ಕಲಿಗಾಲದ ವಿಚಿತ್ರವರ್ಣನೆ, ಗ್ರಾಮದೇವತೆಗಳ ಹೆಸರುಗಳ ವರ್ಣನೆ, ಊರುಗಳ ವರ್ಣನೆ, ಭಂಗಿಸೇವನೆಗೆ ಬಳಸುವ ಪರಿಕರಗಳ ವರ್ಣನೆ, ಆಚರಣೆಗಳ ವರ್ಣನೆ, ಶವಸಂಸ್ಕಾರಗಳ ವರ್ಣನೆಗಳನ್ನು ಓದುಪಠ್ಯಕ್ಕೂ ಅಗತ್ಯವೆನಿಸಿದಲ್ಲಿ ಮಾತ್ರ ಸಂಪಾದಕರು ಬಳಸಿಕೊಂಡಿದ್ದಾರೆ.

ಮಂಟೇಸ್ವಾಮಿ ಕಾವ್ಯದ ಬೇರೆ ಬೇರೆ ಪಠ್ಯಗಳನ್ನು ಓದಿದವರಿಗೆ ಈ ಓದುಪಠ್ಯದ ಮಹತ್ವ ವಿಶೇಷ ನಿಜವಾಗಿ ತಿಳಿಯುತ್ತದೆ. ಈ ಪಠ್ಯದ ಅನುಬಂಧದಲ್ಲಿ ಉಪಯುಕ್ತ ಮಾಹಿತಿಗಳನ್ನು ಸಂಪಾದಕರು ನೀಡಿದ್ದಾರೆ. ೯೫ ವರ್ಷದ ಕಾರಪುರದ ಪುಟ್ಟಮಾದಯ್ಯ ನವರ ಸಂದರ್ಶನ ಅತ್ಯುಪಯುಕ್ತವಾದುದಾಗಿದೆ. ಅರ್ಥಕೋಶ ನೀಡುವಾಗ ಜಗತ್ತು ಸೃಷ್ಟಿಯ ಸಾಲು, ಕಲ್ಯಾಣಪಟ್ಟಣದ ಸಾಲು, ಮುಂತಾಗಿ ವಿಂಗಡಿಸಿಕೊಂಡಿರುವುದು ಔಚಿತ್ಯಪೂರ್ಣವಾಗಿದೆ. ಸಂಪಾದಕರ ಮಾತು 'ಪ್ರಸ್ತಾವನೆ' ಈ ಪಠ್ಯದ ಪ್ಲಸ್ ಪಾಯಿಂಟ್‌ಗಳಾಗಿರುತ್ತವೆ. ಬೃಹತ್‌ಗಾತ್ರದ ಪಠ್ಯವನ್ನು ೧೦೧ ಪುಟಗಳಲ್ಲಿ ತಂದು ಕೊಡುವ ಸಂಪಾದಕರ ಕಾರ್ಯ, ಚತುರತೆ, ಸಂಗ್ರಹಕಲೆ ಶ್ಲಾಘನೀಯವಾದುದು.

ಪ್ರೊ. ಎಂ.ಎಲ್. ನರಸಿಂಹಮೂರ್ತಿ

೫೮. ಭಾಗವತ ಚಿಕ್ಕೇಗೌಡರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು

ಭಾಗವತ ಚಿಕ್ಕೇಗೌಡರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು, ಸಂ. ಡಾ. ಚಕ್ಕೆರೆ ಶಿವಶಂಕರ್, ಸಾಗರ್ ಪ್ರಕಾಶನ, ನಂ.೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ, ೨ನೇ ಹಂತ, ಬೆಂಗಳೂರು–೫೬೦೦೭೨, ೨೦೧೨, ಪುಟ–೩೬೮, ಬೆಲೆ ರೂ. ೧೮೫/-

ನಮ್ಮಲ್ಲಿ ದೃಶ್ಯ ಮಾಧ್ಯಮ ಬಂದ ಮೇಲೆ ಜನಪದ ಕಲೆಗಳು ನಶಿಸುತ್ತಾ ಬಂದಿವೆ. ದೃಶ್ಯ ಮಾಧ್ಯಮಗಳ ಭರಾಟೆಯಲ್ಲಿ ಅನೇಕ ಜನಪದ ಕಲಾವಿದರು ತಮ್ಮ ಕಲೆಗಳನ್ನು ಕಳೆದುಕೊಂಡಿದ್ದಾರೆ. ದೃಶ್ಯಮಾಧ್ಯಮದ ಪ್ರಭಾವದಿಂದಾಗಿ ಜನಪದ ಕಲೆಗಳು ತಮ್ಮ ವರ್ಚಸ್ಸು ಕಳೆದುಕೊಂಡವು. ಜನಪದ ರಂಗಭೂಮಿಯ ಯಕ್ಷಗಾನ, ತಾಳಮದ್ದಲೆ, ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ, ದೊಡ್ಡಾಟ, ಸಣ್ಣಾಟ, ಮೂಡಲಪಾಯ ಬಯಲಾಟ ಮುಂತಾದ ಕಲೆಗಳು ಅಲ್ಲಲ್ಲಿ ಈಗ ಉಸಿರಾಡುತ್ತಿವೆಯಷ್ಟೆ ಕೆಲವಕ್ಕೆ ಪ್ರೋತ್ಸಾಹ ಸಿಕ್ಕಿ ಆಗಾಗ ಆ ಕಲೆಗಳು ಪ್ರದರ್ಶನಕ್ಕೆ ಬರುತ್ತಿವೆ. ದೃಶ್ಯ ಮಾಧ್ಯಮವನ್ನು ಒಂದು ಕಾಲದಲ್ಲಿ ಹಿರಿತೆರೆ ಅಳಿದರೆ, ಇಂದು ಕಿರುತೆರೆ ಆಳುತ್ತಿದೆ. ಇದರಿಂದಾಗಿ ಎಲ್ಲ ಕಲೆಗಳು ಸಾಯುತ್ತಿವೆ.

ಡಾ. ಚಕ್ಕೆರೆ ಶಿವಶಂಕರ್ ಸಂಪಾದಿಸಿರುವ 'ಭಾಗವತ ಚಿಕ್ಕೇಗೌಡರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು' ಎಂಬ ಕೃತಿಯ ಜನಪದ ರಂಗಭೂಮಿ ಕಲೆಗಳಲ್ಲಿ ಬರುವ ಮೂಡಲಪಾಯ ಯಕ್ಷಗಾನ ಪ್ರಸಂಗಗಳ ಮೇಲೆ ಬೆಳಕು ಚೆಲ್ಲಿದೆ. ಈ ಕೃತಿಯಲ್ಲಿ ಚಿಕ್ಕೇಗೌಡರ ಐದು ಪ್ರಸಂಗಗಳ ಸಾಹಿತ್ಯವನ್ನು ಒಳಗೊಂಡಿದೆ.

೧. ಗಯಚರಿತೆ
೨. ಸೇತು ಬಂಧನ
೩. ಕುಶಲವರ ಕಾಳಗ
೪. ಧ್ರುವ ಚರಿತೆ
೫. ವೆಂಕಟೇಶ್ವರ ಮಹಾತ್ಮೆ

ಈ ಐದು ಪ್ರಸಂಗಗಳು ಸಾಹಿತ್ಯಿಕ ದೃಷ್ಟಿಯಿಂದ ಮುಖ್ಯವಾಗಿವೆ. ಈ ಪ್ರಸಂಗಗಳಲ್ಲಿ ಛಂದಸ್ಸುಗಳ ಬಳಕೆಯಾಗಿದೆ. ಏಳೆ, ಚೌಪದಿ, ದ್ವಿಪದಿ, ಷಟ್ಪದಿ, ಸಾಂಗತ್ಯ ಮುಂತಾದವು ಗಳಿಂದ ಪರಿಣಾಮಕಾರಿಯಾಗಿ ಹಾಡುಗಳು ರಚನೆಯಾಗಿವೆ. ಚಿಕ್ಕೇಗೌಡರ ಬಗ್ಗೆ ಡಾ. ಚಕ್ಕೆರೆ ಶಿವಶಂಕರ್ ಹೇಳುವ ಈ ಮಾತುಗಳನ್ನು ತುಂಬು ಮನಸ್ಸಿನಿಂದ ಒಪ್ಪಿಕೊಳ್ಳಬಹುದಾಗಿದೆ.

"ಚಿಕ್ಕೇಗೌಡರು ಯಾವುದೇ ಶಾಸ್ತ್ರ ಮೀಮಾಂಸೆಗಳನ್ನು ಅರಿತವರಲ್ಲ. ಜನ ಸಾಮಾನ್ಯರಿಗಾಗಿ ಯಕ್ಷಗಾನ ಪ್ರಸಂಗಗಳನ್ನು ರಚಿಸಿದವರು. ಅವರ ರಚನೆಯಲ್ಲಿ

ದೌರ್ಬಲ್ಯಗಳಿದ್ದಿರಬಹುದಾದರೂ ಕಾವ್ಯಾತ್ಮಕತೆ ಇಲ್ಲ ಎಂದು ತಳ್ಳಿಹಾಕುವಂತಿಲ್ಲ. ಬಳಸುವ ಶೈಲಿ ಸಂಭಾಷಣೆಯಲ್ಲಿ ಕಾಯ್ದುಕೊಂಡು ಬರುವ, ಬೀಗುವ ಕಥೆಯ ಓಟ, ಪಾತ್ರಗಳ ನಿರೂಪಣೆ, ಸಂಭಾಷಣೆಯ ವೈಖರಿ ಎಲ್ಲವೂ ಅವರ ಪ್ರತಿಭಾಶ್ರೀಗೆ ಸಾಕ್ಷಿಯಾಗಿವೆ. ಸೃಜನಶೀಲತೆಯ ಕುರುಹುಗಳಾಗಿವೆ" ಇನ್ನು ಕೃತಿಯಲ್ಲಿ ಸಂಪಾದಿಸಿರುವ ೫ ಪ್ರಸಂಗಗಳಿಗೆ ಬರುವುದಾದರೆ ಒಂದೊಂದು ಪ್ರಸಂಗವು ಅಚ್ಚುಕಟ್ಟಾದ ನಿರೂಪಣೆಯಿಂದ ಕೂಡಿರುವಂಥವು.

ಗಯ ಚರಿತ್ರೆ/ ಕೃಷ್ಣಾರ್ಜುನರ ಕಾಳಗ ಈ ಯಕ್ಷಗಾನಗಳಲ್ಲಿ ವೀರ ಮತ್ತು ರೌದ್ರ ರಸಗಳು ಮೇಳೈಸಿರುತ್ತವೆ. ಗಯನ ಸಣ್ಣ ತಪ್ಪಿನಿಂದಾಗಿ ಕೆರಳಿದ ಕೃಷ್ಣನು ಅವನನ್ನು ಸಂಹಾರ ಮಾಡಲು ಮುಂದಾಗುತ್ತಾನೆ. ಗಯ ಅರ್ಜುನನ ಮೊರೆಹೋಗುತ್ತಾನೆ. ಕೃಷ್ಣ ಮತ್ತಷ್ಟು ಕೆರಳಲು ಕಾರಣವಾಗುತ್ತದೆ. ಪಾಂಡವರಿಗೆ ಸಹಾಯ ಮಾಡಿದ್ದಕ್ಕೆ ಅವರೇ ಅವನ ವಿರುದ್ಧ ತಿರುಗಿಬಿದ್ದಿದ್ದಕ್ಕೆ ಕೃಷ್ಣ ಅರ್ಜುನರ ನಡುವೆ, ಸುಭದ್ರೆ, ನಾರದರು ಸಂಧಾನ ನಡೆಸಿದರೂ ಸರಿಹೋಗುವುದಿಲ್ಲ. ಘಟೋತ್ಗಜ, ಬಲರಾಮ ಮುಂತಾದವರೆಲ್ಲ ಸೇರಿ ಯುದ್ಧ ಮಾಡಿ ಕೊನೆಗೆ ಅವರೆಲ್ಲರ ಸ್ವ-ಪ್ರತಿಷ್ಠೆಗಳು ಮುರಿದು ಸುಖಾಂತ್ಯಗೊಳ್ಳುತ್ತದೆ. ಇದರಲ್ಲಿ ಪಾತ್ರಗಳ ಮಾತುಕಥೆಗಳು ಆತ್ಮೀಯವಾಗಿ ಬರುತ್ತವೆ. ಹಾಡುಗಳು ಮತ್ತಷ್ಟು ಮೆರುಗು ನೀಡುತ್ತವೆ.

ಇದೇ ರೀತಿ ಸೇತು ಬಂಧನ, ಕುಶಲವರ ಕಾಳಗ, ಧ್ರುವಚರಿತೆ, ವೆಂಕಟೇಶ್ವರ ಮಹಾತ್ಮೆಗಳಲ್ಲಿ ವೀರ ಮತ್ತು ರೌದ್ರ ಪ್ರಸಂಗಗಳು ಮುಖ್ಯವಾಗಿವೆ. ಭಾಗವತ ಹೆಸರೇ ಸೂಚಿಸುವಂತೆ ವೈಷ್ಣವ ಧರ್ಮವನ್ನು/ವಿಷ್ಣುವಿನ ಅವತಾರ/ಅವನ ಮೇರು ವಿಷಯ ಗಳನ್ನು ಪ್ರಚಾರ ಮಾಡುವುದಾಗಿದೆ. ಇಲ್ಲಿ ವಿಷ್ಣು ಅವತಾರ ಎತ್ತಿದಾಗ ನಡೆದ ಘಟನೆಗಳನ್ನು ಇಟ್ಟುಕೊಂಡು ಚಿಕ್ಕೇಗೌಡರು ಅಚ್ಚುಕಟ್ಟಾಗಿ ಪ್ರಸಂಗಗಳನ್ನು ಯಶಸ್ವಿಗೊಳಿಸಿದ್ದಾರೆ. ಅದೇ ರೀತಿ ಅವುಗಳನ್ನು ಉತ್ತಮವಾಗಿ ಸಂಗ್ರಹಿಸಿ, ಸಂಕಲಿಸಿ ಡಾ. ಚಕ್ಕೆರೆ ಶಿವಶಂಕರ್ ರವರು ಕೃತಿಯನ್ನು ನಮ್ಮೆಲ್ಲರ ಮುಂದಿಟ್ಟಿದ್ದಾರೆ. ಇಂತಹ ಅನೇಕ ಯಕ್ಷಗಾನ ಪ್ರಸಂಗಗಳನ್ನು ಸಂಗ್ರಹಿಸುವ ಕಾರ್ಯ ನಮ್ಮೆಲ್ಲರ ಮೇಲಿದೆ. ಇದು ಹೊಸ ತಲೆಮಾರಿಗೆ ಹಳೆ ತಲೆಮಾರಿನವರ ಕೊಡುಗೆಯಾಗಿದೆ.

ದುಗ್ಗೇನಹಳ್ಳಿ ಸಿದ್ದೇಶ್

೫೯. ಹಿರೇಬಳ್ಳಾಪುರ ಸುಬ್ಬರಾಯಪ್ಪನವರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು

ಹಿರೇಬಳ್ಳಾಪುರ ಸುಬ್ಬರಾಯಪ್ಪನವರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು, ಸಂ. ಡಾ. ಚಕ್ಕೆರೆ ಶಿವಶಂಕರ್, ಸಾಗರ್ ಪ್ರಕಾಶನ, ನಂ.೬೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ,

೨ನೇ ಹಂತ, ಬೆಂಗಳೂರು-೫೬೦೦೭೨, ೨೦೧೨, ಪುಟ-೫೬೮,
ಬೆಲೆ ರೂ. ೩೧೦/-

ಕಾಲ ಬದಲಾದಂತೆ ಜನರಲ್ಲಿ ಅಭಿರುಚಿಗಳು ಬದಲಾಗುತ್ತವೆ. ನಮ್ಮಲ್ಲಿ ಹಿಂದೆ ಇದ್ದ ಜನಪದ ರಂಗಭೂಮಿಯ ಕಲೆಗಳು ದೃಶ್ಯ ಮಾಧ್ಯಮಗಳ ಕಡೆ ಮುಖ ಮಾಡಿದವು. ಹಿರಿತೆರೆ ಮತ್ತು ಕಿರುತೆರೆಗಳ ಪ್ರಭಾವದಿಂದಾಗಿ ಜನಪದ ಕಲೆಗಳು ನಶಿಸಲು ಪ್ರಾರಂಭವಾದವು. ಈಗ ಜನಪದ ಕಲೆಗಳು ಅಲ್ಲಲ್ಲಿ ಮಾತ್ರ ಉಸಿರಾಡುತ್ತಿವೆ. ಹಳೆತಲೆಮಾರಿನವರು ಹೋದರೆ ಹೊಸ ತಲೆಮಾರುಗಳಲ್ಲಿ ಜನಪದ ಕಲೆಗಳನ್ನು ಹುಡುಕುವುದು ಕಷ್ಟದ ಕೆಲಸವಾಗಿದೆ.

ಡಾ. ಚಕ್ಕೆರೆ ಶಿವಶಂಕರ್ ಸಂಪಾದಿಸಿರುವ 'ಹಿರೇಬಳ್ಳಾಪುರ ಸುಬ್ಬರಾಯಪ್ಪನವರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು' ಎಂಬ ಕೃತಿಯು ಸಾಹಿತ್ಯಿಕ ದೃಷ್ಟಿಯಿಂದ ಮಹತ್ವದ ಕೃತಿಯಾಗಿದೆ. ಈ ಕೃತಿಯಲ್ಲಿ ಒಟ್ಟು ಐದು ಪ್ರಸಂಗಗಳಿವೆ

೧. ಬಭ್ರುವಾಹನ
೨. ತಾಮ್ರಧ್ವಜನ ಕಾಳಗ
೩. ಸುವರ್ಣದೇವಿ ಪರಿಣಯ
೪. ಸ್ವಾಹಾದೇವಿ ಪರಿಣಯ
೫. ಸುಭದ್ರಾ ಪರಿಣಯ

ಡಾ. ಚಕ್ಕೆರೆ ಶಿವಶಂಕರ್‌ರವರು ಈ ಕೃತಿಯಲ್ಲಿ ಮೂಡಲಪಾಯಕ್ಕೆ ಸಂಬಂಧಿಸಿದಂತೆ ದೀರ್ಘವಾದ ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ಜೊತೆಗೆ ಕವಿ ಕಾವ್ಯ ವಿಚಾರವನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಈ ಯಕ್ಷಗಾನ ಪ್ರಸಂಗಗಳಲ್ಲಿ ವೀರ ಮತ್ತು ರೌದ್ರ ರಸಗಳು ಮುಖ್ಯವಾಗಿವೆ. ಜನಪದ ಕಲಾವಿದರು ಪಾತ್ರದ ಮೂಲಕ ಅವಕ್ಕೆ ಜೀವ ತುಂಬುತ್ತಾರೆ. ಸುಬ್ಬರಾಯಪ್ಪನವರು ರಚಿಸಿರುವ ಈ ಪ್ರಸಂಗಗಳ ವಸ್ತುಗಳು ಹಿಂದಿನ ಕಾವ್ಯಗಳಾಗಿವೆ. ಈ ಪ್ರಸಂಗಗಳಲ್ಲಿ ಛಂಧಸ್ಸುಗಳ ಬಳಕೆಯಾಗಿದೆ. ಏಳೆ, ಚೌಪದಿ, ದ್ವಿಪದಿ, ಷಟ್ಪದಿ, ಸಾಂಗತ್ಯ ಮುಂತಾದವುಗಳಿಂದ ಪರಿಣಾಮಕಾರಿಯಾಗಿ ಹಾಡುಗಳು ರಚನೆಯಾಗಿವೆ.

ಬಭ್ರುವಾಹನ ಕಾಳಗವನ್ನು ವೈಶಾಂಪಾಯನ ಮುನಿಗಳು ಜನಮೇಜಯನಿಗೆ ಹೇಳುವ ಕಥೆಯನ್ನಿಟ್ಟುಕೊಂಡು ಬರೆದಿರುವ ಸುಬ್ಬರಾಯಪ್ಪನವರು ತಮ್ಮ ಸೃಜನಶೀಲತೆ ಯನ್ನು ಉಳಿಸಿಕೊಂಡಿದ್ದಾರೆ. ಸಂಭಾಷಣೆಯ ನಡುವೆ ಬರುವ ಹಾಡುಗಳು ಓದುಗರಿಗೆ ಹೊಸ ಲೋಕವನ್ನು ತೆರೆದಿಡುತ್ತವೆ. ಪಾಂಡವರ ಯಾಗದ ಕುದುರೆಯನ್ನು ಕಟ್ಟಿದ ಬಬ್ರುವಾಹನ ಅವರ ಜೊತೆ ಯುದ್ಧ ಮಾಡಲು ಮುಂದಾಗುತ್ತಾನೆ. ಆದರೆ ಇತ್ತ ಕಡೆ ತನ್ನ ತಾಯಂದಿರು ಅರ್ಜುನ ನಿಮ್ಮ ತಂದೆ ಎಂದಾಗ ಯುದ್ಧ ಬಿಟ್ಟು ಅವನ

ಬಳಿ ಹೋಗಿ ನಿಮ್ಮ ಮಗ ಎಂದು ಕೇಳಿಕೊಂಡಾಗ ಅರ್ಜುನನ ಅಹಂಕಾರದ ಮಾತಿನಿಂದ ಕೆರಳಿ ಯುದ್ಧ ಮಾಡಿ ಪಾಂಡವರನ್ನು ಸೋಲಿಸಿ, ಕೊನೆಯಲ್ಲಿ ಕೃಷ್ಣಾಗಮನದಿಂದ ಕಥೆ ಸುಖಾಂತ್ಯದಲ್ಲಿ ಕೊನೆಗೊಳ್ಳುತ್ತದೆ.

ತಾಮ್ರಧ್ವಜನ ಕಾಳಗವು ಜೈಮಿನಿ ಭಾರತದ ಕಥೆಯ ಹಿನ್ನೆಲೆಯಲ್ಲಿ ರಚನೆಯಾಗಿದೆ. ಯಾಗ ಮಾಡುವಾಗ ಪಾಂಡವರು ಮತ್ತು ತಾಮ್ರಧ್ವಜನು ಧರ್ಮರಾಯನು ಅಶ್ವಮೇಧ ಮುಖಾಮುಖಿಯಾಗುತ್ತಾರೆ. ತಾಮ್ರಧ್ವಜನು ಪಾಂಡವರ ಅಹಂಕಾರವನ್ನು ಯುದ್ಧದಲ್ಲಿ ಮುರಿಯುತ್ತಾನೆ. ನಂತರ ಕೃಷ್ಣನ ಮೇರೆಗೆ ಕುದುರೆಯನ್ನು ತಾಮ್ರಧ್ವಜನು ಬಿಟ್ಟು ಕೊಡುತ್ತಾನೆ. ನಂತರ ಕೃಷ್ಣ, ಮಯೂರ ಧ್ವಜನ ದಾನಧರ್ಮ ಸಜ್ಜನಿಕೆಯನ್ನು ಬ್ರಾಹ್ಮಣ ವೇಷದಲ್ಲಿ ಬಂದು ಪರೀಕ್ಷಿಸಿ, ಅವನ ಕೀರ್ತಿಯನ್ನು ಲೋಕಕ್ಕೆ ತಿಳಿಸುತ್ತಾನೆ.

ಸುವರ್ಣದೇವಿಯ ಪರಿಣಯ ಪ್ರಸಂಗದಲ್ಲಿ ರತ್ನಪುರಿಯ ಅರಸು ವಜ್ರ ಮುಕುಟರಾಯನಿಗೆ ಸೋಮಶೇಖರ, ಚಿತ್ರಶೇಖರ ಎಂಬ ಮಕ್ಕಳು ಚೋರವಿದ್ಯೆಯಲ್ಲಿ ಚಾಣಾಕ್ಷತನವನ್ನು ಮೆರೆದಿರುತ್ತಾರೆ. ಚಿತ್ರಶೇಖರ ರತ್ನವತಿಯನ್ನು, ಸೋಮಶೇಖರ ಸುವರ್ಣದೇವಿಯನ್ನು ಮದುವೆಯಾಗಿರುತ್ತಾರೆ. ಉಗ್ರಬಾಹುಕ ಎಂಬ ರಾಜನು ಸುವರ್ಣದೇವಿಯ ಮೇಲಿನ ವ್ಯಾಮೋಹದಿಂದ ಸೋಮಶೇಖರನನ್ನು ಕೊಲ್ಲಿಸುತ್ತಾನೆ. ಇದನ್ನು ತಿಳಿದ ಚಿತ್ರಶೇಖರ ಪ್ರಾಣವನ್ನು ಪಡೆದು ಅಣ್ಣನಿಗೆ ಕೊಟ್ಟು ಬದುಕಿಸುತ್ತಾನೆ. ಮತ್ತೆ ಎಲ್ಲರೂ ಸುಖವಾಗಿ ಬಾಳುತ್ತಾರೆ.

ಸ್ವಾಹಾದೇವಿಯ ಪರಿಣಯದಲ್ಲಿ ಸ್ವಾಹಾದೇವಿಯು ಅಗ್ನಿಯನ್ನು ಬಯಸಿ ಅವನನ್ನು ಪಡೆಯುತ್ತಾಳೆ. ಧರ್ಮರಾಯನ ಯಾಗದ ಕುದುರೆ ಬಂದಾಗ ಕಾಣಿಕೆ ಕೊಡಲು ನೀಲಧ್ವಜನು ಮುಂದಾದಾಗ ಅವನ ಹೆಂಡತಿ ಜ್ವಾಲೆ ತಡೆದು ಅನೇಕ ಅವಘಡಗಳಿಗೆ ಕಾರಣಳಾಗುತ್ತಾಳೆ. ಕೊನೆಗೆ ಜ್ವಾಲೆ ಅರ್ಜುನನ್ನು ಕೊಲ್ಲುವ ಅಸ್ತ್ರವಾಗಿ ಬಭ್ರುವಾಹನನ ಬತ್ತಳಿಕೆಯಲ್ಲಿ ಸೇರಿಕೊಳ್ಳುತ್ತಾಳೆ.

ಸುಭದ್ರ ಪರಿಣಯದಲ್ಲಿ ನಾರದರು ದ್ರೌಪದಿಯ ಜೊತೆ ಐವರು ಸಂಸಾರ ಮಾಡುವುದು ಸರಿಯಲ್ಲ ಎಂದು ಹೇಳುತ್ತಾನೆ. ಧರ್ಮರಾಯ ಮತ್ತು ದ್ರೌಪದಿ ಜೊತೆಯಲ್ಲಿರುವುದನ್ನು ಕಂಡದ್ದು ಅಪಚಾರವಾಗಿತ್ತೆಂದು ಭಾವಿಸಿ ಅರ್ಜುನ ಭೂಪ್ರದಕ್ಷಿಣೆಗೆ ಹೋಗುತ್ತಾನೆ. ಉಲುಚಿ, ಚಿತ್ರಾಂಗದೆಯನ್ನು ವಿವಾಹವಾಗುತ್ತಾನೆ. ಕೊನೆಗೆ ಕೃಷ್ಣನ ಮಾತಿನಂತೆ ಕಳ್ಳ ಸನ್ಯಾಸಿ ವೇಷದಲ್ಲಿ ಬಂದು ಸುಭದ್ರೆಯನ್ನು ಅಪಹರಿಸಿ ಮದುವೆಯಾಗುತ್ತಾನೆ.

ಒಟ್ಟಿನಲ್ಲಿ ಈ ಐದು ಪ್ರಸಂಗಗಳಲ್ಲಿ ಯುದ್ಧ ಸಾವುಗಳಿಂದ ತುಂಬಿದರೂ ಕೊನೆಯಲ್ಲಿ ಸುಖಾಂತ್ಯವನ್ನು ಕಾಣುತ್ತೇವೆ. ಸುಬ್ಬರಾಯಪ್ಪನವರ ಅಚ್ಚುಕಟ್ಟಾದ ನಿರೂಪಣೆ ಮೆಚ್ಚುವಂತಹುದಾಗಿದೆ. ಇಂತಹ ಬೃಹತ್ ಕೃತಿಯನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಕೊಟ್ಟಿರುವ ಚಕ್ಕೆರೆ ಶಿವಶಂಕರ್‌ರವರು ಅಭಿನಂದನಾರ್ಹರು.

ದುಗ್ಗೇನಹಳ್ಳಿ ಸಿದ್ದೇಶ್

೬೦. ಕನ್ನಡ ನಾಡಿನ ಗಾದೆಗಳ ಸಂಕಲನಗಳು

ಸಮಗ್ರ ಕನ್ನಡದ ಗಾದೆಗಳು, ಸಂಪುಟ–೧, ಪ್ರಧಾನ ಸಂಪಾದಕರು: ಡಾ. ಕೆ.ಎನ್. ಗಂಗಾನಾಯಕ್, ಸಂಪಾದಕರು: ಡಾ. ಎಂ. ನಂಜಯ್ಯ ಹೊಂಗನೂರು, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦೦೦೬, ೨೦೧೨, ಪುಟ–೩೪+೪೭೨, ಬೆಲೆ ರೂ. ೩೦೦/-

ಸಮಗ್ರ ಕನ್ನಡದ ಗಾದೆಗಳು ಸಂಪುಟ–೧ ಕೃತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಪ್ರಕಟಿಸಿದೆ (೨೦೧೨). ಇದರ ಪ್ರಧಾನ ಸಂಪಾದಕರಾಗಿ ಡಾ. ಕೆ.ಎನ್. ಗಂಗಾನಾಯಕ್ ಅವರು, ಸಂಪಾದಕರಾಗಿ ಡಾ. ಎಂ. ನಂಜಯ್ಯ ಹೊಂಗನೂರು ಅವರು, ಜೊತೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿವಿಧ ಸಂಶೋಧನಾ ವಿದ್ಯಾರ್ಥಿಗಳು ಕಾರ್ಯನಿರ್ವಹಿಸಿದ್ದಾರೆ.

ಈ ಸಂಪುಟದಲ್ಲಿ ಒಟ್ಟು ೬೫೦೭ ಗಾದೆಗಳ ಸಂಗ್ರಹವಿದೆ. ಇವು 'ಅ'ಕಾರಾದಿಯಲ್ಲಿವೆ. ಸಂಪುಟದ ಪ್ರಾರಂಭದಲ್ಲಿ ಸಂಕ್ಷಿಪ್ತಾಕ್ಷರ ಸೂಚಿ ಇದೆ. ಕೊನೆಯಲ್ಲಿ ಅನುಬಂಧವಿದೆ. ಇಲ್ಲಿ ಅರ್ಥಕೋಶ ಹಾಗೂ ಸಂಪುಟಕ್ಕೆ ಬಳಸಿಕೊಂಡಿರುವ ಗಾದೆಗಳ ಸಂಗ್ರಹಗಳ ಪುಸ್ತಕ ಪಟ್ಟಿ ಮತ್ತು ಅವುಗಳ ಲೇಖಕರ ವಿವರವಿದೆ. ಇದು ಗಮನಾರ್ಹ ಮತ್ತು ಅವಶ್ಯಕ. ಇಲ್ಲಿನ ಗಾದೆಗಳು ವಿವಿಧ ಲೇಖಕರ ಗಾದೆಗಳ ಸಂಗ್ರಹಗಳ ಪುಸ್ತಕಗಳಿಂದ ಹಾಗೂ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಗಾದೆಗಳಾಗಿವೆ. ಗಾದೆಗಳ ಮುಂದೆ ಆವರಣದಲ್ಲಿ ಈ ಗಾದೆಗಳು ಯಾವ ಲೇಖಕರ ಗಾದೆಗಳು ಎಂಬುದನ್ನು ತಿಳಿಸಲಾಗಿದೆ.

ಗಾದೆ ಜನಪದ ಸಾಹಿತ್ಯದ ಬಹುಮುಖ್ಯ ಪ್ರಕಾರಗಳಲ್ಲೊಂದು. ಜಗತ್ತಿನ ಎಲ್ಲ ಸಮುದಾಯದಲ್ಲೂ ಗಾದೆ ಪ್ರಚಲಿತದಲ್ಲಿದೆ. ಜನಸಾಮಾನ್ಯರ ಜೀವನಾನುಭವವೇ ಗಾದೆಗಳ ಮೂಲವಸ್ತು. ಗಾದೆ ಎಂದರೆ ಅದೊಂದು ಸಮಷ್ಟಿಪ್ರಜ್ಞೆ, ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ಜೀವನದ ಪ್ರತಿಯೊಂದು ಭಾಗವನ್ನು ಸ್ಪರ್ಶಿಸುತ್ತದೆ. ಜನಪದ ಸಾಹಿತ್ಯದ ಯಾವ ಪ್ರಕಾರವೂ ಇಷ್ಟೊಂದು ಬಹುಮುಖತೆಯನ್ನು ಕಟ್ಟಿಕೊಡಲಾರದು. ಇವು ಪದ್ಯಗದ್ಯಗಳೆರಡರಲ್ಲೂ ರಚನೆಗೊಂಡಿವೆ. ಇಂತಹ ಗಾದೆಗಳ ಸಂಗ್ರಹ ಕೆಲವು ಕಡೆ ನಡೆದಿದ್ದರೂ ಸಮಗ್ರವಾಗಿ ನಡೆದಿರಲಿಲ್ಲ. ಆ ಕೆಲಸವನ್ನು ಸಂಪಾದಕರು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಗಾದೆಗಳಲ್ಲಿ ಕೆಲವು ಚಿಕ್ಕ, ಮತ್ತೆ ಕೆಲವು ದೀರ್ಘವಾದ ಸ್ವರೂಪ ಗಾದೆಗಳಿರುತ್ತವೆ. ಸಾಮಾನ್ಯವಾಗಿ ಗಾದೆಗಳು ಸೂತ್ರಪ್ರಾಯವಾಗಿಯೂ ಪ್ರಾಸಬದ್ಧವಾಗಿಯೂ ಇರುತ್ತವೆ. ಗಾದೆಗಳು ವ್ಯಕ್ತಿಯಿಂದ ವ್ಯಕ್ತಿಗೆ, ತಲೆಮಾರಿನಿಂದ ತಲೆಮಾರಿಗೆ ನೆನಪಿನಲ್ಲುಳಿದು

ಬರುತ್ತವೆ. ಇದಕ್ಕೆ ಕಾರಣ ಗಾದೆಗಳಲ್ಲಿರುವ ಪ್ರಾಸ, ಉಪಮೆ, ರೂಪಕಗಳು ಹಾಗೂ ಅನುಭವಜನ್ಯವಾದವುಗಳಾಗಿರುವುದು.

ಉದಾ:-

೧. "ಅತ್ತೆ ಮನೇಲಿ ಹೇಗಿದ್ದಿ ಮಗಳೆ ಅಂದ್ರೆ
ಮುಳ್ಳಾಗೆ ಹಾದಿ ನಡದ್ಹಾಂಗೆ ಮೊಳಕೈಗೆ ಚಿಲಕ ಹೊಡೆದ್ಹಂಗೆ ಅಂದಳು"
(ಗಾದೆ ಸಂಖ್ಯೆ-೧೧೪೭)

ಎಂಬ ಗಾದೆ ಉಪಮಾಲಂಕಾರಕ್ಕೆ ಉದಾಹರಣೆಯಾಗುತ್ತದೆ. ಇಲ್ಲಿಯ ಉಪಮೆಗಳು ಹಳಸಲಾಗಿರದೆ, ಹೊಚ್ಚ ಹೊಸತನದಿಂದ ಮನಸ್ಸಿಗೆ ಮುತ್ತಿಗೆ ಹಾಕುತ್ತವೆ.

೨. "ಎಳೀಲಾರದ ಎತ್ತು
ಮೆಳೇ ಮೇಲೆ ಬಿತ್ತು" (ಗಾದೆ ಸಂಖ್ಯೆ-೫೬೫೩)

ಇಲ್ಲಿ ಆದಿಪ್ರಾಸ ಹಾಗೂ ಅಂತ್ಯಪ್ರಾಸವೆರಡೂ ಇವೆ. ಈ ಗಾದೆಯನ್ನು ಎಂದೋ ಕೇಳಿದವನು, ಉತ್ತರಾರ್ಧ ಮೆರೆತು ಹೋದರೂ ಪೂರ್ವಾರ್ಧದ ಆಧಾರದಮೇಲೆ ಕಷ್ಟಪಟ್ಟು ನೆನಪಿಗೆ ತಂದುಕೊಂಡು ಹೇಳಬಹುದು.

೩. "ಓದು ಕಲಿತ ಹೆಂಗಸಿನ ಕೂಡ ಗಂಡಸು ಏಗಲಾರ
ಅಡುಗೆ ಕಲಿತ ಗಂಡಸಿನ ಕೂಡ ಹೆಂಗಸು ಏಗಲಾರಳು"(ಗಾದೆ ಸಂಖ್ಯೆ-೬೪೭೮)

ಇದು ಒಂದು ಅನುಭವಜನ್ಯವಾದ ಗಾದೆಯಾಗಿದೆ.

ಇದೇ ರೀತಿಯ ಅನೇಕ ಗಾದೆಗಳು ಈ ಸಂಪುಟದ ಸಂಗ್ರಹದಲ್ಲಿವೆ. ಈ ಗಾದೆಗಳನ್ನು ಒಂದು ಕಡೆ ಸಂಗ್ರಹಿಸಿರುವುದರಿಂದ ನಮ್ಮ ನಾಡಿನ ಭಾಷೆ, ಸಾಹಿತ್ಯ, ಕೃಷಿ, ಹಬ್ಬ, ಜಾತ್ರೆ, ನಂಬಿಕೆ, ವಿವಾಹ, ಆಚರಣೆ, ಸಂಪ್ರದಾಯ, ವೈದ್ಯ, ಹುಟ್ಟು-ಸಾವಿನಂತಹ ಮಾನವ ಬದುಕಿನ ನೂರಾರು ವಾಸ್ತವಿಕ, ಪ್ರಸ್ತುತ, ಸನ್ನಿವೇಶಗಳ ವಿವರಗಳನ್ನು ತಿಳಿಯಬಹುದಾಗಿದೆ.

ಹಲವಾರು ಕಡೆ ಬಂದಿರುವ ಗಾದೆಗಳನ್ನು ಒಂದೇ ಕಡೆ ಸಂಗ್ರಹಿಸುವ ಈ ಸಂಪುಟದ ರಚನೆಯು ಬಹಳ ಮಹತ್ವಪೂರ್ಣವಾದ ಕೆಲಸವಾಗಿದೆ. ಕನ್ನಡ ಜಾನಪದ ಕ್ಷೇತ್ರಕ್ಕೆ ಇದೊಂದು ಗಮನಾರ್ಹ ಕೊಡುಗೆ. ಈ ಸಂಪುಟವು ಭಾಷಿಕ, ಸಾಹಿತ್ಯಕ, ವೈಜ್ಞಾನಿಕ ಅಧ್ಯಯನಕ್ಕೆ ಸಹಕಾರಿಯಾಗಬಲ್ಲದು. ಕನ್ನಡನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಪುನರ್‌ವ್ಯಾಖ್ಯಾನ ಮಾಡಲು ಈ ಗ್ರಂಥ ಪ್ರಮುಖ ಆಕರವಾಗಿ ನಿಲ್ಲುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು.

ರಾ. ನ. ನಿರಂಜನ

೬೧. ಕನ್ನಡ ನಾಡಿನ ಗಾದೆಗಳ ಸಂಕಲನಗಳು

ಸಮಗ್ರ ಕನ್ನಡದ ಗ್ಗಾದೆಗಳು, ಸಂಪುಟ-೨, ಪ್ರಧಾನ ಸಂಪಾದಕರು: ಡಾ. ಕೆ.ಎನ್. ಗಂಗಾನಾಯಕ್, ಸಂಪಾದಕರು: ಡಾ. ಎಂ. ನಂಜಯ್ಯ ಹೊಂಗನೂರು, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦೦೦೬, ೨೦೧೨, ಪುಟ-೩೪+೫೨೪, ಬೆಲೆ ರೂ. ३೦೦/-

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲೆಲ್ಲಾ ಗಾದೆಗಳು ವೈವಿಧ್ಯಮಯವಾಗಿ ಹರಿದು ಬಂದಿವೆ. ಜನರ ಅನುಭವದ ಬಳಕೆಯ ಮಾತುಗಳೇ ಗಾದೆಗಳಾಗಿದ್ದು, ಜಗತ್ತಿನ ಎಲ್ಲ ಸಮುದಾಯದಲ್ಲೂ ಬಳಕೆಯಲ್ಲಿವೆ. ಒಂದು ವಿಷಯವನ್ನು ಕುರಿತು ಪರಿಣಾಮಕಾರಕವಾಗಿ ತಿಳಿಹೇಳುವ ಘನವಾದ ಅರ್ಥವನ್ನು ಹೊಂದಿರುವ ಹೇಳಿಕೆಗಳೇ ಗಾದೆ ಮಾತುಗಳು. ಜೀವನವು ಸಾರ್ಥಕವಾಗಲು ಅವಶ್ಯವಾದ ವೈಶಿಷ್ಟ್ಯಪೂರ್ಣವಾದ ನುಡಿ ಮುತ್ತುಗಳೇ ಗಾದೆಗಳು. ಹೀಗಾಗಿ ಗಾದೆಗಳು ಎಂದರೆ ಒಳ್ಳೆಯ ನುಡಿಗಳು ಎಂದರ್ಥ. ಇಂತಹ ಗಾದೆಗಳನ್ನು ಕೆಲವರು ಸಂಗ್ರಹಿಸಿ ಪ್ರಕಟಪಡಿಸಿದ್ದಾರೆ. ಇಂತಹವು ಗಳನ್ನೆಲ್ಲಾ ಒಂದು ಕಡೆ ಸಂಗ್ರಹಿಸುವ ಕೆಲಸವನ್ನು ಸಂಪಾದಕರಾದ ಡಾ. ಎಂ. ನಂಜಯ್ಯ ಹೊಂಗನೂರು ಹಾಗೂ ವಿದ್ಯಾರ್ಥಿಗಳ ಸಹಕಾರದಿಂದ ಡಾ.ಕೆ.ಎನ್. ಗಂಗಾನಾಯಕ್ ರವರು ಮಾಡಿದ್ದಾರೆ. ಹೀಗೆ ಸಂಗ್ರಹಿಸಿದ ಗಾದೆಗಳಲ್ಲಿ 'ಕ' ಕಾರದಿಂದ 'ಧ' ಕಾರದವರೆಗಿನ ಗಾದೆಗಳನ್ನು ಸಂಪುಟ-೨ರಲ್ಲಿ ಪ್ರಕಟಮಾಡಿದ್ದಾರೆ.

ಸಮಗ್ರ ಕನ್ನಡದ ಗಾದೆಗಳು, ಸಂಪುಟ-೨ರಲ್ಲಿ, 'ಅ'ಕರಾದಿಯಲ್ಲಿ 'ಕ' ಕಾರದಿಂದ 'ಧ' ಕಾರದವರೆಗಿನ ಒಟ್ಟು ೭೪೬೮ ಗಾದೆಗಳಿವೆ. ಈ ಸಂಪುಟದ ಪ್ರಾರಂಭದಲ್ಲಿ ಸಂಕ್ಷಿಪ್ತಾಕ್ಷರ ಸೂಚಿ ಇದೆ. ಕೊನೆಯಲ್ಲಿ ಅನುಬಂಧವಿದೆ. ಇಲ್ಲಿ ಅರ್ಥಕೋಶ ಹಾಗೂ ಸಂಪುಟಗಳಿಗೆ ಬಳಸಿಕೊಂಡಿರುವ ಗಾದೆಗಳ ಸಂಗ್ರಹಗಳ ಪುಸ್ತಕ ಪಟ್ಟಿ ಮತ್ತು ಅವುಗಳ ಲೇಖಕರ ವಿವರವಿದೆ. ಇದು ಗಮನಾರ್ಹ ಮತ್ತು ಅವಶ್ಯಕ. ಇಲ್ಲಿನ ಗಾದೆಗಳು ವಿವಿಧ ಲೇಖಕರ ಗಾದೆಗಳ ಸಂಗ್ರಹಗಳ ಪುಸ್ತಕಗಳಿಂದ ಹಾಗೂ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಗಾದೆಗಳಾಗಿವೆ. ಗಾದೆಗಳ ಮುಂದೆ ಆವರಣದಲ್ಲಿ ಈ ಗಾದೆಗಳು ಯಾವ ಲೇಖಕರ ಗಾದೆಗಳು ಎಂಬುದನ್ನು ತಿಳಿಸಲಾಗಿದೆ.

ಗಾದೆ ಜನಪದ ಸಾಹಿತ್ಯದ ಬಹುಮುಖ್ಯ ಪ್ರಕಾರಗಳಲ್ಲೊಂದು. ಜಗತ್ತಿನ ಎಲ್ಲ ಸಮುದಾಯದಲ್ಲೂ ಗಾದೆ ಪ್ರಚಲಿತದಲ್ಲಿದೆ. ಜನರ ದಿನನಿತ್ಯ ಜೀವನದಲ್ಲಿ ಭಾಷೆಯಂತೆಯೇ ಅನಿವಾರ್ಯವಾಗಿ, ಸಹಜವಾಗಿ ಗಾದೆ ಬೆಳೆದು ಬಂದಿದೆ. ಇವು ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ಪ್ರಯೋಗವಾಗುತ್ತಿರುತ್ತವೆ. ನೂರು ಮಾತಿನ ಅರ್ಥವನ್ನು ಕೇವಲ ಒಂದು 'ಗಾದೆ ಮಾತು' ಹೇಳುತ್ತದೆ ಅದೇ ಅದರ ವೈಶಿಷ್ಟ್ಯ. ಗಾದೆ ಅನುಭವಜನ್ಯವಾಗಿದೆ. ಕಡೆಗೆ ಅನುಭವವೇ ಒರೆಗಲ್ಲಾಗಿ ಸಾಕ್ಷಿಯಾಗಿ

ನಿಂತುಕೊಳ್ಳುತ್ತದೆ. ಇವು ಸಾಮಾನ್ಯ ಮತ್ತು ನಿರ್ದಿಷ್ಟ ರೂಪದ ಗದ್ಯಪದ್ಯಗಳಲ್ಲ. ಬಹುಮಟ್ಟಿಗೆ ವಚನ ಸಾಹಿತ್ಯಕ್ಕೆ ಹತ್ತಿರದ ರಚನೆಗಳಾಗಿವೆ. ಪ್ರತಿಯೊಂದು ಗಾದೆಯೂ ಬಿಡಿ ಕವಿತೆಯಂತೆ ಕಾಣುತ್ತದೆ. ನಮ್ಮಲ್ಲಿ ಸಂಗ್ರಹವಾಗಿರುವ ಗಾದೆಗಳಲ್ಲಿ ಬಹುತೇಕವು ಏಕಸಾಲಿನವು. ಉಳಿದಂತೆ ಎರಡು, ಮೂರು ಮತ್ತು ನಾಲ್ಕು ಸಾಲಿನವು. ಉಳಿದಂತೆ ಅಲ್ಲೊಂದು, ಇಲ್ಲೊಂದು ಗಾದೆಗಳು ಮಾತ್ರ ಐದು ಸಾಲಿನ ಪದ್ಯರೂಪದ ಗಾದೆಗಳಾಗಿ ಕಂಡು ಬರುತ್ತವೆ. ಇವುಗಳಲ್ಲಿ ಅಚ್ಚಕನ್ನಡ ಛಂದಸ್ಸಿನ ರೂಪಗಳಾದ ತ್ರಿಪದಿ, ಏಳೆ, ಷಟ್ಪದಿ, ಸಾಂಗತ್ಯಗಳನ್ನು ಗುರ್ತಿಸಬಹುದು. ಪ್ರತಿ ಗಾದೆಗಳ ಹಿಂದೆ ಒಂದು ಇತಿಹಾಸವಿದೆ. ಒಂದು ಉದ್ದೇಶವಿದೆ. ಒಂದು ಸಿದ್ಧಾಂತವಿದೆ. ಒಂದು ತತ್ವವಿದೆ. ಜನಸಾಮಾನ್ಯರ ಲೋಕಾನುಭವ ಗಾದೆಗಳಲ್ಲಿ ಇಳಿದು ಬಂದಿದೆ. ಹದಗೆಡುತ್ತಿರುವ ನೈತಿಕ, ಧಾರ್ಮಿಕ, ಸಾಮಾಜಿಕ, ಆಚಾರ-ವಿಚಾರಗಳನ್ನು ತಿದ್ದಿಕೊಂಡು ಸನ್ಮಾರ್ಗದತ್ತ ಸಾಗು ಎಂದು ಸಾರಿ ಸಾರಿ ಹೇಳುವ ಈ ಕನ್ನಡದ ಗಾದೆಗಳು ಗಣನೆಗೆ ನಿಲುಕದಷ್ಟು ಅಮೋಘ.

ಇಲ್ಲಿನ ಕೆಲವು ಗಾದೆಗಳನ್ನು ಗಮನಿಸೋಣ

೧. "ಕೈ ಕೆಸರಾದರೆ ಬಾಯಿ ಮೊಸರು"(ಗಾದೆ ಸಂಖ್ಯೆ-೨೭೭೧)

ಈ ಗಾದೆಯಲ್ಲಿ ನಮಗೆ ಪ್ರಮುಖವಾಗಿ ಜೀವನದ ಅನುಭವದ ಪ್ರಯೋಗವು ಕಂಡುಬರುತ್ತದೆ. ಕಷ್ಟಪಟ್ಟರೆ ಫಲವುಂಟು ಎಂಬ ಮಾತು ನೆನಪಾಗುತ್ತದೆ. ಮನುಷ್ಯನು ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕಾದರೆ ಕಷ್ಟ ಪಡಬೇಕು. ಆಗ ಮಾತ್ರ ನೆಮ್ಮದಿಯಿಂದ ಬದುಕಲು ಸಾಧ್ಯ ಎಂಬುದನ್ನು ಈ ಗಾದೆ ಮಾತು ಅರ್ಥೈಸುತ್ತದೆ.

"ಕೀತ ಬೆರಳಿಗೆ ಉಚ್ಚೆ ಉಯ್ಯಿ ಅಂದ್ರೆ ಜಲಮಲ ನಿಂತು ಆರು
ತಿಂಗಳಾಯ್ತು ಅಂದ್ನಂತೆ"(ಗಾದೆ ಸಂಖ್ಯೆ-೨೭೭೧)

ಈ ಗಾದೆ ಅತ್ಯುಕ್ತಿ ಅಥವಾ ಉತ್ಪ್ರೇಕ್ಷಾಲಂಕಾರಕ್ಕೆ ಉದಾಹರಣೆಯಾಗುತ್ತದೆ. ಇಂಥ ಅತ್ಯುಕ್ತಿಯನ್ನು ಗಾದೆಗಳಲ್ಲಿ ಅಪಾರವಾಗಿ ಕಾಣಬಹುದಾಗಿದೆ. ಅದರ ಉದ್ದೇಶವಿಷ್ಟೆ, ಹೇಳುವ ವಿಷಯ ಚುರುಕಾಗಿ ಮುಟ್ಟಲಿ ಎಂಬುದು.

೨. "ಕೊತ್ತಿ ಕೊಂದ ಪಾಪ ತಿತ್ತಿ ಹೊಕ್ಕರೂ ಬಿಡದು"(ಗಾದೆ ಸಂಖ್ಯೆ-೩೦೮೨)

ಈ ಗಾದೆ ಏಕಕಾಲದಲ್ಲಿ ಮಾನವ ಶಾಸ್ತ್ರಜ್ಞರಿಗೂ ಭಾಷಾಶಾಸ್ತ್ರಜ್ಞರಿಗೂ ಆಹಾರ ಒದಗಿಸುತ್ತದೆ. ಕೊತ್ತಿ (ಮಂಗ/ಬೆಕ್ಕು) ಕೊಲ್ಲುವುದು ಮಹಾಪಾಪ ಎಂಬ ನಂಬಿಕೆ ಜನಪದರಲ್ಲಿ ಪ್ರಬಲವಾಗುಂಟು. ನಂಬಿಕೆ, ಕುರುಡು ನಂಬಿಕೆ, ಮಾನವ ಸ್ವಭಾವ ಇತ್ಯಾದಿಗಳ ದೃಷ್ಟಿಯಿಂದ ಮಾನವಶಾಸ್ತ್ರಜ್ಞ ಗಾದೆಗಳನ್ನು ಅಧ್ಯಯನ ಮಾಡಲು ಅವಕಾಶವಿದೆ.

ಇಲ್ಲಿ ಬಂದಿರುವ ತಿತ್ತಿ ಎಂಬ ಶಬ್ದ ಭಾಷಾಶಾಸ್ತ್ರಜ್ಞನಿಗೆ ತಲೆ ಕೆರೆದುಕೊಳ್ಳುವಂತೆ ಮಾಡುತ್ತದೆ. ಹೆಂಡ ತುಂಬುವ ಚರ್ಮದ ಚೀಲಕ್ಕೆ ತಿತ್ತಿ ಎಂಬ ಹೆಸರುಂಟು. ಆದರೆ ಆ ಅರ್ಥ ಇಲ್ಲಿ ಅನ್ವಯೆ. ಇದು ತಿರುಪತಿ ಎಂಬ ಶಬ್ದದಿಂದ ರೂಪಗೊಂಡದ್ದು ತಿರುಪತಿ ಪುಣ್ಯಕ್ಷೇತ್ರ; ಅದರ ಸಂದರ್ಶನ, ಸಂಸ್ಪರ್ಶನದಿಂದ ಪಾಪ ಪರಿಹಾರ ವಾಗುತ್ತದೆಂದು ಜನಸಾಮಾನ್ಯರ ನಂಬಿಕೆ. ಅಂಥ ಪಾಪಪರಿಹಾರ ಪುಣ್ಯಕ್ಷೇತ್ರವಾದ ತಿರುಪತಿಗೆ ಹೋಗಿ ಬಂದರೂ ಬೆಕ್ಕನ್ನು ಕೊಂದ ಪಾಪ ಹೋಗುವುದಿಲ್ಲ ಎಂಬುದೇ ಇಲ್ಲಿ ಉದ್ದೇಶಿತ ಭಾವ. ಆದ್ದರಿಂದ ತಿತ್ತಿ ಶಬ್ದಕ್ಕಿರುವ ಹೆಂಡ ಅನ್ನುವ ಅರ್ಥ ಇಲ್ಲಿ ಅನ್ವಯವಾಗುವುದಿಲ್ಲ. ತಿರುಪತಿ>ತಿರುಪ್ತಿ>ತಿರಿಪ್ತಿ>ತಿರ್ಪ್ತಿ>ತಿರ್ತ್ತಿ>ತಿತ್ತಿ ಆಗಿರಬಹುದೆಂದು ತೋರುತ್ತದೆ(ಪ್ರೊ. ಸುಧಾಕರ, ನಮ್ಮ ಸುತ್ತಿನ ಗಾದೆಗಳು, ಕಾವ್ಯಶ್ರೀ ಪ್ರಕಾಶನ, ಮೈಸೂರು, ೨೦೧೧, ಪು. ೨೪). ಇಂತಹ ಅನೇಕ ಗಾದೆಗಳು ಈ ಸಂಪುಟದಲ್ಲಿ ಕಂಡುಬರುತ್ತವೆ.

೩. "ಕಂಡವರ ಕಾಲು ಹಿಡಿದರೂ ಗಂಡನ ಮನೆಗೆ ಪೋಗೋದು ತಪ್ಪದು"

(ಗಾದೆ ಸಂಖ್ಯೆ-೮೧)

(ಕಂಡು ಕಂಡೋರ ಕಾಲಿಗೆ ಬಿದ್ರೂ ಗಂಡನ ಮನೆಗೆ ಹೋಗೋದು ತಪ್ಪಲ್ಲ)

ಮದುವೆಯಾದ ಹೆಣ್ಣು ತೌರು ಮನೆಯಿಂದ ಮೊಟ್ಟಮೊದಲು ಗಂಡನ ಮನೆಗೆ ಹೊರಡಬೇಕಾದಾಗ ತಂದೆ, ತಾಯಿ, ಹಿರಿಯರ ಕಾಲಿಗೆ ನಮಸ್ಕಾರ ಮಾಡಿ ಹೊರಡುವ ಸಂಪ್ರದಾಯವಿದೆ. ಅವರೆಲ್ಲರ ಹಾರೈಕೆ ತನ್ನ ಹೊಸ ಜಾಗ, ಹೊಸ ಜೀವನಕ್ಕೆ ಬಲ ಕೊಡಲಿ ರಕ್ಷೆ ನೀಡಲಿ ಎಂಬ ಇಂಗಿತ ಇದರಲ್ಲಿವೆ. ಮದುವೆಯ ಹೆಣ್ಣು ಹಾಗೆ ನಮಸ್ಕಾರ ಮಾಡಲು ಬಂದಾಗ, ತಮಾಷೆ ಪ್ರವೃತ್ತಿಯ ಆದರೆ ವಾಸ್ತವಿಕ ಪ್ರಜ್ಞೆಯ ಒಬ್ಬಾತ "ನನ್ನ ಕಾಲಿಗೆ ಯಾಕಮ್ಮ ಬೀಳ್ತಿಯ? ಎಷ್ಟು ಜನರ ಕಾಲಿಗೆ ಬಿದ್ದರೂ ಯಾರು ನೀನು ಗಂಡನ ಮನೆಗೆ ಹೋಗದಂತೆ ತಡೆ ನೀಡಲಾರರು; ನೀನು ಹೋಗಿಯೇ ತೀರಬೇಕು" ಎಂದು ಹಾಸ್ಯ ಮಾಡಿರುವುದು ಹಾಗೂ ವಾಸ್ತವ ಸತ್ಯವನ್ನು ಸೂಚಿಸಿರುವುದು ಈ ಗಾದೆಯಲ್ಲಿ ಕಂಡುಬರುತ್ತದೆ. ಅದೇ ವೇಳೆಯಲ್ಲಿ ಸಂಸ್ಕೃತಿಯ ಮುಖವೊಂದು ಪ್ರತಿಬಿಂಬಿತವಾಗಿದೆ.

ಗಾದೆಗಳನ್ನೆಲ್ಲಾ ಹೀಗೆ ಒಂದು ಕಡೆ ಸಂಗ್ರಹಿಸಿರುವುದು ಅತ್ಯಂತ ಮಹತ್ವಪೂರ್ಣ ಕೆಲಸವಾಗಿದೆ. ಇದೊಂದು ಚಾರಿತ್ರಿಕ ದಾಖಲೆಯೂ ಆಗಿದೆ. ಕಾರಣ ಇಷ್ಟೊಂದು ಪ್ರಮಾಣದಲ್ಲಿ ಎಲ್ಲೂ ಸಹ ಗಾದೆಗಳ ಸಂಗ್ರಹ ಕಾರ್ಯ ನಡೆದಿಲ್ಲ. ಇನ್ನೂ ಮುಂದೆ ಗಾದೆಗಳನ್ನು ಕುರಿತು ಸಂಶೋಧನೆ ಮಾಡುವವರಿಗೆ, ಸಂಗ್ರಹಕಾರರಿಗೆ, ಅಭ್ಯಾಸಿಗಳಿಗೆ, ವಿಶ್ಲೇಷಣೆ ಮತ್ತು ಚರ್ಚೆ ಮಾಡುವವರಿಗೆ ಇದೊಂದು ಅತ್ಯಮೂಲವಾದ ಸಾಮಗ್ರಿ ಯಾಗಿದೆ.

ರಾ. ನ. ನಿರಂಜನ

೬೨. ಕನ್ನಡ ನಾಡಿನ ಗಾದೆಗಳ ಸಂಕಲನಗಳು

ಸಮಗ್ರ ಕನ್ನಡದ ಗಾದೆಗಳು, ಸಂಪುಟ–೩, ಪ್ರಧಾನ ಸಂಪಾದಕರು: ಡಾ. ಕೆ.ಎನ್. ಗಂಗಾನಾಯಕ್, ಸಂಪಾದಕರು: ಡಾ. ಜಯಲಕ್ಷ್ಮೀ ಸೀತಾಪುರ, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦೦೦೬, ೨೦೧೨, ಪುಟ–೨೨+೫೧೦, ಬೆಲೆ ರೂ. ೩೦೦/-

ಸಮಗ್ರ ಕನ್ನಡದ ಗಾದೆಗಳು ಸಂಪುಟ–೩ ಕೃತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಪ್ರಕಟಿಸಿದೆ (೨೦೧೨). ಇದರ ಪ್ರಧಾನ ಸಂಪಾದಕರಾಗಿ ಡಾ.ಕೆ.ಎನ್.ಗಂಗಾನಾಯಕ್ ಅವರು, ಸಂಪಾದಕರಾಗಿ ಡಾ. ಜಯಲಕ್ಷ್ಮೀ ಸೀತಾಪುರ ಅವರು, ಜೊತೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿವಿಧ ಸಂಶೋಧನಾ ವಿದ್ಯಾರ್ಥಿಗಳು ಕಾರ್ಯನಿರ್ವಹಿಸಿದ್ದಾರೆ.

ಈ ಸಂಪುಟದಲ್ಲಿ ಒಟ್ಟು ೭೮೯೬ ಗಾದೆಗಳ ಸಂಗ್ರಹವಿದೆ. ಇವು 'ಅ'ಕರಾದಿಯಲ್ಲಿ 'ನ' ಕಾರದಿಂದ 'ಮ' ಕಾರದವರೆಗೂ ಇವೆ. ಸಂಪುಟದ ಪ್ರಾರಂಭದಲ್ಲಿ ಸಂಕ್ಷಿಪ್ತಾಕ್ಷರ ಸೂಚಿ ಇದೆ. ಕೊನೆಯಲ್ಲಿ ಅನುಬಂಧವಿದೆ. ಇಲ್ಲಿ ಅರ್ಥಕೋಶ ಹಾಗೂ ಸಂಪುಟಕ್ಕೆ ಬಳಸಿಕೊಂಡಿರುವ ಗಾದೆಗಳ ಸಂಗ್ರಹಗಳ ಪುಸ್ತಕ ಪಟ್ಟಿ ಮತ್ತು ಅವುಗಳ ಲೇಖಕರ ವಿವರವಿದೆ. ಇದು ಗಮನಾರ್ಹ ಮತ್ತು ಅವಶ್ಯಕ. ಇಲ್ಲಿನ ಗಾದೆಗಳು ವಿವಿಧ ಲೇಖಕರ ಗಾದೆಗಳ ಸಂಗ್ರಹಗಳ ಪುಸ್ತಕಗಳಿಂದ ಹಾಗೂ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಗಾದೆಗಳಾಗಿವೆ. ಗಾದೆಗಳ ಮುಂದೆ ಆವರಣದಲ್ಲಿ ಈ ಗಾದೆಗಳು ಯಾವ ಲೇಖಕರ ಗಾದೆಗಳು ಎಂಬುದನ್ನು ತಿಳಿಸಲಾಗಿದೆ.

ಸಾಂಪ್ರದಾಯಿಕ ಸಮಾಜವೊಂದರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕು ಚೆಲ್ಲುವ ಕೆಲವನ್ನು ಗಾದೆಗಳು ಮಾಡುತ್ತವೆ. ವ್ಯವಸ್ಥೆಯ ಬಲವಾದ ಕಾವಲಿನಲ್ಲಿ ವ್ಯಕ್ತಿಯ ಮತ್ತು ಸಮಾಜದ ಆಗುಹೋಗುಗಳನ್ನು ಕುರಿತು ಗಾದೆಗಳು ಮಾತಾಡುತ್ತವೆ. ವೈವಾಹಿಕ ವ್ಯವಸ್ಥೆ ಕೌಟುಂಬಿಕ ರಚನೆ, ಬಂಧುತ್ವದ ಬಗೆ, ಧರ್ಮ ಮತ್ತು ದೇವರ ಕಲ್ಪನೆ, ಹೆಣ್ಣು ಗಂಡಿನ ಸಂಬಂಧ, ಪಿತೃಪ್ರಾಧಾನ್ಯತೆ, ಹಿಂದುಳಿದವರ ಅಸಹಾಯಕತೆ, ಮೌಢ್ಯ ಮತ್ತು ವಿರೋಧ, ಪ್ರತಿಭಟನೆಯ ಸಣ್ಣ ದನಿಗಳು, ಆರ್ಥಿಕ ಅಸಮಾನತೆ, ಜಾತಿ ಮತ್ತು ವಿರೋಧ, ವರ್ಗವಿಚಾರ, ನಂಬಿಕೆ ಮತ್ತು ಸಂಪ್ರದಾಯ, ವಿಧಿ ನಿಷೇಧಗಳು, ಸ್ವೀಕೃತ ಮೌಲ್ಯಗಳು, ಮೇಲು–ಕೀಳು, ಸಾಮಾಜಿಕ ಉಲ್ಲಂಘನೆಗಳು, ಮಳೆ ಬೆಳೆ, ಆಹಾರ ಪಾನೀಯ, ವೃತ್ತಿ ಸಂಸ್ಕೃತಿ–ಹೀಗೆ ನೂರಾರು ವಸ್ತು ವಿಷಯಗಳ ಬಗ್ಗೆ ಗಾದೆಗಳು ತಮ್ಮ ವಿಚಾರವನ್ನು ಮಂಡಿಸುತ್ತವೆ. ಇವುಗಳಲ್ಲಿ ಸಹಜವಾಗಿಯೇ ಚರ್ಚೆ, ತೀರ್ಮಾನ, ವಿಮರ್ಶೆಗಳಿರುತ್ತವೆ. ಮರೆಯಾಗುತ್ತಿರುವ ಅಥವಾ ಬದಲಾಗುತ್ತಿರುವ ಸಮಾಜವನ್ನು ಗಾದೆಗಳು ತಮ್ಮದೇ ರೀತಿಯಲ್ಲಿ ಕಟ್ಟಿಕೊಡುವ ಪ್ರಯತ್ನ

ಮಾಡುತ್ತವೆ. ನೈತಿಕ ಮೌಲ್ಯವನ್ನು ಹೆಚ್ಚಿಸುವ ಕೆಲಸವನ್ನು ಗಾದೆಗಳು ಮಾಡುತ್ತವೆ. ಸಾಮಾಜಿಕ ಅಥವಾ ಸಾಂಸ್ಕೃತಿಕ ಶೋಧಕ್ಕೆ ಬೇಕಾದ ಸಾಮಗ್ರಿಯನ್ನು ಗರಿಷ್ಠ ಮಟ್ಟದಲ್ಲಿ ಗಾದೆಗಳು ನೀಡುತ್ತವೆ. ಸಾಂಪ್ರದಾಯಿಕ ಶಿಕ್ಷಣ ಮತ್ತು ಸಾಮಾಜಿಕ ಬೋಧನೆ ಗಾದೆಗಳ ಪರಮ ಪ್ರಯೋಜನದಂತೆ ಕಂಡುಬಂದರೂ, ಸಮಾಜದ ಒಳಸ್ತರದಲ್ಲಿ ಏನು ನಡೆಯುತ್ತಿದೆ ಎಂಬುದರ ವಾಸ್ತವವನ್ನು ಹಿಡಿದಿಡುವ ಪ್ರಯತ್ನವನ್ನು ಗಾದೆಗಳು ಮಾಡುತ್ತಿವೆ ಎನ್ನಬಹುದು.

ಉದಾ:

೧. "ನಾಳೆ ಎಂದವನ ಮನೆ ಹಾಳು"

ಯಾವುದೇ ಕೆಲಸವನ್ನು ಮಾಡುವ ನಿರ್ಧಾರವನ್ನು ಕೈಗೊಂಡಾಗ ಆ ಕೆಲಸವನ್ನು ಮಾಡಲು ಆರಂಭಿಸುವುದು ಒಳ್ಳೆಯದು. ನಾಳೆ ಮಾಡಿದರಾಯಿತು ಎಂದು ಉದಾಸೀನ ಮಾಡುವುದರಿಂದ ನಮಗೆ ಆ ಕೆಲಸ ಮಾಡಲು ಇದ್ದ ಸೌಕರ್ಯ, ಅನುಕೂಲಗಳು ಇಲ್ಲದೆ ಹೋಗಬಹುದು. ಹಾಗೆಯೇ ಕೆಲಸ ಮಾಡುವುದಕ್ಕೆ ಮನಸ್ಸು ಮಾಡದೆಯೂ ಇರಬಹುದು ಎಂಬುದನ್ನು ಈ ಗಾದೆ ಹೇಳುತ್ತದೆ.

೨. "ಮುಳ್ಳನ್ನು ಮುಳ್ಳಿನಿಂದಲೇ ತೆಗೆ"

ಶತ್ರುಗಳನ್ನು ಶತ್ರುಗಳಿಂದಲೇ ಕೊಲ್ಲಿಸಬೇಕು, ಸರ್ವನಾಶ ಮಾಡಬೇಕೆಂಬುದು ಇದರ ಒಳಾರ್ಥ. ಕಾಲಿಗೆ ಚುಚ್ಚಿರುವ ಮುಳ್ಳನ್ನು ತೆಗೆಯಬೇಕಾದರೆ ಅಂತಹುದೆ ಮತ್ತೊಂದು ಮುಳ್ಳನ್ನು ಬಳಸಿ ತೆಗೆಯಬೇಕು ಎಂಬುದು ಈ ಗಾದೆಯ ಅರ್ಥ.

೩. "ಬೆಳೆಯುವ ಸಿರಿ ಮೊಳಕೆಯಲ್ಲಿ"

ಮೊಳಕೆಯೊಡೆದು ನಿಂತ ಸಸಿ ಮುಂದೆ ಹೇಗೆ ಬೆಳೆದು ನಿಲ್ಲುವುದು ಎಂಬ ಅಂದಾಜನ್ನು ಸರಳವಾಗಿ ಮಾಡಲು ಬರುವಂತಿರುತ್ತದೆ. ಬೆಳೆಯ ಸಿರಿ ಅದು ಉತ್ಪನ್ನ ಕೊಡುವ ರೀತಿ, ಅದರ ಆರೋಗ್ಯ, ಅದರ ಅಂದ ಚಂದ, ಅದು ದಿನೇ, ದಿನೇ ಬೆಳೆಯುವ ಬಗೆ ಎಲ್ಲವನ್ನು ಅದರ ಮೊಳಕೆಯಲ್ಲಿಯೇ ಕಾಣಬಹುದಾಗಿದೆ. ಇದನ್ನು ಮಾನವರಿಗೂ(ಮಗು) ಅನ್ವಯಿಸಿ ಹೇಳುತ್ತಾರೆ.

೪. "ಮನಸ್ಸಿದ್ದರೆ ಮಾರ್ಗ"

ಯಾವುದೇ ಕೆಲಸ ಮಾಡಬೇಕಾದರೆ ಒತ್ತಾಯ ಇರಬಾರದು, ಆಸಕ್ತಿಯಿಂದ ಮಾಡಬೇಕು. ಭಯದಿಂದ ಮಾಡಿದರೆ ಆ ಕಾರ್ಯ ಸರಿಯಾಗಿ ಆಗುವುದಿಲ್ಲ. ಅದು ಅಪೂರ್ಣವಾಗುತ್ತದೆ. ಕೆಲಸ ಮಾಡುವಾಗ ಮನಸ್ಸಿಟ್ಟು ಮಾಡಬೇಕು ಆಗ ಆ ಕೆಲಸವು ಯಶಸ್ವಿಯಾಗುತ್ತದೆ. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಸ್ಥಾನ ಗಳಿಸಬೇಕಿದ್ದರೆ, ಮೊದಲಿನಿಂದಲೇ ಮನಸ್ಸಿಟ್ಟು ಆಸಕ್ತಿಯಿಂದ ಓದಿದರೆ ಅವರಿಗೆ ಪರೀಕ್ಷೆಯಲ್ಲಿ ಒಳ್ಳೆಯ ಶ್ರೇಣಿ ದೊರಕುತ್ತದೆ. ಸಾಧಿಸಬೇಕೆಂಬ ಛಲವಿದ್ದರೆ ಎಂತಹ ಕೆಲಸ ಬೇಕಾದರೂ ಮಾಡಬಹುದು. ಮನಸ್ಸು ಮಾಡಿದರೆ ಬೆಟ್ಟವನ್ನು

ಕುಟ್ಟಿ ಪುಡಿ ಮಾಡಬಹುದು. ಎಲ್ಲದಕ್ಕೂ ಮನಸ್ಸು ಮುಖ್ಯವಾಗಿ ಸ್ಪಂದಿಸಬೇಕು. ಮನಸ್ಸು ಮಾಡಿದರೆ ಬೆಳಕಿನ ದಾರಿ ತಾನಾಗಿಯೇ ತೆರೆದುಕೊಳ್ಳುತ್ತದೆ.

ಹೀಗೆ ದೈನಿಕ ಜನ ಜೀವನದ ನಡುವೆಯೇ ಬೆಳೆದು ನಿಂತಿರುವ ಈ ಗಾದೆಗಳು ಸೌರಭದ ಭಾರದಿಂದ ಬೀಗುತ್ತಿರುವ ಸಂಸ್ಕೃತಿ ಪರಾಗಗಳು. ನಾವು ಅಸಂಸ್ಕೃತರೆಂದು ಪರಿಗಣಿಸುತ್ತಿರುವ ಜನಸಾಮಾನ್ಯರ ಈ ಗಾದೆಗಳಲ್ಲಿ ವ್ಯಕ್ತಗೊಂಡಿರುವ ಕಾವ್ಯಶಕ್ತಿ ಹಾಗೂ ಸಂಸ್ಕೃತಿಯ ಭಕ್ತಿಯನ್ನು ಅನಾದೃಶ್ಯವೆನ್ನದೆ ಗತ್ಯಂತರವಿಲ್ಲ. ಇದೆಲ್ಲವನ್ನು ಪರಿಶೀಲಿಸಿದ ಮೇಲೆ ಅವರನ್ನು ಕಡೆಗಣಿಸುವುದು ಬಹುದೂರದ ಮಾತಾಗಿಯೇ ಉಳಿದುಕೊಳ್ಳುತ್ತದೆ. ಪಟ್ಟಣ ಜೀವನದಿಂದ ದೂರ ಜಿಗಿದು ಗ್ರಾಮ ಜೀವನಕ್ಕೆ ಕಾಲಿರಿಸಿದ ಕೂಡಲೇ ಇಂತಹ ಗಾದೆಗಳ ಬಿಸಿ ತಾಗುತ್ತದೆ.

ಈ ತರಹದ ಗಾದೆಗಳ ಸಂಗ್ರಹ ಸಂಪುಟವಾದ ಇದು ಕನ್ನಡ ಜಾನಪದ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆ. ಗಾದೆಗಳ ವೈಜ್ಞಾನಿಕ ಅಧ್ಯಯನಕ್ಕೆ ಇದು ಸಹಕಾರಿಯಾಗಬಲ್ಲದು. ಇಲ್ಲಿನ ಗಾದೆಗಳಲ್ಲಿ ಹಲವಾರು ಸಮುದಾಯದ ಸಂವೇದನೆ ಇದೆ. ಸಂಸ್ಕೃತಿಯ ಒಳನೋಟಗಳಿದ್ದು, ಇವು ವೈಜ್ಞಾನಿಕತೆಯಿಂದ ಕೂಡಿವೆ. ಕನ್ನಡದ ಬೇರೆ, ಬೇರೆ ಗಾದೆಗಳ ಸಂಗ್ರಹಕ್ಕೆ ಇವು ಆಕರ ಗ್ರಂಥಗಳಾಗಿ ಸಹಾಯಕ್ಕೆ ನಿಲ್ಲಬಲ್ಲವು.

ರಾ. ನ. ನಿರಂಜನ

೬೩. ಕನ್ನಡ ನಾಡಿನ ಗಾದೆಗಳ ಸಂಕಲನಗಳು

ಸಮಗ್ರ ಕನ್ನಡದ ಗಾದೆಗಳು, ಸಂಪುಟ–೪, ಪ್ರಧಾನ ಸಂಪಾದಕರು: ಡಾ. ಕೆ.ಎನ್. ಗಂಗಾನಾಯಕ್, ಸಂಪಾದಕರು: ಡಾ. ಜಯಲಕ್ಷ್ಮೀ ಸೀತಾಪುರ, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦೦೦೬, ೨೦೧೨. ಪುಟ–೨೦+೪೨೦, ಬೆಲೆ ರೂ. ೩೦೦/-

ಸಮಗ್ರ ಕನ್ನಡದ ಗಾದೆಗಳು, ಸಂಪುಟ–೪ ಸಂಪುಟದ ರಚನೆಗೆ ಪ್ರಧಾನ ಸಂಪಾದಕ ರಾಗಿ ಡಾ. ಕೆ.ಎನ್. ಗಂಗಾನಾಯಕ್ ಅವರು, ಸಂಪಾದಕರಾಗಿ ಡಾ. ಜಯಲಕ್ಷ್ಮೀ ಸೀತಾಪುರರವರು, ಜೊತೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿವಿಧ ಸಂಶೋಧನಾ ವಿದ್ಯಾರ್ಥಿಗಳು ಕಾರ್ಯನಿರ್ವಹಿಸಿದ್ದಾರೆ. ಈ ಕೃತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಪ್ರಕಟಿಸಿದೆ(೨೦೧೨).

ಈ ಸಂಪುಟದಲ್ಲಿ ಒಟ್ಟು ೬೪೪೫ ಗಾದೆಗಳ ಸಂಗ್ರಹವಿದೆ. ಇವು 'ಅ'ಕ್ಷರಾದಿಯಲ್ಲಿ 'ಯ' ಕಾರದಿಂದ 'ಹ' ಕಾರದವರೆಗೂ ಇವೆ. ಈ ಸಂಪುಟದ ಪ್ರಾರಂಭದಲ್ಲಿ ಸಂಕ್ಷಿಪ್ತಾಕ್ಷರ ಸೂಚಿ ಇದೆ. ಕೊನೆಯಲ್ಲಿ ಅನುಬಂಧವಿದೆ. ಇಲ್ಲಿ ಅರ್ಥಕೋಶ ಹಾಗೂ ಸಂಪುಟಗಳಿಗೆ ಬಳಸಿಕೊಂಡಿರುವ ಗಾದೆಗಳ ಸಂಗ್ರಹಗಳ ಪುಸ್ತಕ ಪಟ್ಟಿ ಮತ್ತು ಅವುಗಳ ಲೇಖಕರ ವಿವರವಿದೆ. ಇದು ಗಮನಾರ್ಹ ಮತ್ತು ಅವಶ್ಯಕ. ಇಲ್ಲಿನ ಗಾದೆಗಳು ವಿವಿಧ ಲೇಖಕರ

ಗಾದೆಗಳ ಸಂಗ್ರಹಗಳ ಪುಸ್ತಕಗಳಿಂದ ಹಾಗೂ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಗಾದೆಗಳಾಗಿವೆ. ಗಾದೆಗಳ ಮುಂದೆ ಆವರಣದಲ್ಲಿ ಈ ಗಾದೆಗಳು ಯಾವ ಲೇಖಕರ ಗಾದೆಗಳು ಎಂಬುದನ್ನು ತಿಳಿಸಲಾಗಿದೆ.

ಜನರ ದಿನನಿತ್ಯ ಜೀವನದಲ್ಲಿ ಭಾಷೆಯಂತೆಯೇ ಅನಿವಾರ್ಯವಾಗಿ, ಸಹಜವಾಗಿ, ಗಾದೆ ಬೆಳೆದು ಬಂದಿದೆ. ಇವು ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ಪ್ರಯೋಗ ವಾಗುತ್ತಿರುತ್ತವೆ. ನೂರು ಮಾತಿನ ಅರ್ಥವನ್ನು ಕೇವಲ ಒಂದು 'ಗಾದೆ ಮಾತು' ಹೇಳುತ್ತದೆ. ಅದೇ ಅದರ ವೈಶಿಷ್ಟ್ಯ. ಗಾದೆ ಅನುಭವಜನ್ಯವಾಗಿದೆ. ಕಡೆಗೆ ಅನುಭವವೇ ಒರೆಗಲ್ಲಾಗಿ ಸಾಕ್ಷಿಯಾಗಿ ನಿಂತುಕೊಳ್ಳುತ್ತದೆ.

ಸೃಷ್ಟಿಯ ಹೊಳೆಯು ಹೊಳೆಯನ್ನು ತುಂಬಿಕೊಳ್ಳದೆ ನಿರ್ಮಲವಾಗಿ ಹರಿಯುತ್ತಿದೆ. ವೇದಗಳು ಚಂದ್ರನಂತೆ ಕಾಂತಿಯನ್ನು ಕಳೆದುಕೊಳ್ಳುತ್ತವೆ. ಮತ್ತೆ ಪಡೆದುಕೊಳ್ಳುತ್ತವೆ. ಗಾದೆಗಳು ನೀಲಿಯಾಗಸದ ಚುಕ್ಕೆಗಳಂತೆ ಸ್ವಯಂ ಪ್ರಭೆಯುಳ್ಳ ಶಕ್ತಿಯನ್ನು ಗಳಿಸಿಕೊಂಡಿವೆ. ಗ್ರಾಮ ವಾಸಿಗಳನ್ನು ಆಳುತ್ತಿದ್ದುದು ಜನಪದ ಸಾಹಿತ್ಯವೆ. ಅವರ ಜೀವನ ಸಮಸ್ತವನ್ನು ಇನ್ನಿಲ್ಲದ ರೀತಿಯಲ್ಲಿ ಸಲಹಿದ್ದು, ಅವರ ಕಣ್ಣೀರಿಗೆ ಪನ್ನೀರಾದದ್ದೂ ಇದೆಯೇ. ಇವು ಅವರ ಸೃಷ್ಟಿ ಶಕ್ತಿಗೆ, ಅನ್ಯಾದೃಶ್ಯ ಅನುಭವ ಜಗತ್ತಿಗೆ ದೀಪಸ್ತಂಭಗಳಾಗಿವೆ.

ಗಾದೆಗಳು ನಮ್ಮ ನಾಡಿನ ಭಾಷೆ, ಸಾಹಿತ್ಯ, ಸಮಾಜ, ಸಂಸ್ಕೃತಿ, ಪರಂಪರೆ, ಚರಿತ್ರೆ, ಪುರಾಣ, ಭೂಗೋಳ, ಜಾತಿ, ಕಸುಬು, ಕೃಷಿ, ಜಾತ್ರೆ, ಹಬ್ಬ, ನಂಬಿಕೆ, ಆಚರಣೆ, ಸಂಪ್ರದಾಯ, ಮದುವೆ, ಮುಂಜಿ, ಊಳಿಗಮಾನ್ಯ ಪದ್ಧತಿ, ವೈದ್ಯ, ಹುಟ್ಟು–ಸಾವಿನಂತಹ ಮಾನವ ಬುದುಕಿನ ನೂರಾರು ವಾಸ್ತವಿಕ, ಪ್ರಸ್ತುತ ಸನ್ನಿವೇಶಗಳ ವಿವರಗಳನ್ನು ತೆರೆದಿಡುತ್ತವೆ. ಪ್ರಾದೇಶಿಕ ಜಾನಪದದ ಮಹತ್ವವನ್ನು ಅದರ ವಿಭಿನ್ನ ಮಗ್ಗುಲುಗಳನ್ನು ಇಲ್ಲಿಯ ಗಾದೆಗಳು ಬಹಳ ಸೂಕ್ಷ್ಮವಾಗಿ ತಿಳಿಯಪಡಿಸಿವೆ. ಕೃಷಿ ಆಧಾರಿತ ಸಮಾಜದ ಎಲ್ಲ ಪಾರಂಪರಿಕ ಜ್ಞಾನ ಪದ್ಧತಿಗಳನ್ನು ಅವುಗಳ ತಾಂತ್ರಿಕತೆ ಗಳನ್ನು, ಬೇಟೆಗಾರಿಕೆಯ ನೈಪುಣ್ಯತೆಗಳನ್ನು, ಗ್ರಾಮಜೀವನದ ಗೌಡ, ಪಟೇಲ, ಶಾನುಭೋಗ, ಕುಲಪುರೋಹಿತ, ಶೆಟ್ಟಿ, ಯಜಮಾನ ಮುಂತಾದವರ ಗತ್ತು, ಗಮ್ಮತ್ತು, ಅವರ ಆಡಳಿತಾತ್ಮಕ ಧೋರಣೆ, ಜವಾಬ್ದಾರಿತನದ ನಡಾವಳಿಗಳು, ಜನಪದ ಆಯಗಾರರ ನಿಷ್ಠೆ ಮತ್ತು ಪ್ರಾಮುಖ್ಯತೆಯ ವಿವರಗಳನ್ನು ಕೊಡುವಂತಹ ಸಾವಿರಾರು ಗಾದೆಗಳು ಈ ಸಂಪುಟಕ್ಕೆ ಜೀವ ನೀಡಿವೆ. ಇಲ್ಲಿನ ಗಾದೆಗಳನ್ನು ಭಾಷಿಕನೆಲೆಯ ಗಾದೆಗಳು, ಸಾಹಿತ್ಯಕ ಮೌಲ್ಯದ ಗಾದೆಗಳು, ವೃತ್ತಿಗಾದೆಗಳು, ಜಾತಿ–ಸಮುದಾಯದ ಗಾದೆಗಳು, ಸ್ತ್ರೀಯರ ಗಾದೆಗಳು, ಹಾಸ್ಯಮಯ ಗಾದೆಗಳು, ಕಥೆಯ ಹಿನ್ನೆಲೆಯ ಗಾದೆಗಳು, ಕುಟುಂಬದ ಗಾದೆಗಳು, ವಿವಿಧ ವಸ್ತುಗಳಿಗೆ ಸಂಬಂಧಿಸಿದ ಗಾದೆಗಳು, ವ್ಯಕ್ತಿಸಂಬಂಧದ ಗಾದೆಗಳು ಇನ್ನೂ ಮುಂತಾಗಿ ವಿಂಗಡಿಸಿ ಪ್ರಕಟಿಸಲು ಅವಕಾಶವಿದೆ.

ಕೆಲವು ಗಾದೆಗಳನ್ನು ಗಮನಿಸೋಣ.

* ಯಾವ ಕಾಲು ಮುರಿದ್ದರೂ ಸೊಂಟಕ್ಕೆ ಊನ
* ಯಜಮಾನ ಇಲ್ಲದ ಮನೆ ಬಜಾರ್ ಆಗ್ಯೆತೆ
* ರವಿ ಕಾಣದ್ದನ್ನು ಕವಿ ಕಂಡ
* ರಟ್ಟೆ ಮುರಿದು ರಟ್ಟಿ ತಿನ್ನು ಕಟ್ಟೆಹಾಕಿ ಅನ್ನ ಉಣ್ಣು
* ರಾಗಿಕಲ್ಲು ಬೀಸುತ್ತಿದ್ದರೆ ರಾಜ್ಯವೆಲ್ಲ ನೆಂಟರು
* ಸಂಕಟ ಬಂದಾಗ ವೆಂಕಟರಮಣ
* ಹಾಕ್ಮಣೆ ನೂಕ್ಮಣೆ ಯಾಕ್ಮಣೆ
* ಹೂವಿಂದ ನಾರು ಸ್ವರ್ಗ ಸೇರಿತು
* ಹುಟ್ಟುಗುಣ ಸುಟ್ಟರೂ ಹೋಗದು
* ಹಾಸಿಗೆ ಇದ್ದಷ್ಟು ಕಾಲು ಚಾಚು
* ಹೋದೆಯ ಪಿಶಾಚಿ ಅಂದ್ರೆ ಬಂದೆ ಗವಾಕ್ಷಿಲಿ ಅಂತ
* ಹೊಟ್ಟೆ ತಂಬಾ ಊಟ, ಕಣ್ಣು ತುಂಬ ನಿದ್ದೆ

ಈ ಪ್ರತಿ ಗಾದೆಗಳ ಹಿಂದೆ ಒಂದು ಇತಿಹಾಸವಿದೆ. ಒಂದು ಉದ್ದೇಶವಿದೆ. ಒಂದು ಸಿದ್ಧಾಂತವಿದೆ. ಒಂದು ತತ್ವವಿದೆ. ಜನಸಾಮಾನ್ಯರ ಲೋಕಾನುಭವ ಗಾದೆಗಳಲ್ಲಿ ಇಳಿದು ಬಂದಿದೆ. ಹದಗೆಡುತ್ತಿರುವ ನೈತಿಕ, ಧಾರ್ಮಿಕ, ಸಾಮಾಜಿಕ, ಆಚಾರ–ವಿಚಾರಗಳನ್ನು ತಿದ್ದಿಕೊಂಡು ಸನ್ಮಾರ್ಗದತ್ತ ಸಾಗು ಎಂದು ಹೇಳುವ ಈ ಗಾದೆಗಳು ಗಣನೆಗೆ ನಿಲುಕದಷ್ಟು ಅಮೋಘ. ಇಂತಹ ಗಾದೆಗಳು ಒಂದೇ ಕಡೆ ಸಮಗ್ರವಾಗಿ ದೊರಕಲು ಕಾರಣರಾದ ಎಲ್ಲರನ್ನು ಈ ಸಂದರ್ಭದಲ್ಲಿ ಅಭಿನಂದಿಸಲೇಬೇಕಾಗಿದೆ. ಇವು ಮುಂದಿನ ಅಧ್ಯಯನಕ್ಕೆ ಅವಕಾಶದ ಬಾಗಿಲನ್ನು ತೆರೆದಿಟ್ಟಿವೆ.

ರಾ. ನ. ನಿರಂಜನ

೬೪. ಕುಡಿಯನ ಕಣ್ಣ್

ಕುಡಿಯನ ಕಣ್ಣ್(ತುಳು ಯಕ್ಷಗಾನ ಅರ್ಥ ಸಹಿತ), ಬೊಟ್ಟಿಕೆರೆ ಪುರುಷೋತ್ತಮ ಪೂಂಜ, ಪ್ರ. ಕಲಾಗಂಗೋತ್ರಿ ಯಕ್ಷಗಾನ ಕೇಂದ್ರ(ರಿ), ಸೋಮೇಶ್ವರ–ಉಚ್ಚಿಲ, ಮಂಗಳೂರು, ದಕ್ಷಿಣ ಕನ್ನಡ. ೨೦೧೨, ಪುಟ–೧೦+೮೬, ಬೆಲೆ ರೂ. ೫೦/-

ಶ್ರೀ ಬೊಟ್ಟಿಕೆರೆ ಪುರುಷೋತ್ತಮ ಪೂಂಜ ವಿರಚಿತ ಸಂಭಾಷಣೆ ಸಹಿತ ತುಳು ಯಕ್ಷಗಾನ ಪ್ರಸಂಗ, ಕುಡಿಯನ ಕಣ್ಣ್. ಒಂದು ಉತ್ತಮ ಯಕ್ಷಗಾನ ಪ್ರಸಂಗ ರಚನೆ. ಶ್ರೀಯುತರು ಈಗಾಗಲೇ ಹಲವಾರು ಪ್ರಸಿದ್ಧ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ.

'ಕುಡಿಯನ ಕಣ್ಣ್' ಅಂದರೆ ಕುಡಿಯನ ಕಣ್ಣು ಎಂದರ್ಥ. ಇದರ ಮೂಲ ಕಥೆ ಕನ್ನಡದ ಪ್ರಸಿದ್ಧ ಸಿನಿಮಾ ಬೇಡರ ಕಣ್ಣಪ್ಪ ಕನ್ನಡದ ವರನಟ ಡಿ. ರಾಜಕುಮಾರ್ ಚಲನಚಿತ್ರರಂಗ ಪ್ರವೇಶ ಮಾಡಿದ ಮೊದಲ ಚಿತ್ರವೆಂದೇ ಪ್ರಸಿದ್ಧವಾಗಿದೆ. ಈ ಕಥೆಯ ಮೂಲ ತಮಿಳು ಭಾಷೆಯಲ್ಲಿದೆ ಎನ್ನುವ ಪ್ರತೀತಿ ಇದೆ.

ದಿಣ್ಣೆ ಅಥವಾ ಕಣ್ಣಪ್ಪರ್ ಒಬ್ಬ ಕುಶಲ ಬೇಟೆಗಾರ. ಹುಟ್ಟಿನಲ್ಲಿ ಕೆಳಜಾತಿಗೆ ಸೇರಿದರೂ, ಅಕ್ಷರಾಭ್ಯಾಸ, ನಾಗರಿಕತೆಯ ಗಂಧಗಾಳಿ ಇಲ್ಲದಿದ್ದರೂ ಇವೆಲ್ಲವನ್ನು ಮೀರಿ ಶಿವನ ಮೇಲೆ ನಿರ್ಮಲ ಪ್ರೀತಿ ಮತ್ತು ಭಕ್ತಿಯನ್ನು ಇಟ್ಟುಕೊಂಡವನು. ಹಣ್ಣುಕಾಯಿ, ಹೂವು ಗಂಧಗಳ ಅಗತ್ಯವಿಲ್ಲದೆ, ತನ್ನ ಬಾಯಿಂದ ನೀರು ತುಂಬಿಕೊಂಡು ಶಿವನಿಗೆ ಧಾರೆಯೆರೆದು, ಬೇಟೆಯಾಡಿದ ಹಂದಿ ಇತ್ಯಾದಿ ಪ್ರಾಣಿಗಳನ್ನು ಶ್ರದ್ಧೆಯಿಂದ ಬಡಿಸಿ, ಅರ್ಪಿಸಿ ಅದನ್ನು ಶಿವನು ಸ್ವೀಕರಿಸುತ್ತಾನೆಂದು ರಾತ್ರಿಗಳನ್ನು ಗುಡಿಯಲ್ಲಿ ಕಳೆದು, ದೇವಾಲಯದ ಅರ್ಚಕನನ್ನೆ ಪೂಜೆಯಲ್ಲಿ ಮೀರಿಸಿ ಶಿವನನ್ನು ಗೆದ್ದವನು. ದಿಣ್ಣೆ ಯಾವುದೇ ಸಂಪ್ರದಾಯ ಕ್ರಮಗಳಿಂದ, ಮಡಿವಂತಿಕೆಯಿಂದ ದೇವರನ್ನು ಮೆಚ್ಚಿಸಲು ಯತ್ನಿಸಲಿಲ್ಲ. ತನ್ನ ಮನದಾಳದ ಭಕ್ತಿಯಿಂದ ಊರ ಜನರ, ಮಡಿವಂತರ ಭ್ರಮೆಯನ್ನು, ಜಾತಿ ಪದ್ಧತಿಯ ನಂಬಿಕೆಯನ್ನು ಹುಸಿಗೊಳಿಸಿದ.

ಈ ಕಥೆಯಲ್ಲಿ ಜಾತಿ ಧರ್ಮಕ್ಕಾಗಿ ಹೊಡೆದಾಡುವ ಈ ಪ್ರಸ್ತುತ ಸಮಾಜಕ್ಕೆ ಒಂದು ನೀತಿಯಿದೆ. ಜಾತಿ ಮನುಷ್ಯನ ಸೃಷ್ಟಿ. ದೇವರಿಗೆ ಎಲ್ಲಾ ಒಂದೇ. ಆಡಂಬರದ ಪೂಜೆ ದೇವರಿಗೆ ಅಗತ್ಯವಿಲ್ಲ. ತನ್ನ ಪ್ರೀತಿಯಿಂದ, ನಡವಳಿಕೆಯಿಂದ ದೇವರನ್ನು ಯಾರೂ ಸಹ ಮೆಚ್ಚಿಸಬಹುದು. ಲೇಖಕರು ದಕ್ಷಿಣ ಕನ್ನಡದಲ್ಲಿರುವ ಜಾತಿ ವ್ಯವಸ್ಥೆಯನ್ನು ಅದಕ್ಕನುಗುಣವಾಗಿ ಮಾತನಾಡುವ ತುಳು ಭಾಷೆಯನ್ನು ಸೂಕ್ಷ್ಮವಾಗಿ ಬಳಸಿದ್ದಾರೆ. ಪುರೋಹಿತ ಕೈಲಾಸಶಾಸ್ತ್ರೀ, ಮಡದಿ ಗೌರಿ ಮತ್ತು ಮಗ ಕಾಶಿ ಮಾಣಿ ಮಾತನಾಡುವ ಬ್ರಾಹ್ಮಣ ತುಳು ಮತ್ತು ಉಳಿದ ಪಾತ್ರಗಳು ಮಾತನಾಡುವ ಸಾಮಾನ್ಯ ಆಡುಭಾಷೆಯ ತುಳು, ಈ ನಾಡಿನ ಸಮಾಜವನ್ನು ಅರ್ಥಪೂರ್ಣವಾಗಿ ಬಿಂಬಿಸುತ್ತದೆ. ಅಂತಿಮವಾಗಿ, ಜಾತಿಗೋಡೆಗಳ ಅಗತ್ಯವಿಲ್ಲ; ಮನುಷ್ಯರೆಲ್ಲಾ ಒಂದೆ ಎನ್ನುವ ಒಮ್ಮತದೊಂದಿಗೆ ಲೇಖಕರು ಈ ಪ್ರಸಂಗವನ್ನು ಕೊನೆಗೊಳಿಸುತ್ತಾರೆ.

ಶ್ರೀ ಪೂಂಜರ ಈ ಕೃತಿಯ ವೈಶಿಷ್ಟ್ಯವೆಂದರೆ ಸಂಭಾಷಣೆ ರೂಪದ ಅರ್ಥಗಾರಿಕೆ ಸಮೇತ ಪ್ರಸಂಗ ರಚನೆ ಇದು. ಯಕ್ಷಗಾನ ಹವ್ಯಾಸಿ ಕಲಾವಿದರಿಗೆ ಮಾತ್ರವಲ್ಲದೆ, ಯಕ್ಷಗಾನ ವಿದ್ಯಾರ್ಥಿಗಳಿಗೆ ಸುಲಭ ಮತ್ತು ಸರಳ ಮಾರ್ಗದರ್ಶಿ. ಪೂಂಜರು ಕನ್ನಡದ ಪ್ರಸಂಗದ ರೀತಿಯಲ್ಲೆ ಈ ಪ್ರಸಂಗ ವಿರಚಿತವಾಗಿದ್ದರೂ, ಸಾಂದರ್ಭಿಕವಾಗಿ ಮತ್ತು ಪ್ರಾದೇಶಿಕ ಸಂಸ್ಕೃತಿಯಂತೆ ಕೆಲವು ಸೂಕ್ಷ್ಮ ಪರಿವರ್ತನೆಗಳನ್ನು, ಬದಲಾವಣೆಗಳನ್ನು ಮಾಡಿದ್ದಾರೆ.

ಮೊದಲೇ ಹೇಳಿದಂತೆ ಈ ಪ್ರಸಂಗದ ಮುಖ್ಯ ತಿರುಳು ಏನೆಂದರೆ ಪ್ರಸ್ತುತ ಸಮಾಜದಲ್ಲಿ ಬೇರುಬಿಟ್ಟಿರುವ ಜಾತಿಭೇದ ಅನಗತ್ಯ ಎನ್ನುವ ಸಂದೇಶ. ಅಮೃತ

ಸೋಮೇಶ್ವರರು ಮುನ್ನುಡಿಯಲ್ಲಿ ಹೇಳಿರುವಂತೆ, ಸಮಾಜದ ಕೆಳವರ್ಗಕ್ಕೆ ಸೇರಿದ ಕುಡಿಯರ ಜನಾಂಗದ ಕಣ್ಣಪ್ಪ ಅಥವಾ ದಿಣ್ಣೆ, ಶಿವನಿಗೆ ತನ್ನ ಕಣ್ಣನ್ನೇ ಕಿತ್ತು ಅರ್ಪಿಸುವುದರ ಮೂಲಕ ಮನುಕುಲಕ್ಕೆ ಕಣ್ಣಾಗಿದ್ದಾನೆ. ಶ್ರೀ ಪೂಂಜರು ಹೇಳುವಂತೆ ಭಾರತೀಯ ಇತಿಹಾಸದಲ್ಲಿ ಬಹಳ ಪ್ರಭಾವ ಮಾಡಿರುವ ಜಾತಿಪದ್ಧತಿಯನ್ನು ಮೆಟ್ಟಿ ನಿಲ್ಲಲು ವಿಷಕಂಠನಾದ ಶಿವನೇ ಸಮರ್ಥ ಎನ್ನುವುದು ಅವರ ಆಶಯ, ಒಟ್ಟಿನಲ್ಲಿ ಈ ಪುಸ್ತಕ ಯಕ್ಷಗಾನ ಪ್ರೇಮಿಗಳಿಗೆ ಮತ್ತು ಕಲಾವಿದರಿಗೆ ಒಂದು ಉತ್ತಮ ಉಡುಗೊರೆ.

ಪ್ರೊ. ಜ್ಯೋತಿ

೭೫. ಅನುಪಮ ಸಾಧನೆಯ ಗಾಯಕ ಸೋಮಲಿಂಗ ಕವಿ

ಶತಮಾನ ಕಂಡ ಸೋಮಲಿಂಗ ಕವಿಯ ಲಾವಣಿಗಳು, ಸಂ.ಡಾ.ಸಿ.ಕೆ.ನಾವಲಗಿ,
ಆನಂದ ಪ್ರಕಾಶನ, ಬೈಲಹೊಂಗಲ, ಬೆಳಗಾವಿ ಜಿಲ್ಲೆ, ೨೦೧೨,
ಪುಟ–೨೦+೧೫೦, ಬೆಲೆ ರೂ. ೧೫೦/-

ಲಾವಣಿಗಳು ಜನಪದ ಸಾಹಿತ್ಯದ ವಿಶಿಷ್ಟ ಪ್ರಕಾರ. ಗೀಗೀ(ಜನಪದದ ತನಿರಸದ ಸವಿಯನ್ನು ಹೊತ್ತ ಹಂದರ ಈ ಲಾವಣಿಗಳು) ಪದ, ಲಾವಣಿಗಳ ವಸ್ತು, ಉದ್ದೇಶದಲ್ಲಿ ಒಂದೇ ಆಗಿದ್ದರೂ ಹಾಡುವ ರೀತಿಯಲ್ಲಿ ವಿಭಿನ್ನವಾದವು. ಲಾವಣಿಗಳನ್ನು ಯಾವುದೇ ವಾದ್ಯಗಳ ನೆರವನ್ನು ಪಡೆಯದೆ ಒಬ್ಬರೇ ಹಾಡುತ್ತಾರೆ. ಲಾವಣಿಯ ಪ್ರಭಾವ ಗೀ ಗೀ ಪದದ ಮೇಲಾಗಿದ್ದರೂ ಲಾವಣಿ ಯಾವುದೇ ಅನುಕರಣೆ, ಪ್ರಭಾವವಿಲ್ಲದೆ ಸ್ವಂತಿಕೆಯನ್ನು ಉಳಿಸಿಕೊಂಡಿದೆ. ಈ ಜನಪದ ಪ್ರಕಾರ ಪ್ರಾರಂಭವಾಗಿದ್ದು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಜನರಲ್ಲಿ ಸ್ವಾತಂತ್ರ್ಯದ ಕಿಚ್ಚು ಹೋರಾಟದ ರೂಪದಲ್ಲಿ ಒಗ್ಗಟ್ಟಾಗಿ ಭಾಗವಹಿಸುವುದಕ್ಕೆ ಲಾವಣಿಗಳ ಪ್ರಭಾವ ಹೆಚ್ಚು. ಊರಿಂದೂರಿಗೆ ಸಂಚರಿಸುತ್ತಾ ಚಳುವಳಿಕಾರರು ಸ್ವಾತಂತ್ರ್ಯದ ಜಾಗೃತಿಗೆ ಲಾವಣಿ ಬಳಸಿದರು. ಇಂತಹ ಲಾವಣಿಗಳನ್ನು ರಚಿಸಿ ಹಾಡಿ, ಜನಮಾನಸದಲ್ಲಿ ಶತಮಾನಗಳ ಕಾಲ ಬಾಳಿ ಬದುಕಿದ ಸೋಮಲಿಂಗ ಕವಿಯ ಲಾವಣಿಗಳು ಕನ್ನಡ ಸಾಹಿತ್ಯಕ್ಕೆ ಜನಪದ ಕಾವ್ಯ ಪ್ರಕಾರಕ್ಕೆ ನೀಡಿರುವ ವಿಶಿಷ್ಟ ಕೊಡುಗೆ.

"ಶತಮಾನ ಕಂಡ ಸೋಮಲಿಂಗ ಕವಿಯ ಲಾವಣಿಗಳು" ಈ ಪುಸ್ತಕದಲ್ಲಿ ಸೋಮಲಿಂಗ ಕವಿಯ ಸ್ವರಚನೆಯ ಲಾವಣಿಗಳನ್ನು ಒಂದು ಕಡೆ ಸಂಗ್ರಹಿಸಿ ಉಳಿಸುವಂತಹ ಕೆಲಸವನ್ನು ಮಾಡಿರುವ ಸಂಪಾದಕರಾದ ಡಾ.ಸಿ.ಕೆ.ನಾವಲಗಿ ಅವರ ಕಾರ್ಯ ಮಹತ್ವದ್ದು.

ಈ ಪುಸ್ತಕದಲ್ಲಿ ೧೧೦ ಲಾವಣಿಗಳಿದ್ದು, ಎಲ್ಲವನ್ನೂ ಪ್ರತ್ಯೇಕವಾಗಿ ವಿಂಗಡಿಸಿ, ಉತ್ತರ ಕನ್ನಡ ಜಿಲ್ಲೆಯ ಭಾಷೆಯ ಗಟ್ಟಿತನವನ್ನು ಸರಳಗೊಳಿಸಿ ಅರ್ಥವಾಗುವಂತಹ ಶಬ್ದಕೋಶವೂ ಇದೆ. ಸೋಮಲಿಂಗರು ತಾವೇ ಸ್ವತಃ ರಚಿಸಿ ಹಾಡುತ್ತಿದ್ದರು. ತಾಳ

ಲಯಕ್ಕನುಗುಣವಾಗಿ ಸಂಗೀತಮಯವಾದ ಸದೃಢ ಕಂಠ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಸರಕಾರದ ಹಲವು ಯೋಜನೆಗಳ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದ ಸೋಮಲಿಂಗ ಕವಿಗಳು ಲಾವಣಿಗಳ ರಚನೆ ಹೆಚ್ಚಾಯಿತು. ಇವು ಸ್ವಾತಂತ್ರ್ಯದ ಕಾಲಕ್ಕೆ ಸಂಬಂಧಿಸಿದವು. ಇವರ ರಚನೆ, ಹಾಡುಗಾರಿಕೆಯಿಂದ ಜನರಲ್ಲಿ ಹೋರಾಟದ ಜಾಗೃತಿ ಮೂಡಿಸುವಲ್ಲಿ ಸಫಲತೆ ಹೊಂದಿತ್ತು. ಕನ್ನಡ, ಹಿಂದಿ ದೇಶಭಕ್ತಿಗಳನ್ನು ಲಯಬದ್ಧವಾಗಿ ದೇಸಿ ಸೊಗಡಿನಲ್ಲಿ ಹಾಡುತ್ತಿದ್ದರು.

ಇವರ ಲಾವಣಿಗಳು ದೇಶಭಕ್ತಿಗೀತೆ, ನೀತಿಗೀತೆ, ಪೌರಾಣಿಕ, ಆದರ್ಶವ್ಯಕ್ತಿಗಳು, ಆರೋಗ್ಯ, ಶಿಕ್ಷಣ, ಸ್ವಚ್ಛತೆ, ಮದ್ಯಪಾನ, ಸ್ವಾತಂತ್ರ್ಯ ಹೋರಾಟಗಾರರು, ರಾಜರು, ಇತಿಹಾಸಕ್ಕೆ ಸೇರಿದ ಮಹಾನ್ ವ್ಯಕ್ತಿಗಳನ್ನು ಕುರಿತಂತೆ ಇವರ ರಚನೆ ಅಪಾರವಾದದ್ದು. ಸುಮಾರು ೨೦೦ಕ್ಕೂ ಹೆಚ್ಚು ಲಾವಣಿಗಳನ್ನು ಹಾಡಿದ್ದಾರೆ. ಗೀಗೀ ಪದ, ಬೀಸುವಕಲ್ಲು, ಭಲೋರಿ ಹಾಡು, ಸೋಬಾನೆ ಹಾಡು, ಹಂತಿ ಪದ, ಭಜನಾಪದ, ತತ್ವಪದ, ರಂಗಗೀತೆಗಳನ್ನು 'ಗರಗದ ಮಡಿವಾಳ ಸ್ವಾಮಿಯ' ಅಂಕಿತದಲ್ಲಿ ಬರೆದಿದ್ದಾರೆ.

ಸೋಮಲಿಂಗ ಕವಿಗಳು ಸ್ವಾತಂತ್ರ್ಯ ಹೋರಾಟಗಾರರಾಗಿ, ಅಪ್ಪಟ ಗಾಂಧಿವಾದಿಗಳಾಗಿ ಜನಪದಗೀತೆ, ಗೀಗೀ ಮೇಳದ ಪ್ರಚಾರದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಂಡರು. ಆಶುಕವಿಗಳಾಗಿ ಶತಮಾನಗಳ ಕಾಲ ಬಾಳಿ ಬದುಕಿ, ಜೀವನ ಪ್ರೀತಿಯನ್ನು ಉಳಿಸಿಕೊಂಡು ಶತಾಯುಷಿಗಳಾಗಿ ಅವರ ಸಾಧನೆಯ ಮಹತ್ವವನ್ನು ಪಡೆದ ಪ್ರಶಸ್ತಿ, ಗೌರವಗಳನ್ನು ಪಡೆದಿದ್ದಾರೆ. ಜನಪದ ಕಾವ್ಯ ಸೊಬಗನ್ನು ಶತಮಾನಗಳ ಕಾಲ ಬೆಳೆಸಿದ ಹಿರಿಯ ಚೇತನದ ಕವಿ, ಲಾವಣಿಕಾರ ಸೋಮಲಿಂಗರ ಜೀವನ-ಸಾಧನೆಯನ್ನು ಹಾಗೂ ಅತ್ಯುತ್ತಮ ಸಂಗ್ರಹವನ್ನು ಒಳಗೊಂಡಿರುವ ಉತ್ತಮ ಪುಸ್ತಕವಾಗಿದೆ. ಕಳೆದು ಹೋಗುತ್ತಿರುವ ಲಾವಣಿ ಪದಗಳ ಸಂಗ್ರಹವನ್ನು ಸಂಪಾದಿಸಿರುವ ಲೇಖಕರ ಕಾರ್ಯ ಸ್ತುತ್ಯರ್ಹ.

ಸುಶೀಲ ಸದಾಶಿವಯ್ಯ

೬೬. ಹಾಲುಮತದ ಸಾಂಸ್ಕೃತಿಕ ವೀರ ಬೀರೇಶ್ವರನ ಚರಿತ್ರೆ

ಬೀರೇಶ್ವರನ ಚರಿತ್ರೆ, ಸಂ.ಡಾ.ಎಫ್.ಟಿ.ಹಳ್ಳಿಕೇರಿ, ಹಾಲುಮತದ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ. ಪ್ರಕಾಶ ನಗರ, ಹೊಸಪೇಟೆ-೫೮೩೨೦೧, ೨೦೧೨, ಪುಟ-೧೦+೪೦, ಬೆಲೆ ರೂ. ೬೦/-

ಸಮಗ್ರ ಭಾರತದ ಸಂಸ್ಕೃತಿಯನ್ನು, ಚರಿತ್ರೆಯನ್ನು ಅರಿಯಬೇಕಾದರೆ ಸ್ಥಳೀಯ, ಸಮುದಾಯ ಭಾಷೆ ಹೀಗೆ ವಿವಿಧ ಮಜಲುಗಳ ಜೊತೆಗೆ ತಳಮೂಲ ಸಂಸ್ಕೃತಿಯಾದ ಬುಡಕಟ್ಟು ಸಂಸ್ಕೃತಿಯ ಅಧ್ಯಯನವು ಅಗತ್ಯವಾಗಿದೆ. ಇಂತಹ ಬುಡಕಟ್ಟು

ಸಮುದಾಯಗಳಲ್ಲಿ ಕಂಡು ಬರುವ ಸಾಂಸ್ಕೃತಿಕ ವೀರರು ಆ ಸಮುದಾಯದ ವೀರ, ನಾಯಕ, ಆರಾಧ್ಯ ದೈವವಾಗಿ ಇರುವುದು ವೇದ್ಯವಾಗುತ್ತದೆ. ಇಂತಹ ಸಾಂಸ್ಕೃತಿಕ ನಾಯಕರ ಚರಿತ್ರೆಯನ್ನು ಕಟ್ಟಿಕೊಳ್ಳುವುದರ ಮೂಲಕ ಆ ಸಮುದಾಯಗಳು ತಮ್ಮ ಚರಿತ್ರೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದರ ಜೊತೆಗೆ ತಮ್ಮ ಕುಲದ ಆಚರಣೆ, ನಂಬಿಕೆ, ಆಚಾರ-ವಿಚಾರಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವ ಕೆಲಸ ಮಾಡುತ್ತಿದೆ.

ಜುಂಜಪ್ಪ, ಎತ್ತಪ್ಪ, ಮೈಲಾರಲಿಂಗ, ಮಾದೇಶ್ವರ, ಮಂಟೇಸ್ವಾಮಿ, ಈರಣ್ಣ ಮುಂತಾದ ಎಲ್ಲಾ ಸಾಂಸ್ಕೃತಿಕ ನಾಯಕರಂತೆ ಹಾಲುಮತ ಕುರುಬರ ಪ್ರಮುಖ ಸಾಂಸ್ಕೃತಿಕ ನಾಯಕ ಕುಲದೈವ ಬೀರೇಶ್ವರ(ಬೀರಪ್ಪ). ಈತನ ಚರಿತ್ರೆ ಹಾಲುಮತ ಕಾವ್ಯ, ಪುರಾಣ ಹಾಗೂ ಡೊಳ್ಳಿನ ಹಾಡುಗಳಲ್ಲಿ ವರ್ಣರಂಜಿತವಾಗಿ ಚಿತ್ರಿತಗೊಂಡಿದೆ. ಈ ಚರಿತ್ರೆಯನ್ನು ಹಾವೇರಿ ಜಿಲ್ಲೆಯ ಬಂಕಾಪುರ ಗ್ರಾಮದ ಹಾಲುಮತಸ್ಥರು ಹಾಗೂ ಆ ಸಮುದಾಯದ ಏಳಿಗೆಗೆ ಶ್ರಮಿಸಿದ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿಯವರು ೧೯೫೮ರಲ್ಲಿ ಮೊದಲ ಬಾರಿಗೆ ಗದ್ಯರೂಪದಲ್ಲಿ ರಚಿಸಿದ್ದಾರೆ. ಈ ಮೂಲಕ ಬೀರಪ್ಪನ ಚರಿತ್ರೆಯನ್ನು ಮೊದಲ ಬಾರಿಗೆ ರಚಿಸಿದ ಕೀರ್ತಿ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿಯವರ ದಾಗಿದೆ. ಇಷ್ಟೆ ಅಲ್ಲದೆ ೧೯೧೦ರಲ್ಲಿ ಹಾಲುಮತ ಪುರಾಣವನ್ನು ಸಂಗ್ರಹಿಸಿ ಪ್ರಕಟಿಸಿದರು. ನಂತರ ಅದೇ ಕೃತಿಯನ್ನು ೧೯೫೨ರಲ್ಲಿ ಪರಿಷ್ಕರಿಸಿ ಪುನರ್ ಪ್ರಕಟಿಸಿರುವುದನ್ನು ನೆನೆಯಬಹುದಾಗಿದೆ. ಬಸವಣ್ಣೆಪ್ಪನವರ ಬೀರೇಶ್ವರನ ಚರಿತ್ರೆಯನ್ನು ಯಥಾವತ್ತಾಗಿ ಡಾ. ಎಫ್.ಟಿ. ಹಳ್ಳಿಕೇರಿಯವರು ಸಂಪಾದಿಸಿ ಹಾಲುಮತ ಸಂಸ್ಕೃತಿ, ಸಂಶೋಧನ ಪ್ರತಿಷ್ಠಾನ ಪ್ರಕಾಶನದಲ್ಲಿ ೨೦೧೨ರಲ್ಲಿ ಪ್ರಕಟಗೊಳಿಸಿದ್ದಾರೆ.

ಹಾಲುಮತ ಕುರುಬರ ಆರಾಧ್ಯದೈವ, ಸಾಂಸ್ಕೃತಿಕ ನಾಯಕ ಬೀರೇಶ್ವರನನ್ನು ಬೀರಪ್ಪ, ಬೀರಲಿಂಗ, ಬೀರಲಿಂಗೇಶ್ವರ, ಕರಿಸಿದ್ಧ ಹೀಗೆ ನಾನಾ ರೀತಿಯಿಂದ ಕರೆಯಲಾಗುತ್ತಿದೆ. ಈ ಬೀರೇಶ್ವರನ ಚರಿತ್ರೆಯಲ್ಲಿ ಹಾಲುಮತ ಕುರುಬರ ಉತ್ಪತ್ತಿ ಕುರಿತು ಹೇಳುವ ಶಿವನ ಒಂದು ಅಂಶದಿಂದ ಹುಟ್ಟುವ ವೀರೇಶ್ವರ ಬೀರೇಶ್ವರ ನಾಗುವುದನ್ನು ಕಾಣಬಹುದಾಗಿದೆ. ಭೂಲೋಕದಲ್ಲಿ ಬಿಲ್ಲಾಸುರ ಎಂಬ ರಾಕ್ಷಸನು ಪಾರ್ವತಿಯಿಂದ ಅಜೇಯ ವರ ಪಡೆದು ನರರನ್ನು, ದೇವತೆಗಳನ್ನು ಹಿಂಸಿಸುವಾಗ ವೀರೇಶ್ವರನ ಜನನವಾಗಿ ಆತ ಆ ಬಿಲ್ಲಾಸುರನನ್ನು ಸಂಹರಿಸಿದ ಕಾರಣದಿಂದ ಬೀರೇಶ್ವರನಾಗಿ ಕುರುಬರ ದೈವವಾಗುವುದನ್ನು ಕಾಣಬಹುದು. ಬೀರಪ್ಪನು ಅಕ್ಕ ಮಾಯವ್ವಳ ಪಾಲನೆ ಪೋಷಣೆಯಲ್ಲಿ ಬೆಳೆಯುತ್ತ ಮಾಳಿಂಗರಾಯನೆಂಬ ಶಿಷ್ಯನನ್ನು ಪಡೆದು ಅನೇಕ ಪವಾಡಗಳನ್ನು ಮಾಡುತ್ತ ತನ್ನ ಒಕ್ಕಲ(ಭಕ್ತ)ನ್ನು ಹೆಚ್ಚಿಸಿಕೊಳ್ಳುತ್ತ ಕುರುಬರ ಒಳಕುಲಗಳ(ಗೋತ್ರವ)ನ್ನು ವಿಂಗಡಿಸಿ ಕುಲಕ್ಕೆ ಒಂದು ಚೌಕಟ್ಟು ನಿರ್ಮಿಸುವಲ್ಲಿ ಚರಿತ್ರೆ ಸಾಗುತ್ತದೆ.

ಈ ಚರಿತ್ರೆಯಲ್ಲಿ ಬಿಲ್ಲಾಸುರನ ಜನನ, ಬಿಲ್ಲಾಸುರ ರಾಕ್ಷಸನ ದಿಗ್ವಿಜಯ, ವೀರೇಶ್ವರನ ಜನನ, ಬಿಲ್ಲಾಸುರನ ಮರಣ, ಹಾಲುಮತ ಕುರುಬರ ಉತ್ಪತ್ತಿ, ಬೀರೇಶನ ಜನನ, ಐದು ಮಂದಿ ದೇವಗನ್ನೆಯರ ಉದರದಿಂದ ಐದು ಹೆಣ್ಣು ಮಕ್ಕಳ ಜನನವಾದದ್ದು, ಹೇಮಣ್ಣನೆಂಬುವನಿಗೆ ಹೆಣ್ಣು ಕೂಸು ದೊರೆತಿದ್ದು, ಅಕ್ಕ ಮಾಯವ್ವನಿಗೆ ಬೀರೇಶನು ದೊರೆತದ್ದು, ಸುರನಾರಿಯು ಕುರಿಯಾಗಿ ಬೀರೇಶನಿಂದ ಶಾಪ ವಿಮೋಚನೆ ಆದದ್ದು, ಅನೇಕ ಪವಾಡ ಮಾಡಿ ಬೆಳ್ಳಗುತ್ತಿಗೆ ಹೋದದ್ದು, ಬೀರೇಶನ ವಿವಾಹವಾದದ್ದು, ಬೀರೇಶನು ಶಿಷ್ಯ ಮಾಳಿಂಗನನ್ನು ತರುವಿಕೆ, ಕುರಿಗಳ ಉತ್ಪತ್ತಿ, ತನ್ನ ಶಿಷ್ಯ ಮಾಳಿಂಗನನ್ನು ಪವಾಡ ಮಾಡಲು ಕಳುಹಿಸುವುದು, ಕುರುಬರ ಹನ್ನೊಂದು ಗೋತ್ರಗಳು ಉತ್ಪತ್ತಿ ಆದದ್ದು ಎಂಬ ಭಾಗಗಳಲ್ಲಿ ಬೀರೇಶ್ವರ ಚರಿತ್ರೆ ಬಿಚ್ಚಿಕೊಳ್ಳುತ್ತದೆ.

ಕುರುಬರ ಉತ್ಪತ್ತಿಯಲ್ಲಿ ಪಾರ್ವತಿಯ ಮೊಲೆಹಾಲು ಭೂಮಿಯಲ್ಲಿ ಹರಿದು ಹೋಗುವಾಗ ಪಾರ್ವತಿ ಆ ಹಾಲು ಮಣ್ಣಿನಿಂದ ಎರಡು ಉಂಡೆ ಮಾಡಿ ಶಿವನಿಂದ ಅದಕ್ಕೆ ಜೀವಕೊಟ್ಟು ಎರಡು ಜೀವಗಳನ್ನು ಸೃಷ್ಟಿಸಿ ಮುಂದೆ ಅವು ಹಾಲುಮತ ವಂಶವಾಗಿ ಬೆಳೆಯಿತು ಎಂಬ ಅಂಶವನ್ನು ಗಮನಿಸಿದಾಗ ಹಾಲಕ್ಕಿ ಒಕ್ಕಲಿಗರ ಉತ್ಪತ್ತಿ ಕೂಡ ಇಂಥದ್ದೇ ಸಾಮ್ಯತೆಯನ್ನು ಗುರುತಿಸಬಹುದು. ಉಳುಮೆ ಮಾಡುತ್ತಿದ್ದ ಶಿವನಿಗೆ ಪಾರ್ವತಿ ಹಾಲು ಅನ್ನ ಬುತ್ತಿ ತೆಗೆದುಕೊಂಡು ಹೋಗುವಾಗ ಆ ಹಾಲು ಅನ್ನ ಭೂಮಿಯ ಮೇಲೆ ಚೆಲ್ಲಿದಾಗ ಅದನ್ನು ಎರಡು ಉಂಡೆ ಮಾಡಿ ಜೀವ ತುಂಬಿ ಅವು ಹಾಲಕ್ಕಿ ವಂಶವಾಗಿ ಬೆಳೆಯಿತು ಎಂಬ ಅಂಶವನ್ನು ಅವಲೋಕಿಸಿದಾಗ ಎರಡು ಕಡೆ ಶಿವನ ಭಕ್ತರಾಗಿರುವುದನ್ನು ಹಾಗೇ ಹಾಲಿನ ಮಹತ್ವವನ್ನು, ಗೌರವವನ್ನು ಗುರುತಿಸಬಹುದು. ಈ ರೀತಿಯ ಕಥನಗಳನ್ನು ಲೇಖಕರು ದಾಖಲೀಕರಿಸುತ್ತಾರೆ.

ಮಂಟೇಸ್ವಾಮಿ ಮತ್ತು ಸಿದ್ದಪ್ಪಾಜಿಯಂತೆ ಹಾಲುಮತ ಕುರುಬರ ಸಾಂಸ್ಕೃತಿಕ ನಾಯಕ ಬೀರೇಶ್ವರನು ಅನೇಕ ಪವಾಡಗಳನ್ನು ಮಾಡುವುದು ಮತ್ತು ತನ್ನ ಪರಮ ಶಿಷ್ಯ ಮಾಳಿಂಗನಿಂದ ಒಕ್ಕಲ(ಭಕ್ತ)ನ್ನು ಹೆಚ್ಚಿಸಿಕೊಳ್ಳುವುದು ಕಾಣಬಹುದು. ಹಾಗೇ ಮಂಟೇಸ್ವಾಮಿ ಕಲ್ಯಾಣಕ್ಕೆ ಭೇಟಿ ಕೊಟ್ಟು ಬಸವಣ್ಣನಿಂದ ಸತ್ಕಾರ ಪಡೆದು ಕಳ್ಳ ಜಂಗಮರ ಕಪಟವನ್ನು ಬಯಲು ಮಾಡುವಂತೆ, ಬೀರೇಶ್ವರನು ಕಲ್ಯಾಣಕ್ಕೆ ಭೇಟಿಕೊಟ್ಟು ತನ್ನ ಶಿಷ್ಯನಿಂದ ಸತ್ತ ದನವನ್ನು, ಸತ್ತಕುರಿಯನ್ನು ಬದುಕಿಸುವ ಪವಾಡ ಮಾಡಿ ಅಲ್ಲಿ ಸತ್ಕಾರ ಪಡೆಯುವುದನ್ನು ಲೇಖಕರು ಈ ಕೃತಿಯಲ್ಲಿ ಸಂಪಾದಿಸಿದ್ದಾರೆ.

ಕುರಿಕಾಯುವ ಕಾಯಕದಿಂದ ಹಾಲುಮತ ಕುರುಬರಾಗಿ ಅವರ ಆರಾಧ್ಯ ದೈವದೊಂದಿಗೆ ತಮ್ಮ ಕುಲದ ಏಳಿಗೆಯನ್ನು ಈ ಚರಿತ್ರೆ ಕಟ್ಟಿಕೊಡುತ್ತದೆ. ಒಟ್ಟಾರೆಯಾಗಿ ಬುಡಕಟ್ಟು ಸಮುದಾಯಗಳಲ್ಲಿ ಬರುವ ಸಾಂಸ್ಕೃತಿಕ ನಾಯಕರು ಅನೇಕ ಸಂಸ್ಕೃತಿ ಸಂಕರಗಳ ಏಳುಬೀಳಿನಲ್ಲಿ ಪವಾಡಗಳ ಮೂಲಕ ತಮ್ಮ ಕುಲಕಸುಬನ್ನು ಬಿಡದೆ

ತಮ್ಮ ಶಿಷ್ಯರನ್ನು ಹೆಚ್ಚಿಸಿಕೊಳ್ಳುತ್ತ ಕುಲದ ಆರಾಧಕರಾಗಿ ಜನಮಾನಸದಲ್ಲಿ ಉಳಿಯುವುದನ್ನು ಕಾಣಬಹುದು.

ಮಾರುತಿ .ಡಿ.

೬೭. ಜಾನಪದಲೋಕಕ್ಕೆ ಹೊಸ ಮೆರಗು ಕೊಟ್ಟ ಶಾಂತಿ ನಾಯಕರು

ಶಾಂತಿ ನಾಯಕರ ಅಕ್ಷರ ಕೃತಿಗಳು, ಸಂ.ಶೋಭಾ ನಾಯಕ, ಸಾಧನಾ ಪಬ್ಲಿಕೇಷನ್, ನಂ.೧೫/೧೬, ೧ನೇ ಮಹಡಿ, ಶಿವ ಕಾಂಪ್ಲೆಕ್ಸ್, ಬಳೇಪೇಟೆ ಸರ್ಕಲ್, ಬೆಂಗಳೂರು-೫೬೦೦೫೩, ೨೦೧೨, ಪುಟ-೧೫೬, ಬೆಲೆ ರೂ. ೮೦/-

ಶೋಭಾ ನಾಯಕ ಅವರು ಸಂಪಾದಿಸಿರುವ 'ಶಾಂತಿ ನಾಯಕರ ಅಕ್ಷರ ಕೃತಿಗಳು' ಪುಸ್ತಕ ಶಾಂತಿ ನಾಯಕರ ಜಾನಪದದ ಬಗೆಗಿನ ಅಪಾರ ಶ್ರದ್ಧೆ ಮತ್ತು ಕ್ರಿಯಾಶೀಲತೆಯನ್ನು ಮನಗಾಣಲು ಕೈಮರವಾಗಬಲ್ಲದು. ಆದರೆ ಅದೇ ದಾರಿಯಾಗಲಾರದು. ಆ ದಾರಿ ಶಾಂತಿ ನಾಯಕರ ಮೂಲಕೃತಿಗಳು ಪ್ರಸ್ತುತ ಕೃತಿಯಲ್ಲಿ ಸಂಪಾದಕರೇ ಹೇಳಿರುವಂತೆ ಸುಮಾರು ಮೂವತ್ತು ವರ್ಷಕ್ಕೆ ವಿಸ್ತಾರವಾದ ಕಾಲದ ಲೇಖನಗಳನ್ನು ಒಂದು ನೋಟಕ್ಕೆ ತಂದಿದ್ದಾರೆ. ಆದರೆ ಎಲ್ಲಿಂದ ಎಲ್ಲಿಯವರೆಗೆ ಈ ಲೇಖನಗಳು ಬರೆಯಲ್ಪಟ್ಟಿವೆ ಎಂಬುದನ್ನು ನಮೂದಿಸಿಲ್ಲ. ಪುಸ್ತಕದ ಕೊನೆಯಲ್ಲಿರುವ ವ್ಯಕ್ತಿಪರಿಚಯವನ್ನು ಆಧರಿಸಿ ೧೯೭೮ರಿಂದ ೨೦೧೧ರವರೆಗಿನ ಕಾಲವೆಂದು ಸ್ವಯಂ ನಿರ್ಧರಿಸಿಕೊಳ್ಳಬೇಕು.

ಶಾಂತಿನಾಯಕರ ಅಕ್ಷರ ಕೃತಿಗಳ ಬಗ್ಗೆ ಡಾ. ಅಂಬಳಿಕೆ ಹಿರಿಯಣ್ಣ, ಡಾ. ಬಿ.ಎ. ವಿವೇಕ ರೈ, ಡಾ. ಪಿ.ಕೆ. ರಾಜಶೇಖರ್, ಡಾ. ಚಕ್ಕೆರೆ ಶಿವಶಂಕರ್ ಇನ್ನೂ ಮುಂತಾದ ವಿದ್ವಾಂಸರ ೫೪ ಲೇಖನಗಳು ಶಾಂತಿ ನಾಯಕರ ೩೧ ಜನಪದ ಕೃತಿಗಳನ್ನು ವಿಭಿನ್ನ ನೆಲೆಯಲ್ಲಿ ಪರಿಚಯ ಮಾಡಿಕೊಡುತ್ತವೆ.

ಜಾನಪದದಲ್ಲಿನ ಆಟ, ಕಥೆ, ಒಗಟು, ಅಡುಗೆ, ರಂಗೋಲಿ, ವೈದ್ಯ, ಪಾನೀಯ, ಆಭರಣ, ಜನಪದ ಗಣಿತ, ಜನಪದ ಸಸ್ಯನಾಮ ಹೀಗೆ ಎಲ್ಲಾ ಪ್ರಕಾರಗಳ ಬಗ್ಗೆ, ಶ್ರದ್ಧೆಯಿಂದ ಕ್ಷೇತ್ರಕಾರ್ಯ ಕೈಗೊಂಡು ಆಳವಾದ ಅಧ್ಯಯನದಿಂದ ತಮ್ಮದೇ ದೃಷ್ಟಿಕೋನದಲ್ಲಿ ಸೂಕ್ತ ಪ್ರಸ್ತಾವನೆಗಳನ್ನು ಬರೆದು ಓದುಗರಲ್ಲಿ ಜನಪದದ ಬಗೆಗೆ ಶ್ರದ್ಧೆಯನ್ನು ಹೆಚ್ಚಿಸಿದ್ದಾರೆ. ಓದುಗ ವಿದ್ವಾಂಸರಲ್ಲಿ ನಾನಾ ನಮೂನೆಯಲ್ಲಿ ಚರ್ಚೆಗಳು ಏಳುವಂತೆ ಮಾಡಿರುವುದು ಶಾಂತಿ ನಾಯಕರ ಸೃಜನಶೀಲತೆಯನ್ನು ಮನಗಾಣಿಸುತ್ತದೆ.

'ಜಾಣೆ ಕನ್ನಡವ ತಿಳಿದ್ಹೇಳಿ' ಎಂಬ ಒಗಟುಗಳ ಸಂಗ್ರಹ ಕೃತಿಯ ಬಗ್ಗೆ ಒಂಬತ್ತು ಜನ ವಿದ್ವಾಂಸರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಶಾಂತಿ ನಾಯಕರ

ಒಗಟ್ಟ ಎಂಬ ಒಗಟಿನ ಪದದ ಪರ್ಯಾಯ ಪದಕ್ಕೆ ಕೆ. ಸಂಧ್ಯಾರೆಡ್ಡಿ ಅಸಮ್ಮತವನ್ನು ಡಾ. ಶಾಲಿನಿ ರಘುನಾಥರವರು ಸಮ್ಮತವನ್ನು ಸೂಚಿಸಿದ್ದಾರೆ. ಪಿ.ಕೆ. ರಾಜಶೇಖರ್ ಅವರು ಒಗಟುಗಳ ವಿಭಾಗಕ್ರಮ ಅಸಮರ್ಪಕ ಎಂದು ಬೇರೊಂದು ಕ್ರಮವನ್ನು ಸೂಚಿಸುವುದು ಸೂಕ್ತವಾಗಿದೆ.

'ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಕಥೆಗಳು' ಕುರಿತ ಲೇಖನಗಳು ಜಾಗತಿಕ ಕಥಾವರ್ಗದ ವಿಭಾಗ ಕ್ರಮಗಳನ್ನು ಪ್ರಸ್ತಾಪಿಸಿರುವುದು ಲೇಖಕರ ಅಧ್ಯಯನಶೀಲತೆ ಯನ್ನು ಮತ್ತು ಶಾಂತಿ ನಾಯಕರ ವಿಭಾಗಕ್ರಮದ ಭಿನ್ನ ನಿಲುವುಗಳನ್ನು ತಿಳಿಸಿ ಕೊಡುತ್ತದೆ. ಈ ಹವ್ಯಕರ ಕಥೆಗಳು ಕೇವಲ ೧೫ ವರ್ಷದೊಳಗಿನ ಬಾಲಕ ಬಾಲಕಿಯರಿಂದ ಸಂಗ್ರಹಿಸಿದ್ದು ಎಂಬುದನ್ನು ಓದಿ ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಯಸ್ಸಿನ ಕಾರಣಕ್ಕೆ ಕಥೆಗಳನ್ನು ಸಂಗ್ರಹಿಸದೇ ಇದ್ದುದಕ್ಕೆ ಅತೃಪ್ತಗೊಂಡೆ ಎನ್ನುತ್ತಾರೆ.

ಶಾಂತಿ ನಾಯಕರು ಹೆಚ್ಚು ಉತ್ತರ ಕನ್ನಡ ಜಿಲ್ಲೆಯಲ್ಲಿ ಕ್ರಿಯಾಶೀಲವಾಗಿ ಸಂಗ್ರಹ ಕಾರ್ಯದಲ್ಲಿ ತೊಡಗಿದ್ದಾರೆ. ಅಂದ ಮಾತ್ರಕ್ಕೆ ಅವರ ವಿದ್ವತ್ತನ್ನು ಅಲ್ಲಿಗೇ ಸೀಮಿತಗೊಳಿಸು ವಂಥದ್ದಲ್ಲ. ಸ್ಥಳೀಯ ಜಾನಪದದಿಂದ ವಿಶ್ವಜಾನಪದ ಕ್ಷೇತ್ರಕ್ಕೆ ಸ್ಥಳೀಯರು ಕೊಡುವ ಅಮೂಲ್ಯ ಕೊಡುಗೆ ಅದು. ನಮ್ಮೂರಿನ ಭಾಗದಲಿ ಡಾ. ಚಿಕ್ಕಣ್ಣ ಯೆಣ್ಣೆಕಟ್ಟೆಯವರೂ ಇಂತಹದ್ದೊಂದು ಜಾನಪದ ಸೇವೆಯಲ್ಲಿ ಕ್ರಿಯಾಶೀಲರಾಗಿದ್ದಾರೆ.

ಶಾಂತಿ ನಾಯಕರು ಜಾನಪದದ ಜೊತೆಜೊತೆಗೆ ಶಿಷ್ಟ ಸಾಹಿತ್ಯ ಕೃಷಿ ಮಾಡುತ್ತ, ಉತ್ತರ ಕನ್ನಡ ಜಿಲ್ಲೆಯ ಸಣ್ಣಕಥೆಗಳು, ಸಜ್ಜನ, ಚಿನ್ನದ ಚೆನ್ನ(ಸ್ಮರಣ ಸಂಚಿಕೆ), ದೇವಕಿ ಓದಿದಳು, ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಹುಡುಕುವುದೇ, ಜೀವ ಉಳಿಸುವ ಮರಗಳು, ಸ್ತ್ರೀ ಸಂವೇದನೆ, ದೋಣಿ ಹೇಳಿದಕಥೆ, ಕುಡಿತ ನಿಮಗೆಷ್ಟು ಹಿತ? ಹೀಗೆ ಅನೇಕ ಕೃತಿ ರಚನೆಯಲ್ಲಿ, ಸಂಪಾದನೆಯಲ್ಲಿ ತಮ್ಮ ವಿದ್ವತ್ತನ್ನು ಬಿಂಬಿಸಿದ್ದಾರೆ.

ಶೋಭಾ ನಾಯಕರ ಪರಿಶ್ರಮದಿಂದ ಶಾಂತಿ ನಾಯಕರ ಅಕ್ಷರ ಕೃತಿಗಳ ಬಗೆಗಿನ ಪ್ರತಿಕ್ರಿಯೆಗಳನ್ನು ಒಂದೇ ಪುಸ್ತಕದಲ್ಲಿ ಓದಿಕೊಳ್ಳಲು ಸಾಧ್ಯವಾಗಿ, ಅರ್ಥ ಅಪರಿಮಿತ ಜಾನಪದ ಸೇವೆಯನ್ನು ಪ್ರತಿಕ್ರಿಯೆಗಳ ಮೂಲಕ ನೋಡಲು ಸಾಧ್ಯವಾಯಿತಷ್ಟೆ. ಆದರೆ ಈ ಓದಿನಿಂದ ತೃಪ್ತನಾಗಲು ಸಾಧ್ಯವಾಗಲಿಲ್ಲ. ಕಾರಣ ಅರಮನೆಯನ್ನು ನೋಡಲು ಹೋಗಿ ಬರಿ ಅದರ ಸುತ್ತಣ ಕೋಟೆಯನ್ನು ಸುತ್ತಿ ಬಂದಂತಾಯಿತು. ಈ ಕೋಟೆ ಅರಮನೆಯ ವೈಭವವನ್ನು ಹೇಳಬಹುದು; ಮರೆ ಮಾಚಲೂಬಹುದು. ಅದ್ದರಿಂದ ಕೋಟೆ ಮಾತ್ರದಿಂದ ಅರಮನೆಯ ವಸ್ತುಸ್ಥಿತಿಯನ್ನು ಹೇಗೆ ತಿಳಿಯಲು ಹೇಗೆ ಸಾಧ್ಯವಿಲ್ಲವೋ, ಅದೇ ರೀತಿ ಶಾಂತಿ ನಾಯಕರ ಕೃತಿಗಳ ಬಗೆಗಿನ ಲೇಖನಗಳಿಂದ ನಿಜವಾದ ಓದುಗ ಮೂಲಕೃತಿಗಳ ಬಗೆಗೆ ಏನನ್ನೂ ಹೇಳಲಾರ. ವಿಮರ್ಶೆಗೆ ವಿಮರ್ಶೆ ಬರೆಯುವುದು; ಓದುವುದು ಮೂಲ ಕೃತಿಯಿಂದ ಓದುಗನನ್ನು ದೂರವಿರಿಸಿದಂತೆ.

ಸ್ವಾಮಿ ನ. ಕೋಡಿಹಳ್ಳಿ

೬೮. ನಾಡಿನ ಜನಪದರ ಶಬ್ದ ಸಂಪತ್ತಿನ ಒಳಅರ್ಥಗಳು

ಕನ್ನಡ ಜಾನಪದ ನಿಘಂಟು ಸಂಪುಟ–೧
ಕನ್ನಡ ಜಾನಪದ ನಿಘಂಟು ಸಂಪುಟ–೨
ಕನ್ನಡ ಜಾನಪದ ನಿಘಂಟು ಸಂಪುಟ–೩
ಪ್ರಧಾನ ಸಂಪಾದಕರು: ಗೊ.ರು. ಚೆನ್ನಬಸಪ್ಪ
ಸಂಪಾದಕರು: ಬಿ. ಸಿದ್ದಗಂಗಪ್ಪ ಕಂಬಾಳು, ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್. ರಾಜಪ್ಪ
ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ೨ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦೦೦೨, ೨೦೧೨, ೧ನೇ ಸಂಪುಟ, ಪುಟ–೮೨+೯೯೮, ಬೆಲೆ ರೂ. ೨೫೦/- ೨ನೇ ಸಂಪುಟದ ಬೆಲೆ ರೂ. ೫೦೦/-, ೨ನೇ ಸಂಪುಟದ ಬೆಲೆ ರೂ. ೫೦೦/-

ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ಗೊ.ರು. ಚನ್ನಬಸಪ್ಪರವರ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಮುಖ್ಯಮಂತ್ರಿ ಚಂದ್ರುರವರ ಕನಸಿನ ಮಹತ್ವದ ಯೋಜನೆ **ಕನ್ನಡ ಜಾನಪದ ನಿಘಂಟು ಸಂಪುಟ–೧,೨,೩,**. ಗೊ.ರು. ಚನ್ನಬಸಪ್ಪರವರ ಮೂರು ವರ್ಷದ ಅವಧಿಯಲ್ಲಿ ಜಾನಪದ ಕ್ಷೇತ್ರದಲ್ಲಿ ಅಪಾರ ಸೇವೆ ಮಾಡಿದ ವಿದ್ವಾಂಸರೊಟ್ಟಿಗೆ ಸೇರಿಕೊಂಡು ಒಂದೂವರೆ ವರ್ಷದ ಅವಧಿಯಲ್ಲಿ ಜಾನಪದ ನಿಘಂಟು ಯೋಜನೆ ಪೂರ್ಣಗೊಳಿಸಿದರು. ೨೦೧೧ರಲ್ಲಿ ಸಂಪುಟ–೧, ೨೦೧೨ರಲ್ಲಿ ಸಂಪುಟ–೨ ಮತ್ತು ೩ ಪ್ರಕಟಗೊಳ್ಳುವುದರ ಮುಖಾಂತರ ನಾಡಿನ ಜನಪದರ ಸಮೃದ್ಧ ಗ್ರಾಮ್ಯದ ಶಬ್ದ ಸಂಪತ್ತಿನ ಅರ್ಥವಿವರಣೆ ನೀಡಿರುವುದು ನಿಜಕ್ಕೂ ಶ್ಲಾಘನೀಯ ಕೆಲಸವಾಗಿದೆ.

ಇಂತಹ ಬೃಹತ್ ಜವಾಬ್ದಾರಿಯನ್ನು ನಾಡಿನ ಜಾನಪದ ವಿದ್ವಾಂಸರ ಸಹಕಾರದೊಂದಿಗೆ ಮೂರು ಸಂಪುಟಗಳಲ್ಲಿ ಹೊರತರಲಾಗಿದೆ. ಮೂರು ಜನ ಸಂಪಾದಕರು, ಹದಿಮೂರು ಜನ ಕ್ಷೇತ್ರ ಸಂಪಾದಕರು, ಮೂವತ್ನಾಲ್ಕು ಜನ ಕ್ಷೇತ್ರ ಸಹಾಯಕರುಗಳ ತಂಡದೊಂದಿಗೆ ಕ್ಷೇತ್ರಕಾರ್ಯದ ಮೂಲಕ ಜನಸಮುದಾಯಗಳ ಆಡುಮಾತಿನ ಲಕ್ಷಾಂತರ ಶಬ್ದಗಳನ್ನು ಸಂಗ್ರಹಿಸಿ ಶಾಸ್ತ್ರೀಯ ಹಿನ್ನೆಲೆಯಲ್ಲಿ ಕ್ರಮಬದ್ಧವಾಗಿ ಜೋಡಿಸಿ, ಅವುಗಳಿಗೆ ಅರ್ಥವಿವರಣೆಯನ್ನು ನೀಡಿರುವುದು ಒಂದು ಅತ್ಯುತ್ತಮ ಕೆಲಸವೆನ್ನಬಹುದು.

ಕನ್ನಡ ಜಾನಪದ ನಿಘಂಟು ಸಂಪುಟ–೧ ೨೦೧೧ರಲ್ಲಿಯೇ ಪ್ರಕಟಗೊಂಡಿದ್ದು, ಇದರ ಮುಂದಿನ **ಸಂಪುಟ–೨** ಮತ್ತು **ಸಂಪುಟ–೩**ರಲ್ಲಿ ತುಂಬಾ ಸವಿಸ್ತಾರವಾಗಿ ಶಬ್ದ ಸಂಪತ್ತಿನ ವಿವರಣೆಗಳನ್ನು ನೀಡಿರುವುದನ್ನು ಕಾಣಬಹುದು. ಮೊದಲ ಸಂಪುಟದಲ್ಲಿ ಪ್ರಕಟಗೊಂಡಿರುವ ಪ್ರಸ್ತಾವನೆ ಸುದೀರ್ಘವಾಗಿ ಚರ್ಚೆಯಾಗಿದ್ದು, ಮುಂದಿನ ಎರಡು ಸಂಪುಟಗಳಲ್ಲೂ ಇದೇ ಪ್ರಸ್ತಾವನೆಯನ್ನು ಯಥಾವತ್ತು ಇಲ್ಲಿ

ಕೊಟ್ಟಿದ್ದಾರೆ. ಕನ್ನಡ ಜಾನಪದ ನಿಘಂಟು ಸಂಪುಟಗಳ ಶಬ್ದಗಳಿಗೆ ಹೇಗೆ ಅರ್ಥವಿವರಣೆ ಪ್ರಾಮುಖ್ಯವೋ ಅದೇ ರೀತಿಯಲ್ಲಿ ಇದಕ್ಕೆ ಬರೆದಿರುವ ಪ್ರಸ್ತಾವನೆಯು ತುಂಬಾ ಪ್ರಾಮುಖ್ಯವಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಿಘಂಟಿನ ಬಗ್ಗೆ ಯಾರ್‍ಯಾರು ಚರ್ಚಿಸಿದ್ದಾರೆಂಬುದನ್ನು ಇಲ್ಲಿ ವಿವರಿಸಲಾಗಿದೆ. ಹಾಗೆಯೇ ಒಂದೊಂದು ಪರಿಕಲ್ಪನೆಯ ವಿವರಗಳ ಬಗೆಗೆ ಚರ್ಚೆಯು ಇಲ್ಲಿ ನಡೆಯುತ್ತದೆ. ಧ್ವನಿವ್ಯವಸ್ಥೆಯೇ ಭಾಷೆ, ನಿಘಂಟು ಎಂದರೇನು?, ಅಮರಸಿಂಹ ತನ್ನ ಕೃತಿಯಲ್ಲಿ ನಿಘಂಟಿನ ಬಗೆಗೆ ಏನೆಲ್ಲ ವಿವರ ನೀಡಿದ್ದಾನೆಂಬುದನ್ನು ಇಲ್ಲಿ ವಿವರಿಸಿದ್ದಾರೆ. ಅನ್ಯದೇಶ್ಯ ಶಬ್ದಗಳ ಸೇರ್ಪಡೆ, ಶಬ್ದಗಳ ಕ್ರಿಯಾರ್ಥವೇ ಪ್ರಧಾನ, ಕನ್ನಡ ನಿಘಂಟುಕಾರರು ಮತ್ತು ನಿಘಂಟುಗಳು, ವಸ್ತುಕೋಶ, ಶಬ್ದಮಣಿದರ್ಪಣ–ಕೇಶಿರಾಜ, ನಾಚಿರಾಜ, ಅಭಿನವ ಮಂಗರಾಜನ ನಿಘಂಟು, ಚತುರಾಸ್ಯ ನಿಘಂಟು, ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ, ಗುಬ್ಬಿ ಮಲ್ಲಣಾರ್ಯ, ಕವಿಶಾಂತೇಶ, ವಿರಕ್ತ ತೋಂಟದಾರ್ಯ, ನಾನಾರ್ಥಕಂದ–ಚನ್ನಕವಿ, ನಾನಾರ್ಥ ರತ್ನಾಕರ–ದೇವೋತ್ತಮ ಭಾರತ ನಿಘಂಟು, ಶಬ್ದಾಗಮ, ಭುಜಬಲಿ ಚರಿತೆ–ಪಂಚಬಾಣ, ರೆವೆರೆಂಡ್ ಎಫ್. ಕಿಟೆಲ್ ಇತರ ಶಬ್ದಕೋಶಗಳು, ನಿಘಂಟು ಪ್ರಯೋಜನಗಳು ಹೀಗೆ ಹಲವು ವಿಷಯಗಳ ಬಗೆಗೆ ಸುದೀರ್ಘವಾಗಿ ಪ್ರಸ್ತಾವನೆಯಲ್ಲಿ ವಿಶ್ಲೇಷಿಸಲಾಗಿದೆ.

ಆಡುನುಡಿಯ ಕನ್ನಡವನ್ನು ಕಾವ್ಯ ಭಾಷೆಗೆ ತರುವ ಯತ್ನದಲ್ಲಿ ಕೆಲವು ಕವಿಗಳು ಹೇಗೆ ಅನುಸರಿಸಿದ್ದಾರೆಂಬುದನ್ನು ಇಲ್ಲಿ ಚರ್ಚಿಸಿದ್ದಾರೆ. ಅದರಲ್ಲಿ ಶ್ರೀವಿಜಯ, ನಯಸೇನ, ಆಂಡಯ್ಯ, ದೇಪರಾಜ, ರತ್ನಾಕರವರ್ಣಿ, ರುದ್ರಕವಿ, ಚಂದ್ರಕವಿ, ಕಲ್ಲರಸ, ಧರಣಿ ಪಂಡಿತ, ಚನ್ನಮಲ್ಲೇಶ, ಮಹಲಿಂಗರಂಗ, ಚನ್ನಯ್ಯ ಮುಂತಾದವರು ನಿಘಂಟು ರಚನೆಗೆ ಪಾಲಿಸಿರುವ ನಿಯಮಗಳು ಯಾವುವು ಎಂಬುದನ್ನು ಸಂಪಾದಕರು ಸವಿವರವಾಗಿ ತಿಳಿಸಿದ್ದಾರೆ.

ಕನ್ನಡ ಜಾನಪದ ನಿಘಂಟು ಸಂಪುಟ–೧, ೨, ೩ರಲ್ಲಿ ಕ್ರಮವಾಗಿ 'ಅ' ಕಾರಾದಿಯಾಗಿ 'ಅ'ದಿಂದ 'ಳ'ದವರೆಗೆ ಶಬ್ದದ ವಿವರಗಳನ್ನು ಅರ್ಥಪೂರ್ಣವಾಗಿ ಕ್ರಮಬದ್ಧವಾದ, ಶಾಸ್ತ್ರಬದ್ಧವಾದ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. 'ಅ'ಕರಾದಿಯಾಗಿ 'ಅಃ' ವರೆಗೆ ಅಂದರೆ, ಸ್ವರ್ಣಾಕ್ಷರ 'ಅ ದಿಂದ ಪ್ರಾರಂಭವಾಗಿ ನಂತರ ಅಃ(ವಿಸರ್ಗ)'ದವರೆಗೆ ಮುಂದುವರಿ ಯುತ್ತದೆ. ಅವುಗಳ ಪ್ರತಿಯೊಂದು ಶಬ್ದಗಳ ವಿವರಣೆಯನ್ನು ನೀಡುತ್ತಾ, ಹಾಗೆಯೇ 'ಕ ದಿಂದ ಳ'ವರೆಗಿನ ಕಾಗುಣಿತಾಕ್ಷರ 'ಕದಿಂದ ಕಃ'ದವರೆಗೆ, ಹೀಗೆ ಪ್ರತಿಯೊಂದು ಅಕ್ಷರದ ಕಾಗುಣಿತಾಕ್ಷರದ ರೀತಿಯಲ್ಲಿ ಆಡುನುಡಿಯಲ್ಲಿರುವ ಪದಗಳನ್ನು ಸುದೀರ್ಘ ವಾಗಿ ಸಂಗ್ರಹಿಸಿ, ಇಲ್ಲಿ ವಿವರಣೆ ನೀಡಿರುವುದನ್ನು ಕಾಣಬಹುದು.

ಜಾಗತೀಕರಣದ ಅಬ್ಬರದಲ್ಲಿ ಆಡುಮಾತಿನಲ್ಲಿರುವ ದೇಶಿ ಶಬ್ದಗಳು ಕಣ್ಮರೆಯಾಗುವ ಹಂತದಲ್ಲಿರುವಾಗ ಅವುಗಳನ್ನು ಊರೂರು ಸುತ್ತಿ ಕಷ್ಟಪಟ್ಟು ಸಂಗ್ರಹಿಸಿ, ಅಲ್ಲದೆ

ಸಮುದಾಯದಲ್ಲಿಯೇ ಅರ್ಥಗಳನ್ನು ತಿಳಿದು ವಿದ್ವಾಂಸರು ಸಹ ತೂಗಿ ನೋಡಿ ಅದಕ್ಕಿರುವ ಅರ್ಥಗಳು ಸರಿಯೇ ಅಥವಾ ತಪ್ಪೇ ಎಂಬುದನ್ನು ಅರಿದು ಹಲವು ಅರ್ಥಗಳನ್ನು ಇಲ್ಲಿ ನೀಡಿದ್ದಾರೆ. ಕೆಲವು ಪದಗಳಿಗೆ ಸೂಕ್ತವೆನಿಸುವ ಕಡೆ ಅನೇಕ ಅರ್ಥಗಳೊಂದಿಗೆ ಗಾದೆಗಳನ್ನು ಕೊಟ್ಟಿರುವುದು ಇನ್ನಷ್ಟು ತಿಳಿವಳಿಕೆಗೆ ಎಡೆಮಾಡಿ ಕೊಡುತ್ತದೆ.

ಈಗಾಗಲೇ ಇಂಗ್ಲೀಷ್‌ಮಯವಾಗಿರುವ ಈ ದಿನಗಳಲ್ಲಿ ಜನಸಮುದಾಯಗಳು ಆಡುವ ಶಬ್ದಗಳೇ ಈಗ ಜನರಿಂದ ದೂರ ಸರಿದಿವೆ. ಉದಾಹರಣೆಗೆ 'ಕೂಡೆಸರು' (ಅಗಸರು ಊರಿನಲ್ಲಿ ಆಯವೃತ್ತಿ ಮಾಡುವಾಗ ಅವರಲ್ಲಿ ಪ್ರತಿನಿತ್ಯ ಮುದ್ದೆ, ಸಾರು ತರುವಾಗ ಎಲ್ಲರ ಮನೆಯ ಸಾರನ್ನು ಒಂದೇ ಬಟ್ಟಲಿಗೆ ಹಾಕಿದ ಸಾರಿಗೆ ಕೂಡೆಸರು ಎನ್ನುವರು.), 'ಕೂರ್‍ವಾಗಿ'(ರುಚಿಕಟ್ಟಾಗಿ ಸ್ವಲ್ಪ ಮಾಡು) ಎನ್ನುವ ಪದಗಳನ್ನು ಬಳಸಿದರೆ ಇಂದಿನ ವಿದ್ಯಾರ್ಥಿಗಳು ನಗುತ್ತಾರೆ. ಈ ಶಬ್ದಗಳು ಅನ್ಯದೇಶ ಭಾಷೆಯವು ಎನ್ನುವ ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತಾರೆ. ಆದರೆ ಇಂಗ್ಲಿಷ್‌ನ ಶಬ್ದಗಳನ್ನು ಬಳಸಿದರೆ ಅವರು ಸುಮ್ಮನೆ ಕುಳಿತು ಕೇಳುತ್ತಾರೆ. ಇಂತಹ ದುಸ್ಥಿತಿಯಲ್ಲಿರುವ ಇರುವ ನಾವು ನಮ್ಮ ಪೂರ್ವಜರು ಬಳಸುತ್ತಿದ್ದ ಶಬ್ದಗಳನ್ನು ಸಂಗ್ರಹಿಸಿ, ಒಂದೆಡೆ ದಾಖಲೆಗೊಳಿಸ ಬೇಕಾದ್ದು ನಮ್ಮ ಆದ್ಯ ಕರ್ತವ್ಯ. ಆ ನಿಟ್ಟಿನಲ್ಲಿ ಮುಂದಿನ ಪೀಳಿಗೆಯನ್ನು ಗಮನದಲ್ಲಿಟ್ಟುಕೊಂಡು ಜರೂರಾಗಿ ರೂಢಿಯಲ್ಲಿರುವ ಗ್ರಾಮೀಣರ ಶಬ್ದಗಳನ್ನು ಕ್ಷೇತ್ರ ಸಹಾಯಕರ ಸಹಾಯದಿಂದ ಜಾನಪದ ಅಕಾಡೆಮಿಯ ಸಂಪಾದನಾ ಸಮಿತಿಯು ಒಂದೆಡೆ ಸಂಗ್ರಹಿಸಿ, ಅವುಗಳಿಗೆ ಸೂಕ್ತವೆನಿಸುವ ಅರ್ಥವಿವರಣೆ ನೀಡಿ, ಈ ಕೃತಿಯನ್ನು ಹೊರತಂದಿರುವುದು ಭವಿಷ್ಯದ ದೃಷ್ಟಿಯಿಂದ ಉತ್ತಮ ಕಾರ್ಯವೆನ್ನಬಹುದು.

ಕನ್ನಡ ಜಾನಪದ ನಿಘಂಟು ಯೋಜನೆಯಲ್ಲಿ ಪ್ರಧಾನ ಸಂಪಾದಕರಾಗಿ ಶ್ರೀ ಗೊ.ರು. ಚೆನ್ನಬಸಪ್ಪನವರು ಜವಾಬ್ದಾರಿ ಹೊತ್ತಿದ್ದರೆ, ಸಂಪಾದಕರಾಗಿ ಶ್ರೀ ಬಿ. ಸಿದ್ದಲಿಂಗಯ್ಯ ಕಂಬಾಳು, ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ ಕಾರ್ಯನಿರ್ವಹಿಸಿದ್ದಾರೆ. ಹಾಗೆಯೇ ಇವರ ಜೊತೆಗೆ ೧೩ ಜನ ಕ್ಷೇತ್ರ ಸಂಪಾದಕರು, ೩೪ ಜನ ಕ್ಷೇತ್ರ ಸಹಾಯಕರು ಸೇರಿಕೊಂಡು ಒಂದೂವರೆ ವರ್ಷಗಳ ಕಾಲ ಕರ್ನಾಟಕದಾದ್ಯಂತ ಕ್ಷೇತ್ರಕಾರ್ಯ ಮಾಡಿ ಸಮುದಾಯಗಳಲ್ಲಿರುವ ಆಡು ನುಡಿಯಲ್ಲಿ ರುವ ಅಸಂಖ್ಯಾತ ಪದಗಳನ್ನು ಒಂದೆಡೆ ಇಟ್ಟು ಪರಿಷ್ಕರಿಸಿ, ಪುನರಾವರ್ತನೆಯಾಗಿ ಬರುವ ಪದಗಳನ್ನು ಬಿಟ್ಟು, ಸರಿಯೆನಿಸಿದ ಪದಗಳನ್ನು ಆಯ್ದು ಒಟ್ಟು ನಿಘಂಟನ್ನು ಮೂರು ಸಂಪುಟಗಳಲ್ಲಿ ಹೊರತಂದಿರುವುದು ಮುಂದೆ ಬರುವ ಅಧ್ಯಯನಕಾರರಿಗೆ ಅದ್ಭುತ ಕೆಲಸ ಮಾಡಿಕೊಟ್ಟಂತಾಗಿದೆ. ಸಮುದಾಯಗಳಲ್ಲಿರುವ ಶಬ್ದಭಂಡಾರಕ್ಕೆ ಸಶಕ್ತವಾದ ದಾಖಲೆ ಒದಗಿಸಿದ್ದು ಶ್ಲಾಘನೀಯ.

ಕನ್ನಡ ಜಾನಪದ ನಿಘಂಟುವಿನ ಪ್ರತಿ ಸಂಪುಟದ ಕೊನೆಯಲ್ಲಿ ಅಮೂಲ್ಯವೆನಿಸುವ ಅನುಬಂಧದ ಪಟ್ಟಿಯನ್ನು ಕೊಟ್ಟಿದ್ದಾರೆ. ಅನುಬಂಧ-೧ರಲ್ಲಿ ಕನ್ನಡ ನಾಡಿನ

ವೈವಿಧ್ಯವೆನಿಸುವ ೨೩೪ ಜಾತಿಯ ಪಕ್ಷಿಗಳ ಭಾವಚಿತ್ರಗಳನ್ನು ನೀಡಿದ್ದರೆ, ಅನುಬಂಧ-೨ರಲ್ಲಿ ಸಮುದಾಯಗಳು ರೂಢಿಸಿಕೊಂಡು ಬಂದಿರುವ ನಾಟಿವೈದ್ಯ ಪದ್ಧತಿಯಲ್ಲಿ ಬಳಸುವ ೭೦ ಔಷಧಿ ಸಸ್ಯಗಳ ಭಾವಚಿತ್ರಗಳನ್ನು ನೀಡಿರುವುದು ವಿಶೇಷವಾಗಿದೆ. ಅನುಬಂಧ-೩ರಲ್ಲಿ ಸಮುದಾಯಗಳಲ್ಲಿನ ಆಡುಮಾತಿನಲ್ಲಿರುವ ನುಡಿಗಟ್ಟುಗಳನ್ನು ಒಂದೆಡೆ ಸಂಗ್ರಹಿಸಿ ಇಲ್ಲಿ ನೀಡಲಾಗಿದೆ. ಅನುಬಂಧ-೪ರಲ್ಲಿ ಸಂಶೋಧಕರಿಗೆ ಹಾಗೂ ಸಾಹಿತ್ಯ ಆಸಕ್ತರಿಗೆ ಬೇಕಾಗುವಂತಹ ೪೩೨ ಆಕರ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ.

ಹೀಗೆ ಪ್ರತಿಹಂತದಲ್ಲೂ ಹೊಸಹೊಸ ವಿಚಾರಗಳನ್ನು ದಾಖಲಿಸುತ್ತಲೇ ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಗ್ರಾಮ್ಯ ಸೊಗಡಿನ ಶಬ್ದಗಳ ಸಂಗ್ರಹದ ಜೊತೆ ಜೊತೆಯಲ್ಲೇ ಅರ್ಥವಿವರಣೆ ನೀಡಿ, ಹಲವು ಕಡೆ ಶಬ್ದಗಳಿಗೆ ಬೇಕೆನಿಸುವ ಭಾವಚಿತ್ರಗಳನ್ನು ನೀಡಿರುವುದು ತುಂಬಾ ಅರ್ಥಪೂರ್ಣವೆನಿಸಿದೆ. ನಿಜಕ್ಕೂ ಈ ೩ ನಿಘಂಟು ಸಂಪುಟಗಳು ಹೊರಬರುವ ಸಂದರ್ಭದಲ್ಲಿ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ಗೊ.ರು. ಚನ್ನಬಸಪ್ಪನವರು ಮತ್ತು ನಾಡಿನ ಜಾನಪದ ವಿದ್ವಾಂಸರ ತಂಡವನ್ನು ಬಳಸಿಕೊಂಡು, ಅವರು ಹಾಕಿರುವ ಶ್ರಮ ಸಾರ್ಥಕವಾಗಿದೆಂದು ಭಾವಿಸಬಹುದು.

ಕೆ.ವಿ. ಮುದ್ದವೀರಪ್ಪ

೬೯. ಹಾಲುಮತದ ಸಾಂಸ್ಕೃತಿಕ ಅಧ್ಯಯನ

ಹಾಲುಮತ ಚರಿತ್ರೆ (ಯಲ್ಲನಗೌಡ ಫ. ಅತ್ತಿಕೊಳ್ಳ), **ಸಂ.** ಅನ್ನಪೂರ್ಣ ಗೋಸ್ಬಾಳ, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ. ಪ್ರಕಾಶನಗರ, ಹೊಸಪೇಟೆ-೫೮೩೨೦೧, ೨೦೧೨, ಪುಟ-೧೦+೫೦, ಬೆಲೆ ರೂ. ೭೦/-

ಶ್ರೀ ಯಲ್ಲನಗೌಡ ಫಕೀರಗೌಡ ಅತ್ತಿಕೊಳ್ಳ ಅವರು ೧೯೪೯ರಲ್ಲಿ ಪ್ರಕಟಿಸಿದ ಹಾಲುಮತದ ಚರಿತ್ರೆಯ ಸಂಪಾದಿತ ಆವೃತ್ತಿಯೇ ಡಾ. ಅನ್ನಪೂರ್ಣ ಗೋಸ್ಬಾಳ ಅವರ 'ಹಾಲುಮತದ ಚರಿತ್ರೆ'. ಇದು ೧೯೧೦ರಲ್ಲಿ ಬಸವಣ್ಣೆಪ್ಪ ನೀಲಪ್ಪ ಹಳಹಳ್ಳಿಯವರು ಪ್ರಕಟಿಸಿದ 'ಮರುಳಸಿದ್ಧೇಶ್ವರ ಚರಿತೆ'ಯೇ ಆಗಿದೆ. ಈ ಕೃತಿಯು ಮುಖ್ಯ ಮೂಲ ಆಕರವೆನಿಸಿದರೂ ಶ್ರೀ ಅತ್ತಿಕೊಳ್ಳ ಅವರು ಜಾನಪದ ಮೂಲಗಳನ್ನು ಅಂದರೆ ಜನಪದ ಸಾಹಿತ್ಯ, ಹೆಣ್ಣುಮಕ್ಕಳ ಹಾಡುಗಳು ಹಾಗೂ ಅನೇಕ ಹಿರಿಯರು ಹಾಗೂ ವಿದ್ವಾಂಸರ ಜೊತೆಗಿನ ಚರ್ಚೆಯ ಆಧಾರವನ್ನು ಈ ಕೃತಿರಚನೆಗೆ ಬಳಸಿಕೊಂಡಿರುವುದನ್ನು ಈ ಕೃತಿಯ ಸಂಪಾದಕರಾದ ಡಾ.ಅನ್ನಪೂರ್ಣ ಗೋಸ್ಬಾಳ ದಾಖಲಿಸುತ್ತಾರೆ. ಆದ್ದರಿಂದ ಕಳೆದ ಶತಮಾನ ಆರಂಭದ ದಶಕದಲ್ಲಿ ಇಂತಹದೊಂದು 'ಚರಿತ್ರೆ'ಯ (ಪುರಾಣದ?) ರಚನೆಯ ಉದಾಹರಣೆ ಕರ್ನಾಟಕದ ಕುರುಬ(ಹಾಲುಮತ) ಸಮುದಾಯದ, ಸಾಮಾಜಿಕ ಅಸ್ಮಿತೆಯ ಕುರುಹಾಗಿ ದಾಖಲಾದ ಮೊದಲ ನಿದರ್ಶನವಾಗಿ ಗೋಚರಿಸುತ್ತದೆ.

ಕಳೆದ ಶತಮಾನದ ಬಹುಮುಖ್ಯ ವಿದ್ಯಮಾನವೆಂದರೆ, ಸಾಮಾಜಿಕ ಸಮುದಾಯಗಳ ಅಥವಾ ನಮ್ಮ ಸಮಾಜದ್ಧ ಖಚಿತ ಸಾಮಾಜಿಕ ಘಟಕಗಳಾದ 'ಜಾತಿ'ಗಳ ಅಸ್ಮಿತೆಯ, ಆತ್ಮಗೌರವಪೂರ್ಣ ಅಸ್ತಿತ್ವದ ಪ್ರತಿಪಾದನೆ ಮತ್ತು ಇದು ಬಹುಮುಖೀಯ ಅಭಿವ್ಯಕ್ತಿಗಳಲ್ಲಿ ಪ್ರಕಟವಾದದ್ದು ಹಾಗೂ ಇದು ಧುತ್ತೆಂದು ಉದ್ಭವಿಸಿದ ವಿಸ್ಮಯ! ಪುರಾಣ, ಚರಿತ್ರೆ, ಐತಿಹ್ಯ, ಲಾವಣಿಗಳಂಥ ವಿವಿಧ ಕಥನಗಳಾಗಿ ಹೊಮ್ಮಿ ನಿಲ್ಲುತ್ತವೆ. ೧೯೧೦ರಲ್ಲಿ ರಚಿತವಾದ 'ಮರುಳಸಿದ್ಧೇಶ್ವರ ಚರಿತೆ'ಯ ಮೂಲ ಆಧಾರ ಸೆಲೆಯೇ ಶ್ರೀ ಯಲ್ಲನಗೌಡ ಫಕೀರಗೌಡ ಅತ್ತಿಕೊಳ್ಳ ಅವರ ಕೈಯಲ್ಲಿ ಸಮರ್ಥ ಸಾಂಸ್ಕೃತಿಕ ಕಥನವಾಗಿ ತನ್ನ ಸಮಕಾಲೀನ ಸಾಮಾಜಿಕ ಅಗತ್ಯಗಳನ್ನು ಪೂರೈಸಬಲ್ಲ ಲೌಕಿಕ ಆಯಾಮವನ್ನು ಒಳಗೊಂಡು ರಚಿಸಲ್ಪಟ್ಟಿದೆ.

ಈ ಕಥನದಲ್ಲಿ ಪೌರಾಣಿಕ, ಚಾರಿತ್ರಿಕ ಮತ್ತು ಸಾಮಾಜಿಕ ಆಯಾಮಗಳು ಹೇಗೆ ಒಡಬೆರೆತು ನಿಲ್ಲುತ್ತವೆಯೆಂದರೆ, ಕರ್ನಾಟಕ ಕಂಡ ಕ್ರಾಂತಿಕಾರಕ ಕಾಲಘಟ್ಟವಾದ ೧೨ನೇ ಶತಮಾನದಲ್ಲಿ ಹಲವು ಸಾಮಾಜಿಕ ಹಿತದ ಕಾರ್ಯಗಳನ್ನು ಮಾಡಿದ ಖ್ಯಾತಿಯ ಸಿದ್ಧರಾಮ ಇಲ್ಲಿ ಮರುಳಸಿದ್ಧನಾಗಿ ಕುರುಬರ ಸಾಮಾಜಿಕ ಸಮುದಾಯವನ್ನು ಪುರಾತನದ ಪೌರಾಣಿಕ ಪರಂಪರೆಯೊಡನೆ ಬೆಸೆಯುವ ಹಾಗೂ ಮಹಾದೇವನಾದ ಶಿವನ ಕರುಣೆಯ ಸಮುದಾಯದವರೆಂದು ಮಹತ್ವದ ಸಾತತ್ಯವನ್ನು ಕಲ್ಪಿಸುತ್ತಾನೆ. ಹೀಗೆ ಲೇಖಕರು ತಮ್ಮ ಕಥನಕ್ಕೆ ಪೌರಾಣಿಕ, ಚಾರಿತ್ರಿಕ ಹಾಗೂ ಸಾಮಾಜಿಕ ಅಸ್ತಿತ್ವಗಳ ತ್ರಿವಳಿ ನೆಲೆಯನ್ನು ನಿರ್ಮಿಸುತ್ತಾರೆ. ಸಾಮಾಜಿಕ ಅಸ್ಮಿತೆಯನ್ನು ಬಲವಾಗಿ ಕಟ್ಟಿನಿಲ್ಲಿಸಿದ ಎಲ್ಲ ಜನಪದ ಮಹಾಕಾವ್ಯ ಕಥನಗಳ ಸ್ವರೂಪ ಇದೇ ಆಗಿದೆ ಎಂಬುದು ಹಾಗೂ ಇದೇ ಈ 'ಕಥನ'ಗಳ ಸಾಮಾನ್ಯ ಅಂಶ ಎನ್ನುವುದು ನಿಜವಾದರೂ ಇವುಗಳ ಅಂತರಾರ್ಥವಾಗಿರುವ ಸಾಮಾಜಿಕ ಸಮುದಾಯಗಳ ಬೆಳಗುವ ಬೆಳಕಿನಂಥ ಸೃಜನಶೀಲ ಪ್ರಶ್ನೆಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಇನ್ನು ಈ ಕಥನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಪೌರಾಣಿಕ ಆವರಣ ಹಾಗೂ ಐತಿಹಾಸಿಕವೆನಿಸುವ ಭೌಗೋಳಿಕ ವಿವರಗಳು ದೊರೆಯುತ್ತವೆ. ಕಲ್ಯಾಣದಲ್ಲಿ ಮರುಳಸಿದ್ಧರು ಮತ್ತು ಪದ್ಮಗೊಂಡನ ಜೊತೆಗೂಡಿದ ಆತನ ಸಂತಾನವಾದ ನಲವತ್ತು ಕುರುಬರ ಸಮುದಾಯ ಎದುರುಗೊಳ್ಳುವ ಐತಿಹಾಸಿಕ ವ್ಯಕ್ತಿಗಳ ಉಲ್ಲೇಖಗಳೆಲ್ಲವು ಈ ಕೃತಿ ಎಷ್ಟರಮಟ್ಟಿಗೆ ದಟ್ಟ ಲೌಕಿಕದಲ್ಲಿ ಅಥವಾ ಖಚಿತ ಸಾಮಾಜಿಕದಲ್ಲಿ ಬದುಕುತ್ತ ತಮ್ಮ ಅನನ್ಯ ಕಲ್ಪನಾಶೀಲತೆಯನ್ನು ಪ್ರಕಟಿಸುತ್ತ ಏಕಕಾಲಕ್ಕೆ ಮಾನವಘನತೆ ಎತ್ತಿಹಿಡಿಯುತ್ತೆ. ಈ ಭೂಮಿಯ ಮೇಲೆ ಮಾನವನ ಬದುಕನ್ನು ಸಂಪನ್ನಗೊಳಿಸಬಲ್ಲ ಸೃಜನಶೀಲತೆ(ಅನ್ನ ಪೂರೈಸುವ ಕಾಯಕ ಹಾಗೂ ಪಶುಪಾಲನೆ ಮತ್ತು ಅದನ್ನು ಆಧರಿಸಿದ ನೇಯ್ಗೆಯನ್ನು ರೂಪಿಸಿದ) ಮತ್ತು ಕಾಯಕ ಪ್ರಜ್ಞೆ ಇವೆಲ್ಲವೂ ಅನನ್ಯವಾಗಿ ಬೆಸೆದು ಶಿವನ ಅಂದರೆ ಮಂಗಳಕರ ತತ್ವದ ನೆಲೆಯಿಂದ ಚ್ಯುತವಾಗದ ಬದುಕಿನ ಕನಸುಗಾರಿಕೆ ಈ ಕಾವ್ಯದ ಸಂಪನ್ನ ಅಸ್ತಿತ್ವವಾಗಿರುವುದು ಕಂಡುಬರುತ್ತದೆ.

ಮಹಾದೇವಿ ಪಾರ್ವತಿಯ ಎದೆಹಾಲು ಬೆರೆತ ಮಣ್ಣಿನ ಮುದ್ದೆಯಲ್ಲಿ ಜನ್ಮ ತಳೆದ ಕುರುಬ ಸಾಮಾಜಿಕ ಸಮುದಾಯದ ಈ ಕವನ ಕಥನ ಚರಿತ್ರೆಯ ಸಿದ್ಧರಾಮ, ಬಸವಣ್ಣ, ಕಲ್ಯಾಣದ ಬಿಜ್ಜಳದೇವ ಇತ್ಯಾದಿ ಮಹಾಮಹಿಮರ ಜೊತೆಗೂ, ಭೌಗೋಳಿಕವಾಗಿ ಕಲ್ಯಾಣಕ್ಕೂ, ಶ್ರೀಶೈಲಕ್ಕೂ ವಿಸ್ತರಿತಗೊಳ್ಳುತ್ತ ಸ್ಥಳೀಯಕ್ಕೂ ಪೌರಾಣಿಕ ನೆಲೆಗಳಿಗೂ ಸೇತುವಾಗುತ್ತ ಹರಿಗಡಿಯದ ಸ್ಫುಟವಾದ ಕಲ್ಪನಾಶೀಲತೆಯಿಂದ ಓದುಗನನ್ನು ತನ್ನ ಮಾಂತ್ರಿಕ ವಲಯಕ್ಕೆ ಸೆಳೆಯುತ್ತಾರೆ.

೯೪ರಲ್ಲಿ ಬರೆಯುತ್ತಿರುವ ಶ್ರೀ ಯಲ್ಲನಗೌಡರ ಈ ಗದ್ಯಬರಹ ಈ ಕಥನದ ಆಯಾಮಗಳೆಲ್ಲವನ್ನು ಅನನ್ಯ ಸೌಂದರ್ಯದೊಡನೆ ಸೆರೆಹಿಡಿಯಲು ಸಮರ್ಥವಾಗಿ ಒದಗಿ ಬಂದಿದೆ. ಸಂಪಾದಕರಾದ ಡಾ. ಅನ್ನಪೂರ್ಣ ಗೋಸ್ಬಾಳ ಅವರ ಈ ಕೃತಿ ಒಂದು ಸ್ವಯಂಪೂರ್ಣ ಅನುಭವ ನೀಡುವಲ್ಲಿ ಸಫಲಗೊಂಡಿದೆ ಅನ್ನಿಸುತ್ತದೆ.

ಕೆ.ಪಿ. ನಟರಾಜು

೭೦. ಬಲ್ಲಂತ ಜಾಣ ಬಿಡಿಸ್ಹೇಳು ಕೃತಿಯ ಒಂದು ನೋಟ

ಬಲ್ಲಂತ ಜಾಣ ಬಿಡಿಸ್ಹೇಳು, ಸಂ. ಜೀನಹಳ್ಳಿ ಸಿದ್ದಲಿಂಗಪ್ಪ, ಶ್ರುತಿ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಹೊನ್ನಾಳಿ ತಾ, ದಾವಣಗೆರೆ ಜಿಲ್ಲೆ-೫೭೭೨೨೩, ೨೦೧೨, ಪುಟ-೨೦೮+೨೪+೪, ಬೆಲೆ ರೂ. ೧೫೦/-

ಒಗಟುಗಳು ಸಾಮಾನ್ಯವಾಗಿ ಭಾಷಾ ಚಮತ್ಕಾರದಿಂದ ಕೂಡಿರುತ್ತವೆ. ದೊಡ್ಡವರು ಚಿಕ್ಕವರು ಎನ್ನದೆ ಸಾಮಾನ್ಯರೂ ಸಹ ತಮ್ಮ ಕೆಲಸ ಕಾರ್ಯಗಳ ಮಧ್ಯೆಯೂ ತಮ್ಮ ಬುದ್ಧಿಮಟ್ಟವನ್ನು ಚುರುಕುಗೊಳಿಸುವ ಪ್ರಯತ್ನದ ಫಲವೇ ಒಗಟುಗಳಾಗಿರಬಹುದು. ಮನರಂಜನೆಗಷ್ಟೆ ಸೀಮಿತವಲ್ಲದೆ, ಉತ್ತರಗಳನ್ನು ಹುಡುಕಲು ನಡೆಸುವ ಕಸರತ್ತಿನಿಂದಾಗಿ ಅನೇಕ ಅರ್ಥ ಹೊಳಹುಗಳ ಬೌದ್ಧಿಕ ವಿಕಾಸವನ್ನು ಒಗಟುಗಳಿಂದ ಪಡೆದಿರಬಹುದು.

ಜೀನಹಳ್ಳಿ ಸಿದ್ದಲಿಂಗಪ್ಪನವರು ಸಂಪಾದಿಸಿರುವ 'ಬಲ್ಲಂಥ ಜಾಣ ಬಿಡಿಸ್ಹೇಳು' ಜನಪದ ಒಗಟುಗಳ ಸಂಗ್ರಹದಲ್ಲಿ ಒಟ್ಟು ೧೦೫೫ ಒಗಟುಗಳನ್ನು ಕಾಣುತ್ತೇವೆ. ಒಂದೊಂದು ಒಗಟು ಸಹ ತನ್ನದೇ ಆದ ವಸ್ತು ವೈವಿಧ್ಯತೆಯಿಂದ ವಿಭಿನ್ನವಾಗಿದೆ. ಈಗಾಗಲೇ ೨೫ಕ್ಕೂ ಹೆಚ್ಚು ಜನಪದ ಕೃತಿಗಳನ್ನು ಜನಪದ ಸಾಹಿತ್ಯ ಲೋಕಕ್ಕೆ ನೀಡಿರುವ ಜೀನಹಳ್ಳಿ ಸಿದ್ದಲಿಂಗಪ್ಪನವರು ತನ್ನ ಅಜ್ಜನ ಪ್ರೇರಣೆ ಮತ್ತು ಪ್ರೋತ್ಸಾಹದಿಂದ ಜನಪದ ಸಂಗ್ರಹಕ್ಕೆ ಕಾಲಿರಿಸಿದ್ದು ಸ್ಮರಣೀಯ.

ಲೇಖಕರೇ ಹೇಳಿಕೊಂಡಿರುವಂತೆ ಇಲ್ಲಿನ ಒಗಟುಗಳು ಚನ್ನಗಿರಿ, ಹೊನ್ನಾಳಿ, ಶಿವಮೊಗ್ಗ, ಭದ್ರಾವತಿ, ಶಿಕಾರಿಪುರ ಸ್ಥಳಗಳ ಸುತ್ತಮುತ್ತ ಸಂಗ್ರಹಿಸಿದ ಒಗಟುಗಳಾಗಿವೆ.

ಕೃತಿಯಲ್ಲಿ ಹದಿನೇಳು ಪುಟದ ದೀರ್ಘ ಪ್ರಸ್ತಾವನೆಯು ಒಗಟುಗಳ ಬಗ್ಗೆ ವಿಸ್ತಾರವಾದ ಪರಿಚಯ ಮಾಡಿಕೊಡುತ್ತದೆ. ಈಗಾಗಲೇ ಅನೇಕ ವಿದ್ವಾಂಸರು ಒಗಟುಗಳ ಬಗ್ಗೆ ಹೇಳಿರುವ ಹೇಳಿಕೆಗಳನ್ನು, ಒಗಟಿಗೆ ಬೇರೆ ಬೇರೆ ಹೆಸರಲ್ಲಿ ಕರೆಯಬಹುದಾದ

ಹೆಸರುಗಳನ್ನು, ಒಗಟಿನ ಬಗ್ಗೆ ಮಾಡಿರಬಹುದಾದ ವರ್ಗೀಕರಣವನ್ನು, ಪ್ರಾಚೀನರಲ್ಲಿ ಒಗಟುಗಳ ಬಗ್ಗೆ ಇವರ ಅಭಿಪ್ರಾಯಗಳು, ಆಧುನಿಕತೆಯಲ್ಲಿ ಬದಲಾವಣೆಗೊಂಡು ಬಳಕೆಯಾಗುತ್ತಿರುವ ವಿಚಾರವನ್ನು ಹೇಳುವ ಪ್ರಯತ್ನ ಮಾಡಿದ್ದಾರೆ.

ಈ ಕೃತಿಯಲ್ಲಿ ಒಗಟುಗಳ ವಸ್ತು ವಿಸ್ತಾರತೆಯನ್ನು ಕಾಣಬಹುದು. ಮನುಷ್ಯನ ದೇಹದ ಅಂಗಾಂಗಗಳು, ಮನೆಯ ವಸ್ತುಸಾಮಗ್ರಿಗಳು, ಮನೆಯ ಅಡುಗೆ ಪದಾರ್ಥ ಗಳು, ಪ್ರಾಣಿ–ಪಕ್ಷಿ, ಕೀಟ–ಕ್ರಿಮಿ, ಪ್ರಕೃತಿ, ಹಣ್ಣು–ಹಂಪಲು, ದವಸ–ಧಾನ್ಯ, ಹೂ, ಮನುಷ್ಯ ಧರಿಸುವ ಆಭರಣಗಳ ಕಲಾತ್ಮಕತೆ, ರೂಪಕ, ಸಾಂಕೇತಿಕ ಇನ್ನೂ ಮೊದಲಾದ ವಿಷಯಗಳನ್ನೊಳಗೊಂಡಂತೆ ಒಗಟುಗಳನ್ನು ಕಾಣಬಹುದಾಗಿದೆ.

ಈ ಒಗಟುಗಳಲ್ಲೆಲ್ಲಾ ಸಾಮಾನ್ಯವಾಗಿ ಮನರಂಜನೆ, ಹಾಸ್ಯ, ವಿಡಂಬನೆ, ವಿಸ್ಮಯ ಗಳನ್ನು ಕಾಣಬಹುದು. ಕೆಲವು ಅಶ್ಲೀಲವೆನಿಸಿದರೂ ಒಳನೋಟದ ಅರ್ಥ ಬೇರೆಯೇ ಆಗಿರುವ ಒಗಟುಗಳನ್ನು ಸಹ ಸಂಗ್ರಹಿಸಲಾಗಿದೆ.

'ಅ'ಕರಾದಿಯಾಗಿ ಒಗಟುಗಳಿಗೆ ಉತ್ತರವನ್ನು ನೀಡಿರುವ ಪ್ರಯತ್ನ ಉತ್ತಮವೆನಿಸಿದೆ. ಉತ್ತರಗಳಷ್ಟೇ ಅಲ್ಲದೆ 'ಅ'ಕರಾದಿಯಾಗಿಯೇ ಅರ್ಥಕೋಶ, ಶಬ್ದಸೂಚಿ, ಅಂಕಿತನಾಮ ಸೂಚಿ, ಅಂಗಾಂಗ ಸೂಚಿಯಲ್ಲಿ ಗಿಡ–ಮರ–ಬಳ್ಳಿ–ಮುಳ್ಳು ಸೂಚಿ ದವಸ–ಧಾನ್ಯಸೂಚಿ, ಪ್ರಾಣಿ–ಪಕ್ಷಿ–ಕ್ರಿಮಿ–ಕೀಟ ಸೂಚಿ ಹೀಗೆ ಬಯಲು–ಆಕಾಶ ಸೂಚಿ, ಮನೆ ಮತ್ತು ಸಾಧನ ಸಾಮಗ್ರಿ ಸೂಚಿ ಸಂಬಂಧ ಸೂಚಿ, ಹಣ–ಒಡವೆ–ವಸ್ತ್ರ ಸೂಚಿ, ಹೂ–ಹಣ್ಣು–ಕಾಯಿ ಸೂಚಿ ಎಲ್ಲವನ್ನು ಸಹ ಅಕಾರಾದಿಯಾಗಿ ವರ್ಗೀಕರಿಸಿ, ಅವುಗಳ ಸಂಖ್ಯೆಯನ್ನು ನೀಡಿರುವುದು ಜೀನಹಳ್ಳಿ ಸಿದ್ದಲಿಂಗಪ್ಪನವರ ಪ್ರಾಮಾಣಿಕ ಮತ್ತು ಕ್ರಮಬದ್ಧತೆಯ ಸಂಗ್ರಹ ಕಾರ್ಯದ ಶಿಸ್ತುಬದ್ಧತೆಗೆ ಕನ್ನಡಿ ಹಿಡಿದಂತಿದೆ. ಒಟ್ಟಾರೆ 'ಬಲ್ಲಂಥ ಜಾಣ ಬಿಡಿಸ್ಥೇಳು' ಜನಪದ ಒಗಟುಗಳ ಸಂಕಲನವೂ ಒಂದು ಉತ್ತಮ ಸಂಪಾದನಾ ಕೃತಿಯಾಗಿದೆ. ಜೀನಹಳ್ಳಿ ಸಿದ್ಧಲಿಂಗಪ್ಪನವರಿಂದ ಮತ್ತಷ್ಟು ಕೃತಿಗಳು ಸಂಗ್ರಹವಾಗಲಿ.

ಆರ್. ಶಾಂತ ಕಂಪಾರಹಳ್ಳಿ

೭೧. ಜನಪದ ಗಾದೆ ಮತ್ತು ಒಗಟುಗಳು–ಒಂದು ಪರಿಚಯ

ಜನಪದ ಗಾದೆ ಮತ್ತು ಒಗಟುಗಳು, ಸಂ. ಡಾ. ಮೈಲಹಳ್ಳಿ ರೇವಣ್ಣ, ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ–ಮಾರ್ಗ, ಹೊನ್ನಾಳಿ ತಾ, ದಾವಣಗೆರೆ ಜಿಲ್ಲೆ–೫೭೭೨೨೩, ೨೦೧೨, ಪುಟ–೩೨೮+೮+೪, ಬೆಲೆ ರೂ. ೨೫೦/-

ಡಾ. ಮೈಲಹಳ್ಳಿ ರೇವಣ್ಣನವರು ಸಂಪಾದಿಸಿರುವ 'ಜನಪದ ಗಾದೆ ಮತ್ತು ಒಗಟುಗಳು' ಎಂಬ ಕೃತಿಯನ್ನು ದಾವಣಗೆರೆ ಜಿಲ್ಲೆಯ ಪ್ರೇಮ ಪ್ರಕಾಶನ ೨೦೧೨ರಲ್ಲಿ ಪ್ರಕಟಿಸಿರುವುದು ಸಂತೋಷಕರ ಸಂಗತಿ.

ಜನಪದ ಗಾದೆಗಳು ಮತ್ತು ಒಗಟುಗಳು ಈ ಎರಡೂ ಪ್ರಕಾರಗಳು ಜನಪದರ ಜೀವನದಲ್ಲೇ ತುಂಬಿದಂತಿದೆ. ಪ್ರಕಾಶಕರು ಹೇಳಿರುವಂತೆ ಗಾದೆಗಳು ಮತ್ತು ಒಗಟುಗಳು ಒಂದರೊಡನೊಂದು ಅವಳಿ ಜವಳಿಯೆನಿಸಿಕೊಂಡ ಹಾಗೆ ಬೆರೆತಿವೆ. ಜೀವನಾನುಭವ ಗಳಿಂದ ಹೊರಹೊಮ್ಮಿದ ಗಾದೆಗಳು ಕಡಿಮೆ ಶಬ್ದಗಳಲ್ಲಿ ಹೆಚ್ಚು ಅರ್ಥಸ್ಫುರಿಸುವಂತೆ ಕಟ್ಟಲಾಗಿರುತ್ತದೆ. ಆದರೆ ಒಗಟುಗಳು ಬೆರಗು ಹುಟ್ಟುವಂಥದ್ದಾಗಿರುತ್ತವೆಂಬುದು ಗಮನಾರ್ಹ.

ರೇವಣ್ಣನವರು ಸಂಗ್ರಹಿಸಿರುವ ಸಂದರ್ಭದಲ್ಲಿ ಆದ ಅನುಭವಗಳನ್ನು ಸಂಪಾದಕರ ಮಾತುಗಳಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಅಂಬಳಿಕೆ ಹಿರಿಯಣ್ಣನವರ ಮುನ್ನುಡಿಯು ಅರ್ಥವತ್ತಾದ ಗಾದೆಗಳ ಬಗ್ಗೆ ಇರುವ ಅಭಿಪ್ರಾಯವನ್ನು ಕಡಿಮೆ ಶಬ್ದಗಳಲ್ಲಿ ಕಟ್ಟಿಕೊಡುತ್ತಾರೆ. ಮೈಲಹಳ್ಳಿ ರೇವಣ್ಣನವರ ೨೫ ಪುಟದ ದೀರ್ಘ ಪ್ರಸ್ತಾವನೆಯು ಒಬ್ಬ ಕ್ಷೇತ್ರಕಾರ್ಯ ನಡೆಸುವ ಕ್ಷೇತ್ರತಜ್ಞನ ಆಸಕ್ತಿ, ಕ್ಷೇತ್ರಕಾರ್ಯವನ್ನು ನಿಭಾಯಿಸುವ ರೀತಿ, ಕ್ರಮಬದ್ಧ ವರ್ಗೀಕರಣದತ್ತ ಹೆಚ್ಚು ವಿಷಯ ಪ್ರಸ್ತಾಪ ಮಾಡುತ್ತಾರೆ.

ಈ ಕೃತಿಯ ಸಂಗ್ರಹದ ಸಂದರ್ಭದಲ್ಲಿ ಗಾದೆಗಳನ್ನು ಯಾವ ದೃಷ್ಟಿಕೋನಗಳಿಂದ ನೋಡಿ ಗಾದೆಗಳನ್ನು ವರ್ಗೀಕರಿಸಿ ನೋಡಬಹುದೆಂಬ ಮಾಹಿತಿಯನ್ನು ಸಂಪಾದಕರು ನೀಡುತ್ತಾರೆ. ಇಲ್ಲಿನ ಗಾದೆಗಳನ್ನು ಸಾಮಾಜಿಕ ಗಾದೆಗಳು, ಸಾಹಿತ್ಯಿಕ ಗಾದೆಗಳು, ಭಾಷಿಕ ಗಾದೆಗಳು, ಸಾಂಸ್ಕೃತಿಕ ಗಾದೆಗಳು, ಸ್ತ್ರೀ ನೆಲೆಯ ಗಾದೆಗಳು ಎಂದು ಆಯಾ ವಿಷಯಗಳಿಗೆ ಅನುಸಾರವಾಗಿ ನೋಡಲು ಮತ್ತು ನೋಡಬಹುದಾದ ಮಾರ್ಗ ವನ್ನು ಸೂಚಿಸಿದ್ದಾರೆ.

ಕ್ಷೇತ್ರಕಾರ್ಯದ ಹಾದಿಯಲ್ಲಿ ಅನುಭವಗಳು ಮತ್ತು ಸಂಗ್ರಹಿಸಿಕೊಳ್ಳುವ ಜಾಣ್ಮೆಯನ್ನು ತಿಳಿಸಿರುವುದು ಅಧ್ಯಯನ ನಡೆಸುವವರಿಗೆ ಮಾರ್ಗದರ್ಶನವಾಗಿದೆ.

ಗಾದೆಗಳನ್ನು ಸಹ 'ಅ'ಕರಾದಿಯಾಗಿ ವಿಂಗಡಣೆ ಮಾಡಿರುವ ಕ್ರಮ ವಿಶೇಷವೆನಿಸಿದೆ. ಒಟ್ಟು ೩೨೨ ಗಾದೆಗಳು ಸಹ ವಿಭಿನ್ನ ವಸ್ತು ವೈವಿಧ್ಯತೆಯಿಂದ, ಸ್ವಾರಸ್ಯ ತುಂಬಿದ ಜೀವನಾನುಭವದ ಹರಳಿನಂತಿವೆ. 'ಅ'ಕರಾದಿಯಾಗಿ ಅರ್ಥಕೋಶ, ಗಾದೆಯ ಹಿಂದಿನ ಕಥೆಗಳು, ಗಾದೆಗಳ ಕಥೆಯನ್ನು ಹೇಳಿವ ವಕ್ತೃಗಳ ಸೂಚಿ ಸಮರ್ಪಕವೆನ್ನಿಸಿದೆ.

ಎರಡನೇ ಭಾಗವಾದ ಒಗಟುಗಳಿಗೆ ಸಂಬಂಧಿಸಿದ ಭಾಗವು ಸಿಪಿಕೆಯವರ ಮುನ್ನುಡಿಯೊಂದಿಗೆ ಗಾದೆ ಮತ್ತು ಒಗಟುಗಳ ಬಗ್ಗೆ ಗ್ರಾಮೀಣ ಜನರಲ್ಲಿ ಇರುವ ಭಾವನೆಗಳು, ಕಾವ್ಯಾತ್ಮಕ ಮತ್ತು ಕಥನಾತ್ಮಕ ಒಗಟುಗಳ ಗುಣ ವಿಶೇಷತೆಗಳು ಹೆಚ್ಚು ಗಮನಸೆಳೆಯುತ್ತವೆ. ಸುಮಾರು ೭೦೨ ಒಗಟುಗಳು ಒಂದು ಮಾದರಿಯದ್ದಾದರೆ, ಕೆಲವು ಗೀತಾತ್ಮಕ ಒಗಟುಗಳು, ಗಣಿತಾತ್ಮಕ ಒಗಟುಗಳು, ಸರಪಣಿ ಒಗಟುಗಳು, ಸಂಭಾಷಣಾತ್ಮಕ ಒಗಟುಗಳು, ಕಥನಾತ್ಮಕ ಒಗಟುಗಳೂ ಸಹ ವಿಶೇಷವೆನ್ನಿಸುತ್ತವೆ. ಈ ಎಲ್ಲಾ ಒಗಟುಗಳಿಗೆ ಕೊನೆಯಲ್ಲಿ ನೀಡಿರುವ ಉತ್ತರಗಳು, ಶಬ್ದಾರ್ಥಸೂಚಿ, ವಕ್ತೃಗಳ ವಿವರ, ಗ್ರಂಥ ಮತ್ತು ಲೇಖನಸೂಚಿ, ಒಗಟು ಮತ್ತು ಗಾದೆಗಳಿಗೆ

ಸಂಬಂಧಿಸಿದಂತೆ ಹಲವಾರು ವಿದ್ವಾಂಸರ ಅಭಿಪ್ರಾಯಗಳು ಗಮನಾರ್ಹವಾಗಿವೆ ಮತ್ತು ಓದುಗರಲ್ಲಿ ಆಸಕ್ತಿ ಹುಟ್ಟಿಸುತ್ತವೆ.

ಒಟ್ಟಾರೆ ಡಾ. ಮೈಲಹಳ್ಳಿ ರೇವಣ್ಣನವರ ಜನಪದ ಗಾದೆ ಮತ್ತು ಒಗಟುಗಳು ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರ ಮಾಹಿತಿಯನ್ನು ಒಳಗೊಂಡ ಒಂದು ಉತ್ತಮ ಜನಪದ ಸಂಗ್ರಹ ಕೃತಿಯಾಗಿದೆ.

ಆರ್. ಶಾಂತ ಕಂಪಾರಹಳ್ಳಿ

೭೨. ಗಾದೆಗಳ ಒಳಸೂಕ್ಷ್ಮ ಅರಿಯುವ ಪ್ರಯತ್ನ

ಗಾದೆಗಳ ಮಾತುಗಳು ಅರ್ಥವಿವರಣೆಯ ಸಹಿತ, ಸಂಗ್ರಹಕರು; ಕು.ನಂದಾ ಸಿ.ಅಕ್ಕಿ, ಪ್ರ. ಶಿವಕೃಪಾ ಪ್ರಕಾಶನ, ಈಶ್ವರ ಬಡಾವಣೆ, ರಾಜೀವ್‌ಗಾಂಧಿ ನಗರ, ಗದಗ–೫೮೨೧೦೧, ೨೦೧೨, ಪುಟ–೮೦, ಬೆಲೆ ರೂ. ೪೦/-

ಕನ್ನಡ ಜನಪದ ಸಾಹಿತ್ಯದಲ್ಲಿ ಶಾಸ್ತ್ರೀಯವಾಗಿ ಗಾದೆಗಳನ್ನು ಸಂಗ್ರಹಿಸುವ, ಅವುಗಳನ್ನು ವೈಜ್ಞಾನಿಕ ರೀತಿಯಲ್ಲಿ ವರ್ಗೀಕರಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಗಾದೆಗಳನ್ನು ಸಂಗ್ರಹಿಸುವ–ಸಂಪಾದಿಸುವ ಕೆಲಸ ಶತಮಾನದಿಂದಲೂ ನಡೆಯುತ್ತಿದೆ. ಪ್ರದೇಶ, ಪ್ರದೇಶದಲ್ಲಿ ದೊರೆಯುವ ವೈವಿಧ್ಯಪೂರ್ಣವೆನಿಸುವ ಗಾದೆಗಳ ಲೋಕ ತೆರೆದುಕೊಳ್ಳುತ್ತಿದೆ. ಆಯಾಯ ಪ್ರದೇಶದಲ್ಲಿ ಸಿಗುವ ಗಾದೆಗಳ ಶೋಧನೆ, ವಿಶ್ಲೇಷಣೆ ತೀವ್ರಗತಿಯಲ್ಲಿ ನಡೆಯುತ್ತಿದೆ. ದೊರೆತ ಗಾದೆಗಳನ್ನು ಬಹಳಷ್ಟು ವಿದ್ವಾಂಸರು ಭಿನ್ನ ಭಿನ್ನ ರೀತಿಯಲ್ಲಿ ವರ್ಗೀಕರಿಸಿ, ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಗಾದೆಗಳ ಅರಿವು ಇಲ್ಲದ ವ್ಯಕ್ತಿಯೇ ಇಲ್ಲವೆನ್ನಬಹುದು. ಗಾದೆಗಳನ್ನು ತಾನು ಇನ್ನೊಬ್ಬರ ಜೊತೆ ಮಾತನಾಡುವ ಸಂದರ್ಭದಲ್ಲಿ ಊಟದಲ್ಲಿ ಉಪ್ಪಿನಕಾಯಿ ರೀತಿಯಲ್ಲಿ ಬಳಸುತ್ತಾ ಅದರ ಸವಿಯನ್ನು ಸವಿಯುತ್ತಾನೆ. ವೇದ ಸುಳ್ಳಾದರೂ ಜನಪದರು ನಂಬಿರುವ ಗಾದೆಗಳು ಎಂದೂ ಸುಳ್ಳಾಗಿರುವುದಿಲ್ಲವೆಂದು ನಂಬಿದ್ದಾನೆ. ಆದ್ದರಿಂದಲೇ ಜನರ ಬಾಯಲ್ಲಿ ಮತ್ತೆ ಮತ್ತೆ ಅವು ಪ್ರಯೋಗಕ್ಕೆ ಒಳಪಟ್ಟು ಉಳಿದುಕೊಂಡು ಬಂದಿವೆ. ಪ್ರಸ್ತುತ ಸಂದರ್ಭದಲ್ಲಿ ಗಾದೆ ಬಳಸುವವರ ಸಂಖ್ಯೆ ದಿನೇ ದಿನೇ ಕಡಿಮೆ ಯಾಗುತ್ತಿದೆ. ಈಗಿನ ಮಕ್ಕಳಲ್ಲಿ ಗಾದೆಗಳ ಜ್ಞಾನದ ಅರಿವು ಮೂಡಿಸುವ ನಿಟ್ಟಿನಲ್ಲಿ ಕುಮಾರಿ ನಂದಾ ಸಿ. ಅಕ್ಕಿಯವರು 'ನಲಿ–ಕಲಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲು' ಈಗಾಗಲೇ ಪ್ರಚಲಿತವಿರುವ ಗಾದೆಗಳಿಗೆ ಅರ್ಥವಿವರಣೆ ನೀಡಿರುವುದು ನಿಜಕ್ಕೂ ಆಶಾದಾಯಕ ಬೆಳವಣಿಗೆಯಾಗಿದೆ.

ಈ ಕೃತಿಯಲ್ಲಿ ೧೦೬ ಜನಪ್ರಿಯ ಗಾದೆಗಳ ಸಂಕ್ಷಿಪ್ತವಾದ ವಿಶ್ಲೇಷಣೆ ಮಾಡಿದ್ದಾರೆ. ಪ್ರತಿ ಗಾದೆಗಳ ಅರ್ಥವಿವರಣೆ ನೀಡುತ್ತಾ, ಸಮಾಜಕ್ಕೆ ಅನ್ವಯ ಮಾಡುತ್ತಾ ಪ್ರಸ್ತುತ ಸಂದರ್ಭದಲ್ಲಿ ಈ ಗಾದೆಗಳು ಎಷ್ಟರಮಟ್ಟಿಗೆ ಪ್ರಾಮುಖ್ಯವಾಗುತ್ತವೆಂಬುದನ್ನು ತಿಳಿಸುತ್ತಾರೆ. ಪ್ರತಿಯೊಂದು ಗಾದೆ ಕಟ್ಟಿದ ಕಾಲದಲ್ಲಿಯೇ ಸತ್ತು ಹೋಗುವಂಥವುಗಳಲ್ಲ.

ಅವು ಎಲ್ಲಾ ಕಾಲಕ್ಕೂ ಸಲ್ಲುವ ರೀತಿಯಲ್ಲಿಯೇ ಜನಸಮುದಾಯ ಕಟ್ಟಿಕೊಂಡಿದೆ. ಆ ರೀತಿಯ ಗಾದೆಗಳ ಚ್ಚರ್ಚೆ ಇಲ್ಲಿ ಮಾಡಲಾಗಿದೆ. ಇಲ್ಲಿ ವಿಶ್ಲೇಷಣೆಗೆ ಬಳಸಿ ಕೊಂಡಿರುವ ಗಾದೆಗಳು ಕೆಲವು ಶಬ್ದಾಲಂಕಾರದ ಅನುಪ್ರಾಸದ ನೆಲೆಯಲ್ಲಿವೆ. ಕೆಲವು ದೃಷ್ಟಾಂತಾಲಂಕಾರದ ಗಾದೆಗಳಾಗಿವೆ. ಅವುಗಳಲ್ಲಿ "ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ", "ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ", ಹನಿ ಹನಿ ಕೂಡಿದರೆ ಹಳ್ಳ; ತೆನೆ ತೆನೆ ಕೂಡಿದರೆ ಬಳ್ಳ", ಜಾಣನಿಗೆ ಮಾತಿನ ಪೆಟ್ಟು; ಕತ್ತೆಗೆ ಲತ್ತೆಯ ಪೆಟ್ಟು", ಸಾವಿರ ಕುದುರೆಯ ಸರದಾರ; ಮನಿ ಹೆಂಡ್ತಿಗೆ ಪಿಂಜಾರ", "ಅಳೋ ಹೆಂಗಸನ್ನ ನಂಬಬಾರದು; ನಗೋ ಗಂಡಸನ್ನ ನಂಬಬಾರದು" ಹೀಗೆ ಒಂದು ವಿಷಯಕ್ಕೆ ಪೂರಕವೆಂಬಂತೆ ಮುಂದಿನ ವಿಷಯ ಅದನ್ನು ಅನುಸರಿಸಿ ಬರುತ್ತದೆ. ಅರ್ಥವೂ ಕೂಡಾ ಎರಡಾಗಿದ್ದರೂ ಒಂದೇ ವಿಷಯಕ್ಕೆ ಸಂಬಂಧಿಸಿರುತ್ತವೆ. ಹಾಗೆಯೇ ಕೆಲವು ಪ್ರಶ್ನಾರ್ಥಕ ಗಾದೆಗಳಿವೆ. ಅವುಗಳಲ್ಲಿ "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?", "ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವೇನು?", "ಕೋಪದಲ್ಲಿ ಕೊಯ್ದ ಮೂಗು ಶಾಂತವಾದಾಗ ಬಂದೀತೆ?", "ನಾಯಿಯನ್ನು ಸಿಂಹಾಸನದ ಮೇಲೆ ಕೂರಿಸಿದರೆ ಎಲುಬು ಕಡಿಯೋದು ಬಿಟ್ಟೀತೆ?" ಎನ್ನುವ ಗಾದೆಗಳು ಭಾಷೆ, ಅಲಂಕಾರದ ಹಿನ್ನೆಲೆಯಲ್ಲಿ ಮುಖ್ಯವಾಗುತ್ತವೆ. ಇಷ್ಟೇ ಅಲ್ಲದೆ ಇನ್ನೂ ಮನೋಜ್ಞವೆನಿಸುವ ಗಾದೆಗಳ ಚರ್ಚೆ ಇಲ್ಲಿ ನಡೆದಿದೆ.

ಗಾದೆಯನ್ನು ವಿಶ್ಲೇಷಿಸುವಾಗ ಸರಳ ಭಾಷೆಯಲ್ಲಿ ಪ್ರತಿಯೊಬ್ಬರಿಗೂ ಅರ್ಥವಾಗುವ ರೀತಿಯಲ್ಲಿ ಕಟ್ಟಿಕೊಡುತ್ತಾರೆ. ಗಾದೆಗೆ ವಿವರಣೆ ನೀಡುವಾಗ ಪೂರಕವೆನ್ನುವ ಇನ್ನಷ್ಟು ಗಾದೆಗಳನ್ನು ಲೇಖಕರು ನೀಡುತ್ತಾರೆ. ಮಕ್ಕಳಿಗಾಗಿಯೇ ಈ ಗಾದೆಗಳ ವಿಶ್ಲೇಷಣೆಯೆಂದು ಮೊದಲೇ ಕೃತಿಯಲ್ಲಿ ಹೇಳಿರುವುದರಿಂದ ಆ ನಿಟ್ಟಿನಲ್ಲಿ ಮುಂದುವರೆಯುತ್ತದೆ. ಬಹುಮುಖಿಯಾದ ಮಾಹಿತಿಗಳನ್ನು ಕೊಡುತ್ತಾ, ಸಮಕಾಲೀನ ವಿಷಯಗಳನ್ನು ಪೂರಕವಾಗಿ ನೀಡುತ್ತಾರೆ. ಇವುಗಳಲ್ಲದೆ ಕೊನೆಯಲ್ಲಿ ೮೨ ಜನಪ್ರಿಯ ಗಾದೆಗಳಿಗೆ ಒಂದೊಂದು ಸಾಲಿನಲ್ಲಿ ಹೊಂದಿಕೆಯಾಗುವ ರೀತಿಯಲ್ಲಿ ಅರ್ಥವಿವರಣೆ ನೀಡಿದ್ದಾರೆ.

ಒಟ್ಟಾರೆ ಗಾದೆಗಳು ಮಾನವ ಕುಲದ ಜೀವನವನ್ನು ಸಮಗ್ರವಾಗಿ ಕಟ್ಟಿಕೊಡಬಲ್ಲವು. ಒಂದೊಂದು ಗಾದೆಯೂ ಜನರ ಸಂಸ್ಕೃತಿಯ ಭಾಗವಾಗಿ ನಿರ್ಮಾಣಗೊಂಡಿವೆ. ಒಂದು ಸಂದರ್ಭಕ್ಕೆ ಒಂದು ಗಾದೆ ಅನೇಕ ರೀತಿಯ ಅರ್ಥ ನೀಡುವಷ್ಟರಮಟ್ಟಿಗೆ ಸಮೃದ್ಧ ಸಂಪತ್ತನ್ನು ಒಳಗೊಂಡಿರುತ್ತದೆ. ಈ ಕೃತಿ ಚಿಕ್ಕದಾದರೂ, ಮಕ್ಕಳಿಗಾಗಿಯೇ ಲೇಖಕರು ಹೇಳಿದ್ದರೂ ಪ್ರತಿಯೊಬ್ಬರೂ ಈ ಕೃತಿಯನ್ನು ಓದಲೇಬೇಕು.

ಕೆ.ವಿ. ಮುದ್ದವೀರಪ್ಪ

□□

೫

ಅನುವಾದ ಕೃತಿಗಳು

೭೩. **ಬರಗಾಲದ ಭೀಕರತೆಯ ಅನಾವರಣ**

ಬರ ಅಂದ್ರೆ ಎಲ್ಲರಿಗೂ ಇಷ್ಟ, ಮೂಲ: ಪಿ. ಸಾಯಿನಾಥ್, ಕನ್ನಡಕ್ಕೆ: ಜಿ.ಎನ್. ಮೋಹನ್, ಪ್ರ. ಅಭಿನಯ ೧೭/೧೮–೨, ೧ನೇ ಮುಖ್ಯ ರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು–೫೬೦೦೧೦, ೨೦೧೨, ಪುಟ–೫೦೪, ಬೆಲೆ ರೂ. ३೫೦/-

ಬರಗಾಲದ ಭೀಕರತೆಯನ್ನು ಸಾರುವ ಒಂದು ಜನಪದ ಗೀತೆ ಹೀಗಿದೆ. "ಒಕ್ಕಲಗೇರ್‍ಯಾಗೆ ಮಳೆರಾಯ ಮಕ್ಕಳ ಮಾರ್‍ಯಾರು ಮಳೆರಾಯ ಮಕ್ಕಳ ಮಾರಿ ರೊಕ್ಕ ತಕ್ಕಂಡು ಭತ್ತಾಂತ ತಿರುಗ್ಯಾರು ಮಳೆರಾಯ" ಎನ್ನುವ ಗೀತೆ ಅಕ್ಷರಶಃ 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಕೃತಿಗೆ ಹೊಂದಿಕೆಯಾಗುತ್ತದೆ. ಭಾರತೀಯ ಪತ್ರಿಕೋದ್ಯಮದಲ್ಲಿ ತಮ್ಮದೇ ಛಾಪನ್ನು ಇರಿಸಿಕೊಂಡಿರುವ ಪಿ. ಸಾಯಿನಾಥ್‌ರವರು ಭಾರತದ ಬದುಕು ಹೇಗಿದೆಂಬುದನ್ನು ಒರಿಸ್ಸಾ, ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶ ಹಾಗೂ ತಮಿಳುನಾಡು ರಾಜ್ಯಗಳಲ್ಲಿನ ಕೆಲವು ಜಿಲ್ಲೆಗಳ ಗ್ರಾಮೀಣ ಬಡತನದ ಹಾಗೂ ಬರಗಾಲದ ಭೀಕರತೆಯಿಂದ ಕೂಡಿರುವ ದಾರುಣತೆಯನ್ನು ತಳಸ್ಪರ್ಶೀಯವಾಗಿ ಹಲವು ವರ್ಷಗಳ ಕಾಲ ಸುತ್ತಾಡಿ ಮಾಹಿತಿಯನ್ನು ಸಂಗ್ರಹಿಸಿ ಇಲ್ಲಿ ಪ್ರಕಟಿಸಿದ್ದಾರೆ. ಈ ಕೆಲಸಕ್ಕಾಗಿ ಕ್ಷೇತ್ರಕಾರ್ಯ ಮಾಡಲು 'ಟೈಮ್ಸ್ ಆಫ್ ಇಂಡಿಯಾ' ಫೆಲೋಶಿಪ್ ಕೊಟ್ಟು, ಪ್ರೋತ್ಸಾಹ ನೀಡಿ ಇನ್ನಷ್ಟು ಆಪ್ತತೆಯಿಂದ ಒಳನೋಟಗಳನ್ನು ಇಟ್ಟುಕೊಂಡು ಕಟ್ಟಿಕೊಡಲು ಸಾಧ್ಯವಾಗಿದೆಂದು ಈ ಕೃತಿ ಓದಿದವರಿಗೆ ಅನ್ನಿಸುತ್ತದೆ. ಜನರ ಪಾಡನ್ನು ಸುದೀರ್ಘವಾಗಿ ಕಥನ ಮಾಲೆಯಾಗಿ ಪ್ರಕಟಿಸಿರುವ ಇಲ್ಲಿನ ವಿಷಯಗಳನ್ನು 'ಭಾರತೀಯ ಪತ್ರಿಕೋದ್ಯಮದ ಕೆಟ್ಟ ಹುಡುಗ' ಎಂಬ ಪ್ರಶಂಸೆಗೆ ಗುರಿಯಾದ ಪಿ. ಸಾಯಿನಾಥ್‌ರವರು 'ಎವರಿಬಡಿ ಲವ್ಸ್ ಎ ಗುಡ್ ಡ್ರಾಟ್' ಕೃತಿಯಲ್ಲಿ ಚಿತ್ರಿಸಿ, ಭಾರತೀಯ ಮಾನವೀಯ ಪತ್ರಿಕಾ ಬರಹಗಾರರಾಗಿ, ಸೃಜನಶೀಲ ಬರಹಗಾರರಾಗಿ ಹೊರಹೊಮ್ಮಿ ಓದುಗ ವರ್ಗವನ್ನು ಮನಗೆದ್ದಿರುವುದನ್ನು ಕಾಣಬಹುದು.

'ಟೈಮ್ಸ್ ಆಫ್ ಇಂಡಿಯಾ'ದ ಪ್ರಸಿದ್ಧ ಪತ್ರಿಕಾ ವರದಿಗಾರರಾಗಿರುವ ಪಿ. ಸಾಯಿನಾಥ್ ಅವರ 'ಎವ್ವರಿಬಡಿ ಲವ್ಸ್ ಎ ಗುಡ್ ಡ್ರಾಟ್' ಇಂಗ್ಲೀಷ್ ಕೃತಿಯನ್ನು ಕನ್ನಡ ಪತ್ರಿಕೋದ್ಯಮದ ಮುಖ್ಯ ಬರಹಗಾರರಾಗಿರುವ ಜಿ.ಎನ್.ಮೋಹನ್‌ರವರು ಪಿ.ಸಾಯಿನಾಥ್‌ರವರ ಬರಹಕ್ಕೆ ಎಲ್ಲಿಯು ಚ್ಯುತಿ ಬರದಂತೆ ಅಷ್ಟೇ ಆಪ್ತತೆಯಿಂದ ಕನ್ನಡಕ್ಕೆ ತಂದಿದ್ದಾರೆ. ಜಿ.ಎನ್.ಮೋಹನ್‌ರವರು ಕೂಡ ಪತ್ರಿಕೆಯಲ್ಲಿ ತಮ್ಮದೇ ರೀತಿಯಲ್ಲಿ ಕಾರ್ಯನಿರ್ವಹಿಸಿರುವುದರಿಂದ ಮೂಲದ ಕೃತಿಯು ಪತ್ರಿಕೆಯ ವರದಿಯ ರೂಪದಲ್ಲಿರುವುದನ್ನು ಮತ್ತು ಸಾಹಿತ್ಯ ಸಂಬಂಧದ ನೆಲೆಯಲ್ಲಿಯೂ ಇರುವುದರಿಂದ ಅದರ ಒಳಹೊರಗುಗಳನ್ನು ಸೂಕ್ಷ್ಮವಾಗಿ ಅಧ್ಯಯನ ನಡೆಸಿ ತಕ್ಕುದಾದ ರೀತಿಯಲ್ಲಿ ಕನ್ನಡಕ್ಕೆ ತಂದಿದ್ದಾರೆ.

ಈ ಕೃತಿಯ ಶೀರ್ಷಿಕೆಯಿಂದ ಹಿಡಿದು ಒಳಗಿನ ಅಧ್ಯಾಯಗಳಲ್ಲಿಯು ಕೂಡ ತುಂಬಾ ಸರಳ ರೀತಿಯಲ್ಲಿ ಪರಿಕಲ್ಪನೆಗಳನ್ನು ಇಟ್ಟಿದ್ದಾರೆ. ಆಯಾಯ ಪ್ರದೇಶದಲ್ಲಿ ಕಂಡುಬರುವ ದಟ್ಟ ಬಡತನ, ಆ ಬಡತನಕ್ಕೆ ಕೊಂಬೆ-ರಂಬೆಗಳ ರೀತಿಯಲ್ಲಿನ ಸಮಸ್ಯೆಗಳು, ಅದಕ್ಕೆ ಕಾರಣಗಳನ್ನು ಹುಡುಕುವುದರಲ್ಲೇ ಕಾಲಕಳೆಯುತ್ತಿರುವ ಪ್ರಭುತ್ವಗಳು, ಅಭಿವೃದ್ಧಿಯ ಹೆಸರಿನಲ್ಲಿ ಹಣವನ್ನು ಬಿಡುಗಡೆ ಮಾಡಿ ಎಲ್ಲಾ ಹಂತಗಳಲ್ಲಿ ಗಟಾರಕ್ಕೆ ಸೇರಿ ಮತ್ತೆ ಮತ್ತೆ ಬಡತನದ ಆರ್ದ್ರತೆಯಲ್ಲೇ ಸಾಗಿರುವ ಅಮಾಯಕ ಜನರ ದಾರುಣ ಚಿತ್ರಗಳನ್ನು ಕಣ್ಣಾರೆ ನೋಡಿದ ಮಾನವೀಯ ಪ್ರಜ್ಞೆಯಿರುವ ಬರಹಗಾರ ಸಮಸ್ಯೆಗಳನ್ನೇ ತಲೆಬರಹಕ್ಕೆ ಇಟ್ಟಿರುವುದು ನಿಜಕ್ಕೂ ಓದುಗರಿಗೆ ಆಪ್ತವಾಗಿ ಕಾಣುತ್ತದೆ. ಅವುಗಳ ಹಾದಿಯಲ್ಲೇ ಸಾಗಿರುವ ಈ ಒಟ್ಟು ಕೃತಿಯು ಜನಜೀವನದ ತಳಸ್ಪರ್ಶೀಯ ನಾಡಿಯನ್ನು ಬಿಂಬಿಸಿದೆ.

ಕೃತಿಯ ಪ್ರಾರಂಭದಲ್ಲಿ ಮೂಲ ಕರ್ತೃವಿನ ವ್ಯಕ್ತಿವಿವರ ಮತ್ತು ಕೃತಿ ಅನುವಾದಿಸಿದವರ ವಿವರ ಕೊಡಲಾಗಿದೆ. ಗುಳೆ ಎದ್ದ ಪಥಿಕನಿಗೆ ಜಿ.ಎನ್. ಮೋಹನ್‌ರವರು ಕೃತಜ್ಞತೆ ಸಲ್ಲಿಸುವಾಗ ಕನ್ನಡ ಪತ್ರಿಕೋದ್ಯಮದಲ್ಲಿ ಎಂತೆಂತಹ ಘಟಾನುಘಟಿಗಳು ಕಾಣಿಸಿಕೊಂಡಿದ್ದು, ಹಾಗೆಯೇ ಪಿ.ಸಾಯಿನಾಥ್ ಪಯಣದಲ್ಲಿ ೮೦ ಸಾವಿರ ಕಿ.ಮೀ ದೂರವನ್ನು ಸಂಚರಿಸಿದಾಗ ಪ್ರಧಾನವಾಗಿ ಕಂಡುಬರುತ್ತಿದ್ದ ಗುಳೆಯ ನೈಜತೆಯನ್ನು ಚಿತ್ರಿಸಿ, ತಾವು ಕೂಡ ಅವರೊಟ್ಟಿಗೆ ಗುಳೆ ಹೋಗುತ್ತಿದ್ದರು. ಆ ಸಮುದಾಯಗಳ ಕಷ್ಟನಿಷ್ಠುರಗಳನ್ನು ಅರ್ಥ ಮಾಡಿಕೊಂಡು ಬಿರುಕುಬಿಟ್ಟ ಬದುಕು ಸುಂದರವಾಗದೇ ಹಾಗೇ ಇರುವುದನ್ನು ವಿವರಿಸಿದ್ದಾರೆ. ಮೋಹನ್‌ರವರು ಹೇಳುವಂತೆ ಪಿ.ಸಾಯಿನಾಥ್ ವರ್ಷದ ೩೦೦ ದಿನಗಳನ್ನು ಯಾವ ಉತ್ಸಾಹವಿಲ್ಲದೆ ಇರುವ ಗ್ರಾಮಗಳಲ್ಲಿ ಸುತ್ತುತ್ತಾ ಕಟ್ಟಕಡೆಯ ಮನುಷ್ಯನ ಕಥೆ ಹೇಳುತ್ತಾ ಹೋಗುತ್ತಾರೆ. ಅವರ ಲೋಕದಲ್ಲಿ ಆದಿವಾಸಿಗಳಿದ್ದಾರೆ, ದಲಿತರಿದ್ದಾರೆ, ಅಸಹಾಯಕ ವೃದ್ಧರಿದ್ದಾರೆ, ತಿರುಗಿಬಿದ್ದ ಮಹಿಳೆಯರಿದ್ದಾರೆ.

ಒಂದು ಹೊತ್ತಿನ ಊಟ ಸಿಗದೆ ಕಣ್ಣು ಮುಚ್ಚಿದ ಅಸಂಖ್ಯಾತ ಎಳೆಗೂಸುಗಳಿವೆ. ಸಾಯಲೆಂದೇ ಹುಟ್ಟಿದ ಲೋಕವಿದೆ. ಇಂತಹ ಅಜ್ಞಾತ ಜಗತ್ತನ್ನು ಕಣ್ಣಿಗೆ ಕಟ್ಟುವಂತೆ, ನೊಂದವರೆದೆಯ ನೋವಿನ ಕೂಗನ್ನು ಲೋಕವೇ ಮಿಡಿವಂತೆ, ಪ್ರಭುತ್ವಗಳು ಅಲ್ಲಿಗೆ ದೌಡಿಡುವಂತೆ ಮಾಡಿದ್ದಾರೆ.

ಕನ್ನಡದಲ್ಲಿ ಅಭಿನವ ಪ್ರಕಾಶನದ ವತಿಯಿಂದ ನ. ರವಿಕುಮಾರ್ ಕೃತಿಯ ಅಂದ ಮತ್ತು ಅದರಲ್ಲಿ ಒಡಮೂಡಿರುವ ವಿಷಯದ ಬಗೆಗೆ ಹೇಳುತ್ತಾ ಭಾರತದ ಮೂಲೆ ಮೂಲೆಗಳಲ್ಲಿ ತಾಂಡವಾಡುತ್ತಿರುವ ಹಸಿವಿನ ರೂಪಕಗಳನ್ನು, ಅಸಹಾಯಕತೆಯ ಕಥೆಗಳನ್ನು, ಅಧಿಕಾರದ ಅಟ್ಟಹಾಸಗಳನ್ನು, ವ್ಯವಸ್ಥೆಯಲ್ಲಿನ ಅವ್ಯವಸ್ಥೆಗಳನ್ನು ಬಯಲಿ ಗೆಳೆಯುತ್ತಾ ಅಸಹಾಯಕ ಮುಗ್ಧ ಜನರ ಕಣ್ಣಲ್ಲಿ ಆಶಾವಾದದ ಬೀಜ ಬಿತ್ತುತ್ತಿದ್ದಾರೆ. ಒಂದಿಲ್ಲೊಂದು ದಿನ ಆ ಬೀಜಗಳು ಹೆಮ್ಮರವಾಗಿ ನಮ್ಮ ಸಮಾಜ ವ್ಯವಸ್ಥೆಯನ್ನು ಬದಲಿಸುತ್ತೇವೆಂಬ ಆಕಾಂಕ್ಷೆಯನ್ನು ಹೊತ್ತು ಸಾಗುವ ನಮ್ಮೆಲ್ಲರ ಕನಸಿಗೆ ಈ ಕೃತಿ ಪೂರಕವಾಗಿ ನಿಲ್ಲುತ್ತದೆಂಬ ಆಶಯದೊಂದಿಗೆ ಪ್ರಕಟಿಸುತ್ತೇನೆನ್ನುತ್ತಾರೆ.

'ಮೀಡಿಯಾ ಮಿರ್ಚಿ' ಅಂಕಣದಿಂದ ಜಿ.ಎನ್. ಮೋಹನ್‌ರವರು ಯಾವುದೀ ಪ್ರವಾಹವು? ಬುಸುಗುಡುತ್ತ ಧಾವಿಸುತಿದೆ... ಎಂಬುದನ್ನು ವಿವರಿಸುತ್ತಾ ಕಾಸಿಗಾಗಿ ಸುದ್ದಿ ಪ್ರಕಟಿಸುವ ಕಾಲದಲ್ಲಿ, ರಾಜಕಾರಣಿಗಳ ಸುತ್ತ ಗಿರಕಿ ಹೊಡೆಯುವ ಪತ್ರಕರ್ತರ ದಂಡು ಇರುವಾಗ ಪಿ.ಸಾಯಿನಾಥ್‌ರಂತಹರು ಮಾತ್ರ ಬೆರಳೆಣಿಕೆಯಷ್ಟು ವರದಿಗಾರರು ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ ಪತ್ರಿಕಾ ರಂಗಕ್ಕೆ ನ್ಯಾಯ ಒದಗಿಸುವವರು ಇರುತ್ತಾರೆಂದರೆ ತಪ್ಪಾಗಲಾರದು. ತಾನು ರಾಷ್ಟ್ರಪತಿ ವಿ.ವಿ.ಗಿರಿಯವರ ಮಗನೆಂಬುವ ಗರ್ವವಿರದೆ ಎಲ್ಲವನ್ನು ಮೀರಿ ಬೆಳೆಯುವ ಮಾನವ ಧರ್ಮವಿದೆಂಬುದನ್ನು ಸಾರಿರುವ ಸಹೃದಯಿಯಾಗಿದ್ದಾರೆ. ಕರ್ನಾಟಕದಲ್ಲಿ ಪ್ರವಾಹಗಳು ನಡೆಯುತ್ತಲೇ ಇದ್ದು, ಅವುಗಳು ತಂದೊಡ್ಡುವ ಸಮಸ್ಯೆಗಳು ಮತ್ತು ನೀಗಿಸುವಲ್ಲಿನ ವಿಚಾರಗಳನ್ನು ಚರ್ಚಿಸಿದ್ದಾರೆ.

ಭಾರತದ ಕಡುಬಡ ಜಿಲ್ಲೆಗಳ ಕಥನವನ್ನು ೫೦೧ ಪುಟಗಳಷ್ಟು ವಿಸ್ತಾರವಾದ ರೀತಿಯಲ್ಲಿ ೧೦ ಅಧ್ಯಾಯಗಳ ಜೊತೆಗೆ ಕೃತಿಯ ಪ್ರಾರಂಭದಲ್ಲಿ ಲೇಖಕರೇ ಹೇಳಿರು ವಂತೆ ಇಲ್ಲಿರುವುದು ಸಂಖ್ಯೆಯಲ್ಲ, ಮನುಷ್ಯರು ಹಾಗೂ ಬಡತನ, ಅಭಿವೃದ್ಧಿ ಮತ್ತು ಮಾಧ್ಯಮದಲ್ಲಿ ಎಂಬ ವಿಷಯಗಳನ್ನು ೨೯ ಪುಟಗಳಲ್ಲಿ ವಿವರ ನೀಡಿದ್ದಾರೆ. ಇಲ್ಲಿನ ಅಧ್ಯಾಯಗಳು "ಇಷ್ಟು ಕಾಲದ ನಂತರವೂ, ಒಂದು ಪ್ರಶ್ನೆ ಮತ್ತು ಹಲವು ಪ್ರಶ್ನೆ(ಉತ್ತರ ಬೇಡುವ ಪ್ರಶ್ನೆಗಳು), ಅಂಗಳ ದಾಟಿದರೆ ಅಕ್ಷರ ಲೋಕ(ಎಲ್ಲಿದೆ ಶಾಲೆ), ಇಡೀ ಭೂಮಂಡಲವನೇ ಕೇಳುವೆವು(ಈ ದೇಶಂ ಎವರಿದಿರಾ?), ಮನೆ ಮನೆ ಕತ್ತಲು(ಪ್ರತಿ ಕಣ್ಣು ಕಣ್ಣೀರು), ಸಾಲ, ಬಡ್ಡಿಯ ಕಬಡ್ಡಿ(ಸಾಲ ಕುಣಿಕೆಯಲ್ಲಿ), ಕೂಲಿಯವರು ನಾವಯ್ಯ ಕೇಳೋ(ಕೂಳು ಕಾಣದವರು ನಾವಯ್ಯ ಕೇಳೋ), ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಯಿತು(ಫೈನಾನ್ಷಿಯಲ್ ಎಕ್ಸ್‌ಪರ್ಟ್), 'ಬರ ಅಂದ್ರೆ ಎಲ್ಲರಿಗೂ

ಇಷ್ಟ'(ಯಾತಕ್ಕೆ ಮಳೆ ಹೋದವೋ...), ಮಾಡಿತೊಂದು ಬೆಳ್ಳಿ ಚುಕ್ಕೆಯು...(ಹೊನ್ನಾಳಿ ಹೊಡೆತ) ಹೀಗೆ ಹತ್ತು ಅಧ್ಯಾಯಗಳಲ್ಲಿ ಎಪ್ಪತ್ತು ಉಪ ಅಧ್ಯಾಯಗಳನ್ನು ಮಾಡಿಕೊಂಡು ಸಾಕಷ್ಟು ಮಾಹಿತಿಗಳನ್ನು ನೀಡಿದ್ದಾರೆ. ಹಾಗೆಯೇ ಪ್ರತಿ ಅಧ್ಯಾಯಗಳ ಮುಖಪುಟದಲ್ಲಿ ಸೂಕ್ತವೆನಿಸುವ ರೀತಿಯಲ್ಲಿ ರೇಖಾಚಿತ್ರಗಳನ್ನು ನೀಡಿರುವುದು ಒಪ್ಪಿಗೆಯಾಗುವಂತೆ ಇವೆ.

ಐದು ರಾಜ್ಯಗಳ ಬಡ ಜಿಲ್ಲೆಗಳಲ್ಲಿ ಬರ, ಸಮುದಾಯಕ್ಕೆ ಬರದಿಂದಾದ ಬಡತನ, ಬಡತನದಲ್ಲಿನ ಹಲವು ಮುಖಗಳು, ಕಷ್ಟ–ನಿಷ್ಠುರಗಳು, ಸಮುದಾಯಗಳ ಪ್ರತಿ ಕಣ್ಣುಗಳಲ್ಲಿ ರಕ್ತದ ಕಣ್ಣೀರು, ರೋಗರುಜಿನಗಳಲ್ಲಿ ಸಾವು, ಪ್ರಭುತ್ವದ ಕೆಟ್ಟ ನಿರ್ಧಾರಗಳು, ಅಧಿಕಾರಶಾಹಿಗಳಿಂದಾಗುವ ಚೆಲ್ಲಾಟಗಳು, ಬೇಸಾಯದಿಂದಲೇ ಬದುಕುತ್ತೇವೆನ್ನುವ ಹಠದಿಂದ ಸಮುದಾಯಗಳಿಗೆ ಸಾಲದ ಕುಣಿಕೆಗಳು, ತುತ್ತು ಕೂಳಿಗಾಗಿ ಹಾತೊರೆಯುವ ನಿತ್ರಾಣದ ದೇಹಗಳು, ತಮ್ಮದೇ ನೆಲವನ್ನು ಬೇರ್‍ಯಾರೋ ಆಳುತ್ತಿರುವ ಸಂಕಟಗಳು, ನಾಡಿನ ಸೋಂಕೆ ಬ್ಯಾಡವೆಂದು ಕಾಡನ್ನು ನಂಬಿ ಬದುಕುವ ಮುಗ್ಧರಿಗೆ ಎತ್ತಂಗಡಿ ಮಾಡಿ ಅವರ ಬದುಕನ್ನು ಕಿತ್ತುಕೊಳ್ಳುವಂತಹ ಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ, ಓದುಗರ ಕರುಳು ಕಿತ್ತು ಬರುವ ರೀತಿಯಲ್ಲಿ ಲೇಖಕರು ಆಪ್ತತೆಯಿಂದ ವಿವರಿಸಿದ್ದಾರೆ.

ಒಟ್ಟಾರೆ ಈ ಕೃತಿಯಲ್ಲಿನ ವಿವರಗಳನ್ನು ಗಮನಿಸಿದಾಗ ನನಗನಿಸಿರುವುದು "ಸಾವಿಗಾಗಿ ಸತ್ತವರಿಲ್ಲ, ಬದುಕಿಗಾಗಿ ಸತ್ತವರೇ ಎಲ್ಲಾ" ಎನ್ನುವ ಅಂಶ ಮನಸ್ಸಿಗೆ ಹೊಳೆಯುತ್ತದೆ. ಇಲ್ಲಿ ಬದುಕುವ ಪ್ರತಿಯೊಬ್ಬರಿಗೂ ಬದುಕುಗೊಟ್ಟವರು ಯಾರೂ ಇಲ್ಲ ಅನಿಸುತ್ತದೆ. ಬಾಳಲು ಬಿಟ್ಟವರೂ ಯಾರೂ ಇಲ್ಲವೆನಿಸುತ್ತದೆ.

ಕೆ.ವಿ. ಮುದ್ದವೀರಪ್ಪ

□□

೬

ಮರುಮುದ್ರಣಗೊಂಡ ಕೃತಿಗಳು

೭೪. ಗರತಿಯ ಹಾಡು–ಜಾನಪದ ತ್ರಿಪದಿ ಸಂಗ್ರಹ

ಗರತಿಯ ಹಾಡು, ಸಂ. ಹಲಸಂಗಿ ಗೆಳೆಯರಾದ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ, ಪ್ರ. ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ–೦೧, ಮರುಮುದ್ರಣ ೨೦೧೨, ಪುಟ–೧೪೦, ಬೆಲೆ ರೂ. ೫೫/-

ತಲೆಮಾರಿನಿಂದ ತಲೆಮಾರಿಗೆ ಜನಪದರಲ್ಲಿ ಕಂಠಸ್ಥವಾಗಿ ಸಾಗಿಬಂದ ಜನಪದವು ಜನಪದರ ಜೀವಾಳವಾಗಿ ಉಳಿದು ಸಂಗ್ರಹ ರೂಪದ ಸಾಹಿತ್ಯವಾಗಿ ತಾಜಾತನದಿಂದ ಸದಾ ಕೂಡಿರುತ್ತದೆ. ಇಂತಹ ತಾಜಾತನವನ್ನು ಸದಾ ಉಳಿಸಲು ಪ್ರಯತ್ನಿಸಿ ಸಂಗ್ರಹಿಸಿದ ಹಲಸಂಗಿ ಗೆಳೆಯರಾದ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದವರು ಗರತಿಯ ಹಾಡಿನ ಇಂಪನ್ನು ನಾಡಿನ ಜನತೆಗೆ ಪಸರಿಸಿದ್ದಾರೆ. "ಜನಪದ ಸಾಹಿತ್ಯ ಕಾಯಕದೊಡನೆ ಸೃಷ್ಟಿಯಾಗಿದೆ. ಜನಪದ ಬದುಕು ಬೇರೆಯಲ್ಲ, ಅವರ ಸಾಹಿತ್ಯ ಬೇರೆಯಲ್ಲ. ಇದು ಕೃತಕವಾಗಿ ಬಲವಂತವಾಗಿ ತಿಣಿಕಿ ಕಟ್ಟಿದ್ದಲ್ಲ. ಪರಿಸರದ ಪ್ರಭಾವದಿಂದ ಸಹಜವಾಗಿ ಹುಟ್ಟಿದ್ದು. ಜನಪದ ಸಾಹಿತ್ಯದ ವಸ್ತುರೂಪ ಅಭಿವ್ಯಕ್ತಿ ವೈವಿಧ್ಯಮಯವಾಗಿದೆ. ಅಧಿಕವಾದ ತಾಜಾತನದಿಂದ ಕೂಡಿದೆ" ಎಂಬ ಮಾತನ್ನು ಪ್ರೊ. ಡಿ. ಲಿಂಗಯ್ಯ ಮತ್ತು ಕೆ.ಆರ್. ಸಂಧ್ಯಾರೆಡ್ಡಿಯವರು ಜಾನಪದದ ಸ್ವರೂಪ ಮತ್ತು ಸಾಹಿತ್ಯದಲ್ಲಿ ಹೇಳಿರುವುದು ಇಲ್ಲಿಗೆ ಸೂಕ್ತವೆನ್ನಿಸುತ್ತದೆ.

ಗರತಿಯ ಹಾಡು ಒಂದು ಮಹತ್ವದ ಸ್ಥಾನ ಪಡೆದ ಕೃತಿಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಮುಖ್ಯ ಲೇಖಕರೆನಿಸಿದ ಬಿ.ಎಂ.ಶ್ರೀ., ದ.ರಾ. ಬೇಂದ್ರೆ, ಮಾಸ್ತಿ, ಸಿಂಪಿ ಲಿಂಗಣ್ಣನವರ ವಿಮರ್ಶಾಪೂರ್ಣ ಬರಹಗಳು ಗರತಿಯ ಹಾಡಿಗೆ ಮಹತ್ವ ಪೂರ್ಣತೆಯನ್ನು ತಂದುಕೊಟ್ಟಿದೆ.

ಮೊದಲ ಮುದ್ರಣ ೧೯೩೧ರಲ್ಲಿ ಆಗಿದ್ದು, ೨೦೧೨ರ ಹೊತ್ತಿಗೆ ಒಟ್ಟು ಹನ್ನೊಂದನೇ ಮುದ್ರಣಗೊಂಡಿರುವುದು ಈ ಕೃತಿಯ ಹೆಚ್ಚಿನ ಪ್ರಸ್ತುತತೆಯನ್ನು ತಿಳಿಸುತ್ತದೆ. ಈ ಕೃತಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಪಠ್ಯವಾಗಿರುವುದು ಮೌಲ್ಯಯುತ ಕೃತಿಗೆ ಸಿಕ್ಕ ಮನ್ನಣೆಯಾಗಿದೆ.

ಬಿ.ಎಂ.ಶ್ರೀಯವರ ಪ್ರಸ್ತಾವನೆಯು ಜನಪದ ಮತ್ತು ಜನಪದರ ಒಳಗಣ್ಣ ನೋಟವನ್ನು ಓದುಗರಿಗೆ ತೆರೆದಿಡುವಂತೆ ಮಾಡಿದೆ. ಜನಸಾಮಾನ್ಯರು ಸಾಧಾರಣವಾದ ಭಾವನೆಗಳನ್ನು ಪದಗಳಾಗಿಸುವ ಪರಿಯನ್ನು ವಿಷದವಾಗಿಸಿದೆ. ಮಾತಾಡುವ ಸರಳ ಭಾಷೆಯನ್ನು ಬಳಸಿ ಕವಿಯಾಗಿ ತಲೆದೂಗುವ ಕಲೆಯತ್ತ ಸಾಗುವಂತೆ ಮಾಡಿದೆ ಎಂಬುದನ್ನು ಚಿತ್ರಿಸಿದ್ದಾರೆ. ಕೊನೆಯದಾಗಿ ಬಹುಮುಖ್ಯವಾಗಿ ಪ್ರಸ್ತಾವನೆಯಲ್ಲಿ ಪ್ರಸ್ತಾಪ ಮಾಡುವ ಅಂಶವೆಂದರೆ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಜನಪದ ಸಾಹಿತ್ಯವನ್ನು ನಾಶವಾಗುವ ಮೊದಲೇ ಉಳಿಸಿಕೊಳ್ಳಬೇಕೆಂಬ ಕನ್ನಡಿಗರಿಗೆ, ಸಾಹಿತ್ಯಾಸಕ್ತರಿಗೆ ಕರ್ತವ್ಯದ ಎಚ್ಚರವನ್ನು ಸೂಚಿಸಿರುವುದು ಬಿ.ಎಂ.ಶ್ರೀಯವರ ಮುಖ್ಯ ಕಾಳಜಿಯಾಗಿದೆ.

ಗರತಿಯ ಹಾಡಿಗೆ ಪರಿಚಯವನ್ನು ಮಾಡಿದ ದ.ರಾ. ಬೇಂದ್ರೆಯವರು ಕೃತಿಯನ್ನು ಪರಿಚಯಿಸುವ ರೀತಿಯೇ ವಿಭಿನ್ನವಾಗಿರುವುದನ್ನು ಕಾಣಬಹುದು. ಎಂಟು ಭಾಗದಲ್ಲಿ ಕೃತಿಯ ಪರಿಚಯವನ್ನು ನೀಡುತ್ತಾರೆ.

ಜೀವನದ ಮಹತ್ವ ಮತ್ತು ಕಾವ್ಯದ ಅಂತಸತ್ವದ ಮಹತ್ವವನ್ನು ಅರಿಯಬೇಕಾದ ರಹಸ್ಯವನ್ನು ಜನಪದದ ಸಾಹಿತ್ಯದಲ್ಲಿ ಕಾಣಬಹುದೆಂಬ ಹಂಬಲವನ್ನು ಮೊದಲ ಭಾಗದಲ್ಲಿ ನೀಡುತ್ತಾರೆ. ಕಾವ್ಯ ಮತ್ತು ಕಾಂತೆ ಹೇಗೆ ಒಂದಕ್ಕೊಂದು ಭಿನ್ನವಲ್ಲವೆಂಬ ಅರಿವನ್ನು, ಎರಡನೇ ಭಾಗದಲ್ಲಿ ಹೆಣ್ಣು ಅಥವಾ ಸ್ತ್ರೀ ಪ್ರಧಾನವಾದ ಪದಗಳು ಯಾವ ಯಾವ ಸಂದರ್ಭದಲ್ಲಿ ಹೊರಹೊಮ್ಮಿ, ಒಮ್ಮೆಯಾದರೂ ಹಾಗೇ ಮೂಡಿದ ದನಿಗೆ ಎಂಥವರಾದರೂ ತಲೆದೂಗಲೇಬೇಕೆಂಬ ಆಶಯವನ್ನು, ಮೂರನೇ ಭಾಗದಲ್ಲಿ ವಸ್ತುಕ ವರ್ಣಕದ ಭಿನ್ನತೆಯ ವ್ಯತ್ಯಾಸವನ್ನು, ಕನ್ನಡ ವೃತ್ತಗಳ ಗಾಯತ್ರಿಯೆನಿಸಿದ ತ್ರಿಪದಿ ಹೇಗೆ ಎಲ್ಲವುದಕ್ಕೂ ಮೂಲವಾಗಿತ್ತೆಂದು ತಿಳಿಸುತ್ತಾರೆ. ನಾಲ್ಕನೇ ಭಾಗದ ಬರಹದಲ್ಲಿ ಗರತಿಯ ಹಾಡಿನಲ್ಲಿ ಕಂಡು ಬರುವ ವೈಲಕ್ಷಣವನ್ನು, ಐದನೇ ಭಾಗದಲ್ಲಿ ಎಲ್ಲಿಂದ ಎಲ್ಲಿಗೆ ತ್ರಿಪದಿಗಳ ಹಾಡು ಹಬ್ಬಿದೆ ಎಂಬ ವಿಚಾರ ತಿಳಿಸಿದ್ದಾರೆ. ಸ್ತ್ರೀ ಪ್ರಧಾನವಾದ ಇಂತಹ ಹಾಡುಗಳನ್ನು ಹೆಣ್ಣು ಮಕ್ಕಳೇ ಹಾಡಿದರೆ ಜೀವದಾಯವಾಗುವ ಅಂಶವನ್ನು ಎಲ್ಲೆಲ್ಲಿ ಯಾರ್‍ಯಾರ ಅರಿವನ್ನು ಮೂಡಿಸುವತ್ತ ಸಾಗಿದ್ದಾರೆ ಎಂಬ ಮಾಹಿತಿಯನ್ನು, ಸಂಗ್ರಹ ಕಾರ್ಯವನ್ನು ಮಾಡಲು ಪ್ರಯತ್ನಿಸಿದ ವಿವರವನ್ನು ಆರು ಮತ್ತು ಏಳನೇ ಭಾಗದಲ್ಲಿ ನೀಡುತ್ತಾರೆ. ಹೆಣ್ಣಿನ ಅವತಾರಗಳನ್ನು ಹೇಗೆ ನೋಡಬೇಕು ಎಂಬ ಹಂಬಲವನ್ನು ಈ ಕೃತಿಯನ್ನು ಹಾಗೇ ನೋಡುವಂತೆ ಕಟ್ಟಿಕೊಡುವ ಕ್ರಮವನ್ನು, ಎಂಟನೇ ಭಾಗದ ಪ್ರಸ್ತಾವನೆಯಲ್ಲಿ ವಿಸ್ತಾರವಾಗಿ ದ.ರಾ. ಬೇಂದ್ರೆಯವರು ಬರೆದಿರುವ ಬರಹವು ಇಡೀ ಗರತಿಯ ಹಾಡನ್ನು ಅರ್ಥೈಯಿಸಿಕೊಳ್ಳಲು ಸಾಧ್ಯವಾಗುವ ಮತ್ತು ಅರ್ಥವಿಸ್ತಾರತೆಯನ್ನು ಹೊಂದಲು ಹಾಗೇ ಯೋಚಿಸುವಂತೆ ಮಾಡಿದ್ದಾರೆ.

ಇನ್ನು ಮಾಸ್ತಿಯವರ ಆಶೀರ್ವಾದ ಬರಹವು ಚಿಕ್ಕದಾಗಿದ್ದರೂ ಬಹುಮುಖ್ಯ ಮಹತ್ವದ್ದೆನಿಸಿದೆ. ಗರತಿಯ ಹಾಡಿಗೆ ಸಿಂಪಿ ಲಿಂಗಣ್ಣನವರು ಬರೆದಿರುವ 'ಅರಿಕೆ'ಯ ಭಾಗವು ಹೆಣ್ಣಿನ ಮನೋಭೂಮಿಕೆಯಲ್ಲಿ ಹುದುಗಿರುವ ಎಲ್ಲಾ ವಿಭಿನ್ನ ಭಾವಗಳನ್ನು ಶಬ್ದಗಳಲ್ಲಿ ಕಟ್ಟಿದ ವಿಸ್ತಾರವಾದ ಬರಹವು ಹೆಚ್ಚು ಗಮನ ಸೆಳೆಯುವಂತಿದೆ.

ಹೆಣ್ಣಿನ ತ್ಯಾಗ, ಗುಣ, ತವರಿನ ಬಗ್ಗೆ ಹೆಣ್ಣಿಗೆ ಇರುವ ಕಾಳಜಿ, ಅವಳ ಪ್ರೇಮದ ಮನಸ್ಸು, ಮಾತು, ಸತಿಗೆ ಇರಬೇಕಾದ ಸಹನೆ, ಗೃಹಿಣಿಗೆ ಗೃಹದ ಬಗ್ಗೆ ಕಾಳಜಿ, ಹೆಣ್ಣು ತನಗಾದ ನೋವು ನಿರಾಸೆ, ಅವಮಾನವನ್ನು ಹಾಡಿ ಮರೆತು ಬಿಡುವ ರೀತಿಯನ್ನು ಮೊದಲ ಭಾಗದಲ್ಲಿ ಹೇಳುತ್ತಾರೆ. ತಾಯ್ತನದ ಕನಸು, ಸ್ನೇಹ, ಸಂಬಂಧ ಮತ್ತು ವೈರಸಂಬಂಧಗಳಲ್ಲಿ ಆಗುವ ಬಿಸಿಲು ನೆರಳುಗಳ ತೂಗಾಟ ಮತ್ತು ತೂರಾಟ ಗಳಲ್ಲಿ ಭಾವಗೀತೆಯ ಹಾದಿಯಲ್ಲಿ ಗರತಿಯ ಹಾಡು ಪಾಡಾಗಿರುವ ಬಗೆ ಏನೆಲ್ಲ 'ಗರತಿಯ ಹಾಡು' ಹೊಂದಿದೆ ಎಂಬ ಹಲವಾರು ವಿಭಿನ್ನ ಮಗ್ಗುಲಗಳನ್ನು ವಿಮರ್ಶಿ ಸುವ ಆತ್ಮಸ್ಪರ್ಶಿ ಎನಿಸಿದೆ. ದೇಶಭಕ್ತಿ, ದೈವಭಕ್ತಿಯ ಸ್ಮರಣೆಯನ್ನು ಗರತಿಯ ಹಾಡು ನಾಡು ಕಟ್ಟಲಿಕ್ಕೆ ನೆಲೆಗಟ್ಟು ಎಂಬ ಪ್ರಾಶಸ್ತ್ಯವನ್ನು ಸಿಂಪಿ ಲಿಂಗಣ್ಣನವರು 'ಅರಿಕೆ'ಯಲ್ಲಿ ಹೇಳಿರುವ ಮಾತು ಗರತಿಯ ಹಾಡಿಗೆ ಹಿರಿಮೆಯೆನಿಸಿದೆ.

ಗರತಿಯ ಹಾಡು ಪರಂಪರೆಯಿಂದ ಪ್ರಾರಂಭವಾಗಿ ಸ್ತುತಿ, ತವರುಮನೆ, ತಾಯ್ತಂದೆ, ಅಣ್ತಮ್ಮ, ಅಕ್ಕ-ತಂಗಿ, ಅತ್ತಿಗೆ-ನಾದಿನಿಯರು, ಗೆಳತಿ, ಒಡನಾಟ ಮತ್ತು ಸಂವಾದಗಳು, ಗರತಿಗೆ ಎದುರಾಗಬಹುದಾದ ಕಷ್ಟ, ಮನಸ್ತಾಪ, ಸತಿಪತಿ, ಬಸುರಿ, ಬಾಣಂತಿ, ಲಾಲಿ, ಮಗ-ಮಗಳು, ಸೊಸೆ, ಹರಕೆ, ಬಂಜೆ, ವೈಧವ್ಯ ಹಾಸ್ಯ, ಪೌರಾಣಿಕ, ಐತಿಹಾಸಿಕ, ವರ್ಣನೆ, ಸಂವಾದ, ಪ್ರಾರ್ಥನೆ, ಪರ್ಯಾಯ ನೀತಿ, ಸ್ಪಷ್ಟ ರೀತಿ, ಕೊನೆ ಹೀಗೆ ವಿಭಾಗ ಕ್ರಮಗಳಾಗಿ ವಿಂಗಡಿಸಿಕೊಂಡು ನೋಡಿರುವುದು ಮತ್ತು ಸಂಗ್ರಹ ರೂಪವಾಗಿ ನೀಡಿರುವುದು ಓದುಗರಿಗೂ ಅನುಕೂಲವೆನಿಸುತ್ತದೆ. ಹಾಗೆಯೇ ಒಂದು ಕೃತಿಯ ಅಧ್ಯಯನಕ್ಕೆ ಬೇಕಾದುದನ್ನು ಓದುವ ಕೃತಿಯೇ ಒದಗಿಸಿದರೆ ಅಥವಾ ದೊರೆತರೆ ಓದುಗನಿಗೆ ಅದು ಭಾಗ್ಯವೆಂಬಂತೆ ಬಳಕೆಯ ಮಾತಿನ ಪದ ಪ್ರಯೋಗಗಳು, ಶಬ್ದಕೋಶವು ಆ ನಿಟ್ಟಿನಲ್ಲಿ ಸೂಕ್ತವೆನಿಸಿದೆ. ಗರತಿಯ ಹಾಡು ಬರೀ ಓದಿಸಿಕೊಳ್ಳುವ ಕೃತಿಯಲ್ಲ. ಒಂದು ಅಧ್ಯಯನಕ್ಕೆ ಮಾರ್ಗವನ್ನು ಅರ್ಥವಿಸ್ತಾರತೆಯನ್ನು ತೋರುವ ಕೃತಿಯಾಗಿದೆ. ಜನಪದ ಸಂಗ್ರಹ ಕಾರ್ಯದಲ್ಲಿ ತೊಡಗಿಸಿಕೊಳ್ಳುವವರಿಗೆ ಮಾರ್ಗದರ್ಶನ ನೀಡುವುದಾಗಿದೆ.

ಆರ್. ಶಾಂತ ಕಂಪಾರಹಳ್ಳಿ

೭೫. ಡಾ. ರಾ.ಗೌ.ರವರ ಸಂಗ್ರಹ- ನಮ್ಮ ಒಗಟುಗಳು ಒಂದು ನೋಟ

ನಮ್ಮ ಒಗಟುಗಳು, ಸಂ. ಡಾ.ರಾಗೌ, ಪ್ರ. ಡಿ.ವಿ.ಕೆ. ಮೂರ್ತಿ, ಮೈಸೂರು-೦೪, ಮರುಮುದ್ರಣ-೨೦೧೨, ಪುಟ-೧೪೦, ಬೆಲೆ ರೂ. ೭೫/-

ರಾಗೌ ಎಂದೇ ಚಿರಪರಿಚಿತರಾಗಿರುವ ಡಾ. ರಾಮೇಗೌಡರು ಸಂಗ್ರಹಿಸಿರುವ 'ನಮ್ಮ ಒಗಟುಗಳು' ಎಂಬ ಈ ಕೃತಿಯು ಹಲಸಂಗಿ ಗೆಳೆಯರು ಸಂಪಾದಿಸಿರುವ 'ಗರತಿಯ ಹಾಡಿ'ನಂತೆಯೇ ಹೆಚ್ಚು ಜನ ಮನ್ನಣೆಯನ್ನು ಪಡೆದ ಮಹತ್ವಪೂರ್ಣ ಕೃತಿಯಾಗಿದೆ.

ನಮ್ಮ ಒಗಟುಗಳ ಕೃತಿಯ ಮೊದಲ ಮುದ್ರಣ ೧೯೭೦ರಲ್ಲಿ ಆರಂಭಗೊಂಡು ೨೦೧೨ರ ಹೊತ್ತಿಗೆ ಒಟ್ಟು ಹನ್ನೆರಡು ಬಾರಿ ಮುದ್ರಣಗೊಂಡಿರುವುದು ಹೆಮ್ಮೆಯ ವಿಷಯ. ಪ್ರಸ್ತುತ ಸಂದರ್ಭದಲ್ಲೂ ಈ ಕೃತಿಯು ಓದು ಮತ್ತು ಅಧ್ಯಯನ ಮಾಡುವಂತ ಹವರಿಗೆ ಅವಶ್ಯಕವಾದ ಒಂದು ಉತ್ತಮ ಸಂಗ್ರಹ ಕೃತಿಯಾಗಿರುವುದೇ ಸಾಕ್ಷಿವೆಂಬಂತಿದೆ.

ಇಂದಿನ ದಿನಗಳಲ್ಲಿ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪಠ್ಯವಾಗಿ ಅಳವಡಿಸಿ ರುವುದರಿಂದ ಅಪ್ಪಟ ಹಳ್ಳಿಯ ಜನಪದರ ಮತ್ತು ಜನಪದದ ಸೊಗಡಿನ ಕಂಪಿನ ಪರಿಮಳ ಅಭ್ಯಾಸಿಸುವಂತಹ ಪ್ರತಿಯೊಬ್ಬರಿಗೂ ನಮ್ಮ ಜನಪದದ ಭಾಗವಾಗಿರುವ ಈ ಒಗಟುಗಳು ಬುದ್ಧಿಯ ಚುರುಕುತನದ ಕೌಶಲ್ಯತೆಯನ್ನು ಹೆಚ್ಚಿಸಲು ಕಾರಣವಾಗಿ ಬುದ್ಧಿಯ ಸಾಮರ್ಥ್ಯವನ್ನೂ ಹೆಚ್ಚಿಸುತ್ತದೆ. ಅಂತಹ ಶಕ್ತಿ ನಮ್ಮ ಒಗಟುಗಳಿಗಿದೆ ಎಂಬುದು ನನ್ನ ಭಾವನೆ.

ರಾಗೌರವರ ಮುನ್ನುಡಿಯೊಂದಿಗೆ ಪ್ರಾರಂಭವಾಗುವ ಈ ಕೃತಿಯ ಮುಂದಿನ ಭಾಗವಾದ ಪ್ರಸ್ತಾವನೆಯು ಒಗಟಿನ ಬಗ್ಗೆ ಇರಬಹುದಾದ ಅರ್ಥ ಸಾಧ್ಯತೆಗಳು, ಒಗಟಿನ ಬೇರೆ ಬೇರೆ ರೂಪ, ಬೇರೆ ಬೇರೆ ಭಾಷೆಗಳಲ್ಲಿಯೂ ಒಗಟು ಎಂಬ ಪದದ ಇತಿಹಾಸ ಅದರ ಬೆಳವಣಿಗೆ ಹೇಗೆ ಬೆಳೆದಿದೆ ಎಂಬುದನ್ನು ತಿಳಿಸಿಕೊಡುತ್ತದೆ.

ಪ್ರಾಚೀನ ಕಾಲದಿಂದಲೂ ವಿಶ್ವವ್ಯಾಪಕವಾಗಿ ಒಗಟುಗಳಿಗೆ ಹೆಚ್ಚಿನ ಸ್ಥಾನ ದೊರಕಿದೆ. ಪ್ರಾಚೀನ ಹೀಬ್ರೂ ಕಾವ್ಯ, ಗ್ರೀಕ್ ನಾಟಕ, ವೇದಕಾಲದ ಕೃತಿಗಳಲ್ಲಿ, ತೆಲುಗು ಕನ್ನಡ ಭಾಷೆಗಳಲ್ಲಿ ಕಾಣುವ ಅಷ್ಟಾವಧಾನ ಸಹಸ್ರಾವಧಾನ, ನಾಟ್ಯಾಧಾನಗಳಲ್ಲಿ, ಬೆಬಿಲೋನಿಯಾ ಸಂಸ್ಕೃತಿಯಲ್ಲಿ ಹೀಗೆ ಧರ್ಮ, ನಾಟಕ, ಕಾವ್ಯ ಮೊದಲಾದ ಗ್ರಂಥಗಳಲ್ಲಿ ಒಗಟಿನ ಬಳಕೆಯಾಗುತ್ತಿತ್ತು.

ಭಾರತದಲ್ಲಿ ಋಗ್ವೇದದ ಕಾಲದಿಂದಲೂ ಬೆಳೆದು ಕನ್ನಡದ ಹಲವಾರು ಕಾವ್ಯಗಳಲ್ಲಿ, ಶಿವಶರಣರ ವಚನಗಳಲ್ಲಿ, ಕೀರ್ತನೆಗಳಲ್ಲಿ, ಬುದ್ಧಿಶಕ್ತಿಯ ಪ್ರಚೋದನಕಾರಿಯಾಗಿ ಜನಪದರ ಊಹಾಶಕ್ತಿಗೆ ಕನ್ನಡಿಯಾಗಿರುವುದನ್ನು ಒಟ್ಟು ಆರು ಭಾಗವಾಗಿ ರಾಗೌರವರು ದೀರ್ಘ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸುತ್ತಾರೆ.

ಮೊದಲ ಭಾಗವು ಯಾವ ಗ್ರಂಥದಲ್ಲಿ ಬಳಸಲಾಗಿದೆಯೆಂಬುದನ್ನು ಸೂಚಿಸುತ್ತಾ ಒಗಟಿನ ವಿಮರ್ಶಾತ್ಮಕವಾದ ಬರಹ, ಒಗಟಿನ ರಹಸ್ಯಾಂಶ, ಜನಸಾಮಾನ್ಯರಲ್ಲಿ ಮೂಡಿಸುವ ಗಾಂಭೀರ್ಯ ಮೊದಲ ಭಾಗದಲ್ಲಿದೆ. 'ಒಗಟು' ಎಂದರೆ ಹೇಗಿರಬೇಕು? ಅದರ ಗುಣ, ಲಕ್ಷಣ, ಪರಿಚಿತ ವಸ್ತುವಿನ ಬಳಕೆ, ಭಾಷೆಯ ಬಳಸಿ ಹೇಳುವ ಬಗೆ,

ಉಪಮಾನ ಹೋಲಿಕೆಗಳನ್ನು ಬಳಸಿಕೊಂಡು ಒಗಟು ಕಟ್ಟುವುದರ ವಿವರ, ಹಾಸ್ಯ, ವಿಡಂಬನೆ, ಪ್ರಕೃತಿಯ ಸಾಮ್ಯತೆ ಇಷ್ಟೆ ಅಲ್ಲದೆ ಅಶ್ಲೀಲ ಒಗಟುಗಳು, ಕಾವ್ಯಾತ್ಮಕವಾದ ಒಗಟುಗಳು, ಬೇರೆ ಬೇರೆ ಭಾಷೆಯಲ್ಲಿನ ಕಾವ್ಯ ರೂಪದ ಒಗಟುಗಳು, ಸಾರ್ವತ್ರಿಕವಾದ ಒಗಟುಗಳ ಬಗ್ಗೆ ವಿಶಾಲವಾಗಿ ತಿಳಿಸಿಕೊಡುತ್ತಾರೆ.

ಹಲವು ಬಗೆಯಲ್ಲಿ ಒಗಟುಗಳು ವರ್ಗೀಕರಿಸಲ್ಪಟ್ಟ ರೀತಿ ವಿಶೇಷವಾಗಿ ಚಿತ್ರ ಶಬ್ದದ ಒಗಟು, ಪ್ರಶ್ನೋತ್ತರ ಒಗಟು, ಕಥೆಯ ರೂಪದ ಒಗಟು, ಕನ್ನಡದಲ್ಲಿ ಉದಾಹರಣೆಯಾದ ನಿರ್ದಶನಗಳು, ವೈನೋದಿಕ ಒಗಟುಗಳು, ಭಾರತೀಯರಲ್ಲಿ ಕಂಡುಬರುವ ನಂಬಿಕೆಯ ಒಗಟುಗಳು, ಒಗಟು ಮತ್ತು ಗಾದೆಗಳು ಒಂದಕ್ಕೊಂದು ಹೇಗೆ ಹೊಂದಿಕೆಯೆಂಬಂತೆ ಇವೆ ಎಂಬ ವಿವರವನ್ನು ನಾಲ್ಕನೇ ಭಾಗವು ಪ್ರಸ್ತಾಪಿಸುತ್ತದೆ.

'ಒಗಟು' ಎಂದರೆ ಜನಸಾಮಾನ್ಯರಲ್ಲಿ ಮೂಡುವ ಭಾವನೆ, ಅರ್ಥ ಸಂದರ್ಭಕ್ಕೆ ತಕ್ಕ ಹಾಗೆ ಬಳಕೆ, ಬೇರೆ ದೇಶದವರೂ ಬಳಸುವ ರೀತಿಯನ್ನು ಐದನೇ ಭಾಗದ ಪ್ರಸ್ತಾವನೆಯು ಮನದಟ್ಟುಮಾಡುತ್ತದೆ. ರಾಗೌರವರ ಒಟ್ಟು ಮೂವತ್ತೆಂಟು ಪುಟದಷ್ಟು ಇರುವ ಈ ಸುದೀರ್ಘ ಪ್ರಸ್ತಾವನೆಯು ಒಗಟಿನ ಹುಟ್ಟು, ಅರ್ಥ, ವ್ಯಾಪ್ತಿಯನ್ನು ವಿಶಾಲವಾಗಿ ಹೇಳುವ ಪ್ರಯತ್ನಪೂರ್ವಕವಾಗಿದೆ.

ಸುಮಾರು ೫೧೦ ಒಗಟುಗಳ ಪ್ರಶ್ನೋತ್ತರ ಒಗಟುಗಳ ೫ರ ಜೊತೆಗೆ ಸೇರಿ ೫೧೫ ಒಗಟುಗಳ ಗುಚ್ಚವಾಗಿದೆ. ಒಗಟುಗಳ ಪಟ್ಟಿಯನ್ನು ಒಗಟಿಗೆ ತಕ್ಕಂತಹ ಉತ್ತರವನ್ನು ಕೊನೆಯಲ್ಲಿ ನೀಡಿರುವುದರಿಂದ ಉತ್ತರದ ಹುಡುಕಾಟದ ಗೋಜಲನ್ನು, ಸಂಕಟವನ್ನು ತಪ್ಪಿಸಿದೆ. ಅರ್ಥಕೋಶವು ವರ್ಣಮಾಲೆಯ ವಿಭಾಗ ಕ್ರಮದಲ್ಲಿ ನೀಡಿರುವುದರಿಂದ ರಾಗೌರವರ ಸಂಗ್ರಹ ಕಾರ್ಯದ ಪ್ರಾಮಾಣಿಕ ಪ್ರಯತ್ನ ಮತ್ತು ಕಾರ್ಯಕ್ಷೇತ್ರದ ಪ್ರಬುದ್ಧತೆ ಮತ್ತು ಮಹತ್ವದ ಆಶಯವನ್ನು ಹೆಚ್ಚಿಸಿದೆ. ನಮ್ಮ ಜಾನಪದದ ಭಾಗವಾಗಿರುವ ನಮ್ಮ ಒಗಟುಗಳು ಪರಂಪರಾಗತವಾಗಿ ಉಳಿದು ಮುಂದಿನ ಪೀಳಿಗೆಯಲ್ಲೂ ಬೆಳೆಯಲಿ, ಬೆಳಗಲಿ.

ಆರ್. ಶಾಂತ ಕಂಪಾರಹಳ್ಳಿ

೭೬. ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳ ಆಶಯ

ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು, ಸಂ. ಟಿ.ಎಸ್.ರಾಜಪ್ಪ, ಸಾಗರ್ ಪ್ರಕಾಶನ, ನಂ.೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇಹಂತ, ಬೆಂಗಳೂರು, ಮರುಮುದ್ರಣ-೨೦೧೨, ಪುಟ-೧೬೦, ಬೆಲೆ ರೂ. ೮೦/-

ಭಾರತೀಯ ಹಾಗೂ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಶಿಷ್ಟ ಕತೆಗಳಂತೆ ಜನಪದ ಕಥೆಗಳಿಗೂ ಮಹತ್ವದ ಸ್ಥಾನವಿದೆ. ಬದುಕಿನ ಏಕತಾನತೆಯನ್ನು ಹೋಗಲಾಡಿಸಿ,

ಮನಸ್ಸಿನ ಬೇಸರ ಹಾಗೂ ಮಕ್ಕಳನ್ನು ರಂಜಿಸುವ, ಜೀವನದಲ್ಲಿ ತಪ್ಪು ಮಾಡಿ ದಾರಿ ತಪ್ಪಿದ ವ್ಯಕ್ತಿಗಳನ್ನು ಸರಿದ್ದಾರಿಗೆ ತರುವ, ನಮ್ಮ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವ ಬಹಳ ಮುಖ್ಯವಾದ ಆಶಯ ಮತ್ತು ಉದ್ದೇಶವಿರುವ ನಮ್ಮ ಜನಪದ ಕತೆಗಳ ಅಂತರ್ಯದಲ್ಲಿ ಅಡಗಿರುವುದು ಕಂಡುಬರುತ್ತದೆ.

ಇದರಂತೆಯೆ ಶ್ರೀ ಟಿ.ಎಸ್. ರಾಜಪ್ಪನವರು ಸಂಪಾದಿಸಿರುವ 'ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು' ಸಂಕಲನವು ಇದಕ್ಕೆ ಹೊರತಾಗಿಲ್ಲ. ಕತೆಗಳ ಮೂಲಕವೇ ಜೀವನ ಪಾಠವನ್ನು ಈ ಕಥೆಗಳು ಹೇಳಿಕೊಡುತ್ತವೆ. ೩೫ ಕಥೆಗಳನ್ನು ಒಳಗೊಂಡಿರುವ ಈ ಸಂಕಲನವು ರಮ್ಯಕಥೆಗಳು, ಬುದ್ಧಿವಂತಿಕೆ ಕಥೆಗಳು, ಅತಿಮಾನುಷ ಕಥೆಗಳು, ಅದ್ಭುತ ಕಥೆಗಳು, ಹಾಸ್ಯ ಕಥೆಗಳು, ಪ್ರಾಣಿಕಥೆಗಳು ಎಂಬ ೬ ವಿಧಗಳಲ್ಲಿ ಕಥೆಗಳು ಈ ಸಂಕಲನದಲ್ಲಿ ಅಡಕವಾಗಿವೆ.

ಇಲ್ಲಿನ ಕೆಲವೊಂದು ಕತೆಗಳು ನಮಗೆ ಪೂರ್ವ ಪರಿಚಿತ ಎನಿಸಿ ಪ್ರಾದೇಶಿಕ ಪಾಠಗಳಾಗಿ ಕಂಡುಬಂದರೂ ಕಥೆಯನ್ನು ಹೇಳುವಲ್ಲಿನ ನಿರೂಪಣಾ ಶೈಲಿ ಉತ್ತಮ ಹಾಗೂ ಅತ್ಯಂತ ಗಮನಾರ್ಹವಾದುದು. ಇಲ್ಲಿರುವ ೩೫ ಕಥೆಗಳಲ್ಲಿ ೩೩ ಕಥೆಗಳು ಸುಖಾಂತ್ಯವಾಗಿ ಅಂತ್ಯಗೊಂಡರೆ, ಉಳಿದ ೨ ಕಥೆಗಳು ಮರಣದೊಂದಿಗೆ ದುಃಖಾಂತ್ಯ ವಾಗಿ ಮುಕ್ತಾಯ ಹೊಂದುತ್ತವೆ.

ಈ ಸಂಕಲನದಲ್ಲಿನ ಎಲ್ಲಾ ಕಥೆಗಳು 'ಒಂದು ಊರಲ್ಲಿ' ಅಥವಾ 'ಹೊಸಪೇಟೆ' ಅಥವಾ 'ಕಾಶಿಪಟ್ಣ' ಎಂಬಂತಹ ಮಾತಿನಿಂದ ಪ್ರಾರಂಭವಾಗುತ್ತವೆ. ಮಕ್ಕಳಿಲ್ಲದ ವ್ಯಕ್ತಿಗಳು ಪುತ್ರಸಂತಾನಕ್ಕಾಗಿ ಹಂಬಲಿಸುವ ಪರಿ, ಧೈರ್ಯ ಮತ್ತು ಛಲವಿರುವ ವ್ಯಕ್ತಿಗಳ ಸಾಹಸಯಾತ್ರೆ, ಸಕಾರಾತ್ಮಕ ಯೋಚನೆಗಳ ಮನೋಭಾವದ ವ್ಯಕ್ತಿಗಳಿಗೆ ದೊರಕುವ ಜಯ, ಮನುಷ್ಯನ ಅಸೂಯೆ, ಸಣ್ಣತನ, ಪ್ರಾಣಿಗಳ ಪರೋಪಕಾರ ಹಾಗೂ ತಾವು ಕೊಟ್ಟ ಮಾತಿಗೆ ತಪ್ಪಿ ನಡೆಯದ ಬದ್ಧತೆ, ಮಾಟ ಮಂತ್ರಗಳ ಮೋಡಿ, ರಾಕ್ಷಸಿ, ದುಷ್ಟ ಶಕ್ತಿಗಳ ಅಟ್ಟಹಾಸ ಇವುಗಳನ್ನು ತನ್ನ ಜಾಣ್ಮೆ, ಧೈರ್ಯಗಳಿಂದ ಎದುರಿಸುವ ಚತುರರು, ದುರಾಸೆಯ ಮನುಷ್ಯರಿಗೊದಗುವ ದುಸ್ಥಿತಿ, ಅನ್ನದಾನದ ಶ್ರೇಷ್ಠತೆ, ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂಬಂತಹ ನಾಣ್ಣುಡಿಯಂತೆ ತನ್ನ ಜಾಣ್ಮೆ, ಬುದ್ಧಿ ಕೌಶಲ್ಯದಿಂದ ನೊಂದವರಿಗೆ ನ್ಯಾಯ ಒದಗಿಸುವ 'ನರಿ'ಯಂತಹ ನ್ಯಾಯಾಧೀಶ ಹೀಗೆ ಹತ್ತು ಹಲವು ಹಾಸ್ಯ ಸನ್ನಿವೇಶಗಳೊಂದಿಗೆ ತುಂಬಿರುವ ಸಂಕಲನವು ಇಂದಿನ ಆಧುನಿಕ ಯುಗದ ಮಾನವ ತಾನು ಕಲಿತು ಅಳವಡಿಸಿ ಕೊಳ್ಳಬೇಕಾದ ಹಲವು ಗಮನಾರ್ಹವಾದ ಜೀವನ ತತ್ವಗಳನ್ನು ಒಳಗೊಂಡಿದೆ.

'ನೊಣ ಮುತ್ತುಗ' ಹಾಗೂ 'ಇಂದು ಹುಟ್ಟಿ ನಾಳೆ ಸಾಯಲಿ' ಎಂಬ ಎರಡೂ ಕಥೆಗಳು ಕೂಡ ಮಕ್ಕಳಿಲ್ಲದೆ ಬಂಜೆತನವನ್ನು ಅನುಭವಿಸುತ್ತಿರುವಂತಹ ವ್ಯಕ್ತಿಗಳ ಮನಸ್ಸಿನ ನೋವನ್ನು ಬಿಚ್ಚಿಡುತ್ತವೆ. ಇಲ್ಲಿನ ವ್ಯಕ್ತಿಗಳ ಹಂಬಲ, ಹಪಹಪಿಕೆ ಆಧುನಿಕ

ವ್ಯಕ್ತಿಯ ಹಂಬಲವು ಕೂಡ ಆಗಿರುವುದನ್ನು ಕಾಣಬಹುದು. ಮಲೆಮಾದೇಶ್ವರ ಸಂಕಮ್ಮನಿಗೆ ಕೊಟ್ಟಂತೆ ದೇವರು ಫಲವಂತಿಕೆಗಾಗಿ ಎರಡು ಬಾಳೆಹಣ್ಣುಗಳನ್ನು ಕೊಡುವುದು, 'ಬಂಜೆ' ಎಂಬ ಶಬ್ದದಿಂದ ತಪ್ಪಿಸಿಕೊಳ್ಳಲು ಇಲ್ಲಿನ ಕಥೆಯ ರಾಜ ಮಾಡುವ ಕಾರ್ಯಗಳು, ಆಧುನಿಕ ಮಾನವನ ಮನಸ್ಸಿನ ಒಳತೋಟಿಗಳೇ ಆಗಿವೆ. "ಬಂಜೇಲಿ ಹುಟ್ಟಿ ಮುಂಜಾನೇಲಿ ಸತ್ತು ಹೋಗ್ಲಿ ಒಂದು ಸಂತಾನ ಕೊಡು" ಎಂಬ ಮಾತುಗಳೇ ಇದಕ್ಕೆ ಸಾಕ್ಷಿ.

ತಂದೆ ತಾಯಿಗಳು ಸುಳ್ಳು ಹೇಳಿದರೂ ಮಕ್ಕಳು ಮಾತ್ರ ಸತ್ಯವನ್ನೇ ಹೇಳುತ್ತವೆ ಎಂಬ ಅಂಶ 'ಸ್ವಾಮಿಷೇಕ ರಾಜ ಚಿತ್ರಷೇಕ ರಾಜ' ಎಂಬ ಕಥೆಯಿಂದ ತಿಳಿಯುತ್ತದೆ. ಸಾಲಗಾರರಿಂದ ತಪ್ಪಿಸಿಕೊಳ್ಳಲು ಗಂಡ ಹೆಂಡತಿ ಸುಳ್ಳು ಹೇಳಿದರೂ ಮಕ್ಕಳು ಸತ್ಯವನ್ನು ಹೇಳಿ ತಂದೆ ತಾಯಿಗಳನ್ನು ಪೇಚಿಗೆ ಸಿಲುಕಿಸುವುದನ್ನು ಕಾಣಬಹುದು.

ತನ್ನ ತಾಯಿಯನ್ನೇ ಮೋಹಿಸಿದ ಮಗನನ್ನು ಕುರಿತು ಹಸು ತನ್ನ ಕರುವಿಗೆ ಹೇಳುವ 'ತಾಯಿನ ನೋಡದುವ ಅರಿವ, ನಿನ್ನ ನೋಡತಾನ ಸುಮ್ಮನಿರು' ಎಂಬ ಮಾತುಗಳು ತಾಯಿ ಮತ್ತು ಮಗನ ಬಿಡಿಸಲಾರದ ಸಂಬಂಧವನ್ನು ಹಾಗೂ ಕಣ್ಣರಿಯದಿದ್ದರೂ ಕಳ್ಳರಿಯುತ್ತದೆ ಎಂಬುದನ್ನು 'ಐದು ಮಲ್ಲಿಗಿ ಹೂವಿನ ರಾಜಕುಮಾರಿ' ಕಥೆ ಧ್ವನಿಸುತ್ತದೆ. 'ಬಡತನ ಬಾಳಗೆಡಸ್ತು' ಕತೆಯು ಬಡತನದ ದಾರುಣತೆಯನ್ನು ತಿಳಿಸಿದರೆ, 'ಅಣ್ಣ-ತಂಗಿ' ಕಥೆಯು 'ಹಣ ಮನುಷ್ಯನ ಸಂಬಂಧಗಳನ್ನು ಮರೆಸಿ, ಆತ ಎಂತಹ ಹೀನ ಕೃತ್ಯವನ್ನು ಮಾಡಲು ಸಹ ಹಿಂಜರಿಯುವುದಿಲ್ಲ' ಎಂಬುದನ್ನು ತಿಳಿಸಿಕೊಡುತ್ತದೆ.

'ನಗನಾರಿ ಹೂವಿನ ದೇವ ಕನ್ನಿಕೆ' ಹಾಗೂ 'ರೂಪಸ್ಥ ರಾಕ್ಷಸಿ' ಕಥೆಗಳಲ್ಲಿ ಪಂಥಾಹ್ವಾನವನ್ನು ಸ್ವೀಕರಿಸಿ, ಒಂದು ಕಾರ್ಯವನ್ನು ನಾನು ಮಾಡಿಯೇ ತೀರುತ್ತೇನೆಂಬುದಕ್ಕೆ ಸಾಕ್ಷಿಯಾಗಿ ವೀಳ್ಯವಯನ್ನು ಹಿಡಿಯುವುದು ಕಂಡುಬರುತ್ತದೆ. ಇಂದಿಗೂ ಸಹ ವೀಳ್ಯದ ಎಲೆಗಿರುವ ಮಹತ್ವವನ್ನು ನಾವು ಕಾಣಬಹುದು.

'ಸರ್ಪ ಬಂಗಾರತು', 'ಬೇಗಿನ ಮೋಜುಗಾರ' ಕಥೆಗಳು ಪರೋಪಕಾರಕ್ಕೆ ತಕ್ಕ ಪ್ರತಿಫಲ ದೊರೆಯುವುದನ್ನು ತಿಳಿಸಿಕೊಡುತ್ತವೆ. 'ಚಿನ್ನದ ಹೊಗೆಯಾಡೊ ಊರಾಗೊಬ್ಬ ಬಡವ' ಕತೆಯು 'ಯಾರನ್ನು ನಂಬಿದರು ಮನುಷ್ಯನನ್ನು ಮಾತ್ರ ನಂಬಬೇಡ' ಎಂಬ ನೀತಿಯನ್ನು ತಿಳಿಸುತ್ತದೆ.

'ನಾ ಹೆಚ್ಚು ನಾ ಹೆಚ್ಚು' ಕತೆಯಲ್ಲಿ ಶನಿದೇವರ ಪ್ರವೇಶವಾಗಿದ್ದು, ಉಳಿದಂತೆ ಎಲ್ಲ ಕಥೆಗಳಲ್ಲಿ ಶಿವಪಾರ್ವತಿಯರ ಚಿತ್ರಣವಿದ್ದು, ಕಷ್ಟದಲ್ಲಿರುವ ವ್ಯಕ್ತಿಗಳಿಗೆ ಸಹಾಯವನ್ನು ಮಾಡುವ ರಕ್ಷಿಸುವ ವ್ಯಕ್ತಿಗಳಾಗಿ ಇಡೀ ಸಂಕಲನದ ಕಥೆಗಳಲ್ಲಿ ಕಂಡು ಬರುತ್ತಾರೆ.

'ಎಲ್ಲರ ಮನೆಯ ಉಪ್ಪು ಒಂದೇ ರುಚಿ' ಎಂಬ ಕತೆಯು ಲೈಂಗಿಕತೆಯ ನಿಶೆಯಲ್ಲಿ ಮುಳುಗಿ ತಾನಿರುವ ಸ್ಥಾನ್ನವನ್ನು ಮರೆತ್ತಿದ್ದ ರಾಜನಿಗೆ ಊಟದ ಮೂಲಕವೇ ಜ್ಞಾನೋದಯವನ್ನು ಮಾಡಿಸುವ ಅದ್ಭುತವಾದ ಚಿತ್ರಣವಿದೆ.

'ನನ್ನ ಹೆಸರು ರೇಷ್ಮೆ ಗಿಡ' ಕತೆಯು ಬುದ್ಧಿವಂತ ಎಂತಹ ಅಪಾಯದಲ್ಲೂ ಕಷ್ಟದ ಸಂದರ್ಭದಲ್ಲೂ ಅದರಿಂದ ಪಾರಾಗಬಲ್ಲನೆಂಬುದನ್ನು ಹಾಸ್ಯದ ಮೂಲಕ ತಿಳಿಸುತ್ತ ಮಾನವನ ಬದುಕಿನ ಏಕತಾನತೆಯನ್ನು ಹೊಡೆದೋಡಿಸುತ್ತದೆ.

'ಸಾವುಕಾರಿಕೆ ಕೊಟ್ಟು ನೋಡಿದ' ಹಾಗೂ 'ನರಿ ಕೂಗು ಶಂಕದ ಕೂಗು ಒಂದು' ಎಂಬ ಎರಡೂ ಕಥೆಗಳು ದುಃಖಾಂತ್ಯ ಕಥೆಗಳಾಗಿದ್ದು, ಮೊದಲ ಕಥೆಯು 'ದುರಾಸೆ ಮನುಷ್ಯನ ಸಾವಿಗೆ ಆಹ್ವಾನ' ಎಂಬುದನ್ನು ತಿಳಿಸಿಕೊಟ್ಟರೆ, ಎರಡನೆಯ ಕಥೆ 'ಎಲ್ಲರನ್ನು ವಂಚಿಸುವ ಸನ್ನಿವೇಶಗಳನ್ನು ತನ್ನ ಅನುಕೂಲಕ್ಕಾಗಿ ಬಳಸಿಕೊಳ್ಳುವ ನರಿ ಕೊನೆಯಲ್ಲಿ ಸಾಧುವಿನಂತೆ ತನ್ನ ಕುಲದವರಿಗೆ ಉಪಕಾರವನ್ನು ಮಾಡಿ ಸಾಯುತ್ತದೆ.

'ಅಸಿಟ್ಟು ಅಳ್ಳಿಟ್ಟು' ಕಥೆಯು 'ಕಡುಬಿನ ಕಥೆ' ಯನ್ನು ನೆನಪಿಗೆ ತಂದರೆ 'ಮಂಗಣ್ಣ ಮೊಸಳೆ' ಕತೆಯು ನೇರಳೆ ಮರದಲ್ಲಿರುವ ಕೋತಿಯ ಕಥೆಯನ್ನು ನೆನಪಿಗೆ ತರುತ್ತದೆ. ಇಲ್ಲಿನ ಕತೆಯಲ್ಲಿ ಕೋತಿಯ ಕರುಳನ್ನು ತನ್ನ ಹೆಂಡತಿಗೆ ಕೇಳಿದರೆ, ಆ ಕಥೆಯಲ್ಲಿ ಕೋತಿಯ ಹೃದಯವನ್ನು ಕೇಳುತ್ತದೆ. ಕತೆಯಲ್ಲಿ ಸಮಾನ ಅಂಶಗಳಿದ್ದರೂ ಕೂಡ ಇಲ್ಲಿನ ಕಥೆ ಹೊಸತನದಿಂದ ಕೂಡಿದೆ. ಗೆಳೆಯನಾದ ಕೋತಿಯನ್ನು ಕುರಿತು ಮೊಸಳೆಯು ತಾನು ಮಾಡುತ್ತಿರುವ ಅನ್ಯಾಯ ಮತ್ತು ಮೋಸಗಳನ್ನು ನೆನೆದುಕೊಂಡು ತನ್ನನ್ನು ತಾನು ಆತ್ಮವಿಮರ್ಶೆಗೆ ಒಳಗು ಮಾಡಿಕೊಳ್ಳುವುದು ಕಂಡುಬರುತ್ತದೆ. 'ಕುರಿ ಹಿಂದೆ ನಾಯಿ' ಕಥೆಯು 'ಪುಣ್ಯಕೋಟಿ ಹಸುವಿನ' ಕಥೆಯನ್ನು ನೆನಪಿಗೆ ತರುತ್ತದೆ.

ಇಲ್ಲಿನ ಕತೆಗಳಲ್ಲಿ ಬಡವ, ಶ್ರೀಮಂತ, ರಾಜ, ಪ್ರಧಾನಮಂತ್ರಿ, ರಾಕ್ಷಸ ಸಂಕುಲ ಮೊದಲಾದ ವರ್ಗಗಳು ಕಂಡುಬರುತ್ತವೆ. ಜೊತೆಗೆ ನೀತಿ ಮತ್ತು ತತ್ವಬೋಧನೆ, ಪರೋಪಕಾರ ಮನೋಭಾವ, ಪ್ರಯತ್ನಕ್ಕೆ ತಕ್ಕ ಪ್ರತಿಫಲ ಮೊದಲಾದವು ಈ ಸಂಕಲನದ ಪ್ರಧಾನ ಆಶಯಗಳಾಗಿವೆ.

ಪ್ರಾದೇಶಿಕ ಭಾಷೆಯ ಜೊತೆಗೆ ಹಲವು ಆಂಗ್ಲ ಶಬ್ದಗಳು ಕಥೆಯಲ್ಲಿ ಸೇರಿ ಕೊಂಡಿದ್ದರೂ ಕಥೆಗಳನ್ನು ನಿರೂಪಿಸುವ ಶೈಲಿಯು ತುಂಬಾ ಸೊಗಸಾಗಿವೆ. ಹೀಗೆ ಹತ್ತು ಹಲವು ವಿಶೇಷಗಳೊಂದಿಗೆ ಇಡೀ ಸಂಕಲನದ ಕತೆಗಳು ಸಾಗುತ್ತವೆ.

ಲಕ್ಷ್ಮೀಕಾಂತ ಗೌರೀಪುರ

೭೭. ಜನಪದ ಕಾವ್ಯ ಲೋಕಕ್ಕೆ ಪರಿಪೂರ್ಣ ಸಂಶೋಧನಾ ಗ್ರಂಥ

ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು, ಜೀ.ಶಂ.ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ.೬೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ–೨೦೧೨, ಪುಟ–೪೯೦, ಬೆಲೆ ರೂ. ೫೦೦/-

ಜಾನಪದ ಎಂದರೆ ಜೀಶಂಪ ಎನ್ನುವಷ್ಟರ ಮಟ್ಟಿಗೆ ಜಾನಪದ ಕ್ಷೇತ್ರದಲ್ಲಿ ಅವರ ಸಾಧನೆ ಅವಿರತವಾದದ್ದು. ಜನಪದವನ್ನು ಒಂದು ಅಧ್ಯಯನ ವಿಷಯವಾಗಿ ಪರಿಗಣಿಸಿ ಅದರ ಬಗ್ಗೆ ವಿಸ್ತಾರವಾದ ಅಧ್ಯಯನ ಪ್ರಾರಂಭವಾಗಿದ್ದು ಪಾಶ್ಚಾತ್ಯರಿಂದ. ನಂತರ ಜನಪದದ ಅಧ್ಯಯನಕ್ಕೆ ವೈಜ್ಞಾನಿಕವಾದ ಸಾಂಸ್ಕೃತಿಕವಾದ ನೆಲೆಯನ್ನು ಒದಗಿಸಿ, ಅದಕ್ಕೆ ವಿಸ್ತಾರ ರೂಪವನ್ನು ಕೊಟ್ಟು, ಅದರ ಬೆಳವಣಿಗೆಗೆ ಸಾಕಷ್ಟು ಶ್ರಮಿಸಿದವರಲ್ಲಿ ಜೀಶಂಪ ಅವರು ಒಬ್ಬರು.

ಜೀರನಹಳ್ಳಿ ಶಂಭುಲಿಂಗಪ್ಪ ಪರಮಶಿವಯ್ಯ ಅವರನ್ನು ಗುರ್ತಿಸುವುದು ಜೀಶಂಪ ಎಂದೇ. ಅವರ ಸಂಶೋಧನ ಗ್ರಂಥ 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು'. ಜನಪದವನ್ನು ಅಧ್ಯಯನ ವಿಷಯವಾಗಿ ಪರಿಗಣಿಸಿ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ಅಧ್ಯಯನ ಸಂಸ್ಥೆಯನ್ನು ಕಟ್ಟಿ ಬೆಳೆಸಿದವರು. ಜನಪದ ಸಂಗ್ರಹಕ್ಕಾಗಿ ಕ್ಷೇತ್ರಕಾರ್ಯ, ಸಂಗ್ರಹಣೆ, ದಾಖಲಾತಿ, ಪುನರ್ ಸೃಷ್ಟಿ, ಹಳ್ಳಿ ಹಳ್ಳಿಗಳ ಸುತ್ತಾಟ, ರಚನೆ ಹೀಗೆ ಅದರ ಗಟ್ಟಿಬೇರುಗಳ ಮೂಲವನ್ನು ಹುಡುಕಿ, ಜನಪದ ಪರಂಪರೆಯನ್ನು ಜೀವಂತವಾಗಿ ಉಳಿಸಿಕೊಳ್ಳುವಲ್ಲಿ ಅಪಾರವಾದ ಸಾಧನೆ ಮಾಡಿದವರು.

ತಮ್ಮ ಸಂಶೋಧನಾ ಗ್ರಂಥ 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು'. ಈ ಗ್ರಂಥವನ್ನು ಜನಪದ ಕ್ಷೇತ್ರದ ಹಿರಿಯ ವಿದ್ವಾಂಸರು, ಕನ್ನಡ ನಾಡಿನಲ್ಲಿ ಜನಪದ ಅಧ್ಯಯನಕ್ಕೆ ಒಂದು ತಳಹದಿ ಹಾಕಿಕೊಟ್ಟ ಡಾ. ಹಾ.ಮಾ. ನಾಯಕರಿಗೆ ಅರ್ಪಿಸಿದ್ದಾರೆ. ಇದರಲ್ಲಿ ಜನಪದ ಕಾವ್ಯವನ್ನು ಕುರಿತ ಅಧ್ಯಯನವನ್ನು ಮೂರು ಹಂತಗಳಲ್ಲಿ ವಿಭಾಗ ಮಾಡಿದ್ದಾರೆ. ದಕ್ಷಿಣ ಕರ್ನಾಟಕದ ಭಾಗವನ್ನಷ್ಟೆ ಆಯ್ದುಕೊಂಡು ಸುಮಾರು ೫೯೦ ಪುಟಗಳಷ್ಟು ದೊಡ್ಡದಾದ ಸಂಶೋಧನಾ ಪ್ರಬಂಧ. ಅಚ್ಚುಕಟ್ಟಾದ ಮುದ್ರಣ, ಫೋಟೋ ಸಮೇತ ಕಲಾವಿದರ ಆಯಾ ಹಳ್ಳಿಗಳ ದಾಖಲಾತಿ, ಪ್ರಬುದ್ಧವಾದ ಬರವಣಿಗೆ, ಅಧ್ಯಯನ, ಜನಪದಕಾವ್ಯವನ್ನು ಕುರಿತ ಕ್ಷೇತ್ರಕಾರ್ಯ, ವರ್ಗೀಕರಣ, ವಿಶ್ಲೇಷಣೆ, ವಿಮರ್ಶೆ ಇವೆಲ್ಲ ಅವರ ಸಂಶೋಧನಾ ಪ್ರಬಂಧಕ್ಕೆ ಹಿರಿಮೆಯನ್ನು ಮಹತ್ವವನ್ನು ತಂದುಕೊಟ್ಟು ಎರಡನೆಯ ಮುದ್ರಣವನ್ನು ಕಂಡಿದೆ.

ಜನಪದ ಹೆಚ್ಚು ಪ್ರಚಲಿತವಾಗಿದ್ದು ಕಾವ್ಯಗಳ ಮೂಲಕ. ಸಂಶೋಧನೆಯ ಉದ್ದೇಶ ಕಾವ್ಯಗಳೇ ಆಗಿರುವುದರಿಂದ ಅದರ ಬಗ್ಗೆ ಪೂರ್ಣ ಮಾಹಿತಿ, ದಾಖಲಾತಿ ಎಲ್ಲವೂ ಇದೆ. ಜನಪದ ಸಾಹಿತ್ಯದಲ್ಲಿ ಗೀತೆಗಳಂತೆ, ಲಾವಣಿಗಳು, ಕಾವ್ಯಗಳು, ಅಪಾರ ಸಂಖ್ಯೆಯಲ್ಲಿದ್ದು, ಬಾಯಿಂದ ಬಾಯಿಗೆ ಹರಿದು ಬಂದು, ಕಳೆದುಹೋಗುತ್ತಿದ್ದ ಕಾವ್ಯವನ್ನು ಸಂಗ್ರಹಿಸಿ ಪರಿಚಯಿಸುವ ಅದನ್ನು ಅಕ್ಷರ ರೂಪವಾಗಿ ಉಳಿಸಿಕೊಳ್ಳುವ ಪ್ರಯತ್ನ ಈ ಸಂಶೋಧನಾ ಗ್ರಂಥದಲ್ಲಿ ಸಾಧಿತವಾಗಿದೆ.

ಈ ಗ್ರಂಥದಲ್ಲಿ ೧೪ ಭಾಗಗಳಿದ್ದು, ೧೨ ಭಾಗಗಳಲ್ಲಿ ಜನಪದ ಕಾವ್ಯವನ್ನು ಕುರಿತು ಅದರ ಸ್ವರೂಪ, ವರ್ಗೀಕರಣ, ಲಾವಣಿಗಳು, ಕಾವ್ಯ ಸಂಪ್ರದಾಯಗಳು.

ಮಲೆಮಾದೇಶ್ವರ, ಮಂಟೇಸ್ವಾಮಿ, ಎಲ್ಲಮ್ಮನ ಚೌಡಿಕೆ, ಕಾಡುಗೊಲ್ಲರ ಜುಂಜಪ್ಪನ ಸಂಪ್ರದಾಯ, ಮೈಲಾರಲಿಂಗ್ನನ ಗೊರವ ಸಂಪ್ರದಾಯ, ಜನಪದ ಲೌಕಿಕ ಕಾವ್ಯ ಸಂಪ್ರದಾಯ ಮತ್ತು ಇತರ ಕಾವ್ಯವರ್ಗಗಳು ಹೀಗೆ ವಿಷಯವನ್ನು ಕುರಿತ ಕ್ರಮಬದ್ಧವಾದ ಅಧ್ಯಯನ ಮಾಡಲಾಗಿದೆ. ಹಾಡಿನ ರೂಪದ ಎಲ್ಲಾ ಕಥನಾತ್ಮಕ ಸಾಹಿತ್ಯವನ್ನು ಈ ಅಧ್ಯಯನದಲ್ಲಿ ನಾಲ್ಕು ಹಂತಗಳಲ್ಲಿ ಕೈಗೊಂಡಿದ್ದಾರೆ. ೧. ಕ್ಷೇತ್ರಕಾರ್ಯ, ೨. ವರ್ಗೀಕರಣ, ೩. ವಿಶ್ಲೇಷಣೆ, ೪. ವಿಮರ್ಶೆ ಹೀಗೆ ಅಧ್ಯಯನದ ಉದ್ದೇಶವಿಟ್ಟುಕೊಂಡು ವಿಸ್ತಾರವಾದ ಕ್ಷೇತ್ರಕಾರ್ಯ ನಡೆಸಿದ್ದಾರೆ. ಜೊತೆಗೆ ಅವುಗಳನ್ನು ವಿಶೇಷ ರೀತಿಯ ಅಧ್ಯಯನ ಕ್ರಮದಲ್ಲಿ ಚರ್ಚಿಸಿ, ಜನಪದ ಕಾವ್ಯಗಳನ್ನು ಹಾಗೂ ಕಾವ್ಯ ಗಾಯಕರನ್ನು ಕುರಿತ ವಿವೇಚನೆ, ಕನ್ನಡದಲ್ಲಿ ಮೊಟ್ಟ ಮೊದಲಿಗೆ ನಡೆದಿರುವುದನ್ನು ಲೇಖಕರು ಗುರ್ತಿಸುತ್ತಾರೆ. ಇದು ಮುಂದಿನ ಅಧ್ಯಯನಕ್ಕೆ ಆಕರವಾಗಿ, ಮಾರ್ಗದರ್ಶಕವಾಗಿ ಒಳ್ಳೆಯ ತಳಹದಿಯಾಗಿದೆ.

ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರದಲ್ಲಿ ಕಾವ್ಯಗಳನ್ನು ಕುರಿತ ಪರಿಶೀಲನೆ ವಿಶ್ಲೇಷಣೆಯೇ ಮುಖ್ಯವಾಗಿದೆ. ಮೇಲಿಂದ ಮೇಲೆ ಊರುಗಳನ್ನು ಸುತ್ತಿ ಸಂಗ್ರಹಿಸಿದ ಸಾಹಿತ್ಯ ಹೇರಳವಾಗಿದ್ದು, ಅದನ್ನು ಕ್ರಮಬದ್ಧ ವರ್ಗೀಕರಣದಿಂದ ಓದುಗರಿಗೆ ಅಧ್ಯಯನ ಆಸಕ್ತರಿಗೆ ಸರಳವಾಗಿ, ಪೂರ್ಣ ಮಾಹಿತಿಯನ್ನು ಅಗಾಧ ವಿಷಯ ಸಂಪತ್ತನ್ನು ದೊರಕಿಸಿಕೊಡುವಲ್ಲಿ ಸಫಲವಾಗಿದೆ. ವೈವಿಧ್ಯಮಯವಾದ ವೃತ್ತಿಗಾಯಕರನ್ನು ಗುರ್ತಿಸಿ ಸಂಗ್ರಹಿಸಲಾಗಿದ್ದು, ಅವರ ಸಾಹಿತ್ಯ ಕಾವ್ಯ ಪರಂಪರೆಯನ್ನು ಉಳಿಸಿಕೊಡುವ ಪ್ರಯತ್ನವೂ ಆಗಿದೆ.

ಜನಪದ ಕಾವ್ಯ ಸಾಹಿತ್ಯ ಅಜ್ಞಾತವಾದುದ್ದು, ಅದರ ಸಂಗ್ರಹಣ ಕಾರ್ಯ ಕಷ್ಟಕರ. ದಕ್ಷಿಣ ಕರ್ನಾಟಕದ ಒಂದು ಭಾಗದ ಕಾವ್ಯ ಪರಂಪರೆಯನ್ನು ಅಧ್ಯಯನವಾಗಿಟ್ಟು ಕೊಂಡಿದ್ದು, ಅದು ವಿಪುಲವಾದ ತಿರುಗಾಟ, ಸಂಗ್ರಹ ಕಾರ್ಯ ಸಹನೆ ಪರಿಶ್ರಮ ತಾಳ್ಮೆಯನ್ನು ಬೇಡುತ್ತದೆ. ಆರ್ಥಿಕವಾಗಿ ಸದೃಢವಾಗಿ ಈ ಕಾರ್ಯ ಚಿಂತನೆಯನ್ನು ಸಾಕಾರಗೊಳಿಸುವುದು, ಅದನ್ನು ಕ್ರಮಬದ್ಧವಾದ ಸಂಗ್ರಹ ಕಾರ್ಯದಿಂದ ಜೋಪಾನ ಮಾಡುವುದು ಸೇರಿದಂತೆ ಇದನ್ನೆಲ್ಲವನ್ನು ಲೇಖಕರು ಅತ್ಯಂತ ಸಹನೆಯಿಂದ ಸಾಧಿಸಿದ್ದಾರೆ.

ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳಲ್ಲಿ ನಮ್ಮ ಮೂಲ ಜನಪದ ಸತ್ವವನ್ನು ಕಂಡುಕೊಳ್ಳುವ ಅದರ ವೈವಿಧ್ಯಮಯವಾದ ರೂಪಗಳನ್ನು ಹಾಡಿನ ಧಾಟಿ, ಶೈಲಿ, ವಿನ್ಯಾಸಗಳನ್ನು, ಗಾಯಕರ ಫೋಟೋ ಸಮೇತ ದಾಖಲಿಸಿ, ಓದುಗನು ಎಲ್ಲೋ ನೋಡಿದ, ಕೇಳಿದ ನೆನಪನ್ನು ಜಾಗೃತಗೊಳಿಸುತ್ತದೆ. ವಿಸ್ತಾರ, ವೈವಿಧ್ಯಮ ಯವಾದ ಜನಪದ ಕಾವ್ಯ ಸಂಪತ್ತಿನ ಹೇರಳವಾದ ಸಂಗ್ರಹವನ್ನು ಅರ್ಥಪೂರ್ಣವಾದ ಅಧ್ಯಯನಕ್ಕೆ ಒಳಪಡಿಸಿರುವುದು ಗ್ರಂಥದ ಹಿರಿಮೆಯನ್ನು ಹೆಚ್ಚಿಸಿದೆ. ಈ ಗ್ರಂಥ

ರೂಪುಗೊಳ್ಳುವುದಕ್ಕೆ ಕ್ಷೇತ್ರಕಾರ್ಯದಷ್ಟೇ ಆಕರ ಗ್ರಂಥಗಳ ಅಧ್ಯಯನದ ವೈಶಾಲ್ಯತೆಯೂ ಇದೆ. ಜನಪದ ಕಾವ್ಯವನ್ನು ಕುರಿತ ಅಧ್ಯಯನ ಜಾನಪದ ಲೋಕಕ್ಕೆ ಹೊಸ ಆಯಾಮವನ್ನು ದೊರಕಿಸಿಕೊಟ್ಟಿದೆ. ಜಾನಪದ ಸಂಶೋಧನಾ ಕ್ಷೇತ್ರದಲ್ಲಿ, ಕನ್ನಡ ಜಾನಪದ ಸಾಹಿತ್ಯಕ್ಕೆ ಈ ಗ್ರಂಥ ಮಹತ್ವದ್ದಾಗಿದೆ. ಮುಂದಿನ ಅಧ್ಯಯನ ಕ್ರಮಕ್ಕೆ ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಅತ್ಯುತ್ತಮ ಮಾಹಿತಿಯ ದೀವಿಗೆ.

ಸುಶೀಲಾ ಸದಾಶಿವಯ್ಯ

೭೮. ಅತ್ಯುತ್ತಮ ಮಹಾಸಂಕಲನ ಕಾವ್ಯ ಗ್ರಂಥ

ಕನ್ನಡ ವೃತ್ತಿಗಾಯಕ ಕಾವ್ಯಗಳು, ಸಂ.ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ.೯೫೫, ೧೧ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೩೪+೧೮, ಬೆಲೆ ರೂ. ೪೭೫/-

'ಕನ್ನಡ ವೃತ್ತಿಗಾಯಕ ಕಾವ್ಯಗಳು' ಎಂಬ ಕೃತಿ ಜನಪದ ಕಾವ್ಯ ಸಂಗ್ರಹವಾಗಿದೆ. ಜನಪದ ಸಾಹಿತ್ಯದ ಹಿರಿಯ ವಿದ್ವಾಂಸರು, ಸಾಧಕರು, ಸಂಗ್ರಹಕಾರರು ಆದ ಜೀಶಂಪ ಅವರ ಮಹತ್ವದ ಕೃತಿ. ಜನಪದ ವೃತ್ತಿಗಾಯಕರನ್ನು ತಮ್ಮ ಎರಡು ದಶಕಗಳ ಕ್ಷೇತ್ರಕಾರ್ಯದಿಂದ ಗುರ್ತಿಸಿ, ಅದರ ವೈವಿಧ್ಯತೆಯನ್ನು ಅರಿತು ಪರಿಶ್ರಮದಿಂದ ಊರೂರು ಸುತ್ತಿ, ಅದರಿಂದ ಸಂಗ್ರಹ ಕಾರ್ಯ ಮಾಡಿಕೊಂಡು ಪ್ರಕಟಪಡಿಸಿದ ಕನ್ನಡ ಜನಪದ ಕಾವ್ಯಗಳ ಒಂದು ಮಹಾಸಂಕಲನ. ನಮ್ಮ ಜನಪದ ಕಾವ್ಯಗಳಲ್ಲಿ ಇಷ್ಟು ದೊಡ್ಡ ಸಂಕಲನವೊಂದು ಪ್ರಕಟವಾಗುತ್ತಿರುವುದು ಇದೇ ಮೊದಲು ಎಂದು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿದ್ದ ಹಂಪ ನಾಗರಾಜಯ್ಯನವರು ಗುರ್ತಿಸುತ್ತಾರೆ.

ನಮ್ಮಲ್ಲಿ ಜನಪದ ಸಾಹಿತ್ಯ ಹೇರಳವಾಗಿತ್ತು, ಆದರೆ ನಮ್ಮಲ್ಲಿ ಅದರ ಸಂಗ್ರಹ ಕಾರ್ಯದಂತಹ ಗುರ್ತಿಸುವಿಕೆಯಲ್ಲಿ ಬಹಳ ಹಿಂದೆ ಉಳಿದಿದ್ದೆವು. ನಮ್ಮ ಜನಪದ ಸಾಹಿತ್ಯವನ್ನು ಗುರ್ತಿಸಿ ಸಂಗ್ರಹಿಸಿಕೊಡುವಲ್ಲಿ ಬ್ರಿಟೀಷರು ಕೆಲಸ ಶ್ಲಾಘನೀಯವಾದದ್ದು. ನಂತರದ ದಿನಗಳಲ್ಲಿ ಜನಪದವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ, ಚರ್ಚಿಸುವ, ಸಂಗ್ರಹಿಸಿ ವರ್ಗೀಕರಿಸುವ ಕೆಲಸವನ್ನು ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ನಮ್ಮ ಹಿರಿಯ ತಜ್ಞರು, ವಿದ್ವಾಂಸರು ಮಾಡಿದರು. ಇಂತಹ ಮಹತ್ವದ ಕೆಲಸವನ್ನು ಹಿರಿಯ ವಿದ್ವಾಂಸರಾದ ಜೀಶಂಪರವರು ತಮ್ಮ ಜೀವಿತಾವಧಿಯನ್ನು ಪೂರ್ಣವಾಗಿ ಇದರಲ್ಲಿ ತೊಡಗಿಸಿಕೊಂಡು ಸುಮಾರು ೫೦ಕ್ಕೂ ಹೆಚ್ಚು ಮಹತ್ವದ ಕೃತಿಗಳನ್ನು ನೀಡಿದ್ದಾರೆ. ಇವರ ಸಂಗ್ರಹಕಾರಕ ಶಕ್ತಿ ಅಗಾಧವಾದದ್ದು. ಆದ್ದರಿಂದ ಇಷ್ಟು ದೊಡ್ಡ ಗಾತ್ರದ ಗ್ರಂಥವನ್ನು ಕನ್ನಡ ಸಾಹಿತ್ಯ ಪರಿಷತ್ತು ಮೊದಲ ಬಾರಿಗೆ ಪ್ರಕಟಿಸಿದ್ದು, ಈಗ ಮತ್ತೆ ಎರಡನೆಯ ಮುದ್ರಣವನ್ನು ಕಂಡಿರುವುದು ಉತ್ತಮ ಬೆಳವಣಿಗೆ.

ಜನಪದ ಕಾವ್ಯ ಪರಂಪರೆಯಲ್ಲಿ ವೃತ್ತಿಗಾಯಕರ ಅಧ್ಯಯನ ಆರಂಭವಾದುದು ತುಂಬಾ ತಡವಾಗಿ. ಅದನ್ನು ಅಧ್ಯಯನ ಮಾಡಿ, ಸಂಗ್ರಹಿಸಿ ಅದಕ್ಕೆ ವ್ಯವಸ್ಥಿತ ರೂಪ ಕೊಟ್ಟ ಡಾ. ಜೀಶಂಪರವರು ಸುಮಾರು ಎರಡು ದಶಕಗಳ ಕಾಲ ಸಂಗ್ರಹಿಸಿದ ಗೀತೆಗಳ ಒಂದು ಮಹಾಸಂಕಲನ ಈ ಗ್ರಂಥ. ಸುಮಾರು ೫೩೫ ಪುಟಗಳಷ್ಟು ಗಾತ್ರವನ್ನು ಹೊಂದಿದ್ದು ಜನಪದ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಮಹತ್ವದ ಕೃತಿಯಾಗಿದೆ. ಸಂಗ್ರಹಿತವಾದ ಮೌಖಿಕ ಕಾವ್ಯವನ್ನು ಕ್ರಮಬದ್ಧವಾಗಿ ವಿಂಗಡಿಸುವ ಶಿಸ್ತುಬದ್ಧವಾದ ವಿಶ್ಲೇಷಣೆಯಿಂದ ವೃತ್ತಿಗಾಯಕ ಪರಂಪರೆಯ ವೈಶಾಲ್ಯತೆಯನ್ನು ಕಾಣಬಹುದು. ಜೀಶಂಪ ಅವರು ಈ ಕೃತಿಯನ್ನು ವಿಶ್ವ ಜಾನಪದ ಕ್ಷೇತ್ರದ ದೈತ್ಯಶಕ್ತಿಯ ವಿದ್ವಾಂಸರಾದ ಪ್ರೊ. ರಿಚರ್ಡ್ ಎಂ. ಡೋರ್‌ಸನ್ ಅವರಿಗೆ ಅರ್ಪಿಸಿದ್ದಾರೆ. ಈ ಗ್ರಂಥ ವಿದ್ವತ್ಪೂರ್ಣವಾದ ಪ್ರಸ್ತಾವನೆ, ಮಾಹಿತಿ, ಉಪಯುಕ್ತ ಟಿಪ್ಪಣಿಗಳಿಂದ ಜಾನಪದ ಆಸಕ್ತರಿಗೆ ಉಪಯುಕ್ತವಾಗುತ್ತದೆ.

ವೃತ್ತಿಗಾಯಕ ಪರಂಪರೆಯ ಹೇರಳವಾದ ಸಂಪತ್ತು ಅಕ್ಷರ ರೂಪವಾಗಿದ್ದು ಈ ಗ್ರಂಥದಲ್ಲಿ. ಸಂಗ್ರಹಿತವಾದ ಹೇರಳ ಕಾವ್ಯವನ್ನು ಮೂರು ವಿಭಾಗಗಳಾಗಿ ಗುರ್ತಿಸಿದ್ದಾರೆ. ಧಾರ್ಮಿಕ, ಲೌಕಿಕ, ಅರೆವೃತ್ತಿಗಾಯಕ ಮೇಳಗಳು ಎಂದು. ಇದರಲ್ಲಿ ೨೩ ರೀತಿಯ ಅದಕ್ಕೂ ಹೆಚ್ಚು ಗಾಯಕ ಮೇಳಗಳಿದ್ದು ಹಾಗೂ ಕೆಲವರು ತಮ್ಮ ವೃತ್ತಿಗಾಯಕ ಕಲೆಯಿಂದ ಕಾವ್ಯವನ್ನು ಉಳಿಸಿಕೊಂಡಿದ್ದಾರೆ. ಕೆಲವು ನಶಿಸಿ ಹೋಗುತ್ತಿವೆ. ಅದರಲ್ಲಿ ಐದು ರೀತಿಯ ಸಂಪ್ರದಾಯ ಗಾಯಕರಿದ್ದು, ಅದರಲ್ಲಿ ೧. ತಂಬೂರಿ ಕಾವ್ಯಗಳು, ೨. ತೆಲುಗು ಜಂಗಮರ ಕಾವ್ಯಗಳು, ೩. ಕಂಸಾಳೆ ಕಾವ್ಯಗಳು, ೪. ಸ್ತ್ರೀ ಸಂಪ್ರದಾಯದ ಕಾವ್ಯಗಳು, ೫. ನೀಲಗಾರರ ಕಾವ್ಯಗಳು ಎಂದು ೨೪ ಅಧ್ಯಾಯಗಳಲ್ಲಿ ಅವರ ಕಾವ್ಯ ವಿಭಾಗಿಸಲಾಗಿದೆ. ಫೋಟೋ ಸಹಿತವಾದ ವಿಷಯ ಸ್ಪಷ್ಟತೆ ಗ್ರಂಥದ ಮೌಲ್ಯವನ್ನು ಹೆಚ್ಚಿಸಿದೆ, ಆಕರ್ಷಕವಾಗಿಸಿದೆ.

ಜನಪದದಲ್ಲಿ ಸಾಹಿತ್ಯಿಕ ಕಾವ್ಯರೂಪಕ್ಕೆ ಹೆಚ್ಚು ಆದ್ಯತೆಯಿದ್ದು, ಅದು ಹೆಚ್ಚು ಶ್ರೀಮಂತವಾದ ಸಾಹಿತ್ಯ ರೂಪವಾಗಿದೆ. ಇದರಲ್ಲಿ ಕಥಾರೂಪಗಳು, ಪುರಾಣಗಳು, ಐತಿಹ್ಯ, ಕಟ್ಟುಕಥೆಗಳು, ಕಾವ್ಯವಾಗಿ ಜನರ ಆಸಕ್ತಿ, ಕುತೂಹಲಗಳನ್ನು ಹೆಚ್ಚಿಸಿವೆ. ಬೇಸರದ ಕ್ಷಣಗಳಿಗೆ ಸಂತೋಷವನ್ನು, ಸಮಯದ ಉಲ್ಲಾಸವನ್ನು ನೀಡುತ್ತಿದ್ದ ಈ ಕಾವ್ಯ ಪರಂಪರೆ ವಿಶಾಲವಾಗಿ ಹರಡಿಕೊಂಡು ಬೆಳೆದು ಬಂದಿದೆ. ವೃತ್ತಿಗಾಯಕ ಪರಂಪರೆಯಲ್ಲಿ ಹಾಡುತ್ತಿದ್ದ ಗಾಯಕರು ಕಣ್ಮರೆಯಾದರೆ ಅದರ(ಕಾವ್ಯದ) ಉಳಿವಿನ ಸಾಧ್ಯತೆ ಬಹಳ ಕಡಿಮೆ. ಮುಂದೆ ಆ ಒಂದು ಪರಂಪರೆಯೇ ಇಲ್ಲವಾಗುತ್ತದೆ. ಅದ್ದರಿಂದ ಮೌಖಿಕವಾದ ಈ ಕಾವ್ಯ ಪರಂಪರೆಯನ್ನು ಜನಪದ ಸಂಶೋಧಕರು, ವಿದ್ವಾಂಸರು ಆದ ಜೀಶಂಪ ಅವರು ತಮ್ಮ ದೀರ್ಘಕಾಲದ ಶ್ರಮದ ಸುತ್ತಾಟದಿಂದ ವ್ಯವಸ್ಥಿತವಾಗಿ ಸಂಗ್ರಹಿಸಿ, ಮುಂದಿನ ಸಂಶೋಧಕರಿಗೆ ಹಾಗೂ ಜನಾಂಗಕ್ಕೆ ಈ

ಕಾವ್ಯ ಪರಂಪರೆಯನ್ನು ಅಕ್ಷರ ರೂಪದಲ್ಲಿ ಕೊಟ್ಟಿರುವಂತಹ ಮಹತ್ವಪೂರ್ಣವಾದ ಸಂಗ್ರಹ ಕಾವ್ಯ ಗ್ರಂಥವಾಗಿದೆ.

ಸುಶೀಲಾ ಸದಾಶಿವಯ್ಯ

೭೯. ಜನಪದ ಕಥೆಗಳ ಸಾಂಸ್ಕೃತಿಕ ಮುಖಾಮುಖಿ

ರಾಯಚೂರು ಜಿಲ್ಲೆಯ ಜನಪದ ಕಥೆಗಳು, ಸಂ. ಟಿ.ಎಸ್. ರಾಜಪ್ಪ, ಸಾಗರ್ ಪ್ರಕಾಶನ, ನಂ.೬೫೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ–೨೦೧೨, ಪುಟ–೫೩೪+೧೮, ಬೆಲೆ ರೂ. ೮೦/-

ಆಧುನೀಕರಣದ ಸೂಕ್ಷ್ಮತೆಯ ಒಳಗೆ ಮನಸ್ಸುಗಳು ಸಂಕುಚಿತವಾಗುತ್ತಿರುವ ಈ ಸಂದರ್ಭದಲ್ಲಿ ಜನಪದರ ಸಾಹಿತ್ಯ ನಮ್ಮ ಬದುಕು ಹರಹುಗೊಳ್ಳಲು ನೆರವಾಗಬಲ್ಲದು. ರಚ್ಚೆ ಹಿಡಿದ ಮಗುವಿಗೆ ಚುಕ್ಕಿ ಚಂದ್ರಮನನ್ನು ತಂದುಕೊಡುವಷ್ಟು ಉದಾರತೆ ನಮ್ಮ ಜನಪದರಲ್ಲಿ ಇತ್ತೇ ಹೊರತು ಚಂದ್ರಯಾನದಷ್ಟು ವೈಜ್ಞಾನೀಕರಣಗೊಂಡಿರಲಿಲ್ಲ. 'ಚಂದ್ರಯಾನ' ಸಾಧನೆ ಎಂದುಕೊಂಡರೂ ಅದಕ್ಕೆ ಮಣ್ಣಿನ ಸತ್ವವಿಲ್ಲ. ಜೀವನದ ಅದೆಷ್ಟೋ ಅನುಭವಗಳನ್ನು ಕಥೆಯಾಗಿಸಿ ಹೇಳಿದ ನೆನಪಿನ್ನೂ ಮಾಸದಿರುವಾಗಲೇ ರೇಡಿಯೋ ಮತ್ತು ದೂರದರ್ಶನ ಈಗ ಹೆಚ್ಚು ವ್ಯಾಪಕವಾಗಿ ಬಳಕೆಗೊಳ್ಳುತ್ತಿರುವ ಕಂಪ್ಯೂಟರ್‌ನಿಂದ ತನ್ನ ಹಿಂದಿನ ಒಂದು ತಲೆಮಾರು ಕಥೆ ಹೇಳುವುದರಿಂದ ಮುಂದಿನ ತಲೆಮಾರು ಕಥೆ ಕೇಳುವುದರಿಂದ ವಿಮುಖಗೊಳ್ಳುತ್ತಿವೆ.

ಇಂತಹ ಸಂದರ್ಭದಲ್ಲಿ ಡಾ.ಟಿ.ಎಸ್.ರಾಜಪ್ಪನವರ 'ರಾಯಚೂರು ಜಿಲ್ಲೆಯ ಜನಪದ ಕಥೆಗಳು' ಮರು ಮುದ್ರಣಗೊಂಡಿರುವುದು ಸ್ವಾಗತಾರ್ಹ. ನಲವತ್ತೊಂಭತ್ತು ಕಥೆಗಳನ್ನು ಒಳಗೊಂಡ ಈ ಕೃತಿಯ ಹದಿಮೂರು ಜನ ವ್ಯಕ್ತಿಗಳಲ್ಲಿ ಲಕ್ಷ್ಮಣ ಎರಗೇರಿ ಮತ್ತು ರಾಮನಗೌಡ ಎಂಬ ಹದಿನಾಲ್ಕು ವರ್ಷದ ಕಥೆಗಾರರು ಹೇಳಿರುವ ಕಥೆಗಳು ವಯಸ್ಸಿಗೆ ಮೀರಿದ ಅನುಭವದ ಬದುಕನ್ನು ಕಟ್ಟಿಕೊಡುತ್ತದೆ.

'ಶಂಕರದತ್ತನ ಕಥೆ' ಮತ್ತು 'ಶಿವನಮಗಳು ಸೀತಾದೇವಿ' ಕಥೆಗಳು ಒಂದೇ ವಸ್ತುವನ್ನು ಒಳಗೊಂಡ ಕಥೆಗಳಾದರೂ ಭಿನ್ನದಾರಿಗಳಲ್ಲಿ ಸಾಗುತ್ತವೆ. ಈ ಎರಡೂ ಕಥೆಗಳ ನಾಯಕರು ಬಯಸುವ ಹೆಣ್ಣುಗಳು ಅಸಾಮಾನ್ಯರು. ಮನುಷ್ಯ ಸಹಜವಾಗಿ ದಕ್ಕಲಾರದವರು. ಅದಕ್ಕಾಗಿ ಇಬ್ಬರೂ ನಾಯಕರು ಹಿರಿಯರಿಂದ ಶಿಕ್ಷೆಗೆ ಗುರಿಯಾಗುತ್ತಾರೆ. ಇಷ್ಟಾದರೂ ಈ ಇಬ್ಬರು ನಾಯಕರು ಸುಮ್ಮನಾಗದೆ ಅನೇಕ ಪ್ರಯತ್ನಗಳ ಮೂಲಕ ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಈ ಎರಡೂ ಕಥೆಗಳಲ್ಲಿ ಗುರಿ ಮುಖ್ಯವಲ್ಲ, ಗುರಿಯ ಕಡೆಗೆ ನಡೆವ ದಾರಿ ಮುಖ್ಯ; ಆ ದಾರಿ ಮತ್ತೊಬ್ಬರಿಗೆ

ಅನುಕೂಲವಾಗಿರಬೇಕೆಂಬುದು ತಿಳಿದುಬರುತ್ತದೆ. ಎರಡೂ ರಾಜ ಪ್ರಭುತ್ವದ ಕಥೆಗಳು ಇವತ್ತಿನ ನಮ್ಮ ಪ್ರಜಾಪ್ರಭುತ್ವದ ಸ್ವಾರ್ಥ ರಾಜಕಾರಣವನ್ನು ಅಣಕಿಸುವಂತಿವೆ.

'ಹುಡುಗನ ಸಾಹಸ' ಕಥೆಯಲ್ಲಿ ತನ್ನ ಆಸೆಯ ಈಡೇರಿಕೆಗೆ ಹೊರಡುವ ಹುಡುಗ ತಾನು ಪರಮಾತ್ಮನನ್ನು ಭೇಟಿ ಮಾಡಿದ ಸಂದರ್ಭದಲ್ಲಿ ದಾರಿಯಲ್ಲಿ ಎದುರಾದ ವ್ಯಕ್ತಿಗಳ ಸಮಸ್ಯೆಗಳಿಗೆ ಉತ್ತರ ಪಡೆಯುತ್ತಾನೆ. ಆದರೆ ತನಗಾಗಿ ಏನನ್ನೂ ಕೇಳುವುದಿಲ್ಲ. ಹಾಗೆ ಕೇಳಬೇಕೆಂಬ ಆಲೋಚನೆಯೂ ಹುಡುಗನಿಗೆ ಇರುವುದಿಲ್ಲ. ಪರಮಾತ್ಮನ ದರ್ಶನವೊಂದೇ ಹುಡುಗನ ಅಂತಿಮ ಗುರಿಯಾಗಿರುತ್ತದೆ. ಇದರ ಅರಿವಿದ್ದ ಪರಮಾತ್ಮ ಆ ಮೂವರು ಸಮಸ್ಯಾತ್ಮಕ ವ್ಯಕ್ತಿಗಳಾಗಿ ನೀಡಿದ ಉತ್ತರ ಈತನಿಗೆ ವರವಾಗಿರುತ್ತದೆ. ಇಲ್ಲಿ ಆಸೆ ಮಿತಿಗೆ ಒಳಪಟ್ಟಿದೆ. ಉದ್ದೇಶಿತ ಗುರಿಹೊರತಾಗಿ ಮತ್ಯಾವ ಅಪೇಕ್ಷೆಗಳೂ ಆತನಲ್ಲಿಲ್ಲ. ಈ ಕಥೆ ನಮ್ಮ ಭಾಗದ 'ಇರುವೆ ಸೊಳ್ಳೆಗಳ ಶಾಪ' ಕಥೆಗೆ ವಿರುದ್ಧವಾದ ನೀತಿಯನ್ನು ಒಳಗೊಂಡದ್ದು. 'ಇರುವೆ ಸೊಳ್ಳೆಗಳ ಶಾಪ' ದ ಕಥೆಯಲ್ಲೂ ಸ್ವಾರ್ಥದ ತಪಸ್ಸಿನಿಂದ ಬ್ರಹ್ಮನನ್ನು ಒಲಿಸಿಕೊಂಡು ಪಡೆದ ಅವಿವೇಕದ ವರವೇ ಅವುಗಳಿಗೆ ಶಾಪದ ಶೂಲವಾಗುತ್ತದೆ. ಈ ಕಥೆಯಲ್ಲಿ ಸಾವಿನ ಮೂಲಕ ನೀತಿಯನ್ನು ಕಟ್ಟಿಕೊಡಲಾಗಿದೆ.

'ಮೊಲೆ ಹಾಲು ಮೋರೆಗೆ ಸುರಿದೋ' ಕಥೆ, 'ಕಣ್ಣು ಅರಿಯದಿದ್ದರೂ ಕರುಳು ಅರಿಯಿತು' ಎಂಬ ಗಾದೆಗೆ ಮಾದರಿಯಂತಿದೆ. ಹೆಣ್ಣಿನ ಬಾಹ್ಯ ಸೌಂದರ್ಯಕ್ಕೆ ಮಾತ್ರ ರಾಜಕುಮಾರ ಹೆಣ್ಣೊಂದನ್ನು ಮೋಹಿಸಿ, ದೈಹಿಕ ಸುಖಕ್ಕೆ ಎಡತಾಕಿದಾಗ ಆಕೆಯ ಮೊಲೆಯಿಂದ ಹಾಲು ಸುರಿಯುತ್ತದೆ. ಇದರಿಂದ ವಿಚಲಿತನಾದ ಯುವರಾಜ ತನ್ನ ತಂದೆ ತಾಯಿಗಳಿಂದ ತನ್ನ ಜನ್ಮ ವೃತ್ತಾಂತವನ್ನು ಕೇಳಲಾಗಿ ಅವರು ಸಾಕು ತಂದೆ ತಾಯಿಗಳೆಂದೂ ತಾನು ಯಾವ ಹೆಣ್ಣನ್ನು ಮೋಹಿಸಿದ್ದೆನೋ ಆ ಹೆಣ್ಣೇ ತನ್ನ ಹಡೆದವ್ವನೆಂದು ತಿಳಿದು ಸುಖಾಂತಗೊಳ್ಳುವ ಕಥೆ ಅತ್ಯಾಚಾರದಂತಹ ವರ್ತಮಾನದ ಅಮಾನುಷ ಘಟನೆಗಳನ್ನು ಇವತ್ತಿನ ಜನಾಂಗ ನಿರ್ವಹಿಸಬೇಕಾದ ಕ್ರಮಗಳನ್ನು ಚರ್ಚಿಸುತ್ತ ಸಂಬಂಧಗಳ ಪಾವಿತ್ರತೆಯನ್ನು ತಿಳಿಸಿಕೊಡುತ್ತದೆ.

'ಅಪ್ಪಳಂ ಚಪ್ಪಳಂ' ಎಂಬ ವಾಸ್ತವಿಕ ಕಥೆ ಮಡಿವಂತಿಕೆಯನ್ನು ಎದುರುಗೊಳ್ಳುತ್ತಾ, ದಾಂಪತ್ಯದ ಅನ್ಯೋನ್ಯತೆಯನ್ನು ಬೆಳೆಸುತ್ತದೆ. ಈ ಕಥೆಯಲ್ಲಿ ಹೆಂಡತಿ, ತನ್ನ ಗಂಡನಿಗೆ ಗೊತ್ತಿರದ ದಾಂಪತ್ಯದ ಬದುಕನ್ನು ನೆರೆಮನೆ ಸಂಗಪ್ಪನೊಂದಿಗೆ ಸಂಭೋಗದಿಂದ 'ಪ್ರಪಂಚ'ವನ್ನು ತಿಳಿಸಿಕೊಟ್ಟು, ಸಂಸಾರವನ್ನು ಸರಿ ಮಾಡಿಕೊಳ್ಳುತ್ತಾಳೆ. ತನ್ನ ಹೆಂಡತಿ ಪರಪುರುಷನೊಂದಿಗೆ ಸಂಬಂಧ ಹೊಂದುವುದು ಹಾದರವೆನಿಸುವುದಿಲ್ಲ.

'ಕಡಿಮನಿ ಲಕ್ಕವ್ವ' ಕಥೆಯಲ್ಲಿ ಹೆಂಡತಿ ಬೇರೆ ಹೆಣ್ಣುಗಳ ಹಿಂದೆ ಬಿದ್ದು ತನ್ನನ್ನು ಕಡೆಗಣಿಸಿದ್ದ ಗಂಡನನ್ನು ಉಪಾಯಗಳ ಮೂಲಕ ತನ್ನ ಹಿಡಿತಕ್ಕೆ ತೆಗೆದುಕೊಂಡು ಸಂಸಾರ ಸರಿದೂಗಿಸಿಕೊಳ್ಳುವಲ್ಲಿ ಸಫಲವಾಗುತ್ತದೆ. 'ನಾನು ರಾಕ್ಷಸನ ತಾತ' ಮತ್ತು

'ಕುಂಟ-ಕುರುಡ' ಕಥೆಯ ಘಟನೆಗಳು ಒಂದೇ ಆದರೂ ನಿರೂಪಣೆಯ ಆರಂಭ ಮತ್ತು ಮುಕ್ತಾಯಗಳು ಭಿನ್ನವಾಗಿವೆ.

ಹೀಗೆ ಇವತ್ತಿನ ಆಧುನಿಕ ಜೀವನಕ್ರಮಕ್ಕೆ ಎದುರಾಗುವ ಗ್ರಾಮಜೀವನದಲ್ಲಿ ವ್ಯಕ್ತಿವಿನ ಆಧುನೀಕರಣದ ಪ್ರಭಾವದಿಂದ ಇಲ್ಲಿನ ಕಥೆಗಳಿಗೆ ಆಧುನಿಕತೆಯ ಸೋಂಕು ತಗಲಿರುವುದೂ ವಿಶೇಷ. ಜನಪದ ಪ್ರಕಾರಗಳ ಸಂಗ್ರಹ, ಅಧ್ಯಯನ ಇವತ್ತು ಮತ್ತಷ್ಟು ವಿಸ್ತರಿಸಿಕೊಳ್ಳಬೇಕಿದೆ.

ಸ್ವಾಮಿ ನ. ಕೋಡಿಹಳ್ಳಿ

೮೦. ಧಾರವಾಡ ಜಿಲ್ಲೆಯ ಜನಪದ ಕಥೆಗಳ ಅಧ್ಯಯನ

ಧಾರವಾಡ ಜಿಲ್ಲೆಯ ಜನಪದ ಕಥೆಗಳು, ಸಂ. ಟಿ.ಎಸ್. ರಾಜಪ್ಪ, ಸಾಗರ್ ಪ್ರಕಾಶನ, ನಂ.೬೫೫, ೧೧ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೩೪+೧೮, ಬೆಲೆ ರೂ. ೮೦/-

ಜಾನಪದ ಸಾಹಿತ್ಯ ನಿಂತ ನೀರಲ್ಲ. ಅದು ನದಿಯೋಪಾದಿಯಲ್ಲಿ ಹರಿಯುತ್ತ, ಕಥೆ, ಗೀತೆ, ಲಾವಣಿ, ಒಗಟು ಮೊದಲಾದ ಪ್ರಕಾರಗಳ ಸಣ್ಣ ಸಣ್ಣ ತೊರೆಗಳನ್ನು ತನ್ನಲ್ಲಿ ಸೇರಿಕೊಂಡು ಹರಿಯುತ್ತಿದೆ. ಈ ಹರಿಯುವಿಕೆ ಇತ್ತೀಚಿನದಾಗಿರದೆ ಬಹಳ ಹಿಂದಿನದಾಗಿದ್ದು, ಇದರಲ್ಲಿ ಜನಪದ ಕಥೆಗಳಿಗೆ ಬಹು ಎತ್ತರದ ಸ್ಥಾನವಿದೆ. ಮನರಂಜನೆಯು ಮುಖ್ಯವಾಗಿ ಕಂಡರೂ ಅದರೊಳಗಿನ ಆಶಯ ಮಾತ್ರ ಮನರಂಜನೆಗಷ್ಟೆ ಸೀಮಿತವಾಗಿರದೆ ಮಾನವನಿಗೆ ಜೀವನ ತತ್ವಗಳನ್ನು ತಿಳಿಹೇಳುವ, ಆತನನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಿ ಅದರೊಟ್ಟಿಗೆ ನಮ್ಮ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವ ಬಹುಮುಖ್ಯವಾದ ಆಶಯ ಮತ್ತು ಉದ್ದೇಶವನ್ನು ತನ್ನ ಅಂತರ್ಯದಲ್ಲಿ ಅಡಗಿಸಿಕೊಂಡಿದೆ.

ಉದಾರೀಕರಣ ಹಾಗೂ ಜಾಗತೀಕರಣದ ಸೆಳೆತಕ್ಕೆ ಸಿಲುಕಿ ಆಧುನಿಕ ಮಾನವ ತನ್ನತನದ ಹುಡಕಾಟದಲ್ಲಿ ತೊಡಗಿರುವಂತಹ ಪ್ರಸ್ತುತ ಸಂದರ್ಭದಲ್ಲಿ ಶ್ರೀ ಟಿ.ಎಸ್. ರಾಜಪ್ಪನವರ 'ಧಾರವಾಡ ಜಿಲ್ಲೆಯ ಜನಪದ ಕತೆಗಳು' ಎಂಬ ಕೃತಿಯು ಮರುಮುದ್ರಣಗೊಳ್ಳುತ್ತಿರುವುದು, ಈ ಸಂಕಲನವು ತನ್ನೊಳಗೆ ಅಡಗಿಸಿಟ್ಟುಕೊಂಡಿರುವ ಜೀವನಪ್ರೀತಿ ಹಾಗೂ ಜೀವನಾನುಭವಗಳಿಗೆ ಹಿಡಿದ ಕನ್ನಡಿಯಾಗಿದೆ.

ಇಲ್ಲಿನ ಕೆಲವು ಕತೆಗಳು ಪೂರ್ವ ಪರಿಚಿತವೆಂದು ಕಂಡು ಬಂದರೂ ಪ್ರಾದೇಶಿಕ ಪಾಠಗಳಾಗಿದ್ದು, ಕಥೆಯ ನಿರೂಪಣಾ ಶೈಲಿಯಿಂದಾಗಿ ಆಪ್ತವೆನಿಸುತ್ತವೆ.

೨೮ ಕತೆಗಳನ್ನು ಒಳಗೊಂಡಿರುವ ಈ ಸಂಕಲನವು ಧಾರವಾಡ ಜಿಲ್ಲೆಯ ಹೊಳೆ ಆಲೂರು ಮತ್ತು ಗಾಡಗೋಳಿ ಎಂಬ ಸ್ಥಳಗಳಲ್ಲಿ ಸಂಗ್ರಹಿಸಲಾಗಿದೆ. ಅತಿಮಾನುಷ

ಕತೆಗಳು, ಅದ್ಭುತಕತೆಗಳು, ರಮ್ಯಕತೆಗಳು, ಬುದ್ಧಿವಂತಿಕೆ ಕತೆಗಳು, ಪ್ರಾಣಿಕತೆಗಳು, ನೀತಿಕಥೆಗಳು, ವಾಸ್ತವಿಕ ಕತೆಗಳು ಹಾಗೂ ಒಗಟಿನ ಕಥೆಗಳು ಎಂಬ ಎಂಟು ವಿಧಗಳಲ್ಲಿ ಕತೆಗಳು ಸಂಗ್ರಹವಾಗಿವೆ.

ಇಲ್ಲಿರುವ ೨೮ ಕತೆಗಳಲ್ಲಿ ೨೫ ಕತೆಗಳು ಸುಖಾಂತ್ಯವಾದರೆ, ೧ ಕಥೆ ದುಃಖಾಂತ್ಯವಾಗಿದ್ದು, ಉಳಿದಂತೆ ೨ ಒಗಟಿನ ಕತೆಗಳು ಈ ಸಂಕಲನದಲ್ಲಿವೆ.

ಈ ಸಂಕಲನದಲ್ಲಿನ ಕತೆಗಳು ಆಯಾ ಪಟ್ಟಣದ ಹೆಸರಿನೊಂದಿಗೆ ಪ್ರಾರಂಭ ವಾಗುತ್ತವೆ. ಜೊತೆಗೆ ಆ ಹಳ್ಳಿ ಅಥವಾ ಪಟ್ಟಣದ ಹೆಸರಿನ ಅಕ್ಷರದಿಂದಲೇ ಆ ನಾಡಿನ ರಾಜನ ಅಥವಾ ವ್ಯಕ್ತಿಯ ಹೆಸರುಗಳು ಪ್ರಾರಂಭವಾಗುತ್ತವೆ. ಉದಾ;- ಶಿವಶಂಕರ ರಾಜನ ಕಥೆ ಮಲೆಯಾಳ ದೇಶ ಮಲ್ಲಪುರಿ ಗ್ರಾಮ ಮಲಸೇನ ಮಹಾರಾಜ, ಮಕ್ಕಳಿಲ್ಲದ ವ್ಯಕ್ತಿಗಳು, ಹೀಗೆ ಹತ್ತು ಹಲವು ಹಾಸ್ಯ ಘಟನಾವಳಿಗಳೊಂದಿಗೆ ತುಂಬಿರುವ ಸಂಕಲನವು ಪ್ರಸ್ತುತ ಸಂದರ್ಭದಲ್ಲಿ ಮಾನವನು ಅರಿತು, ಬದುಕಿನಲ್ಲಿ ಅಳವಡಿಸಿ ಕೊಳ್ಳಬೇಕಾದ ಜೀವನ ತತ್ವಗಳ ಮಹಾಕಣಜವಾಗಿ ನಮ್ಮನ್ನು ಆಕರ್ಷಿಸುತ್ತದೆ.

'ಒಳ್ಳೆಯವರಿಗೆ ಜಯ, ದುಷ್ಟರಿಗೆ ಮರಣ' ಎಂಬುದು ಎಲ್ಲ ಕತೆಗಳಲ್ಲಿ ತಿಳಿದುಬರುವ ಪ್ರಮುಖ ಅಂಶವಾಗಿದೆ. ಇಲ್ಲಿನ ಕತೆಗಳಲ್ಲಿ ಹರಳಿಗೆ(ಹಳ್ಳು) ಮಹತ್ವದ ಸ್ಥಾನವಿದ್ದು, ನಾಯಕರುಗಳ ಕಷ್ಟದ ಸಮಯದಲ್ಲಿ ಅವರ ಸಹಾಯಕ್ಕಾಗಿ ಇದು ಎಲ್ಲ ಕತೆಗಳಲ್ಲಿಯೂ ಬಳಸಲ್ಪಡುತ್ತದೆ.

ಈ ಸಂಕಲನದ ಕತೆಗಳಲ್ಲಿ ಹಲವು ಲೋಕಗಳ ಚಿತ್ರಣವಿದ್ದು, ಸಾಮಾನ್ಯ ಮಾನವರು ಅಲ್ಲಿ ಸಂಚಾರ ಮಾಡಿ ಬರುವುದು, ಕತೆಯ ನಾಯಕರುಗಳು ಅಪಾಯಕ್ಕೆ ಸಿಲುಕಿ ಕೊಂಡಾಗ ಆತ ಸಾಕಿದ ಹಾಗೂ ಆತನಿಂದ ಉಪಕೃತರಾದ ಪ್ರಾಣಿಗಳು ಆತನ ಸಹಾಯಕ್ಕೆ ಧಾವಿಸಿ ಬರುವುದು, ಎಲ್ಲ ಜನಪದ ಕತೆಗಳ ಬಹುಮುಖ್ಯವಾದ ಅಂಶವಾಗಿದೆ. ಇಲ್ಲಿನ ಕತೆಗಳಲ್ಲಿ ತಾವು ಮಾಡಲು ಒಪ್ಪಿಕೊಳ್ಳುವ ಕೆಲಸಗಳಿಗೆ ಸಾಕ್ಷಿಯಾಗಿ ವೀಳ್ಯವನ್ನು ಕೈಯಲ್ಲಿ ಹಿಡಿದು ಪಂಥಾಹ್ವಾನವನ್ನು ಸ್ವೀಕರಿಸುವುದು ಕಂಡು ಬರುತ್ತದೆ.

ಈ ಸಂಕಲನದ ಕತೆಗಳಲ್ಲಿ ಸಂತಾನವಿಲ್ಲದೆ ಇರುವ ವ್ಯಕ್ತಿಗಳಿಗೆ ಶಿವನು ಮಾದಪ್ಪನಂತೆ ಉತ್ತತ್ತಿ ಹಣ್ಣನ್ನೋ, ಬಾಳೆಯ ಹಣ್ಣನ್ನೋ ನೀಡಿ ಅವರ ಕೊರತೆ ನೀಗಿಸುವುದು ತಿಳಿಯುತ್ತದೆ.

'ಚಕ್ರಾವತಿ ದೊರೆ' ಕತೆಯಲ್ಲಿ ಹೆಂಡತಿಯ(ಸುದೇವಿ) ಧರ್ಮ ಪರೀಕ್ಷೆಗಾಗಿ ಆಕೆಯನ್ನು ತೋಪಿನ ಬಾಯಿಗೆ ನಿಲ್ಲಿಸಿ ಗುಂಡು ಹಾರಿಸುತ್ತಾರೆ. ಗುಂಡು ಮಾಯವಾಗಿ ಮಲ್ಲಿಗೆ ಮಳೆಗರೆಯುತ್ತದೆ. ಆದರೆ ಇಲ್ಲಿ ಕೇವಲ ಸುದೇವಿಯನ್ನು ಸೀತೆಯಂತೆ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಆದರೆ ಮತ್ತೊಂದು ಹೆಣ್ಣನ್ನು ಮದುವೆಯಾಗಿ ಸುಖಭೋಗಗಳನ್ನು ಅನುಭವಿಸುತ್ತಿರುವ 'ಕಾಳಿದಾಸ' ರಾಜ, ಯಾವ ಪರೀಕ್ಷೆಗೂ ಒಳಪಡದೆ ಇರುವುದು ಹೆಣ್ಣನ್ನು ಕುರಿತಾದ ಶೋಷಣೆಯ ಮನೋಭೂಮಿಕೆಯ ಮುಂದುವರೆದ ರೂಪವಾಗಿರುವುದನ್ನು ತಿಳಿಸಿಕೊಡುತ್ತದೆ.

'ಬಲವಂತ ಬಸವಂತ' ಕಥೆಯು ಅತ್ತಿಗೆ-ಮೈದುನನನ್ನೇ ಮೋಹಿಸಿ ಕೂಡಲು ಪ್ರಯತ್ನಿಸುವ ಸಾಮಾಜಿಕ ಚೌಕಟ್ಟಿಗೆ ವಿರುದ್ಧವಾದ ಚಿತ್ರಣವನ್ನು ತಿಳಿಸಿದರೆ, ತನ್ನ ತಾಯಿಯನ್ನೇ ಮೋಹಿಸುವ ಮಗನ ಚಿತ್ರಣವನ್ನು 'ಶಠಗವ್ವ' ಕಥೆಯು ತಿಳಿಸುತ್ತದೆ.

'ಗುರುದಕ್ಷಿಣೆ', 'ಕಲಿಗಾಲ', 'ಬೇಡನಭಕ್ತಿ', 'ರಾತ್ರಿಗೆ ನೂರು' ಮತ್ತು 'ಮದನ ಮಂಜರಿ' ಕತೆಗಳ ಮೇಲೆ ಶಿಷ್ಟ ಪುರಾಣದ ಪ್ರಭಾವಗಳು ಬಿದ್ದಿರುವುದು ಕಂಡು ಬರುತ್ತದೆ. 'ಬೇಡನ ಭಕ್ತಿ' ಕತೆಯು ಬೇಡನ ದೃಢವಾದ ಭಕ್ತಿಗೆ ಮೆಚ್ಚಿ ಶಿವನು ತನ್ನ ಪುಷ್ಪಕ ವಿಮಾನದಲ್ಲಿ ಆತನನ್ನು ತನ್ನೊಡನೆ ಸ್ವರ್ಗಕ್ಕೆ ಕರೆದುಕೊಂಡು ಹೋಗುವ ಕ್ರಿಯೆ ಹರಿಹರನ ರಗಳೆಗಳ ವಸ್ತು ವಿಶೇಷತೆ ಹಾಗೂ ಶೈಲಿಯನ್ನು ನೆನಪಿಸುತ್ತದೆ.

ಈ ಸಂಕಲನದ ಕತೆಗಳಲ್ಲಿ ಸಾಮಾನ್ಯ ಬಡವನಿಂದ ಹಿಡಿದು ಶ್ರೀಮಂತ, ರಾಜ, ಪ್ರಧಾನಮಂತ್ರಿ, ಆಳು, ಕಾಳು, ದಾಸಿಯರು, ಪ್ರಾಣಿಕುಲ, ರಾಕ್ಷಸ ಸಂಕುಲ ಮೊದಲಾದ ವರ್ಗಗಳು ಕಂಡು ಬರುತ್ತವೆ. ಜೊತೆಗೆ ಆದರ್ಶ ಜೀವನ, ರೀತಿ ನೀತಿ, ಜೀವನ ತತ್ವಗಳ ಬೋಧನೆ, ಉಪಕಾರಿ ಮನೋಭಾವ, ಪರಿಶ್ರಮಕ್ಕೆ ದೊರಕುವ ತಕ್ಕುದಾದ ಫಲಗಳು ಮೊದಲಾದ ಪ್ರಧಾನ ಆಶಯಗಳನ್ನು ಈ ಸಂಕಲನವು ಒಳಗೊಂಡಿದೆ.

ಈ ಸಂಕಲನದ ಕತೆಗಳಲ್ಲಿ ಧಾರವಾಡ ಜಿಲ್ಲೆಯ ಪ್ರಾದೇಶಿಕ ಭಾಷೆಯ ಜೊತೆಗೆ ಅಲ್ಲಲ್ಲಿ ಕೆಲವು ಆಂಗ್ಲ ಶಬ್ದಗಳು ಬಳಕೆಯಾದರೂ ಕತೆಗಳನ್ನು ನಿರೂಪಿಸುವ ಶೈಲಿಯಿಂದಾಗಿ ಕಥೆಗಳು ತುಂಬಾ ಸೊಗಸಾಗಿವೆ. ಅಲ್ಲದೆ ಹತ್ತು ಹಲವು ವಿಶೇಷತೆಗಳು ಕಥಾ ತಿರುವುಗಳೊಂದಿಗೆ ಇಡೀ ಸಂಕಲನದಲ್ಲಿನ ಕತೆಗಳು ಸಾಗುತ್ತವೆ.

ಲಕ್ಷ್ಮೀಕಾಂತ ಗೌರೀಪುರ

೮೧. ಜನಪದರ ಮಹಿಳಾ ಕಥಾನಕಗಳು

ದಾಳಿಂಬೆ ರಾಣಿ, ಸಂ. ಟಿ.ಎಸ್. ರಾಜಪ್ಪ, ಸಾಗರ್ ಪ್ರಕಾಶನ, ನಂ. ೬೯೫, ೧೧ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೮೦, ಬೆಲೆ ರೂ. ೪೦/-

ದಾಳಿಂಬೆ ರಾಣಿ, ಟಿ.ಎಸ್. ರಾಜಪ್ಪನವರು ಸಂಪಾದಿಸಿದ ಮೊದಲ ಜನಪದ ಕಥಾ ಸಂಕಲನ. ೧೯೭೧ರ ವಿದ್ಯಾರ್ಥಿ ಜೀವನದಲ್ಲಿ ಸಂಪಾದಿಸಿ ಪ್ರಕಟಿಸಿದ ಈ ಸಂಕಲನ ನಲವತ್ತೊಂದು ವರ್ಷಗಳ ನಂತರ ಮರುಮುದ್ರಣಗೊಳ್ಳುತ್ತಿದೆ. ಸ್ತ್ರೀ ಸಂವೇದನೆ ಎಂಬ ಸೊಲ್ಲೆ ಇಲ್ಲದ ಕಾಲದಲ್ಲಿ ಸಂಪಾದಕರು 'ದಾಳಿಂಬೆ ರಾಣಿ'ಯ ಒಂಭತ್ತು ಕಥೆಗಳನ್ನು ಸಂಗ್ರಹಿಸಿರುವುದು ವಿಶೇಷ. ಇವು ನಾಲ್ಕು ಜನ ವಕ್ತೃಗಳಿಂದ ಹೇಳಲ್ಪಟ್ಟ ಮಹಿಳಾ ಕಥಾನಕಗಳಾಗಿವೆ.

ಇಲ್ಲಿನ ಕಥೆಗಳಲ್ಲಿ ಹೇಳಲ್ಪಟ್ಟಿರುವ ಸೋಮಾವತಿ, ನೀಲಾವತಿ, ಅಮರಾವತಿ, ಹೇಮಾವತಿ ಇವೆ ಮೊದ್ಲಲಾದ ಪಟ್ಟಣಗಳು ಸ್ತ್ರೀಕೇಂದ್ರಿತ ಸ್ಥಳನಾಮಗಳಾಗಿವೆ. 'ಜಾಣರಾಯನ ಕಥೆ'ಯನ್ನು ಹೊರತುಪಡಿಸಿದರೆ ಉಳಿದ ಏಳು ಕಥೆಗಳು ಮಹಿಳೆಯನ್ನು ಕೇಂದ್ರ ಪಾತ್ರವಾಗಿಸಿಕೊಂಡಿವೆ. 'ಗುಮ್ಮಚ್ಚಕ್ಕಿ ಕಥೆ' ಪಕ್ಷಿಕೇಂದ್ರಿತ ಕಥೆಯಾಗಿದೆ. 'ಶೀಲವತಿ' ಕಥೆ ಹೆಣ್ಣಿನ ಸಾಹಸಮಯ ಕಥಾನಕದ ಜೊತೆ ಜೊತೆಯಲ್ಲಿ ಮಂತ್ರಿಮಗನಾದ 'ದುಷ್ಟ ಬುದ್ಧಿ'ಯ ಕುತಂತ್ರಗಳು ಓದುಗರಲ್ಲಿ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯ ಅರಾಜಕತೆಯೊಂದಿಗೆ ತಳುಕು ಹಾಕಿಕೊಳ್ಳುತ್ತವೆ. ಶೀಲವತಿ ಆಪತ್ತಿನಿಂದ ಪಾರಾಗಲು ತನ್ನ ಶೀಲವನ್ನು ('ಶೀಲ' ಕೇವಲ ದೈಹಿಕ ಪರಿಭಾಷೆಯಾಗಿರದೆ ಬೌದ್ಧಿಕ/ಮಾನಸಿಕ ಬದ್ಧತೆಯನ್ನು ಪ್ರತಿನಿಧಿಸುತ್ತದೆ) ಪಣಕ್ಕಿಟ್ಟು ದೇವಾಲಯದಲ್ಲಿ ರಕ್ಷಣೆ ಪಡೆಯುವುದು ನಮ್ಮಲ್ಲಿನ ಬದ್ಧತೆಯನ್ನು ಪ್ರಶ್ನಿಸುವಂತಿದೆ.

ಜಾಣರಾಯನ ಕಥೆ, ಬುದ್ಧಿಶಕ್ತಿ/ವಿದ್ಯೆ ಶ್ರಮ ಮತ್ತು ಶ್ರದ್ಧೆಯಿಂದ ಗಳಿಸುವಂತಹದ್ದು ಎಂಬುದನ್ನು ನಿರೂಪಿಸುತ್ತದೆ. 'ಶೀಲವತಿ' 'ಜಾಣರಾಯನ ಕಥೆ' ಮತ್ತು ನಂದಿನಿ ಕಥೆಗಳಲ್ಲಿ ನೀಲಶೇಖರ ರಾಜ ಆಸ್ಥಾನದ ಬಗ್ಗೆ ಹೇಳಿರುವುದು ವಿಶೇಷ. ಇನ್ನು 'ಶೀಲವತಿ' ಮತ್ತು 'ನಂದಿನಿಕಥೆ'ಗಳಲ್ಲಿ ನಡೆಯುವ ವಧು-ವರರ ಅನ್ವೇಷಣೆಯಲ್ಲಿ ಮಂತ್ರಿಗಳು ಸೇರುವ ಸನ್ನಿವೇಶ, ಸ್ಥಳದ ಬಗೆಗಿನ ನಿರೂಪಣೆ ಏಕತಾನತೆಯಿಂದ ಕೂಡಿದೆ. ಆದರೆ ಶೀಲವತಿ ಕಥೆಯ 'ದುಷ್ಟಬುದ್ಧಿ'ಯ ಕುತಂತ್ರದ ನಂದಿನಿಯ ಕಥೆ ದೇವಕನ್ನಿಕೆಯರ ಆಸೆಗಿಂತ ಭಿನ್ನವಾಗಿದ್ದು, ಗಂಡು ಸ್ವಾರ್ಥಿ, ಹೆಣ್ಣು ದಯಾಮಯಿ ಎಂಬುದು ಇಲ್ಲಿ ವ್ಯಕ್ತವಾಗಿದೆ. ಮನುಷ್ಯ ಮನುಷ್ಯನಿಗೆ ಕೆಡುಕುಂಟುಮಾಡುವ ಸಂದರ್ಭ 'ಶೀಲವತಿ' ಕಥೆಯಲ್ಲಿ ನಿರೂಪಿತವಾಗಿದೆ. ನಂದಿನಿಕಥೆಯಲ್ಲಿ ಮಂತ್ರಿ ಹೇಳುವ ಉಪಕಥೆ ಸ್ವಾರಸ್ಯಕರವಾಗಿದೆ.

'ಪಾಪಪುಣ್ಯ' ಕಥೆಯ ಕಥಾನಾಯಕಿ ಜಾತಿಯಿಂದ ಬಿಡುಗಡೆಗೊಂಡು ಮನುಷ್ಯ ಸಹಜ ಅಪೇಕ್ಷೆಯಿಂದ ಜೀವನ ಸಾಗಿಸಿ, ಅದೇ ಮನುಷ್ಯ ಸಹಜ ಅಪರಾಧಿ ಭಾವದಲ್ಲಿ ಸತ್ತು ಮರುಜನ್ಮದಲ್ಲಿ ಕರ್ಮ ತೀರಿಸುವ ಪರಿ ಜನಪದರಿಗಿದ್ದ ಪುನರ್ಜನ್ಮದ ನಂಬಿಕೆ ಯನ್ನು ಬಿಂಬಿಸುತ್ತದೆ.

ನಂದಿನಿಕಥೆ ಮತ್ತು ಪಾಪಪುಣ್ಯ ಕಥೆಗಳಲ್ಲಿ ಬರುವ ಹೆರಿಗೆ ಮಾಡಿಸುವ ಸನ್ನಿವೇಶದ 'ಅಮ್ಮಾನಮ್ಮ ನಾಡಿನ ಹೆರಿಗೆ ಮಾಡೋಣವೇ? ಅಥವಾ ನಿಮ್ಮ ನಾಡಿನ ಹೆರಿಗೆ ಮಾಡಿಸೋಣವೆ' ಎಂಬ ಸಂಭಾಷಣೆಗಳ ಅಕ್ಷರ ಸಹ ಭಿನ್ನವಾಗಿಲ್ಲ. ಇದು ವಕ್ತೃಗಳ ಆಗಿದ್ದಾಗ್ಗೆ ಭೇಟಿ ಮಾಡಿದ ಅನುಭವ ತಿಳಿಸಿಕೊಡುತ್ತದೆ.

'ಎಸಳಿಗೆ ಮುಳ್ಳು' ಕಥೆಯಲ್ಲಿ ರಾಣಿ ತನ್ನ ಸ್ವಾರ್ಥಕ್ಕಾಗಿ ಕೇಳುವ ಹುಚ್ಚು ಬೇಡಿಕೆಗಳು ರಾಜಕುಮಾರನಿಂದ ಸಾಹಸ ಮಾಡಿಸಲು ನೆರವಾಗುತ್ತವೆ. ದಾಳಿಂಬೆ ರಾಣಿ ಓದಿನ ಆಸಕ್ತಿಯನ್ನು ಹೆಚ್ಚಿಸುತ್ತದೆ.

ಹೀಗೆ ಟಿ.ಎಸ್. ರಾಜಪ್ಪನವರು ತಮ್ಮ ನಡುವೆ ಸಮೃದ್ಧವಾಗಿದ್ದ ಕಥಾ ಸಂಪತ್ತನ್ನು ಇಂದಿನ ಓದುಗ ಸಮುದ್ಧಾಯಕ್ಕೆ ಪರಿಚಯ ಮಾಡಿಕೊಡುತ್ತ ವಕ್ತೃಗಳು, ಪಟ್ಟಣಗಳ ಹೆಸರುಗಳು, ಕಥೆಗಳ ಪ್ರಧಾನ ಪಾತ್ರಗಳು ಹೀಗೆ ಎಲ್ಲವೂ ಸ್ತ್ರೀ ಕೇಂದ್ರಿತವಾಗಿದ್ದು, ಸಂಕಲನಕ್ಕೆ 'ದಾಳಿಂಬೆ ರಾಣಿ' ಎಂದು ಹೆಸರಿಟ್ಟಿರುವುದು ಸೂಕ್ತವಾಗಿದೆ.

ಸ್ವಾಮಿ ನ. ಕೋಡಿಹಳ್ಳಿ

೮೨. ಕನ್ನಡ ಜನಪದ ಕಥೆಗಳ ಸಾಂಸ್ಕೃತಿಕ ಚಿಂತನೆ

ಕನ್ನಡ ಜನಪದ ಕಥೆಗಳು, ಸಂ. ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೧ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೩೪+೧೮, ಬೆಲೆ ರೂ. ೧೩೦/-

ಭಾರತಕ್ಕೆ ಬ್ರಿಟೀಷರು ಬರುವ ತನಕ ಜನಪದ ಸಾಹಿತ್ಯದ ಅಧ್ಯಯನ ನಡೆದಿರಲಿಲ್ಲ. ಜನಪದ ಸಾಹಿತ್ಯ ಮೌಖಿಕವಾಗಿಯೇ ಇತ್ತು. ಕರ್ನಾಟಕಕ್ಕೆ ಬಂದ ವಿದ್ವಾಂಸರುಗಳಾದ ಬಿ.ಎಲ್. ರೈಸ್, ಮೆಕೆಂಜಿ, ಕಿಟೆಲ್, ಮೊಗ್ಲಿಂಗ್ ಮೊದಲಾದವರು ವಿಶಾಲವಾಗಿ ಹರಡಿದ್ದ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಲು ಮುಂದಾದರು. ಹೀಗೆ ಶುರುವಾದ ಜನಪದ ಸಾಹಿತ್ಯದ ಅಧ್ಯಯನ ಇಲ್ಲಿನ ವಿದ್ಯಾವಂತರನ್ನು ಪ್ರಚೋದಿಸಿತು.

ಕನ್ನಡದ ಶ್ರೇಷ್ಠ ಜಾನಪದ ಅಧ್ಯಯನಕಾರ, ನಾಟಕಕಾರ, ಲೇಖಕರಾಗಿರುವ ಜೀಶಂಪರವರು ದೊಡ್ಡ ವಿದ್ವಾಂಸರು ಎಂಬಲ್ಲಿ ಸಂದೇಹವಿಲ್ಲ. ಅವರು ಸಂಪಾದಿಸಿರುವ 'ಕನ್ನಡ ಜನಪದ ಕಥೆಗಳು' ಸಾಹಿತ್ಯಕ ದೃಷ್ಟಿಯಿಂದ ಮಹತ್ವದವುಗಳಾಗಿವೆ. ವಕ್ತೃಗಳಿಂದ ಕಥೆಗಳನ್ನು ಕೇಳಿ, ಸಂಗ್ರಹಿಸಿ ನಿರೂಪಕರಾಗಿ ಹೇಳುವಾಗ ಅವರೊಳಗಿನ ಲೇಖಕ ಕೆಲಸ ಮಾಡಿದ್ದಾನೆ. ಕಥೆ ಕೇಳಿದ್ದನ್ನು ಇನ್ನೊಬ್ಬರಿಗೆ ಅರ್ಥವಾಗುವಂತೆ ಹೇಳುವುದು ಒಂದು ಕಲೆ. ಅಂತಹ ಕಲೆಗಾರಿಕೆಯನ್ನು ಈ ಕೃತಿಯಲ್ಲಿ ಮೆರೆದಿದ್ದಾರೆ.

ಇನ್ನು ಕೃತಿಗೆ ಬರುವುದಾದರೆ ಇದರಲ್ಲಿ ಒಟ್ಟು ೬೮ ಕಥೆಗಳಿವೆ. ಈ ಕಥೆಗಳನ್ನು ಜೀಶಂಪರವರು ಮಧುಗಿರಿ, ಗುಬ್ಬಿ, ಹಿರಿಯೂರು, ತಿಪಟೂರು, ನಾಗಮಂಗಲ, ಅರಸೀಕೆರೆ ಮುಂತಾದ ಪ್ರದೇಶಗಳಲ್ಲಿ ವಕ್ತೃಗಳಿಂದ ನೇರವಾಗಿ ಸಂಗ್ರಹಿಸಿದ್ದಾರೆ. ಇವರಿಗಿಂತ ಮುಂಚೆ ಕೆ.ಆರ್. ಲಿಂಗಪ್ಪ, ಎಲ್.ಆರ್. ಹೆಗಡೆ ಜನಪದ ಕಥೆಗಳನ್ನು ಸಂಗ್ರಹಿಸಿದ್ದರು. ಆದರೆ ಜೀಶಂಪರವರ ಕಥಾಸಂಕಲನದ ಕ್ಷೇತ್ರಕಾರ್ಯದ ವಿಧಾನ ಹೆಚ್ಚು ವೈಜ್ಞಾನಿಕವಾದದು. ಈ ಕಾರಣಕ್ಕಾಗಿಯೇ ಈ ಸಂಕಲನಕ್ಕೆ ವಿಶೇಷ ಮಹತ್ವವಿದೆ.

ಜನಪದ ಕಥೆಗಳ ಮುಖ್ಯ ಉದ್ದೇಶ ಶ್ರಮ ಪರಿಹಾರ, ವಿಶ್ರಾಂತಿ, ಮನರಂಜನೆ, ಮೌಲ್ಯ ಶಿಕ್ಷಣ, ಪ್ರಸರಣೆ ಇವು ಮುಖ್ಯವಾಗಿರುತ್ತದೆ. ಜನಪದ ಕಥೆಗಳು ಮನುಷ್ಯನ ಅಗತ್ಯಗಳಲ್ಲಿ ಒಂದಾಗಿರುತ್ತವೆ. ಇವು ಹಿಂದಿನ ಸಂಸ್ಕೃತಿಯ ಮೇಲೆ ಬೆಳಕನ್ನು ಚೆಲ್ಲುತ್ತವೆ.

ಜೀಶಂಪರವರು ಸಂಗ್ರಹಿಸಿರುವ ಕಥೆಗಳನ್ನು ೮ ವಿಭಾಗಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ ೧. ಅತಿಮಾನುಷ ಪತ್ನಿಯರು, ೨. ಅತಿಮಾನುಷ ಪತಿಯರು, ೩. ಅತಿಮಾನುಷ ವಿರೋಧಿಗಳು, ೪. ರಮ್ಯ ಕಥೆಗಳು, ೫. ಅದ್ಭುತ ಕಥೆಗಳು, ೬. ಬುದ್ಧಿವಂತಿಕೆ ಕಥೆಗಳು, ೭. ಹಾಸ್ಯ ಕಥೆಗಳು, ೮. ಪ್ರಾಣಿ ಕಥೆಗಳು.

ಜನಪದ ಕಥೆಗಳಲ್ಲಿ ಆಶಯಗಳು ಮುಖ್ಯವಾಗಿರುತ್ತವೆ. ಇಲ್ಲಿ ಅಸಾಮಾನ್ಯ ವ್ಯಕ್ತಿ, ಘಟನೆ ಮತ್ತು ವಸ್ತುಗಳೇ ಆಶಯಗಳಾಗಿದ್ದು, ಕಥೆಯ ಬೆಳವಣಿಗೆಗೆ ಕಾರಣವಾಗುತ್ತವೆ. ಇಲ್ಲಿ ಬರುವ ವಸ್ತುಗಳು, ಪ್ರಾಣಿಗಳು, ಪಕ್ಷಿಗಳು ಎಲ್ಲವೂ ಮಾತನಾಡುತ್ತವೆ. ಈ ಕಥೆಗಳಲ್ಲಿ ಮುಖ್ಯವಾಗಿ ಜಾಣತನ ಮತ್ತು ಅಪಾಯ ಬಂದಾಗ ಉಪಾಯ ಮಾಡುವುದು ಸರ್ವೇಸಾಮಾನ್ಯವಾಗಿದೆ.

ಈ ಸಂಕಲನದಲ್ಲಿರುವ ಕೆಲವು ಕಥೆಗಳನ್ನು ಗಮನಿಸುವುದಾದರೆ 'ದೊಂಬರ ಹುಡುಗ' ಕಥೆಯಲ್ಲಿ ಒಬ್ಬ ಸಾಮಾನ್ಯ ದೊಂಬರ ಹುಡುಗ ತೋರಿಸುವ ಅಸಾಧಾರಣ ಸಾಹಸವನ್ನು ಬಿಚ್ಚಿಡುತ್ತದೆ. ಪಾಳೆಗಾರನೊಬ್ಬನಿಗೆ ಷರತ್ತು ಒಡ್ಡಿ ರೆಕ್ಕೆ ಕಟ್ಟಿಕೊಂಡು ಹಾರಿ 'ಎಷ್ಟು ದೂರ ಹಾರುತ್ತಾನೋ ಅಷ್ಟು ಭೂಮಿಯನ್ನು' ಹಾರುವುದರ ಮುಖಾಂತರ ಪಡೆಯುತ್ತಾನೆ.

ಪ್ರಾಣಿ ಕಥೆಗಳನ್ನು ನೋಡುವುದಾದರೆ 'ಹುಲಿಯನ್ನು ಹೆದರಿಸಿದ ಕತ್ತೆ' ಕತೆಯಲ್ಲಿ ಹುಲಿಯ ಮೂರ್ಖತನ ಕತ್ತೆಯ ಧೈರ್ಯ ಮೆಚ್ಚಬಹುದಾಗಿದೆ. ಕತ್ತೆಯ ಹೊಡೆತಕ್ಕೆ ಹೆದರಿದ ಹುಲಿ ಓಡಿ ಹೋಗಿ ಬೇರೆಯವರ ಆಶ್ರಯ ಪಡೆಯುವುದು, ಅದರ ಹೆಸರು ಕೇಳುತ್ತಲೇ ನಡುಗುವುದು, ಕಥೆ ಓದಿಸಿಕೊಳ್ಳುವಾಗ ಮನಸ್ಸಿಗೆ ಒಳ್ಳೆಯ ಮನರಂಜನೆ ಇದೆ. ಅದೇ ರೀತಿ 'ಗೂಬೆ ತಂದ ಭಾಗ್ಯ', 'ಕುಂಟನರಿ', 'ಕೋತಿ ತಂದ ಭಾಗ್ಯ' ಮುಂತಾದವುಗಳಲ್ಲಿ ಪ್ರಾಣಿಗಳ ಬುದ್ಧಿವಂತಿಕೆ ನೋಡಬಹುದಾಗಿದೆ.

ಅತಿಮಾನುಷ ವಿರೋಧಿಗಳು ಕಥೆಗೆ ಸೇರುವ 'ಕುಂಟನ ಸಾಹಸ' ಕಥೆ ನಿಜವಾಗಯೂ ಮೆಚ್ಚುವಂತಹದ್ದು. ರಾಕ್ಷಸ ತನ್ನ ತಂಗಿಯನ್ನು ಎಳೆದುಕೊಂಡು ಹೋಗಿದ್ದಾಗ ಕುಂಟ ತನ್ನ ತಮ್ಮಂದಿರ ಸಹಾಯದಿಂದ ರಾಕ್ಷಸನನ್ನು ಎದುರಿಸಿ, ಮನೆಗೆ ತಂಗಿಯನ್ನು ಮರಳಿ ಕರೆತರುವುದು ತುಂಬಾ ಸ್ವಾರಸ್ಯಕರವಾಗಿದೆ.

ಅತಿಮಾನುಷ ಪತ್ನಿಯರು ಮತ್ತು ಅತಿಮಾನುಷ ಪತಿಗಳು ಈ ಕಥೆಗಳಲ್ಲಿ ಮಾಟ ಮಂತ್ರಗಳು ಬರುತ್ತವೆ. ತಮಗೆ ಬೇಕಾದ್ದನ್ನು ಮತ್ತು ಬೇಕಾದವರನ್ನು ಹೇಗೆ ಪಡೆಯುತ್ತಾರೆ ಎಂಬುದನ್ನು ನೋಡಬಹುದು. ಇಲ್ಲಿ ಅನೇಕರು ಶಾಪ ಪಡೆದು ರಾಕ್ಷಸರಾಗಿ ಮತ್ತೆ ರಾಕ್ಷಸತನದಿಂದ ಮುಕ್ತಿ ಹೊಂದಿ, ನೆಮ್ಮದಿಯ ಬದುಕನ್ನು ಪಡೆಯುತ್ತಾರೆ ಎಂಬುದನ್ನು ನೋಡಬಹುದು.

ಇನ್ನು ರಮ್ಯಕಥೆಗಳಿಗೆ ಬಂದರೆ ಹೆಸರೇ ಸೂಚಿಸುವಂತೆ ಪ್ರೀತಿ, ಪ್ರೇಮ, ಪ್ರಣಯಗಳಿಗೆ ಸಂಬಂಧಿಸಿದ ಸರಳ ಕಥೆಗಳು.

ಒಟ್ಟಿನಲ್ಲಿ ಜನಪದ ಕಥೆಗಳು ಸಾರ್ವಕಾಲಿಕ. ಎಲ್ಲ ಕಡೆ ಇರುವ ಈ ಕಥೆಗಳಲ್ಲಿ ಮುಖ್ಯ ಆಶಯ ಸುಖಾಂತ್ಯವಾಗಿರುತ್ತವೆ. ಈ ಕಥೆಗಳನ್ನು ಓದುತ್ತಿದ್ದರೆ ಕವಿರಾಜ ಮಾರ್ಗಕಾರನ ಮಾತು 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಮಾತು ಸತ್ಯ ಎನಿಸುತ್ತದೆ. ಬಿ.ಎಂ.ಶ್ರೀ. ಹೇಳುವಂತೆ 'ಜನವಾಣಿ ಬೇರು ಕವಿವಾಣಿ ಹೂವು'.

ಜನಪದ ಸಾಹಿತ್ಯ ಸಾಗರವಿದ್ದಂತೆ. ಜೀಶಂಪರವರು ಇಲ್ಲಿ ಕೆಲವು ಹನಿಗಳನ್ನು ಮಾತ್ರ ತೆಗೆದು ನಮ್ಮ ಮುಂದಿಟ್ಟಿದ್ದಾರೆ. ಇಂತಹ ಸಾವಿರಾರು ಕಥೆಗಳನ್ನು ಸಂಗ್ರಹಿಸ ಬೇಕಾಗಿದೆ. ಈಗಿನ ಹಳೆ ತಲೆಮಾರು ನಶಿಸಿದರೆ ಹೊಸ ತಲೆಮಾರಿನಲ್ಲಿ ಜನಪದ ಸಾಹಿತ್ಯ ಸಿಗುವುದು ವಿರಳ. ಆದಷ್ಟು ಬೇಗ ಇಂತಹ ಸಂಗ್ರಹ ಕಾರ್ಯ ನಡೆಯ ಬೇಕಾಗಿದೆ.

ದುಗ್ಗೇನಹಳ್ಳಿ ಸಿದ್ದೇಶ್

೮೩. ಬೆಳಗಾಂ ಜಿಲ್ಲೆಯ ಜನಪದ ಕಥೆಗಳ-ಸ್ಥೂಲ ನೋಟ

ಬೆಳಗಾಂ ಜಿಲ್ಲೆಯ ಜನಪದ ಕಥೆಗಳು, ಸಂ. ಟಿ.ಎಸ್. ರಾಜಪ್ಪ, ಸಾಗರ್ ಪ್ರಕಾಶನ, ನಂ. ೬೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೧೪೪, ಬೆಲೆ ರೂ. ೮೦/-

ಗ್ರಾಮೀಣ ಜನರ ಜೀವನಾಡಿಯೇ ಅಗಿರುವ ಜಾನಪದ ಸಾಹಿತ್ಯವು ತನ್ನೊಳಗೆ ಅಡಗಿಸಿಕೊಂಡಿರುವ ಆಶಯ, ಜೀವನಾನುಭವ, ಬದುಕಿನ ಬಗೆಗಿನ ಪ್ರೀತಿಯಿಂದಾಗಿ ಇಂದು ಚರ್ಚೆ ಹಾಗೂ ಅಧ್ಯಯನದ ವಿಷಯವಾಗಿರುವುದನ್ನು ಕಾಣಬಹುದು. ಇಂತಹ ಜಾನಪದ ಸಾಹಿತ್ಯದಲ್ಲಿ ಜನಪದ ಕತೆಗಳಿಗೆ ಸಿಂಹಪಾಲು. ಗಾದೆ, ಗೀತೆಗಳಷ್ಟೇ ಅಲ್ಲದೆ ಕತೆಗಳಿಗೂ ಬಹು ಎತ್ತರದ ಸ್ಥಾನವಿದೆ.

ಹೊರನೋಟಕ್ಕೆ ಮನರಂಜನೆಯೇ ಮುಖ್ಯವೆಂದು ಕಂಡರೂ ಅದರೊಳಗಿನ ಆಶಯ ಮಾತ್ರ ಮನರಂಜನೆಗಷ್ಟೇ ಸೀಮಿತವಾಗಿರದೆ, ಅದರಾಚೆಗೆ ಮಾನವನಿಗೆ ಜೀವನದ ನೀತಿ, ತತ್ವಗಳನ್ನು ತಿಳಿಸುವ, ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವ, ಅದರೊಟ್ಟಿಗೆ ನಮ್ಮ ನಾಡಿನ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವ ಬಹುಮುಖ್ಯವಾದ ಆಶಯ ಹಾಗೂ ಉದ್ದೇಶವನ್ನು ತನ್ನೊಡಲಿನಲ್ಲಿ ಇಟ್ಟುಕೊಂಡಿರುವುದು ತಿಳಿಯುತ್ತದೆ.

ಆಧುನಿಕತೆಯ ಸೋಗಿನಲ್ಲಿ ಉದಾರೀಕರಣ ಹಾಗೂ ಜಾಗತೀಕರಣದ ಸೆಳೆತಕ್ಕೆ ಸಿಲುಕಿ ಮಾನವ ತನ್ನತನದ ಹುಡುಕಾಟದಲ್ಲಿ ತೊಡಗಿರುವಂತಹ ಪ್ರಸ್ತುತ ಸಂದರ್ಭದಲ್ಲಿ ಟಿ.ಎಸ್. ರಾಜಪ್ಪನವರ 'ಬೆಳಗಾಂ ಜಿಲ್ಲೆಯ ಜನಪದ ಕಥೆಗಳು' ಎಂಬ ಕೃತಿಯು

ಇಲ್ಲಿನ ಕತೆಗಳಲ್ಲಿ ಜನಪದ ಕತೆಗಳ ಬಹುಮುಖ್ಯ ಲಕ್ಷಣ ಹಾಗೂ ಆಶಯವಾದ ಕಿರಿಯ ವ್ಯಕ್ತಿ ಅಥವಾ ಅಲಕ್ಷಿತ ವ್ಯಕ್ತಿ ಜಯಶಾಲಿಯಾಗಿ ಬದುಕಿನಲ್ಲಿ ಯಶಸ್ಸನ್ನು ಗಳಿಸುವುದು ಕಂಡುಬರುತ್ತದೆ. ಅಲ್ಲದೆ, ಇಲ್ಲಿನ ಕತೆಗಳ ರಾಜರಿಗೆ ೭ ಜನ ಹೆಂಡತಿಯರು ಅಥವಾ ೭ ಜನ ಮಕ್ಕಳಿರುವುದು ಕಂಡು ಬರುತ್ತದೆ.

ಈ ಸಂಕಲನದ ಕತೆಗಳಲ್ಲಿಯೂ 'ಹರಳಿ'ಗೆ(ಹಳ್ಳು) ಮಹತ್ವದ ಸ್ಥಾನವಿದ್ದು, ಕತೆಗಳಲ್ಲಿ ಗುರುತಿಗಾಗಿ ತೊಡೆಯ ಚರ್ಮವನ್ನು ಕುಯ್ಯಿಸಿ ಇಟ್ಟುಕೊಳ್ಳುವುದು ಕಂಡು ಬರುತ್ತದೆ. ವ್ಯಾಪಾರ ಹಾಗೂ ಕಟ್ಟಿಗೆ ಮಾರುವ ಪ್ರಧಾನ ವೃತ್ತಿಗಳು ಇಲ್ಲಿ ಕಂಡು ಬರುತ್ತವೆ. ಇಲ್ಲಿ ಬರುವ ರಾಕ್ಷಸಿಗಳು ಅತಿಮಾನುಷ ವಿರೋಧಿಗಳಾಗಿದ್ದು, ದುಷ್ಟರಾಗಿ, ಪ್ರಾಣ ಕಂಟಕರಾಗಿ ಕಂಡುಬರುತ್ತಾರೆ. ಅಲ್ಲದೆ ಎಲ್ಲ ಕತೆಗಳಲ್ಲಿಯು ರಾಕ್ಷಸವು ಅತಿ ಶ್ರೀಮಂತ ವಾಗಿದ್ದು, ಚಿನ್ನ, ಬೆಳ್ಳಿ, ಮುತ್ತು, ರತ್ನಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದು, ಕಥಾನಾಯಕ ತನ್ನ ಬುದ್ಧಿಶಕ್ತಿಯಿಂದ ಅದೆಲ್ಲವನ್ನು ವಶಪಡಿಸಿಕೊಂಡು ಸುಖವಾಗಿರುವುದನ್ನು ಕಾಣಬಹುದು.

ಈ ಭಾಗದಲ್ಲಿನ ಕತೆಗಳಲ್ಲಿ ದುಷ್ಟರನ್ನು ಕೊಲ್ಲಲು ಬಳಸುವ ತಂತ್ರಗಳು ಹಾಗೂ ಬೇರೊಬ್ಬನ ಪತ್ನಿಯನ್ನು ಅಪಹರಿಸಿ ಬಲವಂತವಾಗಿ ಮದುವೆಯಾಗುವ ಪ್ರಸಂಗ ಬಂದಾಗಲೆಲ್ಲ, ಆ ಹೆಣ್ಣು ನಾನು ೩ ತಿಂಗಳು ವ್ರತ ಅಥವಾ ಗೌರಿ ಪೂಜೆಯನ್ನು ಮಾಡುತ್ತಿದ್ದೇನೆ, ಅದು ಮುಗಿದ ನಂತರ ನಿಮ್ಮನ್ನು ಮದುವೆಯಾಗುತ್ತೇನೆಂದು ಹೇಳಿ, ಈ ಅವಧಿಯಲ್ಲಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡು ಸಂತೋಷ ವಾಗಿರುವುದು ತಿಳಿಯುತ್ತದೆ. ದುಷ್ಟ ಶಕ್ತಿಗಳು ತಮ್ಮ ಕಾರ್ಯ ಸಾಧನೆಗಾಗಿ ಬಹಳ ಅಪಾಯಕರವಾದ ಕೆಲಸಗಳನ್ನು ಮಾಡಲು ಅಂದರೆ 'ಗುಲ್ಲ ಬಕಾಲಿ ಹೂವು', 'ತಾವರೆಹೂವು', 'ಕರಿಮಲ್ಲಿಗೆ ಬಳ್ಳಿ' ಮೊದಲಾದ ಎಲ್ಲಿಯೂ ಸಿಗದ ಬಹಳ ಅಪರೂಪದ, ಅಪಾಯಕರವಾದ ಸ್ಥಳದಲ್ಲಿರುವ ವಸ್ತುಗಳನ್ನು ತರುವಂತೆ ಪಂಥವನ್ನು ಒಡ್ಡುವುದು ಕಂಡು ಬರುತ್ತದೆ.

ಇಲ್ಲಿನ ಕತೆಗಳು "ನಾವು ಹೇಳಿದಿವ್ರೀ, ನೀವು ಕೇಳಿದ್ರೀ" "ನಾವು ಹೇಳಿದವರಂತಾದ್ರಿ ನೀವು ಕೇಳಿದವರಂತಾದ್ರಿ" ಎಂಬ ಮಾತುಗಳಿಂದ ಮುಕ್ತಾಯ ಹೊಂದುವುದನ್ನು ಕಾಣಬಹುದು.

ಈ ಸಂಕಲನದ ಕತೆಗಳಲ್ಲಿ ಸಾಮಾನ್ಯ ಬಡವನಿಂದ ಹಿಡಿದು ಶ್ರೀಮ್ಮಂತ, ರಾಜ, ಪ್ರಧಾನಮಂತ್ರಿ, ಸೇವಕರು, ದೈವ ಸಂಕುಲ, ಪ್ರಾಣಿಕುಲ, ರಾಕ್ಷಸ ಸಂಕುಲ ಮೊದಲಾದ ವರ್ಗಗಳು ಕಂಡುಬರುತ್ತವೆ. ಜೊತೆಗೆ ಒಳ್ಳೆಯತನಕ್ಕೆ ಜಯ, ದುಷ್ಟತನಕ್ಕೆ ಶಿಕ್ಷೆ, ಮೌಲ್ಯಯುತ ಆದರ್ಶ ಜೀವನ, ಅವಶ್ಯ ಜೀವನಾನುಭಾವಗಳ ಬೋಧನೆ, ಉಪಕಾರಿ ಮನೋಧರ್ಮ, ಪರಿಶ್ರಮಕ್ಕೆ ದೊರಕಬಹುದಾದ ಫಲಗಳು ಮೊದಲಾದ ಪ್ರಧಾನ ಆಶಯಗಳನ್ನು ಇಲ್ಲಿನ ಕತೆಗಳು ಧ್ವನಿಸುತ್ತವೆ.

೩೯ ವರ್ಷಗಳ ನಂತರ ಮರುಮುದ್ರಣಗೊಳ್ಳುತ್ತಿರುವುದು ಸ್ವಾಗತಾರ್ಹ. ಹಾಗೂ ಜೀವನಾನುಭವಗಳಿಗೆ ಹಿಡಿದ ಕನ್ನಡಿಯಾಗಿದೆ.

೧೧ ಜನ ವಕ್ತೃಗಳಿಂದ ಸಂಗ್ರಹಿಸಿ, ೩೫ ಕತೆಗಳನ್ನು ಒಳಗೊಂಡಿರುವ, ಈ ಸಂಕಲನದ ಕತೆಗಳನ್ನು ಬೆಳಗಾಂ ಜಿಲ್ಲೆಯ ಸೌದತ್ತಿ ಹಾಗೂ ಮರಡಿಮಠ ಮುಂತಾದ ಕಡೆಗಳಲ್ಲಿ ಸಂಗ್ರಹಿಸಲಾಗಿದೆ. ಇದರಲ್ಲಿ ಅತಿಮಾನುಷ ಕತೆಗಳು, ಹಾಸ್ಯಕತೆಗಳು, ಅದ್ಭುತ ಕತೆಗಳು, ರಮ್ಯಕತೆಗಳು, ಬುದ್ಧಿವಂತಿಕೆ ಕತೆಗಳು, ಪ್ರಾಣಿಕತೆಗಳು, ನೀತಿಕತೆಗಳು, ವಾಸ್ತವಿಕ ಕತೆಗಳು ಮೊದಲಾದ ವಿಧಗಳ ಕತೆಗಳು ಈ ಸಂಕಲನದಲ್ಲಿ ಸಂಗ್ರಹವಾಗಿವೆ.

ಇಲ್ಲಿನ ಕೆಲವು ಕತೆಗಳು ಪೂರ್ವ ಪರಿಚಿತವೆಂದು ತೋರಿದರೂ ಪ್ರಾದೇಶಿಕ ಪಾಠಗಳಾಗಿದ್ದು, ಕಥೆಯ ನಿರೂಪಣಾ ಶೈಲಿಯಿಂದಾಗಿ ಆಪ್ತವೆನಿಸುತ್ತವೆ. ಇಲ್ಲಿರುವ ೩೫ ಕತೆಗಳಲ್ಲಿ ೩೩ ಕತೆಗಳು ಸುಖಾಂತವಾಗಿ ಅಂತ್ಯವಾದರೆ, ಉಳಿದ ೨ ಕತೆಗಳು ಮರಣದೊಂದಿಗೆ ಮುಕ್ತಾಯವನ್ನು ಹೊಂದುತ್ತವೆ. ಇಲ್ಲಿನ ಮೊದಲ ೩೦ ಕತೆಗಳು ಚಿಕ್ಕ ಕತೆಗಳಾಗಿದ್ದರೆ, ಉಳಿದ ಕೊನೆಯ ೫ ಕತೆಗಳು ದೊಡ್ಡ ಕತೆಗಳಾಗದ್ದು, ಹಲವು ರೋಚಕ ತಿರುವುಗಳೊಂದಿಗೆ ಕತೆಗಳ ವಿವರ ಬಿಚ್ಚಿಕೊಳ್ಳುತ್ತವೆ. 'ಅಕ್ಕ ತಂಗಿಯರು' ಕತೆಯು ಈ ಸಂಕಲನದ ಅತ್ಯಂತ ಚಿಕ್ಕ ಕತೆಯಾದರೆ 'ಗಡ್ಡೇದ ಬಸವಣ್ಣ' ಹಾಗೂ 'ಠಕ್ಕ ಸೇನ' ಅತಿ ದೊಡ್ಡ ಕತೆಗಳಾಗಿವೆ.

ಈ ಸಂಕಲನದ ಕತೆಗಳಲ್ಲಿ ಪುತ್ರಸಂತಾನಕ್ಕಾಗಿ ಹಂಬಲಿಸುವ, ಅದಕ್ಕಾಗಿ ತಿಳಿಯದೆ ರಾಕ್ಷಸಿಯರನ್ನು ವಿವಾಹವಾಗಿ ಅವರಿಂದ ಹಲವು ಕಷ್ಟ ನಷ್ಟಗಳಿಗೆ ಒಳಗಾಗುವ, ತನ್ನ ಬುದ್ಧಿಶಕ್ತಿಯ ಬಲದಿಂದ ತನಗೊದಗಿದ ಕಷ್ಟಗಳನ್ನು ಪರಿಹರಿಸಿಕೊಂಡು ಸುಖಜೀವನ ನಡೆಸುವ ವ್ಯಕ್ತಿಗಳ ವಿವರ, ಉತ್ತಮ ಆಲೋಚನೆಗಳುಳ್ಳ ವ್ಯಕ್ತಿಗಳಿಗೆ ದೊರೆಯುವ ಯಶಸ್ಸು, ಪರಸ್ಪರ ಅಸೂಯೆ, ಕರುಬುವಿಕೆ, ದುಷ್ಟಶಕ್ತಿಗಳು ಅತಿಮಾನುಷ ವಿರೋಧಿಗಳಾಗಿ, ಕೆಲವೊಮ್ಮೆ ಸಹಾಯಕರಾಗಿ ಕಂಡುಬರುವುದು, ದಡ್ಡನೆಂದು ಅಲಕ್ಷ್ಯಕ್ಕೊಳಗಾದ ವ್ಯಕ್ತಿ ತನ್ನ ದಡ್ಡತನದಿಂದಲೇ ಹಣ, ಐಶ್ವರ್ಯ, ಹೆಣ್ಣುಗಳನ್ನು ಗಳಿಸುವ, ತಮ್ಮ ಜಿಪುಣತನದಿಂದಾಗಿ ತನ್ನ ಪ್ರಾಣವನ್ನು ತಾವೇ ಕಳೆದುಕೊಳ್ಳುವ ಜೀನ ಮನುಷ್ಯರ ವಿವರಗಳು, ಪ್ರಾಣಿ ಪಕ್ಷಿಗಳ ಪರೋಪಕಾರಿ ಮನೋಭಾವ ಹಾಗೂ ತಾವು ಕೊಟ್ಟ ಮಾತಿಗೆ ಅನುಗುಣವಾಗಿ ಬದ್ಧರಾಗಿರುವುದು ಹೀಗೆ ಅನೇಕ ಘಟನೆಗಳು, ಹಾಸ್ಯ ಸನ್ನಿವೇಶಗಳೊಂದಿಗೆ ತುಂಬಿರುವ ಸಂಕಲನವು ಪ್ರಸ್ತುತ ಸಂದರ್ಭದಲ್ಲಿ ಮಾನವನು ಅರಿತು, ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಜೀವನ ತತ್ತ್ವಗಳ ಮಹಾಕಣಜವಾಗಿ ನಮ್ಮ ಗಮನವನ್ನು ಸೆಳೆಯುತ್ತದೆ.

ಈ ಸಂಕಲನದ 'ಜೀನಮನುಷ್ಯ' ಹಾಗೂ 'ಮಂಗನ ಸೇಡು' ಎಂಬ ೨ ಕತೆಗಳನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಕತೆಗಳು ಸಕಾರಾತ್ಮಕವಾದ ಆಶಯಗಳೊಂದಿಗೆ ಮುಕ್ತಾಯವನ್ನು ಹೊಂದುತ್ತವೆ.

ಇಲ್ಲಿನ ಕತೆಗಳಲ್ಲಿ ಜನಪದ ಕತೆಗಳ ಬಹುಮುಖ್ಯ ಲಕ್ಷಣ ಹಾಗೂ ಆಶಯವಾದ ಕಿರಿಯ ವ್ಯಕ್ತಿ ಅಥವಾ ಅಶಿಕ್ಷಿತ ವ್ಯಕ್ತಿ ಜಯಶಾಲಿಯಾಗಿ ಬದುಕಿನಲ್ಲಿ ಯಶಸ್ಸನ್ನು ಗಳಿಸುವುದು ಕಂಡುಬರುತ್ತದೆ. ಅಲ್ಲದೆ, ಇಲ್ಲಿನ ಕತೆಗಳ ರಾಜರಿಗೆ ೭ ಜನ ಹೆಂಡತಿಯರು ಅಥವಾ ೭ ಜನ ಮಕ್ಕಳಿರುವುದು ಕಂಡು ಬರುತ್ತದೆ.

ಈ ಸಂಕಲನದ ಕತೆಗಳಲ್ಲಿಯೂ 'ಹರಳಿ'ಗೆ(ಹಳ್ಳು) ಮಹತ್ವದ ಸ್ಥಾನವಿದ್ದು, ಕತೆಗಳಲ್ಲಿ ಗುರುತಿಗಾಗಿ ತೊಡೆಯ ಚರ್ಮವನ್ನು ಕುಯ್ಯಿಸಿ ಇಟ್ಟುಕೊಳ್ಳುವುದು ಕಂಡು ಬರುತ್ತದೆ. ವ್ಯಾಪಾರ ಹಾಗೂ ಕಟ್ಟಿಗೆ ಮಾರುವ ಪ್ರಧಾನ ವೃತ್ತಿಗಳು ಇಲ್ಲಿ ಕಂಡು ಬರುತ್ತವೆ. ಇಲ್ಲಿ ಬರುವ ರಾಕ್ಷಸಿಗಳು ಅತಿಮಾನುಷ ವಿರೋಧಿಗಳಾಗಿದ್ದು, ದುಷ್ಟರಾಗಿ, ಪ್ರಾಣ ಕಂಟಕರಾಗಿ ಕಂಡುಬರುತ್ತಾರೆ. ಅಲ್ಲದೆ ಎಲ್ಲ ಕತೆಗಳಲ್ಲಿಯು ರಾಕ್ಷಸವು ಅತಿ ಶ್ರೀಮಂತ ವಾಗಿದ್ದು, ಚಿನ್ನ, ಬೆಳ್ಳಿ, ಮುತ್ತು, ರತ್ನಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದು, ಕಥಾನಾಯಕ ತನ್ನ ಬುದ್ಧಿಶಕ್ತಿಯಿಂದ ಅದೆಲ್ಲವನ್ನು ವಶಪಡಿಸಿಕೊಂಡು ಸುಖವಾಗಿರುವುದನ್ನು ಕಾಣಬಹುದು.

ಈ ಭಾಗದಲ್ಲಿನ ಕತೆಗಳಲ್ಲಿ ದುಷ್ಟರನ್ನು ಕೊಲ್ಲಲು ಬಳಸುವ ತಂತ್ರಗಳು ಹಾಗೂ ಬೇರೊಬ್ಬನ ಪತ್ನಿಯನ್ನು ಅಪಹರಿಸಿ ಬಲವಂತವಾಗಿ ಮದುವೆಯಾಗುವ ಪ್ರಸಂಗ ಬಂದಾಗಲೆಲ್ಲ, ಆ ಹೆಣ್ಣು ನಾನು ೩ ತಿಂಗಳು ವ್ರತ ಅಥವಾ ಗೌರಿ ಪೂಜೆಯನ್ನು ಮಾಡುತ್ತಿದ್ದೇನೆ, ಅದು ಮುಗಿದ ನಂತರ ನಿಮ್ಮನ್ನು ಮದುವೆಯಾಗುತ್ತೇನೆಂದು ಹೇಳಿ, ಈ ಅವಧಿಯಲ್ಲಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡು ಸಂತೋಷ ವಾಗಿರುವುದು ತಿಳಿಯುತ್ತದೆ. ದುಷ್ಟ ಶಕ್ತಿಗಳು ತಮ್ಮ ಕಾರ್ಯ ಸಾಧನೆಗಾಗಿ ಬಹಳ ಅಪಾಯಕರವಾದ ಕೆಲಸಗಳನ್ನು ಮಾಡಲು ಅಂದರೆ 'ಗುಲ್ಲ ಬಕಾಲಿ ಹೂವು', 'ತಾವರೆಹೂವು', 'ಕರಿಮಲ್ಲಿಗೆ ಬಳ್ಳಿ' ಮೊದಲಾದ ಎಲ್ಲಿಯೂ ಸಿಗದ ಬಹಳ ಅಪರೂಪದ, ಅಪಾಯಕರವಾದ ಸ್ಥಳದಲ್ಲಿರುವ ವಸ್ತುಗಳನ್ನು ತರುವಂತೆ ಪಂಥವನ್ನು ಒಡ್ಡುವುದು ಕಂಡು ಬರುತ್ತದೆ.

ಇಲ್ಲಿನ ಕತೆಗಳು "ನಾವು ಹೇಳಿದಿವ್ರೀ, ನೀವು ಕೇಳಿದ್ರೀ" "ನಾವು ಹೇಳಿದವರಂತಾದ್ರಿ ನೀವು ಕೇಳಿದವರಂತಾದ್ರಿ" ಎಂಬ ಮಾತುಗಳಿಂದ ಮುಕ್ತಾಯ ಹೊಂದುವುದನ್ನು ಕಾಣಬಹುದು.

ಈ ಸಂಕಲನದ ಕತೆಗಳಲ್ಲಿ ಸಾಮಾನ್ಯ ಬಡವನಿಂದ ಹಿಡಿದು ಶ್ರೀಮಂತ, ರಾಜ, ಪ್ರಧಾನಮಂತ್ರಿ, ಸೇವಕರು, ದೈವ ಸಂಕುಲ, ಪ್ರಾಣಿಕುಲ, ರಾಕ್ಷಸ ಸಂಕುಲ ಮೊದಲಾದ ವರ್ಗಗಳು ಕಂಡುಬರುತ್ತವೆ. ಜೊತೆಗೆ ಒಳ್ಳೆಯತನಕ್ಕೆ ಜಯ, ದುಷ್ಟತನಕ್ಕೆ ಶಿಕ್ಷೆ, ಮೌಲ್ಯಯುತ ಆದರ್ಶ ಜೀವನ, ಅವಶ್ಯ ಜೀವನಾನುಭಾವಗಳ ಬೋಧನೆ, ಉಪಕಾರಿ ಮನೋಧರ್ಮ, ಪರಿಶ್ರಮಕ್ಕೆ ದೊರಕಬಹುದಾದ ಫಲಗಳು ಮೊದಲಾದ ಪ್ರಧಾನ ಆಶಯಗಳನ್ನು ಇಲ್ಲಿನ ಕತೆಗಳು ಧ್ವನಿಸುತ್ತವೆ.

ಈ ಸಂಕಲನದ ಕತೆಗಳಲ್ಲಿ ಬೆಳಗಾವಿ ಜಿಲ್ಲೆಯ ಪ್ರಾದೇಶಿಕ ಭಾಷೆಯ ಜೊತೆಗೆ ಕೆಲವೊಂದು ಆಂಗ್ಲ ಭಾಷೆಯ ಶಬ್ದಗಳು ಕತೆಗಳಲ್ಲಿ ಅಲ್ಲಲ್ಲಿ ಬಳಕೆಯಾಗಿರುವುದನ್ನು ಕಾಣಬಹುದು. ಕತೆಗಳನ್ನು ನಿರೂಪಿಸುವ ಶೈಲಿ, ಸೊಗಸುಗಾರಿಕೆಯಿಂದಾಗಿ ಕತೆಗಳು ಓದುಗರ ಗಮನವನ್ನು ಹಿಡಿದಿಡುತ್ತವೆ. ಹೀಗೆ ಹತ್ತು ಹಲವು ತಿರುವುಗಳು, ವಿಶೇಷತೆಗಳೊಂದಿಗೆ ಕತೆಗಳು ಸಾಗುತ್ತವೆ.

ಲಕ್ಷ್ಮೀಕಾಂತ ಗೌರೀಪುರ

೮೪. ದಕ್ಷಿಣ ಕರ್ನಾಟಕದ ಜನಪದ ಕಥೆಗಳ-ಸೂಕ್ಷ್ಮ ಆಶಯಗಳು

ದಕ್ಷಿಣ ಕರ್ನಾಟಕದ ಜನಪದ ಕಥೆಗಳು, ಸಂ. ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ.೬೫೫, ೧೧ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೩೧೨, ಬೆಲೆ ರೂ. ೧೬೦/-

ಜೀ.ಶಂ.ಪರಮಶಿವಯ್ಯನವರು ಸಂಪಾದಿಸಿರುವ 'ದಕ್ಷಿಣ ಕರ್ನಾಟಕದ ಜನಪದ ಕಥೆಗಳು' ಎಂಬ ಸಂಕಲನವು ಜೀಶಂಪರವರ ಕಥಾ ಸಂಪುಟಗಳಲ್ಲಿ ಎರಡನೆಯ ಸಂಪುಟವಾಗಿ ಪ್ರಕಟಗೊಂಡಿದೆ. ಇವರ ಸಂಪುಟಗಳನ್ನು ಹೊರ ತರುವಲ್ಲಿ ಶ್ರಮಿಸಿದ ಜೀಶಂಪ ಜಾನಪದ ಮತ್ತು ಸೃಜನಶೀಲ ಸಾಹಿತ್ಯ ಮಾಲೆಯ ಪ್ರಧಾನ ಸಂಪಾದಕರಾದ ಡಾ. ಚಕ್ಕೆರೆ ಶಿವಶಂಕರ್‌ರವರು ನಿರ್ವಹಿಸಿರುವ ಕಾರ್ಯ ಶ್ಲಾಘನೀಯವಾದುದು.

ಬೆಂಗಳೂರಿನ ಸಾಗರ್ ಪ್ರಕಾಶನ ಹೊರತಂದಿರುವ 'ದಕ್ಷಿಣ ಕರ್ನಾಟಕದ ಜನಪದ ಕಥೆಗಳು' ಒಟ್ಟು ೩೧೨ ಪುಟಗಳನ್ನು ಹೊಂದಿದೆ. ಮೊದಲ ಮುದ್ರಣ ೧೯೭೭ರಲ್ಲಿ ಮತ್ತು ೨೦೧೨ರಲ್ಲಿ ಎರಡನೆಯ ಬಾರಿಗೆ ಮುದ್ರಣಗೊಂಡಿದೆ.

ಡಾ. ಚಕ್ಕೆರೆ ಶಿವಶಂಕರ್‌ರವರು ಪ್ರಧಾನ ಸಂಪಾದಕರ ಮಾತಿನಲ್ಲಿ 'ಮೌನದೊಳಗಿನ ಮಹತ್ತು' ಎಂಬ ಅರ್ಥಪೂರ್ಣ ತಲೆಬರಹದಡಿಯಲ್ಲಿ ಜೀಶಂಪರವರ ಬದುಕು ಬರಹವನ್ನು ಕುರಿತು ವಿಚಾರವನ್ನು ವಿಸ್ತಾರವಾಗಿ ದಾಖಲಿಸುತ್ತಾರೆ.

ಬ್ರಿಟೀಷರು ಕ್ರೈಸ್ತ ಧರ್ಮ ಪ್ರಚಾರಕ್ಕೆ ತೊಡಗಿದವರು. ಜನರ ಬದುಕನ್ನು ಅರಿಯಲು ತೊಡಗಿ, ಜನಭಾಷೆಯನ್ನು ಕಲಿತು ಜಾನಪದ ಸಂಗ್ರಹಕ್ಕೆ ಮುಂದಾದರು ಎಂಬುದನ್ನು ಹೇಳುತ್ತಲೇ ಜಾನಪದ ಪ್ರಜ್ಞೆಯನ್ನು ಕರ್ನಾಟಕದ ಎಲ್ಲೆಡೆಯಲ್ಲೂ ಜೀಶಂಪರವರು ಪಸರಿಸುವಂತೆ ಮಾಡಲು ಕಾರ್ಯಪ್ರವೃತ್ತರಾದುದನ್ನು ದಾಖಲಿಸುತ್ತಾರೆ. ಜೀಶಂಪರವರ ಬಾಲ್ಯ ಜೀವನ, ವಿದ್ಯಾಭ್ಯಾಸದ ಸಂದರ್ಭದಲ್ಲಿ ಎದುರಿಸಿದ ಸಂಕಷ್ಟಗಳು, ಜೀವನ ಅವಲಂಬನೆಗೆ ಬರಹವನ್ನು ನಂಬಿ ಬದುಕು ಸಾಗಿಸಿದ ವಿಚಾರಗಳು, ಜಾನಪದ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡ ಮೇಲೆ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಸಾಗಿದ್ದು, ಜಾನಪದ ಸಾಹಿತ್ಯದಲ್ಲಿ ಸಂಶೋಧನೆ, ಸಂಪಾದನೆ ಹೀಗೆ ಹಲವಾರು

ವಿಷಯಗಳಲ್ಲಿ ಗಂಭೀರ ಚಿಂತನೆಗಳನ್ನು ಮಾಡಿ ಅಧ್ಯಯನ ಕೈಗೊಂಡರು. ಕರ್ನಾಟಕ ಸರ್ಕಾರ, ಜೀಶಂಪರವರನ್ನು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ ಮೇಲೆ(೧೯೯೧ ಅಕ್ಟೋಬರ್ ೩೧) ಹಲವಾರು ಮಹತ್ವದ ಕಾರ್ಯಗಳನ್ನು ಜೀಶಂಪ ನಿರ್ವಹಿಸಿದರು. ಜಾನಪದ ಕಲಾವಿದರ ಉಳಿವಿಗಾಗಿ ಹಲವಾರು ಕಾರ್ಯ ವೈಖರಿಗಳ ಬಗ್ಗೆ ವಿವರ, ತರಬೇತಿ, ಕಮ್ಮಟ, ಕಾರ್ಯಾಗಾರ, ಉತ್ಸವ, ಕಲಾಪ್ರದರ್ಶನ, ವಿಚಾರ ಸಂಕಿರಣಗಳು, ಪುಸ್ತಕ ಪ್ರಕಟಣೆ, ಅನೇಕ ವಿಚಾರಗಳತ್ತ ಗಮನಹರಿಸಿ ಕಾರ್ಯಗತಗೊಳಿಸಿದರು. ನಿರಂತರ ಕೆಲಸದ ಒತ್ತಡಗಳಿಂದ ಅನಾರೋಗ್ಯಕ್ಕೆ ತುತ್ತಾದ ಜೀಶಂಪರವರ ಎಲ್ಲಾ ವಿಚಾರಗಳನ್ನು ಸುಮಾರು ಇಪ್ಪತ್ತೂರು ಪುಟಗಳಲ್ಲಿ ಬದುಕು ಬರಹವನ್ನು ಕಟ್ಟಿಕೊಡುವ ಕೆಲಸವನ್ನು ಡಾ.ಚಕ್ಕೆರೆ ಶಿವಶಂಕರ್‌ರವರು ವಿವರಣಾತ್ಮಕವಾಗಿ ನೀಡಿದ್ದಾರೆ.

ಸ್ವಲ್ಪ ದೀರ್ಘವೆನಿಸಿದರೂ ಜೀಶಂಪರವರ ಬಗ್ಗೆ ನೀಡಿದ ವಿವರವು ಜಾನಪದ ಕ್ಷೇತ್ರಕಾರ್ಯ ಮಾಡಲು, ಕ್ಷೇತ್ರಜ್ಞಾನದ ವಿಸ್ತಾರತೆ ಎಷ್ಟಿರಬೇಕಾಗುತ್ತದೆಂಬುದನ್ನು ತಿಳಿಸುತ್ತದೆ. ಇಂದಿನ ಜಾನಪದ ಕ್ಷೇತ್ರಜ್ಞನಿಗೆ ಹೆಚ್ಚಿನ ತಿಳುವಳಿಕೆಯನ್ನು ಪಡೆಯಲು ಸಹಾಯಕವಾಗಿದೆ.

ಕೃತಜ್ಞತಾ ಬರಹದಲ್ಲಿಯೂ ಸಹ ಚಕ್ಕೆರೆಯವರು ಜೀಶಂಪರವರ ಜಾನಪದ ಮತ್ತು ಸೃಜನಶೀಲ ಸಾಹಿತ್ಯ ಮಾಲೆಯಲ್ಲಿ ತರಲಾಗಿರುವ ಸಂಪುಟಗಳಲ್ಲಿ ಯಾವ ಯಾವ ಸಂಪುಟಗಳ ಅಡಿಯಲ್ಲಿ ಕೃತಿಗಳನ್ನು ತರಲಾಗಿದೆ ಎಂಬ ವಿವರ ನೀಡುತ್ತಾರೆ. ಆ ಪ್ರಧಾನ ಸಂಪುಟಗಳನ್ನು ೫ ಭಾಗಗಳಾಗಿ ಮಾಡುತ್ತಾರೆ. ಅವುಗಳೆಂದರೆ ಸಂಶೋಧನಾ ಸಂಪುಟ, ಕಾವ್ಯಸಂಪುಟ, ಜಾನಪದ ಬರಹ ಸಂಪುಟ, ಕಥಾ ಸಂಪುಟ, ಸೃಜನಶೀಲ ಸಾಹಿತ್ಯ ಸಂಪುಟ ಎಂದು ಆಯಾ ಸಂಪುಟಗಳ ಅಡಿಯಲ್ಲಿ ಪ್ರಕಟವಾಗಿರುವ ಕೃತಿಗಳನ್ನು ಹೆಸರಿಸಿದ್ದಾರೆ.

'ದಕ್ಷಿಣ ಕರ್ನಾಟಕ ಜಾನಪದ ಕಥೆಗಳು' ಕೃತಿಯು ಕಥಾ ಸಂಪುಟದ ಎರಡನೆಯ ಸಂಪುಟದಲ್ಲಿ ಕಾಣುತ್ತೇವೆ. ಈ ಕೃತಿಯಲ್ಲಿ ಬರುವ ಕಥೆಗಳನ್ನು ಎರಡು ವಿಭಾಗ ಮಾಡಲಾಗಿದೆ. ಮೊದಲನೆಯದು ಬಯಲುಸೀಮೆಯ ಕಥೆಗಳು, ಎರಡನೆಯದು ಮಲೆನಾಡಿನ ಜಾನಪದ ಕಥೆಗಳು. ಬಯಲುಸೀಮೆಯ ಕಥೆಗಳಲ್ಲಿ ಕ್ರಮವಾಗಿ ದೊರೆಗಿಣಿ, ಹುಲಿ, ಅಗಸಕತ್ತೆ, ದಾಸಯ್ಯ, ಗಂಡ ಹೆಂಡತಿ, ಆಲೂರು ಕಳ್ಳ ಬೇಲೂರುಕಳ್ಳ, ಅತ್ತೆ ಸೊಸೆ, ಕತ್ಯಣ್ಣ ಕಿರ್ಬಣ್ಣ, ದಡ್ಡಮಗ, ಉಪ್ಪಾರ-ರಾಕ್ಷಸಿ, ಪದಕದ ಕುಮಾರ, ಪಣ ಕುಂಟನ ಕಥೆ, ಗೋವ್‌ರಾಜ-ಹುಲಿಬಾರ ದಡ್ಡಮಗ, ಋಣತೀರಿಸಿದ ಮಗ, ಕಾಳಮ್ಮನ ವರದಲ್ಲಿ ಹುಟ್ಟಿದ ಮಕ್ಕಳು, ಕೊಳಕಿಯ ಕಥೆ, ಜಾಣಹುಡಗಿಯ ಕಥೆ, ಜಯ ವಿಜಯ, ಚಿನ್ನದಗಿಂಡಿ, ಬೆಳ್ಳಿಗಿಂಡಿ, ಅಲ್ಲಿ ಹಾಗೆ ಇಲ್ಲಿ ಹೀಗೆ, ರತ್ನಾಜಿ ಟಿಪ್ಪಿಕಾಟ, ಪೂಜಾರಿ ಪುಟ್ಟಕ್ಕ, ಶೃಂಗಾರವನ, ಸನ್ಯಾಸಿಕಥೆ, ವಧುವಿನ ತೀರ್ಪು, ಕುದುರೆ ರಾಜನ ಕಥೆ ಹೀಗೆ ಒಟ್ಟು ೨೮ ಕಥೆಗಳು ಬರುತ್ತವೆ.

ಎರಡನೆಯದರಲ್ಲಿ 'ಮಲೆನಾಡಿನ ಜನಪದ ಕಥೆಗಳು' ಎಂಬ ವಿಭಾಗವಿದ್ದು ಅದರಲ್ಲಿ ಉಪಾಯಗಾರ್ತಿ ಸೊಸೆ, ಚಿಕ್ಕನಾಗೇಂದ್ರ, ದಡ್ಡಮಗ, ವಜ್ರಕಿರೀಟ ಕಥೆ, ಹಣ ಇದ್ರೆ ಏನು ಮಾಡಬ್ಹೋದು, ನೊಣ ಮುತ್ತನಕಥೆ, ಬಸವೇಶ್ವರ ಸಿದ್ದೇಶ್ವರ, ಸೇಡಿಗೆ ಸೇಡು, ಕಿವಿ ಇಲ್ಲದ ಹೆಣ್ಣಿಗೆ ಕೈ ಇಲ್ಲದ ಗಂಡು, ನಾಲ್ವರು ಕಳ್ಳರು ಯಾರು ಹೆಚ್ಚು?, ಚಿನ್ನದ ಮಂಡೆಕೂಸು, ಮದುವೆಯ ಪಣ, ಕೋಮನ ಮರಿ, ಮಾತ್ನಾಡುವ ಅಡಿಕೆ ನೆಗಾಡುವ ಎಲೆ, ಶಾಪದಫಲ, ದನ ಕಾಯುವ ಸಣ್ಣಣ್ಣ ಪುಗಸಾಟೆ ಬಸಣ್ಣ, ಜಾಣಪೆದ್ದ, ಮಿನುಕು ಶೇಖರರಾಯ, ಮುತ್ತಿನಗೊಂಚಲು, ಕೋಳಿರತ್ನ, ಬೆಳ್ಳಿಬುಡ, ಅಡಕರಾಜನ ಮಗಳು, ಅಮರಜ್ಯೋತಿ, ಸೋಲಿಸಿದವರಿಗೆ ಸಾವಿರ, ಕಳ್ಳಿಂಗೇ ಗೌಡ ಎಂಬ ೨೩ ಕಥೆಗಳು ಬರುತ್ತವೆ. ಎರಡೂ ಭಾಗದಲ್ಲಿ ಒಟ್ಟು ೫೧ ಕಥೆಗಳನ್ನು ಸಂಪಾದನೆ ಮಾಡಲಾಗಿದೆ.

ಈ ಎರಡೂ ಭಾಗದ ಕಥೆಗಳಲ್ಲಿ ಮುಖ್ಯವಾಗಿ ಕಾಣುವ ಆಶಯಗಳು ಅತಿಮಾನುಷ ಕಥೆಗಳು, ಮಾಂತ್ರಿಕಕಥೆ, ರಮ್ಯಕಥೆ, ವಾಸ್ತವಿಕಕಥೆ, ಬುದ್ಧಿವಂತಿಕೆಯುಳ್ಳ ಕಥೆಗಳು, ವಿನೋದ, ಪ್ರಾಣಿ, ಸೂತ್ರ ಹೀಗೆ ಬೇರೆ ಬೇರೆ ವಸ್ತು ವೈವಿಧ್ಯತೆಗಳನ್ನು ಒಳಗೊಂಡ ಕಥೆಗಳಿವೆ. ಜನಪದ ಭಾಷೆಯಲ್ಲಿ ಸರಳವಾಗಿ ಗೊಂದಲವಿಲ್ಲದೆ ಸಾಗುತ್ತೆ. ಬೇರೆ ಬೇರೆ ಆಶಯಗಳನ್ನು ಒಳಗೊಂಡ ಸ್ವತಂತ್ರ ಕತೆಗಳಂತೆಯೂ ಕಾಣುವ ಕಥೆಗಳನ್ನು ಇಲ್ಲಿ ಕಾಣಬಹುದಾಗಿದೆ.

ಕಿರಿಯ ಮಗನೊಬ್ಬನ ಸಾಹಸ ಹೇಳುವ ಕಥೆಗಳೆಂದರೆ ವಜ್ರ ಕಿರೀಟ, ಹಸುವಿನ ಕರು, ಹುಲಿ ಮರಿಗಳ ಕಥೆ, ಬಸವೇಶ್ವರ ಸಿದ್ದೇಶ್ವರ ಕಥೆಗಳು ಮುಖ್ಯವಾಗಿವೆ. ಪ್ರಾದೇಶಿಕ ಹಿನ್ನೆಲೆಯಲ್ಲಿ ವೈವಿಧ್ಯ ಸಾಧಿಸಿದ ಕತೆ ಯಾರು ಹೆಚ್ಚು?, ಭಿನ್ನವಾದ ಆಶಯ ಹೊಂದಿದ ದೊಂಬರ ಹುಡುಗ, ಕಳ್ಳನಾದರೂ ಪ್ರಾಮಾಣಿಕತೆ ಮರೆವ ಕಳ್ಳಿಂಗೇಗೌಡ ಕಥೆಗಳನ್ನು ಹೆಸರಿಸಬಹುದು.

ಹೀಗೆ ವಸ್ತು ವೈವಿಧ್ಯತೆ, ಭಿನ್ನ ಆಶಯ ಇರುವ ಕತೆಗಳು ಹೆಚ್ಚು ಓದಿಸಿಕೊಂಡು ಹೋಗುತ್ತವೆ. ಜೀಶಂಪರವರು ಈ ಕೃತಿಗೆ ಬರೆದಿರುವ ಪ್ರಸ್ತಾವನೆಯು ತುಂಬಾ ವಿಸ್ತಾರವಾದ ಮಾಹಿತಿಯನ್ನು ನೀಡುತ್ತದೆ. ಜನಪದ ಕಥೆಗಳ ಬೆಳವಣಿಗೆ, ಸಂಗ್ರಹ ಕಾರ್ಯ ಆರಂಭ ಕುರಿತ ವಿಚಾರ, ವೈವಿಧ್ಯಮಯವಾದ ಜನಪದ ಕೃತಿಗಳ ಪ್ರಕಟವಾದ ಬಗೆ, ದಕ್ಷಿಣ ಕರ್ನಾಟಕ ಜಾನಪದ ಕಥೆಗಳಲ್ಲಿ ಬರುವ ವಸ್ತು, ಆಶಯಗಳು ಕಥೆಯ ಓದಿಗೆ ಕುತೂಹಲ ಮೂಡಿಸುತ್ತವೆ.

ಈ ಕೃತಿಯಲ್ಲಿ 'ಅ'ಕರಾದಿಯಾಗಿ 'ಹ'ವರೆಗೆ ಶಬ್ದಕೋಶವು ಅಚ್ಚುಕಟ್ಟಾಗಿದೆ. ವಕ್ತೃ ವಿವರದಲ್ಲಿ ಸಂಪಾದಕರು ಹೆಸರು, ವಿಳಾಸ ನೀಡಿರುವುದು ಸೂಕ್ತವೆನಿಸಿದೆ.

ಜಾನಪದದ ಸೊಗಡನ್ನು ಬಿಂಬಿಸುವ ಮುಖಪುಟ ವಿನ್ಯಾಸ ಹೆಚ್ಚು ಆಕರ್ಷಕವಾಗಿದೆ. ಪ್ರೊ. ಹೆಚ್.ಜೆ. ಲಕ್ಕಪ್ಪಗೌಡ, ದೇಜಗೌ, ಡಾ. ಚಕ್ಕೆರೆ ಶಿವಶಂಕರ್‌ರವರ ಹಿಂಬದಿ

ಪುಟ ಬರಹವು ಜೀಶಂಪರವರ ವ್ಯಕ್ತಿತ್ವ, ಕಾರ್ಯಕ್ಷೇತ್ರದ ವಿಸ್ತಾರತೆಯನ್ನು ಸಂಕ್ಷಿಪ್ತವಾಗಿಸಿ ನೀಡುತ್ತದೆ.

ಆರ್. ಶಾಂತಾ ಕಂಪಾರಹಳ್ಳಿ

೮೫. ಜಾನಪದ ಖಂಡಕಾವ್ಯಗಳ ವಸ್ತು ವೈವಿಧ್ಯತೆ

ಜಾನಪದ ಖಂಡ ಕಾವ್ಯಗಳು, ಸಂ. ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೧ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ–೨೦೧೨, ಪುಟ–೪೬೪, ಬೆಲೆ ರೂ. ೨೬೦/-

ಜಾನಪದ ಸಾಹಿತ್ಯ ಸಮುದ್ರದಷ್ಟು ಆಳ ಹಾಗೂ ವಿಶಾಲವಾದುದು. ಹಲವು ವಿಧಗಳಲ್ಲಿ ಸಾಹಿತ್ಯ ಸುಧೆಯನ್ನು ತನ್ನೊಳಗೆ ಅಡಗಿಸಿಟ್ಟುಕೊಂಡಿರುವ ಜಾನಪದ ಸಾಹಿತ್ಯ ನಮ್ಮ ನಾಡಿನ ಜನರ ಜೀವನಾಡಿಯೇ ಆಗಿದೆ. ಇಂತಹ ಸಾಹಿತ್ಯವನ್ನು ಸಂಗ್ರಹಿಸುವಲ್ಲಿ, ಅದನ್ನು ಬೆಳಕಿಗೆ ತರುವಲ್ಲಿ ಪಾಶ್ಚಾತ್ಯ ವಿದ್ವಾಂಸರಾದಿಯಾಗಿ ಕನ್ನಡದ ಹಲವು ಜನ ವಿದ್ವಾಂಸರುಗಳು ಕಾರ್ಯೋನ್ಮುಖರಾಗಿ, ಅಪಾರವಾಗಿ ಶ್ರಮಿಸಿ ಆ ಸಾಹಿತ್ಯವನ್ನು ಸಂಗ್ರಹಿಸಿಕೊಟ್ಟಿರುವುದು ಕನ್ನಡಿಗರ ಅದೃಷ್ಟವೆಂದೇ ಹೇಳಬಹುದು. ಅಂತಹ ವ್ಯಕ್ತಿಗಳಲ್ಲಿ 'ಕರ್ನಾಟಕ ಜಾನಪದ ಪಿತಾಮಹಾ'ರೆನಿಸಿಕೊಂಡ ಜೀ.ಶಂ. ಪರಮಶಿವಯ್ಯನವರು ಪ್ರಾತಃಸ್ಮರಣೀಯರು. ಇವರು ತಮ್ಮ ಜೀವನದುದ್ದಕ್ಕೂ ಹಲವು ಬಗೆಯ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ, ಸಂಶೋಧಿಸಿ ಕನ್ನಡಿಗರ ಮುಂದೆ ನೀಡಿದ್ದಾರೆ. ಇದಕ್ಕೆ ಅವರ ಅವಿರತ ಪರಿಶ್ರಮ ಜಾನಪದದ ಮೇಲಿದ್ದ ಅವರ ಪ್ರೀತಿ ಆದರಗಳೇ ಬಹುಮುಖ್ಯ ಕಾರಣ.

'ಜಾನಪದ ವಿಶ್ವವಿದ್ಯಾಲಯ'ವು ಸ್ಥಾಪನೆಗೊಂಡು ಜಾನಪದಕ್ಕೆ ಸಂಬಂಧಿಸಿದಂತೆ ಹಲವು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವಂತಹ ಪ್ರಸ್ತುತ ಸಂದರ್ಭದಲ್ಲಿ ಜೀಶಂಪರವರ 'ಜಾನಪದ ಖಂಡಕಾವ್ಯಗಳು' ಕೃತಿಯು ಮರುಮುದ್ರಣಗೊಳ್ಳುತ್ತಿರುವುದು ಸ್ವಾಗತಾರ್ಹ. ಹಾಗೂ ಆ ಹಿರಿಯ ಚೇತನಕ್ಕೆ ಸಲ್ಲಿಸಿದ ಗೌರವವೂ ಆಗಿದೆ.

'ಜಾನಪದ ಖಂಡಕಾವ್ಯಗಳು' ಎಂಬ ಸಂಕಲನದಲ್ಲಿ 'ದೊಂಬಿದಾಸರ ಲಾವಣಿಗಳು' 'ಹೆಳವರ ಕಾವ್ಯಗಳು' ಮತ್ತು 'ಜಾನಪದ ಖಂಡಕಾವ್ಯಗಳು' ಎಂಬ ಮೂರು ವಿಧದ ಸಾಹಿತ್ಯ ಸಂಗ್ರಹವಾಗಿದೆ.

'ದೊಂಬಿದಾಸರ ಲಾವಣಿಗಳು' ಕೃತಿಯು ೧೯೭೪ರಲ್ಲಿ ಮೊದಲ ಮುದ್ರಣವನ್ನು ಕಂಡಿದ್ದು ೩೮ ವರ್ಷಗಳ ನಂತರ ಅದು ಮರುಮುದ್ರಣಗೊಳ್ಳುತ್ತಿರುವುದು ಕೃತಿಯು ತನ್ನೊಳಗೆ ಇಟ್ಟುಕೊಂಡಿರುವ ಮೌಲಿಕ ಗುಣಗಳಿಗೆ ಹಿಡಿದ ಕನ್ನಡಿಯಾಗಿದೆ. ಈ

ಕೃತಿಗೆ ಜೀಶಂಪರವರು ಬರೆದಿರುವ ಪ್ರಸ್ತಾವನೆಯಲ್ಲಿ 'ದೊಂಬಿದಾಸರ' ಜೀವನಕ್ರಮ ಅವರ ಆಚಾರ ವಿಚಾರಾದಿಯಾಗಿ ಸಂಪೂರ್ಣ ವಿವರಗಳನ್ನು ಕಟ್ಟಿಕೊಟ್ಟಿದ್ದಾರೆ.

೩ ಜನ ವಕ್ತೃಗಳಿಂದ ಸಂಗ್ರಹಿಸಿರುವ ಒಟ್ಟು ೧೬ ಲಾವಣಿಗಳು ಈ ಸಂಗ್ರಹದಲ್ಲಿವೆ. ಇಲ್ಲಿನ ಎಲ್ಲ ಲಾವಣಿಗಳಲ್ಲಿ ಬರುವ ವ್ಯಕ್ತಿಗಳಿಗೆ ಬಹಳ ಕಾಲದವರೆಗೆ ಮಕ್ಕಳಿಲ್ಲದೆ ಇದ್ದು ನಂತರ ಶಿವನ ದಯೆಯಿಂದ ಅವರಿಗೆ ಪುತ್ರ ಸಂತಾನವಾಗುವುದು ಕಂಡು ಬರುತ್ತದೆ.

ಇಲ್ಲಿನ ಲಾವಣಿಗಳಲ್ಲಿ ಪ್ರೇಮ ಸತ್ಯ ಭೋಜರಿಗೆ, ಗೌರಿಯ ಮದುವೆಗೆ, ಅತ್ತೆಸೊಸೆಯ ಜಗಳಕ್ಕೆ, ಬಂಜೆಹೊನ್ನಮ್ಮನಿಗೆ, ಲೋಹಿತಕುಮಾರ ಬಸವಕುಮಾರ, ಮಾರೇಗೌಡ ಹಾಗೂ ಮಾಗಡಿಯ ಕೆಂಪೇಗೌಡನಿಗೆ ಸಂಬಂಧಿಸಿದಂತೆ ಒಂದೊಂದು ಲಾವಣಿಗಳಿದ್ದರೆ, ಗಂಗೆ ಮತ್ತು ಗೌರಿಯರ ಜಗಳಕ್ಕೆ ಸಂಬಂಧಿಸಿದಂತೆ ೪ ಲಾವಣಿಗಳಿವೆ. 'ಬಾಲನಾಗಮ್ಮ'ನಿಗೆ ಸಂಬಂಧಿಸಿದ ಒಂದು ಲಾವಣಿ ಇದೆ. ಹಾಗೆಯೇ ಬಾಣಂತನಕ್ಕಾಗಿ ತಂಗಿಯನ್ನು ತೌರಿಗೆ ಕರೆತರುವ ಅಣ್ಣ–ತಂಗಿಗೆ ಸಂಬಂಧಿಸಿದ ೩ ಲಾವಣಿಗಳು ಈ ಸಂಕಲನದಲ್ಲಿವೆ.

'ಹೆಳವರ ಕಾವ್ಯಗಳು' ಕೃತಿಯು ೧೯೭೪ರಲ್ಲಿ ಮೊದಲ ಮುದ್ರಣ ಕಂಡಿದ್ದು ೩೮ ವರ್ಷಗಳ ನಂತರ ಮರುಮುದ್ರಣಗೊಳ್ಳುತ್ತಿರುವುದು ಕೃತಿಯ ಮೌಲಿಕತೆಗೆ ಹಿಡಿದ ಸಾಕ್ಷಿಯಾಗಿದೆ. ಈ ಕೃತಿಯನ್ನು ಜನಪದ ಕೋಗಿಲೆ ಜನಪದ ಸಾಹಿತ್ಯರತ್ನ 'ಕೆ.ಆರ್. ಲಿಂಗಪ್ಪ' ಅವರಿಗೆ ಅರ್ಪಣೆ ಮಾಡಿದ್ದಾರೆ.

ಈ ಸಂಕಲನದಲ್ಲಿ ಒಟ್ಟು ೭ ಹೆಳವರ ಕಾವ್ಯಗಳಿವೆ. ಇವುಗಳಲ್ಲಿ 'ಹೊನ್ನೊಕ್ಕಲಾಗಲಿ' ಕಾವ್ಯವು ಅತ್ಯಂತ ಚಿಕ್ಕಕಾವ್ಯವಾದರೆ, 'ನಂಜುಂಡಲಿಂಗ' ಕಾವ್ಯವು ಈ ಸಂಕಲನದಲ್ಲಿಯೇ ಅತ್ಯಂತ ದೊಡ್ಡ ಕಾವ್ಯವಾಗಿದೆ.

ಇಲ್ಲಿನ 'ಮಲ್ಲಿರಾಜ'ನ ಕತೆ, 'ಕರಿಬಂಧನ' ಕತೆಯನ್ನು ನೆನಪಿಗೆ ತರುತ್ತದೆ. 'ಹೊನ್ನೊಕ್ಕಲಾಗಲಿ' ಕಾವ್ಯವು ಹೊಗಳುವ ಪದವಾಗಿದ್ದು, ಅತ್ಯಂತ ಚಿಕ್ಕ ಕಾವ್ಯವಾಗಿದೆ. 'ಯಮದೋರು' ಇದರಂತೆಯೆ ಇನ್ನೊಂದು ಬಗೆಯ ಹೊಗಳುವ ಪದವಾಗಿದೆ. 'ಹೆಳವೇಗೌಡ' ಹೆಳವರ ಕುಲಪುರಾಣವನ್ನು ತಿಳಿಸಿದರೆ, 'ಯಮದಾಳು ದೇವಮ್ಮ' ಇನಿಯನೊಡನೆ ಸೇರಿಕೊಂಡು ತಂಗಿ ತನ್ನ ಅಣ್ಣನಿಗೇ ಕಂಟಕಪ್ರಾಯಳಾದ ವಿರಳ ಮಾದರಿಯ ಕಥೆಯಿದೆ. 'ನಂಜುಂಡ ಲಿಂಗ' ಕಾವ್ಯದಲ್ಲಿ ಚಾಮುಂಡಿ, ಮಾದೇವಿ, ಪಾರ್ವತಿ ನಂಜುಂಡರ ಪ್ರೇಮ ಪ್ರಸಂಗ, ಮದುವೆಯ ಚಿತ್ರಣಗಳಿದ್ದರೆ, 'ಭೈರುವ' ಕಾವ್ಯದಲ್ಲಿ ತಿರುಪತಿಯಿಂದ ತೇರನ್ನು ಕದ್ದು ತರಲು 'ಮಾಳವ್ವ' ನೆರವಾದ ಬಗೆಯನ್ನು ಕುರಿತು ತಿಳಿಸುತ್ತದೆ.

'ಜಾನಪದ ಖಂಡಕಾವ್ಯಗಳು' ಕೃತಿಯು ೧೯೬೮ರಲ್ಲಿ ಮೊದಲ ಮುದ್ರಣವನ್ನು ಕಂಡಿದ್ದು, ಈ ಕೃತಿಯನ್ನು ತುಮಕೂರು ಹಾಗೂ ಹಾಸನ ಜಿಲ್ಲೆಯ ಜನಪದ

ಸಾಹಿತ್ಯ ಸಂಗ್ರಹಯಾತ್ರೆಯಲ್ಲಿ ಸಹಕರಿಸಿದ ಇವರ ಅಣ್ಣನಾದ 'ಎನ್.ಸತ್ಯನಾರಾಯಣ' ಅವರಿಗೆ ಜೀಶಂಪ ಅರ್ಪಣೆಯನ್ನು ಮಾಡಿದ್ದಾರೆ.

ಇದರಲ್ಲಿ ೭ ಜನ ವಕ್ತೃಗಳು ಹಾಡಿರುವ '೮' ಖಂಡಕಾವ್ಯಗಳು ಸಂಗ್ರಹವಾಗಿವೆ. ಇಲ್ಲಿನ ಖಂಡಕಾವ್ಯಗಳಲ್ಲಿ ಮಕ್ಕಳಿಲ್ಲದ ಬಂಜೆತನವನ್ನು ಅನುಭವಿಸುವ, ನಂತರದಲ್ಲಿ ಶಿವನಿಂದ ಪುತ್ರ ಸಂತಾನವನ್ನು ಪಡೆದುಕೊಳ್ಳುವ ಹಾಗೂ ತನ್ನ ಗಂಡನೊಡನೆ ಚಿತೆಯೇರುವ ಆದರ್ಶ ಸ್ತ್ರೀಯರ ಚಿತ್ರಣ ಹಾಗೂ ಊರಿನ ಒಳಿತಿಗಾಗಿ ಕೆರೆಗೆ ಹಾರವಾಗುವ ಮುಗ್ಧ ನಾರಿಯರ ವಿವರಗಳು ಕಂಡು ಬರುತ್ತವೆ.

'ಉತ್ತರದೇವಿ' ಖಂಡಕಾವ್ಯವು ಅತ್ತೆ ಸೊಸೆಯರಿಗೆ ಉಂಟಾದ ಜಗಳದಿಂದಾಗಿ ಗಂಡನಿಂದ ತೊರೆಯಲ್ಪಟ್ಟವಳಾಗಿ, ತಂದೆ, ತಾಯಿ, ಅಣ್ಣಂದಿರಿಂದ ತಿರಸ್ಕೃತಳಾಗಿ ಕೊನೆಗೆ ಉತ್ತರೆ ಮಳೆಯಾಗಿ ಹೋಗುವ ಚಿತ್ರಣವಿದೆ.

'ಈರೋಬಿ' ಕಾವ್ಯವು ವೀರ 'ಓಬಮ್ಮ'ನ ಕತೆಯಾಗಿದ್ದು, 'ಈರೋಬಿ'ಯ ಗಂಡನಾದ ಶೆಟ್ಟಿ ಶಂಕರರಾಯ ಮಡಿದ ಸುದ್ದಿ ತಿಳಿದು ಆತನ ಜೊತೆಯಲ್ಲಿಯೇ ಕೊಂಡವೇರುವ ಕಥೆ ತಿಳಿಯುತ್ತದೆ.

'ನಾಗವ್ವ' ಕಾವ್ಯದಲ್ಲಿ ಎಳೆಯ ಹರೆಯದ ನಾಗವ್ವ ತನಗೆ ಗೊತ್ತಾಗಿದ್ದ ಗಂಡು ಚಿಂದಯ್ಯನು ಸಾವನ್ನಪ್ಪಿದಾಗ ಮದುವೆಯಾಗದೆ ವಿಧವೆಯಾದ ಈಕೆ ಚಿಂದಯ್ಯನೊಡನೆ ಚಿತೆಯೇರುವ ಚಿತ್ರಣವನ್ನು ಕಾಣಬಹುದು.

'ಹುಳಿಯಾರು ಕೆಂಚಮ್ಮ' ಕಾವ್ಯವು 'ಕೆರೆಗೆ ಹಾರದ' ಭಾಗೀರಥಿಯಂತೆ ಮಾವ ಕಟ್ಟಿಸಿದ ಕೆರೆಗೆ ತನ್ನನ್ನು ಅರ್ಪಿಸಿಕೊಂಡ 'ಕೆಂಚವ್ವ'ನ ಕಥೆಯಾಗಿದೆ. 'ಹೊನ್ನಮ್ಮ' ಕಾವ್ಯವು ಬಂಜೆಯಾದ ಈಕೆ ಎಲ್ಲರಿಂದ ಅವಮಾನಿತಳಾಗಿ ಕೊನೆಗೆ ಶಿವನ ದಯೆಯಿಂದ ಪುತ್ರನನ್ನು ಪಡೆಯುವ ಚಿತ್ರಣವಿದೆ.

'ಸಂಪನ್ನೆ' ಕಾವ್ಯವು ಸಂಪನ್ನೆಯ ಗರ್ಭದಲ್ಲಿ ಜನಿಸಿ ಅತ್ತೆಯ ಮಗಳನ್ನು ಗೆದ್ದು ಬರುವ 'ನಾರೀಂದ್ರ' ನ ಕಥೆಯಾಗಿದೆ.

'ಚಿಕ್ಕೋಳು ಹಿರಿದಿಮ್ಮವ್ವ' ಕಾವ್ಯವು ತನ್ನ ಪತಿಯನ್ನು ಕೊಲೆ ಮಾಡಿದ ಬೇಡರ 'ಬೊಮ್ಮಲಿಂಗ'ನನ್ನು ಕೊಲೆ ಮಾಡಿ ತನ್ನ ಗಂಡನ ಜೊತೆ ಚಿತೆಯೇರುವ ಹಿರಿದಿಮ್ಮವ್ವನ ಚಿತ್ರಣವನ್ನು ತಿಳಿಸುತ್ತದೆ.

ಕೊನೆಯ 'ಕೊಂತ್ಯಮ್ಮ' ಖಂಡಕಾವ್ಯವು ಪಾಂಡುರಾಜನ ಹೆಂಡತಿಯಾದ 'ಕುಂತಿ'ಯ ಮೂಲಕ ಜನಪದರು ತಮ್ಮ ಬದುಕಿನ ನೋವು ನಲಿವುಗಳನ್ನು, ಬಡತನದ ದಾರುಣ ಚಿತ್ರವನ್ನು ತಿಳಿಸುವ ಕತೆಯಾಗಿದೆ.

ಲಕ್ಷ್ಮೀಕಾಂತ ಗೌರೀಪುರ

೮೬. ಫ್ಲೀಟರು ಸಂಗ್ರಹಿಸಿದ ಸಮಗ್ರ ಲಾವಣಿಗಳಲ್ಲಿ ಸ್ವಾತಂತ್ರ್ಯ ಗಾಥೆ

ಫ್ಲೀಟರು ಸಂಗ್ರಹಿಸಿದ್ಧ ಸಮಗ್ರ ಲಾವಣಿಗಳು, ಸಂ. ಕ್ಯಾತನಹಳ್ಳಿ ರಾಮಣ್ಣ, ಸಾಗರ್ ಪ್ರಕಾಶನ, ನಂ. ೯೫, ೧೧ನೇ ಮುಖ್ಯ ರಸ್ತೆ, ೮೧ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೩೭೬, ಬೆಲೆ ರೂ ೧೯೦/-

ಹಾಡಿನ ಮೂಲಕ ಕಥೆಯನ್ನು ಹೇಳುವುದೇ ಲಾವಣಿ. ನಮ್ಮ ನಾಡಿನಲ್ಲಿ ಸಾವಿರಾರು ಲಾವಣಿಗಳು ಇವೆ. ಈ ಲಾವಣಿಗಳು ನಮಗೆ ತಿಳಿಯದ ಹೊಸ ಇತಿಹಾಸವನ್ನು ತಿಳಿಸುತ್ತವೆ. ನಮಗೆ ಅಂತಹ ಲಾವಣಿಗಳನ್ನು ಕೇಳಿ ಅಚ್ಚರಿಯಾಗ ಬಹುದು. ರಾಜಮಹಾರಾಜರು, ರಾಣಿಯರು, ಪುರಾಣಪುರುಷರು, ಐತಿಹಾಸಿಕ ವ್ಯಕ್ತಿಗಳು ಮುಂತಾದವರನ್ನು ಲಾವಣಿಯ ನಾಯಕ ನಾಯಕಿಯರನ್ನಾಗಿ ಮಾಡಿಕೊಂಡು ಜನಪದರು ಹಾಡುಗಳನ್ನು ಕಟ್ಟಿದ್ದಾರೆ. ಇಂತಹ ಲಾವಣಿಗಳು ನಮ್ಮ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ.

ಬ್ರಿಟೀಷರು ಭಾರತಕ್ಕೆ ಬಂದ ಮೇಲೆ ಅನೇಕ ಕಾರ್ಯಗಳನ್ನು ಕೈಗೊಂಡರು. ಅದರಲ್ಲಿ ಜನಪದ ಸಾಹಿತ್ಯ ಸಂಗ್ರಹಣೆ ಸಹ ಮುಖ್ಯವಾಗಿತ್ತು. ಫ್ಲೀಟರು ಕರ್ನಾಟಕದಲ್ಲಿ ಅನೇಕ ಲಾವಣಿಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಒಂದು ಕಡೆ ಇಡಿಯಾಗಿ ಸಂಪಾದಕರಾದ ಕ್ಯಾತನಹಳ್ಳಿ ರಾಮಣ್ಣನವರು 'ಫ್ಲೀಟರು ಸಂಗ್ರಹಿಸಿದ ಸಮಗ್ರ ಲಾವಣಿಗಳು' ಎಂಬ ಹೆಸರಿನಲ್ಲಿ ಪುಸ್ತಕ ಪ್ರಕಟಿಸಿದ್ದಾರೆ. ಇದರಲ್ಲಿನ ಮೊದಲ ೫ ಲಾವಣಿಗಳನ್ನು ಮಾತ್ರ ಪ್ರಕಟಿಸಲಾಗಿತ್ತು. ಆದರೆ ಈಗ ಈ ಕೃತಿಯಲ್ಲಿ ಅನೇಕ ಲಾವಣಿಗಳನ್ನು ಸೇರಿಸಲಾಗಿದೆ.

ರಾಮಣ್ಣನವರು ಈ ಕೃತಿಯಲ್ಲಿ ಮುಖ್ಯವಾಗಿ ೨ ಭಾಗ ಮಾಡಿಕೊಂಡಿದ್ದಾರೆ. ಮೊದಲನೆಯದು ಪುಸ್ತಕ ಒಂದರ ಭಾಗದಲ್ಲಿ ರಾಮಣ್ಣನವರ ದೀರ್ಘವಾದ ಪ್ರಸ್ತಾವನೆಯ ಜೊತೆಗೆ ಫ್ಲೀಟರು ಕನ್ನಡ ಲಾವಣಿಗಳನ್ನು ಸಂಗ್ರಹಿಸಿದ ಸಣ್ಣ ಮುನ್ನುಡಿ ಇದೆ. ಇದರಲ್ಲಿ ಒಟ್ಟು ೫ ಲಾವಣಿಗಳಿವೆ.

'ಸಂಗೊಳ್ಳಿ ರಾಯಣ್ಣನ ದಂಗೆ', ಲಾವಣಿಯು ರಾಯಣ್ಣನ ದಂಗೆಯನ್ನು ವಿವರಿಸುತ್ತದೆ. ಅವನ ಪರಾಕ್ರಮ, ಚತುರತೆ, ಧೈರ್ಯ, ಜನರ ಒಗ್ಗೂಡಿಸುವಿಕೆ, ಬ್ರಿಟೀಷರ ಮೇಲಿನ ಆಕ್ರಮಣ ಮೊದಲಾದವುಗಳು ಕಣ್ಣಿಗೆ ಕಟ್ಟುವಂತಿದೆ. ಮೋಸದಿಂದ ರಾಯಣ್ಣ ಬಂಧಿಯಾದಾಗ ಅವನನ್ನು ಗಲ್ಲಿಗೇರಿಸಲು ಅಧಿಕಾರಿಯೇ ಒಪ್ಪುವುದಿಲ್ಲ. ಇಂಥ ಪರಾಕ್ರಮಿಯನ್ನು ಕಳೆದುಕೊಳ್ಳಲು ಇಷ್ಟವಿರುವುದಿಲ್ಲ. ಕೆಲವರ ಒತ್ತಡಕ್ಕೆ ಮಣಿದು ಅವನನ್ನು ಗಲ್ಲಿಗೇರಿಸುತ್ತಾರೆ. ಇದರಿಂದ ನೊಂದ ಅಧಿಕಾರಿ ಅವನ ಶವ ಸಂಸ್ಕಾರಕ್ಕೆ ಹತ್ತು ರೂಪಾಯಿ ಕೊಡುತ್ತಾನೆ. ಹೀಗೆ ಅವನ ಕಥೆ ದುರಂತವಾಗಿ ಅಂತ್ಯಗೊಳ್ಳುತ್ತದೆ.

ಉಳಿದ ಲಾವಣಿಗಳಾದ ಆದಾಯ ತೆರಿಗೆ ಹಲಗಲಿಯ ಬೇಡರು, ಸಂಗ್ಯನ ಅಪರಾಧ ಮತ್ತು ಸಾವು, ಕಿತ್ತೂರು ಚೆನ್ನಮ್ಮನ ಸೊಸೆ ಲಾವಣಿಗಳು ಇದೇ ರೀತಿಯ ದುರಂತ ಕಥೆಗಳನ್ನು ಹೊಂದಿರುವಂಥವು.

ಹಲಗಲಿಯ ಬೇಡರ ದಂಗೆಯನ್ನು ಕುರಿತ ಲಾವಣಿಯು ಜನಪ್ರಿಯವಾಗಿದೆ. ನಾವು ಕೇವಲ ರಾಜಮಹಾರಾಜರ ಹೋರಾಟ ಮಾಡಿದ ಬಗ್ಗೆ ಇತಿಹಾಸದಲ್ಲಿ ಓದುತ್ತೇವೆ. ಆದರೆ ಒಂದು ಬುಡಕಟ್ಟು ಜನರು ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ಮಾಡಿರುವುದನ್ನು ಮರೆಯುತ್ತೇವೆ. ಈ ದಂಗೆಯಲ್ಲಿ ಪೂಜಾರಿ ಹಣಮ, ಬಾಲ, ಜಡಗ, ರಾಮ, ಭೀಮ, ರಾಮಿ ಇವರು ಬ್ರಿಟೀಷರಿಗೆ ಆಯುಧಗಳನ್ನು ಕೊಡದೆ ಅವರ ವಿರುದ್ಧ ತಿರುಗಿ ಬಿದ್ದು ಯುದ್ಧ ಮಾಡಿ ಇಡೀ ಹಲಗಲಿಯೇ ಸುಟ್ಟು ಕರಕಲಾಗುವಂತೆ ಮಾಡಿಕೊಳ್ಳುತ್ತಾರೆ. ಇಂತಹ ಸ್ವಾಭಿಮಾನಿ ಬೇಡರ ದಂಗೆಯು ನಿಜಕ್ಕೂ ಮೆಚ್ಚುವಂತಹದು. ಇನ್ನು ಎರಡನೆಯ ಭಾಗವನ್ನು ನೋಡುವುದಾದರೆ ಪುಸ್ತಕ ಎರಡು ಎಂದು ವಿಭಾಗಿಸಿದ್ದಾರೆ ಇದರಲ್ಲಿ ಒಟ್ಟು ಏಳು ಭಾಗಗಳಿವೆ.

ಮೊದಲನೆಯ ಭಾಗದಲ್ಲಿ ಒಟ್ಟು ಹನ್ನೆರಡು ಲಾವಣಿಗಳಿವೆ. ಈ ಲಾವಣಿಗಳು ಸಾಹಿತ್ಯಕ ದೃಷ್ಟಿಯಿಂದ ಮುಖ್ಯವಾಗಿವೆ. ಇದರಲ್ಲಿ ಕೊಲ್ಲಾಪುರ ಮಹಾರಾಜನ ಪದ, ಹಲಗಲಿಯ ಪದ, ನರಗುಂದದ ಪದ, ಕಿತ್ತೂರ ಚೆನ್ನಮ್ಮನ ಪದ ಲಾವಣಿಗಳು ಹೆಚ್ಚು ಜನಪ್ರಿಯವಾಗಿವೆ.

ಎರಡನೆಯ ಭಾಗದಲ್ಲಿ ನಾಲ್ಕು ಜೋಗುಳದ ಪದಗಳಿವೆ; ಅವುಗಳೆಂದರೆ ಜೋ ಜೋ ಶಂಭುಲಿಂಗಾ, ತೊಟ್ಟಿಲ ತೂಗುವ ಜೋಗುಳ ಪದಗಳು, ಅಕ್ಕನಾಗಮ್ಮನ ಜೋಗುಳ ಪದ ಹಾಗೂ ಇನ್ನಿತರ ಜೋಗುಳ ಪದಗಳಿವೆ.

ಮೂರನೆಯ ಭಾಗದಲ್ಲಿ ನಾಲ್ಕು ದಂಡಕಗಳಿವೆ. ಕುಂಪಣಿ ಸರಕಾರದ ಪೂರ್ವಣಿ ದಂಡಕ, ಕುಂಪಣಿ ಸರಕಾರದ ದಂಡಕ, ಇಂಗ್ರಜಿ ರಾಜ್ಯದ ಮೇಲೆ ದಂಡಕ, ನರಗುಂದ ವೆಂಕಟೇಶ ದಂಡಕ ಎಂಬ ದಂಡಕಗಳಿವೆ. ಇವು ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ನಾಲ್ಕನೆಯ ಭಾಗದಲ್ಲಿ ಎಂಟು ಇಂಗ್ಲೀಷ್ ಬರಹಗಳಿವೆ. ಬಸವಣ್ಣನ ಹೆಂಡತಿ ಅಕ್ಕನಾಗಮ್ಮನ ಬಗ್ಗೆ ಬರಹ ಇದೆ. ನರಗುಂದ, ಬಾದಾಮಿಗಳ ಬಗ್ಗೆ ಬರಹಗಳಿವೆ.

ಐದನೆಯ ಭಾಗದಲ್ಲಿ ಅನುಬಂಧಗಳು ಎಂದು ವಿಭಾಗಿಸಿದ್ದಾರೆ. ಇದರಲ್ಲಿ ಹದಿನಾಲ್ಕು ಲಾವಣಿಗಳಿವೆ. ಬಾಜಿರಾಯನ ಮೇಲೆ ರಚಿತವಾದ ಲಾವಣಿಯು ಮಹಾರಾಷ್ಟ್ರದ ಮೇಲೆ ಬೆಳಕು ಚೆಲ್ಲುತ್ತದೆ. ಅಷ್ಟಲ್ಲದೆ ಸುತ್ತಮುತ್ತಲಿನ ಎಲ್ಲ ರಾಜರು ಸೇರಿ ಅವನ ಅವನತಿಗೆ ಕಾರಣರಾಗುವುದನ್ನು ವಿವರಿಸಿದೆ. ಅದೇ ರೀತಿ ಕಿತ್ತೂರಿನ ಚೆನ್ನಮ್ಮನ ಸೊಸೆಯ ಮೇಲೆ ರಚಿತವಾಗಿರುವ ಲಾವಣಿಯು ಅವಳ ಅಸಹಾಯಕತೆ ಯನ್ನು ವಿವರಿಸುತ್ತದೆ. ಹೀಗೆ ಅನೇಕ ಲಾವಣಿಗಳು ಅನೇಕ ವಿಚಾರಗಳನ್ನು ಬಿಚ್ಚಿಡುತ್ತವೆ.

ಇದರಲ್ಲಿ ಒಂದು ಅಪೂರ್ಣ ಲಾವಣಿ ಸಹ ಇದೆ. ಅದೇ ರೀತಿ ಫ್ಲೀಟರು ತಮ್ಮ ಹಸ್ತಪ್ರತಿಗಳಲ್ಲಿ ಮಾಡಿಕೊಂಡ ಕೆಲವು ಟಿಪ್ಪಣಿಗಳನ್ನು ಸಹ ಕೊಡಲಾಗಿದೆ.

ಆರನೆಯ ಭಾಗದಲ್ಲಿ ಒಂದು ಮರಾಠಿ ಲಾವಣಿಯಿದೆ. ಇದು ಬಾಜಿರಾಯನ ಕಾಲಕ್ಕೆ ಸಂಬಂಧಿಸಿದುದಾಗಿದೆ. ಕೊನೆಯ ಏಳನೆಯ ಭಾಗದಲ್ಲಿ ಒಂದು ಲಾವಣಿಯಿದೆ. ಇದು ಬ್ರಿಟೀಷರ ದೌರ್ಜನ್ಯವನ್ನು ಕುರಿತದ್ದಾಗಿದೆ. ಕೊನೆಯಲ್ಲಿ ಕೆಲವು ಜನಪದ ಶಬ್ದಗಳನ್ನು ಕೊಡಲಾಗಿದೆ. ಒಟ್ಟಾರೆ, ಈ ಸಂಗ್ರಹಣಾ ಕಾರ್ಯ ಮೆಚ್ಚುವಂತಹದ್ದಾಗಿದೆ. ಇಂತಹ ನೂರಾರು ಲಾವಣಿಗಳು ಜನಪದರಲ್ಲಿ ಇವೆ. ಅವುಗಳ ಸಂಗ್ರಹಕಾರ್ಯ ನಡೆಯಬೇಕಾಗಿದೆ.

ದುಗ್ಗೇನಹಳ್ಳಿ ಸಿದ್ದೇಶ

೮೭. ಸಾಂಸ್ಕೃತಿಕ ವೀರ ಮಂಟೇಸ್ವಾಮಿ ಮತ್ತು ಇತರ ಕಥನಕಾವ್ಯಗಳ ವೈಶಿಷ್ಟ್ಯಗಳು

ಶ್ರೀಮಂಟೇಸ್ವಾಮಿ ಮತ್ತು ಇತರ ಕಥನ ಕಾವ್ಯಗಳು, ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬/೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೬೮, ಬೆಲೆ ರೂ. ೩೧೦/-

ಜಗತ್ತಿನ ಜನಪದ ಸಾಹಿತ್ಯಕ್ಕೆ ಕನ್ನಡ ಜನಪದ ಸಾಹಿತ್ಯದ ಕೊಡುಗೆ ಅಪಾರ. ಫಿನ್‌ಲ್ಯಾಂಡಿನ 'ಕಲೆವಾಲ' ಜನಪದ ಕಾವ್ಯವನ್ನು ಬಿಟ್ಟರೆ ನಂತರದ ದೊಡ್ಡ ಜನಪದ ಕಾವ್ಯವೆಂದರೆ ಮಲೆಮಾದೇಶ್ವರನ ಕಾವ್ಯ. ಕರ್ನಾಟಕದಲ್ಲಿ ಮಂಟೇಸ್ವಾಮಿ ಕಾವ್ಯ, ಜುಂಜಪ್ಪ ಕಾವ್ಯ ಹೀಗೆ ಅನೇಕ ಕಾವ್ಯಗಳಿವೆ. ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ ಇವರು ಸಾಂಸ್ಕೃತಿಕ ನಾಯಕರಾಗಿದ್ದಾರೆ. ಸಾಮಾನ್ಯ ಮನುಷ್ಯರಿಂದ ಮೇಲ್ಮಟ್ಟಕ್ಕೆ ಏರಿ ದೈವತ್ವ ಪಡೆದಿದ್ದಾರೆ. ಇವರು ಜನಪದರ ಸಾಂಸ್ಕೃತಿಕ ನಾಯಕರು. ಇಂತಹ ವ್ಯಕ್ತಿಗಳನ್ನು ಕುರಿತು ಹಾಡುಗಳನ್ನು ಕಟ್ಟಿ ಹಾಡಿದ್ದಾರೆ. ಮಂಟೇಸ್ವಾಮಿ ಕಾವ್ಯವನ್ನು ಹಾಡುವವರನ್ನು ನೀಲಗಾರರು ಎಂದು ಕರೆಯಲಾಗುತ್ತದೆ. ಈ ನೀಲಗಾರರು ಮಂಟೇಸ್ವಾಮಿ ಕಾವ್ಯವನ್ನು ಈಗಲೂ ಹಾಡುವ ಮೂಲಕ ಇನ್ನೂ ಕಥನವನ್ನು ಜೀವಂತವಾಗಿರಿಸಿದ್ದಾರೆ.

ಜೀಶಂಪರವರು ನಮಗೆ ತಿಳಿದಿರುವಂತೆ ದೊಡ್ಡ ಜನಪದ ವಿದ್ವಾಂಸರು. ಅವರು ಸಂಪಾದಿಸಿರುವ 'ಶ್ರೀ ಮಂಟೇಸ್ವಾಮಿ ಮತ್ತು ಇತರ ಕಥನಕಾವ್ಯಗಳು' ಎಂಬ ಪುಸ್ತಕವು ಅನೇಕ ಕಥನಕಾವ್ಯಗಳನ್ನು ಒಳಗೊಂಡಿರುವ ಉಪಯುಕ್ತ ಕೃತಿಯಾಗಿದೆ. ಈ ಕಥನ ಕಾವ್ಯಗಳಿಗೆ ದೀರ್ಘವಾದ ಪ್ರಸ್ತಾವನೆಯನ್ನು ಸಹ ಬರೆದಿದ್ದಾರೆ. ಇಲ್ಲಿನ ಪ್ರತಿ ಕೃತಿಯಲ್ಲಿ

ಐದು ಭಾಗಗಳಿವೆ. ೧. ಮಂಟೇಸ್ವಾಮಿ ಕಾವ್ಯ, ೨. ಕರುಣಿ ಕಣ್ಣ ತೆರೆಯೆ, ೩. ಭಾಗವಂತಿಕೆ ಮೇಳ, ೪. ಮುಡುಕುತೊರೆ ಮಲ್ಲಿಕಾರ್ಜುನ, ೫. ಅರ್ಥಕೋಶ ಮತ್ತು ಟಿಪ್ಪಣಿಗಳು.

ಪ್ರಸ್ತಾವನೆಯಲ್ಲಿ ಮಂಟೇಸ್ವಾಮಿಯ ಮೂಲದ ಬಗ್ಗೆ ಅನೇಕ ಅಂಶಗಳಿವೆ. ಅದೇ ರೀತಿ ಅನೇಕ ಊರುಗಳ ಪ್ರಸ್ತಾಪ ಮಾಡಿ ಅಲ್ಲೆಲ್ಲ ಮಂಟೇಸ್ವಾಮಿ ಇದ್ದರೆಂದು ಹೇಳುತ್ತಾರೆ. ನೀಲಗಾರರು ಕಾವ್ಯದಲ್ಲಿ ಮೂರ ಪಲ್ಲವಿಯಾಗಿ,

ಸಿದ್ದಯ್ಯ ಶಿವನೇ ಬನ್ನಿ
ಪವಾಡ ಗೆದ್ದಯ್ಯ ನೀವೇ ಬನ್ನಿ
ಸಿದ್ದ ಸಿದ್ದರಿಗೆಲ್ಲ ಅತಿ ಮುದ್ದು ಘನನೀಲಿ
ಸಿದ್ದಯ್ಯ ಸ್ವಾಮಿ ಬನ್ನಿ - ಎಂಬ ಪದ್ಯವನ್ನು ಬಳಸಿದ್ದಾರೆ.

ಮಂಟೇಸ್ವಾಮಿಯ ಪ್ರಮುಖ ಇಬ್ಬರು ಶಿಷ್ಯರೆಂದರೆ ಸಿದ್ದಪ್ಪಾಜಿ, ರಾಚಪ್ಪಾಜಿ ಇವರ ಬಗ್ಗೆ ಸಹ ಕಾವ್ಯದಲ್ಲಿ ಪ್ರಸ್ತಾಪಗಳಿವೆ. ಮಂಟೇಸ್ವಾಮಿಯನ್ನು ಮಂಟೇದಲಿಂಗಯ್ಯ, ಮಂಟೆದಅಲ್ಲಮ, ಫ್ರಭುಸ್ವಾಮಿ, ಪ್ರಭುದೇವರು, ಧರೆಗೆದೊಡ್ಡವರು, ಪರಂಜ್ಯೋತಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮತ್ತೊಂದು ವಿಶೇಷವೆಂದರೆ ಮಹಮದೀಯರು ಸಹ ಮಂಟೆಸ್ವಾಮಿಗೆ ನಡೆದುಕೊಳ್ಳುತ್ತಾರೆ.

ಎರಡನೆಯದು 'ಕರುಣಿ ಕಣ್ಣ ತೆರೆಯೆ' ಎಂಬ ಭಾಗ. ಚೌಡಿಕೆಯವರು ಎಲ್ಲಮ್ಮ ದೇವಿಯನ್ನು ಕುರಿತು ಹಾಡುವ ಕಾವ್ಯ ಕರುಣಿ ಕಣ್ಣತೆರೆಯೆ. ಈ ಕಾವ್ಯ ಹಾಡು ಮತ್ತು ಮಾತಿನ ಮೂಲಕ ಸಾಗುವುದನ್ನು ನೋಡಬಹುದು. ಅದರಲ್ಲಿ ಮತ್ತೆ ದಂಡಿನಮಾರಿ, ದೇವರಾಜ ಅನುಬಂಧ ಎಲ್ಲಮ್ಮನ ಕತೆ-೨ ಎಂಬ ಕಥನ ಕಾವ್ಯಗಳಿರುವುದನ್ನು ನೋಡಬಹುದು.

ಮೂರನೆಯ ಭಾಗ ಭಾಗವಂತಿಕೆ ಮೇಳ. ಇದರಲ್ಲಿ ದಳ ಒಂದು, ದಳ ಎರಡು, ದಳ ಮೂರು ಎಂಬ ಮೂರು ಭಾಗಗಳಿದ್ದು, ಅದರಲ್ಲಿ ಒಂದೊಂದು ಭಾಗದಲ್ಲಿ ಐದೈದು ಕಥನ ಗೀತೆಗಳಿವೆ. ಪುರಾಣ ಪುರುಷರಾದ ರಾಮ, ಕೃಷ್ಣ, ಪ್ರಹ್ಲಾದರ ಬಗ್ಗೆ ಹಾಡುಗಳಿವೆ. ಶಿಷ್ಟ ಕಾವ್ಯಕ್ಕಿಂತ ಈ ಜನಪದ ಕಾವ್ಯಗಳು ಬೇರೆ ರೀತಿ ವಸ್ತುವನ್ನು ವರ್ಣಿಸುತ್ತವೆ. ಭಾಗವಂತಿಕೆ ಮೇಳದವರು ಇವುಗಳನ್ನು ಸೊಗಸಾಗಿ ಹಾಡುತ್ತಾರೆ.

ನಾಲ್ಕನೆಯ ಭಾಗ 'ಮುಡುಕುತೊರೆ ಮಲ್ಲಿಕಾರ್ಜುನ'. ಇದೊಂದು ಗೀತರೂಪಕ. ಇದರ ಕಥಾವಸ್ತು ಮುಡುಕುತೊರೆ ಮಲ್ಲಿಕಾರ್ಜುನ ಕ್ಷೇತ್ರದ ಬಗ್ಗೆ ಹೇಳುವಂತಹದು. ಇದು ಶೈವ ಕಥೆ. ಈ ನಾಟಕದಲ್ಲಿ ಮಲ್ಲಿಕಾರ್ಜುನ, ಪಾರ್ವತಿ, ಗಂಗೆ ಮೇಳದವರು, ಗಿಳಿಗಳು ಎಲ್ಲರೂ ಬರುತ್ತಾರೆ; ಇದೊಂದು ಸೊಗಸಾದ ಗೀತರೂಪಕ.

ಕೊನೆಯ ಭಾಗದಲ್ಲಿ ಈ ಕೃತಿಗೆ ಸಂಬಂಧಪಟ್ಟ ಅರ್ಥಕೋಶ ಮತ್ತು ಟಿಪ್ಪಣಿಗಳಿವೆ. ನಮಗೆ ಗೊಂದಲವಾದ ಪದಗಳಿವೆ. ಕೊನೆಯ ಭಾಗದಲ್ಲಿ ಅರ್ಥಗಳಿವೆ. ಒಂದು

ನೀಲಮ್ಮನನ್ನು ಶಿಷ್ಯರಾಗಿ ಪಡೆದ ಮಂಟೇಸ್ವಾಮಿ ಮುಂದೆ ಸಿದ್ದಪ್ಪಾಜಿ, ರಾಚಪ್ಪಾಜಿಯನ್ನು ಶಿಶು ಮಕ್ಕಳಾಗಿ ಪಡೆದು ಫಾಂಚಾಳರಿಂದ ಭೂಮಿಯನ್ನು ರಕ್ಷಿಸುವ ಕಥೆಗಳಲ್ಲಿ ವರ್ಣಸಂಕರವನ್ನು ಕಾಣಬಹುದು.

ದೇವರಗುಡ್ಡರ ಕಥೆಗಳು ಒಂದು ಧರ್ಮಕ್ಕೆ, ಒಂದು ದೈವಕ್ಕೆ ಮೀಸಲಾಗಿಲ್ಲ. ಅವರ ಪರಮ ದೈವ ಮಾದಯ್ಯನ ಮಹಿಮೆಗಳ ಜೊತೆ ಕೆಲವು ಲೌಕಿಕ ಕಥೆಗಳನ್ನು ತಮ್ಮ ಆತ್ಮಸಂತೋಷಕ್ಕಾಗಿ ಶಿವಕಥೆಗಳ ಜೊತೆಗೆ ರಾಮಾಯಣದ ಹಲವು ಪ್ರಸಂಗಗಳನ್ನು ಹಾಡುವರು. ಅಂತಹವುಗಳಲ್ಲಿ ತೋಳಲಿ ಒರೆಗೂ ಮಗನಿಲ್ಲ, ಹ್ಯಾಗೆ ಕೊಂದಪ್ಪ ನನ್ನ ಮಡದೀಯ, ಪಿರಿಯಾಪಟ್ಟಣದ ಸೂರಿಗೆ ಹೊರಟರು, ಕಥೆಗಳಲ್ಲಿ ಲೌಕಿಕ ಚಾರಿತ್ರಿಕ ಅಂಶಗಳನ್ನು ಕಾಣಬಹುದು. ನೀಲಗಾರರು ಸಹ ಗುಡ್ಡರ ಹಾಗೆ ಚಲುವ ಚನ್ನಿಗರಾಮ, ಭಾವ ಮಲ್ಲಯ್ಯ ಕರೆತರುವ, ಮಲ್ಲಿಗೆ ಹೂವತರುವೆ, ಗೋಳೆಂದು ದುಃಖ ಮಾಡತಾಳಲ್ಲೊ ಎಂಬ ಕಾವ್ಯ ಭಾಗಗಳನ್ನು ಹಾಡುತ್ತಾರೆ.

ತುಮಕೂರಿನ ಪಕ್ಕದ ಹಾಗಲವಾಡಿ ಹಾಗೂ ಶಿರಾ ತಾಲ್ಲೂಕು ಕಳುವರಹಳ್ಳಿಯಲ್ಲಿ ಜುಂಜಪ್ಪನ ನೆಲೆಯಲ್ಲಿ ವಾಸಿಸುವ ಕಾಡುಗೊಲ್ಲರು ಗಣೆಯನಾದಕ್ಕೆ ರಾತ್ರಿಯೆಲ್ಲ ಸೊಲ್ಲೆತ್ತಿ ಹಾಡುವ ಕಾವ್ಯಕಥೆಗಳೇ ಜುಂಜಪ್ಪನ ಕಥೆ.

ತಾಯಿಯ ಬೆನ್ನಿನ ಮೂಲಕ ಹುಟ್ಟಿದ ಜುಂಜಪ್ಪ ಮತ್ತು ತಮ್ಮಂದಿರು ಏಳು ಗೂಡಿನ ದನ ಕಾಯುವ ಮತ್ತು ಅವುಗಳನ್ನು ಉಳಿಸಿಕೊಳ್ಳಲು ಸೋದರಮಾವನ ಜೊತೆಗೆ ಕಾದಾಟ, ಹಾಗೇ ಮ್ಯಾಸಬೇಡರ ಜೊತೆಗೆ ಹೋರಾಟ ಮಾಡಿ ವೀರತ್ವ ಪ್ರದರ್ಶನ ಮಾಡುವುದು, ಅತಿಮಾನುಷ ಶಕ್ತಿಯಾಗಿ 'ಬಸವ' ಬರುವುದು–ಹೀಗೆ ಕಥೆಯಲ್ಲಿ ವೈವಿಧ್ಯತೆ, ತಿರುವುಗಳೊಂದಿಗೆ ಹಾಡುವ ಕಾಡುಗೊಲ್ಲರು ಜುಂಜಪ್ಪನ ಪರಮಭಕ್ತರಾಗಿ ಉಳಿದು ಬಂದಿದ್ದಾರೆ.

ಗಂಡಸರಂತೆ ಹೆಂಗಸರು ಜನಪದ ಹಾಡ್ಗತೆಗಳನ್ನು ಹಾಡುತ್ತಾರೆ. ಅಂತಹ ಹೆಂಗಸರ ಹಾಡ್ಗತೆಗಳು ಕೂಡ ಜೀವನದ ವೈಚಿತ್ರ್ಯಗಳನ್ನು ಒಳಗೊಂಡಿವೆ.

ದಕ್ಷಿಣ ಕರ್ನಾಟಕದ ಹೆಂಗಸರ ಜನಪದಗೀತೆಗಳು, ದಕ್ಷಿಣ ಕರ್ನಾಟಕದ ಗಂಡಸರ ಜನಪದ ಗೀತಮೇಳಗಳು, ದೊಂಬಿದಾಸರು, ಮಂಟೇಸ್ವಾಮಿಯ ನೀಲಗಾರರು, ಕಂಸಾಳೆಯವರು, ಕಿನ್ನರಿ ಜೋಗಿಗಳು ಇವೆಲ್ಲವೂ ಜನಪದರ ಜೀವನದ ಶ್ರೇಷ್ಠತೆಯನ್ನು ಹೇಳುತ್ತವೆ. ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಮೈಸೂರು, ಮಂಡ್ಯ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಂಡು ಬರುವ ಜನಪದ ಗೀತೆಗಳು. ಬೀಸುವ ಪದಗಳು, ಕುಟ್ಟುವ ಪದಗಳು, ಲಾಲಿಯ ಪದಗಳು, ನಾಟಿ ಸಂದರ್ಭದ ಕಥನಗೀತೆಗಳು, ಸೋಬಾನೆ ಪದಗಳು, ದೇವರ ಪದಗಳು, ಸಂಪ್ರದಾಯ ಪದಗಳು, ತಿಂಗಳ ಮಾವನ ಪದಗಳು, ಕೊಂತಿಯ ಪದಗಳು, ಹಚ್ಚೆಯ ಪದಗಳು ಮತ್ತು

ಬಸವನ ಅಷ್ಟಮಿಯ ಹಾಡುಗಳು ಆ ಭಾಗದಲ್ಲಿ ಹೆಂಗಸರು ಹಾಡುವ ವೈವಿಧ್ಯದ ಹಾಡುಗಳಾಗಿವೆ.

ಹಾಗೆ ದಕ್ಷಿಣ ಕರ್ನಾಟಕದ ಗಂಡಸರ ಜನಪದ ಗೀತಮೇಳಗಳು ಎಂಬ ಭಾಗದಲ್ಲಿ ಸಾಮಾನ್ಯ ಹಾಡುಗಾರರು, ವಿಶೇಷ ವಾದ್ಯ, ತಾಳ ಕುಣಿತದಿಂದ ಕೂಡಿದ ಕೋಲಾಟ ಕಲ್ಗಿತುರಾ ಸಂಪ್ರದಾಯ, ಮಾನವಮಿ ಮೇಳ, ಭಾಗವಂತಿಕ ಮೇಳ, ಅಂಟಿಕೆ-ಪಂಟಿಕೆ ಮೇಳ, ಡೊಳ್ಳು ಮೇಳ, ವೀರಗಾಸೆ ಮೇಳ, ಕಗ್ಗದ ಪದಗಳು, ಭಜನೆಮೇಳ ಮತ್ತು ಹೊಗಳುವ ಪದಗಳು ಆ ಭಾಗದ ವಿವಿಧ ಸಂಪ್ರದಾಯಗಳನ್ನು ಪರಿಚಯಿಸುತ್ತವೆ. ವೃತ್ತಿಗಾಯಕರು ಬಿಡಿ ಹಾಡುಗಳನ್ನು ಹಾಡುವುದರ ಜೊತೆಗೆ ದೀರ್ಘವಾದ ಜನಪದ ಕಾವ್ಯಗಳನ್ನೂ ಹಾಡುತ್ತಾರೆ.

ದೊಂಬಿದಾಸರು ಶಿವಕಥೆಗಳನ್ನು ಒಳಗೊಂಡ ಶ್ರೀಗೌರಿಯ ಮದುವೆ, ಗಂಗೇಗೌರಿ ಜಗಳ, ಗಂಗೇಗೌರಿ ವಾದ ಮತ್ತು ಗಂಗೇಗೌರಿ ಸವಾಲು ಕಾವ್ಯಗಳು. ಕೃಷ್ಣಕಥೆಗಳಾದ ಶ್ರೀಕೃಷ್ಣ-ಕೊರವಂಜಿ, ಶ್ರೀಕೃಷ್ಣ ಪಾರಿಜಾತ ಕಾವ್ಯಗಳು ಹೀಗೆ ರಮ್ಯಕಥೆಗಳು, ವಾಸ್ತವಿಕ ಲಾವಣಿಗಳು ಮತ್ತು ಐತಿಹಾಸಿಕ ಕಾವ್ಯವಾದ ಮಾಗಡಿ ಕೆಂಪೇಗೌಡನ ಬಗೆಗೂ ಹಾಡುತ್ತಾರೆ.

ಮಂಟೇಸ್ವಾಮಿಯ ನೀಲಗಾರರು, ಕಂಸಾಳೆಯವರ ಕಾವ್ಯಗಳ ಸಂಗ್ರಹದ ಜೊತೆಗೆ ಕಿನ್ನರಿ ಜೋಗಿಗಳು,(ಕೈಯಲ್ಲಿ ಕಿಂದರಿ ಹಿಡಿದ ಜೋಗಿ) ಕೈಯಲ್ಲಿ ಕಿನ್ನರಿ ವೀಣೆಯನ್ನು ಹಿಡಿದು ಹಾಡುವ ಕಿನ್ನರಿಯ ಸ್ವಾಮಿಕಥೆ ಮತ್ತು ಮಹಾಭಾರತದ ಭಾಗಗಳ ಕಥನಕಾವ್ಯಗಳು ಅವರ ಸೃಜನಶೀಲತೆಗೆ ಹಿಡಿದ ಕೈಗನ್ನಡಿಯಾಗಿದೆ.

ಒಟ್ಟಾರೆ ಜೀಶಂಪರವರ ಜಾನಪದ ಅಧ್ಯಯನದ ಕಾರ್ಯ ಕರ್ನಾಟಕದ ಜಾನಪದೀಯ ಸಂಸ್ಕೃತಿ ತಿಳಿಯುವಲ್ಲಿ ಸಹಕಾರಿಯಾಗಿದೆ.

ಮಾರುತಿ .ಡಿ.

೮೯. ಐತಿಹಾಸಿಕ ಮಹತ್ವ ಸಾರುವ ಜನಪದ ಕಾವ್ಯಗಳು

ಪಿರಿಯಾಪಟ್ಟಣದ ಕಾಳಗ ಮತ್ತು ಇತರ ಕಥನಕಾವ್ಯಗಳು, ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೫೫, ೧೧ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೫೨, ಬೆಲೆ ರೂ. ೩೦೦/-

ಒಂದು ನಾಡಿನ ಸಮಗ್ರ ಸಂಸ್ಕೃತಿಯನ್ನು ತಿಳಿಯಬೇಕಾದರೆ ಅಲ್ಲಿ ವಾಸಿಸುವ ಸಮುದಾಯಗಳ ಬುಡಕಟ್ಟುಗಳನ್ನು ಪ್ರಾದೇಶಿಕವಾಗಿ ಅದರ ಮೂಲ ಆಚಾರ-

ವಿಚಾರ, ಸಂಪ್ರದಾಯ, ಆರಾಧನೆ, ಆಹಾರ, ವಸ್ತ್ರ, ಆಭರಣ ಇತ್ಯಾದಿಗಳ ಜಾನಪದೀಯ ಹಾಗೂ ಸಾಹಿತ್ಯಿಕ ಅಧ್ಯಯನದಿಂದ ಸಾಧ್ಯ. ಹೀಗೆ ಕರ್ನಾಟಕದ ಜಾನಪದೀಯ ಅಧ್ಯಯನ ಮಾಡಿದ ವಿದ್ವಾಂಸರಲ್ಲಿ ಜೀ.ಶಂ. ಪರಮಶಿವಯ್ಯನವರು ಒಬ್ಬರು.

ಕರ್ನಾಟಕದ ತುಂಬೆಲ್ಲ ಹರಡಿದ ಜನಪದ ಆಕರಗಳನ್ನು ಸಂಗ್ರಹಿಸುತ್ತಾ ಬಂದ ಹಿರಿಯ ಸಂಪಾದಕರ ಹಾದಿಯಲ್ಲಿ ನಡೆದು ಮುಂದುವರೆದ ಸಂಗ್ರಹ ಕಾರ್ಯದ ಜೊತೆಗೆ ಜಾನಪದ ಅಧ್ಯಯನವನ್ನು ವೈಜ್ಞಾನಿಕ ರೀತಿಯಲ್ಲಿ ಅರ್ಥೈಸುತ್ತ ಜಾನಪದ ಅಧ್ಯಯನಕ್ಕೆ ಅಕಾಡೆಮಿಕ್ ಸ್ವರೂಪ ಕೊಟ್ಟ ಕೀರ್ತಿ ಜೀಶಂಪರವರಿಗೆ ಸಲ್ಲುತ್ತದೆ.

ಜೀಶಂಪರವರ ಕೃತಿಗಳು ಸಮಗ್ರವಾಗಿ ಸಂಪುಟಗಳ ರೀತಿಯಲ್ಲಿ ಪ್ರಕಟಗೊಳ್ಳುತ್ತಿರುವುದು ಔಚಿತ್ಯಪೂರ್ಣವಾದದ್ದು. ಏಕೆಂದರೆ ಅವರ ಮೌಲಿಕ ಕೃತಿಗಳು ಮೊದಲ ಮುದ್ರಣವಾಗಿ ಸುಮಾರು ವರ್ಷಗಳಾಗಿದ್ದು, ಅವರ ಕೃತಿಯು ಅಧ್ಯಯನಾಸ್ತಕರಾದ ಸಾಹಿತ್ಯ ವಿದ್ಯಾರ್ಥಿಗಳಿಗೆ/ಸಂಶೋಧಕರಿಗೆ ಅನುಪಲಬ್ಧವಾದ ಕಾರಣದಿಂದ ಜಾನಪದ ಅಧ್ಯಯನದ ಮುಂದಿನ ಹೆಜ್ಜೆ ಮಂಕಾಗುವ ಸಂದರ್ಭ ಬರುತ್ತಿತ್ತು. ಇಂತಹ ಸಂದರ್ಭದಲ್ಲಿ ಜೀಶಂಪರವರ ಸುಮಾರು ೮೦ ಕೃತಿಗಳನ್ನು ವಿಷಯಾನುಸಾರ ವರ್ಗೀಕರಣ ಮಾಡಿಕೊಂಡು ಅನೇಕ ಸಂಪುಟಗಳಾಗಿ ಪುನಃ ಲಭ್ಯವಾಗಿಸಿದ ಡಾ. ಚಕ್ಕೆರೆ ಶಿವಶಂಕರ್‌ರವರ ಕಾರ್ಯ ಪ್ರಸ್ತುತ ಸಂದರ್ಭಕ್ಕೆ ಸೂಕ್ತ ಎನಿಸುತ್ತದೆ.

ಪ್ರಧಾನ ಸಂಪಾದಕರಾದ ಡಾ. ಚಕ್ಕೆರೆ ಶಿವಶಂಕರ್‌ರವರು ಪ್ರಧಾನ ಸಂಪಾದಕರ ಮಾತು 'ಮೌನದೊಳಗಿನ ಮಹತ್ತು' ಎಂಬ ಶೀರ್ಷಿಕೆಯಡಿಯಲ್ಲಿ ಜೀಶಂಪರವರು ಗುಡಿಸಲಿನಿಂದ ವಿಶ್ವವಿದ್ಯಾಲಯ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷತೆ, ಯು.ಜಿ.ಸಿ. ರಾಷ್ಟ್ರೀಯ ಪ್ರಾಧ್ಯಾಪಕರಾಗಿ ಹೇಗೆ ಬೆಳೆದರು, ಹಾಗೆ ಅವರ ಕಾರ್ಯಕ್ರಮಗಳನ್ನು ಹೇಳುತ್ತಲೇ ಒಂದು ಘಟ್ಟದ ಕರ್ನಾಟಕ ಜಾನಪದ ಅಧ್ಯಯನದ ಚರಿತ್ರೆಯನ್ನು ಹಿಡಿದಿಟ್ಟಿರುವುದನ್ನು ಕಾಣಬಹುದು.

ಜೀಶಂಪರವರ 'ನೆನೆದೇವು' ಭಾಗದಲ್ಲಿ ದೈವಸ್ತುತಿಯ ವಿವರಗಳು ಬಗೆ ಬಗೆಯಲ್ಲಿ ಹಬ್ಬಿ ಹೋದ ಗೀತಸಾಹಿತ್ಯದ ಸಂಕಲನವನ್ನು ಮಾಡಿದ್ದಾರೆ. ಆಯಾಯ ದೈವಗಳಿಗೆ ಹೊಂದುವ ತ್ರಿಪದಿಗಳನ್ನು ಜೋಡಿಸಿ ಸೂಕ್ತ ಶೀರ್ಷಿಕೆಗಳನ್ನು ಕೊಟ್ಟು, ಹಾಗೆಯೇ ಕೆಲವು ಗ್ರಾಮ್ಯ ಭಾಷೆಯ ಕ್ಲಿಷ್ಟ ಪದಗಳಿಗೆ ಅಡಿಟಿಪ್ಪಣಿಯಲ್ಲಿ ಅರ್ಥವನ್ನು ಕೊಟ್ಟು, ಗೀತೆಯ ಒಟ್ಟಾರೆ ಅರ್ಥ ಸ್ಫುರಣೆಯಾಗಲು ಅವಕಾಶ ಕಲ್ಪಿಸಿದ್ದಾರೆ. ಒಟ್ಟಾರೆ ಜನಪದರು ಅವರ ಮನೆದೇವರು, ಕುಲದೇವರ ಬಗ್ಗೆ ಇರುವ ಅಪಾರವಾದ ಆದರ ಭಕ್ತಿಭಾವಗಳನ್ನು ಜನಪದ ಗೀತೆಗಳಲ್ಲಿ ಕಾಣಬಹುದು. ಸರಸ್ವತಿ, ಹನುಮ, ತಿಮ್ಮಪ್ಪ, ಬೈರವ ಲಕ್ಕಮ್ಮ ಹೀಗೆ ಶರಣು ಹೇಳುವ ಒಕ್ಕಲಹೆಣ್ಣು ದಿನನಿತ್ಯದ ಜೀವನಾಡಿಯಾದ 'ರಾಗಿಯಕಲ್ಲು' ಬಗ್ಗೆ ಇರುವ ಅವಳ ಒಡನಾಟವನ್ನು ಕಾಣಬಹುದು.

ನೀಲಗಾರರು ದೇವರಗುಡ್ಡರು ಎಂಬ ವೃತ್ತಿಗಾಯಕರು ಹಾಡುವ ಲಾವಣಿ ಕಾವ್ಯ ಕಥನಗೀತೆಗಳಲ್ಲಿ ಬಹಳ ಸುದೀರ್ಘವಾದ ಕಾವ್ಯವೇ 'ಪಿರಿಯಾ ಪಟ್ಟಣದ ಕಾಳಗ'. ಇಂತಹ ಕಾವ್ಯವನ್ನು ಜೀಶಂಪರವರು ಮಳವಳ್ಳಿ ರಾಚಯ್ಯನವರಿಂದ ಮೂಲಪಾಠವನ್ನೂ ಅದರಲ್ಲಿ ಬಿಟ್ಟುಹೋದ ಕಾವ್ಯಭಾಗವನ್ನು ಅವರ ಶಿಷ್ಯ ಮಳವಳ್ಳಿ ಗುರು ಬಸವಯ್ಯನವರಿಂದಲೂ ಹಾಡಿಸಿ, ಅದನ್ನು ಅನುಬಂಧಗಳಲ್ಲಿ ಕಥಾರೇಖೆಯಲ್ಲಿ ಪಟ್ಟಿ ಮಾಡಿರುವುದು ಕಾವ್ಯದ ಸಮಗ್ರ ಅರ್ಥವನ್ನು ತಿಳಿಯುವಲ್ಲಿ ಸಹಕಾರಿಯಾಗಿದೆ.

ಈ ಕಾವ್ಯವು ಮೈಸೂರಿನ ಚರಿತ್ರೆಯೊಂದಿಗೆ ಸಂಬಂಧ ಕಲ್ಪಿಸಿ ಮೈಸೂರಿನ ಒಡೆಯರಾದ ಕಂಠೀರವ ನರಸರಾಜ ಒಡೆಯರ ದಳವಾಯಿಗೂ ಪಿರಿಯಾಪಟ್ಟಣದ ಅರಸನಾದ ವೀರರಾಜನಿಗೂ ನಡೆದ ಕಾಳಗದಲ್ಲಿ ಅತಿಮಾನುಷ ದೈವ ಬಲದ ಚಾಮುಂಡಿಯ ಬೆಂಬಲದಿಂದ ದಳವಾಯಿ ಜಯಿಸಿದನು. ವೀರರಾಜನ ಸ್ವಾಭಿಮಾನ ಅವನ ಹೋರಾಟದ ಉತ್ಸಾಹ ಹಾಗೆ ಅವನ ಪತ್ನಿಯರು ಪತಿಯನ್ನು ಹಿಂಬಾಲಿಸಿ ಯುದ್ಧಕ್ಕೆ ಮುಂಚೆಯೇ ತಮ್ಮ ದೇಹವನ್ನು ಸಾವಿಗೆ ಅರ್ಪಿಸುವುದು, ವೀರರಾಜನ ತಮ್ಮ ಹಾಗೂ ಅವನ ಮಗನಲ್ಲಿ ಇರುವ ಅಣ್ಣನ, ತಾಯಿನಾಡಿನ ಪ್ರೀತಿಗೆ ಜನರ ಮನಸ್ಸು ಮಾರುಹೋಗುವುದನ್ನು ಕಾಣಬಹುದು.

ಜನಪದ ವೀರಕಾವ್ಯಗಳಲ್ಲಿ ಬರುವ ೧. ಸರ್ಜಪ್ಪ ನಾಯಕ ೨. ಮಾಗಡಿ ಕೆಂಪೇಗೌಡ ೩. (ಲಿಂಗರಾಜಮ್ಮ ೧, ಲಿಂಗರಾಜಮ್ಮ ೨, ಲಿಂಗರಾಜಮ್ಮ ೩), ೪. ಚನ್ನಿಗರಾಯ ಕಾವ್ಯಗಳು ಕಾಳಗಗಳ ಐತಿಹಾಸಿಕ ಚರಿತ್ರೆಯನ್ನು ತಿಳಿಸುತ್ತದೆ. ಹಾಗೆಯೇ ಇಲ್ಲಿ ವೀರರಸವು ಪ್ರಧಾನವಾಗಿ ಮಡುಗಟ್ಟಿರುವುದನ್ನು ಕಾಣಬಹುದು. ಬಯಲುಸೀಮೆಯ ಪ್ರಾದೇಶಿಕ ಚರಿತ್ರೆಗಳನ್ನು ಹೇಳುವ ಈ ಕಾವ್ಯಗಳು ಸ್ಥಳೀಯ ಚರಿತ್ರೆಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿವೆ.

ತಿಪಟೂರಿನ ಚಿಕ್ಕ ಎಲ್ಲಯ್ಯ ಎನ್ನುವ ಚೌಡಿಕೆ ವೃತ್ತಿಗಾಯಕರಿಂದ ಸಂಗ್ರಹಿಸಿದ ಸರ್ಜಪ್ಪನಾಯಕ ಹಾಡ್ಗತೆಯು ತರೀಕೆರೆಯ ಪಾಳೆಯಗಾರರ ಕೊನೆಯ ಮಜಲನ್ನು ತಿಳಿಸುತ್ತದೆ. ಸರ್ಜಪ್ಪನಾಯಕ ತನ್ನ ಸೂಳೆ ರಂಗಿಯ ಒಳಸಂಚಿಗೆ ಬಲಿಯಾಗದೆ, ಮೈಸೂರು ದಳವನ್ನು, ಕುಂಪಣಿ ದಂಡನ್ನು ಹಿಮ್ಮೆಟ್ಟಿಸಿ ಹೋರಾಡಿ ದುರಂತ ನಾಯಕನಾಗುವ ಚಿತ್ರಣ ಮೂಡಿಬಂದಿದೆ.

ಗುಬ್ಬಿ ತಾಲ್ಲೂಕಿನಲ್ಲಿ ಚಿಮ್ಮನಹಳ್ಳಿ ಬರುವ ದೊಂಬಿದಾಸರರಾದ ವೆಂಕಟರಮಣಯ್ಯನವರಿಂದ ಸಂಗ್ರಹಿಸಿದ ಮಾಗಡಿ ಕೆಂಪೇಗೌಡ ಕಾವ್ಯ ಯಲಹಂಕ ಪ್ರಭುಗಳ ಆಳ್ವಿಕೆಯ ವ್ಯಾಪ್ತಿಯನ್ನು ಹರಡಿಕೊಂಡಿದೆ. ಇಲ್ಲಿ ದೈವ ವಿರೋಧ ಕಟ್ಟಿಕೊಳ್ಳುವ ಕೆಂಪೇಗೌಡ ಮತ್ತೆ ವೈಷ್ಣವನಾಗುವುದು ಕಂಡು ಬರುತ್ತದೆ.

ಧಾರ್ಮಿಕ ಹಿನ್ನೆಲೆಯಲ್ಲಿ ಶೈವ–ವೈಷ್ಣವ ಸಂಘರ್ಷವನ್ನು ಹೇಳುವ ಕೆಂಪೇಗೌಡ ಕಾವ್ಯದಲ್ಲಿ ಏಳು ಕೊಪ್ಪರಿಗೆ ಹೊನ್ನು ಲಭ್ಯವಾಗುವುದು. ತಲೆಯ ಬಳಿ ಹೆಡೆ ಬಿಚ್ಚಿದ ಸರ್ಪ ಇರುವುದು–ಇವೆಲ್ಲವೂ ಜನಪದ ಆಶಯಗಳಾಗಿರುವುದನ್ನು ಕಾಣಬಹುದು.

ಕಂಸಾಳೆ-ಮಾದಯ್ಯ, ನೀಲಗಾರ-ಬಸವರಾಜು, ನೀಲಗಾರ-ಸಣ್ಣಯ್ಯರ ಭಿನ್ನ ಪಾಠಗಳು ಲಿಂಗರಾಜಮ್ಮನ ಕಾವ್ಯವಾಗಿ ಕೊಡಗಿನ ಇತಿಹಾಸವನ್ನು ಹೇಳುತ್ತವೆ. ಇದರಲ್ಲಿ ನೀಲಗಾರರಿಂದ ಸಂಗ್ರಹಿಸಿದ ಲಿಂಗರಾಜಮ್ಮ-೨, ಲಿಂಗರಾಜಮ್ಮ-೩, ಎರಡು ಪಾಠಗಳಿಂದ ಕತೆಯ ಮೂಲ ಚೌಕಟ್ಟನ್ನು ನಿರ್ಧರಿಸಬಹುದಾಗಿದೆ.

ತಂಬೂರಿ ಮಂಟೇಲಿಂಗಯ್ಯನಿಂದ ಸಂಗ್ರಹಿಸಿದ ಚನ್ನಿಗರಾಮ ಕಾವ್ಯ, ಕುಮಾರ ರಾಮನ ಕತೆಯೇ ಆದರೂ ಅವನ ಆರಂಭದ ಒಂದು ಪ್ರಸಂಗವನ್ನು ಪ್ರಸ್ತಾಪಿಸುತ್ತದೆ. ನಂತರ ಕುಮಾರರಾಮ, ಮಾದಿಗರ ಹಂಪ, ವೀರಬಲ್ಲಾಳನ ತೇಜಿ-ಒಂದೇ ಅಂಶದಿಂದ ಹುಟ್ಟಿದವರೆಂಬಂತೆ ಸಂಬಂಧ ಕಲ್ಪಿಸುವುದು ಕಾಣಬಹುದು. ಈ ಕಾವ್ಯದಲ್ಲಿ ಸಾಂಗತ್ಯದ ಲಕ್ಷಣವನ್ನು ಕಾಣಬಹುದು.

'ಎರಡು ಜನಪದ ಕಾವ್ಯಗಳು' ಭಾಗದಲ್ಲಿ ಬರುವ 'ಕುಶಲಯ್ಯ ಅವಲಯ್ಯ ಕಾಳಗ' ಮತ್ತು 'ಸಾರಂಗಧರನ ಕಥೆ' ಹಾಡುಗಬ್ಬಗಳಾದ ಇವು ನೀಲಗಾರ ಸಂಪ್ರದಾಯದ ಶುದ್ಧ ಜನಪದ ಕಾವ್ಯಗಳಾಗಿವೆ.

'ಕುಶಲಯ್ಯ ಅವಲಯ್ಯ ಕಾಳಗ' ಉತ್ತರ ರಾಮಾಯಣದ ಲವ-ಕುಶರ ಕಾಳಗವನ್ನು ಚಿತ್ರಿಸುವುದಾದರೂ ಇಲ್ಲಿ ಅತಿಮಾನುಷ ಪ್ರಾಣಿ ಮತ್ತು ಆಶಯಗಳೊಂದಿಗೆ ಜನಮಾನಸ ದಲ್ಲಿ ಉಳಿದಿರುವುದನ್ನು ಕಾಣಬಹುದು. ಲಕ್ಷ್ಮಣನು ಅಣ್ಣನ ಆಜ್ಞೆಯನ್ನು ಧಿಕ್ಕರಿಸಿ ಗರ್ಭವತಿಯಾದ ಸೀತೆಯನ್ನು ಕೊಲ್ಲದೆ ಹೊನ್ನೆಯ ಮರದ ಹಾಲನ್ನು ಸೀತೆಯ ಒಡವೆಗಳಿಗೆ ಹಚ್ಚಿಕೊಂಡು ರಾಮನಿಗೆ ಸಾಕ್ಷಿ ತೋರಿಸುವುದು. ಅವಲಮೀನು,-ಕುಶಲಮೀನುಗಳನ್ನು ಸೃಷ್ಟಿಸಿ ನದಿ ದಾಟಿಸಿ ವಾಲ್ಮೀಕಿಯ ಆಶ್ರಮಕ್ಕೆ ಅತ್ತಿಗೆಯನ್ನು ಸಾಗಿಸುವ ಆಜ್ಞೆ ನೀಡುವುದನ್ನು ಕಾಣಬಹುದು. ರಾಮನ ಕಣ್ಣೀರು ಹೊಳೆಯಾಗುವುದು. ನಂತರ ಕಾಳಗ ಸ್ವಲ್ಪ ಬದಲಾವಣೆಯೊಂದಿಗೆ ಉತ್ತರ ರಾಮಾಯಣದಂತೆ ನಡೆಯುತ್ತದೆ.

ಸತ್ಯವಂತ ಸಾರಂಗಧರ ಕತೆಯಲ್ಲಿ ರಾಜಮಹೇಂದ್ರ ಪುರದ ರಾಜೇಂದ್ರ ದೊರೆ ರತ್ನಾಂಗ ದೇವಿಗೆ ಗುರು ಕರುಣೆಯಿಂದ ಸಾರಂಗಧರನ ಜನನವಾಗುತ್ತದೆ. ರಾಜೇಂದ್ರನ ಕಿರುವಯಸ್ಸಿನ ಎರಡನೆಯ ರಾಣಿ ಚಿತ್ರಾಂಗದೇವಿಯು ಮಗನ ಮೇಲೆ ಮೋಹ ಗೊಂಡಳು. ಸಾರಂಗಧರ ತಿರಸ್ಕಾರದಿಂದ ಕೋಪಿಸಿಕೊಂಡನು. ಇದರಿಂದ ಕುಪಿತಳಾದ ರಾಣಿಯು ಗಂಡನಲ್ಲಿ ಸಾರಂಗಧರನ ಮೇಲೆ ಕೆಟ್ಟ ಆರೋಪ ಹೊರಿಸಿ, ಅವನ ಕೈಕಾಲು ಕಡಿಸುವುದು ನಂತರ ಧರ್ಮದೇವತೆಯ ಕರುಣೆಯಿಂದ ಕೈಕಾಲು ಮೂಡಿದ ಸಾರಂಗಧರ ಎಲ್ಲರನ್ನು ಕ್ಷಮಿಸಿ ಸತ್ಯವಂತ ಸಾರಂಗಧರ ಆಗುವುದನ್ನು ಕಾಣಬಹುದು.

ಒಟ್ಟಾರೆ ಜನಮಾನಸದಲ್ಲಿ ಉಳಿದು ಬಂದಿರುವ ಜನಪದ ಹಾಡ್ಗತೆಗಳು ಕಾವ್ಯಗಳ ಸಂಗ್ರಹಣೆಯಿಂದ ಮುಂದಿನ ಜಾನಪದ ಅಧ್ಯಯನಕ್ಕೆ ಹೆಚ್ಚು ಸಹಕಾರಿಯಾಗಿವೆ.

ಮಾರುತಿ .ಡಿ.

೯೦. ಜಾನಪದದ ಸಂಸ್ಕೃತಿನಿಷ್ಠ ಬರಹಗಳು

ಜೀಶಂಪ ಜಾನಪ್ಪದ ಬರಹಗಳು, ಜೀ.ಶಂ.ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೧ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ– ೨೦೧೨, ಪುಟ–೪೧೬, ಬೆಲೆ ರೂ. ೨೪೦/-

ಕನ್ನಡ ನಾಡಿನ ಪ್ರತಿಯೊಂದು ಹಳ್ಳಿಯೂ ಕೂಡ ಅಪಾರ ಜಾನಪದ ಸಾಹಿತ್ಯದ ಕಣಜ. ಜನಪದರಿಂದ ಹೊರತಾದ ಗ್ರಾಮವಾಗಲಿ, ವ್ಯಕ್ತಿಯಾಗಲಿ ಇಲ್ಲ. ಕಥೆ, ಗಾದೆ, ಒಗಟು, ಲಾವಣಿ, ಗೀತೆಗಳಿಂದ ತುಂಬಿ ತುಳುಕುವ ಈ ಸಾಹಿತ್ಯವನ್ನು ಸಂಗ್ರಹಿಸಿ, ಸಂರಕ್ಷಿಸುವ ಕಾರ್ಯ ತಡವಾದರೂ, ಅದರ ಮೌಲ್ಯವನ್ನು ಅರಿತುಕೊಳ್ಳುವಲ್ಲಿ ಹಿಂದೆ ಬೀಳದೆ ಅದನ್ನು ಸಂಗ್ರಹಿಸುತ್ತಿರುವುದು ಸಂತಸದ ವಿಚಾರ. ಇಂತಹ ವ್ಯಕ್ತಿಗಳಲ್ಲಿ ಜಾನಪದವನ್ನೇ ಉಸಿರೆಂದು ತಿಳಿದು ಜಾನಪದ ಸಂಗ್ರಹಣೆಯಲ್ಲಿ ಅವಿರತವಾಗಿ ಶ್ರಮಿಸಿದ 'ಕರ್ನಾಟಕ ಜಾನಪದ ಪಿತಾಮಹ'ರೆನಿಸಿಕೊಂಡ ಜೀ.ಶಂ. ಪರಮಶಿವಯ್ಯ ನವರು ಪ್ರಾತಃಸ್ಮರಣೀಯರು.

'ಕರ್ನಾಟಕ ಜಾನಪದ ವಿಶ್ವವಿದ್ಯಾಲಯ'ವು ಸ್ಥಾಪನೆಗೊಂಡು ಜಾನಪದಕ್ಕೆ ಸಂಬಂಧಿಸಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವಂತಹ ಪ್ರಸ್ತುತ ಸಂದರ್ಭದಲ್ಲಿ ಜೀಶಂಪರವರ ಹಲವು ಕೃತಿಗಳು 'ಜೀಶಂಪ ಜಾನಪದ ಬರಹಗಳು' ಎಂಬ ಬರಹದಡಿ ಪುಸ್ತಕ ರೂಪದಲ್ಲಿ ಮರುಮುದ್ರಣಗೊಳ್ಳುತ್ತಿರುವುದು ಅಭಿನಂದನಾರ್ಹ ಹಾಗೂ ಆ ಹಿರಿಯ ಚೇತನಕ್ಕೆ ಸಲ್ಲಿಸಿದ ಗೌರವದ ದ್ಯೋತಕವೂ ಆಗಿದೆ.

'ಜೀಶಂಪ ಜಾನಪದ ಬರಹಗಳು' ಎಂಬ ಸಂಕಲನದಲ್ಲಿ 'ಜನಪದ ಸಾಹಿತ್ಯ ಸಮೀಕ್ಷೆ', 'ನಮ್ಮ ಜನಪದ ಸಾಹಿತ್ಯ', 'ಜಾನಪದ' ಮತ್ತು 'ಜಾನಪದ ಸಂಗಮ' ಎಂಬ ಜಾನಪದಕ್ಕೆ ಸಂಬಂಧಿಸಿದ ನಾಲ್ಕು ಕೃತಿಗಳು ನಾಲ್ಪುರಿಗೊಂಡಿವೆ.

'ಜನಪದ ಸಾಹಿತ್ಯ ಸಮೀಕ್ಷೆ' ಈ ಕೃತಿಯು ೧೯೬೭ರಲ್ಲಿ ಮೊದಲ ಮುದ್ರಣವನ್ನು ಕಂಡಿದ್ದು, ೪೫ ವರ್ಷಗಳ ನಂತರ ಇದು ಮರುಮುದ್ರಣಗೊಳ್ಳುತ್ತಿದೆ. ಸಮೀಕ್ಷೆ ೧.೨.೩. ಎಂಬ ಘಟಕಗಳಡಿ ಜಾನಪದ ವಿವಿಧ ಮುಖಗಳನ್ನು ಕುರಿತ ೧೮ ಲೇಖನಗಳ ಗುಚ್ಛವಿದ್ದು, ಕಂಸಾಳೆಯ ಪದ ಹಾಗೂ ಕರಪಾಲ ಮೇಳಗಳ ಸ್ವರೂಪ, ಲಕ್ಷಣಗಳನ್ನು ವಿವರಿಸಿ, ಅವುಗಳ ವೈಶಿಷ್ಟ್ಯಗಳನ್ನು ಎತ್ತಿತೋರಿಸಿ ಅವುಗಳು ಪ್ರಚಾರದಲ್ಲಿರುವ ಪ್ರದೇಶವನ್ನು ಗುರುತಿಸಿದ್ದಾರೆ. ಅಲ್ಲದೆ ಜಾನಪದ ಸಾಹಿತ್ಯ ಹಾಸ್ಯದ ಕಣಜವೆಂಬುದನ್ನು ಹಲವಾರು ಉದಾಹರಣೆಗಳೊಂದಿಗೆ ಓದುಗರಿಗೆ ತೋರಿಸಿಕೊಟ್ಟಿದ್ದಾರೆ.

ಇಲ್ಲಿನ ೧೮ ಲೇಖನಗಳಲ್ಲಿ ಹಳ್ಳಿಯಲ್ಲಿನ ಹಬ್ಬಗಳ ದರ್ಶನವಿದೆ. ಮದುಮಗಳಿಗಿರುವ ತೌರಿನ ಉತ್ಕಟ ಹಂಬಲ, ಪರಿಸ್ಥಿತಿಯ ಅನುಭವವಿದೆ. ಅಕ್ಕನ ಮಮತೆ, ತೌರೂರಿನ

ಆಸೆ ನಿರಾಸೆಗಳು, ಮಲೆಯ ಮಾದೇಶ್ವರ, ಕಾವೇಟಿರಂಗ, ತಾಯಿ ಕೆಂಪವ್ವೆಯರ ಮಹಿಮೆ, ಮುಗ್ಧ ಭಕ್ತಿಯು ಬುಗ್ಗೆಯಾಗಿ ಹರಿದಿದೆ.

ಕೊನೆಯಲ್ಲಿ ಜಾನಪದ ಕಲೆಗಳ ಸಂಗ್ರಹ ಮತ್ತು ಸಂರಕ್ಷಣೆಯ ಕಾರ್ಯವನ್ನು ಕುರಿತಂತೆ ಮೂರು ಲೇಖನಗಳೊಂದಿಗೆ ಈ ಕೃತಿಯು ಪರಿಸಮಾಪ್ತಿಗೊಳ್ಳುತ್ತದೆ.

'ನಮ್ಮ ಜನಪದ ಸಾಹಿತ್ಯ' ಈ ಕೃತಿಯು ೧೯೭೮ರಲ್ಲಿ ಮೊದಲ ಮುದ್ರಣವನ್ನು ಕಂಡಿದ್ದು, ೩೪ ವರ್ಷಗಳ ನಂತರ ಮರುಮುದ್ರಣವನ್ನು ಕಾಣುತ್ತಿದೆ. ಈ ಕೃತಿಯನ್ನು ಲೇಖಕರು 'ಪ್ರಿಯ ಶಾರುವಿಗೆ' ಅರ್ಪಣೆಯನ್ನು ಮಾಡಿದ್ದಾರೆ.

ಲೇಖಕರೇ ಹೇಳಿಕೊಳ್ಳುವಂತೆ 'ಜನಪದ ಸಾಹಿತ್ಯವನ್ನು' ಕುರಿತ ಪ್ರೌಢ ವಿವೇಚನೆ ಇದೆ. ಯಾರಿಂದ ಆ ಸಾಹಿತ್ಯ ತನ್ನ ಉಗಮವನ್ನು ಪಡೆಯಿತೋ ಆ ತಾಯಿ ಮಡಲಿಗೇ ಅರ್ಪಿಸುವ ಒಂದು ಕಾಣಿಕೆ ಎಂದಿದ್ದಾರೆ.

ಜನಪದ ಸಂಗ್ರಹ ಕಾರ್ಯಕ್ಕೆ ಸಂಬಂಧಿಸಿದಂತೆ ಮರೆಯಾಗುತ್ತಿರುವ ಜನಪದ ಕಲೆಗಳಿಗೆ ಹಾಗೂ ಗಾದೆ, ಒಗಟುಗಳಲ್ಲಿನ ಸೊಗಸುಗಾರಿಕೆಗಳಿಗೆ ಸಂಬಂಧಿಸಿದಂತೆ ೯ ಲೇಖನಗಳು ಈ ಕೃತಿಯಲ್ಲಿ ಸಂಗ್ರಹವಾಗಿವೆ.

ಅಲ್ಲದೆ ಜನಪದ ಸಾಹಿತ್ಯವನ್ನು ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರಮಟ್ಟದಲ್ಲಿ ಸಂಗ್ರಹಿಸಿ ಸಂರಕ್ಷಿಸಬೇಕೆಂಬುದಕ್ಕೆ ಮುಖ್ಯವಾಗಿ ಒತ್ತು ನೀಡಬೇಕೆಂಬ ಡಾ. ಎಚ್.ಎಲ್. ನಾಗೇಗೌಡರ ಉತ್ತಮ 'ಹಿನ್ನುಡಿ' ಈ ಕೃತಿಗಿದೆ.

'ಜಾನಪದ' ಈ ಕೃತಿಯು ೧೯೭೮ರಲ್ಲಿ ಮೊದಲ ಮುದ್ರಣವನ್ನು, ೧೯೭೯ರಲ್ಲಿ ೨ನೆಯ ಮುದ್ರಣವನ್ನು ಕಂಡಿದ್ದು, ೩೩ ವರ್ಷಗಳ ನಂತರ ಮರುಮುದ್ರಣವನ್ನು ಕಾಣುತ್ತಿದೆ. ಈ ಕೃತಿಯನ್ನು ಲೇಖಕರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ 'ಡಿ.ವಿ. ಅರಸ್' ಅವರಿಗೆ ಗೌರವಪೂರ್ವಕವಾಗಿ ಅರ್ಪಣೆಯನ್ನು ಮಾಡಿದ್ದಾರೆ.

ಪ್ರಸ್ತುತ ಕೃತಿಯಲ್ಲಿ ಜಾನಪದ, ಜಾನಪದದ ಸ್ವರೂಪ, ವ್ಯಾಪ್ತಿ, ಅದರ ಸಿದ್ಧಾಂತಗಳು, ಅದನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಬೇಕಾದ ತುರ್ತು, ಜಾನಪದ ವಸ್ತುಸಂಗ್ರಹಾಲಯಗಳ ಸ್ವರೂಪ, ಅಲ್ಲಿನ ವಸ್ತು, ವಿಶೇಷಗಳು, ಅವುಗಳ ವರ್ಗೀಕರಣ, ಕರ್ನಾಟಕದಲ್ಲಿ ನಡೆದ ಜಾನಪದ ಅಧ್ಯಯನವನ್ನು ಕುರಿತು ಈ ದಶಕದಲ್ಲಿ ಪ್ರಕಟಗೊಂಡ ಕೃತಿಗಳ ವರ್ಗೀಕರಣಗಳನ್ನು ಕುರಿತಂತೆ ಹಾಗೂ ಕರ್ನಾಟಕ ಜಾನಪದದ ಗೊತ್ತು ಗುರಿಗಳನ್ನು, ಜಾನಪದದಲ್ಲಿ ಡಾಕ್ಟರೇಟ್ ಪದವಿಗಳನ್ನು ಪಡೆದವರ ಪಟ್ಟಿಯನ್ನು ನೀಡುವ ಮೂಲಕ ಕರ್ನಾಟಕದ ಪ್ರದರ್ಶನಾತ್ಮಕ ಜನಪದ ಕಲೆಗಳ ವಿಂಗಡಣೆಯನ್ನು ತಿಳಿಸುತ್ತಾರೆ.

ಈ ಕೃತಿಯ ಕೊನೆಯಲ್ಲಿ ವೈವಿಧ್ಯಪೂರ್ಣವಾದ ಕರ್ನಾಟಕ ಜಾನಪದ ಸಂಪತ್ತನ್ನು ಸರಿಯಾಗಿ ಗುರ್ತಿಸಿ, ಅಧ್ಯಯನ ಮಾಡಿ, ಸಂಗ್ರಹಿಸುವ ಬಹಳ ಮುಖ್ಯ ಕಾರ್ಯವನ್ನು ಒತ್ತಿ ಹೇಳುತ್ತಾರೆ.

'ಜಾನಪದ ಸಂಗಮ' ಈ ಕೃತಿಯು ೧೯೭೮ರಲ್ಲಿ ಮೊದಲ ಮುದ್ರಣವನ್ನು ಕಂಡಿದ್ದು ೩೪ ವರ್ಷಗಳ ನಂತರ ಮೇಲಿನ ೩ ಕೃತಿಗಳ ಜೊತೆಗೆ ಸಮಗ್ರವಾಗಿ ಮರುಮುದ್ರಣಗೊಳ್ಳುತ್ತಿರುವುದು ಸ್ವಾಗತಾರ್ಹ ಹಾಗೂ ಈ ಕೃತಿಗಳು ಒಳಗೊಂಡಿರುವ ಜೀವನಾನುಭವ ಮತ್ತು ಮೌಲ್ಯಗಳಿಗೆ ಹಿಡಿದ ಕನ್ನಡಿಯಾಗಿದೆ.

ಈ ಕೃತಿಯನ್ನು ರಾಷ್ಟ್ರಕವಿ ಕುವೆಂಪು ಅವರಿಗೆ ೭೫ನೆಯ ಜನ್ಮದಿನೋತ್ಸವದ ನೆನಪಿಗಾಗಿ ಅರ್ಪಣೆ ಮಾಡಿದ್ದಾರೆ. ಪ್ರಸ್ತುತ ಕೃತಿಯು ಜೀಶಂಪರವರು ಜಾನಪದವನ್ನು ಕುರಿತು ವಿವಿಧ ವಿಷಯಗಳ ಮೇಲೆ ಬರೆದ ಮುನ್ನುಡಿ ರೂಪದ ೧೧ ಲೇಖನಗಳ ಒಂದು ಸಂಗಮವಾಗಿದೆ.

ಜನಪದ ಗದ್ಯಕಥೆಗಳು ಲೇಖನ 'ನಗುವನಹಳ್ಳಿ ರತ್ನ' ಅವರ 'ನಮ್ಮ ಹಳ್ಳಿಯ ಜನಪದ ಕತೆಗಳು' ಕೃತಿಗೆ ಬರೆದ ಮುನ್ನುಡಿಯಾದರೆ, 'ಜನಪದ ಕತೆಗಳ ಸಂಪಾದನೆ' ಲೇಖನ, ಶ್ರೀ ಬೋರೇಗೌಡರ 'ಗ್ರಾಮಾಂತರ ಕತೆಗಳು' ಕೃತಿಗೆ ಬರೆದ ಮುನ್ನುಡಿಯಾಗಿದೆ. 'ಕನ್ನಡ ಜನಪದ ಮಹಾಭಾರತ' ಲೇಖನ, ಶ್ರೀ ರಾಮಯ್ಯನವರ 'ಜನಪದ ಮಹಾಭಾರತ' ಕೃತಿಗೆ ರಚಿಸಿದ ಮುನ್ನುಡಿ. 'ಎರಡು ಜಾನಪದ ಮೇರು ಕೃತಿಗಳು' ಲೇಖನ, ಶ್ರೀ ತೀ.ನಂ. ಶಂಕರನಾರಾಯಣ ಅವರ 'ಜಾನಪದ ಮೈಲಿಗಲ್ಲುಗಳು' ಕೃತಿಗೆ ರಚಿಸಿದ ಮುನ್ನುಡಿಯಾಗಿದೆ. 'ಕೇರಳ ಜನಪದ ಕಾವ್ಯ ಕಲೆ' ಲೇಖನ, ಶ್ರೀ ರಾಮಚಂದ್ರ ಗೌಡರ 'ಕೇರಳದ ಜಾನಪದ' ಕೃತಿಗೆ ರಚಿಸಿದ ಮುನ್ನುಡಿಯಾಗಿದೆ, 'ಜನಪದ ಸಂಪ್ರದಾಯಗಳು–೧' ಲೇಖನವು ಎ. ಹಿರಿಯಣ್ಣ ಅವರ 'ಮಲೆನಾಡ ಸಂಪ್ರದಾಯಗಳು' ಕೃತಿಗೆ ಬರೆದ ಮುನ್ನುಡಿಯಾಗಿದೆ. 'ಜನಪದ ಸಂಪ್ರದಾಯಗಳು–೨' ಲೇಖನವು ತ.ಚಿ. ಚಲುವೇಗೌಡರ 'ಕೆಲವು ಜನಪದ ಸಂಪ್ರದಾಯಗಳು' ಕೃತಿಗೆ ಬರೆದ ಮುನ್ನುಡಿಯಾಗಿದೆ. 'ಭಾಗವಂತಿಕೆ ಮೇಳ' ಲೇಖನವು ಶ್ರೀ ಹಿರಿಯಣ್ಣ ಮೇಟಿಕೆರೆಯವರ 'ಭಾಗವಂತಿಕೆ ಪದಗಳು' ಕೃತಿಗೆ ಬರೆದ ಮುನ್ನುಡಿಯಾಗಿದೆ. 'ಕೋಲಾಟ' ಲೇಖನವು ಶ್ರೀ ಡಿ.ಕೆ. ಈರೇಗೌಡರ 'ಕೋಲಾಟದ ಪದಗಳು' ಸಂಕಲನಕ್ಕೆ ರಚಿಸಿದ ಮುನ್ನುಡಿಯಾಗಿದ್ದು, ಇದರಲ್ಲಿ ೬೧ ಕೋಲಾಟದ ಪದಗಳಿವೆ. 'ಡೊಳ್ಳು ಮೇಳ' ಲೇಖನ ಶ್ರೀ ಎನ್. ಬಸವರಾಜ್‌ರವರ 'ಡೊಳ್ಳಿನಹಾಡು' ಕೃತಿಗೆ ರಚಿಸಿದ ಮುನ್ನುಡಿಯಾದರೆ, 'ವಿವರಣಾತ್ಮಕ ಕಥೆ' ಲೇಖನವು ಜಿ.ವಿ.ಡಿ.ಯವರ 'ಜನಪದ ವಿವರಣಾತ್ಮಕ ಕತೆಗಳು' ಸಂಕಲನಕ್ಕೆ ಬರೆದ ಮುನ್ನುಡಿಯಾಗಿದೆ.

ಈ ರೀತಿಯಾಗಿ ಜೀಶಂಪರವರ ಜಾನಪದ ಬರಹಗಳು, ಸಂಗ್ರಹ ಅಪಾರ ಹಾಗೂ ಗಮನಾರ್ಹವಾದುದಾಗಿದೆ.

ಲಕ್ಷ್ಮೀಕಾಂತ ಗೌರೀಪುರ

೯೧. ಅಪರೂಪವೆನಿಸುವ ಕರ್ನಾಟಕದ ಲಾವಣಿ ಸಂಗ್ರಹ

ಸಮಗ್ರ ಲಾವಣಿಗಳು, ಸಂ. ಟಿ.ಎಸ್. ರಾಜಪ್ಪ, ಸಾಗರ್ ಪ್ರಕಾಶನ, ನಂ. ೬೯೫, ೧೧ನೇ ಮುಖ್ಯ ರಸ್ತೆ, ೮ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೩೬೦, ಬೆಲೆ-೩೬೦/-

ಜಾನಪದ ಸಾಹಿತ್ಯಕವಾಗಿ, ಭಾಷಿಕವಾಗಿ, ವೈಜ್ಞಾನಿಕವಾಗಿ, ಕ್ರಿಯಾತ್ಮಕವಾಗಿ ವಿಸ್ತಾರವಾದ ವೈವಿಧ್ಯತೆಯನ್ನು ಹೊಂದಿದೆ. ಅದರಲ್ಲಿ ಲಾವಣಿಗಳು ಪ್ರಮುಖವಾದದ್ದು. ಲಾವಣಿಗಳು ಅನಕ್ಷರಸ್ಥರ ಮೌಖಿಕ ಸಾಹಿತ್ಯವಾಗಿ ಜನಪ್ರಿಯತೆ ಪಡೆದು, ಅದು ಜನರ ಬಾಯಿಂದ ಬಾಯಿಗೆ ಹರಿದು ಬಂದಿದೆ. ಲಾವಣಿಗಳನ್ನು ಹಾಡುವವರ ಗುಂಪಿನಲ್ಲಿ ನಾಲ್ಕು, ಐದು ಜನರು ಸೇರಿ ತಾಳಬದ್ಧವಾಗಿ ವಾದ್ಯಗಳೊಂದಿಗೆ ಹಾಡುತ್ತಾ ಜನರಿಗೆ ರಂಜನೆಯ ಜೊತೆಗೆ ಕಥಾ ರೂಪದಲ್ಲಿ ವಿಷಯಗಳನ್ನು ಹೇಳುತ್ತಾ, ಸಾಮಾಜಿಕ ಕಳಕಳಿ, ಎಚ್ಚರ ಮಾಡಕೊಡುತ್ತಿದ್ದವು. ಸ್ವಾತಂತ್ರ್ಯದ ಸಂದರ್ಭದಲ್ಲಿ ಸ್ವಾತಂತ್ರ್ಯದ ಜಾಗೃತಿ ಗೀತೆಗಳು, ರಾಷ್ಟ್ರ ಪ್ರೇಮ, ಭಾಷಾ ಪ್ರೇಮಗಳನ್ನು ಕುರಿತು ಜನರಿಗೆ ತಲುಪಿ ಸುವಲ್ಲಿ ಲಾವಣಿಗಳ ಪಾತ್ರ ಹಿರಿದು. ಹಳ್ಳಿಯಿಂದ ಹಳ್ಳಿಗೆ ಸುತ್ತುತ್ತಾ ಹಾಡಿನ ರೂಪದ ಕಥಾ ನಿರೂಪಣೆಗಳನ್ನು ಹೇಳುತ್ತಾ ಇದ್ದ ಲಾವಣಿಕಾರರ ಸಾಮಾಜಿಕ ಕೊಡುಗೆ ಮೆಚ್ಚುವಂಥದ್ದು.

ಕರ್ನಾಟಕದ ಆಯಾ ಪ್ರದೇಶಗಳಲ್ಲಿ ಜನಜನಿತವಾದ ಲಾವಣಿಗಳನ್ನು ಕ್ಷೇತ್ರಕಾರ್ಯದ ಮೂಲಕ ಧ್ವನಿಮುದ್ರಿಸಿ ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂಗ್ರಹವನ್ನು ಅಕ್ಷರರೂಪದಲ್ಲಿ ದಾಖಲಿಸಿದ ಪುಸ್ತಕ 'ಸಮಗ್ರ ಲಾವಣಿಗಳು'. ಇದನ್ನು ಟಿ.ಎಸ್.ರಾಜಪ್ಪ ಅವರು ಸಂಪಾದಿಸಿದ್ದಾರೆ.

ಜನಪದವೆಂದರೆ ಎಲ್ಲವೂ ಮೌಖಿಕವೇ. ಬಾಯಿಂದ ಬಾಯಿಗೆ ಹರಿದು ಬರುವಂಥದ್ದು, ಕಾಲದ ಬದಲಾವಣೆಯಲ್ಲಿ ನಾಗರಿಕತೆಯ ಓಟದಲ್ಲಿ ಮೌಖಿಕ ಪರಂಪರೆ ಕ್ರಮೇಣ ಕಳೆದುಹೋಗುವ ಸಾಧ್ಯತೆಯೇ ಹೆಚ್ಚು. ಜನಪದ ತಜ್ಞರು ಇದನ್ನೆಲ್ಲ ಅರಿತು ಕ್ರಮಬದ್ಧವಾಗಿ, ಆಯಾ ಪ್ರದೇಶಕ್ಕನುಗುಣವಾಗಿ ವಿಂಗಡಿಸಿ ಸಂಗ್ರಹಿಸಿದ ಲಾವಣಿಗಳ ಸಂಗ್ರಹ ಇದರಲ್ಲಿದೆ. ಈ ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಹಾ.ಮಾ.ನಾಯಕ ಅವರು ಜನಪದ ಸಂಗ್ರಹ ಕಾರ್ಯ ಬಹಳಷ್ಟಿದೆ. ಅದು ತ್ವರಿತವಾಗಿ, ಸಮಗ್ರವಾಗಿ ಆಗಬೇಕು ಎಂದು ಉಲ್ಲೇಖಿಸುತ್ತಾರೆ. ಬತ್ತದ ಚಿಲುಮೆಯಂತಿರುವ ಜನಪದ ಸಾಹಿತ್ಯ ವ್ಯಾಪಕವಾದ ವಿಸ್ತಾರತೆಯನ್ನು ಇಂದಿಗೂ ಉಳಿಸಿಕೊಂಡಿದೆ.

ಈ ನಾಲ್ಕು ಸಂಪುಟಗಳನ್ನು ಒಳಗೊಂಡ ಒಂದು ಸಂಗ್ರಹ ರೂಪವಾಗಿ ಹೊರಬಂದಿದೆ. ಇಲ್ಲಿರುವ ನಾಲ್ಕು ಪುಸ್ತಕಗಳಿಗೆ ಎರಡನೆಯ ಮುದ್ರಣವೂ ಆಗಿದೆ.

೧. ಬೆಳಗಾಂ ಜಿಲ್ಲೆಯ ಲಾವಣಿಗಳು.
೨. ಕೆರೆಹೊನ್ನಮ್ಮ ಮತ್ತು ಇತರ ಲಾವಣಿಗಳು.
೩. ರಾಯಚೂರು ಜಿಲ್ಲೆಯ ಜನಪದ ಗೀತೆಗಳು.
೪. ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳು.

ಇವುಗಳು ಆಯಾ ಪ್ರದೇಶದ ಲಾವಣಿಗಳನ್ನು ಗುರ್ತಿಸಿ ಸಂಗ್ರಹಿಸಲಾಗಿದೆ. ಈ ಕೃತಿಯಲ್ಲಿ ಆಯಾ ಪ್ರದೇಶದ ಲಾವಣಿಗೆ ವಿಶೇಷವೆನಿಸುವ ಕಥಾನಿರೂಪಣೆ ಇದೆ. ಇದರಿಂದ ಓದುಗನಿಗೆ ಈ ಗದ್ಯ ಭಾಗವನ್ನು ಓದಿದ ನಂತರ ಲಾವಣಿಗಳು ಸುಲಭವಾಗಿ ಅರ್ಥವಾಗುತ್ತದೆ. ಮೊದಲ ವಿಭಾಗ ಬೆಳಗಾಂ ಜಿಲ್ಲೆಯ ಲಾವಣಿಗಳು. ಇದರಲ್ಲಿ ೨೧ ಲಾವಣಿಗಳಿವೆ. ಎರಡನೆಯ ವಿಭಾಗದಲ್ಲಿ ಒಂಭತ್ತು ಲಾವಣಿ ಸಂಗ್ರಹವಿದೆ. ಮೂರನೆಯ ವಿಭಾಗದಲ್ಲಿ ಲಾವಣಿಗಳ ಸಂಗ್ರಹವಿದ್ದು, ಬಳ್ಳಾರಿ ಜಿಲ್ಲೆಯ ಎಂಟು ಲಾವಣಿಗಳು. ಇದರಲ್ಲಿ ನಾಲ್ಕು ಲಾವಣಿಗಳ ಸಂಗ್ರಹವಿದೆ. ರಾಯಚೂರು, ಬಳ್ಳಾರಿ ವಿಭಾಗದ ಲಾವಣಿಗಳಿಗೆ ಭಾಷೆಯ ಕ್ಲಿಷ್ಟತೆಯನ್ನು ಅರಿತು ಅರ್ಥಕೋಶ ಕೊಡಲಾಗಿದೆ. ಲಾವಣಿಕಾರರ ವಿವರಗಳನ್ನು ಒಳಗೊಂಡ ಈ ಕೃತಿ ೬೭೭ ಪುಟಗಳಷ್ಟು ವಿಸ್ತಾರವನ್ನು ಹೊಂದಿದ ಲಾವಣಿಗಳ ದಾಖಲೆಯಾಗಿದೆ. ಸುಂದರವಾದ ಮುಖಪುಟ ವಿನ್ಯಾಸದಿಂದ ಆಕರ್ಷಕವಾಗಿ ಮುದ್ರಿತವಾಗಿರುವ ಈ ಕೃತಿ, ಜನಪದ ಸಾಹಿತ್ಯಕ್ಕೆ ಮಹತ್ವದ ಕೃತಿಯಾಗಿ ರೂಪುಗೊಂಡು ಕಾಲ ಕಾಲಕ್ಕೂ ನಮ್ಮ ಜನಪದ ಸಾಹಿತ್ಯವನ್ನು ಉಳಿಸಿಕೊಳ್ಳುವಂತಹ ಕೆಲಸ ಮಾಡುತ್ತದೆ.

ಸುಶೀಲಾ ಸದಾಶಿವಯ್ಯ

೯೨. ಜಾನಪದ ರೂಪ ದರ್ಶನ

ಜಾನಪದ : ಕೆಲವು ಮುಖಗಳು, ಜೀ.ಶಂ.ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ– ೨೦೧೨, ಪುಟ–೫೮೪, ಬೆಲೆ ರೂ. ೩೩೦/-

ಜೀಶಂಪರವರು ತಮ್ಮ ಜನಪದ ಅಧ್ಯಯನದ ಹಾದಿಯಲ್ಲಿ ಸಂಗ್ರಹಿಸಿದ ಅದರೊಂದಿಗಿನ ಒಡನಾಟದಲ್ಲಿ ತಯಾರಾದ ಲೇಖನಗಳ ಸಂಗ್ರಹ ರೂಪವೇ 'ಜಾನಪದ; ಕೆಲವು ಮುಖಗಳು'. ಇದರಲ್ಲಿ ಸಂಶೋಧನಾತ್ಮಕ, ಷರಿಚಯಾತ್ಮಕ, ಪರಿಶೀಲನಾತ್ಮಕ ಲೇಖನಗಳು ಆಯಾ ಸಂದರ್ಭದಲ್ಲಿ ಪ್ರಕಟಗೊಂಡಿದ್ದವು. ಅವುಗಳನ್ನೆಲ್ಲಾ ಒಟ್ಟಾಗಿ ಸಂಗ್ರಹಿಸಿದ ಸಮೀಕ್ಷಾತ್ಮಕವಾದ ಲೇಖನಗಳ ಸಂಗ್ರಹ.

ಜೀಶಂಪರವರ ಜಾನಪದ ಮತ್ತು ಸೃಜನಶೀಲ ಸಾಹಿತ್ಯಮಾಲೆಗೆ ಪ್ರಧಾನ ಸಂಪಾದಕರಾದ ಡಾ. ಚಕ್ಕೆರೆ ಶಿವಶಂಕರ್‌ರವರು ಜೀಶಂಪ ಅವರ ಸಮಗ್ರ ಸಾಹಿತ್ಯ ಕೃತಿಗಳನ್ನು

ಆಗಿಬಿಡುತ್ತದೆ. ಈ ಹಿನ್ನೆಲೆಯಿಂದ ಗಮನಿಸಿದರೆ ಚಂದ್ರಶೇಖರ ಕಂಬಾರರು ಹೇಳಿದ ಕತೆಯು ವಿಶಿಷ್ಟವೆನಿಸುತ್ತದೆ.

'ಬೇಡರ ಹುಡುಗ ಮತ್ತು ಗಿಳಿ' ಎಂಬ ಕತೆಯನ್ನು ಸಂಕಲನದ ಪ್ರಾತಿನಿಧಿಕ ಕತೆಯಾಗಿ ಗಮನಿಸಬಹುದು. ಇಲ್ಲಿ ಅತಿಮಾನುಷತೆ, ಅದೃಷ್ಟದಾಟ, ತಂತ್ರಗಾರಿಕೆ, ರಮ್ಯ ಕಲ್ಪನಾ ವಿಸ್ತಾರ ಎಲ್ಲವೂ ಹದವಾಗಿ ಬೆರೆತಿವೆ. ಸಾಮಾನ್ಯನಾದ ಬಡ ಹುಡುಗನೊಬ್ಬ ರಾಜನ ಅನುಗ್ರಹಕ್ಕೆ ಪಾತ್ರನಾಗಿ ಅವನ ಮಂತ್ರಿಯಾಗಿ ಬೆಳೆದು ನಿಲ್ಲುವ ಚಮತ್ಕಾರಿಕ ಘಟನಾವಳಿಯು ಕಥೆಯ ಒಟ್ಟಾರೆ ಹಂದರ. ಆದರೆ ಬೇಡರ ಹುಡುಗನೇ ಕತೆಯ ಕೇಂದ್ರವಲ್ಲ. ಈ ಕತೆಗೆ ಹಲವು ಕೇಂದ್ರಗಳಿವೆ. ಪಂಚವರ್ಣದ ಗಿಳಿಯ ಶಾಪವಿಮೋಚನೆಯಾಗುವ ಸಂಗತಿಯೂ ಕತೆಗೆ ವಿಶಿಷ್ಟ ತಿರುವು ನೀಡಿ ಬಿಡುತ್ತದೆ. ಬೇಡರ ಹುಡುಗ ಅಪ್ರಯತ್ನಪೂರ್ವಕವಾಗಿ ಉನ್ನತ ಸ್ತರಗಳಿಗೆ ಏರುತ್ತ ಹೋಗುತ್ತಾನೆ. ಗಿಳಿಯೊಂದು ಅವನಿಗೆ ಹಂತಹಂತದಲ್ಲೂ ಉಪಾಯವಾಗಿ ದಾರಿ ತೋರಿಸುತ್ತದೆ. ಪಂಚವರ್ಣದ ಗಿಳಿಯೊಂದನ್ನು ಆತ ರಾಜನಿಗೆ ಉಡುಗೊರೆಯಾಗಿ ಕೊಡುವಂತೆ ಸೂಚಿಸುತ್ತದೆ. ಅಲ್ಲಿಂದ ಬೇಡರ ಹುಡುಗನ ಅದೃಷ್ಟ ತೆರೆಯುತ್ತದೆ. ಆದರೆ ಇಲ್ಲಿಯೂ ಒಂದು ಚಮತ್ಕಾರವಿದೆ. ಗಿಳಿಗೆ ಶಾಪ ವಿಮೋಚನೆಯಾಗಿ ಮನುಷ್ಯರೂಪ ತಳೆಯಬೇಕಾಗಿರುವುದರಿಂದ ಅದು ಹುಡುಗನ ವಿಧಿಯಾಗಿ ಒದಗಿ ಬಂದಿದೆ. ತನಗೆ ಶಾಪಕೊಟ್ಟ ರಾಜಕುಮಾರಿಯನ್ನು ಹುಡುಗ ಸಂಪರ್ಕಿಸುವಂತೆ ಮಾಡುತ್ತದೆ.

ಕತೆಯಲ್ಲಿ ಬರುವ ಗಿಣಿ, ಸಿಂಹ, ಆನೆ, ಕೀಲುಕುದುರೆ ಮುಂತಾದವು ಕಥೆಗೆ ರಮ್ಯತೆಯ ಆಯಾಮವನ್ನುಂಟುಮಾಡುತ್ತವೆ. ಬೇಡರ ಹುಡುಗನ ಅಭ್ಯುದಯವನ್ನು ಸಹಿಸದ ಮಂತ್ರಿಯ ಮತ್ಸರ, ಅವನನ್ನು ನಾಶ ಮಾಡಲು ಹೂಡುವ ಕುಟಿಲೋಪಾಯಗಳು ಇವೆಲ್ಲ ರಾಜಕೀಯ ತಂತ್ರಗಾರಿಕೆಯ ನಾನಾ ಮುಖಗಳನ್ನು ಪರಿಚಯಿಸುತ್ತವೆ. ಕೊನೆಗೂ ಈ ತಂತ್ರಗಳೆಲ್ಲ ಅವನಿಗೆ ಒಳಿತಾಗಿಯೇ ಪರಿಣಮಿಸುವುದು ಅದೃಷ್ಟದ ಆಟ. ತಾರ್ಕಿಕತೆ ಹಾಗೂ ಅತಾರ್ಕಿಕತೆಗಳು ಒಂದನ್ನೊಂದು ಹಾಯ್ದುಹೋಗುವ ರೋಮಾಂಚಕ ಕ್ಷಣಗಳ ಅನುಭವವನ್ನು ಕಥೆ ಕಟ್ಟಿಕೊಟ್ಟಿದೆ. ಕೊನೆಯಲ್ಲಿ ಸುಖಾಂತ್ಯಗೊಳ್ಳುವ ಕತೆಯ ನಡಿಗೆ ಮಾತ್ರ ಸಂಕೀರ್ಣ ವಿನ್ಯಾಸದಿಂದ ಕೂಡಿದೆ.

'ಅನ್ನದಾನ' ಎಂಬ ಕತೆಯಲ್ಲೂ ಕಥನ ತಂತ್ರವು ಕುತೂಹಲಕರವಾಗಿದೆ. ಅನ್ನದಾನವು ಮಹಾದಾನ. ಅದು ಅತ್ಯಂತ ಶ್ರೇಷ್ಠವಾದುದು, ಒಳ್ಳೆಯ ಫಲವನ್ನು ಕೊಡುವಂತಹದು ಎಂಬ ನೀತಿಯನ್ನು ಆಸಕ್ತಿ, ಕುತೂಹಲಗಳಲ್ಲಿ ಕಟ್ಟಿಹಾಕುತ್ತ ಮುಂದೆ ಫಕ್ಕನೆ ಮಿಂಚುವ ಬೆಳಕಿನಂತೆ ಅದನ್ನು ಮೂಡಿಸುವ ಬಗೆ ವಿಶೇಷವಾಗಿದೆ. ಕಷ್ಟದಲ್ಲಿದ್ದರೂ ತಾನು ಅರೆಹೊಟ್ಟೆ ಉಂಡು ಅನ್ನದಾನ ಮಾಡುವ ತಾಯಿಯ ಆದರ್ಶ ಮಗನಿಗೆ ಪ್ರಶ್ನಾರ್ಹ. ಆತ ತಾಯಿಯ ಸೂಚನೆಯಂತೆ ಉತ್ತರ ಹುಡುಕುತ್ತಾ ಶಿವನ ಬಳಿ ಪ್ರಯಾಣ

ವಿಷಯಾನುಸಾರ ವರ್ಗೀಕರಣ ಮಾಡಿಕೊಂಡು, ವ್ಯವಸ್ಥಿತವಾದ ರೀತಿಯಲ್ಲಿ ಸುಂದರವಾದ ಮುಖಪುಟದೊಂದಿಗ್ಗೆ ಹೊರತಂದಿದ್ದಾರೆ. ಎಲ್ಲಾ ಕೃತಿಗಳಿಗೆ ಅವರ ಬದುಕು-ಬರಹದ ನೆನಪುಗಳೊಂದಿಗೆ 'ಮೌನದೊಳಗಿನ ಮಹತ್ತು' ಎಂಬ ಅರ್ಥಪೂರ್ಣವಾದ ಶೀರ್ಷಿಕೆಯ ಪ್ರಸ್ತಾವನೆಯ ಮಾತು ಇದರಲ್ಲಿದೆ. ೫೮೧ ಪುಟಗಳನ್ನು ಹೊಂದಿರುವ ಈ ಪುಸ್ತಕ, ಜನಪದ ಅಧ್ಯಯನಕಾರರಿಗೆ ಮಹತ್ವದ ಕೃತಿ.

ಮೊದಲ ಮುದ್ರಣದಲ್ಲಿ ಬೇರೆ ಬೇರೆ ಕೃತಿಗಳಾಗಿ ಪ್ರಕಟಗೊಂಡ ಮೂರು ಕೃತಿಗಳನ್ನು ಒಟ್ಟಿಗೆ ಒಂದೇ ಪುಸ್ತಕದಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ. ೧. ಜಾನಪದ; ಕೆಲವು ಮುಖಗಳು, ೨. ಜನಪದ ಕಲಾವಿಹಾರ, ೩. ತಮಿಳುನಾಡಿನ ಜನಪದ. ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದ ಬಿಡಿ ಲೇಖನಗಳನ್ನು ಸಂಶೋಧನಾತ್ಮಕ ಲೇಖನಗಳನ್ನು ಸಂಗ್ರಹ ರೂಪವಾಗಿ, ಒಂದೇ ಕಡೆ ಲಭ್ಯವಾಗುವಂತಹ ಉತ್ತಮ ಕೃತಿಯಾಗಿದೆ.

ಈ ಪುಸ್ತಕದ ಮೊದಲ ವಿಭಾಗದಲ್ಲಿ 'ಜಾನಪದ; ಕೆಲವು ಮುಖಗಳು' ಕೃತಿಯಿದೆ. ಈ ಕೃತಿಯಲ್ಲಿ ವಿವೇಚನೆ ಎಂಬ ತಲೆಬರಹದಲ್ಲಿ ಇರುವ ಮೂರು ಲೇಖನಗಳು ಜನಪದವನ್ನು ಕುರಿತ ವಿಸ್ತಾರನೋಟ, ಜನಪದ ಕಥೆಯ ರೂಪಗಳನ್ನು ತಿಳಿಸಿಕೊಡುತ್ತದೆ. ಎರಡನೆಯ ಭಾಗದ 'ಪರಿವೀಕ್ಷಣೆ' ಎಂಬ ತಲೆಬರಹದಲ್ಲಿ ಒಟ್ಟು ಹನ್ನೊಂದು ಲೇಖನಗಳಿದ್ದು, ಅವುಗಳು ಆಯಾ ಸಂದರ್ಭನುಸಾರ ಬರೆದ ಬಿಡಿ ಲೇಖನಗಳಾಗಿವೆ. ಮೂರನೆಯ ಭಾಗ 'ಸಮೀಕ್ಷೆ'ಯಲ್ಲಿ ಮೂರು ಲೇಖನಗಳಿದ್ದು, ಜನಪದ ಅಧ್ಯಯನ ಕುರಿತಂತೆ ಸ್ವಾತಂತ್ರ್ಯಪೂರ್ವದಲ್ಲಿ, ಸ್ವಾತಂತ್ರ್ಯನಂತರದ ಕಾಲದಲ್ಲಿ ಬೆಳೆದು ಬಂದ ನಡೆ, ನಂತರ ಅದು ಪಡೆದುಕೊಂಡ ತಿರುವುಗಳನ್ನು ಕುರಿತ ಸ್ಪಷ್ಟ ಮಾಹಿತಿ ಒಳಗೊಂಡಿದೆ.

'ಜನಪದ ಕಲಾವಿಹಾರದಲ್ಲಿ' ವೈವಿಧ್ಯಮಯವಾದ ಜನಪದ ವಿಷಯ ಸಂಗ್ರಹವಿದ್ದು, ಜನಪದ ವ್ಯಕ್ತಿ ಚಿತ್ರಣವೂ ಇದರಲ್ಲಿದೆ. ಕೃತಿಯನ್ನು ಕರ್ನಾಟಕ ಜಾನಪದ ಕ್ಷೇತ್ರದ ಭೀಷ್ಮ 'ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್' ಇವರಿಗೆ ಅರ್ಪಣೆ ಮಾಡಿದ್ದಾರೆ. ಗೊರೂರು ಸಾಹಿತ್ಯ, ಜನಪದದ ಒಡನಾಟ, ಅವರ ಜನಪದ ಕೃತಿಗಳನ್ನು ಕುರಿತ ವಿಶ್ಲೇಷಣೆ ಮಾಡಿದ ಒಂದು ಲೇಖನವೂ ಇದರಲ್ಲಿ ಸೇರ್ಪಡೆಯಾಗಿದೆ.

ಮೂರನೆಯ ವಿಭಾಗದಲ್ಲಿ 'ತಮಿಳುನಾಡಿನ ಜನಪದ'ವನ್ನು ಕುರಿತಂತೆ ತಮಿಳುನಾಡಿನ ವಿಸ್ತಾರ, ಆಕಾರ, ಆಹಾರ, ಭಾಷೆ, ಎಲ್ಲೆಗಳು; ಭೌಗೋಳಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಜನಪದೀಯ ನೆಲೆಯಲ್ಲಿ ದರ್ಶನ ಮಾಡಲಾಗಿದೆ. ತಮಿಳುನಾಡಿನ ಆಚಾರ, ವಿಚಾರ, ಸಂಪ್ರದಾಯಗಳ ಪೂರ್ಣ ಮಾಹಿತಿ ಸಿಗುವಂತಹ ವಿಶಿಷ್ಟತೆಯಿಂದ ಕೂಡಿದ ಕೃತಿಯಾಗಿದೆ.

'ನಮ್ಮ ಜನಪದ ಸಮೀಕ್ಷೆಯು ಸಮಗ್ರವಾಗಿ ಆಗಿದೆ ಎಂದು ಹೇಳಲಾರೆ. ೧೯೭೦ರ ಈಚಿನ ಕೃತಿಗಳ ಸಮೀಕ್ಷೆಯನ್ನು ಇಲ್ಲಿ ನೀಡಲು ಸಾಧ್ಯವಾಗಿಲ್ಲ. ಹೀಗಾಗಿ ಇಲ್ಲಿನ

ಬರಹಗಳ ಆಕರಗಳೇನು ಎಂಬುದು ನನ್ನ ಗಮನದಲ್ಲಿದೆ ಎಂದು ಹೇಳುವ ಲೇಖಕರಿಗೆ, ಈ ಕೃತಿಯ ಕೊರತೆಗಳ ಸ್ಪಷ್ಟ ಚಿತ್ರಣವಿದೆ. ಈ ಕೃತಿಗೆ ಹೆಸರು ಸೂಚಿಸಿದವರು ಹಾ.ಮಾ.ನಾಯಕರು ಎಂದು ಕೃತಜ್ಞರಾಗುತ್ತಾರೆ. ಈ ಸಂಗ್ರಹ ಪೂರ್ಣವಾದ ಬಿಡಿ ಲೇಖನಗಳು ತಮಿಳುನಾಡಿನ ಜನಪದ, ಹೀಗೆ ಎಲ್ಲವೂ ಅಧ್ಯಯನಯೋಗ್ಯವಾದ ಜನಪದ ಸಂಪತ್ತನ್ನು ತುಂಬಿಕೊಡುವಂತಹ ಮಹತ್ವದ ಕೃತಿ ಎನ್ನಬಹುದು.

ಸುಶೀಲಾ ಸದಾಶಿವಯ್ಯ

೯೩. ಚಂದ್ರಶೇಖರ ಕಂಬಾರರು ಹೇಳಿದ 'ಬೇಡರ ಹುಡುಗ ಮತ್ತು ಗಿಳಿ' (ಮಕ್ಕಳ ಕತೆಗಳು)

ಬೇಡರ ಹುಡುಗ ಮತ್ತು ಗಿಳಿ, ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ೫೩, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು–೫೬೦೦೦೪, ಮರುಮುದ್ರಣ–೨೦೧೨, ಪುಟ–೩೬, ಬೆಲೆ ರೂ. ೪೦/-

ಜಾನಪದ ಕತೆಗಳಿಗೆ ಇರುವ ವಿಶ್ವವ್ಯಾಪಿ ಗುಣ ಬೆರಗು ಹುಟ್ಟಿಸುವಂತಹದು. ಕತೆಗಳ ಹುಟ್ಟು ಬಹುಶಃ ಭಾಷೆಯ ಹುಟ್ಟಿನಷ್ಟೇ ಪ್ರಾಚೀನ. ಮನುಷ್ಯನ ಆಲೋಚನಾ ಶಕ್ತಿ, ಕಲ್ಪನಾಪ್ರತಿಮೆ, ವಿಶ್ಲೇಷಣಾ ಸಾಮರ್ಥ್ಯಗಳು ಇಂಥ ಕತೆಗಳಲ್ಲಿ ಹರಳುಗಟ್ಟಿಕೊಂಡಿರುತ್ತವೆ. ಅವು ಮನುಕುಲದ ಮನೋವಿಕಾಸದ ಚರಿತೆಯನ್ನೂ ಹೇಳಬಲ್ಲವು. ಆದ್ದರಿಂದ ಅವು ಭಾಷಾಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ ಸಂಸ್ಕೃತಿ ಅಧ್ಯಯನ ಮುಂತಾದ ಕ್ಷೇತ್ರಗಳ ಸಂಶೋಧನೆಗೆ ಪ್ರಮುಖ ಆಕರಗಳಾಗಿ ನಿಲ್ಲಬಲ್ಲವು. ಕಾಲ–ದೇಶ–ವ್ಯಕ್ತಿಯ ಗುರುತುಗಳನ್ನೂ ಮೀರಿ ಎಲ್ಲೆಡೆ ಹರಡಿರುವ ಈ ಕತೆಗಳು ಇತಿಹಾಸಕ್ಕಿಂತ ಪ್ರಾಚೀನವಾದವುಗಳು. ಮನುಷ್ಯನ ಸ್ಮೃತಿಗಳಲ್ಲಿ ನೆಲೆಸಿದ ಇಂಥ ಕಥನಗಳು ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದಿವೆ.

'ಬೇಡರ ಹುಡುಗ ಮತ್ತು ಗಿಳಿ' ಎಂಬ ಈ ಪುಟ್ಟ ಕೃತಿ ಆರು ಬಿಡಿಬಿಡಿ ಕಥಾನಕಗಳ ಗುಚ್ಛ. ಶೀರ್ಷಿಕೆಯಲ್ಲೇ ಹೇಳಿರುವಂತೆ ಇದು ಚಂದ್ರಶೇಖರ ಕಂಬಾರರು 'ಹೇಳಿದ' ಕಥೆ. ಇದಕ್ಕೆ ಇರುವ ಕಥನ ವಿನ್ಯಾಸವು ಬರಹದ ಮಾದರಿಗಿಂತ ಮೌಖಿಕವಾದ ವರ್ಣನಾತ್ಮಕ ಮಾದರಿಗೆ ಹತ್ತಿರವಾದುದು. 'ಹೇಳಿದ' ಕತೆಯು 'ಕೇಳಿದ' ಕತೆಯೂ ಆಗಿರುವುದು ಮೌಖಿಕ ಪರಂಪರೆಯ ವಿಶೇಷ. ಕಂಬಾರರು ತಾವು 'ಕೇಳಿದ' ಕಥೆಯನ್ನು ತಮ್ಮ ಗ್ರಹಿಕೆಯ ವಿಧಾನ ಹಾಗೂ ನಿರೂಪಣಾ ವಿಧಾನದಲ್ಲಿ ಮತ್ತೊಮ್ಮೆ ಓದುಗರ ಮುಂದೆ ಬಿಚ್ಚಿಟ್ಟಿದ್ದಾರೆ. ಹೀಗೆ ನಿರೂಪಿಸುವಾಗ ಮೂಲ ಕಥೆಗೆ ಒಂದು ವೈಯಕ್ತಿಕತೆಯ ಸ್ಪರ್ಶ ಸೇರಿಕೊಳ್ಳುತ್ತಾ ಹೋಗುತ್ತದೆ. ಅದು ಆ ಸಂದರ್ಭದಲ್ಲಿ ನಿರೂಪಕನ ಕತೆಯೇ

ಬೆಳೆಸುತ್ತಾನೆ. ಪಯಣದಲ್ಲಿ ನೀರುತುಂಬಿದ ಕೆರೆ, ಕುಂಟನ ಕುಂಟುತನ, ಹುತ್ತದೊಳಗೆ ಹೊರಬರಲಾಗದಂತೆ ಸಿಲುಕಿಕೊಂಡ ಸರ್ಪ ಇವುಗಳು ಎದುರಾಗುತ್ತವೆ. ಅವುಗಳ ಸ್ಥಿತಿಗೆ ಕಾರಣವೇನು? ಎಂಬ ಪ್ರಶ್ನೆಯನ್ನೂ ಅವನೀಗ ತನ್ನ ಜೊತೆ ಹೊತ್ತೊಯ್ಯುತ್ತಾನೆ. ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆ ಬೆಳೆಯುತ್ತ ಕಥೆಯಲ್ಲಿ ಕುತೂಹಲ ಹೆಚ್ಚುತ್ತ ಹೋಗುತ್ತದೆ. ಕಥೆಯ ಕೊನೆಯಲ್ಲಿ ಒಗಟನ್ನು ಒಡೆದಂತೆ ಉತ್ತರ ಸಿಗುತ್ತದೆ. ಉತ್ತರ ಕೊಟ್ಟಿದ್ದು ಮಾತ್ರ ಆಗತಾನೆ ಜನಿಸಿದ ಕೂಸು! ಕೊನೆಯಲ್ಲಿ ಹುಡುಕದೇ ಉತ್ತರ ತಿಳಿದಿದೆ. ಆದರೆ ಉಳಿದವರೆಲ್ಲ ಅದನ್ನು ಮರೆತು ಹುಡುಕುತ್ತಾ ಅಲೆಯುತ್ತಾರೆ. ಸಂಕಟ ಅನುಭವಿಸುತ್ತಾರೆ! ಕಥೆ ಒಂದು ದರ್ಶನವನ್ನೇ ತುಂಬ ಸರಳ ಒಗಟಿನ ರೀತಿಯಲ್ಲಿ ಕಟ್ಟಿಕೊಟ್ಟು ಮಗುವಿನ ಅಭೋದ ನಗುವಿನಂತೆ ಮರೆಯಲ್ಲಿ ನಿಂತುಬಿಡುತ್ತದೆ. ಇದು ಜನಪದ ಕಥನಗಳ ಶಕ್ತಿಯೂ ಹೌದು.

'ರಾಮ-ಭೀಮ' ಕತೆ ವಾಸ್ತವದ ಯುಕ್ತಿ ಹಾಗೂ ಮಾಂತ್ರಿಕತೆಯ ಶಕ್ತಿಯನ್ನು ಸರಿಬೆರೆಸಿಕೊಂಡು ಸೃಷ್ಟಿಯಾಗಿದೆ. ರಾಜ್ಯ ಕಳೆದುಕೊಂಡ ರಾಜಕುಮಾರರು ಮತ್ತೆ ರಾಜ್ಯ ಪಡೆದುಕೊಂಡ ಕತೆಯನ್ನು ಹೇಳುವ ಈ ಕಥನವು ಮಾಂತ್ರಿಕ ಶಕ್ತಿಯಿಂದ ಘಟಿಸುವ ಅತಿಮಾನುಷ ಘಟನೆಗಳನ್ನು ನಿರ್ಮಿಸುತ್ತದೆ. ಇಂಥ ಘಟನೆಗಳ ಹಿನ್ನೆಲೆಯಲ್ಲಿ ಮನುಷ್ಯ ಸ್ವಭಾವವನ್ನು ವಿಶ್ಲೇಷಿಸುತ್ತದೆ. ಮನುಷ್ಯನ ಸ್ವಾರ್ಥ, ಕ್ರೌರ್ಯ, ಲಾಲಸೆ, ಕ್ಷುದ್ರತೆಗಳಿಗೆ ಕನ್ನಡಿ ಹಿಡಿಯುತ್ತದೆ. ಮತ್ತೆಮತ್ತೆ ತಪಸ್ವಿಗಳಿಂದ ಮಾಂತ್ರಿಕ ಶಕ್ತಿಯನ್ನೂ ಪಡೆದು ವಿಶೇಷ ಬಲಪಡೆಯುವ ಭೀಮನನ್ನು ಒಬ್ಬಳು ನರ್ತಕಿ ಹಾಗೂ ಅವಳ ತಾಯಿ ನಾಜೂಕಿನಿಂದ ಮೋಸಗೊಳಿಸಿ ಅವನನ್ನು ದುರ್ಬಲಗೊಳಿಸುವ ತಂತ್ರಗಾರಿಕೆ ಕತೆಯಲ್ಲಿ ವಿಶೇಷವಾಗಿ ಗಮನಸೆಳೆಯುತ್ತದೆ. ಮಾವಿನಹಣ್ಣು ತಿಂದವನು ರಾಜ ನಾಗುವುದು, ಗೊರಟು ತಿಂದವನು ನಕ್ಕಾಗಲೆಲ್ಲ ಮುತ್ತು ಸುರಿಯುವುದು, ಸನ್ಯಾಸಿಯಿತ್ತ ದಂಡ, ಚೀಲ, ಪಾದುಕೆ, ಟೋಪಿಗಳಿಂದ ಕ್ರಮವಾಗಿ ಬೇಡಿದ ಪದಾರ್ಥಗಳನ್ನು ಪಡೆಯುವುದು, ಹೊರಪಟ್ಟಣವನ್ನು ನಿರ್ಮಿಸುವುದು, ಇಚ್ಛಿಸಿದಲ್ಲಿ ಸಂಚರಿಸುವುದು, ವೈರಿಗಳನ್ನು ಹಿಮ್ಮೆಟ್ಟಿಸುವುದು ಇವೆಲ್ಲ ಸಾಧ್ಯವಾಗುತ್ತವೆ. ಈ ಎಲ್ಲ ರಮ್ಯ ಕಲ್ಪನಾಶೀಲತೆ ಯಿಂದಾಗಿ ಕತೆ ಇಷ್ಟವಾಗುತ್ತದೆ.

'ಹುಚ್ಚಯ್ಯ' ಎಂಬ ಕತೆಯಲ್ಲಿ ಹುಚ್ಚನೋರ್ವನ ಅರ್ಥವಿಲ್ಲದ, ಅತಾರ್ಕಿಕ ಮಾತುಗಳೇ ಅವನ ಅಣ್ಣಂದಿರಿಗೆ ವರದಾನವಾಗುವ ಸನ್ನಿವೇಶವಿದೆ. ಕತೆಯಂತೆ ಬದುಕೂ ಕೂಡ ಅತಾರ್ಕಿಕವಾದ ಬಿಡಿ ಸನ್ನಿವೇಶಗಳ ಒಂದು ಸರಪಣಿ. ಅನಿರೀಕ್ಷಿತವಾಗಿ ಒದಗುವ ಸನ್ನಿವೇಶಗಳು ಬದುಕನ್ನು ನಿಯಂತ್ರಿಸುತ್ತಿರುತ್ತವೆ. ಇವು ಶಿಸ್ತುಬದ್ಧ-ತಾರ್ಕಿಕ ವಿಶ್ಲೇಷಣೆಯಿಂದಾಚೆಯೇ ಉಳಿದುಬಿಡುತ್ತವೆ. ಈ ಅರಿವು 'ಹುಚ್ಚಯ್ಯ' ಕತೆಯಲ್ಲಿ ಧ್ವನಿಪೂರ್ಣವಾಗಿ ವ್ಯಕ್ತವಾಗಿದೆ. ಕತೆಯಲ್ಲಿ ಬೆರೆತ ತೆಳುವಾದ ಹಾಸ್ಯವು ಕತೆಗೆ ಮೆರುಗನ್ನುಂಟುಮಾಡಿದೆ.

'ಕಾಗೆ ಮತ್ತು ಜಿಂಕೆ' ಗೆಳೆತನದ ನಿಜವಾದ ಕಾಳಜಿಯನ್ನು ಕುರಿತು ಹೇಳುವ ಕತೆಯಾಗಿ ಮೇಲ್ನೋಟಕ್ಕೆ ತೋರಿದರೂ ಇದರಲ್ಲಿ ತಂತ್ರ-ಪ್ರತಿತಂತ್ರಗಳ ಆಕರ್ಷಣೀಯ ಹೆಣಿಗೆಯು ಬುದ್ಧಿಯನ್ನು ಮಸೆಯುವಂತಿದೆ. ಮಿಂಚಿನಂತೆ ಘಟಿಸುವ ಘಟನಾವಳಿಗಳು ಕತೆಗೆ ಕ್ರಿಯಾತ್ಮಕ ಆಯಾಮವನ್ನು ಕೊಟ್ಟಿವೆ. ಕತೆಯಲ್ಲಿ ನರಿಯ ತಂತ್ರವು ಜಿಂಕೆಯನ್ನು ಕಬಳಿಸಲು ಆಗಿದ್ದರೆ, ಕಾಗೆಯ ಪ್ರತಿತಂತ್ರವು ಜಿಂಕೆಯನ್ನು ಉಳಿಸುವುದಕ್ಕೋಸ್ಕರವಾಗಿದೆ.

'ರಾಜಶೇಖರ' ಎಂಬ ಕಥೆಯಲ್ಲಿ ಎಂಥ ಸವಾಲುಗಳನ್ನೂ ದಿಟ್ಟತನದಿಂದ ಹಾಗೂ ಬುದ್ಧಿ ಸೂಕ್ಷ್ಮತೆಯಿಂದ ಎದುರಿಸಿ ಗೆಲ್ಲುವ ನಾಯಕನ ಚಿತ್ರಣವಿದೆ. ಸಾಹಸಪ್ರಿಯತೆಯನ್ನು ಉತ್ತೇಜಿಸುವ ಇಂಥ ಕತೆಗಳು ನಾಯಕನ ಮಾದರಿಯೊಂದನ್ನು ಜನಸಮೂಹದ ಮನದಲ್ಲಿ ಅಚ್ಚೊತ್ತುವಂತೆ ಮಾಡುತ್ತವೆ. ಅರವತ್ನಾಲ್ಕು ಕಲೆಗಳಲ್ಲಿ ಕಳ್ಳತನವೂ ಒಂದು ಕಲೆ! 'ರಾಜಶೇಖರ' ಕಳ್ಳತನವನ್ನೂ ಕಲಿಯಬೇಕಾದ ಸಂದರ್ಭವೊಂದು ಕತೆಯಲ್ಲಿ ಉಂಟಾಗುತ್ತದೆ. ಮೈಯೆಲ್ಲ ಎಚ್ಚರವಾಗುವ ಜಾಗೃತಿ, ತಪ್ಪಿಸಿಕೊಳ್ಳುವ ಚಾಕಚಕ್ಯತೆ, ನಿಪುಣತೆಗಳು ಆಟದ ಮೋಜನ್ನೂ, ಚಕಿತಗೊಳಿಸುವ ಕಲೆಯ ಗುಣವನ್ನೂ ಕತೆಯೊಳಗೆ ಪಸರಿಸುತ್ತವೆ.

ಕಟ್ಟುಕತೆ ಎಂಬುದೇ ವಾಸ್ತವದ ಚೌಕಟ್ಟನ್ನು ದಾಟಿ ಅನಂತವಾಗಿ ಬೆಳೆಯಬಲ್ಲ ಸಾಧ್ಯತೆಯನ್ನು ಒಳಗೊಂಡಿರುವುದು. ವಾಸ್ತವದಲ್ಲಿ ಅದು ಕಟ್ಟಿಲ್ಲದ ಕತೆ! ತನ್ನ ಕಲ್ಪನಾಶಕ್ತಿಯಿಂದ ರೋಮಾಂಚನವನ್ನುಂಟುಮಾಡುವಂಥದ್ದು. ಮನೋರಂಜನೆಯ ಮೂಲಕ ನೀತಿಯನ್ನೂ ಪಸರಿಸುತ್ತ ತರ್ಕಶಕ್ತಿಯನ್ನು ಬೆಳೆಸುವಂತಹದು. ಅಂಥ ಎಲ್ಲ ಬಗೆಯ ಗುಣಲಕ್ಷಣಗಳನ್ನು ಹೊಂದಿದ 'ಬೇಡರ ಹುಡುಗ ಮತ್ತು ಗಿಳಿ' ಜಾನಪದ ಕಥನದ ದೇಶೀಯ ಸೊಗಡಿಗೆ ಮಾದರಿ.

ಪ್ರೊ. ಗೀತಾ ವಸಂತ್

೯೪. ಚಂದ್ರಶೇಖರ ಕಂಬಾರರು ಹೇಳಿದ ಸವದತ್ತಿ ಎಲ್ಲಮ್ಮ

ಸವದತ್ತಿ ಎಲ್ಲಮ್ಮ, ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ೫೩, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು-೫೬೦೦೦೪, ಮರುಮುದ್ರಣ-೨೦೧೨, ಪುಟ-೨೮, ಬೆಲೆ ರೂ. ೪೦/-

ಸವದತ್ತಿ ಎಲ್ಲಮ್ಮ ಕರ್ನಾಟಕದ ಸುಪ್ರಸಿದ್ಧ ಶಕ್ತಿದೇವತೆ. ಈ ದೇವತೆಯ ಐತಿಹಾಸಿಕ ವಿಕಾಸ ಕ್ರಮವನ್ನು ಗಮನಿಸಿದಾಗ ಅನೇಕ ಕುತೂಹಲಕಾರಿ ಅಂಶಗಳು ತೆರೆದುಕೊಳ್ಳುತ್ತವೆ. ಶಿಷ್ಟ ಪುರಾಣಗಳಲ್ಲಿ ರೇಣುಕೆಯಾಗಿ ಕಾಣಿಸಿಕೊಳ್ಳುವ ಈಕೆ ಸ್ಥಳೀಯ ಪುರಾಣಗಳಲ್ಲಿ ಯಲ್ಲಮ್ಮ. ಏಳುಬೆಟ್ಟಗಳಿಂದ ಆವೃತವಾದ ಕಣಿವೆಯಲ್ಲಿ ನೆಲೆಗೊಂಡಿರುವ

ಈಕೆಯನ್ನು ಏಳುಕೊಳ್ಳದ ಯಲ್ಲಮ್ಮ ಎಂದೂ ಕರೆಯುವುದು ವಾಡಿಕೆ. ಸ್ಥಳೀಯ ಚರಿತ್ರೆ-ಪುರಾಣಗಳ ಕುರಿತು ಅಪಾರ ಆಸಕ್ತಿಯುಳ್ಳ ಡಾ.ಚಂದ್ರಶೇಖರ ಕಂಬಾರರು ಈ ಮಾತೃ ದೇವತೆಯನ್ನು, ಅವಳ ಮಹಾತ್ಮೆಯನ್ನು ಈ ಕೃತಿಯಲ್ಲಿ ನಿರೂಪಿಸಿದ್ದಾರೆ.

ಕಂಬಾರರು ಹೇಳಿದ ಯಲ್ಲಮ್ಮನ ಈ ಕಥೆ ಪುರಾಣ, ಚರಿತ್ರೆ ಹಾಗೂ ಐತಿಹ್ಯಗಳ ಮಿಶ್ರಣವಾಗಿದೆ. ಜನಪದರ ಹೃದಯಗಳಲ್ಲಿ ಹುಟ್ಟಿ ಅವರ ಕಂಠಗಳಲ್ಲಿ ಬೆಳೆದು ಉಳಿಯುವ ಕಥೆಗಳು ಕಾಲದಿಂದ ಕಾಲಕ್ಕೆ ಹೊಸರೂಪ ತಾಳುತ್ತ, ಹೊಸ ಕಲ್ಪನೆಗಳನ್ನು ಸೇರಿಸಿಕೊಳ್ಳುತ್ತ, ಹೊಸಕಾಲದ ಆಶಯಗಳಿಗೆ ಧ್ವನಿಯಾಗುತ್ತ ನಡೆಯುವುದು ಸಹಜವಾಗಿದೆ. ಕಂಬಾರರಿಗೆ ರೇಣುಕೆಯ ಕುರಿತಾದ ಶಿಷ್ಟ ಪುರಾಣಕ್ಕಿಂತ ಅವಳ ಜನಪದ ಹಿನ್ನೆಲೆ ಆಕರ್ಷಕವೆನಿಸಿದೆ. ನಿಸರ್ಗದ ಶಕ್ತಿಯನ್ನೂ ಸ್ತ್ರೀಶಕ್ತಿಯಾಗಿ ಆರಾಧಿಸುವ ಶಾಕ್ತ ಹಾಗೂ ತಾಂತ್ರಿಕ ಆರಾಧನಾ ಕ್ರಮದ ಹಿನ್ನೆಲೆಯಲ್ಲೂ ಯಲ್ಲಮ್ಮನ ಕತೆ ಹೊಸ ಅರ್ಥಗಳನ್ನು ಪಡೆದುಕೊಳ್ಳುತ್ತದೆ.

ಸವದತ್ತಿಯ ಸುತ್ತಮುತ್ತಲಿನ ನಿಸರ್ಗವನ್ನು ಗಮನಿಸಿದಾಗ ಸುತ್ತಲೂ ಆವೃತವಾದ ಬೆಟ್ಟಗಳು, ಆಳವಾದ ಕಣಿವೆಗಳು, ಗುಡ್ಡವನ್ನು ಸೀಳಿ ಹರಿಯುವ ನದಿ, ಕೊಳ್ಳಗಳು ನಿಸರ್ಗದ ಮಾಯೆಯನ್ನೇ ಸೃಷ್ಟಿಸಿವೆ. ಪ್ರಕೃತಿಯ ಈ ನಿಗೂಢ ಶಕ್ತಿಯು ಮನಸ್ಸಿನ ಪದರಗಳನ್ನು ಆಳವಾಗಿ ಪ್ರಭಾವಿಸುವಂತಿದೆ. ಆ ಪರಿಸರದ ಕುರಿತೇ ಅನೇಕ ಐತಿಹ್ಯ ಗಳಿದ್ದು ಅವುಗಳನ್ನು ಕಂಬಾರರು ಕಥನದ ಓಟಕ್ಕೆ ಭಂಗ ಬರದಂತೆ ನಿರೂಪಿಸುತ್ತಾರೆ. ನವಿಲುತೀರ್ಥ ಅಥವಾ ಒಡಕಹೊಳೆಯ ಕುರಿತಾದ ಐತಿಹ್ಯವೇ ಒಂದು ಆಕರ್ಷಕ ಕಥೆ. ಎಲ್ಲಮ್ಮನ ಒಟ್ಟೂ ಕಥಾನಕದಲ್ಲಿ ಇಂಥ ಉಪಕಥೆಗಳ ಕೊಳ್ಳಗಳೇ ಸಂಗಮಿಸಿವೆ. ನಿಸರ್ಗದ ಶಕ್ತಿಯ ಕುರಿತಾಗಿ ಐತಿಹ್ಯಗಳು ನಿರ್ಮಾಣ ವಾಗುವುದನ್ನು ನಾವು ಪರಂಪರೆಯುದ್ದಕ್ಕೂ ಗಮನಿಸಬಹುದು. "ಬೆಟ್ಟಕ್ಕಂಜಿ ಮಲಪ್ರಭೆ ಬೆಳವಲನಾಡ ಬಿದ್ದಳೋ..." ಎಂದು ಕೂಗುತ್ತ ಕೇಕೆ ಹಾಕಿ ಕುಣಿಯತೊಡಗಿದ ನವಿಲಿನಿಂದ ಅವಮಾನಕ್ಕೊಳಗಾದ ನದಿ ಸಿಟ್ಟಿಗೆದ್ದು ಗಕ್ಕನೆ ತಿರುಗುವುದು, ಆ ಗುಡ್ಡ ನವಿಲು ಸಹಿತ ಇಬ್ಭಾಗವಾಗುವುದು ಹಾಗೂ ಆ ಸ್ಥಳವೇ ನವಿಲುತೀರ್ಥವಾಗಿ ಪ್ರಸಿದ್ಧವಾಗುವುದು ಈ ಕತೆಯ ಮರ್ಮ. ಇಲ್ಲಿಂದಲೇ ಎಲ್ಲವ್ವ ಪತಿಪೂಜೆಗಾಗಿ ನೀರನ್ನು ಒಯ್ಯುತ್ತಿದ್ದಳು ಎಂಬ ಸಂಗತಿಯು ನವಿಲುತೀರ್ಥಕ್ಕೆ ಇನ್ನಿಲ್ಲದ ಮಹತ್ವವನ್ನು ತಂದುಕೊಡುತ್ತದೆ. ಸವದತ್ತಿ ಪರಿಸರದ ಜೋಗುಳ ಬಾವಿ, ಎಣ್ಣೆಹೊಂಡ, ಭೈರವನಾಥಮಠ; ಅಲ್ಲಿ ತ್ರಿಶೂಲ, ಕತ್ತಿ, ಕಪಾಲ ಧರಿಸಿದ ಕಾಲಭೈರವನ ವಿಗ್ರಹ, ಅಲ್ಲಿರುವ ಎಕ್ಕಯ್ಯ ಜೋಗಯ್ಯರ ಪಾದುಕೆಗಳು, ಆ ಸ್ಥಳವು ನಾಥಪಂಥೀಯ ಸಿದ್ಧರ ಸಾಧನಾ ಕ್ಷೇತ್ರವೂ ಆಗಿತ್ತೆಂಬುದನ್ನು ಸೂಚಿಸುತ್ತದೆ. ಎಲ್ಲಮ್ಮನ ಸುತ್ತಲೂ ನಿರ್ಮಾಣವಾಗಿರುವ ಐತಿಹ್ಯಗಳನ್ನು ಗಮನಿಸಿದರೆ ಆರ್ಯ-ದ್ರಾವಿಡ ಸಂಸ್ಕೃತಿಗಳು ಬೆರೆತುಹೋದ ಸಂಗತಿಯು ಗೋಚರವಾಗುತ್ತದೆ. ಎಲ್ಲಮ್ಮನ ಗುಡ್ಡದಲ್ಲಿಯೇ ಇರುವ ಪೀರಬವರ ಶಹಾವಲಿ ದರ್ಗಾ ಹಿಂದೂ ಮುಸ್ಲಿಂ

ಧಾರ್ಮಿಕ ಕೊಡುಕೊಳ್ಳುವಿಕೆಯ ಸಂಕೇತವಾಗಿ ನಿಂತಿದೆ. ಪುರಾಣದ ರೇಣುಕೆಗೂ ಸ್ಥಳೀಯ ಭೌಗೋಳಿಕ ವಿಸ್ಮಯದ ನಡುವೆ ನಿಂತ ಶಕ್ತಿದೇವತೆಗೂ ಇರುವ ಸಂಬಂಧದ ಸಂಕೀರ್ಣ ವಿನ್ಯಾಸವು ಬೆಸೆದುಕೊಳ್ಳುತ್ತದೆ.

ಪುರಾಣದಲ್ಲಿ ಬರುವ ಕಥೆಗಿಂತ ಜಾನಪದ ಕಥೆಗಳಲ್ಲಿ ಮೂಡಿಬರುವ ಎಲ್ಲಮ್ಮನ ಚಿತ್ರ ಕುತೂಹಲಕರವಾಗಿದೆ ಎಂದು ಕಂಬಾರರು ಅಭಿಪ್ರಾಯಪಡುತ್ತಾರೆ. ಜಾನಪದ ಕತೆಗಳಲ್ಲಿನ ವೈವಿಧ್ಯದಿಂದಾಗಿ ಇದು ಇನ್ನಷ್ಟು ಗಮನಸೆಳೆಯುತ್ತದೆ. ಆದಿಶಕ್ತಿಯೇ ಕಲಿಯುಗದಲ್ಲಿ ಎಲ್ಲಮ್ಮನಾಗಿ ಅವತರಿಸಿದಳು ಎಂಬ ಕಥೆಯೊಂದಿಗೆ ಆ ಭಾಗದ ಇತರ ಸ್ಥಳೀಯ ದೇವತೆಗಳಿಗೂ ಎಲ್ಲಮ್ಮನಿಗೂ ಸಂಬಂಧವನ್ನು ಬೆಸೆಯುವ ಕಥೆಗಳು ಹುಟ್ಟಿಕೊಂಡು ಅವಳನ್ನು ಈ ನೆಲದ ದೇವತೆಯಾಗಿ ಸ್ಥಾಪಿಸಿವೆ. ಶಿವನ ಕುಡಿಹುಬ್ಬಿನಿಂದ ಬಂದ ಬೆವರಿನಿಂದ ಎಲ್ಲಮ್ಮ ಸೃಷ್ಟಿಯಾದಳು ಎಂಬ ಕಥಾನಕ ತುಂಬ ಕುತೂಹಲ ಭರಿತವಾಗಿದೆ. ಈ ಕಥೆಯಲ್ಲಿ ಎಲ್ಲಮ್ಮ ಜಮದಗ್ನಿಯ ಪತ್ನಿಯಲ್ಲ. ಎಲ್ಲಮ್ಮನ ಮೈವಾಸನೆಯಿಂದ ಪುಲಕಿತನಾದ ಜಮದಗ್ನಿ ಮಹರ್ಷಿಯ ಮೈ ಬೆವರುತ್ತದೆ. ಆ ಬೆವರು ಸಮುದ್ರದಲ್ಲಿ ಬಿದ್ದು ಹೂವಾಗಿ ರೂಪಾಂತರ ಹೊಂದಿ, ಆ ಹೂವು ತೇಲುತ್ತ ಬಂದು ಎಲ್ಲಮ್ಮನನ್ನು ಸ್ಪರ್ಶಿಸಿದಾಗ ಆಕೆ ಗರ್ಭಧರಿಸುತ್ತಾಳೆ. ಸೃಷ್ಟಿಯ ಕುರಿತ ವಿಭಿನ್ನ ಪರಿಕಲ್ಪನೆ ಈ ಕತೆಗಳ ಹಿಂದಿದೆ.

ಪಾತಿವ್ರತ್ಯದ ಕುರಿತು ಈ ಕಥೆಯಲ್ಲಿ ಶಂಕಿಸುವವನು ಎಲ್ಲಮ್ಮನ ಮಗನಾದ ಪರಶುರಾಮ. ಏಕೆಂದರೆ, ಕತೆಯ ಪ್ರಕಾರ ಜಮದಗ್ನಿಗೆ ಎಲ್ಲಮ್ಮನೊಡನೆ ನೇರ ಸಂಬಂಧವೇ ಇಲ್ಲ. ತನ್ನ ತಂದೆ ಯಾರು? ಎಂಬ ಪ್ರಶ್ನೆಯಿಂದ ಆತ ತಾಯಿಯನ್ನು ಹಿಂಸಿಸುತ್ತಾನೆ. ಇಲ್ಲಿಯೂ ಶೀಲ, ವಂಶಪಾವಿತ್ರ್ಯದ ಪ್ರಶ್ನೆಗಳು ತಲೆದೋರಿವೆ. ನೀನು ನಿಜವಾದ ಪತಿವ್ರತೆಯೇ ಆಗಿದ್ದರೆ ಮೀಸಲಳಿಯದ ಊಟಹಾಕು ಎಂದು ಪಂಥಾಹ್ವಾನ ನೀಡುವ ಪರಶುರಾಮ, ದೊಡ್ಡ ಕಂದಕದ ಮೇಲೆ ಏಳು ದಾರಗಳ ಸೇತುವೆ ಕಟ್ಟಿ ಅದನ್ನು ದಾಟಿ ಬಂದರಷ್ಟೇ ನೀನು ಪತಿವ್ರತೆ ಎಂಬ ದಿವ್ಯವನ್ನು ಒಡ್ಡುತ್ತಾನೆ. ಅಗ್ನಿದಿವ್ಯ, ನಾಗದಿವ್ಯಗಳಂತೆಯೇ ಇದೂ ಭಾಸವಾಗುತ್ತದೆ. ತಂದೆ, ಪತಿ, ಕೊನೆಗೆ ಪುತ್ರ ಹೀಗೆ ಪಿತೃಸಂಸ್ಕೃತಿಯ ಮೂಲಕ ಹಿಂಸೆಗೊಳಗಾಗಿ ಅದನ್ನು ಜಯಿಸಿ ದೇವತೆಯಾಗುವ ಸ್ತ್ರೀಯ ಚಿತ್ರಣವು ನಮ್ಮ ಜನಪದ ಸಂಸ್ಕೃತಿ ಚಿಂತನೆಗಳಿಗೆ ಹೊಸ ದಿಶೆಯನ್ನು ಕೊಡಬಲ್ಲ ಅಂಶವಾಗಿದೆ.

ಪಂಥಾಹ್ವಾನವನ್ನು ಗೆಲ್ಲುವ ಎಲ್ಲಮ್ಮ ಬಂಡಾರ ಎರಚಿ ಬಂಡೆಯ ಮೇಲೆ ಬೆಳೆ ಬೆಳೆಯುವುದು, ಇಬ್ಬನಿಯನ್ನು ಸೆರಗಿನಲ್ಲಿ ಸಂಗ್ರಹಿಸಿ ಮರಳ ಮಡಕೆಯಲ್ಲಿ ತುಂಬುವುದು, ಹಾವನ್ನೇ ಸಿಂಬೆ ಮಾಡಿ ಗಡಿಗೆ ಹೊರುವುದು, ಕೊನೆಯಲ್ಲಿ ಏಳು ದಾರಗಳ ಮೇಲೆ ಸಮತೋಲನ ತಪ್ಪದಂತೆ ನಡೆಯುತ್ತ ಕಾರ್ತವೀರ್ಯನ ನೆರಳು ಹಾಯ್ದು ಧ್ಯಾನ ಭಂಗವಾಗಿ ಮರಳಮಡಕೆ ಒಡೆದುಹೋಗುವುದು ಮುಂತಾದ ಘಟನೆಗಳಲ್ಲಿ ನಡೆಯುವ

ಪವಾಡಸದೃಶಗಳು ಕೇಳುಗರನ್ನು ವಿಸ್ಮಿತಗೊಳಿಸುತ್ತವೆ. ಯಾವುದು ಅಸಾಧ್ಯವೋ ಅದನ್ನು ಸಾಧ್ಯವಾಗಿಸುವುದೇ ಶಕ್ತಿ. ಅಂಥ ಶಕ್ತಿಯ ನಿಗೂಢ ನೆಲೆಯಾಗಿ ಎಲ್ಲಮ್ಮ ಕಾಣಿಸುತ್ತಾಳೆ.

ಜನಪದ ಕಥೆಯಲ್ಲೂ ಸಹ ತಂದೆಯ ಆಣತಿಯಂತೆ ಪರಶುರಾಮ ಎಲ್ಲಮ್ಮನ ತಲೆ ಕಡಿಯುತ್ತಾನೆ. ಆದರೆ ಅವನು ಕಡಿದಂತೆ ತಲೆ ಮತ್ತೆ ಮತ್ತೆ ಚಿಗುರುತ್ತದೆ. ಹೀಗೆ ಕಡಿದ ತಲೆಗಳೇ ಮಾರಿ, ಸಿಡುಬು, ಪ್ಲೇಗು ಮುಂತಾದ ಬೇನೆಗಳಾಗುತ್ತವೆ. ರೋಗ ಹಾಗೂ ಮರಣಗಳಿಂದ ಕಾಪಾಡುವ ಮಹಾಮಾತೃಶಕ್ತಿಯಾಗಿ ಕಂಗೊಳಿಸುವ ಶಕ್ತದೇವತೆಗಳು ಭಾರತೀಯ ಮನಸ್ಸಿನ ಮೇಲೆ ಬೀರಿದ ಪರಿಣಾಮ ಗಾಢವಾದುದು. ಕಡಿದಷ್ಟೂ ಚಿಗುರುವ ಅವಳ ತಲೆಗಳು ಎಂಥ ಹಿಂಸೆ ಹಾಗೂ ವಿನಾಶದ ಹುನ್ನಾರವನ್ನೂ ಹಿಮ್ಮೆಟ್ಟಿ ಸಾಗುವ ಬದುಕಿನ ಸೃಷ್ಟಿಶೀಲತೆಯನ್ನು, ಮಾತೃಸಂಸ್ಕೃತಿಯ ಅಂತಃಸತ್ವವನ್ನು ರೂಪಕಾತ್ಮಕವಾಗಿ ಎಲ್ಲಮ್ಮನ ಕತೆ ಪ್ರತಿನಿಧಿಸುತ್ತದೆ. ಪುರಾಣ ಹಾಗೂ ಜಾನಪದ ಕತೆಗಳು ಒಂದನ್ನೊಂದು ಪ್ರಭಾವಿಸುತ್ತ, ಒಂದರಲ್ಲೊಂದು ಬೆರೆಯುತ್ತ ಬಂದ ವಿನ್ಯಾಸವನ್ನು ಕಂಬಾರರ 'ಸವದತ್ತಿ ಎಲ್ಲಮ್ಮ' ಎಂಬ ಕತೆಯಲ್ಲಿ ಕಾಣಬಹುದು. ಮೂಲತಃ ಪುರಾಣ ಕತೆ ಹಾಗೂ ಜನಪದ ಕತೆಗಳು ತಮ್ಮ ಸಡಿಲ ಬಂಧದಿಂದಾಗಿ ಕಾಲಕಾಲಕ್ಕೆ ಹೊಸಕಲ್ಪನೆಗಳನ್ನೂ ಸೇರಿಸಿಕೊಳ್ಳುತ್ತ ಹೊಸದಾಗಿ ಹರಿಯುವ ಗುಣ ಹೊಂದಿವೆ. ಸ್ಥಳೀಯತೆಯ ಅಂಶಗಳನ್ನೂ ಬೆರೆಸಿಕೊಂಡು ಸ್ಥಳೀಯ ಪುರಾಣವಾಗಿ ಬೆಳೆಯುವ ಬಗೆ ಕೂಡ ಕುತೂಹಲಕಾರಿಯಾಗಿದೆ. ಹಿಂಸಿಸಿದ ಪತಿ ಹಾಗೂ ಮಗನ ಧ್ವನಿಯೇ ತನಗೆ ಕೇಳಿಸದಷ್ಟು ದೂರವಿಟ್ಟ ಎಲ್ಲಮ್ಮನ ಆತ್ಮಸ್ಥೈರ್ಯ, ಸ್ವಾಭಿಮಾನಗಳು ಜನಪದ ನಂಬಿಕೆಯಾಗಿ ಹರಿದಾಡಿವೆ. ಕತೆಯಲ್ಲಿ ಹೇಳಿದ ಹಳ್ಳ-ಕೊಳ್ಳ, ಗುಡ್ಡ-ಗುಡಿ-ಗುಂಡಾರಗಳನ್ನು ಇಂದಿಗೂ ಸವದತ್ತಿ ಪರಿಸರದಲ್ಲಿ ಗುರುತಿಸಬಹುದಾಗಿದ್ದು ಅವು ಜನಪದರ ಭಕ್ತಿ ಹಾಗೂ ವಿಸ್ಮಯಗಳಿಗೆ ಕಾರಣವಾಗಿವೆ.

ಪ್ರೊ. ಗೀತಾ ವಸಂತ್

೯೫. ಪರಂಪರೆಯಲ್ಲಿನ ಒಗಟು, ಗಾದೆಯ ಕಥೆಗಳು

ಜನಪದ ಒಗಟು ಮತ್ತು ಗಾದೆಯ ಕಥೆಗಳು, ಸಂ. ಜೀನಹಳ್ಳಿ ಸಿದ್ದಲಿಂಗಪ್ಪ, ಶ್ರುತಿ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಹೊನ್ನಾಳಿ ತಾ, ದಾವಣಗೆರೆ ಜಿಲ್ಲೆ-೫೭೭೨೨೩, ಮರುಮುದ್ರಣ-೨೦೧೨, ಪುಟ-೧೨೮+೪, ಬೆಲೆ ರೂ. ೭೫/-

ಒಗಟು ಮತ್ತು ಗಾದೆ ಜನಪದರ ಭಾಷೆಯ ಹೊಳಪು, ಶಕ್ತಿ, ಜೀವನದ ಉತ್ಸಾಹ ಮತ್ತು ಮೌಲ್ಯಗಳನ್ನು ಪ್ರಸಾರ ಮಾಡುವ ಭಾಷಾ ಆಕರಗಳೆಂದು ಹೇಳಬಹುದು. ಅವು ಜನಪದರ ಅಂತರಂಗದ ಪ್ರತಿಬಿಂಬವಾಗಿದೆ. ಆದ್ದರಿಂದಲೇ ಸಾಹಿತ್ಯ

ವಿಮರ್ಶಕರಾದ ಶ್ರೀ ಎಸ್.ಶಿವಾನಂದರವರು ಜಾನಪದ ಕಥನಗಳನ್ನು 'ಮಾತಾಡುವ ಗಿಣಿಗಳು' ಎಂದು ಕರೆಯುತ್ತಾರೆ. ಜನಪದ ಒಗಟು, ಜನಪದರ ಭಾಷಾ ಚಮತ್ಕಾರ, ಬುದ್ಧಿವಂತಿಕೆ, ಸೃಜನಶೀಲತೆ ಅವರ ಆಲೋಚನೆಯನ್ನು ಹಿಡಿದಿಟ್ಟರೆ, ಗಾದೆಗಳು ಚಿಕ್ಕದರಲ್ಲಿ ಹಿರಿದಾದ ಅರ್ಥಕೊಡುವ ಜೀವನ ಮೌಲ್ಯಗಳನ್ನು ಹೊರಹೊಮ್ಮಿಸುತ್ತವೆ. ಈ ನಿಟ್ಟಿನಲ್ಲಿ ಇಂತಹ ಒಗಟು ಮತ್ತೆ ಗಾದೆಗಳಿಂದ ಹುಟ್ಟಿದ ಕಥೆಗಳನ್ನು ಜೀನಹಳ್ಳಿ ಸಿದ್ಧಲಿಂಗಪ್ಪನವರು 'ಜಾನಪದ ಒಗಟು ಮತ್ತು ಗಾದೆಯ ಕಥೆಗಳು' ಎನ್ನುವ ಶೀರ್ಷಿಕೆಯಲ್ಲಿ ಸಂಗ್ರಹಿಸಿ, ೨೦೦೨ರಲ್ಲಿ ಮೊದಲ ಮುದ್ರಣ ಮಾಡಿದ ಕೃತಿ ಮತ್ತೆ ಪರಿಷ್ಕೃತಗೊಂಡು ೨೦೧೨ರಲ್ಲಿ ಎರಡನೆಯ ಮುದ್ರಣ ಬಂದಿದ್ದು ಜನಪದ ಒಗಟು ಮತ್ತು ಗಾದೆಯ ಕಥೆಗಳನ್ನು ಸಂಗ್ರಹಿಸುವ ಅಧ್ಯಯನ ಮಾಡುವ ಆಸಕ್ತರಿಗೆ ಕೈದೀವಿಗೆಯಾಗಿದೆ ಎಂಬ ಮಾತು ದಾರ್ಷ್ಟ್ಯವಲ್ಲ.

೨೦ ಒಗಟು ಕಥೆಗಳು, ೧೦ ಗಾದೆಯ ಕಥೆಗಳನ್ನು ಸಂಗ್ರಹಿಸಿರುವ ಜೀನಹಳ್ಳಿ ಸಿದ್ಧಲಿಂಗಪ್ಪನವರು ಜಾನಪದ ಆಕರಗಳನ್ನು ನೋಡುವ ಹೊಸನೋಟ ಹಾಗೂ ಅವರ ಕ್ಷೇತ್ರ(ಸಂಗ್ರಹ) ಕಾರ್ಯದ ಶ್ರಮಕ್ಕೆ ಕೃತಿಯ ಮರುಮುದ್ರಣ ಸಾಕ್ಷಿಯಾಗಿದೆ. ಈ ಕಥೆಗಳನ್ನು 'ಸ್ತ್ರೀವಾದಿ ಜನಪದ ಕಥೆಗಳು' ಸಂಕಲನದ ವಕ್ತೃ ಶಿದ್ಲಿಂಗಮ್ಮ, ಜನಪದ ಗಣಿತಜ್ಞ, ಹಳ್ಳಿ ಚಮತ್ಕಾರವಂತ, ಒಗಟುಜಾಣ, ಲಾವಣಿಕಾರ, ಕಥನಗಾರ ಎಂದು ಕತ್ತಿಗೆ ಗ್ರಾಮದ ಕವಸ್ತಾರ(ಕೊಡ್ಲಿ) ಶಿದ್ಲಿಂಗಜ್ಜನಿಗೆ ಹೇಳುತ್ತಾರೆ. ಇದೇ ಗ್ರಾಮದ ಗೌರಮ್ಮ, ಭದ್ರಾವತಿ ತಾಲ್ಲೂಕಿನ ಕಣಕಟ್ಟೆಯ ಶ್ರೀ ಟಿ.ಸಿ. ಬಸವರಾಜ್ ಹಾಗೂ ಅವರ ಸಹೋದರಿ ಶ್ರೀಮತಿ ರುದ್ರಮ್ಮ, ಹೊನ್ನಾಳಿ ತಾಲ್ಲೂಕಿನ ಸೋಮ ಮಲ್ಲಾಪುರದ ಕೆ. ನಾಗೇಂದ್ರಪ್ಪ, ಕಣಕಟ್ಟೆ ಚಿಕ್ಕಮಲ್ಲಪ್ಪ, ಹರಿಹರ ತಾಲ್ಲೂಕಿನ ಗುಡ್ಡದ ಬೇವಿನಹಳ್ಳಿ ಪುಟ್ಟಮ್ಮ ಮತ್ತು ಹೊನ್ನಾಳಿ ತಾಲ್ಲೂಕಿನ ಬಲ್ಮುರಿ ಸಿದ್ದಪ್ಪನವರಿಂದ ಸಂಗ್ರಹಿಸಲಾಗಿದೆ.

ಸಾಹಿತ್ಯ ವಿಮರ್ಶೆ ಮತ್ತು ಜಾನಪದ ಅಧ್ಯಯನ ಇಂದು ಪೂರಕವಾಗಿ ಬೆಳೆಯುತ್ತಿರುವುದು ನಾಡಿನ ಒಟ್ಟಾರೆ ಸಾಂಸ್ಕೃತಿಕ ಅಧ್ಯಯನಕ್ಕೆ ಸಹಕಾರಿಯಾಗಿದೆ. ಅದರಲ್ಲೂ ಜನಪದ ಕಥೆಗಳಲ್ಲಿ ಬರುವ ಸ್ತ್ರೀ ಬದುಕಿನ ನೋವು, ಸಂಕಟ, ಸಂಘರ್ಷ ಅವ್ಯಕ್ತ ಭಾವನೆಯಿಂದ ಸ್ತ್ರೀವಾದಿ ಚಿಂತನೆಯ ಮೂಲವನ್ನು ಅರ್ಥೈಸಿಕೊಳ್ಳಲು ಸಾಧ್ಯ. ಈ ಸಂಕಲನವು ಅದಕ್ಕೆ ಪೂರಕವಾಗಿ ಬಂದಿರುವುದು ಪ್ರಸ್ತುತ ಸಮಾಜಕ್ಕೆ ಅಗತ್ಯವಾಗಿದೆ.

ಭಾಷೆಯ ಶಕ್ತಿ, ಅರ್ಥ, ಧ್ವನಿ ಸಂಕೇತಗಳ ಪ್ರತಿಬಿಂಬದಂತೆ ಗಾದೆ, ಒಗಟುಗಳು ಇವೆ ಎಂದು ಈ ಕೃತಿಯಿಂದ ವೇದ್ಯವಾಗುತ್ತದೆ. ಅದರಲ್ಲೂ ಒಗಟು ಕಥೆಗಳು ಸಾಹಿತ್ಯಿಕವಾಗಿ ತುಂಬ ಮಹತ್ವವಾದವು. ಪ್ರತಿಯೊಂದರಲ್ಲೂ ಸಂಕೇತ, ಸಂಜ್ಞೆ, ಅರ್ಥ, ಧ್ವನಿ, ಪ್ರತಿಮೆ, ರೂಪಕ ಮೊದಲಾದವುಗಳನ್ನು ಪ್ರತಿಬಿಂಬಿಸುತ್ತವೆ. ಒಗಟು ಕಥೆಗಳನ್ನು ಹೇಳುವ ಮತ್ತು ಬಿಡಿಸುವ ಕ್ರಮ ಜನಪದ ಭಾಷೆ, ಚಮತ್ಕಾರ, ಬೌದ್ಧಿಕ ಸಾಮರ್ಥ್ಯ ಅಸಾಧಾರಣವಾದದ್ದು.

'ವಿವಾಹಿತ ಹೆಣ್ಣಿನ ಹಾದರ ಕೃತ್ಯಗಳು'-ಈ ಸಂಕಲನದ ವಿವರಗಳು ಅನೇಕ ಕಥೆಗಳಲ್ಲಿವೆ. ಹಾದರ ಎನ್ನುವುದು ಎಲ್ಲದರಲ್ಲೂ ನಿಷೇಧಕ್ಕೆ ಒಳಪಟ್ಟರೂ ಅದು ಸಮಾಜದ ಗುಪ್ತಗಾಮಿನಿಯಾಗಿರುವುದು ಕಾಣಬಹುದು. ಗಂಡನಿದ್ದೂ ಸ್ತ್ರೀ ಹಾದರ ಮಾಡುವ, ಗಂಡಸತ್ತಾಗ ಮಾಡುವ, ಗಂಡನಿಂದ ವಂಚಿತಳಾದಾಗ ಮಾಡುವ ಸೂಳೆಗಾರಿಕೆಯನ್ನು ಪುರುಷನಿಷ್ಠ ಸಮಾಜ ವಿರೋಧಿಸಿದರೆ ಅದೇ ಪುರುಷನ ಹಾದರವನ್ನು ಪ್ರಶ್ನಿಸದೆ ಇರುವುದನ್ನು ಸ್ತ್ರೀ ಮೌನವಾಗಿ ಪ್ರತಿಭಟಿಸುವುದನ್ನು ಈ ಕಥೆಗಳಲ್ಲಿ ಕಾಣಬಹುದು. ಆರು ಕಾಲಿನ ಬ್ಯಾಟೆ ಲೊಟಗೆ ಪರ್ವತ, ಕರೆದ್ರುಣ್ಣು ತೆರದ್ಮುಚ್ಚು, ಗಾಳಿಹಣ್ಣು ಮೆತ್ತನಕಲ್ಲು, 'ರಾತ್ರೆ ಬಂದಗಾರ ಇಲ್ಲಿ ನಿಂತಗಾರ ನನಗಾಗಿ ಕಥೆಗಳಲ್ಲಿ ಹೆಣ್ಣಿನ ಹಾದರ ಸಂಚು ಚಾಣಾಕ್ಷತೆಯನ್ನು ಪುರುಷನಿಷ್ಠ ಸಮಾಜದ ನಿಕೃಷ್ಟ ಸ್ವಭಾವವನ್ನು ಕಾಣಬಹುದು.

ಹಾಗೆ ಹೆಂಡತಿಯರಿದ್ದು ಸೂಳೆಯರ ಸಂಗ ಮಾಡಲು ಹೊರಟು ಅಲ್ಲಿ ಪರಾಭವ ಗೊಂಡು 'ಹಳೇ ಪಾದವೇ ಗತಿ' ಎಂದು ಬರುವ ಗಂಡನ ದುರಂತ ಚಿತ್ರಣ 'ಪರಸ್ತ್ರೀಯರ ಸಂಗ' ಕಥೆಯಲ್ಲಿ ಕಾಣಬಹುದು. ಸೂಳೆಯಾದವಳು ಬಂದ ಗಂಡಸರನ್ನು ಸಹಜವಾಗಿ ಸ್ವೀಕರಿಸಲಾರಳು. ಅವರಿಗೆ ಪಂಥ ಒಡ್ಡಿ ಒಗಟು ನುಡಿಗಳ ಮೂಲಕ ಪರೀಕ್ಷಿಸುತ್ತಾಳೆ. ಅಂತಹ ಅಂಶವಿರುವ 'ಕಲ್ಯಾಣಿ ಕಲ್ಲು ಮೆತ್ತನ ಕಲ್ಲು' ಕತೆಯಲ್ಲಿ ಬರುವ ಲೈಂಗಿಕ ಚಪಲವುಳ್ಳ ದಾಸಯ್ಯನನ್ನು ಪರೀಕ್ಷೆಗೊಳಪಡಿಸುವುದನ್ನು ಕಾಣಬಹುದು. ಹಾಗೆಯೇ 'ಆರೀದ್ ಮನೆ ಮರದ ಮುಚುಣ' ಕಥೆಯಲ್ಲಿ ಬಡವರ ಮನೆಯ ಕಿರಿಸೊಸೆಯ ಮೇಲೆ ಕಣ್ಣುಹಾಕಿದ ರಾಜ ಮಂತ್ರಿಯೊಂದಿಗೆ ಸೇರಿ ಅವಳನ್ನು ಪಡೆಯಲು ಒಗಟನ್ನು ಒಡ್ಡುತ್ತಾನೆ. ಆ ಒಗಟನ್ನು ಬಿಡಿಸಿ ಅವನ ಕುತಂತ್ರಕ್ಕೆ ಸಡ್ಡು ಹೊಡೆದು, ಗಂಡನ ಪ್ರೀತಿಯನ್ನು ಹಾಗೂ ಮನೆಯ ಹೆಂಗಸರ ಪ್ರೀತಿಯನ್ನು ಗಳಿಸುತ್ತಾಳೆ.

'ಹಾದಿಗೊಂದ್ ಏಣಿ ಹಾಕಜ್ಜ' ಎಂಬ ಒಗಟು ಕಥೆಯಲ್ಲಿ ಸೋಮಾರಿಯಾದ ಮಗನನ್ನು ಮನೆಬಿಟ್ಟು ಕಳುಹಿಸಿದಾಗ ಅವನು ದಾರಿಹೋಕನ ಜೊತೆ ಹೋಗುವಾಗ ಕೇಳುವ ಒಗಟುಗಳು ಆ ಮುದುಕನಿಗೆ ಸಿಟ್ಟು ತರಿಸಿದರೂ ಮಗಳು ಆ ಒಗಟುಗಳನ್ನು ಬಿಡಿಸಿ ಹೇಳಿದಾಗ ಆ ಹುಡುಗನನ್ನು ಮೆಚ್ಚಿಕೊಳ್ಳುವುದನ್ನು ಕಾಣಬಹುದು.

ಗಾದೆಗಳಿಗಿಂತ ಗಾದೆಯ ಕಥೆಗಳು ಓದುಗರ ಮೇಲೆ ತೀವ್ರತರವಾದ ಪರಿಣಾಮ ನ್ನುಂಟುಮಾಡುತ್ತವೆ. ಗಾದೆ ಒಂದು ನೈಜಾನುಭವದ ಎದೆ ತಟ್ಟಿದಾಗ ಮೂಡುವ ಮೂರ್ತಿಯಾದರೆ ಒಂದು ಗಾದೆಯ ಕಥೆ ಚಾಣದ ಅನೇಕ ಪೆಟ್ಟು ತಿಂದು ಮೂಡುವ ಸುಂದರ ಶಿಲ್ಪಕಲಾಕೃತಿಯಂತೆ ಎಂದು ಬಿ. ಕೃಷ್ಣರೆಡ್ಡಿಯವರ ಮಾತು ಈ ಕೃತಿಯಲ್ಲಿ ಇರುವ ಗಾದೆಯ ಕಥೆಗಳನ್ನು ಓದಿದ ಮೇಲೆ ಔಚಿತ್ಯ ಪೂರ್ಣ ಎನಿಸುತ್ತದೆ.

ಇಲ್ಲಿ ಬರುವ ಗಾದೆಯ ಕಥೆಗಳು ಮಾನವನ ಸಮಗ್ರ ಬದುಕಿನ ಚಿತ್ರಣವನ್ನು ಒಳಗೊಂಡಿದೆ. 'ಒಂದ್ಸುಳ್ಳಿಗೆ ಮೂರುಸುಳ್ಳು' ಕಳ್ತನಕೆ ಕರ್ಕಂಡುಹ್ಹೋದ ಕಳ್ಳನ್ನೆ ಸಿಗಾಕ್ಸಿದ'

ಕಥೆಗಳು ವಾಸ್ತವಿಕ ಸನ್ನಿವೇಶದ ಚಿತ್ರಣಗಳಿಗೆ ತಾಳೆ ಹಾಕುವ ರೀತಿ ಇವೆ. 'ಒಬ್ರಿಗಿಂತ ಇಬ್ರುಲೇಸು' ಎಂಬ ಕಥೆಯ್ಲಲ್ಲಿ ತಾಯಿ ಕಷ್ಟಪಟ್ಟು ಕೂಡಿಟ್ಟು, ೩೦೦ ರೂ. ಹಣವನ್ನು ಮಗ ಒಬ್ಬ ಹೆಂಗಸಿಗೆ ಕೊಟ್ಟು ಅವಳಿಂದ ಮೂರು ಮಾತು ಕಲಿತ. ಹಣ ಕಳೆದುಕೊಂಡ ತಾಯಿಯಿಂದ ಒದೆ ತಿಂದ ಮಗ ಮನೆಬಿಟ್ಟು ಹೋಗಿ ಆ ಮೂರು ಮಾತಿನಿಂದಲೇ ತನ್ನ ಜೀವನದ ಏಳಿಗೆ ಹೊಂದಿ ಮತ್ತೆ ತಾಯಿ ಜೊತೆ ಸೇರುವುದು ಗಾದೆಯ ಮಹತ್ತನ್ನು ತಿಳಿಸುತ್ತದೆ. ಅದರಂತೆ 'ಚಾಡಿಂದ ಚಾವ್ಡಿ ಹಾಳಾತು' ಎಂಬ ಕಥೆಯಲ್ಲಿ 'ಚಾಡಿಗೆ ಮುಪ್ಪಾಗಿದೆಯೊ, ನನ್ನ ವಯಸ್ಸಿಗೆ ಮುಪ್ಪಾಗಿದೆಯೊ ಎಂಬುದನ್ನು ಪರೀಕ್ಷೆ ಮಾಡಲು ಹೋದ ಅಜ್ಜಿ ಸುಖವಾಗಿ ಸಂಸಾರ ಮಾಡುತ್ತಿದ್ದ ದಂಪತಿಗಳನ್ನು ವಿರಸ ತಂದಿಟ್ಟು ತಮಾಷೆ ನೋಡುತ್ತಾಳೆ. ಕೊನೆಗೆ ಚಾಡಿಗೆ ಶಾಶ್ವತ ಜೀವನ ಇಲ್ಲ ಎಂದು ಗೊತ್ತಾಗುತ್ತದೆ. ಜೀವನಕ್ಕೆ ತಾಳ್ಮೆ ಇದ್ದರೆ ಸತ್ಯಾಂಶ ತಿಳಿಯುತ್ತದೆ ಎನ್ನುವುದು ತಿಳಿದು ಬರುತ್ತದೆ.

ಈ ರೀತಿಯ ಗಾದೆಯ ಮಹತ್ವವನ್ನು ತಿಳಿಯುವಲ್ಲಿ ಗಾದೆಯ ಕತೆಗಳು ಸಹಕಾರಿಯಾಗಿವೆ. ಈ ಕೃತಿಯಲ್ಲಿ ಇರುವ ಪ್ರಸ್ತಾವನೆ, ಅನುಬಂಧಗಳಲ್ಲಿ ಇರುವ ಕ್ಷೇತ್ರಕಾರ್ಯ, ಆಶಯಸೂಚಿ, ಒಗಟುನುಡಿ ಸೂಚಿ, ಗಾದೆಸೂಚಿ, ವಿಶಿಷ್ಟಪದ ವಿವರ ಸೂಚಿ, ಶಬ್ದಾರ್ಥಸೂಚಿ, ಶಬ್ದಸೂಚಿ, ಕಥನಗಾರರ ಸೂಚಿ, ಕಥೆಗಳನ್ನು ಅರ್ಥೈಸಿ ಕೊಳ್ಳಲು ಸಹಕಾರಿ. ಕಾರಣ ಕಥೆಗಳನ್ನು ಜನಪದರ ಗ್ರಾಮ್ಯ ಭಾಷೆಯಲ್ಲೇ ಮತ್ತು ಆ ಶೈಲಿಯಲ್ಲೇ ಸಂಗ್ರಹಿಸಿರುವುದರಿಂದ ಪ್ರಾದೇಶಿಕ ಭಾಷೆಯನ್ನು ತಿಳಿಯುವಲ್ಲಿ ಕೃತಿ ಮುಖ್ಯವಾಗಿದೆ.

ಮಾರುತಿ .ಡಿ.

□□

ಅನುಬಂಧಗಳು

೧. ೨೦೧೨ರಲ್ಲಿ ಪ್ರಕಟವಾದ ಜಾನಪದ ಕೃತಿಗಳು

೧. ವಿಚಾರ, ವಿಮರ್ಶೆ, ಸಂಶೋಧನೆ

೧. **ಮರಗು ಭಾಷೆ:** ಡಾ. ಕೆ.ಎಂ. ಮೇತ್ರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೧೨+೨೦೮, ಬೆಲೆ ರೂ. ೧೪೦/-.

೨. **ನಾಡವರ ಒಂದು ಸಾಂಸ್ಕೃತಿಕ ಅಧ್ಯಯನ:** ಡಾ. ಎನ್.ಆರ್. ನಾಯಕ, ಗೋಧೂಳಿ ಪ್ರಕಾಶನ, ಬೆಂಗಳೂರು, ೨೦೧೨, ಪುಟ-೨೮೮, ಬೆಲೆ ರೂ. ೨೫೦/-.

೩. **ನುಡಿಸಂಕರ ಸಾಹಿತ್ಯ:** ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೫೨+೨೧೨, ಬೆಲೆ ರೂ. ೧೬೦/-.

೪. **ಜನಪದ ವಿಜ್ಞಾನ:** ಡಾ. ಹಿ.ಶಿ. ರಾಮಚಂದ್ರೇಗೌಡ, ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು-೫೬೦೦೬೦, ೨೦೧೨, ಪುಟ-೩೮, ಬೆಲೆ ರೂ. ೨೦/-.

೫. **ಜನಪದ ಧರ್ಮ:** ಡಾ. ಹಿ.ಶಿ. ರಾಮಚಂದ್ರೇಗೌಡ, ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು-೫೬೦೦೬೦, ೨೦೧೨, ಪುಟ-೩೮, ಬೆಲೆ ರೂ. ೨೦/-.

೬. **ಗಾದೆಗಳ ಲೋಕ:** ಎಚ್.ಎಚ್.ಗಂಗಾಧರಾಚಾರ್, ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು-೫೬೦೦೬೦, ೨೦೧೨, ಪುಟ-೪೪, ಬೆಲೆ ರೂ. ೨೦/-.

೭. **ಜನಪದ ಸಾಹಿತ್ಯದಲ್ಲಿ ಹಾಸ್ಯ:** ಡಾ. ವಿಜಯಲಕ್ಷ್ಮಿ ಸೀತಾಪುರ, ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು-೫೬೦೦೬೦, ೨೦೧೨, ಪುಟ-೪೦, ಬೆಲೆ ರೂ. ೨೦/-.

೮. **ದಲಿತರ ಬದುಕು-ಮೆಲುಕು:** ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೨೨+೩೦೪, ಬೆಲೆ ರೂ. ೨೦೦/-.

೯. **ಅರಕೇರಿ ಅಮೋಘಸಿದ್ಧೇಶ್ವರ:** ಡಾ. ಚನ್ನಪ್ಪ ಕಟ್ಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೧೬+೮೬, ಬೆಲೆ ರೂ. ೬೦/-.

೧೦. **ಮೈಲಾರ:** ಸಂ. ಡಾ.ಸಿ. ಮಹದೇವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೧೬+೧೦೬+೧೬, ಬೆಲೆ ರೂ. ೮೦/-.

೧೧. **ಜನಪದ ಸಾಹಿತ್ಯದಲ್ಲಿ ಪವಾಡಗಳು:** ಡಾ. ಎನ್.ಎಸ್. ಸರಸ್ವತಿ ಶ್ರೀಕಂಠಯ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨, ೨೦೧೨, ಪುಟ-೦೭+೨೯೩, ಬೆಲೆ ರೂ. ೧೬೦/-.

೧೨. **ಹಾಲಕ್ಕಿ ಒಕ್ಕಲಿಗರು:** ಡಾ. ಎನ್.ಆರ್. ನಾಯಕ, ೩೫, ಗೋಧೂಳಿ ಪ್ರಕಾಶನ, ೫ನೇ'ಬಿ' ಅಡ್ಡರಸ್ತೆ, ಸಿಂಡಿಕೇಟ್ ಬ್ಯಾಂಕ್ ಬಡಾವಣೆ, ತುಂಗಾನಗರ, ಬೆಂಗಳೂರು-೫೬೦೦೯೧, ೨೦೧೨, ಪುಟ-೮+೨೮೦, ಬೆಲೆ ರೂ. ೨೫೦/-

೧೩. **ಸಮುದಾಯಗಳ ಕನ್ನಡ ಪರಂಪರೆ:** ಡಾ. ಎ. ಮೋಹನ ಕುಂಟಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೧೪+೨೫೦, ಬೆಲೆ ರೂ. ೧೬೦/-.

೧೪. **ದೊಡ್ಡಾಟ ಪರಂಪರೆ ಮತ್ತು ಪ್ರಯೋಗಗಳು:** ಡಾ. ಶ್ರೀಶೈಲ ಹುದ್ದಾರ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ೧೭೬, ೧೨ನೇ ಮುಖ್ಯ ರಸ್ತೆ, ಕೆಳಮನೆ, ಮಾಗಡಿ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು-೭೯, ೨೦೧೨, ಪುಟ-೧೦+೫೪೯, ಬೆಲೆ ರೂ. ೩೫೦/-.

೧೫. **ನಡೆದಷ್ಟೂ ನಾಡು:** ಡಾ. ರಹಮತ್ ತರೀಕೆರೆ, ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦೦೦೧, ೨೦೧೨, ಪುಟ-೧೬೦, ಬೆಲೆ ರೂ. ೨೪೦/-.

೧೬. **ತುಳುವರ ಮೂಲತಾನ ಆದಿಆಲಡೆ ಪರಂಪರೆ ಮತ್ತು ಪರಿವರ್ತನೆ:** ಡಾ. ಇಂದಿರಾ ಹೆಗ್ಗಡೆ, ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦೦೦೧, ೨೦೧೨, ಪು-೪೦೮, ಬೆಲೆ ರೂ. ೩೦೦/-.

೧೭. **ತೀರ್ಥಹಳ್ಳಿಯ ಸುತ್ತಮುತ್ತ:** ಕೆ. ಗಂಗಾಧರ, ಹಾದಿಗಲ್ಲು ರಾಘವೇಂದ್ರ, ಋಜುವಾತು ಪ್ರಕಾಶನ, ಬೆಂಗಳೂರು, ೨೦೧೨, ಪುಟ- ೧೭೪, ಬೆಲೆ-೧೬೫/-.

೧೮. **ಕನಕಗಿರಿ ನಾಯಕರು:** ಸಂ. ಡಾ. ತಾರಿಹಳ್ಳಿ ಹನುಮಂತಪ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪುಟ-೧೪+೧೨೦+೧೨, ಬೆಲೆ ರೂ. ೧೬೦/-.

೧೯. **ಕರಾವಳಿ:** ಜೀಯು ಹೊನ್ನಾವರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, ೨೦೧೨, ಪುಟ–೧೬+೩೧೨, ಬೆಲೆ ರೂ. ೧೪೬/-

೨೦. **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ:** ಡಾ. ವಾಸುದೇವ ಬಡಿಗೇರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬, ೨೦೧೨, ಪುಟ–೧೨+೩೬೬+೧೬, ಬೆಲೆ ರೂ. ೨೬೦/-.

೨೧. **ಕೊರಗರು ಸಮಕಾಲೀನ ಸ್ಪಂದನ:** ಸಂ. ಡಾ. ಗಂಗಾಧರ ದೈವಜ್ಞ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬, ೨೦೧೨, ಪುಟ–೧೨+೮೪+೮, ಬೆಲೆ ರೂ. ೮೦/-.

೨೨. **ಗಾದೆಗಳ ಅಧ್ಯಯನ:** ಪ್ರಧಾನ ಸಂಪಾದಕರು–ಡಾ. ಎ. ರಂಗಸ್ವಾಮಿ, ಲೇಖಕರು ಡಾ. ರಾಗೌ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ೨೦೧೨, ಪುಟ–೨೪+೭೮+೪, ಬೆಲೆ ರೂ. ೫೦/-.

೨೩. **ಜನಪದ ಸಿಂಗಾರ ಸಾಧನಗಳು:** ಪ್ರಧಾನ ಸಂಪಾದಕರು–ಡಾ. ಎ. ರಂಗಸ್ವಾಮಿ, ಲೇಖಕರು–ಡಾ. ಪಿ.ಕೆ. ರಾಜಶೇಖರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ೨೦೧೨, ಪುಟ–೨೪+೮೬+೪, ಬೆಲೆ ರೂ. ೬೦/-.

೨೪. **ನಮ್ಮೂರು ನಮ್ಮವರು:** ಕಟಾವೀರನಹಳ್ಳಿ ಜನ್ನಪ್ಪ, ವಿದ್ಯಾ ಪ್ರಕಾಶನ, ಬೆಂಗಳೂರು, ೨೦೧೨, ಪುಟ–೨೦+೩೨೨, ಬೆಲೆ ರೂ. ೧೭೫/-.

೨೫. **ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು:** ಡಾ. ಕೆ.ಆರ್.ಜೆ. ರಾಜಕುಮಾರ್, ಜೈ ಭೀಮ್ ಪ್ರಕಾಶನ, ಚಿತ್ರದುರ್ಗ, ೨೦೧೨, ಪುಟ– ೧೬+೯+೩೨೪, ಬೆಲೆ ರೂ. ೨೦೦/-.

೨೬. **ಮಾನವ ಮತ್ತು ಸಾಂಸ್ಕೃತಿಕ ಪಲ್ಲಟಗಳು: ಸಂ.** ಡಾ. ತಾರಿಹಳ್ಳಿ ಹನುಮಂತಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪುಟ–೯೫+೨೨೨, ಬೆಲೆ ರೂ. ೧೨೦/-.

೨೭. **ಲಂಬಾಣಿಗಳ ಪಾರಂಪರಿಕ ಬದುಕು:** ಜಿ. ಪಳನಿಸ್ವಾಮಿ ಜಾಗೇರಿ, ಪ.ಸೆಲ್ವಿಬಾಯಿ ಪಿ. ಜಾಗೇರಿ, ಆರ್.ಬಿ. ತಾಂಡ ಸತ್ತೆಗಾಲ ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ೨೦೧೨, ಪುಟ–೧೫+೧೦೮, ಬೆಲೆ ರೂ. ೧೦೦/-.

೨೮. **ಜಾನಪದ ವಾಡೆ:** ನಾಡೋಜ ಪ್ರೊ. ಹಂಪ ನಾಗರಾಜಯ್ಯ, ಪ್ರ. ಅರ್ಕಾವತಿ ಬಡಾವಣೆ, ಬೆಂಗಳೂರು–೪೦, ೨೦೧೨, ಪುಟ– ೬+೧೩೮, ಬೆಲೆ ರೂ. ೭೨/-.

೨೯. **ಮುಕ್ತ ಸಂಸ್ಕೃತಿ ಮತ್ತು ಹಂಪಿ ಪರಿಸರ:** ಡಾ. ಹೆಬ್ಬಾಲೆ ಕೆ. ನಾಗೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪುಟ–೨೨+೧೩೬, ಬೆಲೆ ರೂ. ೮೦

೩೦. **ಕರಾವಳಿ ಜಿಲ್ಲೆಗಳ ಜೈನ ಪರಂಪರೆ: ಸಂ.** ಎಲ್.ಡಿ.ಬಲ್ಲಾಳ್, ಹೇಮಾಂಶು ಪ್ರಕಾಶನ, ಮಂಗಳೂರು, ೨೦೧೨, ಪುಟ–೧೦+೧೨೬, ಬೆಲೆ ರೂ. ೧೨೫/-

೩೧. **ಯಕ್ಷ ಸ್ತ್ರೀ (ಸ್ತ್ರೀ ವೇಷ, ಸ್ತ್ರೀ ಪಾತ್ರ ಮತ್ತು ಮಹಿಳಾ ಯಕ್ಷಗಾನ ವಿವೇಚನೆ):** ಡಾ. ಎನ್. ನಾಗವೇಣಿ, ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ–೫೭೪೧೯೯, ೨೦೧೨, ಪುಟ–೨೨+೨೩೬+೮, ಬೆಲೆ ರೂ. ೧೮೦/-.

೩೨. **ಯಕ್ಷಸಿರಿ :** ಪ್ರಧಾನ ಸಂಪಾದಕ ಡಾ.ಕೆ. ಚಿನ್ನಪ್ಪಗೌಡ, ಸಂ. ಡಾ. ರಾಜಶ್ರೀ, ಸತೀಶ್ ಕೊಣಾಜೆ, ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ, ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ– ೫೭೪೧೯೯, ೨೦೧೨, ಪುಟ–೧೨೦, ಬೆಲೆ ರೂ. ೬೦/-.

೩೩. **ಮಾಟದೊಳಗಣ ನೋಟ:** ಡಾ. ಶಿವಾನಂದ ಎಚ್. ಬಂಟನೂರ, ಯಾಜಿ ಪ್ರಕಾಶನ, ಭೂಮಿ, ಎಂ.ಪಿ.ಪ್ರಕಾಶನಗರ, ಹೊಸಪೇಟೆ–೫೮೩೨೦೧, ೨೦೧೨, ಪುಟ–೮+೧೦೦, ಬೆಲೆ ರೂ. ೧೨೦/-.

೩೪. **ಧಾರವಾಡ ಜಿಲ್ಲೆಯ ಜನಪದ ಕಲಾವಿದರು:** ಡಾ. ಶಾಲಿನಿ ರಘುನಾಥ, ಕರ್ನಾಟಕ ಜಾನಪದ ಅಕಾಡೆಮಿ, ಜೆ.ಸಿ.ರಸ್ತೆ, ಬೆಂಗಳೂರು, ೨೦೧೨, ಪುಟ–೧೮+೧೭೮, ಬೆಲೆ ರೂ. ೬೦/-.

೩೫. **ಯಕ್ಷಮುಡಿ: ಸಂ.ಡಾ.ರಾಜಶ್ರೀ, ಶಿಶಿರ್ ಎಂ.ಕೆ.,** ಡಾ.ಪಿ. ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ, ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ–೫೭೪೧೯೯, ೨೦೧೨, ಪುಟ–೧೭೬, ಬೆಲೆ ರೂ. ೯೦/-.

೩೬. **ಹಾಲುಮತ ಸಂಗಮ ಕುಲಗುರು ಭಿಂಗಯ್ಯ:** ಡಾ. ಲಿಂಗದಹಳ್ಳಿ ಹಾಲಪ್ಪ, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ. ಪ್ರಕಾಶನಗರ, ಹೊಸಪೇಟೆ–೫೮೩೨೦೧, ೨೦೧೨, ಪುಟ–೧೦+೧೩೨, ಬೆಲೆ ರೂ. ೧೪೦/-.

೩೭. **ಜನಪದ ಕಥಾಲೋಕ:** ಡಾ. ಕೆ.ಆರ್. ಸಂಧ್ಯಾರೆಡ್ಡಿ, ಶಶಿ ಪಬ್ಲಿಕೇಷನ್ಸ್, ಜಾಲಮಂಗಲ, ರಾಮನಗರ–೨೦೧೨, ಪುಟ–೨೫೬+೭, ಬೆಲೆ ರೂ. ೧೭೫/-

೩೮. **ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಜಾನಪದೀಯತೆ : ಸಂ.** ಡಾ. ಎ. ರಂಗಸ್ವಾಮಿ, **ಲೇ.** ಡಾ. ರಾಜೇಗೌಡ ಹೊಸಹಳ್ಳಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦೦೦೬, ೨೦೧೨, ಪುಟ–೨೪+೭೦+೪, ಬೆಲೆ ರೂ. ೫೦/-.

೩೯. **ಕರಾವಳಿ ಕರ್ನಾಟಕದ ರಂಗೋಲಿ ಕಲೆ:** ಡಾ. ಭಾರತಿ ಮರವಂತೆ. ಪುಸ್ತಕ ನಿಧಿ, ಗಾವಳಿ ಶಾಲೆ ಹತ್ತಿರ, ಅಂಚೆ ಹಳ್ನಾಡಿ– ಹರ್ಕಾಡಿ, ಕುಂದಾಪುರ, ೨೦೧೨, ಪುಟ–೨೬೪+೩೨, ಬೆಲೆ ರೂ. ೩೦೦/-.

೪೦. **ಜನಪದ ಕುಣಿತಗಳು,** ಸಂ. ಡಾ. ಎ. ರಂಗಸ್ವಾಮಿ, ಲೇ. ಡಾ.ಎಚ್.ಆರ್.ಚೇತನ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦೦೦೬, ೨೦೧೨, ಪುಟ–೨೪+೭೦+೪, ಬೆಲೆ ರೂ. ೫೦/-.

೪೧. **ಬುಡಕಟ್ಟು ಜಾನಪದ** ಪ್ರಧಾನ ಸಂಪಾದಕರು ಡಾ. ಎ. ರಂಗಸ್ವಾಮಿ, ಲೇಖಕರು ಡಾ. ಪಿ.ಕೆ. ಖಂಡೋಬ, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ೨೦೧೨, ಪುಟ-೨೪+೮೬+೪, ಬೆಲೆ ರೂ. ೬೦/-

೪೨. **ಜನಪದ ಗೀತ ಪ್ರಕಾರಗಳು:** ಪ್ರಧಾನ ಸಂಪಾದಕರು–ಡಾ. ಎ. ರಂಗಸ್ವಾಮಿ, **ಲೇಖಕರು**–ಡಾ. ಕುಮಾರಚಲ್ಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ೨೦೧೨, ಪುಟ–೨೪+೬೪+೪, ಬೆಲೆ ರೂ. ೪೦/-.

೪೩. **ಕನ್ನಡ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನ:** ಪ್ರಧಾನ ಸಂಪಾದಕರು–ಡಾ. ಎ. ರಂಗಸ್ವಾಮಿ, **ಲೇಖಕರು**–ಡಾ. ಕೃಷ್ಣಮೂರ್ತಿ ಹನೂರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ೨೦೧೨, ಪುಟ–೨೪+೬೬+೪, ಬೆಲೆ ರೂ. ೪೦/-.

೪೪. **ಕರ್ನಾಟಕ ಜಾನಪದ ಅಕಾಡೆಮಿ ಹಿನ್ನೋಟ:೨೦೦೮–೧೨:** ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಪ್ರ. ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಭವನ, ೨ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–೫೬೦೦೦೨, ೨೦೧೨, ಪುಟ–೧೨+೯೨+೨೫, ಬೆಲೆ ರೂ. ಇಲ್ಲ

೪೫. **ಜಾನಪದ ಪ್ರಕಾರಗಳು:** ಡಾ.ರಾಗೌ, ಪ. ತನುಮನು ಪ್ರಕಾಶನ, ಎಚ್ಐಜಿ, ೧೨೬೭, ಕಾವ್ಯಲೋಕ, ೧ನೇ ತಿರುವು, ಶ್ರೀರಾಂಪುರ, ೨ನೇ ಹಂತ, ಮೈಸೂರು–೫೭೦೦೨೩, ೨೦೧೨, ಪುಟ–೩೪೮, ಬೆಲೆ ರೂ. ೨೫೦/-.

೪೬. **ಕನ್ನಡ– ಮರಾಠಿ ಸಾಂಸ್ಕೃತಿಕ ಬಾಂಧವ್ಯ:** ಡಾ. ವಿಠಲರಾವ್ ಟಿ. ಗಾಯಕ್ವಾಡ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬, ೨೦೧೨, ಪುಟ–೧೪+೧೭೨, ಬೆಲೆ ರೂ. ೧೨೦/-.

೪೭. **ಕಚ್ಚೆಗೌಳಿಗರ ಪರಂಪರೆ ಮತ್ತು ಆಧುನಿಕತೆ:** ಡಾ. ಗಂಗಾಧರ ದೈವಜ್ಞ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬, ೨೦೧೨, ಪುಟ–೧೧+೧೪೪+೮, ಬೆಲೆ ರೂ. ೧೦೦/-.

೪೮. **ಗ್ರಾಮದರ್ಶನ(ಮಂಡ್ಯ ಜಿಲ್ಲೆಯ ಗ್ರಾಮಗಳ ಸಂಕ್ಷಿಪ್ತ ನೋಟ) ಸಂಪುಟ–೪:** ಪ್ರೊ. ಸಿ. ಸಿದ್ದರಾಜು ಆಲಕೆರೆ, ಚನ್ನಟ್ಟಿ ಪ್ರಕಾಶನ, ಮಂಡ್ಯ, ೨೦೧೨, ಪುಟ–೮+೪+೧೨೪, ಬೆಲೆ ರೂ. ೧೩೦/-.

೨. ಜೀವನ ಪರಿಚಯ ಕೃತಿಗಳು

೪೯. ಜಾನಪದ ತಜ್ಞ ಮತಿಘಟ್ಟ ಕೃಷ್ಣಮೂರ್ತಿ: ಎಂ.ಕೆ ರಮಾದೇವಿ, ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨, ೨೦೧೨, ಪುಟ-೧೪+೫೬+೮, ಬೆಲೆ ರೂ. ೨೦/-.

೫೦. ನಾ ಕಂಡಂತೆ ನ್ನ ತಂದೆ: ಶಾಂತಸ್ವಾಮಿ (ನಾಗಸುತೆ), ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು-೫೬೦೦೬೦, ೨೦೧೨, ಪುಟ-೩೨, ಬೆಲೆ ರೂ. ೨೦/-.

೫೧. ಜಾನಪದ ತಜ್ಞೆ ಶ್ರೀಮತಿ ಶಾಂತಿನಾಯಕ: ಸುಮುಖಾನಂದ ಜಲವಳ್ಳಿ, ಕರ್ನಾಟಕ ಜಾನಪದ ಪರಿಷತ್ತು, ನಂ.೧, ಜಲದರ್ಶಿ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಎದುರು, ಬೆಂಗಳೂರು-೫೬೦೦೬೦, ೨೦೧೨, ಪುಟ-೩೬, ಬೆಲೆ ರೂ. ೨೦/-.

೫೨. ಡಾ. ಲಕ್ಷ್ಮಣದಾಸ್: ಗುಡಿಹಳ್ಳಿ ನಾಗರಾಜ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦, ೨೦೧೨, ಪುಟ-೮+೮೦, ಬೆಲೆ ರೂ. ೫೦/-.

೩. ಪದ್ಯ/ಗದ್ಯ ಸಂಗ್ರಹಗಳು

೫೩. ನಾಡವರ ಪುರಾಣ ಕಥನ ಕಾವ್ಯಗಳು: ಸಂ.ಡಾ.ಎನ್.ಆರ್.ನಾಯಕ, ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ, ೨೦೧೨, ಪುಟ-೫+೬೪, ಬೆಲೆ ರೂ. ೪೦/-.

೫೪. ಜನಪದ ಕಾವ್ಯ- ಬಾಲನಾಗಮ್ಮ: ಸಂ. ಡಾ. ಮೈಸೂರು ಉಮೇಶ್, ಅಮೋಘ ಪ್ರಕಾಶನ, ನಂ. ೨೩೩, ೧ನೇ ಕ್ರಾಸ್, ಗಣಪತಿ ದೇವಾಲಯದ ಹಿಂಭಾಗ, ಕೆ.ಎನ್.ಪುರ, ಮೈಸೂರು-೫೭೦೦೧೯, ೨೦೧೨, ಪುಟ-೧೦+೫೦, ಬೆಲೆ ರೂ. ೧೦೦/-.

೫೫. ಅಂಚೆ ಜಾನಪದ: ಸಂ. ಶ್ರೀ ಎಂ. ಆರ್. ಪ್ರಭಾಕರ, ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨, ೨೦೧೨, ಪುಟ-೮+೬೯, ಬೆಲೆ ರೂ. ೧೫೦/-.

೫೬. ಕುಂಚಿಟಿಗರು: ಸಂ. ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಕುಂಚಿಟಿಗರ ಮಹಾಸಮ್ಮೇಳನ ಸಮಿತಿ-೨೦೧೨, ೪೬, ಕೆ.ಎಸ್.ವಿ.ನಿಲಯ, ೧೧ನೇ ಮುಖ್ಯರಸ್ತೆ, ಮಿಲ್ಲರ್ ರಸ್ತೆ, ವಸಂತನಗರ, ಬೆಂಗಳೂರು-೫೨, ಪುಟ-೩೦+೬೦+೫೨೨+೪೮, ಬೆಲೆ ರೂ. ೧೦೦೦/-.

೫೭. ಮಂಟೇಸ್ವಾಮಿ ಕಾವ್ಯ ಓದು ಪಠ್ಯ: ಸಂ. ಡಾ. ವೆಂಕಟೇಶ ಇಂದ್ವಾಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬, ೨೦೧೨, ಪು-೩೦+೧೩೪, ಬೆಲೆ ರೂ. ೧೨೦/-.

೫೮. **ಭಾಗವತ ಚಿಕ್ಕೇಗೌಡರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು:** **ಸಂ.** ಡಾ. ಚಕ್ಕೆರೆ ಶಿವಶಂಕರ್, ಸಾಗರ್ ಪ್ರಕಾಶನ, ನಂ.೬೯೫, ೧೧ನೇ ಮುಖ್ಯ ರಸ್ತೆ, ೮೧ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ೨೦೧೨, ಪುಟ- ೩೬೮, ಬೆಲೆ ರೂ. ೧೮೫/-.

೫೯. **ಹಿರೇಬಳ್ಳಾಪುರ ಸುಬ್ಬರಾಯಪ್ಪನವರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು:** ಸಂ. ಡಾ. ಚಕ್ಕೆರೆ ಶಿವಶಂಕರ್, ಸಾಗರ್ ಪ್ರಕಾಶನ, ನಂ. ೬೯೫, ೧೧ನೇ ಮುಖ್ಯ ರಸ್ತೆ, ೮೧ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ೨೦೧೨, ಪುಟ-೫೬೮, ಬೆಲೆ ರೂ. ೩೧೦/-.

೬೦. **ಸಮಗ್ರ ಕನ್ನಡದ ಗಾದೆಗಳು, ಸಂಪುಟ-೧:** ಪ್ರಧಾನ ಸಂಪಾದಕರು: ಡಾ. ಕೆ.ಎನ್. ಗಂಗಾನಾಯಕ್, ಸಂಪಾದಕರು: ಡಾ. ಎಂ. ನಂಜಯ್ಯ ಹೊಂಗನೂರು, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦೦೦೬, ೨೦೧೨, ಪುಟ-೩೪+೪೭೨, ಬೆಲೆ ರೂ. ೩೦೦/-.

೬೧. **ಸಮಗ್ರ ಕನ್ನಡದ ಗಾದೆಗಳು, ಸಂಪುಟ-೨:** ಪ್ರಧಾನ ಸಂಪಾದಕರು: ಡಾ. ಕೆ.ಎನ್. ಗಂಗಾನಾಯಕ್, **ಸಂ.** ಡಾ. ಎಂ. ನಂಜಯ್ಯ ಹೊಂಗನೂರು, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦೦೦೬, ೨೦೧೨, ಪುಟ-೩೪+೫೨೪, ಬೆಲೆ ರೂ. ೩೦೦/-.

೬೨. **ಸಮಗ್ರ ಕನ್ನಡದ ಗಾದೆಗಳು, ಸಂಪುಟ-೩:** ಪ್ರಧಾನ ಸಂಪಾದಕರು: ಡಾ. ಕೆ.ಎನ್. ಗಂಗಾನಾಯಕ್, **ಸಂ.** ಡಾ. ಜಯಲಕ್ಷ್ಮೀ ಸೀತಾಪುರ, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦೦೦೬, ೨೦೧೨, ಪುಟ-೨೨+೫೧೦, ಬೆಲೆ ರೂ. ೩೦೦/-.

೬೩. **ಸಮಗ್ರ ಕನ್ನಡದ ಗಾದೆಗಳು, ಸಂಪುಟ-೪:** ಪ್ರಧಾನ ಸಂಪಾದಕರು: ಡಾ. ಕೆ.ಎನ್. ಗಂಗಾನಾಯಕ್, **ಸಂ.** ಡಾ. ಜಯಲಕ್ಷ್ಮೀ ಸೀತಾಪುರ, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦೦೦೬, ೨೦೧೨. ಪುಟ-೨೦+೪೨೦, ಬೆಲೆ ರೂ. ೩೦೦/-.

೬೪. **ಕುಡಿಯನ ಕಣ್ಣ್ (ತುಳು ಯಕ್ಷಗಾನ ಅರ್ಥಸಹಿತ):** ಬೊಟ್ಟಿಕೆರೆ ಪುರುಷೋತ್ತಮ ಪೂಂಜ, ಪ್ರ. ಕಲಾಗಂಗೋತ್ರಿ, ಯಕ್ಷಗಾನ ಕೇಂದ್ರ(ರಿ), ಸೋಮೇಶ್ವರ-ಉಚ್ಚಿಲ, ಮಂಗಳೂರು, ದಕ್ಷಿಣ ಕನ್ನಡ, ೨೦೧೨, ಪುಟ- ೧೦+೮೬, ಬೆಲೆ ರೂ. ೫೦/-.

೬೫. **ಶತಮಾನ ಕಂಡ ಸೋಮಲಿಂಗ ಕವಿಯ ಲಾವಣಿಗಳು:** ಸಂ. ಡಾ. ಸಿ.ಕೆ. ನಾವಲಗಿ, ಆನಂದ ಪ್ರಕಾಶನ, ಬೈಲಹೊಂಗಲ, ಬೆಳಗಾವಿ ಜಿಲ್ಲೆ, ೨೦೧೨, ಪುಟ-೨೦+೧೫೦, ಬೆಲೆ ರೂ. ೧೫೦/-.

೬೬. **ಬೀರೇಶ್ವರನ ಚರಿತ್ರೆ:** ಸಂ. ಡಾ. ಎಫ್.ಟಿ. ಹಳ್ಳಿಕೇರಿ, ಹಾಲುಮತದ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ. ಪ್ರಕಾಶ ನಗರ, ಹೊಸಪೇಟೆ-೫೮೩೨೦೧, ೨೦೧೨, ಪುಟ-೧೦+೪೦, ಬೆಲೆ ರೂ. ೬೦/-.

೬೭. **ಶಾಂತಿ ನಾಯಕರ ಅಕ್ಷರ ಕೃತಿಗಳು:** ಸಂ. ಶೋಭಾ ನಾಯಕ, ಸಾಧನಾ ಪಬ್ಲಿಕೇಷನ್, ನಂ. ೧೫/೧೬, ೧ನೇ ಮಹಡಿ, ಶಿವ ಕಾಂಪ್ಲೆಕ್ಸ್, ಬಳೇಪೇಟೆ ಸರ್ಕಲ್, ಬೆಂಗಳೂರು-೫೬೦೦೫೩, ೨೦೧೨, ಪುಟ-೧೫೬, ಬೆಲೆ ರೂ. ೮೦/-.

೬೮. **ಕನ್ನಡ ಜಾನಪದ ನಿಘಂಟು ಸಂಪುಟ-೧:** ಪ್ರಧಾನ ಸಂಪಾದಕರು: ಗೊ.ರು. ಚನ್ನಬಸಪ್ಪ ಸಂ.ಬಿ.ಸಿದ್ದಗಂಗಪ್ಪ ಕಂಬಾಳು, ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ೨ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨, ೨೦೧೧, ಪುಟ-೮೨+೧೯೮, ಬೆಲೆ ರೂ. ೨೫೦/-.

೬೯. **ಕನ್ನಡ ಜಾನಪದ ನಿಘಂಟು ಸಂಪುಟ-೨:** ಪ್ರಧಾನ ಸಂಪಾದಕರು: ಗೊ.ರು. ಚನ್ನಬಸಪ್ಪ, ಸಂ. ಬಿ.ಸಿದ್ದಗಂಗಪ್ಪ ಕಂಬಾಳು, ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್. ರಾಜಪ್ಪ, ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ೨ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨, ೨೦೧೨, ಪುಟ-೯೬+೫೩೨, ಬೆಲೆ ರೂ. ೫೦೦/-.

೭೦. **ಕನ್ನಡ ಜಾನಪದ ನಿಘಂಟು ಸಂಪುಟ-೩:** ಪ್ರಧಾನ ಸಂಪಾದಕರು: ಗೊ.ರು. ಚನ್ನಬಸಪ್ಪ, ಸಂ.ಬಿ.ಸಿದ್ದಗಂಗಪ್ಪ ಕಂಬಾಳು, ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ೨ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨, ೨೦೧೨, ಪುಟ-೯೬+೫೩೨, ಬೆಲೆ ರೂ. ೫೦೦/-.

೭೧. **ಹಾಲುಮತದ ಚರಿತ್ರೆ (ಯಲ್ಲನಗೌಡ ಫ.ಅತ್ತಿಕೊಳ್ಳ):** ಸಂ. ಡಾ. ಅನ್ನಪೂರ್ಣ ಗೋಸ್ಬಾಳ, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ. ಪ್ರಕಾಶನಗರ, ಹೊಸಪೇಟೆ-೫೮೩೨೦೧, ೨೦೧೨, ಪುಟ-೧೦+೫೦, ಬೆಲೆ ರೂ. ೭೦/-.

೭೨. **ಬಲ್ಲಂತ ಜಾಣ ಬಿಡಿಸ್ಹೇಳು ಕೃತಿಯ ಒಂದು ನೋಟ:** ಸಂ.ಜೀನಹಳ್ಳಿ ಸಿದ್ದಲಿಂಗಪ್ಪ, ಶ್ರುತಿ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ-ಮಾರ್ಗ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ-೫೭೭೨೨೩, ೨೦೧೨, ಪುಟ-೨೦೮+೨೪+೪, ಬೆಲೆ ರೂ. ೧೫೦/-.

೭೩. **ಜನಪದ ಗಾದೆ ಮತ್ತು ಒಗಟುಗಳು:** ಸಂ.ಡಾ.ಮೈಲಹಳ್ಳಿ ರೇವಣ್ಣ, ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ- ಮಾರ್ಗ, ಹೊನ್ನಾಳಿ-ತಾ, ದಾವಣಗೆರೆ-ಜಿಲ್ಲೆ-೫೭೭೨೨೩, ೨೦೧೨, ಪುಟ- ೩೨೮+೮+೪, ಬೆಲೆ ರೂ. ೨೫೦/-.

೭೪. **ಗಾದೆಗಳ ಮಾತುಗಳು ಅರ್ಥವಿವರಣೆಯ ಸಹಿತ:** ಸಂಗ್ರಹಕರು: ಕು.ನಂದಾ ಸಿ. ಅಕ್ಕಿ, ಪ್ರ. ಶಿವಕೃಪಾ ಪ್ರಕಾಶನ, ಈಶ್ವರ ಬಡಾವಣೆ, ರಾಜೀವ್ ಗಾಂಧಿ ನಗರ, ಗದಗ-೫೮೨೧೦೧, ೨೦೧೨, ಪುಟ-೮೦, ಬೆಲೆ ರೂ. ೪೦/-.

೪. ಅನುವಾದದ ಕೃತಿಗಳು

೭೫. **ಬರ ಅಂದ್ರೆ ಎಲ್ಲರಿಗೂ ಇಷ್ಟ:** ಮೂಲ: ಪಿ. ಸಾಯಿನಾಥ್, ಕನ್ನಡಕ್ಕೆ: ಜಿ.ಎನ್. ಮೋಹನ್, ಪ್ರ. ಅಭಿನಯ ೧೭/೧೮-೨, ೧ನೇ ಮುಖ್ಯ ರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು-೫೬೦೦೧೦, ೨೦೧೨, ಪುಟ-೫೦೪, ಬೆಲೆ ರೂ. ೩೫೦/-.

೫. ಮರುಮುದ್ರಣ ಕೃತಿಗಳು

೭೬. **ಗರತಿಯ ಹಾಡು: ಸಂ.** ಹಲಸಂಗಿ ಗೆಳೆಯರಾದ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ, ಪ. ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ-೦೧, ಮರುಮುದ್ರಣ-೨೦೧೨, ಪುಟ-೧೪೦, ಬೆಲೆ ರೂ. ೫೫/-.

೭೭. **ನಮ್ಮ ಒಗಟುಗಳು:** ಸಂ. ಡಾ.ರಾಗೌ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು-೦೪, ಮರುಮುದ್ರಣ-೨೦೧೨, ಪುಟ-೧೪೦, ಬೆಲೆ ರೂ. ೭೫/-.

೭೮. **ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು: ಸಂ.** ಟಿ.ಎಸ್. ರಾಜಪ್ಪ, ಸಾಗರ್ ಪ್ರಕಾಶನ, ನಂ. ೬೯೫೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು, ಮರುಮುದ್ರಣ-೨೦೧೨, ಪುಟ-೧೬೦, ಬೆಲೆ ರೂ. ೮೦/-.

೭೯. **ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು:** ಜೀ.ಶಂ.ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು- ೫೬೦೦೭೨, ಮರುಮುದ್ರಣ-೨೦೧೨, ಪುಟ-೬೯೦, ಬೆಲೆ ರೂ. ೫೦೦/-.

೮೦. **ಕನ್ನಡ ವೃತ್ತಿಗಾಯಕ ಕಾವ್ಯಗಳು: ಸಂ.**ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೩೪+೧೮, ಬೆಲೆ ರೂ. ೪೭೫/-.

೮೧. **ರಾಯಚೂರು ಜಿಲ್ಲೆಯ ಜನಪದ ಕಥೆಗಳು: ಸಂ.** ಟಿ.ಎಸ್. ರಾಜಪ್ಪ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ,ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೩೪+೧೮, ಬೆಲೆ ರೂ. ೮೦/-.

೮೨. **ಧಾರವಾಡ ಜಿಲ್ಲೆಯ ಜನಪದ ಕಥೆಗಳು:** ಸಂ. ಟಿ.ಎಸ್.ರಾಜಪ್ಪ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ,ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೩೪+೧೮, ಬೆಲೆ ರೂ. ೮೦/-.

೮೩. **ದಾಳಿಂಬೆ ರಾಣಿ:** ಸಂ.ಟಿ. ಎಸ್.ರಾಜಪ್ಪ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೮೦, ಬೆಲೆ ರೂ. ೪೦/-.

೮೪. **ಕನ್ನಡ ಜನಪದ ಕಥೆಗಳು:** ಸಂ:ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೩೪+೧೮, ಬೆಲೆ ರೂ. ೧೩೦/-.

೮೫. **ಬೆಳಗಾಂ ಜಿಲ್ಲೆಯ ಜನಪದ ಕಥೆಗಳು:** ಸಂ.ಟಿ.ಎಸ್.ರಾಜಪ್ಪ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೧೪೪, ಬೆಲೆ ರೂ. ೮೦/-.

೮೬. **ದಕ್ಷಿಣ ಕರ್ನಾಟಕದ ಜನಪದ ಕಥೆಗಳು:** ಸಂ. ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೩೧೨, ಬೆಲೆ ರೂ. ೧೬೦/-.

೮೭. **ಜಾನಪದ ಖಂಡ ಕಾವ್ಯಗಳು:** ಸಂ. ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ.೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ, ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೪೬೪, ಬೆಲೆ ರೂ. ೨೬೦/-.

೮೮. **ಫ್ಲೀಟರು ಸಂಗ್ರಹಿಸಿದ ಸಮಗ್ರ ಲಾವಣಿಗಳು:** ಸಂ.ಕ್ಯಾತನಹಳ್ಳಿ ರಾಮಣ್ಣ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೩೭೬, ಬೆಲೆ ರೂ. ೧೯೦/-.

೮೯. **ಶ್ರೀಮಂಟೇಸ್ವಾಮಿ ಮತ್ತು ಇತರ ಕಥನ ಕಾವ್ಯಗಳು:** ಸಂ. ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦೦೭೨, ಮರುಮುದ್ರಣ-೨೦೧೨, ಪುಟ-೫೬೮, ಬೆಲೆ ರೂ. ೩೧೦/-.

೯೦. **ಜನಪದ ಕಾವ್ಯಕಥೆಗಳು ಮತ್ತು ಗೀತಮೇಳಗಳು:** ಸಂ.ಜೀ. ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ–೨೦೧೨, ಪುಟ–೫೪೪, ಬೆಲೆ ರೂ. ೩೦೦/-.

೯೧. **ಪಿರಿಯಾ ಪಟ್ಟಣದ ಕಾಳಗ ಮತ್ತು ಇತರ ಕಥನಕಾವ್ಯಗಳು:** ಸಂ. ಜೀ.ಶಂ. ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ.೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ–೨೦೧೨, ಪುಟ–೫೫೨, ಬೆಲೆ ರೂ. ೩೦೦/-.

೯೨. **ಜೀಶಂಪ ಜಾನಪದ ಬರಹಗಳು:** ಜೀ.ಶಂ.ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ–೨೦೧೨, ಪುಟ–೪೧೬, ಬೆಲೆ ರೂ. ೨೪೦/-.

೯೩. **ಸಮಗ್ರ ಲಾವಣಿಗಳು:** ಸಂ. ಟಿಎಸ್.ರಾಜಪ್ಪ, ಸಾಗರ್ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ–೨೦೧೨, ಪುಟ–೩೬೦, ಬೆಲೆ ರೂ. ೩೬೦/-.

೯೪. **ಜಾನಪದ: ಕೆಲವು ಮುಖಗಳು:** ಜೀ ಶಂ ಪರಮಶಿವಯ್ಯ, ಸಾಗರ್ ಪ್ರಕಾಶನ, ನಂ.೬೯೫, ೧೦ನೇ ಮುಖ್ಯ ರಸ್ತೆ, ೮೦ನೇ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦೦೭೨, ಮರುಮುದ್ರಣ–೨೦೧೨, ಪುಟ–೫೮೪, ಬೆಲೆ ರೂ. ೩೩೦/-.

೯೫. **ಬೇಡರ ಹುಡುಗ ಮತ್ತು ಗಿಳಿ:** ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ೫೩, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್, ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು–೫೬೦೦೦೪, ಮರುಮುದ್ರಣ–೨೦೧೨, ಪುಟ–೩೬, ಬೆಲೆ ರೂ. ೪೦/-.

೯೬. **ಸವದತ್ತಿ ಎಲ್ಲಮ್ಮ:** ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು–೫೬೦೦೦೪, ಮರುಮುದ್ರಣ–೨೦೧೨, ಪುಟ–೨೮, ಬೆಲೆ ರೂ. ೪೦/-.

೯೭. **ಜನಪದ ಒಗಟು ಮತ್ತು ಗಾದೆಯ ಕಥೆಗಳು:** ಸಂ. ಜೀನಹಳ್ಳಿ ಸಿದ್ದಲಿಂಗಪ್ಪ, ಶ್ರುತಿ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಹೊನ್ನಾಳಿ ತಾ, ದಾವಣಗೆರೆ ಜಿಲ್ಲೆ–೫೭೭೨೨೩, ಮರುಮುದ್ರಣ–೨೦೧೨ ಪುಟ–೧೨೮+೪, ಬೆಲೆ ರೂ. ೭೫/-.

□□

೨. ವಿಮರ್ಶಕರ ವಿಳಾಸ

೧. **ಡಾ. ಎಸ್.ಪಿ. ಪದ್ಮಪ್ರಸಾದ್**, ತೃಪ್ತಿ, ೨ನೇ ಕ್ರಾಸ್, ೯ನೇ ಮುಖ್ಯರಸ್ತೆ, ಗೋಕುಲ ಬಡಾವಣೆ, ತುಮಕೂರು-೫೭೨೧೦೪.

೨. **ಡಾ. ಕೆ.ವಿ. ಮುದ್ದವೀರಪ್ಪ**, ಕೇರಾಫ್ ಆರ್.ನಾರಾಯಣ್, ರಂಗನಾಥ ನಿಲಯ, ೭ನೇ ಅಡ್ಡ ರಸ್ತೆ, ಜಯಮಂಗಲಿ ರಸ್ತೆ, ಚಂದ್ರಮೌಳೇಶ್ವರ ಬಡಾವಣೆ, ಕ್ಯಾತ್ಸಂದ್ರ, ತುಮಕೂರು.

೩. **ಡಾ. ರವಿಕುಮಾರ್ ನೀಹ**, ಉಪನ್ಯಾಸಕರು, ನೀಲಗೊಂಡನಹಳ್ಳಿ, ಇರಕಸಂದ್ರ ಕಾಲೋನಿ ಅಂಚೆ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ.

೪. **ಪ್ರೊ. ಎಂ.ಎಲ್. ನರಸಿಂಹಮೂರ್ತಿ**, ನಿವೃತ್ತ ಪ್ರಾಧ್ಯಾಪಕರು, ಲಕ್ಷ್ಮೀನರಸಿಂಹ ಕೃಪ, ಗೌರಿಬಿದನೂರು ಗೇಟ್ ಹತ್ತಿರ, ಮಧುಗಿರಿ-೫೭೨೧೩೨, ತುಮಕೂರು.

೫. **ಡಾ. ಎಸ್.ಶಿವಣ್ಣ ಬೆಳವಾಡಿ**, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೬. **ಡಾ. ಲಿಂಗಣ್ಣ ಜಂಗಮರಹಳ್ಳಿ**, ಕನ್ನಡ ಅಧ್ಯಾಪಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಪರಶುರಾಂಪುರ, ಚಿತ್ರದುರ್ಗ ಜಿಲ್ಲೆ.

೭. **ಡಾ. ಎಚ್.ಕೆ. ನರಸಿಂಹಮೂರ್ತಿ**, ಕನ್ನಡ ಉಪನ್ಯಾಸಕರು, ಎನ್.ಎಂ.ಕೆ.ಆರ್.ವಿ. ಪದವಿಪೂರ್ವ ಮಹಿಳಾ ಕಾಲೇಜು, ಜಯನಗರ, ಬೆಂಗಳೂರು.

೮. **ಶ್ರೀ ಕೆ.ಪಿ. ನಟರಾಜು**, ಕೇರಾಫ್ ರಾಮಕೃಷ್ಣಯ್ಯ, ಕೃಷ್ಣ ಕೃಪ, ೧ನೇ ಅಡ್ಡರಸ್ತೆ, ೨ನೇ ಮುಖ್ಯರಸ್ತೆ, ೧ನೇ ಬ್ಲಾಕ್, ಕುವೆಂಪುನಗರ, ತುಮಕೂರು-೦೩.

೯. **ಡಾ. ಬಗ್ಗನಡು ನಾಗಭೂಷಣ**, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೧೦. **ಡಾ. ಗೀತಾ ವಸಂತ್**, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೧೧. **ಶ್ರೀ ಲಕ್ಷ್ಮೀಕಾಂತ**, ಗೌರೀಪುರ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ.

೧೨. **ಶ್ರೀ ಮಾರುತಿ .ಡಿ.,** ಆಲೂರಪ್ಪ ಡಿ., ಡ್ಯಾಗೇರಳ್ಳಿ ಅಂಚೆ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ-೫೭೨೧೩೯.

೧೩. **ಶ್ರೀಮತಿ ಸುಶೀಲಾ ಸದಾಶಿವಯ್ಯ,** ಟೂಡಾ ಆಫೀಸ್ ಪಕ್ಕ, ೨ನೇ ಮುಖ್ಯರಸ್ತೆ, ೧ನೇ ಬ್ಲಾಕ್, ಕುವೆಂಪು ನಗರ, ತುಮಕೂರು-೫೭೨೧೦೩.

೧೪. **ಪ್ರೊ. ರೇಣುಕಾ ಎಚ್.ಆರ್.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೧೫. **ಶ್ರೀ ಸ್ವಾಮಿ ನ. ಕೋಡಿಹಳ್ಳಿ,** ತಂದೆ: ನರಸಿಂಹಮೂರ್ತಿ ಕೋಡಿಹಳ್ಳಿ, ಕೆಸ್ತೂರು ಅಂಚೆ ೫೭೨೧೩೮, ಕೋರಾ(ಹೋ), ತುಮಕೂರು (ತಾ), (ಜಿ).

೧೬. **ಪ್ರೊ. ಜ್ಯೋತಿ,** ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೧೭. **ಶ್ರೀಮತಿ ಶಾಂತ ಕಂಪಾರಹಳ್ಳಿ,** ಮಸವನಘಟ್ಟ ಅಂಚೆ ೫೭೨೨೨೪, ತಿಪಟೂರು ತಾ., ತುಮಕೂರು ಜಿಲ್ಲೆ.

೧೮. **ಡಾ. ರಾ.ನ. ನಿರಂಜನ,** # ೧೩೩, ೧೬ನೇ ಅಡ್ಡರಸ್ತೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು-೫೬೦೦೭೩

೧೯. **ಶ್ರೀ ದುಗ್ಗೇನಹಳ್ಳಿ ಸಿದ್ದೇಶ,** ದುಗ್ಗೇನಹಳ್ಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ.

೨೦. **ಶ್ರೀ ಕೊಟ್ಟ ಶಂಕರ್,** ಇತಿಹಾಸ ಉಪನ್ಯಾಸಕರು, ಸಿದ್ಧಗಂಗಾ ಪದವಿಪೂರ್ವ ಕಾಲೇಜು, ಪಿ.ಬಿ. ರಸ್ತೆ, ಬೆಸ್ಕಾಂ ಮುಖ್ಯ ಕಛೇರಿ ಎದುರು, ತುಮಕೂರು.

೨೧. **ಶ್ರೀಮತಿ ಆರ್.ಎನ್. ಪವಿತ್ರಮಾಲ,** ಕೇರಾಫ್ ರಾಮಕೃಷ್ಣಯ್ಯ, ಕೃಷ್ಣ ಕೃಪ, ೧ನೇ ಅಡ್ಡರಸ್ತೆ, ೨ನೇ ಮುಖ್ಯರಸ್ತೆ, ೧ನೇ ಬ್ಲಾಕ್, ಕುವೆಂಪು ನಗರ, ತುಮಕೂರು.

೨೨. **ಶ್ರೀಮತಿ ಬಿ. ವೀಣಾ ಎಸ್.ಎಸ್. ಹಿರೇಮಠ್,** ವೆಂಕಟೇಶ್ವರ ನಿಲಯ, ೪ನೇ ಕ್ರಾಸ್, ಎಂ.ಜಿ. ರಸ್ತೆ, ತುಮಕೂರು.

೨೩. **ಶ್ರೀ ಮಂಜುನಾಥಯ್ಯ ಕೆ.ಪಿ.,** ದಿ. ಪುಟ್ಟಬಸಪ್ಪ, ಕಸಾಪುರ, ಚಿಕ್ಕನಹಳ್ಳಿ ಅಂಚೆ, ಹೊಳವನಹಳ್ಳಿ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ.

೨೪. **ಶ್ರೀ ಕರಿಯಣ್ಣ ಇ.,** ತಂದೆ ಈರಣ್ಣ ಡಿ.ಬಿ., ಬಂಗಾರನಾಯಕನಬೆಟ್ಟ, ರಾಜವಂತಿ ಅಂಚೆ ೫೬೧೨೦೨, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.

□□



ಜಾನಪದ ವರ್ಷ ೨೦೧೨

ಒಂದು ಕಾಲಘಟ್ಟದ ಸಾಹಿತ್ಯ ಕೃತಿಯೊಂದು ಆ ಕಾಲದ ಸಾಂಸ್ಕೃತಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತಿರುತ್ತದೆ. ವರ್ತಮಾನದ ವಿದ್ಯಮಾನಗಳನ್ನು ಗರ್ಭೀಕರಿಸಿಕೊಂಡು ಸೃಷ್ಟಿಯಾಗುವ ಇಂಥ ಕೃತಿಗಳು ಚಾರಿತ್ರಿಕವಾಗಿ ಮಹತ್ವದ್ದಾಗಿರುತ್ತವೆ. ಜಾನಪದ ಎಂದಿಗೂ ಜೀವಂತವಾಗಿರುವಂಥದು. ಅದಕ್ಕೆ ಭೂತ, ವರ್ತಮಾನ, ಭವಿಷ್ಯತ್ತು ಮೂರೂ ಇವೆ. ಈ ಹಿನ್ನೆಲೆಯಲ್ಲಿ ಜಾನಪದ ಸಂಬಂಧಿ ರಚನೆಗಳು ಸಹಜವಾಗಿ ಅವಿನಾಶಿಗುಣವನ್ನು ಪಡೆದಿರುತ್ತವೆ. ಈ ನಿಟ್ಟಿನಲ್ಲಿ ಗಮನಿಸುವುದಾದರೆ, ಜಾನಪದ ವರ್ಷ-೨೦೧೨ ಕೃತಿ ಮುಖ್ಯ ಎನಿಸುತ್ತದೆ. ಒಂದು ವರ್ಷದ ಅವಧಿಯಲ್ಲಿ ಮುದ್ರಣಗೊಂಡ ಪ್ರಕಟಣೆಗಳನ್ನು ಒಂದೆಡೆ ಸಂಕಲಿಸಿ, ಸಮೀಕ್ಷಿಸಿ ಕೊಡುವ ಪ್ರಯತ್ನಗಳು ಯಾವತ್ತೂ ನಡೆಯುತ್ತಲೇ ಇವೆ. ಈ ನಡುವೆ ಅವುಗಳನ್ನು ವೈಜ್ಞಾನಿಕ ಕ್ರಮದಲ್ಲಿ ಜೋಡಿಸಿ ಪ್ರಕಟಿಸುವುದು ಅಧ್ಯಯನದ ದೃಷ್ಟಿಯಿಂದ ಹೆಚ್ಚು ಲಾಭದಾಯಕವಾದುದು. ಜಾನಪದ ಕ್ಷೇತ್ರದಲ್ಲಿ ಆದ ಈವರೆಗಿನ ಅಧ್ಯಯನಗಳ ಮೇಲೆ ಬೆಳಕು ಬೀರುವುದರ ಜೊತೆಗೆ ಇನ್ನೂ ಹೊಸ ರೀತಿಯ ಅಧ್ಯಯನದ ಸಾಧ್ಯತೆಗಳನ್ನೂ ಅದು ಒಳಗೊಳ್ಳುವ ಕಾರಣಕ್ಕೆ ಸಮೀಕ್ಷಾ ಕೃತಿಗಳು ಮಹತ್ವದ್ದೆನಿಸುತ್ತವೆ. ಈ ನಿಟ್ಟಿನಲ್ಲಿ ಜಾನಪದ ವರ್ಷ-೨೦೧೨ ಕೃತಿ ಗಮನಾರ್ಹವಾದುದು. ಇಲ್ಲಿನ ಕೃತಿಗಳ ಪರಿಚಯ ಮತ್ತು ಸಮೀಕ್ಷಾ ಕಾರ್ಯಗಳಿಂದ ವಿದ್ಯಾರ್ಥಿಗಳಿಗೆ, ಸಂಶೋಧನಾಸಕ್ತರಿಗೆ ಹೆಚ್ಚು ಪ್ರಯೋಜನವಾಗಬಹುದು. ಇಂತಹ ಅಮೂಲ್ಯವಾದ ಕೃತಿಯನ್ನು ಸಂಪಾದಿಸಿಕೊಟ್ಟ ಡಾ. ಕೆ.ವಿ. ಮುದ್ದವೀರಪ್ಪ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

■ **ಪ್ರೊ. ಅಂಬಳಿಕೆ ಹಿರಿಯಣ್ಣ**
ಕುಲಪತಿ



ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ISBN 978-93-83149-13-1

₹ ೧೨೦/-

Printed at : Raja Printers, Bangalore-27, Ph.: 22234066